ವಿಜಯನಗರ ಕಾಲದ ಮುಸ್ಲಿಂ ಸಮುದಾಯಗಳು: ಚಾರಿತ್ರಿಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಅಕ್ತರ್ ಖಾನಂ ಹೆಚ್.ಎಸ್.

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ವಿಜಯನಗರ ಕಾಲದ ಮುಸ್ಲಿಂ ಸಮುದಾಯಗಳು: ಚಾರಿತ್ರಿಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಅಕ್ತರ್‌ಖಾನಂ ಹೆಚ್.ಎಸ್.

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಅಕ್ತರ್‌ಖಾನಂ ಹೆಚ್.ಎಸ್. ಅವರು **ವಿಜಯನಗರ ಕಾಲದ ಮುಸ್ಲಿಂ ಸಮುದಾಯಗಳು: ಚಾರಿತ್ರಿಕ ಅಧ್ಯಯನ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಚರಿತ್ರೆ ವಿಭಾಗಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : ೧೩.೦೪.೨೦೧೮
ಸ್ಥಳ : ವಿದ್ಯಾರಣ್ಯ

(ಡಾ. ಕೆ. ಮೋಹನ್‌ಕೃಷ್ಣ ರೈ)
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸಂಶೋಧಕರ ಪ್ರಮಾಣ ಪತ್ರ

ವಿಜಯನಗರ ಕಾಲದ ಮುಸ್ಲಿಂ ಸಮುದಾಯಗಳು: ಚಾರಿತ್ರಿಕ ಅಧ್ಯಯನ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ **ಡಾ. ಕೆ. ಮೋಹನ್‌ಕೃಷ್ಣ ರೈ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿ ಇಲ್ಲವೇ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 13.04.2018
ಸ್ಥಳ : ವಿದ್ಯಾರಣ್ಯ

(ಅಕ್ತರ್‌ಖಾನಂ ಹೆಚ್.ಎಸ್.)
ಸಂಶೋಧಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸಮೀಕ್ಷೆ ಹಾಗೂ ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವಿಧಾನ

೧.೪. ಅಧ್ಯಯನದ ಸಮೀಕ್ಷೆ

೧.೫. ಅಧ್ಯಯನದ ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಸಮೀಕ್ಷೆ ಹಾಗೂ ಸ್ವರೂಪ

ಪ್ರಸ್ತಾವನೆ

ಭಾರತದ ಚರಿತ್ರೆಯಲ್ಲಿ ವಿಜಯನಗರದ ಆಳ್ವಿಕೆಯ ಸಂದರ್ಭವು ಅತ್ಯಂತ ಮಹತ್ವವಾದ ಹಾಗೂ ಹಲವಾರು ತಿರುವುಗಳನ್ನು ಪಡೆದುಕೊಂಡ ಅವಧಿಯಾಗಿದೆ. ವಿಜಯನಗರಕ್ಕೆ ಸಂಬಂಧಿಸಿದಂತೆ ಹಲವಾರು ಪುಸ್ತಕಗಳು, ಲೇಖನಗಳು, ಸಂಪುಟಗಳು, ದೇಶಿ–ವಿದೇಶಿ ಬರಹಗಳು ಪ್ರಕಟಗೊಂಡಿವೆ. ಇವು ಈ ಸಾಮ್ರಾಜ್ಯದ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಸಹಾಯಕವಾಗಿವೆ. ವಿಜಯನಗರ ಚರಿತ್ರೆಯನ್ನು ವಿವಿಧ ದೃಷ್ಟಿಕೋನದಿಂದ ಅಂದಿನ ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳನ್ನು ತಿಳಿದುಕೊಳ್ಳುವಲ್ಲಿ ಇವು ಸಹಾಯಕವಾಗಿವೆ. ಈ ಆಕರಗಳನ್ನು ಬಹುತೇಕ ಚರಿತ್ರೆಕಾರರು ತಮ್ಮ ಸೈದ್ಧಾಂತಿಕತೆಗೆ ತಕ್ಕಂತೆ ಹಾಗೂ ತಮ್ಮ ಹಿತಾಸಕ್ತಿಗಳ ಈಡೇರಿಕೆಗೆ ಬಳಸಿಕೊಂಡಿದ್ದಾರೆ. ಅವುಗಳಲ್ಲಿ ವಸಾಹತುಶಾಹಿ, ರಾಷ್ಟ್ರೀಯವಾದಿ ಹಾಗೂ ಕೋಮುವಾದಿ ಚರಿತ್ರೆ ಲೇಖನಗಳು ಪ್ರಮುಖವಾಗಿವೆ. ಈ ಎಲ್ಲ ಪಂಥಗಳು ವಿಜಯನಗರದ ಸ್ಥಾಪನೆ, ಆಳ್ವಿಕೆಯ ಸ್ವರೂಪ ಹಾಗೂ ಅವನತಿಯನ್ನು ವಿಭಿನ್ನ ಆಯಾಮಗಳಲ್ಲಿ ಅಧ್ಯಯನ ನಡೆಸಿವೆ. ಈ ನಿಲುವುಗಳಿಂದಾಚೆ ವಿಜಯನಗರವನ್ನು ಜನಕೇಂದ್ರಿತ ನೆಲೆಯಲ್ಲಿ ನೋಡುವ ಪ್ರಯತ್ನಗಳೂ ಒಂದಷ್ಟು ನಡೆದಿವೆ.

ಭಾರತದ ಚರಿತ್ರೆ ಬರವಣಿಗೆಗೆ ಹೊಸ ತಿರುವನ್ನು ನೀಡಿದವರು ಬ್ರಿಟಿಶರು. ಕ್ರಿ.ಶ. ೧೯ನೆಯ ಮತ್ತು ೨೦ನೆಯ ಶತಮಾನದ ಚರಿತ್ರೆ ಬರವಣಿಗೆಗಳು ಹೊಸ ಆಯಾಮವೊಂದನ್ನು ಪಡೆದುಕೊಂಡವು. ಬ್ರಿಟಿಶರು ತಮ್ಮ ಸಾಮ್ರಾಜ್ಯಶಾಹಿ ಧೋರಣೆಯ ಅನುಷ್ಠಾನಕ್ಕೆ ಹಾಗೂ ಅದರ ಸ್ಥಾಪನೆಗೆ ಚರಿತ್ರೆಯನ್ನು ಬಳಸಿಕೊಂಡರು. ಅದರಲ್ಲಿ ದಕ್ಷಿಣ ಭಾರತದಲ್ಲಿ ಪ್ರಭುತ್ವ ಸ್ಥಾನದಲ್ಲಿದ್ದ ವಿಜಯನಗರ ಚರಿತ್ರೆಯನ್ನು ಹಿಂದೂ–ಮುಸ್ಲಿಂ ಭಾವನೆಗಳ, ವಸಾಹತುಶಾಹಿ ಅವಶ್ಯಕತೆಗಳ ಹಿನ್ನೆಲೆಯಲ್ಲಿ ಬಳಸಿಕೊಂಡರು. ಬ್ರಿಟಿಶರ ವಿಭಜಿಸಿ ಆಳುವ ನೀತಿಗೆ ಹಾಗೂ ಕೋಮುವಾದಿ ಬೆಳವಣಿಗೆಗೆ ಈ ಚರಿತ್ರೆ ಬಳಕೆಯಾಯಿತು. ತಮ್ಮ ರಾಜಕೀಯ ಹಿತಾಸಕ್ತಿಯ ಈಡೇರಿಕೆಯ ಉದ್ದೇಶಗಳಿಗೆ ಬಳಸಿಕೊಂಡು ಕೋಮುವಾದಕ್ಕೆ ಗುರಿ ಮಾಡಿದರು. ಹೀಗೆ ವಸಾಹತುಶಾಹಿಗಳು ತಮ್ಮ ವರ್ತಮಾನ ಸಮಸ್ಯೆಗಳಿಗೆ ಅಥವಾ ರಾಜಕೀಯ ಉದ್ದೇಶಗಳಿಗೆ ಚರಿತ್ರೆಯನ್ನು ಬಳಸಿಕೊಂಡರು. ರಾಷ್ಟ್ರೀಯವಾದಿಗಳು ಬ್ರಿಟಿಶ್

ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಲು ಹಾಗೂ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಲು ಚರಿತ್ರೆಯ ಘಟನೆಗಳನ್ನು ಹಾಗೂ ಚಾರಿತ್ರಿಕ ಪ್ರಮುಖ ಸಾಹಸ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಸುವರ್ಣಯುಗದ ಪ್ರತಿಪಾದನೆ ಹಾಗೂ ರಾಷ್ಟ್ರೀಯ ಪ್ರಜ್ಞೆಯನ್ನು ಮುಸ್ಲಿಂ ವಿರೋಧಿ ನೆಲೆಯಿಂದ ಮೂಡಿಸುವ ಪ್ರಯತ್ನಕ್ಕೆ ವಿಜಯನಗರ ಚರಿತ್ರೆಯನ್ನು ನೇರವಾಗಿ ಬಳಕೆ ಮಾಡಿಕೊಂಡಿದ್ದರು. ವಸಾಹತುಶಾಹಿ ಮತ್ತು ರಾಷ್ಟ್ರೀಯವಾದಿ ಹಿತಾಸಕ್ತಿಗಳಿಗೆ ರಚನೆಯಾದ ಲೇಖನಗಳ ತಪ್ಪುಕಲ್ಪನೆ ಅಥವಾ ಬರವಣಿಗೆಯನ್ನು ವಿಮರ್ಶಿಸಿ ನಿಜವಾದ ಅಥವಾ ಸತ್ಯಾಸತ್ಯತೆಗಳನ್ನು ಗುರುತಿಸಿ ವ್ಯಾಖ್ಯಾನ ಮಾಡುವ ಪ್ರಯತ್ನ ಆಗಬೇಕಾಗಿದೆ. ಇಂತಹ ಧೋರಣೆಗಳಿಗೆ ಹೊಸ ವಿಧಾನದಲ್ಲಿ ಅಥವಾ ದೃಷ್ಟಿಕೋನದಲ್ಲಿ ಮಾರ್ಕ್ಸ್‌ವಾದಿ ಮತ್ತು ಸಬಾಲ್ಟರ್ನ್ ಚರಿತ್ರೆಕಾರರು ಪ್ರತಿವಾದಗಳನ್ನು ಹೂಡುವ ಪ್ರಯತ್ನ ಮಾಡಿದ್ದಾರೆ. ಸಮುದಾಯಗಳನ್ನು ಆಯಾ ಸಂದರ್ಭದ ಅಧಿಕಾರ ಅಥವಾ ರಾಜ್ಯ ಹೇಗೆ ಬಳಸಿಕೊಳ್ಳುತ್ತಿರುತ್ತದೆ ಎನ್ನುವುದನ್ನು ಕುರಿತು ವಿಶ್ಲೇಷಿಸುವುದು ಅತ್ಯಂತ ತುರ್ತಿನದ್ದಾಗಿದೆ.

ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೩೩೬ರಲ್ಲಿ ಹಕ್ಕ–ಬುಕ್ಕರಿಂದ ಸ್ಥಾಪನೆಗೊಂಡು, ಕ್ರಿ.ಶ. ೧೫೬೫ರವರೆಗೆ ತನ್ನ ಪ್ರತಿಷ್ಠೆಯನ್ನು ವಿಸ್ತರಿಸಿಕೊಳ್ಳುತ್ತಾ ಹೋಯಿತು. ವಿಜಯನಗರ ಅರಸರು ಸುಮಾರು ೨೨೦ ವರ್ಷದ ಬಹುದೀರ್ಘವಾದ ಅವಧಿಯ ಆಳ್ವಿಕೆ ನಡೆಸಿದರು. ರಕ್ಕಸಗಿ–ತಂಗಡಗಿ ಯುದ್ಧದ ಬಳಿಕವೂ ಅರವೀಡು ವಂಶದ ಆಳ್ವಿಕೆಯಲ್ಲಿ ವಿಜಯನಗರ ಮುಂದುವರಿಯಿತು. ಈ ಸಾಮ್ರಾಜ್ಯವು ಶ್ರೀಲಂಕಾ ಗಡಿಯಿಂದ, ಕಲಬುರ್ಗಿ ಕೊಟ್ಟ ಕೊನೆಯವರೆಗೆ ಮತ್ತು ಬಂಗಾಳದಿಂದ ಮಲಬಾರ್ ಕೊನೆಯವರೆಗೆ ವಿಸ್ತರಿಸಿತ್ತು. ಇದು ಹಲವಾರು ವ್ಯಾಪಾರಿ ಕೇಂದ್ರಗಳನ್ನು, ಬಂದರು ಪಟ್ಟಣಗಳನ್ನು ಹಾಗೂ ಆಡಳಿತ ಕೇಂದ್ರಗಳನ್ನು ಹೊಂದಿತ್ತು. ಈ ಸಾಮ್ರಾಜ್ಯವು ದೇಶಿ–ವಿದೇಶಿ ವರ್ತಕರಿಂದ, ಸೇನಾಧಿಕಾರಿಗಳಿಂದ, ರಾಯಭಾರಿಗಳಿಂದ, ಕುಶಲಕರ್ಮಿಗಳಿಂದ, ವಿದೇಶಿ ಪ್ರವಾಸಿಗರಿಂದ, ಸಾಹಿತ್ಯ ವಿದ್ವಾಂಸರಿಂದ, ಶಿಷ್ಯ ಪರಂಪರೆಗಳಿಂದ, ದೇವಾಲಯದ ಆರಾಧಕರಿಂದ, ವಾಸ್ತುಶಿಲ್ಪಿಗಳಿಂದ ತುಂಬಿತ್ತು. ವಿಜಯನಗರ ಸಾಮ್ರಾಜ್ಯವು ಹಲವಾರು ಧರ್ಮಗಳಿಂದ ಕೂಡಿದಂತಹ ಸರ್ವಧರ್ಮ ಸಮನ್ವತೆಯ ಸಾಮ್ರಾಜ್ಯವಾಗಿತ್ತು. ಇದು ವೈಷ್ಣವ, ಶೈವ, ಜೈನ, ಬೌದ್ಧ, ಕ್ರಿಶ್ಚಿಯನ್, ಮುಸ್ಲಿಂ ಪಂಥದ ಜನರು ನೆಲೆಸಿದ ರಾಜ್ಯವಾಗಿತ್ತು. ಇದರಲ್ಲಿ ಮುಸ್ಲಿಂ ಸಮುದಾಯವೂ ಸಹ ಒಂದಾಗಿದೆ. ವಿಜಯನಗರ ಸಾಮ್ರಾಜ್ಯವನ್ನು ಭದ್ರವಾಗಿ ಕಟ್ಟಿಕೊಡುವಲ್ಲಿ ಮುಸ್ಲಿಂ ಸೈನಿಕರ ಪಾತ್ರ ಗಮನಾರ್ಹವಾಗಿದೆ. ಎರಡನೆಯ ದೇವರಾಯನ ಆಳ್ವಿಕೆಯ ಸಂದರ್ಭದಲ್ಲಿ ಮುಸ್ಲಿಮರು ಬೃಹತ್ ಸಂಖ್ಯೆಯಲ್ಲಿ ಇಲ್ಲಿ ಬಂದು ನೆಲೆಸಿದ್ದರು. ಸೈನಿಕರಲ್ಲದೆ, ವರ್ತಕರು ಹಾಗೂ ಬೇರೆ ಪ್ರದೇಶದಿಂದ ವಲಸೆ ಬಂದ ಮುಸ್ಲಿಮರು ಈ ರಾಜ್ಯದಲ್ಲಿ ನೆಲೆಯೂರಿದರು. ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಶಾಸನಾಧಾರಗಳು, ಪ್ರವಾಸಿಗರ ವರದಿಗಳು, ಸಾಹಿತ್ಯಿಕ ಆಕರಗಳು, ಪರ್ಶಿಯನ್ ದಾಖಲೆಗಳು ಮಾಹಿತಿಯನ್ನು ನೀಡುತ್ತವೆ. ವಿಜಯನಗರ ಪೂರ್ವದಿಂದಲೂ ನೆಲೆಗಳನ್ನು ಪಡೆದುಕೊಂಡಿದ್ದ ಮುಸ್ಲಿಂ ವರ್ತಕ ಸಮುದಾಯಗಳು ವಿಜಯನಗರ ಅವಧಿಯಲ್ಲಿಯೂ

ಮುಂದುವರಿದವು. ಆದರೆ ವಿಜಯನಗರ ಅವಧಿಯಲ್ಲಿ ವಿಶೇಷವಾಗಿ ಸೈನಿಕರಾಗಿ, ಅಧಿಕಾರಿಗಳಾಗಿ ಕಂಡುಬಂದರು. ಹೀಗೆ ಅಧಿಕಾರಿಗಳಾಗಿ ಕಂಡುಬರುವ ಮುಸ್ಲಿಂ ಸಮುದಾಯಗಳು ದಖ್ಖನಿ ಸಮುದಾಯಗಳಾಗಿ ಗುರುತಿಸಿಕೊಂಡರು.

ಹಾಗಾಗಿ ವಿಜಯನಗರ ಆಳ್ವಿಕೆಯಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳಲ್ಲಿ ಕೂಡ ಬೇರೆ ಬೇರೆ ಪಂಗಡಕ್ಕೆ ಸೇರಿದ ಸಮುದಾಯಗಳನ್ನು ಗುರುತಿಸಬಹುದಾಗಿದೆ. ಏಕೆಂದರೆ ವ್ಯಾಪಾರ ಉದ್ದೇಶಕ್ಕೆ ಬಂದಂತಹ ಅರಬ್ ವರ್ತಕರು, ಆದಿಲ್‌ಶಾಹಿ ಮತ್ತು ಬಹಮನಿ ಸಂತತಿಗಳಲ್ಲಿ ಕಂಡುಬರುವ ಮುಸ್ಲಿಂ ಸಮುದಾಯದ ಜನರು ವಿಜಯನಗರದಲ್ಲಿ ಕಂಡುಬಂದರು. ಶಿಯಾ ಹಾಗೂ ಸುನ್ನಿ ಪಂಥಗಳಲ್ಲಿ ವಿಭಜಿಸಿಕೊಂಡಿರುವ ಪಂಗಡಗಳಾದ ಮಾಪಿಳ್ಳೆಗಳು, ಬ್ಯಾರಿಗಳು ಹಾಗೂ ನವಾಯತರು ವ್ಯಾಪಾರ ಉದ್ದೇಶಕ್ಕಾಗಿ ಅರಬ್‌ದಿಂದ ಬಂದು ನೆಲೆಸಿದರು. ಆದಿಲ್‌ಶಾಹಿ ಮತ್ತು ಬಹುಮನಿ ಸಾಮ್ರಾಜ್ಯದ ಸಂತತಿಯವರ ಸಮುದಾಯಗಳಲ್ಲಿ ಬಂದೆ ನವಾಜ್ ಎಂಬ ಸೂಫಿ ಸಂತತಿಯ ಅನುಯಾಯಿಗಳು ಪ್ರಮುಖರು.

ದಕ್ಷಿಣ ಭಾರತದಲ್ಲಿ ವಲಸೆ ಬಂದ ಮುಸ್ಲಿಂ ಸಮುದಾಯಗಳಲ್ಲಿ ಕಸಾಯಿ, ಖಾಕರ, ಛಪ್ಪರಬಂದ್, ಜಾತಿಗಾರ, ಧೋಬಿ, ನವಾಯತ, ಪಿಂಜಾರ್, ಪೆಂಡಾರ, ಫಕೀರ್, ಬಾಗವಾನ್, ಬೇಹಸ್ತಿ ಮೆಮನ್, ಮೆಹ್ತರ್, ಮೆಹ್ದವಿಯ ಇವರು ಪ್ರಮುಖವಾಗಿ ಕಂಡುಬರುತ್ತಾರೆ. ವಿಜಯನಗರ ಕಾಲದಲ್ಲಿ ಇದ್ದಂತಹ ಹಲವಾರು ಸಮುದಾಯಗಳ ರಾಜಕೀಯ, ಆರ್ಥಿಕ ಜೀವನ, ಆಚರಣೆ, ಸಾಮಾಜಿಕ ಸ್ಥಿತಿಗತಿಗಳನ್ನು ಮತ್ತು ವಿಜಯನಗರದ ಆಳ್ವಿಕೆಯಲ್ಲಿ ಅವರ ಕೊಡುಗೆಯನ್ನು ಕುರಿತು ವಿಶ್ಲೇಷಣೆ ಮಾಡಲು "ವಿಜಯನಗರ ಕಾಲದ ಮುಸ್ಲಿಂ ಸಮುದಾಯಗಳು: ಚಾರಿತ್ರಿಕ ಅಧ್ಯಯನ" ಎಂಬ ಶೀರ್ಷಿಕೆ ಅಡಿಯಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

೧.೧. ಅಧ್ಯಯನದ ಉದ್ದೇಶ

ವಿಜಯನಗರ ಸಾಮ್ರಾಜ್ಯದ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ, ನಡೆಯುತ್ತಲೇ ಇವೆ. ಅದರಲ್ಲಿ ವಸಾಹತುಶಾಹಿ, ಸಾಮ್ರಾಜ್ಯಶಾಹಿ, ರಾಷ್ಟ್ರೀಯವಾದಿ, ಕೋಮುವಾದಿ ಚರಿತ್ರೆಕಾರರ ಕೆಲವೊಂದು ಅಚಾರಿತ್ರಿಕ ನಿಲುವುಗಳನ್ನು ಪ್ರಶ್ನಿಸುವ ಹಾಗೂ ಚರಿತ್ರೆಯ ಬದಲಾದ ಅಧ್ಯಯನ ವಿಧಾನ ಹಾಗೂ ಸಿದ್ಧಾಂತದ ಮೂಲಕ ವಿಶ್ಲೇಷಿಸುವ ಉದ್ದೇಶವನ್ನು ಈ ಪ್ರಬಂಧ ಹೊಂದಿದೆ. ವಿಜಯನಗರದ ಚರಿತ್ರೆ ಬಗೆಗಿನ ಅಧ್ಯಯನಕಾರರ ನಿಲುವುಗಳು ಬಹುತೇಕ ಚಾರಿತ್ರಿಕ ಸತ್ಯದಿಂದ ದೂರವಿರುವುದನ್ನು ಕಾಣಬಹುದಾಗಿದೆ. ಏಕೆಂದರೆ ವಿಜಯನಗರದ ಚರಿತ್ರೆ ವಿವಿಧ ಪಂಥಗಳ ಸೈದ್ಧಾಂತಿಕತೆಗೆ ಅನುಗುಣವಾಗಿ ರಚನೆಗೊಳ್ಳುತ್ತಾ ಹೋಯಿತು. ರಾಷ್ಟ್ರೀಯವಾದಿಗಳು, ಸಾಮ್ರಾಜ್ಯ ಶಾಹಿಗಳು ಹಾಗೂ ಸೆಕ್ಯೂಲರ್ ಚಿಂತನೆಗಳು ತಮ್ಮ ವಾದ-ಪ್ರತಿವಾದಗಳಿಗೆ ವಿಜಯನಗರದ ಚರಿತ್ರೆಯನ್ನು ವಸ್ತುವನ್ನಾಗಿಸಿಕೊಂಡವು. ಅಲ್ಲಿ ಪ್ರಭುತ್ವದ ಅತಿಯಾದ ವೈಭವೀಕರಣ, ಹಿಂದೂ-ಮುಸ್ಲಿಂ ಸಂಘರ್ಷದ ನಿರೂಪಣೆಗಳು, ವಿಜಯನಗರದ ಹುಟ್ಟು ಹಾಗೂ ಅವನತಿಯನ್ನು ಕಮ್ಯೂನಲ್

ನೆಲೆಯಲ್ಲಿಯೇ ನೋಡಿರುವುದು, ವೈಷ್ಣವ–ಶೈವ–ವೀರಶೈವ ಕೇಂದ್ರಿತ ಧಾರ್ಮಿಕ ಪ್ರಭುತ್ವದ ನಿರೂಪಣೆಗಳು, ಪ್ರವಾಸಿಗರ ಏಕಪಕ್ಷೀಯ ನಿಲುವುಗಳು, ಆಸ್ಥಾನ ಪಂಡಿತರ ಹೊಗಳಿಕೆಗಳು ಹೀಗೆ ವಿಜಯನಗರದ ಚರಿತ್ರೆ ರಚನೆಗೊಳ್ಳುತ್ತಾ ಸಾಗಿತು. ಈ ಬಗೆಯ ಸಾಂಪ್ರದಾಯಿಕ ಅಧ್ಯಯನ ಕ್ರಮದಿಂದಾಚೆಗೂ ವಿಜಯನಗರವನ್ನು ನೋಡುವ ಪ್ರಯತ್ನಗಳು ನಡೆದವು. ಅಲ್ಲಿ ಕೃಷಿ, ವ್ಯಾಪಾರ, ತೆರಿಗೆ, ವಾಸ್ತುಶೈಲಿ, ಸಮುದಾಯಗಳು, ರಾಜ್ಯ ನಿರ್ಮಾಣ, ಊಳಿಗಮಾನ್ಯತೆ ಮುಂತಾದ ಸಮಾಜಕೇಂದ್ರಿತ ವಿಚಾರಗಳು ಪ್ರವೇಶ ಪಡೆದುಕೊಂಡವು. ಆದರೂ ರಾಷ್ಟ್ರೀಯವಾದಿ ಹಾಗೂ ಸಾಮ್ರಾಜ್ಯಶಾಹಿ ಅಧ್ಯಯನ ಕ್ರಮಗಳು ಇನ್ನೂ ತಮ್ಮ ಪ್ರಭಾವವನ್ನು ಬೀರುತ್ತಲೇ ಇವೆ. ಅವು ನವರಾಷ್ಟ್ರೀಯವಾದಿ ಹಾಗೂ ನವಸಾಮ್ರಾಜ್ಯಶಾಹಿ ರೂಪವನ್ನು ಪಡೆದು ಬದಲಾದ ಸಂದರ್ಭಕ್ಕೆ ತಕ್ಕಂತೆ ತಮ್ಮನ್ನು ತಾವು ವಿನ್ಯಾಸಗೊಳಿಸಿಕೊಂಡು ಮುಂಚೂಣಿಯಲ್ಲಿವೆ. ವಿಜಯನಗರದ ಚರಿತ್ರೆಯನ್ನು ಮರುನಿರ್ಮಿಸಿಕೊಂಡು ವಿಜಯನಗರದ ಚರಿತ್ರೆಗೆ ಸಂಬಂಧಿಸಿದ ಅಧ್ಯಯನಕಾರರ ನಿಲುವುಗಳನ್ನು ಚರ್ಚಿಸಿ ಆ ಮೂಲಕ ವಾಸ್ತವ ಚರಿತ್ರೆಯನ್ನು ರೂಪಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

ಈ ಹಿನ್ನೆಲೆಯಲ್ಲಿ ಸಮುದಾಯಕೇಂದ್ರಿತ ಚರಿತ್ರೆಯನ್ನು ಗುರುತಿಸುವುದರ ಮೂಲಕ ಚರಿತ್ರೆಕಾರರು ತಮ್ಮ ಬರಹಗಳಲ್ಲಿ ಹುಟ್ಟುಹಾಕಿದ ನಿಲುವುಗಳನ್ನು ಮರುವಿಮರ್ಶೆಗೆ ಅಥವಾ ಮರುಓದಿಗೆ ಒಳಪಡಿಸುವುದು ಈ ಅಧ್ಯಯದ ಉದ್ದೇಶವಾಗಿದೆ.

ವಿಜಯನಗರ ಚರಿತ್ರೆಯನ್ನು ಹಂಪಿ ಪ್ರದೇಶಕ್ಕೆ ಸೀಮಿತಗೊಳಿಸಿ ಅಧ್ಯಯನವನ್ನು ಮಾಡಲಾಗುತ್ತಿದೆ. ಹಂಪಿ ರಾಜಧಾನಿ ಪಟ್ಟಣದಲ್ಲಿ ಕಂಡುಬರುವ ಅರಸಕೇಂದ್ರಿತ ಸ್ಮಾರಕಾವಶೇಷಗಳನ್ನು ವೈಭವೀಕರಿಸಿ ಬಹುಧರ್ಮೀಯರಿಂದ ಕೂಡಿದಂತಹ ಈ ಪ್ರದೇಶವನ್ನು ಏಕದೃಷ್ಟಿಯಲ್ಲಿ ಹಿಂದುತ್ವ ಧೋರಣೆಗಳ ಮೂಲಕ ನಿರೂಪಿಸಲಾಗಿದೆ. ಆದರೆ ಸಮಕಾಲೀನ ಸಂದರ್ಭದ ವಿಜಯನಗರದಲ್ಲಿ ವೃತ್ತಿಯಾಧಾರಿತ ಸಮುದಾಯಗಳು ರೂಪುಗೊಂಡವು. ಹಿಂದೂ ಎಂಬ ಏಕತ್ವದ ಚೌಕಟ್ಟು ಇರಲಿಲ್ಲವಾದ್ದರಿಂದ ಅವು ವೈಷ್ಣವ, ಶೈವ, ಜೈನ, ಬೌದ್ಧ ಬೇರೆ ಬೇರೆ ಮತ–ಪಂಥಗಳಾಗಿ ಗುರುತಿಸಿಕೊಂಡವು. ಅದೇ ರೀತಿಯಾದ ಮುಸ್ಲಿಂ ಧರ್ಮವು ವಿಜಯನಗರದಲ್ಲಿ ಅಸ್ತಿತ್ವವನ್ನು ಕಂಡುಕೊಂಡಿತ್ತು ಎಂಬುದನ್ನು ವಿವರಿಸುವ ಉದ್ದೇಶವನ್ನು ಹೊಂದಿದೆ. ಈ ಎಲ್ಲ ಸಮುದಾಯಗಳು ಬದಲಾದ ಸಾಮಾಜಿಕ ಸಂದರ್ಭದಲ್ಲಿ ಸೌಹಾರ್ದಯುತವಾಗಿ ಜೀವನ ನಡೆಸಿದ ಅಂಶಗಳನ್ನು ಗುರುತಿಸುವ ಉದ್ದೇಶ ಹೊಂದಿದೆ.

ವಿಜಯನಗರದ ಸಂದರ್ಭದಲ್ಲಿ ನಿರ್ಮಾಣಗೊಂಡ ಸ್ಮಾರಕಗಳು, ರಚನೆಗೊಂಡ ಸಾಹಿತ್ಯ ಕೃತಿಗಳು, ಶಾಸನಗಳು, ನಾಣ್ಯಗಳು, ವಿಜಯನಗರ ಮತ್ತು ವಿಜಯನಗರೋತ್ತರ ಅವಧಿಗಳಲ್ಲಿ ಬಂದ ವಿದೇಶಿ ಪ್ರವಾಸಿಗರ ಬರಹಗಳು ಹಾಗೂ ಮೌಖಿಕ ಆಕರಗಳನ್ನು ಬಳಸಿಕೊಂಡು ವಿಜಯನಗರ ಚರಿತ್ರೆಯಲ್ಲಿ ನೆಲೆ ನಿಂತ ಮುಸ್ಲಿಂ ಸಮುದಾಯಗಳ ಚಾರಿತ್ರಿಕ ಅಂಶಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸುವ ಉದ್ದೇಶವನ್ನು ಹೊಂದಿದೆ.

ವಿಜಯನಗರದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ವಿಜಯನಗರದ ಪೂರ್ವದಿಂದಲೂ ನೆಲೆ ನಿಂತ ಮುಸ್ಲಿಂ ಸಮುದಾಯಗಳನ್ನು ಗುರುತಿಸಿ ಆ ಮೂಲಕ ವಿಜಯನಗರದ ಆರ್ಥಿಕ ಚಟುವಟಿಕೆಗಳಲ್ಲಿ ಬೀರಿದಂತಹ ಪ್ರಭಾವವನ್ನು ತಿಳಿಸುವ ಉದ್ದೇಶ ಈ ಅಧ್ಯಯನದ್ದಾಗಿದೆ.

ಹೀಗೆ ವಿಜಯನಗರ ಆಳ್ವಿಕೆಯಲ್ಲಿ ಕಂಡುಬರುವ ಹಲವು ಸಮುದಾಯಗಳಲ್ಲಿ ಮುಸ್ಲಿಂ ಸಮುದಾಯವನ್ನು ಪ್ರತ್ಯೇಕವಾಗಿ ಆಯ್ದುಕೊಂಡು, ವಿಜಯನಗರ ಆಳ್ವಿಕೆಯಲ್ಲಿ ಅವರ ಪಾತ್ರವನ್ನು ವಿಶ್ಲೇಷಿಸುವ ಗುರಿಯನ್ನು ಹೊಂದಿದೆ. ಸ್ಥಳೀಯ ಚರಿತ್ರೆ, ಸಾಮಾನ್ಯ ಜನರ ಜೀವನ-ಬದುಕಿನ ಚಿತ್ರಣವನ್ನು ಕಟ್ಟಿಕೊಡುವ ಮೂಲಕ ರಾಷ್ಟ್ರೀಯ ಚರಿತ್ರೆ ನಿರ್ಮಾಣದಲ್ಲಿ ಹೊಸ ವ್ಯಾಖ್ಯಾನ ನೀಡುವ ಉದ್ದೇಶವನ್ನು ಹೊಂದಿದೆ.

ಮುಸ್ಲಿಂ ಸಮುದಾಯಗಳೊಂದಿಗೆ ಪ್ರವೇಶಿಸಿದ ಹೊಸ ಭಾಷೆ, ಸಿದ್ಧಾಂತ, ವ್ಯಾಪಾರ ಹಾಗೂ ವಾಸ್ತುಶೈಲಿಯನ್ನು ಅಧ್ಯಯನ ನಡೆಸುವುದು ಹಾಗೂ ಅದು ಸ್ಥಳೀಯವಾಗಿ ಬೀರಿದ ಪ್ರಭಾವವನ್ನು ಅರ್ಥೈಸಿಕೊಳ್ಳುವುದು ಪ್ರಮುಖ ಉದ್ದೇಶವಾಗಿದೆ.

ವಿಜಯನಗರ ಕಾಲದಲ್ಲಿ ಸೈನಿಕರ ಪಾತ್ರ, ವ್ಯಾಪಾರ ಉದ್ದೇಶಕ್ಕೆ ಬಂದು ನೆಲೆಸಿದ ವರ್ತಕರ ಬದುಕು, ಸಮಾಜ, ಧರ್ಮ, ಸಾಂಸ್ಕೃತಿಕ ಕೊಡುಗೆಯನ್ನು ಗುರುತಿಸುವುದು, ಅದರಲ್ಲಿಯೂ ಮುಖ್ಯವಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ವಿವಿಧ ಧರ್ಮೀಯರು ನೆಲೆಸಿ ಇಲ್ಲಿ ತಮ್ಮದೇ ಆದ ಜೀವನ ವಹಿವಾಟನ್ನು ಹೊಂದಿದ್ದರು ಎಂದು ತಿಳಿಸುವುದರ ಮೂಲಕ ವಿವಿಧ ಧರ್ಮಗಳಿಂದ ಕೂಡಿದ ಸರ್ವಧರ್ಮ ಸಮನ್ವತೆಯ ರಾಜ್ಯವಾಗಿತ್ತು ಹಾಗೂ ಅದು ಅಂದಿನ ಸಂದರ್ಭದ ಅನಿವಾರ್ಯತೆಯೂ ಆಗಿತ್ತು ಎಂಬುದನ್ನು ಅಧ್ಯಯನ ಮಾಡುವುದು ಪ್ರಸ್ತುತ ಮಹಾಪ್ರಬಂಧದ ಉದ್ದೇಶ.

೧.೨. ಅಧ್ಯಯನದ ವ್ಯಾಪ್ತಿ

"ವಿಜಯನಗರ ಕಾಲದ ಮುಸ್ಲಿಂ ಸಮುದಾಯಗಳು: ಚಾರಿತ್ರಿಕ ಅಧ್ಯಯನ" ಎಂಬ ಪ್ರಬಂಧದ ವ್ಯಾಪ್ತಿಯನ್ನು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯದಾಗಿನಿಂದ ಅವನತಿಯವರೆಗೆ ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ವಿಜಯನಗರ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತವನ್ನು ವ್ಯಾಪಿಸಿದ್ದು, ಅದು ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ, ಒರಿಸ್ಸಾ ಹಾಗೂ ಸಿಲೋನ್‌ವರೆಗೂ ತನ್ನ ರಾಜ್ಯ ವಿಸ್ತಾರವನ್ನು ಹೊಂದಿತ್ತು. ಈ ಹಿನ್ನೆಲೆಯಲ್ಲಿ ವಿಜಯನಗರದಲ್ಲಿನ ಸಮುದಾಯಗಳನ್ನು ಪ್ರಾದೇಶಿಕವಾಗಿ ವರ್ಗೀಕರಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಿಜಯನಗರ ರಾಜಧಾನಿ ಪಟ್ಟಣದ ಜೊತೆಗೆ ದಕ್ಷಿಣ ಭಾರತದಲ್ಲಿ ಹರಡಿಕೊಂಡಿದ್ದ ಮುಸ್ಲಿಂ ಸಮುದಾಯಗಳನ್ನು ಇದರ ವ್ಯಾಪ್ತಿಗೆ ಒಳಪಡಿಸಲಾಗಿದೆ. ಅಲ್ಲದೆ ವಿಜಯನಗರದಲ್ಲಿ ಕಂಡುಬರುವ ಮುಸ್ಲಿಮರು ಬಹಮನಿ ಹಾಗೂ ಶಾಹಿ ರಾಜ್ಯಗಳಿಗೆ ನೇರ ಸಂಬಂಧವನ್ನು ಹೊಂದಿದ್ದರು. ಮುಸ್ಲಿಂ ಸಮುದಾಯಗಳು ಸಾಮಾಜಿಕ, ಆರ್ಥಿಕ, ಧಾರ್ಮಿಕ ಚಲನೆಯನ್ನು ಹೊಂದಿದ್ದವು. ಹಾಗಾಗಿ ವಿಜಯನಗರದ ಜೊತೆ ಬಹಮನಿ ಹಾಗೂ ಶಾಹಿ ರಾಜ್ಯಗಳಲ್ಲಿನ ಮುಸ್ಲಿಂ ಸಮುದಾಯಗಳ ನೆಲೆಗಳನ್ನು ಇದರ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೩. ಅಧ್ಯಯನದ ವಿಧಾನ

ಚರಿತ್ರೆ ಬರವಣಿಗೆಯು ಇಂದು ಹೊಸ ರೂಪವನ್ನು ಪಡೆಯುತ್ತಿದೆ. ಬದಲಾಗುತ್ತಿರುವ ಅಧ್ಯಯನದ ವಿಧಿ ವಿಧಾನಗಳು ಹಾಗೂ ಬರವಣಿಗೆ ಕ್ರಮ ಚರಿತ್ರೆ ಅಧ್ಯಯನವನ್ನು ಹೆಚ್ಚು ಸ್ಪಷ್ಟ, ನಿರ್ದಿಷ್ಟ ಹಾಗೂ ನಿಖರವಾಗಿ ನೋಡುವಂತೆ ಮಾಡಿದೆ. ಇದರಿಂದಾಗಿ ಚರಿತ್ರೆ ಅಧ್ಯಯದ ವಿವಿಧ ಆಯಾಮಗಳು ಸ್ಪಷ್ಟವಾಗಿ ರೂಪುಗೊಳ್ಳುವಂತಾಗಿದೆ. ಬಹಮನಿ ಮತ್ತು ಆದಿಲ್‌ಶಾಹಿಗಳ ಚರಿತ್ರೆಯನ್ನು ನೋಡುವ ಕ್ರಮದ ಹಾಗೆಯೇ ವಿಜಯನಗರದ ಚರಿತ್ರೆಯನ್ನು ನೋಡುವ ಕ್ರಮದಲ್ಲಿನ ವೈರುಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ವಿಜಯನಗರ ಕಾಲದಲ್ಲಿನ ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ವಿಶ್ಲೇಷಿಸಲಾಗಿದೆ. ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ನೋಡುವ ಕ್ರಮದಲ್ಲಿ ಜನಮುಖಿ ಕೇಂದ್ರಿತ ಚರಿತ್ರೆಗೆ ಹೆಚ್ಚು ಒತ್ತು ನೀಡಲಾಗಿದೆ. ಚರಿತ್ರೆ ಅಧ್ಯಯನ ಕ್ಷೇತ್ರದಲ್ಲಿ ಇಂದು ಹೆಚ್ಚು ಚರ್ಚೆಗೆ ಒಳಗಾಗುತ್ತಿರುವ ಸಮುದಾಯ ಕೇಂದ್ರಿತ ಚರಿತ್ರೆ ಬರವಣಿಗೆಯ ವೈಧಾನಿಕತೆ ಹಾಗೂ ಸೈದ್ಧಾಂತಿಕತೆಯನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ.

ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಲಭ್ಯವಿರುವ ಆಕರಗಳಾದಂತಹ ಸಾಹಿತ್ಯಿಕ ಗ್ರಂಥಗಳು, ಶಾಸನಗಳು, ಸ್ಮಾರಕ ಅವಶೇಷಗಳು, ಪ್ರವಾಸಿಗರ ವರದಿಗಳು ಇತ್ತೀಚೆಗೆ ಪ್ರಕಟವಾದ ಗ್ರಂಥಗಳು, ಲೇಖನಗಳು, ಸ್ಥಳೀಯ ಮೌಖಿಕ ಆಕರಗಳು ಹಾಗೂ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ಕ್ರೋಡಿಕರಿಸಿ, ಅಂತರ್‌ಶಿಸ್ತೀಯ ಅಧ್ಯಯನದ ಮೂಲಕ ವಿಜಯನಗರ ಆಳ್ವಿಕೆಯಲ್ಲಿ ಇದ್ದ ಮುಸ್ಲಿಂ ಸಮುದಾಯಗಳ ಬಹುತ್ವದ ಚಟುವಟಿಕೆಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಲಾಗಿದೆ.

ವಿಜಯನಗರದ ಆಳ್ವಿಕೆಯಲ್ಲಿದ್ದ ಮುಸ್ಲಿಂ ಸಮುದಾಯಗಳಿಗೆ ಸಂಬಂಧಿಸಿದ ಸಾಮ್ರಾಜ್ಯಶಾಹಿ ಹಾಗೂ ರಾಷ್ಟ್ರೀಯವಾದಕ್ಕೆ ಪೂರಕವಾದ ಚರಿತ್ರೆಯನ್ನು ವಿಮರ್ಶಿಸಿ ಚರಿತ್ರೆ ಅಧ್ಯಯನಕ್ಕೆ ಬದಲಿ ವಿಧಾನವನ್ನು ಪರಿಚಯಿಸಿದ ಮಾರ್ಕ್ಸ್‌ವಾದ ಹಾಗೂ ಸಬಾಲ್ಟರ್ನ್ ವಾದದ ಚಿಂತನೆಗಳ ನೆಲೆಯಲ್ಲಿ ಮುಸ್ಲಿಂ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ಚರಿತ್ರೆಯನ್ನು ಅಧ್ಯಯನ ನಡೆಸಲಾಗಿದೆ.

೧.೪. ಅಧ್ಯಯನದ ಸಮೀಕ್ಷೆ

ವಿಜಯನಗರ ಚರಿತ್ರೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿದ ಮೊದಲ ಬ್ರಿಟಿಶ್ ಅಧಿಕಾರಿಗಳೆಂದರೆ ಮಾರ್ಕ್ ವಿಲ್ಕ್ಸ್, ಕರ್ನಲ್ ಕೋಲಿನ್ ಮೆಕೆಂಜಿ ಮತ್ತು ರಾಬರ್ಟ್ ಸಿವೆಲ್. ೧೯೦೦ರಲ್ಲಿ 'ಎ ಫರ್‌ಗಾಟನ್ ಎಂಪೈರ್' ಎನ್ನುವ ಕೃತಿಯಲ್ಲಿ ಬ್ಯಾರಡಸ್, ಡೋಮಿಂಗೋ ಪಾಯೆಸ್, ನ್ಯೂನಿಜ್ ಇವರ ಕಥನಗಳನ್ನು ಆಧಾರವಾಗಿಟ್ಟುಕೊಂಡು ಬ್ರಿಟಿಶ್ ಸಾಮ್ರಾಜ್ಯಶಾಹಿ ತಂತ್ರವಾದ ವಿಭಜಿಸಿ ಆಳುವ ನೀತಿಗನುಗುಣವಾಗಿ ಸಿವೆಲ್ ಹಿಂದೂ-ಮುಸ್ಲಿಂ ಎನ್ನುವ ಕೋಮುವಾದಿ ದೃಷ್ಟಿಕೋನವನ್ನು ಇಟ್ಟುಕೊಂಡು ವಿಜಯನಗರ ಚರಿತ್ರೆಯನ್ನು ನಿರ್ಮಿಸಿದನು. ಇವನು ವಿಜಯನಗರ ಸಾಮ್ರಾಜ್ಯದ ಅವನತಿಗೆ ಮುಸ್ಲಿಮರ ಆಕ್ರಮಣವೇ ಮುಖ್ಯ ಕಾರಣವೆಂದು ತಿಳಿಸಿದ್ದಾನೆ. ಪ್ರಮುಖವಾಗಿ

ಪ್ರವಾಸಿ ಕಥನಗಳು ಹಾಗೂ ಐತಿಹ್ಯಗಳನ್ನು ಆಧಾರವಾಗಿ ಇಟ್ಟುಕೊಂಡು ವಿಜಯನಗರ ಚರಿತ್ರೆಯನ್ನು ರಚಿಸಲಾಯಿತು.

೧೯೦೫ರಲ್ಲಿ ಬಿ. ಸೂರ್ಯನಾರಾಯಣರಾವ್‌ರ ಕೃತಿಯಾದ 'ನೆವರ್ ಟು ಬಿ ಫರ್‌ಗಾಟನ್ ಎಂಪೈರ್'ನಲ್ಲಿ ವಿಜಯನಗರವನ್ನು ಹಿಂದೂ ಸಾಮ್ರಾಜ್ಯ, ವೈಭವಯುತ ಸಾಮ್ರಾಜ್ಯ ಎಂದು ಕೊಂಡಾಡಿ, ಮುಸ್ಲಿಮರ ದಾಳಿಯನ್ನು ಎದುರಿಸಲು ಸ್ಥಾಪನೆಗೊಂಡ ಸಾಮ್ರಾಜ್ಯ ಎನ್ನುವ ಮತೀಯ ನೆಲೆಯಲ್ಲಿ ನೋಡಲಾಗಿದೆ. ೧೯೨೧ರಲ್ಲಿ ಕೃಷ್ಣಸ್ವಾಮಿ ಅಯ್ಯಂಗಾರ್ ಅವರ 'ಸೌತ್ ಇಂಡಿಯಾ ಆ್ಯಂಡ್ ಹರ್ ಮಹಮ್ಮಡನ್ ಇನ್‌ವೇಡರ್ಸ್' ಕೃತಿಯು ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಹಾಗೂ ಅವನತಿಗೆ ಹಿಂದೂ–ಮುಸ್ಲಿಂ ನಡುವಿನ ಸಂಘರ್ಷವೇ ಮೂಲಕಾರಣ ಎಂದು ತಿಳಿಸಿ, ಮುಸ್ಲಿಂವಿರೋಧಿ ನೆಲೆಯಲ್ಲಿ ಹಾಗೂ ರಾಷ್ಟ್ರೀಯತೆಯ ನೆಲೆಯಲ್ಲಿ ವಿಜಯನಗರವನ್ನು ನೋಡಿತು. ಬಿ.ಎ. ಸಾಲೆತ್ತೊರ್ ಮತ್ತು ಎನ್. ವೆಂಕಟರಮಣಯ್ಯ ಇವರು ವಿಜಯನಗರದ ಚರಿತ್ರೆಯನ್ನು ಪ್ರಾದೇಶಿಕ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿಟ್ಟು ವ್ಯಾಖ್ಯಾನಿಸಿದರು. ಬಿ.ಎ. ಸಾಲೆತ್ತೊರ್ ಅವರ 'ಸೋಶಿಯಲ್ ಆ್ಯಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಎಂಪೈರ್'(೧೯೩೪) ಕೃತಿಯಲ್ಲಿ ವಿಜಯನಗರದ ಹುಟ್ಟು ಹಿಂದೂ ಧರ್ಮದ ರಕ್ಷಣೆಗಾಗಿ ಆಯಿತು ಎಂದು ತಿಳಿಸಿದ್ದಾರೆ.

ಬರ್ಟನ್ ಸ್ಟೈನ್ 'ದಿ ನ್ಯೂ ಕೇಂಬ್ರಿಜ್ ಹಿಸ್ಟರಿ ಆಫ್ ಇಂಡಿಯಾ: ದಿ ವಿಜಯನಗರ' ಕೃತಿಯಲ್ಲಿ ಸೆಗ್‌ಮೆಂಟರಿ ಸ್ಟೇಟ್ ಸಿದ್ಧಾಂತವನ್ನು ವಿವರಿಸಿದರು. ಸರ್ ಥಾಮಸ್ ಮನ್ರೋನ ವರದಿಗಳು, ಜಾನ್ ಕೆಲ್‌ಶನ 'ಬಳ್ಳಾರಿ ಜಿಲ್ಲಾ ಗ್ಯಾಸೆಟಿಯರ್', ಡಬ್ಲ್ಯು ಫ್ರಾನ್ಸಿಸ್‌ನ 'ಬಳ್ಳಾರಿ ಜಿಲ್ಲಾ ಗೆಸೆಟಿಯರ್'ಗಳಲ್ಲಿ ವಿಜಯನಗರದ ಬಗ್ಗೆ ಮಾಹಿತಿ ಸಿಗುತ್ತದೆ. ಇದರಲ್ಲಿ ವಿಜಯನಗರದ ಪೂರ್ವ ಹಾಗೂ ನಂತರದ ಅವಧಿಯಲ್ಲಿ ಹಲವು ಮುಸ್ಲಿಂ ಸಮುದಾಯಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ಲಾಂಗ್ ಹರ್ಸ್ಟ್‌ರ 'ಹಂಪಿ ರ್‍ಯೂಯಿನ್ಸ್', ಹಾಗೂ ಹೆರಾಸ್ ಎಚ್. ಅವರ 'ಬಿಗಿನಿಂಗ್ ಆಫ್ ವಿಜಯನಗರ ಹಿಸ್ಟರಿ' ಕೃತಿಗಳು ವಿಜಯನಗರ ಉಗಮದ ಬಗ್ಗೆ ತಿಳಿಸುತ್ತದೆ. ಕರ್ನಲ್ ಕಾಲಿನ್ ಮೆಕೆಂಜಿ, ವಿಲ್ಸನ್, ರವನಸಟ್, ನ್ಯೂಬೋಲ್ಡ್ ಇವರು ಹಂಪಿ ಪ್ರದೇಶವನ್ನು ವೀಕ್ಷಿಸಿ ಶಾಸನಗಳನ್ನು ಪ್ರಕಟಿಸಿದ್ದಾರೆ. ೧೯೩೪ ಎನ್. ವೆಂಕಟರಮಣಯ್ಯ ಅವರ 'ಒರಿಜಿನ್ ಆಫ್ ದಿ ಸಿಟಿ ಆ್ಯಂಡ್ ಪೊಲಿಟಿಕಲ್ ಲೈಫ್ ಇನ್ ದಿ ವಿಜಯನಗರ ಪಿರಿಯಡ್', ಕೃತಿಯು ಮಹತ್ವದ್ದಾಗಿದೆ. ಆಲೂರ ವೆಂಕಟರಾಯ ಅವರ 'ಶ್ರೀ ವಿದ್ಯಾರಣ್ಯ ಚರಿತ್ರೆ' ಕೃತಿಯು 'ಧರ್ಮ ಸಾಮ್ರಾಜ್ಯ'(ವಿಜಯನಗರ)ವು ಹಕ್ಕಬುಕ್ಕರಿಂದ ಸ್ಥಾಪಿಸಲ್ಪಟ್ಟು, ಪರಕೀಯರನ್ನು, ಪರಧರ್ಮೀಯರನ್ನು ಹೊರದೂಡಿಸಲು ಸ್ಥಾಪನೆಗೊಂಡ ಸಾಮ್ರಾಜ್ಯ ಎಂಬುದಾಗಿ ನಿರೂಪಿಸುತ್ತದೆ.

ಕೆ.ಎ. ನೀಲಕಂಠಶಾಸ್ತ್ರೀ ಮತ್ತು ಎನ್. ವೆಂಕಟರಮಣಯ್ಯ ಅವರು ೧೯೪೬ರಲ್ಲಿ ರಚಿಸಿದ 'ಫರ್ದರ್ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ' ಹಾಗೂ ೧೯೫೫ರಲ್ಲಿ ಕೆ.ಎ. ನೀಲಕಂಠಶಾಸ್ತ್ರಿ ಅವರು ರಚಿಸಿದ 'ಎ ಹಿಸ್ಟರಿ ಆಫ್ ಸೌತ್ ಇಂಡಿಯಾ' ಕೃತಿಗಳು ಪ್ರಮುಖ ವಾದದ್ದಾಗಿವೆ. ಟಿ.ವಿ.

ಮಹಾಲಿಂಗಂ ಅವರ 'ಅಡ್‌ಮಿನಿಸ್ಟ್ರೇಶನ್ ಆ್ಯಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ'(೧೯೪೦) ಕೃತಿಯನ್ನು ಪ್ರಕಟಿಸಿದರು. ಎ. ಅಪ್ಪಾದೊರೈ ಅವರ 'ಎಕನಾಮಿಕ್ ಕಂಡೀಷನ್ಸ್ ಇನ್ ಸೌತ್ ಇಂಡಿಯಾ' ಇವು ವಿಜಯನಗರದ ಆಡಳಿತ, ಸಾಮಾಜಿಕ ಹಾಗೂ ಆರ್ಥಿಕ ಜೀವನ ಕುರಿತು ಮಾಹಿತಿ ಚೆಲ್ಲುತ್ತವೆ. ಕೆ.ಎ.ಎನ್. ಶಾಸ್ತ್ರೀ ಅವರ 'ಎ ಹಿಸ್ಟರಿ ಆಫ್ ಸೌತ್ ಇಂಡಿಯಾ' ಕೃತಿಯು ವಿಜಯನಗರದಲ್ಲಿ ಮುಸ್ಲಿಂ ವರ್ತಕ ಸಮುದಾಯಗಳ ಬಗ್ಗೆ ಕೆಲವು ಮಾಹಿತಿಯನ್ನು ನೀಡುತ್ತದೆ.

ಕೆ.ವಿ. ರಮೇಶ್ ಅವರ 'ಎ ಹಿಸ್ಟರಿ ಆಫ್ ಸೌತ್ ಕೆನರಾ'(೧೯೭೦) ಕೃತಿಯು ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಸಮುದಾಯವು ವರ್ತಕ, ರಾಜ್ಯಪಾಲ, ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಿರುವ ಹಲವು ಶಾಸನಗಳ ಉಲ್ಲೇಖಗಳನ್ನು ನೀಡುತ್ತದೆ. ಈ ಕೃತಿಯು ದಕ್ಷಿಣ ಕನ್ನಡ ಪ್ರದೇಶದ ಕರಾವಳಿ ತೀರ ಹಾಗೂ ಒಳನಾಡುಗಳಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯಗಳ ಕುರಿತು ಮಾಹಿತಿ ನೀಡುತ್ತದೆ. ವಿ.ಎಸ್. ಡಿಸೋಜಾ ಅವರ 'ದಿ ನವಾಯತ್ಸ್ ಆಫ್ ಕೆನರಾ(೧೯೫೮) ಕೃತಿಯು ನವಾಯತ್ ಮುಸ್ಲಿಂ ಸಮುದಾಯಗಳ ಮೂಲ, ವೃತ್ತಿ, ವರ್ತಕ ಸಮುದಾಯವಾಗಿರುವುದರ ಕುರಿತು ಮಾಹಿತಿ ನೀಡುತ್ತದೆ. ವಿಜಯನಗರ ಕಾಲಾವಧಿಯಲ್ಲಿ ಈ ಸಮುದಾಯಗಳು ಹೇಗೆ ವ್ಯಾಪಾರದಲ್ಲಿ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡವು ಎನ್ನುವ ಅಂಶವನ್ನು ಗುರುತಿಸಲು ಈ ಕೃತಿ ಸಹಾಯಕವಾಗಿದೆ.

ಹಿರೇಮಠ ಬಿ.ಕೆ., ಅವರ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು(೧೯೮೬), ನಾಗರಾಜು ಎಸ್. ಅವರ 'ಆಗ್ನೇಯ ಏಶಿಯಾದೊಡನೆ ಕರ್ನಾಟಕ ಸಾಂಸ್ಕೃತಿಕ ಸಂಬಂಧ'(೧೯೬೯) ಕೃತಿಗಳು ಪ್ರಾಚೀನ ಕಾಲದಿಂದ ಹಿಡಿದು ವಿಜಯನಗರ ಕಾಲದವರೆಗೆ ವ್ಯಾಪಾರದಲ್ಲಿ ಮುಸ್ಲಿಮರ ಆರ್ಥಿಕ ಚಟುವಟಿಕೆಗಳ ಹಾಗೂ ವರ್ತಕ ಸಂಘಗಳ ಕುರಿತು ಮಾಹಿತಿ ನೀಡುತ್ತವೆ.

ಕುಪ್ಪುಸ್ವಾಮಿ ಜಿ.ಆರ್. ಅವರ 'ಸೋಷಿಯಲ್ ಆ್ಯಂಡ್ ಎಕನಾಮಿಕ್ ಕಂಡಿಷನ್ಸ್ ಆಫ್ ಕರ್ನಾಟಕ'(೧೯೪೪), ಗುರುರಾಜಾಚಾರ್ ಎಸ್. ಅವರ 'ಸಮ್ ಆ್ಯಸ್ಪಟ್ಸ್ ಆಫ್ ಎಕನಾಮಿಕಲ್ ಆ್ಯಂಡ್ ಸೋಷಿಯಲ್ ಲೈಫ್ ಇನ್ ಕರ್ನಾಟಕ', ಆಲ್ಟೇಕರ್ ಎ.ಎಸ್. ಅವರ 'ಸ್ಟೇಟ್ ಆ್ಯಂಡ್ ಗವರ್ನಮೆಂಟ್ ಇನ್ ಏನ್ಷಿಯಂಟ್ ಇಂಡಿಯಾ'(೧೯೪೯), ಅಪ್ಪಾದೊರೈ ಅವರ 'ಎಕನಾಮಿಕ್ ಕಂಡಿಷನ್ಸ್ ಆಫ್ ಸದರನ್ ಇಂಡಿಯಾ'(೧೯೩೬), ದೀಕ್ಷಿತ್ ಜಿ.ಎಸ್. ಅವರ 'ಲೋಕಲ್ ಸೆಲ್ಫ್ ಗವರ್ನಮೆಂಟ್ ಇನ್ ಮೆಡಿವಲ್ ಕರ್ನಾಟಕ'(೧೯೬೪) ಕೃತಿಗಳು ಮಧ್ಯಯುಗೀನ ಸಂದರ್ಭದ ಆಂತರಿಕ ಹಾಗೂ ವಿದೇಶಿ ವ್ಯಾಪಾರದಲ್ಲಿ ಮುಸ್ಲಿಂ ವರ್ತಕ ಸಮುದಾಯಗಳ ಪಾತ್ರವನ್ನು ತಿಳಿಸುತ್ತವೆ. ಕರಾವಳಿ ತೀರಪ್ರದೇಶದ ಬಂದರುಪಟ್ಟಣಗಳಲ್ಲಿ ಮುಸ್ಲಿಂ ಸಮುದಾಯಗಳು ವ್ಯಾಪಾರ ಮಾರ್ಗಗಳು ಹಾಗೂ ವಸತಿ ನೆಲೆಗಳನ್ನು ತಿಳಿಸುತ್ತವೆ. ಆರ್ಥಿಕ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಮುಸ್ಲಿಂ ಸಮುದಾಯಗಳು ನಿರ್ವಹಿಸಿದ ಪಾತ್ರವನ್ನು ತಿಳಿಸಿಕೊಡುತ್ತದೆ. ವಿಜಯನಗರ

ಅವಧಿಯಲ್ಲಿ ಮುಸ್ಲಿಂ ಸಮುದಾಯಗಳು ಆರ್ಥಿಕ ಚಟುವಟಿಕೆಗಳಲ್ಲಿ ಸಾಮ್ರಾಜ್ಯದ ಉನ್ನತಿಗೆ ಹೇಗೆ ಕಾರಣವಾದವು ಎನ್ನುವುದನ್ನು ತಿಳಿದುಕೊಳ್ಳಲು ಈ ಕೃತಿಗಳು ಸಹಕಾರಿಯಾಗಿವೆ.

ವೆಂಕಟರಾವ್ ಅವರ 'ಸ್ಟೇಟಸ್ ಆಫ್ ಮುಸ್ಲಿಮ್ಸ್ ಇನ್ ದಿ ವಿಜಯನಗರ ಎಂಪೈರ್' ಕೃತಿಯಲ್ಲಿ ಮುಸ್ಲಿಮರ ಸ್ಥಿತಿಗತಿಗಳನ್ನು ಹೇಳಲಾಗಿದೆ. ಹೀಗೆ ಹಲವಾರು ಕೃತಿಗಳು ವಿಜಯನಗರ ಕಾಲದ ಆಡಳಿತ, ಸಮಾಜ, ಧರ್ಮ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದುಕಿನ ಕುರಿತು ಮಾಹಿತಿ ನೀಡುತ್ತವೆ.

೧೯೬೮ರ ಮೈಸೂರು(ಕರ್ನಾಟಕ) ಸರ್ಕಾರವು ಪ್ರಕಟಿಸಿದ 'ಕರ್ನಾಟಕ ಥ್ರೂ ದಿ ಏಜಸ್' ಹಾಗೂ ೧೯೭೩ರ ಆಂಧ್ರಪ್ರದೇಶದ ಸರ್ಕಾರ ಪ್ರಕಟಿಸಿದ 'ಹಿಸ್ಟರಿ ಆಫ್ ಮೆಡೀವಲ್ ಡೆಕ್ಕನ್' ವಿಜಯನಗರ ಚರಿತ್ರೆ ಕುರಿತು ತಿಳುಸುತ್ತವೆ. ವಸುಂದರ ಫಿಲಿಯೋಜ ಅವರು 'ವಿಜಯನಗರ ಸಾಮ್ರಾಜ್ಯ ಸ್ಥಾಪನೆ'(೧೯೮೦) ಹಾಗೂ 'ಅಳಿದುಳಿದ ಹಂಪಿ' ಕೃತಿಗಳನ್ನು ಪ್ರಕಟಿಸಿದರು. ಅನ್ನ ಡೆಲ್ಲಾ ಪಿಕ್ಕೋಲ ಅವರು 'ವಿಜಯನಗರ ಸಿಟಿ ಆ್ಯಂಡ್ ಎಂಪೈರ್', 'ಗ್ರೇಟ್ ಪ್ಲಾಟ್‌ಫಾರಮ್ ಅಟ್ ವಿಜಯನಗರ: ಆರ್ಕಿಟೆಕ್ಚರ್ ಅಂಡ್ ಸ್ಕಲ್ಪ್ಚರ್' ಪುಸ್ತಕವನ್ನು ೨೦೧೦ರಲ್ಲಿ ಪ್ರಕಟಿಸಿದರು. ಇದು ಮಹಾನವಮಿ ದಿಬ್ಬವನ್ನು ಕುರಿತು ಪ್ರತ್ಯೇಕವಾಗಿ ಪ್ರಕಟವಾದ ಪ್ರಥಮ ಗ್ರಂಥವಾಗಿದ್ದು, ದಿಬ್ಬದ ವಾಸ್ತುಶೈಲಿ, ಶಿಲ್ಪಗಳನ್ನು ವಿವರಿಸುವುದರ ಜೊತೆಗೆ ಎಲ್ಲ ಶಿಲ್ಪಗಳನ್ನು ವ್ಯವಸ್ಥಿತವಾಗಿ ದಾಖಲೀಕರಣವನ್ನು ಮಾಡಲಾಗಿದೆ. ಆದರೆ ಇಲ್ಲಿ ಕಂಡುಬರುವ ಹಲವು ಮುಸ್ಲಿಂ ಶಿಲ್ಪಗಳ ಬಗೆಗೆ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಂಡಿಲ್ಲ. ಅ.ನ. ಕೃಷ್ಣರಾಯರ 'ಕೃಷ್ಣದೇವರಾಯ'(೨೦೦೦), ಎ.ಎಸ್. ನಂಜುಂಡ ಸ್ವಾಮಿಯವರ 'ವಿಜಯನಗರ ಇತಿಹಾಸ'(೧೯೯), ಬಿ.ರಾಘವೇಂದ್ರರಾವ್ ಅವರ 'ವಿಜಯನಗರ'(೧೯೮೫), ಪಿ. ರಾಮಶರ್ಮ ಅವರ 'ಎ ಹಿಸ್ಟರಿ ಆಫ್ ವಿಜಯನಗರ ಎಂಪೈರ್'(೧೯೯೮) ಕೃತಿಗಳು ವಿಜಯನಗರದ ರಾಜಕೀಯ ಚರಿತ್ರೆಯನ್ನು ತಿಳಿಸುತ್ತವೆ.

ವಿಜಯನಗರ ಕಾಲದಲ್ಲಿ ಮುಸ್ಲಿಂ ಧರ್ಮೀಯರ ಕುರಿತು ಅನೇಕ ಲೇಖನಗಳು ಪ್ರಕಟಗೊಂಡಿವೆ. ವಿಜಯನಗರ ಅಧ್ಯಯನದಲ್ಲಿ 'ಮುಸ್ಲಿಂ ಕುಸ್ತಿಪಟುಗಳು' ಎಂಬ ಲೇಖನವನ್ನು ಜೈನುಲ್ಲಾ ಬಳ್ಳಾರಿಯವರು ಬರೆದಿದ್ದಾರೆ. ವಿ. ಅಬ್ದುಲ್ ಮನ್ನಾನ್ ಅವರ 'ವಿಜಯನಗರ ಪಟ್ಟಣದಲ್ಲಿ ಮುಸ್ಲಿಂ ಧರ್ಮ' ಎಂಬ ಲೇಖನವು ಪ್ರಕಟಗೊಂಡಿದೆ. ಇವು ಮುಸ್ಲಿಮರು ದಕ್ಷಿಣ ಭಾರತಕ್ಕೆ ವಲಸೆ ಬಂದಿರುವ ಕುರಿತು ಹಾಗೂ ವಿಜಯನಗರದಲ್ಲಿ ಮುಸ್ಲಿಂ ಧರ್ಮೀಯರ ಪಾತ್ರದ ಕುರಿತು ಮಾಹಿತಿ ನೀಡುತ್ತವೆ. ಸಿ.ಎಸ್. ಗೋವಿಂದರಾಜು ಅವರ 'ಚರಿತ್ರೆ ಹಾಗೂ ಪ್ರವಾಸಿ ಕಥನ' ಲೇಖನದಲ್ಲಿ ವಿಜಯನಗರ ಚರಿತ್ರೆ ರಚನೆಯಲ್ಲಿ ಪ್ರವಾಸಿ ಕಥನಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಚಲುವರಾಜು ಅವರು ರಚಿಸಿರುವ 'ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು'(೨೦೦೦) ಎಂಬ ಪುಸ್ತಕವು ೨೦೦೨ರಲ್ಲಿ ಪ್ರಕಟವಾಯಿತು. ಪುರುಷೋತ್ತಮ ಬಿಳಿಮಲೆ ಮತ್ತು ಚಲುವರಾಜು ಅವರ 'ಹಂಪಿ ಜಾನಪದ'(೧೯೯೬), ಕೃತಿಗಳು ವಿಜಯನಗರ ಕಾಲದ ಸಾಮಾಜಿಕ, ಆರ್ಥಿಕ

ಹಾಗೂ ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಪ್ರಮುಖವಾಗಿ ಅಲಕ್ಷಿತ ಸಮುದಾಯಗಳ ಬಗ್ಗೆ ವಿಮರ್ಶಾತ್ಮಕವಾದ ವಿವರಣೆಯನ್ನು ನೀಡಲಾಗಿದೆ. ವಿರೂಪಾಕ್ಷಿ ಪೂಜಾರಹಳ್ಳಿ ಅವರ 'ವಿಜಯನಗರ ಕಾಲದ ಸಂಸ್ಕೃತಿ'(೨೦೧೫) ಕೃತಿಯು ವಿಜಯನಗರ ಕಾಲದ ಜನಪದರ ನಂಬಿಕೆಗಳ ಕುರಿತು ಮಾಹಿತಿಯನ್ನು ನೀಡುತ್ತದೆ. ಎಸ್.ವೈ. ಸೋಮಶೇಖರ್ ಅವರ 'ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ' ಎಂಬ ಕೃತಿಯು ೨೦೦೯ರಲ್ಲಿ ಪ್ರಕಟಗೊಂಡಿತು. ವಿಜಯನಗರ ಕಾಲದಲ್ಲಿನ ಸೈನ್ಯವ್ಯವಸ್ಥೆ ಕುರಿತ ಅಂಶಗಳನ್ನು ವಿವರಿಸಲಾಗಿದೆ. ಅಶ್ವದಳ, ಕಾಲ್ದಳ, ಗಜದಳ ಅಲ್ಲದೆ ಮುಸ್ಲಿಂ ಸೈನಿಕರ ಉಲ್ಲೇಖಗಳನ್ನು ತಿಳಿಸಲಾಗಿದೆ. ಆದರೆ ವಿಜಯನಗರದಲ್ಲಿ ಪ್ರಾಂತ್ಯೀಯ ಮಟ್ಟದಲ್ಲಿ ಮುಸ್ಲಿಂ ವರ್ತಕರು ಸೈನಿಕರಾಗಿ ಬೀರಿದ ಪಾತ್ರ ಕುರಿತು ಗಮನ ಹರಿಸಲಿಲ್ಲವಾದ್ದರಿಂದ ಆ ಅಂಶಗಳನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಮಹಮ್ಮದ್ ಇಬ್ರಾಹಿಂ ಜುಬೇರಿ(ಮೂ), ಕೃಷ್ಣಕೋಲ್ಹಾರ ಕುಲಕರ್ಣಿ ಅವರು ಅನುವಾದಿಸಿರುವ 'ಬುಸಾತಿನ ಸಲಾತೀನಾ(ಬಿಜಾಪುರ ಆದಿಲ್‌ಶಾಹಿಗಳ ಚರಿತ್ರೆ)' ೧೯೯೯ ರಲ್ಲಿ ರಚಿಸಿದ ಕೃತಿಯು ವಿಜಯನಗರ ಹಾಗೂ ಆದಿಲ್‌ಶಾಹಿ ರಾಜ್ಯಗಳ ನಡುವೆ ಸೌಹಾರ್ದಯುತವಾಗಿ ಏರ್ಪಟ್ಟಿದ್ದಂತ ಸಂಬಂಧಗಳ ಮಾಹಿತಿಯನ್ನು ವಿವರಿಸುತ್ತದೆ.

ಫರಿಸ್ತಾನ 'ತಾರಿಕ್-ಎ-ಫರಿಸ್ತಾ'ದಲ್ಲಿ ಮಧ್ಯಯುಗೀನ ಸಂದರ್ಭದ ಮುಸ್ಲಿಂ ಪ್ರಭುತ್ವಗಳ ಕುರಿತು ಮಾಹಿತಿ ಸಿಗುತ್ತದೆ. ಅಲ್ಲದೇ ಭಾರತದಲ್ಲಿನ ಮುಸ್ಲಿಂ ಸಮುದಾಯಗಳ ಬೆಳವಣಿಗೆಯ ಕುರಿತಂತೆ ಬೆಳಕು ಚೆಲ್ಲುತ್ತದೆ. ವಿಜಯನಗರ ಹಾಗೂ ಬಹಮನಿ ರಾಜ್ಯಗಳ ನಡುವೆ ಸಮುದಾಯಗಳ ಮಧ್ಯ ಏರ್ಪಟ್ಟಿದ್ದ ಸಾಮಾಜಿಕ ಚಲನೆಯ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ. ಕೃಷ್ಣ ಕೊಲ್ಹಾರಕುಲಕರ್ಣಿ ಅವರ ನೇತೃತ್ವದಲ್ಲಿ 'ಆದಿಲ್‌ಶಾಹಿ ಚರಿತ್ರೆ' ಸಂಬಂಧಿಸಿದ ೧೮ ಸಂಪುಟಗಳು ಪ್ರಕಟಗೊಂಡಿವೆ. ಇವು ಮಧ್ಯಯುಗೀನ ಸಂದರ್ಭದಲ್ಲಿನ ಮುಸ್ಲಿಂ ಸಮುದಾಯಗಳು ರಾಜಪ್ರಭುತ್ವದ ಹಾಗೂ ಅಧಿಕಾರಿಶಾಹಿ ವ್ಯವಸ್ಥೆಯಲ್ಲಿ ಗುರುತಿಸಿಕೊಂಡ ಬಗೆಯನ್ನು ತಿಳಿಸಿವೆ. ಮುಸ್ಲಿಂ ಸಮುದಾಯಗಳು ದಕ್ಷಿಣ ಭಾರತದಲ್ಲಿ ವಿಜಯನಗರ, ಬಹಮನಿ, ಪೋರ್ಚುಗೀಸರೊಂದಿಗೆ ಹೊಂದಿದ್ದ ರಾಜಕೀಯ, ಸಾಮಾಜಿಕ ಸಂಬಂಧಗಳ ಕುರಿತ ಮಾಹಿತಿಗಳು ಈ ಕೃತಿಗಳಲ್ಲಿ ಲಭ್ಯವಿದೆ.

ವಹಾಬ್ ದೊಡ್ಡಮನೆ ಅವರ 'ತುಳುನಾಡಿನ ಮುಸ್ಲಿಮರು ೧೯೪೭ರವರೆಗಿನ ಒಂದು ಅಧ್ಯಯನ'(೨೦೦೮) ಕೃತಿಯು ಕರಾವಳಿ ಪ್ರದೇಶದಲ್ಲಿ ಮುಸ್ಲಿಂ ವರ್ತಕ ಸಮುದಾಯಗಳು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡ ಬಗೆಯನ್ನು ತಿಳಿಯಲು ಸಹಕಾರಿಯಾಗಿದೆ.

ರಹಮತ್ ತರೀಕೆರೆ ಅವರ 'ಕರ್ನಾಟಕದ ಸೂಫಿಗಳು'(೧೯೯೮) ಕೃತಿಯು ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿ ದಕ್ಷಿಣ ಭಾರತಕ್ಕೆ ಮುಸ್ಲಿಮರು ಆಗಮಿಸಿದ ಅಂಶಗಳನ್ನು ತಿಳಿಸುತ್ತದೆ. ಹಾಗೇ ಮಧ್ಯಕಾಲೀನ ಸಂದರ್ಭದಲ್ಲಿ ಈ ಸಮುದಾಯವು ಸ್ಥಳೀಯ ಸಂಸ್ಕೃತಿಯೊಂದಿಗೆ ಸಮ್ಮಿಲನಗೊಂಡ ಬಗೆಯನ್ನು ಹಾಗೂ ಸೂಫಿ ಪಂಥವು ಹೇಗೆ ಹಿಂದೂ-ಮುಸ್ಲಿಮರ ನಡುವೆ

ಧಾರ್ಮಿಕ ಸಾಮರಸ್ಯವನ್ನು ಉಂಟು ಮಾಡಿತು ಎನ್ನುವ ಮಾಹಿತಿಗಳನ್ನು ವಿವರಿಸಿದ್ದಾರೆ. ಸಿ.ಟಿ.ಎಂ. ಕೊಟ್ರಯ್ಯನವರ 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ'(೨೦೦೧) ಕೃತಿಯು ಈ ಅವಧಿಯಲ್ಲಿನ ಕೃಷಿ ಉತ್ಪನ್ನಗಳ ಮಾಹಿತಿ ಹಾಗೂ ನೀರಾವರಿ ವ್ಯವಸ್ಥೆಯ ವಿವರಗಳನ್ನು ಒದಗಿಸುತ್ತದೆ.

ರಾಜಶೇಖರ್ ಎಸ್. ಅವರು 'ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ' ಕೃತಿಯು ವಿಜಯನಗರ ಕಾಲದ ವಾಸ್ತುಶೈಲಿಯ ಲಕ್ಷಣಗಳನ್ನು ತಿಳಿಸಿದ್ದಾರೆ. ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ವಿಜಯನಗರ ಶೈಲಿ ಕುರಿತು ವಿವರಿಸಲಾಗಿದೆ. ಚೆನ್ನಬಸಪ್ಪ ಪಾಟೀಲ್ ಅವರು ಕರ್ನಾಟಕದ ಕೋಟೆಗಳು ಸಂಪುಟ–೧ರಲ್ಲಿ ವಿಜಯನಗರದ ಕೋಟೆಗಳ ಬಗ್ಗೆ ವಿವರಿಸಿದ್ದಾರೆ. ಸುಜಾತ ಮಲ್ಲನಗೌಡರು ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಕೋಟೆಗಳ ಮಾಲಿಕೆಯಲ್ಲಿ 'ವಿಜಯನಗರ ಕಾಲದ ಕೋಟೆಗಳು ಮತ್ತು ಅವುಗಳ ಬೆಳವಣಿಗೆ ಕುರಿತು ಬೆಳಕು ಚೆಲ್ಲಿದ್ದಾರೆ.

ಎನ್. ಚಿನ್ನಸ್ವಾಮಿ ಸೋಸಲೆ ಅವರ 'ಸಾಮ್ರಾಜ್ಯ ಮತ್ತು ಸಂಸ್ಥಾನ'(೨೦೦೪) ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಹಾಗೂ ದಕ್ಷಿಣ ಭಾರತದಲ್ಲಿ ಮುಸ್ಲಿಂ ಪ್ರಭುತ್ವವು ವಿಂಗಡನೆಯಾಗಿ ಹೇಗೆ ೫ ರಾಜ್ಯಗಳಾಗಿ ಭಾಗವಾಯಿತೆಂಬುದನ್ನು ತಿಳಿಸಿದ್ದಾರೆ. ವಿಜಯನಗರ ಕಾಲದ ಆರ್ಥಿಕತೆ ಪೂರಕವಾದ ಕೃಷಿ ವ್ಯವಸ್ಥೆ, ನೀರಾವರಿ ವ್ಯವಸ್ಥೆ, ಪ್ರಮುಖ ಬೆಳೆಗಳು ಹೀಗೆ ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಅಂಶಗಳ ಜೊತೆಗೆ ಅಲಕ್ಷಿತ ವರ್ಗಗಳ ಕುರಿತ ಚಾರಿತ್ರಿಕ ದಾಖಲೆಗಳನ್ನು ನೀಡಿದ್ದಾರೆ.

ಮಹದೇವ ಸಿ. ಅವರು 'ಬಳ್ಳಾರಿ ಜಿಲ್ಲೆಯ ಮರದ ವಾಸ್ತು', 'ಕುಮ್ಮಟದುರ್ಗದ ಅರಸರು', 'ವಿಜಯನಗರದ ಗಾರೆಶಿಲ್ಪ', ಕೃತಿಗಳು ವಿಜಯನಗರ ಕಾಲದ ಅರಸರ ಆಳ್ವಿಕೆ, ವಾಸ್ತುಶೈಲಿಯಲ್ಲಿ ಗಾರೆಶಿಲ್ಪಗಳ ಕೆತ್ತನೆ ಕುರಿತ ಮಾಹಿತಿ ಸಿಗುತ್ತದೆ. ಅದೇ ರೀತಿ ಮಹದೇವ ಸಿ., ಸುಬ್ಬಣ್ಣ ರೈ, ಮಾಧವ ಪೆರಾಜೆ ಸಂಪಾದಿತ ಕೃತಿ ಹೊಸಪೇಟೆ ತಾಲೂಕು ದರ್ಶನ'(೨೦೦೨) ಕೃತಿಯಲ್ಲಿ ವಿಜಯನಗರದಲ್ಲಿ ನಿರ್ಮಾಣಗೊಂಡ ಇಂಡೋ–ಇಸ್ಲಾಮಿಕ್ ಸ್ಮಾರಕಗಳ ಕುರಿತು ಹಾಗು ಮಸೀದಿಗಳು, ದರ್ಗಾ ಕುರಿತ ವಿವರಣೆ ಕಂಡುಬರುತ್ತದೆ. ಮೊಗಳ್ಳಿ ಗಣೇಶ್(೨೦೧೦) ಅವರ 'ಹಂಪಿ ಜೀವಜಾಲ ಜಾನಪದ' ಕೃತಿಯು ಹಂಪಿಯಲ್ಲಿನ ಜಾನಪದೀಯ ಆಚರಣೆಗಳ ಬಗ್ಗೆ ತಿಳಿಸಿಕೊಡುತ್ತದೆ. ವಾಸುದೇವನ್ ಸಿ.ಎಸ್ ಅವರ 'ಹಂಪಿ ಪರಿಸರದ ಕೆರೆಗಳು'(೨೦೦೧) ಕೃತಿಯು ಹಂಪಿ ಪ್ರದೇಶದಲ್ಲಿ ಕರೆಗಳ ನಿರ್ಮಾಣ ಹಾಗೂ ಅದಕ್ಕೆ ಪೂರಕವಾಗಿ ನಿರ್ಮಾಣಗೊಂಡ ನೀರಾವರಿ ವ್ಯವಸ್ಥೆ ಕುರಿತು ಮಾಹಿತಿಯನ್ನು ನೀಡಲಾಗಿದೆ.

ಅಯ್ಯಾಳಿ ಎರಿಸ್ವಾಮಿ ಅವರು 'ಹಂಪಿ ಪ್ರದೇಶದಲ್ಲಿ ಐತಿಹ್ಯಗಳು'(೨೦೧೯) ಎಂಬ ಪಿಎಚ್.ಡಿ ಮಹಾಪ್ರಬಂಧವು ಐತಿಹ್ಯಗಳ ಮೂಲಕ ಹಂಪಿಯ ಜನಪದ ಬದುಕನ್ನು ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದೆ. ಸಮುದಾಯಗಳ ಚರಿತ್ರೆಯ ಅಧ್ಯಯನಕ್ಕೆ ಈ ಮಹಾಪ್ರಬಂಧವು ಸಹಕಾರಿಯಾಗಿದೆ.

ಜ್ಞಾನಪ್ರಕಾಶ್ ಬಿ.ಕೆ. ಅವರ 'ಪ್ರಾಚೀನ ಕರ್ನಾಟಕದಲ್ಲಿ ವ್ಯಾಪಾರ ಮತ್ತು ವಾಣಿಜ್ಯ(ಹೊಯ್ಸಳ ಕಾಲದವರೆಗೆ)' (೨೦೦೫) ಪಿಎಚ್.ಡಿ ಮಹಾಪ್ರಬಂಧವು ಮುಸ್ಲಿಂ ಸಮುದಾಯಗಳು ಬಂದರು ಪ್ರದೇಶದಲ್ಲಿ ಪ್ರಾಚೀನ ಕಾಲದಿಂದ ಹಿಡಿದು ಮಧ್ಯಯುಗೀನ ಕಾಲದವರೆಗೆ ವಿದೇಶಿ ವ್ಯಾಪಾರದಲ್ಲಿ ತೊಡಗಿಕೊಂಡಿದ್ದ ಮಾಹಿತಿಯನ್ನು ನೀಡುತ್ತದೆ.

ಸಹನಾ ಆರ್.ಆರ್. ಅವರು ೨೦೧೫ರಲ್ಲಿ ರಚಿಸಿದ ಪಿಎಚ್.ಡಿ. ಮಹಾಪ್ರಬಂಧವಾದ 'ವಿಜಯನಗರ ಸಾಮ್ರಾಜ್ಯದ ಅವನತಿ: ಒಂದು ಅಧ್ಯಯನ(೧೩೩೬-೧೬೪೬)' ಇದು ವಿಜಯನಗರದಲ್ಲಿನ ರಾಜಕೀಯ ಸ್ಥಿತಿಗತಿಗಳ ಕುರಿತು ಹಾಗೂ ವಿಜಯನಗರದ ಅವನತಿಗೆ ಕಾರಣವಾದ ಅಂಶಗಳನ್ನು ತಿಳಿಸುತ್ತದೆ. ಹಾಗೆಯೇ ವಿಜಯನಗರ ಸಾಮ್ರಾಜ್ಯವು ರಕ್ಕಸಗಿ ತಂಗಡಗಿ ಯುದ್ಧದಲ್ಲಿ ಸಂಪೂರ್ಣ ಅವನತಿಯನ್ನು ಹೊಂದದೇ ತಮ್ಮ ದೀರ್ಘವಾದ ಆಳ್ವಿಕೆಯನ್ನು ಅರವೀಡು ವಂಶಸ್ಥರು ೧೫೬೫ರ ನಂತರದ ಸುಮಾರು ಒಂದು ಶತಮಾನಗಳ ಕಾಲ ನಡೆಸಿರುವುದರ ಕುರಿತ ಮಹತ್ವದ ಮಾಹಿತಿಗಳನ್ನು ನೀಡುತ್ತದೆ.

೧.೫. ಅಧ್ಯಯನದ ಸ್ವರೂಪ

ಪ್ರಸ್ತುತ ಪ್ರಬಂಧವನ್ನು ಅಧ್ಯಯನದ ದೃಷ್ಟಿಯಿಂದ ಒಂಬತ್ತು ಅಧ್ಯಾಯಗಳನ್ನಾಗಿ ವಿಭಾಗಿಸಲಾಗಿದೆ. ಒಂದನೆಯ ಅಧ್ಯಾಯದಲ್ಲಿ ಅಧ್ಯಯನ ಕೈಗೊಳ್ಳಲು ಹೊಂದಿರುವಂತಹ ಉದ್ದೇಶವನ್ನು ಹಾಗೂ ಅಧ್ಯಯನಕ್ಕೆ ತೆಗೆದುಕೊಂಡಂತಹ ಕಾಲಾವಧಿಯ ವ್ಯಾಪ್ತಿಯನ್ನು ವಿವರಿಸಲಾಗಿದೆ. ಅಲ್ಲದೆ ಇದುವರೆಗೂ ವಿಜಯನಗರ ಸಾಮ್ರಾಜ್ಯದ ಮೇಲೆ ನಡೆದಿರುವ ಅಧ್ಯಯನ ಸಮೀಕ್ಷೆಯನ್ನು ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ವಿಜಯನಗರ ಸಾಮ್ರಾಜ್ಯದ ಪೂರ್ವದಲ್ಲಿ ಜಾಗತಿಕ ಮಟ್ಟದಲ್ಲಿ ಮುಸ್ಲಿಂ ಸಮುದಾಯಗಳು ರೂಪುಗೊಂಡ ಬಗೆಯನ್ನು ತಿಳಿಸಲಾಗಿದೆ. ಹಾಗೆಯೇ ಜಾಗತಿಕ ಮಟ್ಟದಲ್ಲಿ ಆದಂತಹ ಇಸ್ಲಾಂ ಧರ್ಮದ ಬದಲಾವಣೆಗಳು, ಭಾರತದ ಮೇಲೆ ಬೀರಿದ ಪರಿಣಾಮ ಹಾಗೂ ಇದರಿಂದ ಭಾರತದಲ್ಲಿ ಮುಸ್ಲಿಂ ಸಮುದಾಯಗಳು ರೂಪುಗೊಂಡ ಬಗೆಯನ್ನು ತಿಳಿಸಲಾಗಿದೆ. ಈ ಸಮುದಾಯಗಳು ಉತ್ತರ ಹಾಗೂ ದಕ್ಷಿಣ ಭಾರತದಲ್ಲಿ ತಮ್ಮ ನೆಲೆಗಳನ್ನು ಕಂಡುಕೊಂಡ ಬಗೆಯನ್ನು ತಿಳಸಲಾಗಿದೆ. ವಿಜಯನಗರದ ಸ್ಥಾಪನೆ, ಸಂಗಮ, ಸಾಳುವ, ತುಳುವ ಹಾಗೂ ಅರವೀಡು ವಂಶಗಳ ಸ್ಥಾಪನೆ ಹಾಗೂ ನೆರೆಯ ರಾಜ್ಯಗಳೊಂದಿಗೆ ಹೊಂದಿದಂತಹ ಸಂಬಂಧವನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಧ್ಯಾಯ ಮೂರರಲ್ಲಿ ವಿಜಯನಗರ ಆಳ್ವಿಕೆ ಅವಧಿಯಲ್ಲಿ ಇದ್ದಂತಹ ಹಿಂದೂ ಮತ್ತು ಮುಸ್ಲಿಂ ಬಗೆಗಿನ ನಿರೂಪಣೆಗಳನ್ನು ತಿಳಿಸಲಾಗಿದೆ. ಈ ಕುರಿತು ವಿಜಯನಗರ ಕಾಲದಲ್ಲಿ ಅರಸರು ಬಹಮನಿ ಹಾಗೂ ಶಾಹಿ ರಾಜ್ಯಗಳೊಂದಿಗೆ ಹೊಂದಿದಂತಹ ರಾಜಕೀಯ, ಸಾಮಾಜಿಕ, ಸೌಹಾರ್ದತೆಯ ಅಂಶಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಇದರ ಜೊತೆಗೆ ಅಧ್ಯಯನಕಾರರ ನಿಲುವುಗಳನ್ನು ವಿಮರ್ಶಿಸಲಾಗಿದೆ. ೧೯ನೇ ಶತಮಾನದಿಂದ ಇದುವರಗೆ ವಿಜಯನಗರ ಚರಿತ್ರೆಯನ್ನು

ನೋಡಿದ ಬಗೆಯನ್ನು ಪ್ರಶ್ನಿಸಿ, ಆ ಮೂಲಕ ನೈಜ ಚರಿತ್ರೆಯನ್ನು ತಿಳಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಸಾಮ್ರಾಜ್ಯಶಾಹಿ, ರಾಷ್ಟ್ರೀಯವಾದಿ ನಿಲುವುಗಳು, ಪ್ರವಾಸಿ ಕಥನಗಳಲ್ಲಿ ಕಂಡುಬರುವ ಧೋರಣೆಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯಗಳಲ್ಲಿ ಕಂಡುಬರುವ ಪಂಗಡಗಳಾದಂತಹ ನವಾಯತರು, ಬ್ಯಾರಿಗಳು, ಸೈಯ್ಯದ್, ಶೇಖ್, ಪಠಾನ್, ದಖ್ಖನಿಯರು, ಮಾಪಿಳ್ಳೆ, ಮರಕ್ಕರ್, ತುಳುಕ್ಕರ್, ಸೂಫಿ ಮುಂತಾದವುಗಳ ಕುರಿತು ವಿವರಿಸಲಾಗಿದೆ. ಹಾಗೆಯೇ ಇವು ವಿಜಯನಗರ ಪೂರ್ವದಲ್ಲೇ ನೆಲೆ ನಿಂತು ಸ್ಥಳೀಯವಾಗಿ ಗುರುತಿಸಿಕೊಂಡ ಬಗೆಯನ್ನು ಚರ್ಚಿಸಲಾಗಿದೆ. ಇವರ ಮೂಲ ಹಾಗೂ ದಕ್ಷಿಣ ಭಾರತದಲ್ಲಿ ಇವರು ನೆಲೆ ನಿಂತ ನಂತರ ಪಂಗಡ ಹಾಗೂ ಉಪಪಂಗಡಗಳಾಗಿ ರೂಪುಗೊಂಡ ಬಗೆಯನ್ನು ತಿಳಿಸಲಾಗಿದೆ. ಅದೇ ರೀತಿ ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯ ಒಳಗೆ ಕಂಡುಬರುವ ಮುಸ್ಲಿಂ ವಸತಿನೆಲೆಗಳನ್ನು ಗುರುತಿಸಲಾಗಿದೆ. ಅದರಲ್ಲಿ ವಿಜಯನಗರದ ರಾಜಧಾನಿ ಪ್ರದೇಶವಾಗಿದ್ದ ಹಂಪಿ ಪರಿಸರ, ಇವರ ಆಳ್ವಿಕೆಯಲ್ಲಿದ್ದ ಕೆಲವು ತೆಲುಗು ಹಾಗೂ ತಮಿಳು ಪ್ರದೇಶಗಳಲ್ಲಿನ ನೆಲೆಗಳು, ಕರ್ನಾಟಕ ಕರಾವಳಿಯ ದಕ್ಷಿಣ ಕನ್ನಡ, ಭಟ್ಕಳದಲ್ಲಿನ ಮುಸ್ಲಿಂ ನೆಲೆಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಮುಸ್ಲಿಂ ಸಮಾಜಕ್ಕೆ ಸಂಬಂಧಿಸಿದಂತೆ ಅವರ ಧರ್ಮ, ನಂಬಿಕೆಗಳು, ಆಚರಣೆಗಳು, ಯಾವ ಸ್ವರೂಪದ ಜೀವನವಿಧಾನ ಹಾಗೂ ಮನೋರಂಜನೆ ಮುಂತಾದ ವಿಚಾರಗಳ ಕುರಿತು ಚರ್ಚಿಲಾಗಿದೆ. ಹಾಗೆಯೇ ಸೂಫಿ ಸಿದ್ಧಾಂತ ಬೀರಿದ ಪರಿಣಾಮ ಹಾಗೂ ಅವರ ಧೋರಣೆ ಮತ್ತು ಹಿಂದೂ–ಮುಸ್ಲಿಂ ಸಂಬಂಧವನ್ನು ತಿಳಿಸಲಾಗಿದೆ. ಪ್ರಮುಖವಾಗಿ ಪ್ರವಾಸಿ ಕಥನಗಳು, ಶಾಸನಗಳ ಉಲ್ಲೇಖಗಳು, ಸಮಕಾಲೀನ ಸಾಹಿತ್ಯಿಕ ಆಕರಗಳು, ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಮುಸ್ಲಿಂ ಸಾಮಾಜಿಕ ವ್ಯವಸ್ಥೆ ಕುರಿತು ಚರ್ಚಿಸಲಾಗಿದೆ. ವಿಜಯನಗರದಲ್ಲಿ ಕಂಡುಬರುವ ಸ್ಮಾರಕಾವಶೇಷಗಳು ಹಾಗೂ ಅವರ ನಂಬಿಕೆ–ಆಚರಣೆ, ಸಂಸ್ಕೃತಿಯನ್ನು ತಿಳಿಸಲಾಗಿದೆ.

ಅಧ್ಯಾಯ ಆರರಲ್ಲಿ ಮುಸ್ಲಿಂ ಸಮುದಾಯಗಳು ವಿಜಯನಗರ ಸಾಮ್ರಾಜ್ಯದ ಆರ್ಥಿಕತೆಯಲ್ಲಿ ಕೃಷಿಕರಾಗಿ, ವ್ಯಾಪಾರಸ್ಥರಾಗಿ, ಉದ್ದಿಮೆದಾರರಾಗಿ ವಹಿಸಿದ ಪಾತ್ರವನ್ನು ವಿವರಿಸಲಾಗಿದೆ. ದೇಶಿ–ವಿದೇಶಿ ವ್ಯಾಪಾರ, ಆಮದು–ರಫ್ತಿನಲ್ಲಿ ಮುಸ್ಲಿಂ ಸಮುದಾಯಗಳ ಪಾತ್ರವನ್ನು ತಿಳಿಸಲಾಗಿದೆ. ಇವರು ದಕ್ಷಿಣ ಭಾರತದಾದ್ಯಂತ ವಿವಿಧ ಪ್ರದೇಶಗಳಲ್ಲಿ ವ್ಯಾಪಾರಸ್ಥರಾಗಿ ಆರ್ಥಿಕ ಚಟುವಟಿಕೆಯಲ್ಲಿ ಪಾಲ್ಗೊಂಡಿದ್ದರು ಹಾಗೂ ಈ ವರ್ತಕ ಸಮುದಾಯಗಳು ವಿಜಯನಗರ ಆರ್ಥಿಕತೆಯಲ್ಲಿ ಪ್ರಧಾನವಾಗಿ ಗುರುತಿಸಿಕೊಂಡಿದ್ದ ಅಂಶವನ್ನು ವಿವರಿಸಲಾಗಿದೆ. ಮುಸ್ಲಿಂ ಸಮುದಾಯಗಳು ಸ್ಥಳೀಯ ಹಾಗೂ ವಿದೇಶಿ ವರ್ತಕರಿಗೆ ಮಧ್ಯವರ್ತಿಗಳಾಗಿ ಹೇಗೆ ತಮ್ಮ ಪಾತ್ರವನ್ನು ಬೀರಿದ್ದರು ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಏಳರಲ್ಲಿ ವಿಜಯನಗರ ಸಾಮ್ರಾಜ್ಯದ ರಾಜ್ಯಾಡಳಿತದಲ್ಲಿ ಮುಸ್ಲಿಂ ಸಮುದಾಯಗಳು ಸೈನಿಕರಾಗಿ ಮತ್ತು ಅಧಿಕಾರಿಗಳಾಗಿ ನಿರ್ವಹಿಸಿದ ಕಾರ್ಯವನ್ನು ಹಾಗೂ ಸಾಮ್ರಾಜ್ಯದ ಏಳಿಗೆಯಲ್ಲಿ ಸೈನ್ಯ ವಹಿಸಿದ ಪಾತ್ರವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಹಾಗೆಯೇ ಕರಾವಳಿಯ ಪ್ರದೇಶಗಳಲ್ಲಿ ವರ್ತಕರಾಗಿ ಕಂಡುಬರುವ ಮುಸ್ಲಿಂ ಸಮುದಾಯಗಳು ಸೈನಿಕರಾಗಿ ಹೇಗೆ ಗುರುತಿಸಿಕೊಂಡರು, ಅದೇ ರೀತಿ ಅವರ ವ್ಯಾಪಾರದ ಏಕಸ್ವಾಮ್ಯತೆಯು ಪೋರ್ಚುಗೀಸರ ಕೈಗೆ ಸೇರುವ ಅವಧಿಯಲ್ಲಿ ಮುಸ್ಲಿಂ ಸಮುದಾಯಗಳು ತಮ್ಮ ನೆಲೆಗಳನ್ನು ಕಳೆದುಕೊಂಡ ವಿವರಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ವಿಜಯನಗರ ಸಾಮ್ರಾಜ್ಯವು ಹೊಂದಿದ್ದ ವಾಸ್ತುಶೈಲಿಯನ್ನು ಹಾಗೂ ಈ ವಾಸ್ತುಶೈಲಿಯಲ್ಲಿ ಮುಸ್ಲಿಮರ ಪ್ರಭಾವವನ್ನು ಗುರುತಿಸಲಾಗಿದೆ. ಹಿಂದೂ–ಮುಸ್ಲಿಮರ ಸಮನ್ವಯತೆ ಪ್ರತೀಕವಾಗಿರುವ ಸ್ಮಾರಕಗಳನ್ನು ಗುರುತಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಸಾಮ್ರಾಜ್ಯದ ಸಮಕಾಲೀನ ಆಳ್ವಿಕೆಯಲ್ಲಿ ಕಂಡುಬರುವ ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯ ಲಕ್ಷಣಗಳನ್ನು ಕುರಿತು ಚರ್ಚಿಸಲಾಗಿದೆ.

ಒಂಬತ್ತನೆಯ ಅಧ್ಯಾಯವು ಪ್ರಬಂಧದ ಸಮಾರೋಪವಾಗಿದ್ದು, ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ. ವಿಜಯನಗರವನ್ನು ಪೂರ್ವಗ್ರಹಪೀಡಿತವಾಗಿ ಹಾಗೂ ಸೀಮಿತ ನೆಲೆಯಲ್ಲಿ ನೋಡಿದ ಫಲವಾಗಿ ಹುಟ್ಟಿಕೊಂಡ ಅಚಾರಿತ್ರಿಕ ನಿಲುವುಗಳನ್ನು ಪ್ರಶ್ನಿಸಿ, ವಿಜಯನಗರವನ್ನು ವಸ್ತುನಿಷ್ಠ ಹಾಗೂ ವಾಸ್ತವಿಕತೆಯ ನೆಲೆಯಲ್ಲಿ ನೋಡಿ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

ಅಧ್ಯಾಯ ಎರಡು

ಮುಸ್ಲಿಂ ಸಮುದಾಯಗಳ ಚಾರಿತ್ರಿಕತೆ

ಅಧ್ಯಾಯ ಎರಡು

ಮುಸ್ಲಿಂ ಸಮುದಾಯಗಳ ಚಾರಿತ್ರಿಕತೆ

ಚರಿತ್ರೆಯು ಇಂದಿನ ವರ್ತಮಾನದ ಬದುಕನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ. ವರ್ತಮಾನದ ಬದುಕಿನೊಂದಿಗೆ ಸಂಬಂಧವನ್ನು ಹೊಂದಿರುವ ಚರಿತ್ರೆಯು ಮಾನವ ಬದುಕಿನ ವಾಸ್ತವಿಕತೆಯನ್ನು ರಚಿಸುವ ಅಸ್ಮಿತೆಯನ್ನು ಪಡೆದುಕೊಂಡಿದೆ. ಹಾಗಾಗಿ ಚರಿತ್ರೆ ಅಧ್ಯಯನದ ವ್ಯಾಪ್ತಿಯು ಇಂದು ವಿಸ್ತರಿಸಿಕೊಳ್ಳುತ್ತಾ ಹೊಸ ಬಗೆಯಲ್ಲಿ ನಿರ್ವಚನೆಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಚರಿತ್ರೆಕಾರರು ಪೂರಕವಾದ ಅಧ್ಯಯನ ವಿಧಾನ ಹಾಗೂ ಸೈದ್ಧಾಂತಿಕತೆಯ ನೆಲೆಗಳಲ್ಲಿ ಚರಿತ್ರೆಯನ್ನು ರಚಿಸುವ ಹಾಗೂ ಚರಿತ್ರೆಯ ಮರುರಚನೆಯ ವಿಧಾನಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅಂತಹವುಗಳಲ್ಲಿ ಇಂದು ಜನಕೇಂದ್ರಿತ ಚರಿತ್ರೆ ತನ್ನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಜನರ ಚರಿತ್ರೆಯು ವಿವಿಧ ಜಾತಿ, ಮತ, ಪಂಥ, ವರ್ಣಗಳನ್ನು ಒಳಗೊಂಡ ವಿವಿಧ ಸಮುದಾಯಗಳ ಅಧ್ಯಯನವಾಗಿದೆ. ಈ ಸಮುದಾಯಗಳು ರಾಜ್ಯ ನಿರ್ಮಾಣ ಪಕ್ರಿಯೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುವ ಸಾಮರ್ಥ್ಯವನ್ನು ಹೊಂದಿದ್ದವು. ಆರಂಭಿಕ ಹಂತದಲ್ಲಿ ಪ್ರಭುತ್ವಕೇಂದ್ರಿತ ಧೋರಣೆಗಳು ಚರಿತ್ರೆಯನ್ನು ರಾಜ, ರಾಜ್ಯ ಹಾಗೂ ರಾಜಕೀಯಕ್ಕಷ್ಟೇ ಸೀಮಿತಗೊಳಿಸಿ ವ್ಯಾಖ್ಯಾನಿಸಿದವು. ಇವು ಹಾಗೆಯೇ ವಸಾಹತುಶಾಹಿ ಆಳ್ವಿಕೆಯ ಸಂದರ್ಭದಲ್ಲಿಯೂ ಮುಂದುವರಿದು ಪಾಶ್ಚಿಮಾತ್ಯ ಚರಿತ್ರೆಕಾರರು ಸಹ ಸೀಮಿತ ದೃಷ್ಟಿಕೋನದಲ್ಲಿ ಚರಿತ್ರೆ ರಚನೆಯನ್ನು ಮಾಡಿದರು. ಇಂತಹ ಧೋರಣೆಗಳ ವಿರುದ್ಧ ಅಥವಾ ಪ್ರತಿಕ್ರಿಯೆಗಳ ವಿರುದ್ಧ ಜನಕೇಂದ್ರಿತ ಅಧ್ಯಯನಗಳು ಕಾಲಾಂತರದಲ್ಲಿ ರೂಪಗೊಂಡವು. ಇವು ಸೂಕ್ಷ್ಮ ರೀತಿಯ ಚರಿತ್ರೆಯನ್ನು ರಚಿಸುವ ಮೂಲಕ ಮರೆಮಾಚಿದ ವಾಸ್ತವಿಕ ಘಟನೆಗಳನ್ನು ಬೆಳಕಿಗೆ ತರುವ ಪ್ರಯತ್ನವನ್ನು ಮಾಡಿವೆ.

ಸಮುದಾಯಕೇಂದ್ರಿತ ಹಿನ್ನೆಲೆಯಲ್ಲಿ ಚರಿತ್ರೆಯನ್ನು ಅಧ್ಯಯನ ನಡೆಸುವಾಗ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಬದುಕನ್ನು ಕಟ್ಟಿಕೊಂಡಿರುವ ವಿವಿಧ ಸಮುದಾಯಗಳ ಸಾಂಸ್ಕೃತಿಕ ಬದುಕು ಕಾಣಿಸಿಕೊಳ್ಳುತ್ತಾ ಹೋಗುತ್ತದೆ. ಸ್ಥಳೀಯ ನಿವಾಸಿಗಳಾಗಿ ಗುರುತಿಸಿಕೊಂಡಿರುವ ಜನಸಮುದಾಯಗಳು ಒಂದೆಡೆಯಾದರೆ, ವಿವಿಧ ಚಾರಿತ್ರಿಕ ಕಾಲಘಟ್ಟಗಳಲ್ಲಿ ಬೇರೆ ಬೇರೆ ದೇಶಗಳಿಂದ ಆಗಮಿಸಿದ ಜನಸಮುದಾಯಗಳು ಇನ್ನೊಂದೆಡೆ ತಮ್ಮದೇ ಆದ ಛಾಪನ್ನು ಮೂಡಿಸಿರುವುದನ್ನು ಕಾಣಬಹುದಾಗಿದೆ. ಆದರೆ ಈ ಎಲ್ಲ ಸಮುದಾಯಗಳ ಬದುಕು ಚರಿತ್ರೆ ಬರವಣಿಗೆಯಲ್ಲಿ ಯಾವ

ರೀತಿ ಚಿತ್ರಿತಗೊಂಡಿವೆ ಎನ್ನುವುದು ಅತ್ಯಂತ ಕುತೂಹಲಕರವಾದ ಸಂಗತಿಯಾಗಿದೆ. ಆಯಾ ಚಾರಿತ್ರಿಕ ಪಂಥಗಳ ದೃಷ್ಟಿಕೋನಕ್ಕನುಗುಣವಾಗಿ ಸಮುದಾಯಗಳ ಬದುಕು ಚರಿತ್ರೆಗೆ ಪ್ರವೇಶ ಪಡೆದುಕೊಂಡಿತು. ಮುಸ್ಲಿಂ ಪ್ರಭುತ್ವವನ್ನು ವಿರೋಧಿಸುವಂತಹ ಚರಿತ್ರೆ ರಚನಾಕ್ರಮದಲ್ಲಿ ಮುಸ್ಲಿಂ ಜನಸಮೂಹಗಳ ಅಧ್ಯಯನಗಳು ನಿರ್ಲಕ್ಷ್ಯಕ್ಕೆ ಒಳಪಟ್ಟವು. ಈ ಹಿನ್ನೆಲೆಯಲ್ಲಿ ಮರೆಮಾಚಿದ ಅಥವಾ ನಿರ್ಲಕ್ಷ್ಯಕ್ಕೆ ಒಳಪಟ್ಟ ಮುಸ್ಲಿಂ ಸಮುದಾಯಗಳ ಅಧ್ಯಯನಗಳನ್ನು ಕೈಗೊಂಡಾಗ ತನ್ನದೇ ಆದಂತಹ ವಿಭಿನ್ನ ಸ್ವರೂಪದ ಚರಿತ್ರೆಯು ನಮ್ಮ ಮುಂದೆ ಕಾಣಿಸಿಕೊಳ್ಳುತ್ತದೆ. ಈ ರೀತಿಯಾದ ಅಧ್ಯಯನಗಳಲ್ಲಿ ವಿಜಯನಗರ ಚರಿತ್ರೆಯು ಒಂದಾಗಿ ಕಾಣಿಸಿಕೊಳ್ಳುತ್ತದೆ. ಹಾಗೆಯೇ ವಿಜಯನಗರ ಆಳ್ವಿಕೆಯ ಮುಸ್ಲಿಂ ಸಮುದಾಯಗಳು ತಮ್ಮದೇ ಆದಂತಹ ವೈಶಿಷ್ಟ್ಯತೆಯನ್ನು ಪಡೆದುಕೊಂಡಿವೆ. ವಿಜಯನಗರ ಸಂದರ್ಭದ ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ಗುರುತಿಸಬೇಕಾದರೆ ಅವುಗಳ ಮೂಲವನ್ನು ತಿಳಿಯಬೇಕಾಗುತ್ತದೆ. ಹಾಗಾಗಿ ಏಷ್ಯಾದಲ್ಲಿ ಸ್ಥಾಪನೆಯಾದ ಇಸ್ಲಾಂ ಧರ್ಮದ ಹುಟ್ಟು, ಬೆಳವಣಿಗೆ ಹಾಗೂ ವಿಸ್ತರಣೆ ಕುರಿತು ಚರ್ಚಿಸುವ ಅಗತ್ಯತೆಯೂ ಇದೆ. ಅದರ ಮೂಲಕ ಭಾರತ ಹಾಗೂ ದಕ್ಷಿಣ ಭಾರತದಲ್ಲಿನ ವಿಜಯನಗರ ಸಾಮ್ರಾಜ್ಯದ ಸಂದರ್ಭದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳ ಕುರಿತಂತಹ ಚರಿತ್ರೆಯನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ. ಮಧ್ಯಕಾಲೀನ ವೇಳೆಗೆ ಇಡೀ ದಕ್ಷಿಣ ಭಾರತದಲ್ಲಿ ನೆಲೆ ನಿಂತಂತಹ ಹಲವು ಮುಸ್ಲಿಂ ಸಮುದಾಯಗಳನ್ನು ಅಧ್ಯಯನಕ್ಕೆ ಒಳಪಡಿಸಿ ವಿಜಯನಗರ ಆಳ್ವಿಕೆಯಲ್ಲಿದ್ದ ಮುಸ್ಲಿಂ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ಚರಿತ್ರೆಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಏಷ್ಯಾದಲ್ಲಿ ಇಸ್ಲಾಂ ಸ್ಥಾಪನೆಯಾದ ನಂತರ ಖಲೀಫರ ಪ್ರಭುತ್ವದ ಪ್ರಭಾವದಿಂದ ಆದಂತಹ ರಾಜಕೀಯ ವಿಸ್ತರಣೆ, ಅದರ ಪರಿಣಾಮವಾಗಿ ವ್ಯಾಪಾರಿ ಸಮುದಾಯಗಳು ಜಗತ್ತಿನಾದ್ಯಂತ ತಮ್ಮ ವಸಾಹತು ಪ್ರದೇಶಗಳನ್ನು ಸ್ಥಾಪಿಸಿರುವುದು, ಹೀಗೆ ಜಾಗತಿಕ ಮಟ್ಟದಲ್ಲಿ ಆದಂತಹ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಯ ವಿವಿಧ ಹಂತಗಳನ್ನು ಇಲ್ಲಿ ಗುರುತಿಸಲಾಗಿದೆ. ಅವುಗಳ ಮೂಲಕ ಈ ವಿಸ್ತರಣೆ ಭಾರತಕ್ಕೆ ಪ್ರವೇಶಗೊಂಡ ಬಗೆ, ಉತ್ತರ ಭಾರತದಲ್ಲಿನ ಮುಸ್ಲಿಂ ಪ್ರಭುತ್ವ ವಿಸ್ತರಣೆಯ ಪ್ರಭಾವ, ದಕ್ಷಿಣ ಭಾರತದಲ್ಲಿ ರಾಜಕೀಯ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ಆದಂತಹ ಸ್ಥಿತ್ಯಂತರಗಳು ಹಾಗೂ ವಿಜಯನಗರ ಸಾಮ್ರಾಜ್ಯಕ್ಕೆ ಪ್ರವೇಶ ಪಡೆದ ಬಗೆಯನ್ನು ಹಂತ ಹಂತವಾಗಿ ಈ ಮುಂದಿನಂತೆ ತಿಳಿಯುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಇಸ್ಲಾಂ ಪೂರ್ವದ ಸಮುದಾಯಗಳು

ಕ್ರಿ.ಶ. ೬ನೆಯ ಶತಮಾನವು ಜಾಗತಿಕ ಮಟ್ಟದಲ್ಲಿ ಪ್ರಮುಖ ಬದಲಾವಣೆಯನ್ನು ತಂದ ಕಾಲವಾಗಿತ್ತು. ಏಷ್ಯಾದ ಚರಿತ್ರೆಯಲ್ಲಿ ಅರಬ್ಬರ ಪ್ರದೇಶದಲ್ಲಿ ಕಂಡುಬರುವ ರಾಜಕೀಯ, ಆರ್ಥಿಕ, ಸಾಮಾಜಿಕ ಅಸಮಾನತೆ, ಅರಾಜಕತೆಯು ಇಸ್ಲಾಂ ಧರ್ಮದ ಉದಯಕ್ಕೆ ಕಾರಣವಾಯಿತು. ಈ

ವಿಚಾರವನ್ನು ಹಸನ್ ನಯೀಂ ಸುರಕೋಡ ಅವರು ಇದೊಂದು ಐಡಿಯಾಲಾಜಿಕಲ್(ವಿಚಾರಧಾರೆ) ಆಂದೋಲನವಾಗಿ ಜನ್ಮ ತಾಳಿತೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅರೇಬಿಯಾದಲ್ಲಿ ಇಸ್ಲಾಂ ಪೂರ್ವ ಕಾಲಾವಧಿಯಲ್ಲಿ 'ಬಾದ್ಯರು' ಎಂಬ ಮೂಲನಿವಾಸಿಗಳಿದ್ದರು. ಆದರೆ ಈ ನಿವಾಸಿಗಳ ಮೂಲದ ಬಗ್ಗೆ ಖಚಿತವಾದ ದಾಖಲೆಗಳು ಲಭ್ಯವಾಗಿಲ್ಲ. ನಂತರದ ಅವಧಿಯಲ್ಲಿ ಈ ಪ್ರದೇಶದ ವ್ಯಾಪ್ತಿಯಲ್ಲಿ ಉತ್ತರದ ಬುಡಕಟ್ಟುಗಳು ಹಾಗೂ ದಕ್ಷಿಣದ ಬುಡಕಟ್ಟುಗಳು ಎಂಬ ಎರಡು ಮೂಲ ಮುಸ್ಲಿಂ ಸಮುದಾಯಗಳು ವಾಸವಾಗಿದ್ದವು. ಉತ್ತರ ಅರೇಬಿಯಾದಲ್ಲಿ ನಗರವಾಸಿಗಳು ಕಂಡುಬಂದರೆ, ದಕ್ಷಿಣ ಅರೇಬಿಯದಲ್ಲಿ ಅಲೆಮಾರಿ ಜನರಿದ್ದರು. ಅಲೆಮಾರಿ ಬುಡಕಟ್ಟು ಜನಾಂಗವಾದ 'ಬಿದೊನರು' ಅರಬ್ಬರು ಮರುಭೂಮಿಯ ವಿವಿಧ ಕಡೆಗಳಲ್ಲಿ ನೆಲೆಸಿದ್ದರು. ಈ ಜನಾಂಗ ವಿವಿಧೆಡೆ ಚೆದುರಿ ಹೋಗಿತ್ತು. ಈ ಅಲೆಮಾರಿ ಜನಾಂಗ ತಮ್ಮ ಆರ್ಥಿಕ ಸಂಪನ್ಮೂಲದ ಕ್ರೋಡೀಕರಣಕ್ಕಾಗಿ ಇತರ ಬುಡಕಟ್ಟುಗಳ ಮೇಲೆ ಆಗಾಗ ದಾಳಿಯನ್ನು ಸಹ ಮಾಡುತ್ತಿತ್ತು. ಇವರ ಈ ಕ್ರಿಯೆಗಳಿಗೆ ೧೪ನೇ ಶತಮಾನದ ಚರಿತ್ರೆಕಾರರಾದ ಇಬ್ನ ಖಲದೂನ್ ತನ್ನ ಮುಕದ್ದಿಮಾ(ಇತಿಹಾಸದ ಪರಿಚಯ) ಕೃತಿಯಲ್ಲಿ 'ಬಿದೊನರ' ಈ ದಾಳಿಗಳಿಗಾಗಿ ಅವರನ್ನು ದೂಷಿಸಿದ್ದಾನೆ ಹಾಗೂ ಅವರನ್ನು ನಾಗರಿಕತೆಯ ವೈರಿಗಳೆಂದು ತಿಳಿಸಿದ್ದಾನೆ.[೧] ಇಬ್ನ ಖಲದೂನನು ಉಲ್ಲೇಖಿಸಿದಂತೆ ಬಿದೊನರು ಹಾಗೂ ನಗರವಾಸಿಗಳ ನಡುವಿನ ವ್ಯತ್ಯಾಸ ಅಥವಾ ಮೂಲಭೂತ ಭಿನ್ನಾಭಿಪ್ರಾಯಗಳು ಆಂತರಿಕ ಸಂಘರ್ಷಕ್ಕೆ ಹಾಗೂ ಜಾಗತಿಕ ಸಮಸ್ಯೆಗಳಿಗೆ ಮೂಲ ಕಾರಣವಾಯಿತು ಎಂದು ತಿಳಿಸಿದ್ದಾನೆ. ಈ ಚರಿತ್ರೆಕಾರನ ಅಭಿಪ್ರಾಯವನ್ನು ಆಧುನಿಕ ಚರಿತ್ರೆಕಾರರಾದ ಅಸ್ಗರ್ ಅಲಿ ಅವರು ತಿಳಿಸುವಂತೆ, 'ವಾಸ್ತವದಲ್ಲಿ ಇಬ್ನ ಖಲದೂನ್ ಬಿದೊನರು ಹಾಗೂ ನಗರ ವಾಸಿಗಳಿಗೆ ಸಾಕಷ್ಟು ಒತ್ತು ನೀಡಿದ್ದಾನೆ. ಏಕೆಂದರೆ ಇಸ್ಲಾಂ ಪೂರ್ವದ ಕಾಲದಲ್ಲಿ ಮತ್ತು ಇಬ್ನ ಖಲದೂನ್ ಬದುಕಿನ ಕಾಲದಲ್ಲಿಯೂ ಅಷ್ಟೇ ಅಲ್ಲದೇ ಇಂದು ಕೂಡ ಅರೇಬಿಯಾದ ಕೆಲವು ಪ್ರದೇಶಗಳಲ್ಲಿ ಖಾಯಂ ನಿವಾಸಿಗಳು ಹಾಗೂ ಅಲೆಮಾರಿಗಳ ನಡುವಣ ಈ ಪ್ರತಿಕ್ರಿಯೆ ಹಲವಾರು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳನ್ನು ಹುಟ್ಟು ಹಾಕಿದೆ. ಈ ಪ್ರತಿಕ್ರಿಯೆ ಹಲವಾರು ರೀತಿಗಳಲ್ಲಿ ಮುಸ್ಲಿಂ ಧರ್ಮದ ಹುಟ್ಟು ಮತ್ತು ವಿಕಾಸದ ಮೇಲೆ ಪ್ರಭಾವ ಬೀರಿದೆ'[೨] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಅರಬ್ ದೇಶದಲ್ಲಿರುವ ಬುಡಕಟ್ಟುಗಳ ಸಾಮಾಜಿಕ ಅರಾಜಕತೆ, ಅನೈತಿಕತೆ ಇಸ್ಲಾಂ ಪೂರ್ವದ ಸಮಾಜದಲ್ಲಿಯೂ ಕಂಡುಬಂದಿತು. ಅದನ್ನು ರಾಜಕೀಯ, ಆರ್ಥಿಕ ಹಿನ್ನೆಲೆಯಲ್ಲಿಯೂ ಗುರುತಿಸುವ ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದ್ದು, ಅದನ್ನು ಈ ಮುಂದಿನ ವಿವರಣೆಯ ಮೂಲಕ ತಿಳಿಯಬಹುದು. ದಕ್ಷಿಣ ಅರೇಬಿಯಾದಲ್ಲಿ ಯೆಮೆನ್ ಪ್ರದೇಶವು ವ್ಯಾಪಾರದ ಕೇಂದ್ರಬಿಂದುವಾಗಿತ್ತು. ಈ ಪ್ರದೇಶವು ಮೆಕ್ಕಾ, ಉತ್ತರ ಅರೇಬಿಯಾ ಬಂದರುಗಳು ಹಾಗೂ ಬೈಜೆಂಟಿಯನ್ ಪೂರ್ವದ ಸಾಮ್ರಾಜ್ಯಕ್ಕೆ ಹೋಗುವ ದಾರಿಯಲ್ಲಿ ಮಹತ್ವದ ವ್ಯಾಪಾರದ ನೆಲೆಯಾಗಿತ್ತು. ಈ ಕಾರಣಕ್ಕಾಗಿ ರೋಮ್ ಹಾಗೂ ಗ್ರೀಕರು ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಸದಾ ಪ್ರಯತ್ನ ಮಾಡುತ್ತಿದ್ದರು.

ಆದರೆ ಅಷ್ಟೇ ಪ್ರಮಾಣದಲ್ಲಿ ವಿಫಲರಾಗುತ್ತಿದ್ದರು. ಕ್ರಿ.ಶ. ೩ನೇ ಶತಮಾನದಲ್ಲಿ ಪರ್ಶಿಯಾದ **ಅಬಿಸೀಯನ್ನರು** ಹಾಗೂ **ಸಾಸಾನಿಯರು** ಸಹ ಕಣ್ಣಿಟ್ಟಿದ್ದರು. ದಕ್ಷಿಣ ಅರೇಬಿಯಾದಲ್ಲಿ ಕ್ರೈಸ್ತ ಹಾಗೂ ಯಹೂದಿ ಧರ್ಮಗಳ ಆಗಮನ ವಿಭಿನ್ನ ರಾಜಕೀಯ ಉದ್ದೇಶಗಳನ್ನು ಹೊಂದಿತ್ತು. ಹಾಗಾಗಿ ರೋಮ್ ಹಾಗೂ ಪರ್ಶಿಯನ್ ಸಾಮ್ರಾಜ್ಯಗಳೆರಡೂ ಈ ಪ್ರದೇಶದಲ್ಲಿ ತಮ್ಮ ಪ್ರಭಾವ ವಲಯಗಳನ್ನು ಸ್ಥಾಪಿಸುವುದರಲ್ಲಿ ಆಸಕ್ತಿಯನ್ನು ಹೊಂದಿದ್ದವು. ಯೆಮೆನ್‌ನಲ್ಲಿಯೂ ಸಹ ಯಹೂದಿಗಳು ಹಂತ ಹಂತವಾಗಿ ಪ್ರಾಬಲ್ಯವನ್ನು ಪಡೆದುಕೊಂಡಿದ್ದರು.[೩] ಕ್ರಿ.ಶ. ೪೭೩ರಲ್ಲಿ ರೋಮ್ ಸಾಮ್ರಾಜ್ಯ ತನ್ನ ಅವನತಿಯ ಕಡೆ ಮುಖ ಮಾಡಿತ್ತು. ಪೂರ್ವ ಯುರೋಪ್ ಹಾಗೂ ದಕ್ಷಿಣ ರಷ್ಯಾದಲ್ಲಿ ವ್ಯಾಪಾರದ ಹಿನ್ನಡೆಯನ್ನು ಕಂಡಿತ್ತು. ಕಾನ್‌ಸ್ಟಾಂಟಿನೋಪಲ್‌ನ ಅರಸರು ಪಶ್ಚಿಮದಲ್ಲಿನ ಅವನತಿಯ ಕಾರಣದಿಂದಾಗಿ ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಯಿತು. ಈ ಪರಿಸ್ಥಿತಿಯ ಲಾಭ ಪಡೆಯಲು ಪೂರ್ವದ ಸಾಮ್ರಾಟ ಜಸ್ಟೀವಿಯನ್ ಆರ್ಥಿಕ ದೃಷ್ಟಿಯಿಂದ ಪಶ್ಚಿಮ ಏಷ್ಯಾ ಪ್ರದೇಶದ ಮೇಲೆ ತನ್ನ ನಿಯಂತ್ರಣ ಸ್ಥಾಪನೆ ಮಾಡಲು ಪ್ರಯತ್ನವನ್ನು ಮಾಡುತ್ತಿದ್ದನು.[೪] ಇನ್ನು ಇಸ್ಲಾಂ ಧರ್ಮದ ಪ್ರಮುಖ ಕೇಂದ್ರವಾದ ಮೆಕ್ಕಾ ಪ್ರದೇಶದ ಬಗ್ಗೆ ಗಮನಿಸಿದಾಗ ಇದು ವ್ಯಾಪಾರದ ಹಿನ್ನೆಲೆಯಲ್ಲಿ ಪ್ರಮುಖವಾದ ಹಾಗೂ ಸುರಕ್ಷಿತವಾದ ಸ್ಥಳವಾಗಿತ್ತು. ದಕ್ಷಿಣ ಹಾಗೂ ಉತ್ತರ ಅರೇಬಿಯಾಕ್ಕೆ ಸಂಪರ್ಕ ಕಲ್ಪಿಸುವ ವ್ಯಾಪಾರದ ಮಾರ್ಗವೂ ಆಗಿತ್ತು. ಭೂ ಮಧ್ಯ ಪ್ರದೇಶ, ಪರ್ಶಿಯನ್ ಕೊಲ್ಲಿ, ಜಿಕ್ಜಿ ಮೂಲಕ ಕೆಂಪು ಸಮುದ್ರ ಹಾಗೂ ಆಫ್ರಿಕಾಕ್ಕೆ ಹೋಗುವ ಸಂಪರ್ಕದ ಸೇತುವೆಯಾಗಿತ್ತು.[೫] ಮೆಕ್ಕಾ ಪ್ರದೇಶವನ್ನು ಗುರುತಿಸುವ ಸಂದರ್ಭದಲ್ಲಿ ಇದು ಧಾರ್ಮಿಕ ಪ್ರಾಮುಖ್ಯತೆಯನ್ನು ಸಹ ಪಡೆದುಕೊಂಡಿದ್ದು, ಅಷ್ಟೇ ಅಲ್ಲದೇ ಪ್ರಮುಖ ಅಂತಾರಾಷ್ಟ್ರೀಯ ವ್ಯಾಪಾರದ ಕೇಂದ್ರವಾಗಿತ್ತು. ಇಲ್ಲಿ ವ್ಯಾಪಾರಿಗಳು ತಮ್ಮ ವ್ಯಾಪಾರಿ ನೆಲೆಯನ್ನು ಸ್ಥಾಪಿಸಲು ಕಾರಣ ಇದು ಒಂದು ಆಯಕಟ್ಟಿನ ಸ್ಥಳವಾಗಿ ಗುರುತಿಸಿಕೊಂಡದ್ದು. ಮೆಕ್ಕಾ ಒಂದು ಅಂತಾರಾಷ್ಟ್ರೀಯ ಮಟ್ಟದ ವ್ಯಾಪಾರಿ ಮಾರ್ಗದಲ್ಲಿ ಸ್ಥಾಪನೆಗೊಂಡಿತ್ತು ಹಾಗೂ ಈ ಪ್ರದೇಶ ಅತ್ಯಂತ ಮಹತ್ವದ ವಾಣಿಜ್ಯ ಕೇಂದ್ರವಾಗಿತ್ತು. ಹಾಗಾಗಿ ಮೆಕ್ಕಾ ಪ್ರದೇಶವು ಆರ್ಥಿಕತೆಯ ಸಂಪನ್ಮೂಲಗಳನ್ನು ಹೊಂದಿದಂತಹ ಪ್ರದೇಶವಾಗಿತ್ತು.

ಮೆಕ್ಕಾದ ಆರಂಭಿಕ ಸಮುದಾಯಗಳ ಹುಡುಕಾಟದ ಹಿನ್ನೆಲೆಯಲ್ಲಿ ಖುರೈಷಿ ಬುಡಕಟ್ಟು ತನ್ನ ಪ್ರಭುತ್ವವನ್ನು ಇಲ್ಲಿ ಮೊದಲಿಗೆ ಸ್ಥಾಪಿಸಿಕೊಂಡಿತ್ತು. ಇಲ್ಲಿ ನೆಲೆನಿಂತಹ ಖುರೈಷಿ ಬುಡಕಟ್ಟು ಮೆಕ್ಕಾದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡಿತ್ತು. ಹೀಗೆ ವ್ಯಾಪಾರದ ಹಿನ್ನೆಲೆಯೊಂದಿಗೆ ಮೆಕ್ಕಾದಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ಶ್ರೀಮಂತ ವ್ಯಾಪಾರಿ ವರ್ಗವು ವಾಣಿಜ್ಯದ ಪ್ರಕ್ರಿಯೆಯಲ್ಲಿ ತನ್ನ ಪ್ರಾಬಲ್ಯವನ್ನು ಪಡೆದುಕೊಂಡಿತ್ತು. ಅಂತಾರಾಷ್ಟೀಯ ವ್ಯಾಪಾರ ಕೇಂದ್ರವಾಗಿ ಬೆಳೆದ ಮೆಕ್ಕಾದಲ್ಲಿ ಹೊಸ ಉದ್ದಿಮೆಗಳನ್ನು ಆರಂಭಿಸಲು ವಿಭಿನ್ನ ದೇಶಗಳ ವ್ಯಾಪಾರಸ್ಥರು ಮೆಕ್ಕಾದಲ್ಲಿ ಸಭೆ ಸೇರತೊಡಗಿದರು. ತಮ್ಮ ಉಪಜೀವನಕ್ಕಾಗಿ ಮೆಕ್ಕಾದ ಶೀಮಂತ ವರ್ತಕರನ್ನು ಅವಲಂಬಿಸಿದ ಕಸುಬುಗಾರರ ವಿಶಾಲ ಸಮೂಹವನ್ನೇ ಆಹ್ವಾನಿಸಿದಂತಾಯಿತು. ಬಡಗಿಗಳು, ಕಂಬಾರರು, ಖಡ್ಗ ತಯಾರಿಸುವವರು, ಮದ್ಯದ ವ್ಯಾಪಾರಸ್ಥರು ಹಾಗೂ ಲೇವಾದೇವಿದಾರರು ಹೀಗೆ ಹತ್ತು ಹಲವು

ಬಗೆಯ ವೃತ್ತಿಯವರು ಅಲ್ಲಿದ್ದರು.[೬] ಇಲ್ಲಿನ ಶ್ರೀಮಂತ ವರ್ತಕರು ಕುಶಲಕರ್ಮಿಗಳನ್ನು, ಬುಡಕಟ್ಟು ಜನರನ್ನು ಹಾಗೂ ಗುಲಾಮರನ್ನು(ಬಹುತೇಕರು ವಿದೇಶಿ ಮೂಲದವರು) ತಮ್ಮ ಅಧೀನದಲ್ಲಿ ಇಟ್ಟುಕೊಂಡಿದ್ದರು. ಇವರು ಕಾಲಾಂತರದಲ್ಲಿ ಶ್ರೀಮಂತ ವರ್ತಕರಿಂದ ಶೋಷಣೆಗೆ ಒಳಗಾಗಿದ್ದರು. ಹೀಗೆ ಮೇಲ್ವರ್ಗದವರಿಂದ ಶೋಷಣೆಗೆ ಒಳಗಾದ ತಳ ವರ್ಗದವರು ಇಸ್ಲಾಂ ಧರ್ಮದ ಪೂರ್ವದಲ್ಲಿ ಅರಬ್‌ನಲ್ಲಿ ನೆಲೆಸಿದ್ದರು. ಅರಬ್‌ನ ಸಾಮಾಜಿಕ ವ್ಯವಸ್ಥೆಯು ಈ ರೀತಿಯಾದಂತಹ ಅನಾಗರಿಕ ಸಮಾಜವನ್ನು ಸೃಷ್ಟಿ ಮಾಡಿತ್ತು. ಹೀಗೆ ಅನಾಗರಿಕ ಸಮಾಜದ ಶೋಷಣೆಗೆ ಒಳಗಾದ ಜನರ ವಿಮೋಚನೆಗಾಗಿ ಒಂದು ಹೊಸ ನೆಲೆಯಲ್ಲಿ ಮಹಮ್ಮದ್ ಪೈಗಂಬರ್ ಅವರು, ಇಸ್ಲಾಂ ಧರ್ಮವನ್ನು ಸ್ಥಾಪಿಸಿದರು. ಅವರು ನೈತಿಕತೆಯ, ಹೊಸ ವಿಚಾರಗಳು, ಸಾಮಾಜಿಕ ಬದಲಾವಣೆಯ ಕುರಿತಂತಹ ವಿಚಾರಗಳನ್ನು ಕುರಾನ್ ಮೂಲಕ ಬೋಧಿಸಿ, ಧರ್ಮವನ್ನು ಪ್ರಚಾರ ಮಾಡುವ ಕಾರ್ಯ ಮಾಡಿದರು. ಹಾಗೆಯೇ ಮದೀನ ಅವರ ಸಾಮ್ರಾಜ್ಯದ ಕೇಂದ್ರವಾಯಿತು. ಇಸ್ಲಾಂ ಪ್ರಚಾರ ಮಡಿ, ಆ ಪ್ರದೇಶವನ್ನು ತಮ್ಮ ನಿಯಂತ್ರಣಕ್ಕೆ ತಂದುಕೊಂಡರು. ನಂತರ ರೋಮ್‌ನ ಹಿರಾಕ್ಲಿಯಸ್ ಹಾಗೂ ಪರ್ಶಿಯಾದ ಕಿಸ್ರಾ ರಾಜ್ಯಗಳಿಗೆ ಇಸ್ಲಾಂ ಸ್ವೀಕರಿಸುವಂತೆ ಆಹ್ವಾನ ನೀಡಿದರು. ಇಸ್ಲಾಂ ಪ್ರಸಾರ ಹಾಗೂ ಆರ್ಥಿಕ ಸಂಪನ್ಮೂಲಗಳ ಕ್ರೋಡೀಕರಣಕ್ಕೆ ಬಲಾಢ್ಯ ಸೈನ್ಯದೊಂದಿಗೆ ಅರಬ್ ರಾಜ್ಯದ ಸುತ್ತಲಿನ ಪ್ರದೇಶಗಳನ್ನು ಆಕ್ರಮಿಸಲಾಯಿತು.

ಪೈಗಂಬರ್ ನಂತರ ಅರಬ್ ಸಾಮ್ರಾಜ್ಯದ ಖಲೀಫನಾಗಲು ಉತ್ತರಾಧಿಕಾರತ್ವಕ್ಕೆ ಪೈಪೋಟಿಗಳು ನಡೆದವು. ಪೈಗಂಬರ್ ಖುರೈಷಿ ಪಂಗಡಕ್ಕೆ ಸೇರಿದವರಾಗಿದ್ದರಿಂದ, ಆ ಪಂಗಡದ ಪ್ರಮುಖ ವ್ಯಕ್ತಿಯನ್ನು ಖಲೀಫನಾಗಿ ಮಾಡಬೇಕೆಂದು, ಅವರ ಅನುಯಾಯಿಗಳು ಬೆಂಬಲವನ್ನು ಸೂಚಿಸಿದರು. ಪೈಗಂಬರ್ ಅಳಿಯನಾದ ಅಲಿಯನ್ನು ಖಲೀಫನನ್ನಾಗಿ ಮಾಡಬೇಕೆಂಬುದನ್ನು ಅಲಿಯ ಕೆಲವು ಅನುಯಾಯಿಗಳು ಪ್ರತಿರೋಧಿಸಿದರು. ಹೀಗೆ ಅಧಿಕಾರಕ್ಕೆ ನಡೆದ ಸಂಘರ್ಷದಿಂದಾಗಿ ಇಸ್ಲಾಂ ಧರ್ಮವು ಹಲವು ಪಂಥಗಳಾಗಿ ಒಡೆಯಿತು. ವಾಸ್ತವದಲ್ಲಿ ಪೈಗಂಬರ್ ನಂತರ ಆರ್ಥಿಕತೆಯಲ್ಲಿನ ಹಿಡಿತ ಸಾಧಿಸಲು ಹಾಗೂ ಧಾರ್ಮಿಕ ಯಜಮಾನಿಕೆಯ ವಾರಸುದಾರಿಕೆಯ ಸಮಸ್ಯೆಗಳು ಮುಸ್ಲಿಮರನ್ನು ಈ ಪ್ರದೇಶದಲ್ಲಿ ಇಬ್ಭಾಗ ಮಾಡಿದವು. ಚರಿತ್ರೆಕಾರರಾದ ಅಲ್‌ಶಹರಿಸ್ತಾನಿ ರಕ್ತಪಾತಕ್ಕೆ ಖಿಲಾಫತ್ ಕಾರಣವಾದಷ್ಟು ಬೇರೆ ಯಾವ ಇಸ್ಲಾಮಿ ಸಮಸ್ಯೆ ಕಾರಣವಾಗಲಿಲ್ಲ ಎಂದಿದ್ದಾರೆ. ಬನುಹಾಕಿಂ ಅಲಿಯನ್ನು ಬೆಂಬಲಿಸಿದರೆ, ಇನ್ನು ಕೆಲವು ಖುರೈಷಿ ವಲಸೆಗಾರರು ಅಬದ್ ಅವರಿಗೆ ಬೆಂಬಲ ನೀಡುವಂತಹ ಗುಂಪುಗಳು ರಚನೆಯಾದವು. ಬನುಹಾಕಿಂ ಅಲ್ಪಸಂಖ್ಯಾತ ರಾಗಿದ್ದರಿಂದ ಅಲಿಗೆ ಅವಕಾಶ ಸಿಗದೇ, ಖುರೈಷಿ ಪಂಗಡದ 'ಅಬುಬಕರ್' ಇಸ್ಲಾಂ ರಾಜ್ಯದ ಪ್ರಥಮ ಖಲೀಫನಾದನು. ಹೀಗೆ ಅರಬ್‌ನಲ್ಲಿ ಮುಸ್ಲಿಂ ಪಂಥಗಳು ಉದಯಿಸಿದವು. ಪ್ರಥಮ ಖಲೀಫನ ಬೆಂಬಲಿಗರನ್ನು ಅನುಯಾಯಿಗಳನ್ನು ಸುನ್ನಿ ಎಂದು ಕರೆಯಲಾಯಿತು. ಅಲಿಯ ಅನುಯಾಯಿಗಳಿಗೆ ಶಿಯಾಗಳೆಂದು ಕರೆಯಲಾಯಿತು. ಈ ರೀತಿಯಾಗಿ ಇಸ್ಲಾಂ ಧರ್ಮ ಸುನ್ನಿ, ಶಿಯಾ ಪಂಥಗಳಲ್ಲಿ ಒಡೆದು ಇಬ್ಭಾಗವಾಯಿತು. ಖಲೀಫ್ ಅಧಿಕಾರಕ್ಕೆ ಬಂದ ನಂತರ ಈತನ

ಅಧಿಕಾರವನ್ನು ವಿರೋಧಿಸಿದ ಸ್ಥಳೀಯ ಅಲೆಮಾರಿ ಬುಡಕಟ್ಟುಗಳು ಬಂಡಾಯ ಎದ್ದವು. ಅದನ್ನು ರಿದ್ದಾ ಸಮರ(ಧರ್ಮ ಭ್ರಷ್ಟತೆ) ಎಂದು ಕರೆಯಲಾಗುತ್ತದೆ. ಇದು ನೂತನ ಧರ್ಮ ಹಾಗೂ ಬಿದೊನರ ನಡುವಿನ ಘರ್ಷಣೆಯಾಗಿದ್ದು, ಸಾಮಾಜಿಕ, ನೈತಿಕ ಹಾಗೂ ಆರ್ಥಿಕ ಸ್ವರೂಪದ್ದಾಗಿತ್ತು. ಆಂತರಿಕವಾಗಿ ನಗರವಾಸಿಗಳ ವಿರುದ್ಧ ಬಂಡೆದ್ದಂತಹ ಬದೂನ್ ಅಲೆಮಾರಿ ಜನಾಂಗವನ್ನು ನಿಯಂತ್ರಣಕ್ಕೆ ತರಲಾಯಿತು.

ಈ ಬುಡಕಟ್ಟು ಅಲೆಮಾರಿ ಜನಾಂಗವನ್ನು ನಿಯಂತ್ರಣಕ್ಕೆ ತಂದು, ಅರಬ್‌ನಲ್ಲಿ ಖಲೀಫನು ಆಂತರಿಕವಾಗಿ ಯಾವ ರೀತಿಯಾಗಿ ಶಾಂತಿಯನ್ನು ಸ್ಥಾಪಿಸಿದನೆಂಬುದನ್ನು ಅಸ್ಗರ್ ಅಲಿ ಅವರು ಈ ರೀತಿ ಉಲ್ಲೇಖಿಸುತ್ತಾರೆ. 'ಆಂತರಿಕವಾಗಿ ತಲೆದೋರಿದ ಬಿದೊನ್ ಅಲೆಮಾರಿ ಸಮುದಾಯಗಳನ್ನು ಹತ್ತಿಕ್ಕೆ, ಅವರ ಮೇಲೆ ನಿಯಂತ್ರಣ ಪಡೆಯಲು ಬಿದೊನರನ್ನು ಹೊರಗಿನ ವೈರಿಯ ವಿರುದ್ಧ ಹೋರಾಡುವುದಕ್ಕೆ ತೊಡಗಿಸಿದ್ದರು.'[೬] ಈ ರೀತಿಯಾದ ಆಕ್ರಮಣಗಳಲ್ಲಿ ಪರಿಣತಿ ಹೊಂದಿದ ಈ ಅಲೆಮಾರಿ ಜನಾಂಗವನ್ನು ಸೈನಿಕರನ್ನಾಗಿಸಿಕೊಂಡು ಮುಸ್ಲಿಂ ಪ್ರಭುತ್ವವನ್ನು ವಿಸ್ತರಿಸುವ ಕಾರ್ಯವನ್ನು ಹಂತ ಹಂತವಾಗಿ ಮಾಡಲಾಯಿತು.

ಅರಬ್ಬರು ಬೈಜೆಂಟೈನ್ ಹಾಗೂ ಸಾಸಾನಿಯಂಥ ಪ್ರಬಲ ಸಾಮ್ರಾಜ್ಯಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇರಾಕ್, ಪರ್ಶಿಯಾ, ಸಿರಿಯಾ, ಪ್ಯಾಲೆಸ್ಟೈನ್ ಹಾಗೂ ಈಜಿಪ್ಟ್‌ನಿಂದ ಪಶ್ಚಿಮದ ಕಡೆ ಸಾಗಿ ಉತ್ತರ ಆಫ್ರಿಕಾ ಹಾಗೂ ಸ್ಪೇನ್‌ಗಳನ್ನು ಗೆದ್ದರು.

ಮುಸ್ಲಿಂ ಪ್ರಭುತ್ವದ ರಾಜಕೀಯ ಸ್ಥಿತಿ

ಮಧ್ಯಪೂರ್ವ ಯುಗ ಹಾಗೂ ಮಧ್ಯಕಾಲೀನ ಸಂದರ್ಭದಲ್ಲಿ ಮುಸ್ಲಿಂ ಪ್ರಭುತ್ವದ ಆಳ್ವಿಕೆ ಆರಂಭಗೊಂಡು, ಜಾಗತಿಕ ಮಟ್ಟದಲ್ಲಿ ಖಲೀಫನ ಮುಸ್ಲಿಂ ಸಾಮ್ರಾಜ್ಯಗಳು ಸ್ಥಾಪನೆಗೊಂಡವು. ಅವುಗಳಲ್ಲಿ ಪ್ರಮುಖವಾಗಿ ನಾಲ್ಕು ಖಿಲಾಫತ್ ಸಾಮ್ರಾಜ್ಯಗಳು ಸ್ಥಾಪನೆಗೊಂಡವು. ಅವುಗಳ ಹೆಸರುಗಳನ್ನು ಹೀಗೆ ಗುರುತಿಸಬಹುದು. ರಷಿದುನ್ ಖಲೀಫ್(೬೩೨–೬೬೧), ಉಮ್ಮಾಯಿದ್ ಖಲೀಫ್(೬೬೧–೭೫೦), ಅಬ್ಬಾಸಿದ್ ಖಲೀಫ್(೭೫೦–೧೫೧೭), ಫಾತಿಮಾ ಖಲೀಫ್(೯೦೯–೧೧೭೧). ಅಬ್ಬಾಸಿದ್ ಖಲೀಫ್ ಆಳ್ವಿಕೆಯಲ್ಲಿ ಮಾಮುಲಿಕ್ ಎಂಬ ಗುಲಾಮ ಸೈನಿಕರ ಸಾಮ್ರಾಜ್ಯ ಸ್ಥಾಪಿತವಾಯಿತು. ಇದು ಕ್ರಿ.ಶ. ೯೭೭–೧೮೧೩ರವರೆಗೆ ಆಡಳಿತ ನಡೆಸಿತು. ಇವು ಖಲೀಫರ ಸಾಮ್ರಾಜ್ಯವಾಗಿದ್ದು, ವಿಶ್ವದಾದ್ಯಂತ ಮುಸ್ಲಿಂ ಪ್ರಭುತ್ವ ವಿಸ್ತರಣೆಗೆ ಕಾರಣೀಭೂತವಾಯಿತು. ಈ ರೀತಿಯ ಖಲೀಫರ ಸಾಮ್ರಾಜ್ಯಗಳು ಅಷ್ಟೇ ಅಲ್ಲದೆ, ಕೆಲವು ಸ್ವತಂತ್ರ ಪ್ರಬಲ ಮುಸ್ಲಿಂ ಪ್ರಭುತ್ವಗಳು ಸಹ ಸ್ಥಾಪನೆಯಾದವು. ಅವುಗಳೆಂದರೆ ಆಟೋಮನ್ ಟರ್ಕ್ ಸಾಮ್ರಾಜ್ಯ ಹಾಗೂ ಮಂಗೋಲರು (೧೨೦೬–೧೩೬೮). ಈ ಸಾಮ್ರಾಜ್ಯ ಏಳಿಗೆಯಿಂದಾಗಿ ಖಲೀಫರ ಸಾಮ್ರಾಜ್ಯ ಅವನತಿಯತ್ತ ಸಾಗಿತು. ಪರಿಣಾಮವಾಗಿ ೧೩ನೇ ಶತಮಾನದ ಅವಧಿಯಲ್ಲಿ ಪ್ರಪಂಚದ್ಯಾದಂತ ವಿಸ್ತರಣೆ ಮಾಡಿದ ಮುಸ್ಲಿಂ ಪ್ರಭುತ್ವಗಳ ಪ್ರದೇಶಗಳಲ್ಲಿ ಸಣ್ಣ ಸಣ್ಣ ಸ್ವತಂತ್ರ್ಯ ರಾಜ್ಯಗಳು ಸ್ಥಾಪನೆಗೊಂಡವು.

ಪೈಗಂಬರ್ ಕಾಲಾವಧಿಯಿಂದ ಮುಸ್ಲಿಂ ಪ್ರಭುತ್ವ ವಿಸ್ತರಣೆಯ ಕಾರ್ಯ ಆರಂಭಗೊಂಡಿತು. ಪೈಗಂಬರ್ ಅನುಸರಿಸಿದ ನೀತಿಯನ್ನೇ ಖಲೀಫರು ಮುಂದುವರಿಸುತ್ತಾ ಹೋದರು. ಪ್ರಥಮ ಖಲೀಫನಾದ ಅಬುಬಕರ್ ರೋಮ್-ಪರ್ಶಿಯಾದ ಮೇಲೆ ದಾಳಿ ಮಾಡಿದನು. ಕ್ರಿ.ಶ. ೬೩೨–೩೪ರಲ್ಲಿ ಇರಾಕ್ ಪ್ರದೇಶವನ್ನು, ಕ್ರಿ.ಶ. ೬೪೦ರಲ್ಲಿ ಪರ್ಶಿಯಾದ ಪ್ರದೇಶವನ್ನು ವಶಪಡಿಸಿಕೊಂಡು ಅರಬ್ ರಾಜ್ಯಕ್ಕೆ ಸೇರಿಸಿದನು. ಇವನ ನಂತರ ಅಧಿಕಾರಕ್ಕೆ ಬಂದ ಎರಡನೇ ಖಲೀಫನಾದ ಉಮರ್‌ನು ಕ್ರಿ.ಶ. ೬೪೦ರಲ್ಲಿ ಜೆರೋಸಲೆಮ್ ಮತ್ತು ಸಿರಿಯಾ ಪ್ರದೇಶಗಳು ಹಾಗೂ ಕ್ರಿ.ಶ. ೬೪೨ರಲ್ಲಿ ಈಜಿಪ್ಟನ್ನು ವಶಪಡಿಸಿಕೊಂಡನು. ಈಜಿಪ್ಟ್ ೧೧೭೧ರವರೆಗೆ ಅರಬ್ಬರ ವಶದಲ್ಲಿತ್ತು. ಈ ರೀತಿಯಾಗಿ ಆರಂಭಿಕ ಹಂತದ ರಷೀದ್ ಖಲೀಫ್ ಆಳ್ವಿಕೆಯಲ್ಲಿ ಮುಸ್ಲಿಂ ಸಾಮ್ರಾಜ್ಯವು ಸಿರಿಯಾ, ಪರ್ಶಿಯಾ, ರೋಮ್, ಈಜಿಪ್ಟ್, ಆಫ್ರಿಕಾ ಕಡೆಗೆ ಹರಡಿತು. ನಂತರ ಉಮ್ಮಾಯಿದ್ ಖಲೀಫ್ ಹಾಗೂ ಅಬ್ಬಾಸಿದ್ ಖಲೀಫ್ ಸಾಮ್ರಾಜ್ಯಗಳು ಮುಸ್ಲಿಂ ಪ್ರಭುತ್ವದ ನೆಲೆಗಳನ್ನು ವಿಸ್ತರಿಸುತ್ತಾ ಹೋಯಿತು. ಆದರೆ ಅಬ್ಬಾಸಿದ್ ಸಾಮ್ರಾಜ್ಯದ ಖಲೀಫರ ಆಡಳಿತ ಅವಧಿಯಲ್ಲಿ ಮುಸ್ಲಿಂ ಪ್ರಭುತ್ವವು ಹಲವು ವಿಭಿನ್ನ ಗುಂಪುಗಳಾಗಿ ಒಡೆದು ಹೋಯಿತು. ಕ್ರಿ.ಶ. ೯ನೇ ಶತಮಾನದಲ್ಲಿ ಅಬ್ಬಾಸಿದ್ ಖಲೀಫನ ಆಡಳಿತವು ದುರ್ಬಲವಾಗತೊಡಗಿತು. ಕ್ರಿ.ಶ. ೧೦ನೆಯ ಶತಮಾನದಲ್ಲಿ ಈಜಿಪ್ಟಿನಲ್ಲಿ ಅಬ್ಬಾಸಿದ್ ಖಲೀಫನ ಪ್ರಭುತ್ವದಿಂದ ಬೇರ್ಪಟ್ಟು ಫಾತಿಮಾ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಪಶ್ಚಿಮ ಏಷ್ಯಾದ ಅರಬ್ ಪ್ರದೇಶಗಳ ಮೇಲೆ ಅಬ್ಬಾಸಿದ್ ತಮ್ಮ ನಿಯಂತ್ರಣವನ್ನು ಕಾಪಾಡಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ತುರ್ಕ್ ಅಲೆಮಾರಿ ಸೈನಿಕರು ಇಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡರು. ಪರಿಣಾಮವಾಗಿ ಸಿಲ್‌ಜುಕ್ ಬುಡಕಟ್ಟಿನ ಮಾಮುಲಿಕ್ ಸಾಮ್ರಾಜ್ಯ(೧೨೬೧) ಸ್ಥಾಪನೆಯಾಯಿತು.[೮] ಹಾಗಾಗಿ ಖಲೀಫ್ ಹೆಸರಿಗೆ ನಾಮಮಾತ್ರನಾಗಿದ್ದು, ಖಲೀಫರ ಅಧೀನದಲ್ಲಿ ವಾಸ್ತವದ ಆಡಳಿತದಲ್ಲಿ ಮುಸ್ಲಿಂ ಪ್ರಭುತ್ವ ವಿಸ್ತರಣೆಯಲ್ಲಿ ಇವರು ತೊಡಗಿಕೊಂಡರು. ಇವರು ಪೂರ್ವ ಹಾಗೂ ಮಧ್ಯ ಏಷ್ಯಾ ಮೈನರಿನ ಮೇಲೆ ತಮ್ಮ ಒಡೆತನ ಸ್ಥಾಪಿಸಿಕೊಂಡು ಗುಲಾಮ ಸಂತತಿ ಸಾಮ್ರಾಜ್ಯದ ಏಳಿಗೆಗೆ ಕಾರಣರಾದರು. ಇವರಿಂದ ಮಧ್ಯಪ್ರಾಚ್ಯ ಪ್ರದೇಶದ ಉತ್ತರದ ಭಾಗದವರೆಗೆ ಇಸ್ಲಾಂ ಸಂಸ್ಕೃತಿ ಹರಡಿತು. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಸ್ಥಾಪನೆಗೊಂಡ ಗುಲಾಮ ಸಂತತಿಯ ಮೂಲವನ್ನು ಇಲ್ಲಿ ಗುರುತಿಸಬಹುದು. ಆದರೆ ೧೩ನೇ ಶತಮಾನದಲ್ಲಿ ಅನಾಟೋಲಿಯಾದ ಸಿಲ್‌ಜುಕ್ ಸಾಮ್ರಾಜ್ಯವನ್ನು ಮಂಗೋಲಿಯಾದ ಖಾನರು ವಶಪಡಿಸಿಕೊಂಡರು. ಮಂಗೋಲಿಯಾದ ಅಲೆಮಾರಿಗಳು ಸಿಲ್‌ಜುಕ್ ತುರ್ಕರು ಈವರೆಗೆ ಸಾಧಿಸಿದ ರಾಜಕೀಯ ಸುರಕ್ಷತೆಯನ್ನು ಹಾಳು ಮಾಡಿ, ದಕ್ಷಿಣ ಏಷ್ಯಾವನ್ನು ಟಾಟರು ವಶಪಡಿಸಿಕೊಂಡರು. ಹೀಗೆ ಅಬ್ಬಾಸಿದ್‌ನ ಆಡಳಿತವು ಪರ್ಶಿಯಾ ಮತ್ತು ತುರ್ಕಿ ಮಂತ್ರಿಗಳ ಮತ್ತು ಸೇನಾನಿಗಳ ಕೈವಶವಾಯಿತು.[೯] ಹೀಗೆ ಅಬ್ಬಾಸಿದ್ ಸಾಮ್ರಾಜ್ಯವು ೧೨–೧೩ನೇ ಶತಮಾನಲ್ಲಿ ಒಡೆದು ಅಲ್ಲಲ್ಲೇ ಸಣ್ಣ ಪುಟ್ಟ ರಾಜ್ಯಗಳಾಗಿ ಹುಟ್ಟಿಕೊಂಡವು. ಕ್ರಿ.ಶ. ೧೨೫೩ರಲ್ಲಿ ಕೊನೆಯ ಅಬ್ಬಾಸಿದ್ ಖಲೀಫನಾದ ಅಲ್ ಮೊಸ್ತಾಸಿಮನನ್ನು ಮೊಘಲ್ ಚಕ್ರವರ್ತಿಯಾದ ಹಲಾಗುಖಾನ್ ಸೋಲಿಸಿದನು. ಇಸ್ಲಾಂ ಸಾಮ್ರಾಜ್ಯ ಕಾಫರ್ ಚಕ್ರವರ್ತಿಯ ಆಡಳಿತಕ್ಕೆ ಒಳಪಟ್ಟಿತು.[೧೦]

ಹೀಗೆ ಖಿಲಾಫತ್ ಅಬ್ಬಾಸಿದ್‌ರಿಂದ ತುರ್ಕರಿಗೂ, ಅಲ್ಲದೆ ತುರ್ಕರ ಸಮಕಾಲೀನರಾಗಿದ್ದ ಭಾರತೀಯ ಸುಲ್ತಾನರಿಗೆ ಹಾಗೂ ಮೊರಾಕೊ ಸುಲ್ತಾನರಿಗೆ ವರ್ಗಾವಣೆಯಾಯಿತು. ಈ ರೀತಿಯಾಗಿ ಅಬ್ಬಾಸಿದ್ ಮತ್ತು ತುರ್ಕಿ ಅರಸರ ಖಿಲಾಫತ್ ಕಾಲದಲ್ಲಿ ಸ್ಪೇನ್, ಈಜಿಪ್ಟ್ ಮತ್ತು ಭಾರತದಲ್ಲಿ ಹುಟ್ಟಿಕೊಂಡರೂ, ಕೊನೆಗೆ ಉಳಿದವರು ತುರ್ಕಿ ಖಲೀಫರು ಮಾತ್ರ.[೧೧] ಭಾರತದಲ್ಲಿ ಮೊಘಲರ ಆಳ್ವಿಕೆ ಅವನತಿ ಆದ ನಂತರ ಭಾರತೀಯ ಮುಸ್ಲಿಮರು ತುರ್ಕಿ ಖಲೀಫರನ್ನು ಒಪ್ಪಿಕೊಂಡರು. ಇದು ಮುಸ್ಲಿಂ ಪ್ರಭುತ್ವಗಳ ಸ್ಥಾಪನೆಯಿಂದಾಗಿ ಆದಂತಹ ರಾಜಕೀಯ ವಿಸ್ತರಣೆಗಳ ಪರಿಣಾಮಗಳಾಗಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಮುಸ್ಲಿಂ ಪ್ರಭುತ್ವಗಳ ಆಳ್ವಿಕೆಯ ಸಂದರ್ಭದಲ್ಲಿ ಏಷ್ಯಾದ ಸಾಮಾಜಿಕ, ಆರ್ಥಿಕ ಚಟುವಟಿಕೆಗಳ ಮೇಲೆ ಆದಂತಹ ಪ್ರಭಾವವನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

ಮುಸ್ಲಿಂ ಸಮುದಾಯಗಳ ಹುಟ್ಟು ಹಾಗೂ ಬೆಳವಣಿಗೆ

ಅರಬ್‌ನಲ್ಲಿ ಸಾಮ್ರಾಜ್ಯ ಸ್ಥಾಪನೆ, ಆಂತರಿಕವಾಗಿ ಅಧಿಕಾರಕ್ಕೆ ಜರುಗಿದ ಪೈಪೋಟಿ ಹಾಗೂ ಬಾಹ್ಯ ಸಾಮ್ರಾಜ್ಯ ವಿಸ್ತರಣೆಗಳು ಸಾಮಾಜಿಕ, ಆರ್ಥಿಕ, ಧಾರ್ಮಿಕ ಜನಜೀವನದ ಮೇಲೆ ದಟ್ಟವಾದ ಪರಿಣಾಮಗಳನ್ನು ಬೀರಿದವು. ಅಂದಿನ ಮುಸ್ಲಿಂ ಸಾಮ್ರಾಜ್ಯದಲ್ಲಿ ಹಲವು ವಿಭಿನ್ನ ಸಮುದಾಯಗಳು ಇದ್ದವು. ಈಜಿಪ್ಟಿನ ಚರಿತ್ರೆಕಾರರಾದ ತಾಹಾ ಹುಸೇನ್ ತಿಳಿಸುವಂತೆ ನಾಲ್ಕು ಬಗೆಯ ಜನಸಮೂಹಗಳು ಅರಬ್‌ನಲ್ಲಿ ಕಂಡುಬಂದವು. ಅವುಗಳಲ್ಲಿ ೧. ಮೆಕ್ಕಾದ ಖುರೈಷ್ ೨. ಸಹಕಾರಿಗಳು(ಅನ್ಸಾರರು) ೩. ಅಲೆಮಾರಿ ಅರಬ್ಬರು(ಬಿದೊನ್) ಹಾಗೂ ೪. ಅರಬ್ಬರು ವಶಪಡಿಸಿಕೊಂಡ ಪ್ರಾಂತಗಳ ಪ್ರಜೆಗಳು.

ಖುರೈಷ್ ಬುಡಕಟ್ಟು ಅರೇಬಿಯಾದಲ್ಲಿ ಪ್ರಬಲವಾಗಿತ್ತು. ಇದು ವ್ಯಾಪಾರದ ವೃತ್ತಿಯನ್ನು ಮಾಡುವಂತಹ ಬುಡಕಟ್ಟು ಸಮುದಾಯವಾಗಿತ್ತು. ಮೆಕ್ಕಾದಲ್ಲಿ ಈ ಬುಡಕಟ್ಟಿಗೆ ಸೇರಿದ ಶ್ರೀಮಂತ ವ್ಯಾಪಾರಸ್ಥರು ಇದ್ದು, ಅಂತಾರಾಷ್ಟ್ರೀಯ ವ್ಯಾಪಾರವು ಇವರ ಕೈಯಲ್ಲಿತ್ತು. ಈ ಬುಡಕಟ್ಟಿನ ವರ್ತಕರು ಪಶ್ಚಿಮದ ರೋಮನ್ನರು ಹಾಗೂ ಪೂರ್ವದ ಭಾರತೀಯರು ಹಾಗೂ ಚೀನಿಯರ ನಡುವೆ ಮಹತ್ವದ ಕೊಂಡಿಯಾಗಿದ್ದರು. ಎರಡನೆಯ ಸಮುದಾಯವೆಂದರೆ ಸಹಕಾರಿಗಳು ಅಥವಾ ಅನ್ಸಾರರು. ಇವರು ಮಹಮ್ಮದ್ ಜೊತೆಗೂಡಿ ಹೋರಾಟದಲ್ಲಿ ಅಥವಾ ಕದನಗಳಲ್ಲಿ ಸಹಾಯಕರಾಗಿದ್ದರು. ಇವರೆಲ್ಲಾ ಪೈಗಂಬರ್ ಮರಣದ ನಂತರ ಖಿಲಾಫತ್‌ಗೆ ತಮ್ಮ ಪೈಪೋಟಿ ನಡೆಸಿದ್ದರು. ಇನ್ನು ಮೂರನೆಯ ಸಮುದಾಯವೆಂದರೆ ಅಲೆಮಾರಿ ಅರಬ್ಬರು. ಇವರು ಪೈಗಂಬರ್ ಮರಣದ ನಂತರ ಖಲೀಫನ ಆಳ್ವಿಕೆ ವಿರುದ್ಧ ಬಂಡೆದ್ದರು. ಖಲೀಫಾನು ಈ ಬುಡಕಟ್ಟನ್ನು ನಿಯಂತ್ರಿಸಿ ಬಾಹ್ಯ ಆಕ್ರಮಣದಲ್ಲಿ ಈ ಸಮುದಾಯದವರನ್ನು ತೊಡಗಿಸಿದನು. ಸೈನಿಕರಾಗಿ ಗುರುತಿಸಿಕೊಂಡ ಈ ಸಮುದಾಯ ಮುಂದೆ ಅರಬ್ ರಾಜ್ಯ ವಿಸ್ತರಣೆಯಲ್ಲಿ ಪ್ರಮುಖ ಪಾತ್ರ ವಹಿಸಿತು.

ನಾಲ್ಕನೇ ಸಮೂಹವು ಅರಬೇತರ ಪ್ರಜೆಗಳು. ಇವರು ಅತ್ಯಂತ ಕೆಳಗಿನ ಸ್ಥಾನದಲ್ಲಿದ್ದರು. ಸರ್ಕಾರದ ಕಾರ್ಯ ಚಟುವಟಿಕೆಗಳಲ್ಲಿ ಅವರಿಗೆ ಯಾವುದೇ ಪಾತ್ರವಿರಲಿಲ್ಲ. ವಾಸ್ತವದಲ್ಲಿ ಈ ಸಮೂಹ ಸಂಪೂರ್ಣವಾಗಿ ಪರತಂತ್ರ ಅಸಹಾಯಕವಾಗಿತ್ತು. ಈ ಜನರು ಮುಸ್ಲಿಮರನ್ನು ತಮ್ಮ ವಿಮೋಚಕರೆಂದು ಭಾವಿಸಿ ಇವರನ್ನು ಸ್ವಾಗತಿಸಿದರು. ಆದರೆ ಕಾಲಾಂತರದಲ್ಲಿ ಅರಬ್ಬರು, ಅರಬ್ಬೇತರ ಪ್ರಜೆಗಳ ಮೇಲೆ ಒಡೆಯರಾಗಿ ಆಳ್ವಿಕೆ ನಡೆಸಿದರು. ಅಪಾರ ನಿರೀಕ್ಷೆಗಳನ್ನು ಹುಟ್ಟಿಸಿದ್ದ ಮುಸ್ಲಿಮರ ಬಗ್ಗೆ ಅಂತಿಮವಾಗಿ ಕಹಿಭಾವನೆಗಳು ಬೆಳೆದವು. ಈ ಕಾರಣಕ್ಕೆ ಇರಾಕಿನ ಪ್ರಮುಖ ಸೇನಾ ನೆಲೆ 'ಕೂಫಾ' ಅತೃಪ್ತರ ಬಂಡಾಯದ ಕೇಂದ್ರವಾಯಿತು. ಅಸ್ಗರ್ ಅಲಿ ಈ ಸಮುದಾಯದ ಬಗ್ಗೆ ತಿಳಿಸುತ್ತಾ, 'ಕೂಫಾದ ಜನಸಂಖ್ಯೆಯಲ್ಲಿ ಅರ್ಧದಷ್ಟು ಆಶ್ರಿತರಿದ್ದರು. ಅವರು ಕೈಗಾರಿಕೆ, ವ್ಯಾಪಾರ ಹಾಗೂ ವಾಣಿಜ್ಯದ ಮೇಲೆ ಏಕಸ್ವಾಮ್ಯ ಹೊಂದಿದ್ದರು. ಅವರಲ್ಲಿ ಬಹುತೇಕರು ಪರ್ಶಿಯನ್ ಮೂಲದವರಾಗಿದ್ದರು. ಇವರು ಕೂಫಾಕ್ಕೆ ಯುದ್ಧ ಕೈದಿಗಳಾಗಿ ಬಂದು ಅಲ್ಲೇ ಇಸ್ಲಾಂ ಸ್ವೀಕಾರ ಮಾಡಿದರು. ಆದರೆ ಅವರು ಅರಬ್ಬರನ್ನೇ ಅವಲಂಬಿಸಿದ್ದರು. ತಮ್ಮನ್ನು ಆಳುವವರು ಸಂಪ್ರದಾಯವಾದಿ ಸುನ್ನಿಗಳಾಗಿದ್ದರಿಂದ ಸಂಪ್ರದಾಯ ವಿರೋಧಿ ಶಿಯಾ ಆಂದೋಲನವನ್ನು ಬೆಂಬಲಿಸುವುದರ ಮೂಲಕ ಕೂಫಾದ ಜನತೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಿದ್ದರು.[೧೨] ಈ ರೀತಿಯಲ್ಲಿ ಇಸ್ಲಾಂ ಸ್ಥಾಪನೆಯ ನಂತರದ ಕಾಲಘಟ್ಟದಲ್ಲಿ ಖಲೀಫರ ಆಡಳಿತದ ಸಂದರ್ಭದಲ್ಲಿ ವಿವಿಧ ಸಮುದಾಯಗಳ ಹುಟ್ಟಿಗೆ ಕಾರಣವಾದವು. ಖುರೈಷ್, ಬದೂನ್, ಷೇಕ್,[೧೩] ಶಿಯಾ, ಸುನ್ನಿ ಪಂಥಗಳು ಹುಟ್ಟಿಕೊಂಡವು. ಹೀಗೆ ಖಲೀಫರು ತಮ್ಮ ರಾಜ್ಯ ವಿಸ್ತರಣೆಯ ಕಾರ್ಯವನ್ನು ಮುಂದುವರಿಸಿದಂತೆ ಅರಬ್‌ನಲ್ಲಿ ನಾಗರಿಕ ಸಮಾಜವು ಬೆಳೆಯಿತು. ಇದರೊಂದಿಗೆ ಇಲ್ಲಿ ಮೂಲ ನಿವಾಸಿಗರೊಂದಿಗೆ ಹೊಸ ನಾಗರಿಕ ಸಮುದಾಯಗಳು ಜನ್ಮ ತಾಳಿದವು. ಅವುಗಳಲ್ಲಿ ಮಿಲಿಟರಿನಗರಗಳು ಅಲ್ಲಿ ಕಂಡುಬರುತ್ತಿದ್ದ ಅರಬ್ ಯೋಧರು, ಅಲೆಮಾರಿ ವಲಸಿಗರು, ಅರಬ್ಬೇತರ ಜನರೊಂದಿಗೆ 'ಸಮ್ಮಿಶ್ರಣಗೊಂಡ ಹೊಸ ಮಿಶ್ರ ಸಮುದಾಯಗಳ ಹುಟ್ಟಿಗೆ ಕಾರಣರಾದರು. ಈ ಒಟ್ಟು ಪ್ರಕಿಯೆ ಅರಬ್ಬರು ನಗರವಾಸಿಗಳಾಗಿ ರೂಪಾಂತರಗೊಳ್ಳಲು ಸಹಾಯಕವಾಯಿತು. ಅವರಲ್ಲಿ ಕುಶಲಕರ್ಮಿಗಳು, ವ್ಯಾಪಾರಿಗಳು ಕುರಾನ್ ಪಠಣೆ ಮಾಡುವ ಧಾರ್ಮಿಕ ಮುಖಂಡರು, ಕಾನೂನುತಜ್ಞರು, ಅರೇಬಿಯನ್ ಸಾಹಿತ್ಯತಜ್ಞರು ಸೇರಿದ್ದರು.[೧೪] ಹೀಗೆ ಅರಬ್‌ನಲ್ಲಿ ಪ್ರಭುತ್ವಕೇಂದ್ರಿತ ಹಾಗೂ ಜನಸಮೂಹಗಳ ಕೇಂದ್ರದಡಿಯಲ್ಲಿ ಹಲವು ಸಮೂಹಗಳು ರಚನೆಗೊಂಡವು.

ಖಲೀಫರ ಸ್ಥಾನಕ್ಕೆ ಉದ್ಭವಿಸಿದ ಹೋರಾಟದ ಪರಿಣಾಮವಾಗಿ ಧಾರ್ಮಿಕ ಪಂಥಾಭಿಮಾನಿಗಳ ಕೇಂದ್ರದಡಿಯಲ್ಲಿ ಹಲವು ಸಮೂಹಗಳು ಏಳಿಗೆಗೆ ಬಂದವು. ಈ ನೆಲೆಯಲ್ಲಿ ಖಾಸಿಗಳು ಹಾಗೂ ಶೈರ್ಯ ಸಮುದಾಯಗಳು ಹುಟ್ಟಿಕೊಂಡವು. ಈ ಸಮುದಾಯಗಳಿಂದಾಗಿ ಅರಬ್ ಪ್ರಮುಖರಲ್ಲಿ ಒಡಕು ಉಂಟಾಯಿತು.[೧೫] ಹೀಗೆ ಪಶ್ಚಿಮ ಏಷ್ಯಾದಲ್ಲಿ ಮುಸ್ಲಿಮರು ತಮ್ಮ ನೆಲೆಗಳನ್ನು ಕಂಡುಕೊಂಡು, ನಂತರ ಅಲ್ಲಿ ಹಲವಾರು ಮುಸ್ಲಿಂ ಸಮುದಾಯಗಳು ಹುಟ್ಟಿಕೊಂಡವು ಎಂಬುದನ್ನು ಗುರುತಿಸಬಹುದು.

ಹೊಸ ನಗರ ಕೇಂದ್ರಗಳು, ಆರ್ಥಿಕ ಅಭಿವೃದ್ಧಿ, ಆಧುನಿಕ ಸಮುದಾಯಗಳ ರಚನೆ ಇವುಗಳನ್ನು ಒಳಗೊಂಡ ಹೊಸ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಸಾಮಾಜಿಕ ಪ್ರಕ್ರಿಯೆಯ ಆಧಾರಗಳಿಂದ, ಧಾರ್ಮಿಕ ಪ್ರಮುಖರು ಮುಂದಾಳುಗಳಾಗಿರುವ ಮತೀಯ ಸಮುದಾಯಗಳಿಂದ ಸಂಘಟಿತವಾಗಿರುವ ಒಂದು ಸ್ವತಂತ್ರ ನಾಗರಿಕ ಜನಜೀವನದ ಸೃಷ್ಟಿಯಾಯಿತು. ಆದರೆ ಇವರಲ್ಲಿಯೂ ಚಕ್ರಾಧಿಪತ್ಯವನ್ನು ವಿರೋಧಿಸುವ ಪ್ರವೃತ್ತಿ ಕಂಡುಬಂತು. ಈ ಹಿನ್ನೆಲೆಯಲ್ಲಿ ಪ್ರಭುತ್ವಕೇಂದ್ರಿತ ಅಡಿಯಲ್ಲಿ ಹಲವು ಗುಂಪುಗಳು ಕಾಣಿಸಿಕೊಂಡವು. ಪ್ರವಾದಿಯ ಕುಟುಂಬದವರು ಅಥವಾ ಜೊತೆಗಾರರು ಮತ್ತು ಅವರ ಉತ್ತರಾಧಿಕಾರಿಗಳು, ಕುರಾನಿನ ಪಠಣದರು, ಮುಸ್ಲಿಂ ಕಾನೂನು ಹಾಗೂ ಇತಿಹಾಸತಜ್ಞರು, ಸೂಫಿ ಪಂಥೀಯರು ಹಲವಾರು ಶಿಷ್ಯರನ್ನು, ವಿದ್ಯಾರ್ಥಿಗಳನ್ನು ಹಾಗೂ ಅನುಯಾಯಿಗಳನ್ನು ಸಂಪಾದಿಸಿದರು. ಇದರಿಂದ ಶಿಯಾ ಮತ್ತು ಖಾರೀಜಿ ಸಂಘಗಳು, ಸನ್ನಿ ಪಂಥ ಹಾಗೂ ಸುನ್ನಿ ಶಿಷ್ಯ ಪರಂಪರೆ ಹುಟ್ಟಿಕೊಂಡವು. ಈ ಗುಂಪುಗಳು ಚಿಕ್ಕದಾಗಿದ್ದು, ದೀಕ್ಷೆ ಪಡೆದವನಿಗೆ ಮಾತ್ರ ಪ್ರವೇಶವಿದ್ದ ಪಂಥಗಳಾಗಿದ್ದವು. ಅವುಗಳಲ್ಲಿ ಕೆಲವು ಗುಂಪುಗಳು ಸಾಮೂಹಿಕ ಅನುಯಾಯಿತ್ವವನ್ನು ಸಂಪಾದಿಸಿದವು. ಖಲೀಫರ ಸಂಪ್ರದಾಯಕ್ಕೆ ಹಾಗೂ ಇಸ್ಲಾಮಿಕ್ ತತ್ವಗಳನ್ನು ಪಾಲಿಸುವುದಾಗಿ ಘೋಷಿಸಿದರು. ಶಿಯಾಗಳು ಹಾಗೂ ಖಾರೀಜಿಗಳು ಮೊದಲಿಗೆ ಖಲೀಫನ ಸಂಪ್ರದಾಯವನ್ನು ತೀವ್ರವಾಗಿ ವಿರೋಧಿಸಿದರು. ಆದರೆ ೯ನೆಯ ಶತಮಾನದ ವೇಳೆಗೆ ೧೨ ಶಿಯಾ ಮತ್ತು ಹಲವು ಖಾರಿಜಿಗಳ ಉದ್ಧಾರಕನು ಆವತರಿಸುವನೆಂಬ ಕನಸು–ಆಸೆ ಭಗ್ನವಾಗಿ ಅದು ಅವರು ಮೋಕ್ಷಾಕಾಂಕ್ಷಿಗಳಾಗಿ ರಾಜಕೀಯ ಆಕಾಂಕ್ಷೆಗಳನ್ನು ಸ್ಥಳೀಯ ಸಾಮುದಾಯಿಕ ವ್ಯವಹಾರಗಳಿಗೆ ರೂಪಾಂತರಗೊಳಿಸಿಕೊಂಡರು ಹಾಗೂ ಧಾರ್ಮಿಕ ಜೀವನ ನಡೆಸತೊಡಗಿದರು. ತಾತ್ವಿಕ ಸಿದ್ಧಾಂತವನ್ನು ಬೆಂಬಲಿಸಿದ ಸುನ್ನಿಗಳು ಕೂಡ ಸಾರ್ವಜನಿಕ ಬಂಧನಗಳಿಂದ ದೂರ ಉಳಿದು ಚಿಕ್ಕ ಚಿಕ್ಕ ಸಮುದಾಯಗಳ ಜೀವನ ಹಾಗೂ ವೈಯಕ್ತಿಕ ಧಾರ್ಮಿಕ ಆಚರಣೆಯ ಮೇಲೆ ಗಮನವನ್ನು ಕೇಂದ್ರೀಕರಿಸಿದರು.[೧೬] ನಗರಜೀವನದಲ್ಲಿ ಉಂಟಾದ ಬದಲಾವಣೆಯಿಂದಾಗಿ ಖಲೀಫರ ಆಸ್ಥಾನದ ಆಡಳಿತದಲ್ಲಿಯೂ ಬದಲಾವಣೆಗಳಾದವು. ಉಲ್ಮಾಗಳು ಹಾಗೂ ಸೂಫಿಗಳು ರಾಜಾಸ್ಥಾನದ ಸಂಸ್ಕೃತಿಯ ಹಲವು ಅಂಗಗಳನ್ನು ಸ್ವೀಕರಿಸಿದರು. ಇಸ್ಲಾಂ ಸಮಾಜವು ಖಲೀಫರು ಮತ್ತು ರಾಜಾಸ್ಥಾನ, ಉಲ್ಮಾಗಳು ಹಾಗೂ ಚಕ್ರಾಧಿಪತ್ಯ ಮತ್ತು ನಗರ ಜನತೆ, ರಾಜಕೀಯ ಮತ್ತು ಮತೀಯ ಲೌಕಿಕ ಪಾರಲೌಕಿಕ, ಇಂಥ ಎರಡು ಬಗೆಯ ಪಂಥಗಳಿಂದ ಮುನ್ನಡೆಯಿತು.

೯ನೆಯ ಶತಮಾನದ ಅಂತ್ಯದ ವೇಳೆಗೆ ಇಸ್ಲಾಂ ಪ್ರಮುಖರು ಹಾಗೂ ಅವರ ಸಾಂಸ್ಕೃತಿಕ ದೃಷ್ಟಿಕೋನ ಒಂದು ಸೀಮಿತ ವರ್ಗದ ಜನತೆಯನ್ನು ಪ್ರತಿನಿಧಿಸುತ್ತಿದ್ದು, ಅದರಲ್ಲಿ ಪ್ರಸ್ತುತ ಧಾರ್ಮಿಕ ಪ್ರಮುಖರು, ಅರಬರ ಮುಸಲ್ಮಾನ ಪಟ್ಟಣಗಳು ಹಾಗೂ ಮತಾಂತರಗೊಂಡ ಗ್ರಾಮೀಣ ಪ್ರದೇಶದ ಜನರು ಮಾತ್ರ ಸೇರಿದ್ದರು. ಕ್ರಿ.ಶ. ೯ ಹಾಗೂ ೧೦ನೆಯ ಶತಮಾನದಲ್ಲಿ ಅಬ್ಬಾಸಿದ್ ಸಾಮ್ರಾಜ್ಯ ಒಡೆದು ಹೋದ ಮೇಲೆ ಧಾರ್ಮಿಕ ಪ್ರಮುಖರ ಪ್ರಭಾವ ಹಾಗೂ ಸಾಂಸ್ಕೃತಿಕ

ಪ್ರಭಾವಗಳು ಬೀರಿದವು. ಆ ಮೂಲಕ ಸಾಮೂಹಿಕ ಇಸ್ಲಾಂ ಸಮಾಜವಾಗಿ ಮೈದಳೆಯಿತು. ಕ್ರಿ.ಶ. ೧೦ರಿಂದ ೧೩ನೆಯ ಶತಮಾನದವರಿಗೆ ಕಂಡುಬಂದ ಅರಾಜಕತೆಯಿಂದಾಗಿ ಹಳೆಯ ಸಾಮ್ರಾಜ್ಯ ಹೋಗಿ ಹೊಸ ಸಾಮ್ರಾಜ್ಯಗಳು ಹಾಗೂ ಹೊಸ ಧಾರ್ಮಿಕ ಪ್ರಮುಖರು ಬಂದರು. ಪಶ್ಚಿಮ ಏಷ್ಯಾವನ್ನು ತುರ್ಕಿಸ್ತಾನದ ಅಲೆಮಾರಿ ಯೋಧರು ಗೆದ್ದು ಗುಲಾಮ ಯುದ್ಧ ವೀರರು ಆಳರಸರಾದರು.[೧೭] ಅವರು ಹಲವಾರು ಪಶ್ಚಿಮ ಏಷ್ಯಾ ಪ್ರಾಂತ್ಯ ಗೆದ್ದರು. ಇದೇ ಕಾಲಾವಧಿಯಲ್ಲಿ ಈ ಸಂತತಿ ಭಾರತದಲ್ಲಿಯೂ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡಿತು. ಸುಲ್‌ಜುಕ್ ಸಂತತಿಯು ತನ್ನದೇ ಆದಂತಹ ಆಡಳಿತ ಕ್ರಮವನ್ನು ರೂಪಿಸಿತ್ತು. ಇವರ ಪ್ರಭುತ್ವದ ಆಳ್ವಿಕೆಯಲ್ಲಿ ಉಲ್ಮಾಗಳು ಹಾಗೂ ಅಧಿಕಾರಿ ವರ್ಗ, ಸೈನಿಕ ವರ್ಗ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ಆದರೆ ಸುಲ್‌ಜುಕ್‌ರ ಆಡಳಿತ ಸಂದರ್ಭದಲ್ಲಿ ಮೇಲ್ವರ್ಗದ ಮನೆತನಗಳು, ಬುಡಕಟ್ಟುಗಳ ರಾಜರು ಹಾಗೂ ಗುಲಾಮ ಸಂತತಿಯ ಪ್ರಮುಖರ ನಡುವಿನ ವಿವಾದಗಳಿಂದಾಗಿ ಅಧಿಕಾರದ ಕೇಂದ್ರೀಕರಣ ಸಾಧ್ಯವಾಗಿರಲಿಲ್ಲ. 'ಇಕ್ತ'(ಕಂದಾಯ) ವ್ಯವಸ್ಥೆಯ ಆಡಳಿತದಲ್ಲಿ ತೆರಿಗೆ ಸಂಗ್ರಹಣೆಯ ಹಕ್ಕು ಸೈನ್ಯ ಪ್ರಮುಖರಲ್ಲಿ ನಿಹಿತವಾಗಿದ್ದು, ಇದು ಕೂಡ ಅಧಿಕಾರ ವಿಭಜಿತವಾಗುವುದಕ್ಕೆ ಕಾರಣವಾಯಿತು. ಹೀಗಾದರೂ ಸುಲ್ತಾನ ಆಳ್ವಿಕೆ, ಗುಲಾಮ ಮಿಲಿಟರಿ ದಳಗಳು ಇಕ್ತಾ ಆಡಳಿತ ಇವು ಕಾರ್ಯಸೂತ್ರವನ್ನು ರಚಿಸುವಂಥ ಮಾದರಿಯ ಸರ್ಕಾರವನ್ನು ರೂಪಿಸಿದವು.

ಈ ಸಂಸ್ಥೆಗಳ ಒಗ್ಗೂಡುವಿಕೆಯು ಅಧಿಕಾರದ ಚಲಾವಣೆಯನ್ನು ಪರಿಭಾವಿಸುವ, ತರ್ಕಬದ್ಧವಾಗಿ ನೋಡುವ ಹಾಗೂ ಅಧಿಕೃತಗೊಳಿಸುವ ಪರಿಕಲ್ಪನೆಗಳನ್ನು ಬೆಸೆಯುವ ಕೊಂಡಿಯಾಗಿತ್ತು. ಸರ್ಕಾರದ ಎರಡು ಪರಿಕಲ್ಪನೆಗಳಿಗೆ ಸಾಮಾನ್ಯ ಮನ್ನಣೆ ದೊರೆಯಿತು. ಮೊದಲನೆಯದೆಂದರೆ ಮುಸಲ್ಮಾನ ಎಂಬುದರಲ್ಲಿ ಖಲೀಫ ಎಂಬುದು ಮುಸಲ್ಮಾನ ಪಂಥವನ್ನು ಎತ್ತಿ ಹಿಡಿಯಲು, ಪ್ರವಾದಿಯಿಂದ ಆಜ್ಞೆ ಪಡೆದ ಹಾಗೂ ಭಗವಂತನ ಆಜ್ಞೆಯನ್ನು ಶಿರಸಾವಹಿಸಿ ನೆರವೇರಿಸಲು, ಮುಸಲ್ಮಾನರನ್ನು ಸಂರಕ್ಷಿಸುವ, ಜಿಹಾದನ್ನು ತಡೆಗಟ್ಟುವ ಒಂದು ಪಂಥ. ಎಲ್ಲಾ ಕಾನೂನುಸಮ್ಮತ ಅಧಿಕಾರವನ್ನು ಖಲೀಫರು ಸುಲ್ತಾನರಿಗೆ ನೀಡಿ, ಸುಲ್ತಾನರು ಅದನ್ನು ತಮ್ಮ ಅಧೀನ ಅಧಿಕಾರಿಗಳಿಗೆ ನೀಡುತ್ತಾರೆ. ಆದರೂ ಸುಲ್ತಾನರು ಇಸ್ಲಾಂ ನ್ಯಾಯವನ್ನು, ಶಿಕ್ಷಣವನ್ನು ಎತ್ತಿ ಹಿಡಿದು ಉಲ್ಮಾವನ್ನು ಬೆಂಬಲಿಸಿ ಶೋಷಣೆಯನ್ನು ತಡೆಗಟ್ಟಬೇಕಾಗುತ್ತದೆ. ಶರಿಯಾವನ್ನು ಎತ್ತಿಹಿಡಿಯುವ ರಾಜನು ಅಧಿಕಾರಕ್ಕೆ ಬಂದ ರೀತಿ ಹೇಗೇ ಇದ್ದರೂ ಮುನ್ನಣೆಗೆ ಪಾತ್ರನಾಗುತ್ತಾನೆ. ಎರಡನೆಯದಾಗಿ ಸರ್ಕಾರವನ್ನು ವೈಯಕ್ತಿಕ ರೂಪವಾಗಿ ಗುರುತಿಸಲಾಗುತ್ತದೆ. ತಮ್ಮ ಒಡೆಯರಿಗೆ ಹಾಗೂ ಆಶ್ರಯದಾತರಿಗೆ ವಿಧೇಯಕರಾದ ಗುಲಾಮರು ಹಾಗೂ ಅನುಯಾಯಿಗಳ ಮೇಲೆ ಸಾಮ್ರಾಜ್ಯಗಳನ್ನು ಕಟ್ಟಲಾಗಿತ್ತು. ಒಬ್ಬ ಅಧೀನ ಅಧಿಕಾರಿಯು ತನ್ನನ್ನು ತಾನು ಎಂದೂ ರಾಜ್ಯದ ಕರ್ತವ್ಯ ಪಾಲಕನೆಂದು ಭಾವಿಸಲು ಆಗುತ್ತಿರಲಿಲ್ಲ. ಆದರೆ ರಾಜನ ಒಬ್ಬ ಉತ್ತಮ ಸೇವಕನೆಂದು ಭಾವಿಸಲಾಗುತ್ತಿತ್ತು. ಗುಲಾಮಗಿರಿ ಎಂಬುದು ಪ್ರತ್ಯಾಯೋಜಿತ ಅಧಿಕಾರ ಎಂಬ ಗೌರವಯುತ ಪರಿಕಲ್ಪನೆಯ ವೈಯಕ್ತಿಕ

ಬಾಧ್ಯತೆಯ ಪರಿಣಾಮಕಾರಿ ಅಭಿವ್ಯಕ್ತಿಯಾಗಿತ್ತು.[೧೮] ಈ ರೀತಿಯಾಗಿ ಪ್ರಭುತ್ವಕೇಂದ್ರಿತ ಆಳ್ವಿಕೆಯಲ್ಲಿ ಖಲೀಫ ಹಾಗೂ ಖಲೀಫನ ನಾಮಮಾತ್ರ ಆಳ್ವಿಕೆಯ ಸಂದರ್ಭದಲ್ಲಿ ಉದ್ಭವಿಸಿದ ಸಮುದಾಯಗಳು, ಪಂಥಗಳು ರಾಜಕೀಯ ಹಾಗೂ ಸಾಮಾಜಿಕವಾದಂತಹ ಬದಲಾವಣೆಯನ್ನು ಮಾಡಿದವು.

೧೦ರಿಂದ ೧೩ನೆಯ ಶತಮಾನದ ಅವಧಿಯಲ್ಲಿ ಸುನ್ನಿ ವಿಚಾರಧಾರೆ, ಸೂಫಿ ಸೋದರತ್ವ ಭಾವನೆ, ಶಯೀ ಪಂಥ ಹಾಗೂ ಇತರ ಮುಸಲ್ಮಾನ ಗುಂಪುಗಳು ಕಂಡುಬಂದವು. ಮತ ಕುರಿತಾದ ವಿಚಾರಧಾರೆಯ ಗುಂಪುಗಳಲ್ಲಿ ೮ ಮತ್ತು ೯ನೆಯ ಶತಮಾನಗಳ ಕಾನೂನುತಜ್ಞರ ನಡುವೆ ನಡೆದ ಚರ್ಚೆಯ ಫಲವಾಗಿ ರೂಪಗೊಂಡ ಕಾನೂನು ಸಂಹಿತೆಗಳಿಗೆ ಬದ್ಧರಾದ ಪರಿಣತರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕಾಣಿಸಿಕೊಂಡರು. ಕಾನೂನು ಶಾಲೆಗಳು ಹಾಗೂ ಉಲ್ಮಾಗಳು ಉನ್ನತ ಶಿಕ್ಷಣವನ್ನು ಆರಂಭಿಸಿ ಶಿಕ್ಷಕರನ್ನು ಹಾಗೂ ನ್ಯಾಯಾಡಳಿತಾಧಿಕಾರಿಗಳನ್ನು ತರಬೇತುಗೊಳಿಸಿದರು. ಈ ವೈಚಾರಿಕ ಪಂಥಗಳಿಗೆ, ಜನಪ್ರಿಯತೆಯಿಂದಾಗಿ ಹಲವಾರು ಅನುಯಾಯಿಗಳು ದೊರೆತರು. ವಿದ್ಯಾರ್ಥಿಗಳು ತಮ್ಮನ್ನು ತಾವು ತಮ್ಮ ಗುರುಗಳ ಶಿಷ್ಯರೆಂದು ಕರೆದುಕೊಂಡರು. ಆ ವರ್ಗಗಳು ಅದರಲ್ಲೂ ವಿಶೇಷವಾಗಿ ವ್ಯಾಪಾರಿಗಳು ಹಾಗೂ ಕುಶಲಕರ್ಮಿಗಳ ವರ್ಗಗಳಿಂದ ಬಂದವರು ಆಶ್ರಯದಾತರಾದರು ಹಾಗೂ ಪೋಷಕರು ದೊರೆತರು. ಸೂಫಿ ತತ್ವದ ಪ್ರಕಾರ ಪ್ರತಿಯೊಬ್ಬ ಶಿಕ್ಷಕನಿಗೆ ಅವನ ಶಿಷ್ಯರೇ ಆಧಾರ. ಸಾಮಾನ್ಯ ವಾಸಸ್ಥಳಗಳಲ್ಲಿ ವಾಸಿಸುತ್ತಿದ್ದ ಸೂಫಿ ಗುಂಪುಗಳು ಖಾನಕ್‌ಗಳೆಂದು ಹೆಸರಾದವು. ೧೦ ಮತ್ತು ೧೩ನೆಯ ಶತಮಾನಗಳಲ್ಲಿಯ ಸೂಫಿ ಗುರುಗಳು ತಮ್ಮನ್ನು ತಾವು ಮೊದಲಿನ ಗುರುಗಳ ಉತ್ತರಾಧಿಕಾರಿಗಳೆಂದು ಕರೆದುಕೊಳ್ಳಲು ಆರಂಭಿಸಿದ ಮೇಲೆ ತಾರೀಖ್‌ಗಳು ಅಥವಾ ಸೋದರತ್ವ ಸಂಘಗಳು ರಚಿತವಾದವು. ಒಬ್ಬನೇ ಗುರುವಿನಿಂದ ಬಂದವರು ತಮ್ಮನ್ನು ತಾವು ಒಂದೇ ಅಧ್ಯಾತ್ಮ ಸಿದ್ಧಾಂತಕ್ಕೆ ಸೇರಿದವರೆಂದು ಭಾವಿಸಿದರು ಹಾಗೂ ಅದೇ ಉನ್ನತಾಧಿಕಾರವನ್ನು ಅಂಗೀಕರಿಸಿದ ದೊಡ್ಡ ಧಾರ್ಮಿಕ ಆಂದೋಳನದ ಘಟಕವೆಂದು ಭಾವಿಸಿದರು. ಇಂತಹ ಸಂಘಟನೆಗಳಿಂದ ಪ್ರಾದೇಶಿಕ ಹಾಗೂ ವಿಶ್ವವ್ಯಾಪಿ ಸೋದರತ್ವ ಸಂಘಗಳು ರಚಿತವಾದವು. ಈ ಪ್ರಕಾರದ ಸೂಫಿ ಪಂಥವು ಸಮಾಧಿಗಳನ್ನು ಗೌರವಿಸುವ, ಸಾಧು ಸನ್ಯಾಸಿಗಳ ಶಿಷ್ಯರನ್ನು ಉತ್ತರಾಧಿಕಾರಿಗಳೆಂದು ಗೌರವಿಸುವ, ಸಮಾಧಿಯ ಸುತ್ತ ಹಬ್ಬಗಳನ್ನು, ಬಲಿಗಳನ್ನು ನಡೆಸುವ ಸಂಪ್ರದಾಯಗಳಿಗೆ ಹಾದಿ ಮಾಡಿಕೊಟ್ಟಿತು. ಇಂತಹ ಸಂದರ್ಭಗಳಲ್ಲಿ ಇಸ್ಲಾಂ ಮತವು ಸಾಮುದಾಯಿಕವಾಗಿ ಕಾರ್ಯ ನಡೆಸಿದ ಸಂಘಟಿತ ಸಂಘವೊಂದರ ರಚನೆಗೆ ಕಾರಣವಾಗಿದ್ದರೂ ತಮ್ಮ ತಮ್ಮ ರಕ್ತಸಂಬಂಧಗಳು ಪ್ರಾದೇಶಿಕ, ಭಾಷಿಕ, ಯಹೂದಿಯೇತರ ಹಾಗೂ ಇತರ ಇಸ್ಲಾಮೇತರ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದ್ದ ವಿಭಿನ್ನ ಬಗೆಯ ಜನರ ಮಧ್ಯೆ ವಿಶಿಷ್ಟ ಗುರುತು ಉಳಿಸಿಕೊಂಡು ಬಂದ ಪಂಥವಾಗಿ ಗೋಚರಿಸಿತು. ಈ ರೀತಿಯಾದಂತಹ ಸೂಫಿಗಳಲ್ಲಿ ಶರಿಯಾ, ಸೂಫಿ ಅಥವಾ ಶ್ರಯಿನ್ ಸೂಫಿ ಎಂಬ ತನ್ನದೇ ಆದ ಇಸ್ಲಾಂ ರೂಪಾಂತರವನ್ನು ಹೊಂದಿತ್ತು.

ಏಷ್ಯಾದಲ್ಲಿ ಈ ರೀತಿಯಾದಂತಹ ಮುಸ್ಲಿಂ ಪ್ರಭುತ್ವ ಸ್ಥಾಪನೆಯ ಫಲವಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕತೆಯ ಜನಜೀವನದ ಪ್ರಭಾವ ಬೀರಿತು. ಈ ಹಿನ್ನೆಲೆಯಲ್ಲಿ ಪ್ರಭುತ್ವಕೇಂದ್ರಿತ ಮುಸ್ಲಿಂ ಸಮುದಾಯಗಳು, ವ್ಯಾಪಾರ ಹಿನ್ನೆಲೆಯ ಸಮುದಾಯಗಳು, ವಿವಿಧ ಧಾರ್ಮಿಕ ಪಂಥಗಳ ಸಮುದಾಯಗಳು ವಿಶ್ವದಾದ್ಯಂತ ಕಂಡುಬಂದವು. ಈ ರೀತಿಯಾಗಿ ಜಾಗತಿಕ ಮಟ್ಟದಲ್ಲಿ ಆದಂತಹ ಬದಲಾವಣೆ ಅಥವಾ ಸ್ಥಿತಿಗಳ ಪ್ರಭಾವ ಭಾರತದ ಮೇಲೆ ಬೀರಿತು.

ಭಾರತದಲ್ಲಿ ಮುಸ್ಲಿಂ ಪ್ರಭುತ್ವ ಸ್ಥಾಪನೆ ಮಾಡಿದ ಗುಲಾಮ, ಖಿಲ್ಜಿ, ಲೋದಿ, ಸೂರ್, ಸೈಯದ್ ಸಂತತಿಗಳ ಮೂಲಗಳು ಜಾಗತಿಕ ಮಟ್ಟದಲ್ಲಿ ರೂಪುಗೊಂಡಂಥವುಗಳು. ಅರಬ್ಬರು ದಕ್ಷಿಣ ಏಷ್ಯಾದ ರಾಜ್ಯಗಳ ಮೇಲೆ ದಾಳಿ ಮಾಡಿದ ನಂತರ ಕೆಲವು ಮುಸ್ಲಿಂ ದಂಡನಾಯಕರು ಅಥವಾ ರಾಜ್ಯಪಾಲರು ಸ್ವತಂತ್ರರಾದರು. ಕಾಬೂಲಿನ್ ರಾಜ್ಯಪಾಲನಾದ ಖಾಲಿದ್-ಬಿನ್-ಅಬ್ದುಲ್ಲಾ ತನ್ನ ಮಕ್ಕಳು ಹಾಗೂ ಅರಬ್ ಸಮುದಾಯದೊಂದಿಗೆ ಸುಲೇಮಾನ ಬೆಟ್ಟದ ಮೇಲೆ ಬಂದು ನೆಲೆಸಿದನು. ಇದು ಮುಲ್ತಾನ್ ಹಾಗೂ ಪೇಶಾವರ ಮಧ್ಯದಲ್ಲಿದೆ. ಇಲ್ಲಿ ಖಾಲಿದ್‌ನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಬಬ್ಬ ವ್ಯಕ್ತಿಯೊಂದಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದನು. ಇವರಿಗೆ ಲೋದಿ ಮತ್ತು ಸೂರ ಎಂಬ ಇಬ್ಬರು ಮಕ್ಕಳು ಹುಟ್ಟಿದರು. ಈ ವ್ಯಕ್ತಿಗಳು ಮುಂದೆ ಶ್ರೇಷ್ಠತೆಯನ್ನು ಪಡೆದರು. ಈ ರೀತಿ ಅಫಘನ್ ಹಾಗೂ ಅರಬ್ ಮಿಶ್ರಿತವಾದಂತಹ ಒಂದು ಹೊಸ ಸಂತತಿ ಉದಯಿಸಿತು. ಈ ಸಂತತಿಯೇ ಭಾರತದಲ್ಲಿ ಕಂಡುಬಂದಿದ್ದು, ಅವು ಸಮುದಾಯಗಳ ರೂಪಾಂತರ ಪಡೆಯಿತು.[೧೯] ಇನ್ನು ಅಫಘನರ ಮೂಲದ ಬಗ್ಗೆ ತಿಳಿಯುವುದಾದರೆ, ಇವರು 'ಖಿಬಿತಿ' ಫಿರೇನಿಯನವರು.[೨೦] ಮಹಮ್ಮದ್ ಪೈಗಂಬರ್ ಫಿರೇನಿ ಮೇಲೆ ವಿಜಯ ಸಾಧಿಸಿದ ನಂತರ ಹಲವು 'ಖಿಬತಿ' ಪಂಥದ ಜನರು ಇಸ್ಲಾಂ ಧರ್ಮ ಸ್ವೀಕರಿಸಿದರು. ಇಸ್ಲಾಂ ಸ್ವೀಕರಿಸಿದ ಈ ಪಂಥವು ಭಾರತಕ್ಕೆ ವಲಸೆ ಬಂದು ಸುಲೇಮಾನ್ ಬೆಟ್ಟದ ಮೇಲೆ ತಮ್ಮ ನೆಲೆಯನ್ನು ಸ್ಥಾಪಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ವಿಭಿನ್ನ ಸಮುದಾಯಗಳ ಹುಟ್ಟಿಗೆ ಕಾರಣವಾಯಿತು. ಹೀಗೆ ಅಫಘನ್ ಎಂಬ ಹೆಸರಿನಲ್ಲಿ ಈ ಬುಡಕಟ್ಟು ಜನರು ಗುರುತಿಸಿಕೊಂಡರು.

ಫೆರಿಸ್ತಾ ತನ್ನ ಕೃತಿಯಲ್ಲಿ ಉಲ್ಲೇಖಿಸುವಂತೆ 'ಖಿಬತಿ ಗುಂಪಿನಿಂದ ಬೇರೆ ಗುಂಪಿನ ಜನಾಂಗಗಳು ಹಲವಾರು ಹುಟ್ಟಿಕೊಂಡರೂ ಅವು ಅಫಘನ ಹೆಸರಿನಿಂದ ಪ್ರಖ್ಯಾತಿ ಪಡೆದವು. 'ಇಬ್ರಾಹಿಮ'ನು ಕಾಬಾ(ಖಾನಾ ಕಾಬಾ) ಮೇಲೆ ದಾಳಿ ಮಾಡಿದಾಗ ಕಾಬಾದ ಶತ್ರುಗಳು ಸಮೀಪ ಹಾಗೂ ದೂರದಿಂದ ಬಂದು ಇಬ್ರಾಹಿಮನ ಸುತ್ತಮುತ್ತ ಸೇರಿದ್ದರು. ಅವರು ಕೂಡ ಇವರೊಂದಿಗೆ ಸೇರಿಕೊಂಡು ಕಾಬಾದ ಮೇಲೆ ದಾಳಿ ಮಾಡಿದರು. ಆ ಜನರಲ್ಲಿ ಅಫಘನರು ಕೂಡ ಸೇರಿದ್ದರು. ಅವರು ಸಕಾಲದಲ್ಲಿ ಇಬ್ರಾಹಿಮನೊಂದಿಗೆ ಸಹಕರಿಸಿದರು. ಈ ಜನರು ಮೆಕ್ಕಾ

ತಲುಪಿದಾಗ ಅಲ್ಲಾಹನು ವಿಶಿಷ್ಟ ಕ್ಷಾಮವು ಆವರಿಸುವಂತೆ ಮಾಡಿದನು. ಅವರೆಲ್ಲರೂ ಮರಣ ಹೊಂದಿದರು. ಸಂಕ್ಷಿಪ್ತವಾಗಿ ಹೇಳುವುದಾದರೆ ಮುಸಲ್ಮಾನ ಅಫಘನರು ಒಕ್ಕಲುತನ ಹಾಗೂ ಆರ್ಥಿಕ ಬೆಳವಣಿಗೆ ಕಡೆ ಗಮನ ಕೊಟ್ಟು ಕುದುರೆಗಳು, ಹಸುಗಳು, ಕುರಿಗಳು ಇತ್ಯಾದಿಗಳ ಒಡೆಯರಾಗಿ ಬಿಟ್ಟರು. ಆ ಅಫಘನರು ಈ ಮುಸಲ್ಮಾನರ ಜೊತೆ ಸೇರಿ 'ಮಹಮ್ಮದ-ಬಿನ್-ಖಾಸಿಮ್' ಜೊತೆಯಲ್ಲಿ ಹಿಂದೂಸ್ತಾನಕ್ಕೆ ಬಂದಿದ್ದರು ಮತ್ತು ಸ್ನೇಹಪರವಾದ ಸಂಸ್ಕಾರ ಸಂಪ್ರದಾಯಗಳನ್ನು ಹುಟ್ಟು ಹಾಕಿದರು. ಈ ಜನರ ಸಂತತಿ ವೃದ್ಧಿಸಿ ಹರಡತೊಡಗಿದಾಗ, ಇವರು ಕೋಹಿಸ್ಥಾನದ ಪ್ರಾಂತ್ಯದಿಂದ ಹೊರಟು ಹಿಂದೂಸ್ತಾನದ ಬೇರೆ ಬೇರೆ ಪಟ್ಟಣಗಳಲ್ಲಿ, ಕಮ್ರಾಜ್, ಪೇಶಾವರ ಮತ್ತು ಶಣ್ಣುರಾನ ಇತ್ಯಾದಿಗಳನ್ನು ವಶಪಡಿಸಿಕೊಂಡರು."[೨೧] ನಂತರದಲ್ಲಿ ಕೋಹಿಸ್ಥಾನವೇ ಅಫಘನಿಸ್ಥಾನ ಎಂದು ಕರೆಯಲಾಯಿತು. ಹಿಂದೂಸ್ತಾನಿ ಜನರು ಕೋಹಿಸ್ಥಾನದ ಮುಸಲ್ಮಾನರಿಗೆ ಪಠಾಣ ಎಂದು ಕರೆಯುತ್ತಿದ್ದರು ಎಂದು ಫೆರಿಸ್ತಾ ತಿಳಿಸಿರುವನು.[೨೨] ಹೀಗೆ ಮುಸ್ಲಿಂ ಸಮುದಾಯಗಳು ಸ್ಥಾಪಿತವಾಗಿದ್ದು, ಅವುಗಳಲ್ಲಿ ಕೆಲವು ಗುಂಪುಗಳು ಪ್ರಭುತ್ವದ ಆಳ್ವಿಕೆಯಲ್ಲಿ ಕಂಡುಬಂದರೆ, ಇನ್ನು ಕೆಲವು ಜನಕೇಂದ್ರಿತ ವರ್ಗ ಅಂದರೆ ವ್ಯಾಪಾರ, ಕೃಷಿ, ಕರಕುಶಲ ಸಮೂಹದಲ್ಲಿ ಗುರುತಿಸಿಕೊಂಡವು.

ಭಾರತದಲ್ಲಿ ಮುಸ್ಲಿಂ ಪ್ರಭುತ್ವ

ಕ್ರಿ.ಶ. ೯ನೇ ಶತಮಾನದಲ್ಲಿ ಏಷ್ಯಾದಲ್ಲಿ ಖಲೀಫರ ಆಳ್ವಿಕೆಯು ದುರ್ಬಲಗೊಂಡಿತು. ಬಾಗ್ದಾದಿನ ಖಲೀಫರು ಅವನತಿ ಹೊಂದಿದ ಮೇಲೆ ಸಿಂಧ್ ಪ್ರಾಂತ್ಯದ ಮುಸಲ್ಮಾನ ಪ್ರಾಂತ್ಯಾಧಿಪತಿಗಳು ಸ್ವತಂತ್ರರಾದರು. ಕ್ರಿ.ಶ. ೮೭೧ರಲ್ಲಿ ಖಲೀಫನು ಆ ಪ್ರಾಂತ್ಯವನ್ನು ಸಫಾರಿದ್ ಪಂಗಡದ ಮುಖ್ಯ ನಾಯಕ 'ಯಾಖುಬ್-ಇಬಿನ್ ಲಾಯಿಸ್' ಎಂಬಾತನಿಗೆ ಒಪ್ಪಿಸಿದನು.[೨೩] ಘಜನಿ ಮಹಮ್ಮದ್‌ನಿಗೆ ಭಾರತದಲ್ಲಿ ಧರ್ಮಪ್ರಸಾರ ಮಾಡುವುದಾಗಲಿ ಹಾಗೂ ಸಾಮ್ರಾಜ್ಯ ಸ್ಥಾಪಿಸುವ ಉದ್ದೇಶವಾಗಲಿ ಇರಲಿಲ್ಲ. ಆದರೆ ಇವನು ರಾಜ್ಯವನ್ನು ಸ್ಥಾಪಿಸಲಿಲ್ಲ. ಮಹಮ್ಮದ್ ಘೋರಿಯ ಗುಲಾಮನಾಗಿದ್ದ ಕುತ್ಬುದ್ದೀನ್ ಐಬಕನು ೧೨೦೬ರಲ್ಲಿ ಭಾರತದಲ್ಲಿ ಪ್ರಭುತ್ವ ಸ್ಥಾಪಿಸಿದನು. ಹೀಗೆ ಭಾರತಕ್ಕೆ ಪ್ರವೇಶಿಸಿದ ಮುಸ್ಲಿಂ ಪ್ರಭುತ್ವವು ಕಾಲಾಂತರದಲ್ಲಿ ಭಾರತದಾದ್ಯಂತ ವಿಸ್ತರಣೆಗೊಂಡಿತು. ಮುಸ್ಲಿಂ ಪ್ರಭುತ್ವ ಸ್ಥಾಪನೆ ಎನ್ನುವುದು ಮುಖ್ಯವಾಗಿ ಇಸ್ಲಾಂ ಷರಿಯತ್(ಕಾನೂನು) ತಳಹದಿಯಲ್ಲಿ ಸ್ಥಾಪಿತವಾಗಿತ್ತು. ಹಾಗಾಗಿ ಮುಸ್ಲಿಂ ಉಲೇಮಾ ಸಮುದಾಯಗಳ ಪಾತ್ರ ಭಾರತದ ಮುಸ್ಲಿಂ ಪ್ರಭುತ್ವದ ಮೇಲೆ ಪರಿಣಾಮ ಬೀರಿತು. ಖಲೀಫರ ಅಧೀನದಲ್ಲಿ ಸಾಮ್ರಾಜ್ಯ ವಿಸ್ತರಣೆ ಮಾಡಿದ ಗುಲಾಮ ಸಂತತಿ ಹಾಗೂ ತದನಂತರ ಆಳ್ವಿಕೆ ನಡೆಸಿದ ಸುಲ್ತಾನರು ಉಲೇಮಾಗಳ ಸಲಹೆಗಳ ಮುಖಾಂತರ ಆಳ್ವಿಕೆ ನಡೆಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಮುಸ್ಲಿಂ ಪ್ರಭುತ್ವದ ಧಾರ್ಮಿಕ ಮಿಷನರಿಗಳು ಭಾರತದಲ್ಲಿಯೂ ತಮ್ಮ ಸ್ಥಾನವನ್ನು ಪಡೆದುಕೊಂಡವು.

ಅಲ್ಲಾವುದ್ದೀನ್ ಖಿಲ್ಜಿಯು ತನ್ನ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಉತ್ತರ ಭಾರತದಿಂದ ದಕ್ಷಿಣ ಭಾರತದ ಕಡೆಗೆ ತನ್ನ ಪ್ರಭುತ್ವ ವಿಸ್ತರಣೆಯನ್ನು ಮಾಡಿದನು. ದಕ್ಷಿಣ ಭಾರತದಲ್ಲಿನ ದುರ್ಬಲ

ರಾಜಕೀಯ ವ್ಯವಸ್ಥೆಯ ಲಾಭವನ್ನು ಪಡೆದು, ಆಕ್ರಮಣಗಳನ್ನು ನಡೆಸಿದನು. ವಾರಂಗಲ್, ದೇವಗಿರಿ ಹಾಗೂ ದ್ವಾರಸಮುದ್ರದ ಮೇಲೆ ದಾಳಿ ಮಾಡಿದನು. ಹೀಗೆ ಉತ್ತರದಿಂದ ದಕ್ಷಿಣದ ಕಡೆ ಮುಸ್ಲಿಂ ಸಮುದಾಯಗಳು ವಿಸ್ತರಣೆ ಆದವು. ಕ್ರಿ.ಶ. ೧೨೯೬ರ ಮಲ್ಲಿಕಾಫರ್‌ನ ದೇವಗಿರಿಯ ದಾಳಿಯಿಂದಾಗಿ ದಕ್ಷಿಣ ಭಾರತದಲ್ಲಿ ರಾಜ್ಯ ವಿಸ್ತರಿಸಲು ಸಾಧ್ಯವಾಯಿತು. ಅಲ್ಲಾವುದ್ದೀನ್ ಖಿಲ್ಜಿಯ ಆಡಳಿತ ಕಾಲದಲ್ಲಿ ಮುಸ್ಲಿಮರು ದಾಳಿ ನಡೆಸಲು ಬಂದವರು ಕಡೆಗೆ ಇಲ್ಲೇ ನೆಲೆಸಿದರು.[೨೪] ಮಲ್ಲಿಕ್‌ಕಾಫರ್‌ನ ದಾಳಿ ನಂತರ ದಕ್ಷಿಣ ಭಾರತದಲ್ಲಿ ದಖ್ಖನಿಗಳು ನೆಲೆ ನಿಂತರು. ಮಲ್ಲಿಕ್‌ಕಾಫರ್‌ನ ದಾಳಿಯಿಂದಾಗಿ ಸೂಫಿ ಸಂತರು ದಕ್ಷಿಣಕ್ಕೆ ಪ್ರವೇಶ ಪಡೆಯುವಂತಾಯಿತು. ಕ್ರಿ.ಶ. ೧೩೦೦ರಲ್ಲಿ ದೆಹಲಿಯ ಖ್ವಾಜಾ ನಿಜಾಮುದ್ದೀನ್ ಔಲಿಯಾ ಅವರ ಆದೇಶದಂತೆ ೭೦೦ ಜನ ಸೂಫಿಗಳು ದಕ್ಷಿಣಕ್ಕೆ ಬಂದು ಬೇರೆ ಬೇರೆ ಸ್ಥಳಗಳಲ್ಲಿ ನೆಲೆಸಿದರು.[೨೫] ಅಲ್ಲಾವುದ್ದೀನ್‌ನ ಮರಣದ ನಂತರ ಅವನ ಮಗ ಕುತ್ಬುದ್ದೀನನು ಸುಲ್ತಾನನಾದನು. ಕುತ್ಬುದ್ದೀನ್ ಕ್ರಿ.ಶ. ೧೩೧೭ರಲ್ಲಿ ದೇವಗಿರಿಯನ್ನು ಮರಳಿ ವಶಪಡಿಸಿಕೊಂಡಿದ್ದನು. ತನ್ನ ವಿಜಯದ ನೆನಪಿಗಾಗಿ ದೇವಗಿರಿಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದನು. ನಂತರದಲ್ಲಿ ಆಳ್ವಿಕೆಗೆ ಬಂದ ತುಘಲಕ್ ವಂಶಸ್ಥರು ದಕ್ಷಿಣ ಭಾರತವನ್ನು ಗೆಲ್ಲಲು ನಿರ್ಧರಿಸಿದರು. ಘಿಯಾಸುದ್ದೀನ್ ತುಘಲಕ್ ಇಡೀ ದಕ್ಷಿಣ ಭಾರತವನ್ನು ಆಕ್ರಮಿಸಬೇಕೆಂದು ನಿರ್ಧರಿಸಿದನು. ಈತನ ಮಗ ಉಲುಗ್ ಖಾನ್(ಮಹಮ್ಮದ್ ಬಿನ್ ತೊಘಲಕ್) ವಾರಂಗಲ್ಲಿನ ಪ್ರತಾಪರುದ್ರನನ್ನು ಸೋಲಿಸಿದನು. ಪಾಂಡ್ಯ ರಾಜ್ಯವು ಸೋತು ದೆಹಲಿಯ ವಶವಾಯಿತು. ದೆಹಲಿಯ ಆಧಿಪತ್ಯ ತನ್ನ ಶಿಖರವನ್ನು ಏರಿತು. ಮಹಮ್ಮದ್ ಬಿನ್ ತೊಘಲಕನು ಕ್ರಿ.ಶ. ೧೩೨೬–೨೭ರಲ್ಲಿ ದೆಹಲಿಯಿಂದ ದೌಲತಾಬಾದ್‌ಗೆ(ದೇವಗಿರಿ) ರಾಜಧಾನಿಯನ್ನು ಬದಲಾವಣೆ ಮಾಡಿದ್ದರಿಂದಾಗಿ ದಕ್ಷಿಣ ಭಾರತದಲ್ಲಿ ಇನ್ನೂ ಹಲವು ಮುಸ್ಲಿಂ ಸಮುದಾಯಗಳು ನೆಲೆಸಲು ಕಾರಣವಾಯಿತು.

ಸಮಕಾಲೀನ ಬರಹಗಾರರಾದ ಬರನೀ, ಇಬನ್ ಬತೂತ ಹೀಗೆ ಮುಸ್ಲಿಂ ದಾಖಲೆಗಳು ನಮಗೆ ಪ್ರಮುಖವಾಗಿ ಕಂಡುಬರುತ್ತದೆ. ಬರನಿಯು ಉಲ್ಲೇಖಿಸಿದಂತೆ 'ದೇವಗಿರಿ ಪ್ರದೇಶವು ಭಾರತದ ಮಧ್ಯಭಾಗದಲ್ಲಿದ್ದಿತು. ದೆಹಲಿ, ಗುಜರಾತ್, ಲಕ್ನೋ, ಸಾತಗಾವ್, ಸೋನಾರ್‌ಗಾಂವ್, ತೆಲಂಗ, ಮಾಬಾರ್, ದೋರಸಮುದ್ರ ಮತ್ತು ಕಂಪ್ಲಿ– ಇವು ಇಲ್ಲಿಂದ ಸಮ ದೂರದಲ್ಲಿದ್ದು, ದೂರದ ಅಂತರ ಹೆಚ್ಚಾಗಿರಲಿಲ್ಲ. ದೇವಗಿರಿಯಲ್ಲಿ ತನ್ನ ಅಧಿಕಾರಿಗಳಿಗೆ ಹಾಗೂ ಪ್ರಜೆಗಳಿಗೆ ಅನುಕೂಲ ವಾಸಸ್ಥಳವಾಗಲೆಂದು ಸುಲ್ತಾನನು ಭವ್ಯ ಭವನಗಳನ್ನು ನಿರ್ಮಿಸಿದನು' ಎಂದು ವಿವರಿಸಿದ್ದಾನೆ.[೨೬] ಮುಸ್ಲಿಂ ಆಡಳಿತದಲ್ಲಿ ಕಂಡುಬರುತ್ತಿದ್ದ ಪ್ರತಿ ವರ್ಗದ ಜನರಿಗೆ ನೆಲೆಸಲು ಪ್ರತ್ಯೇಕ ವಸತಿ ವ್ಯವಸ್ಥೆಯನ್ನು ಮಾಡಿದ್ದನು. ಸೈನಿಕರಿಗೆ, ವಜೀರರಿಗೆ, ಖಾಜಿಗಳಿಗೆ, ಉನ್ನತ ಅಧಿಕಾರಿಗಳಿಗೆ, ಸೂಫಿ ಸಂತರಿಗೆ ಹಾಗೂ ದರ್ವೇಶಿಗಳಿಗೆ ಪ್ರತ್ಯೇಕವಾದ ವಸತಿ ನೆಲೆಗಳನ್ನು ನಿರ್ಮಿಸಿದನು. ಅಲ್ಲದೆ ಇವರಿಗೆ ಮಸೀದಿಗಳ ನಿರ್ಮಾಣ, ಮಾರುಕಟ್ಟೆ ವ್ಯವಸ್ಥೆ, ಸಾರ್ವಜನಿಕ

ಸ್ಥಳಗಳನ್ನು ಸಹ ಸ್ಥಾಪಿಸಿದನು. ಹೀಗೆ ಮೇಲ್ವರ್ಗಕ್ಕೆ ಮಾತ್ರ ಪ್ರಾಶಸ್ತ್ಯ ನೀಡದೆ ಸಾಮಾನ್ಯ ವರ್ಗಗಳಿಗೂ ಅನುಕೂಲ ಮಾಡಿಕೊಟ್ಟಿದ್ದನು. ವರ್ತಕರು ಮತ್ತು ಕುಶಲಕರ್ಮಿಗಳು, ಅಕ್ಕಸಾಲಿಗರು, ಚಮ್ಮಾರ ಹೀಗೆ ವಿವಿಧ ವೃತ್ತಿ ಆಧಾರಿತ ಜನಸಮುದಾಯಗಳಿಗೂ ಬೇಕಾದ ಸೌಲಭ್ಯಗಳನ್ನು ನೀಡಿದ್ದನು.[೨೭] ಹೀಗೆ ಈ ಮೇಲಿನ ವಿವರಣೆಯಿಂದ ತೊಘಲಕ್‌ನ ಕಾಲದಲ್ಲಿ ರಾಜಧಾನಿ ಬದಲಾವಣೆಯಿಂದಾಗಿ ದಕ್ಷಿಣ ಭಾರತದಲ್ಲಿ ಪ್ರಭುತ್ವಕೇಂದ್ರಿತ ಹಾಗೂ ಜನಸಾಮಾನ್ಯ ಸಮುದಾಯಗಳು ಇಲ್ಲಿ ವಲಸೆ ಬಂದಿದ್ದವೆಂದು ಗುರುತಿಸಬಹುದು. ಅಲ್ಲದೇ ಪ್ರಭುತ್ವಕೇಂದ್ರಿತವಾದಂಥ ವಲಸಿಗರಲ್ಲಿ ಧಾರ್ಮಿಕ ಮಿಷನರಿಗಳ ಪ್ರಭಾವವು ಉತ್ತರದಿಂದ ದಕ್ಷಿಣಕ್ಕೆ ಕಂಡುಬಂದಿತು. ಕ್ರಿ.ಶ. ೧೩೨೧–೧೪೨೨ ಕಾಲಾವಧಿಯಲ್ಲಿ ಇದ್ದಂತಹ ಪ್ರಮುಖ ಚಿಸ್ತಿ ಸಂತನಾದ ಮೀರ್ ಮಹಮ್ಮದ್ ಹುಸೇನಿ ಎಂಬ ಬಂದೇ ನವಾಜ್ ಹೆಸರಿನಲ್ಲಿ ಪ್ರಖ್ಯಾತಿ ಪಡೆದ ಇವರು ತೊಘಲಕ್‌ನ ಕಾಲಾವಧಿಯಲ್ಲಿ ಇವರ ಕುಟುಂಬದವರು ವಲಸೆ ಬಂದವರು. ಬಂದೇ ನವಾಜ್‌ನ ತಂದೆಯಾದ ಯೂಸುಫ್ ಹುಸೇನಿಯು ಹೆಸರಾಂತ ಸಂತನಾದ ನಿಜಾಮುದ್ದೀನ್ ಔಲಿಯಾ ಅವರ ಅನುಯಾಯಿಯಾಗಿದ್ದನು. ಮಹಮ್ಮದ್ ಬಿನ್ ತೊಘಲಕ್‌ನು ದೆಹಲಿಯಿಂದ ದೌಲತಾಬಾದ್‌ಗೆ ರಾಜಧಾನಿಯನ್ನು ಬದಲಾಯಿಸಿದ ಸಂದರ್ಭದಲ್ಲಿ ಯೂಸುಫ್ ಹುಸೇನ್ ತಮ್ಮ ಕುಟುಂಬದೊಂದಿಗೆ ಇಲ್ಲಿ ಬಂದು ನೆಲೆಸಿದರು. ಆಗ ಬಂದೇ ನವಾಜ್ ಹುಡುಗನಾಗಿದ್ದನು.[೨೮] ಹೀಗೆ ತೊಘಲಕ್‌ನ ಆಳ್ವಿಕೆಯ ಸಂದರ್ಭದಲ್ಲಿ ಅಸಂಖ್ಯಾತ ಜನಸಮುದಾಯಗಳು ಇಲ್ಲಿಗೆ ಬಂದು ನೆಲೆಸಿದವು. ಬಹಮನಿ ಸಾಮ್ರಾಜ್ಯ ಸ್ಥಾಪನೆಯ ಪೂರ್ವದಿಂದಲೂ ಕರ್ನಾಟಕದಲ್ಲಿ ಮುಸ್ಲಿಂ ಸಮುದಾಯಗಳು ಇಲ್ಲಿ ತಮ್ಮ ನೆಲೆಗಳನ್ನು ಹೊಂದಿದವು. ಬಹಮನಿ ಸಾಮ್ರಾಜ್ಯ ಸ್ಥಾಪನೆಯ ನಂತರ ದಕ್ಷಿಣ ಭಾರತದಲ್ಲಿ ಅಧಿಕೃತವಾಗಿ ಶಾಶ್ವತವಾಗಿ ಇಲ್ಲಿ ಬಂದು ನೆಲೆಯೂರಿದರು. ಈ ರೀತಿಯಾಗಿ ಉತ್ತರದ ಸಂಸ್ಕೃತಿ ದಕ್ಷಿಣಕ್ಕೆ ಪ್ರವೇಶ ಪಡೆಯಿತು. ಬಹಮನಿ ಪ್ರಭುತ್ವದ ಜೊತೆಗೆ ರಾಜಕೀಯ ತತ್ವಗಳು ಮತ್ತು ಕಾರ್ಯಚಟುವಟಿಕೆಗಳು ಮತ್ತು ಯುದ್ಧದ ತಾಂತ್ರಿಕತೆ, ಪರ್ಶಿಯನ್ ಸಾಹಿತ್ಯ, ಪರ್ಶಿಯಾದ ಇಸ್ಲಾಂ ಪ್ರಭಾವ, ಶಿಕ್ಷಣ, ಕಲೆ ವಾಸ್ತುಶಿಲ್ಪ ಹೀಗೆ ಹೊಸ ಸಂಸ್ಕೃತಿಯು ದಕ್ಷಿಣದಲ್ಲಿ ಪ್ರವೇಶ ಪಡೆಯಿತು.[೨೯] ಹೀಗೆ ದಕ್ಷಿಣ ಭಾರತದಲ್ಲಿ ಪ್ರಭುತ್ವಕೇಂದ್ರಿತ ಹಿನ್ನೆಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಮುಸ್ಲಿಂ ಸಮುದಾಯಗಳು ಪ್ರವೇಶ ಪಡೆದವು. ಅವುಗಳಲ್ಲಿ ಷೇಕ್, ಅಫಘನ್, ಪಠಾನ್, ಸೂಫಿ ಪಂಥ, ಉಲೇಮಾಗಳು, ಖಾಜಿಗಳು ಹೀಗೆ ಮೇಲ್ವರ್ಗದ ಸಮುದಾಯಗಳು ಅಲ್ಲದೇ ಕರಕುಶಲಕರ್ಮಿಗಳು, ವ್ಯಾಪಾರಸ್ಥ ವರ್ಗಗಳು ಇಲ್ಲಿಗೆ ವಲಸೆ ಬಂದು ನೆಲೆಯೂರಿದರು. ಇವು ಕ್ರಿ.ಶ. ೧೨ನೇ ಶತಮಾನದಲ್ಲಿ ಉತ್ತರ ಭಾರತದಲ್ಲಿ ಉಂಟಾದ ರಾಜಕೀಯ ಬದಲಾವಣೆಗಳಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದ ಮುಸ್ಲಿಂ ಸಮುದಾಯಗಳಾಗಿವೆ. ಆದರೆ ದಕ್ಷಿಣ ಭಾರತದಲ್ಲಿ ಮುಸ್ಲಿಂ ಸಮುದಾಯಗಳ ಚಾರಿತ್ರಿಕತೆಯು ಕ್ರಿ.ಶ. ೬ನೇ ಶತಮಾನದಿಂದಲೇ ವ್ಯಾಪಾರದ ಹಿನ್ನೆಲೆಯಲ್ಲಿ ಕಂಡುಬರುತ್ತದೆ. ಅವುಗಳ ವಿವರಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ದಕ್ಷಿಣ ಭಾರತದಲ್ಲಿ ಮುಸ್ಲಿಂ ಸಮುದಾಯಗಳು

ಭಾರತವು ಪ್ರಾಚೀನದಿಂದಲೂ ಗ್ರೀಸ್, ಸಿರಿಯಾ, ಪರ್ಶಿಯಾ, ಈಜಿಪ್ಟ್ ಮುಂತಾದ ದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು. ವಿದೇಶಿ ವ್ಯಾಪಾರಿಗಳು ನೆಲೆಸಲು ಅನೇಕ ಬಡಾವಣೆಗಳಿದ್ದವು. ವಿವಿಧ ರಾಜಪ್ರಭುತ್ವಗಳ ಆಳ್ವಿಕೆಯಲ್ಲಿ ವಿದೇಶಿ ವ್ಯಾಪಾರದ ಉದ್ದೇಶಕ್ಕಾಗಿ ರಾಜತಾಂತ್ರಿಕ, ರಾಯಭಾರಿಗಳ ಸಂಬಂಧಗಳು ಬೆಳೆದು ವ್ಯಾಪಾರ-ವಾಣಿಜ್ಯ ಮತ್ತು ಸಾಂಸ್ಕೃತಿಕ ಸಂಬಂಧಗಳು ವೃದ್ಧಿಯಾದವು. ಪ್ರಾಚೀನ ಕಾಲಾವಧಿಯಲ್ಲಿ ದಕ್ಷಿಣ ಭಾರತದ ಕರಾವಳಿ ವ್ಯಾಪಾರದ ಮೇಲೆ ಆರಂಭಿಕ ಹಂತದಲ್ಲಿ ಹಿಡಿತವನ್ನು ಸ್ಥಾಪಿಸಿದವರೆಂದರೆ ರೋಮನ್ನರು. ಕ್ರಿ.ಶ. ನಾಲ್ಕನೆಯ ಶತಮಾನದ ಸುಮಾರಿಗೆ ರೋಮನ್ ಸಾಮ್ರಾಜ್ಯ ಕುಸಿದ ಕಾರಣ ಮಧ್ಯ ಪ್ರಾಚ್ಯದಲ್ಲಿ ಪರ್ಷಿಯಾ ಸಾಮ್ರಾಜ್ಯ ತಲೆ ಎತ್ತಿತ್ತು. ಇದರ ಪರಿಣಾಮವಾಗಿ ಪರ್ಶಿಯನ್ನರು ಮತ್ತು ಅರೇಬಿಯನ್ನರು ಅಂತಾರಾಷ್ಟ್ರೀಯ ವ್ಯಾಪಾರ-ವಾಣಿಜ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತಾಯಿತು. ಬಾಗ್ದಾದ್‌ನಲ್ಲಿ ಸ್ಥಾಪಿತವಾದ ಅರಬ್ ಮುಸ್ಲಿಮರ ಖಲಿಫತ್ ಪ್ರಭುತ್ವವು ದಕ್ಷಿಣ ಭಾರತದ ಅರಸರೊಂದಿಗೆ ಉತ್ತಮ ವಾಣಿಜ್ಯ ಸಂಬಂಧವನ್ನು ಹೊಂದಿತ್ತು. ಅರಬ್ಬರು ರೋಮ್ ಮತ್ತು ಚೀನಾದ ವ್ಯಾಪಾರದ ಏಕಸ್ವಾಮ್ಯವನ್ನು ಕಿತ್ತುಕೊಂಡು ಇಡೀ ಭಾರತದ ವ್ಯಾಪಾರ-ವಾಣಿಜ್ಯ ಚಟುವಟಿಕೆಗಳ ಮೇಲೆ ತಮ್ಮ ಹಿಡಿತವನ್ನು ಸಾಧಿಸಿದ್ದರು. ಈ ಕುರಿತು ಸಮಕಾಲೀನ ಸಂದರ್ಭ ಹಾಗೂ ನಂತರದಲ್ಲಿ ಭಾರತಕ್ಕೆ ಭೇಟಿ ನೀಡಿದ ಪ್ರವಾಸಿಗರ ಕಥನಗಳ ಉಲ್ಲೇಖಗಳು ಇದರ ಬಗ್ಗೆ ಮಾಹಿತಿ ನೀಡುತ್ತವೆ. ಟಾಲೆಮಿ, ಗ್ರೀಸ್, ಸೆಲ್ಬನ್‌ಲೆಮಿ, ಅಲುಸ್ಪೀನ್ ಮುಂತಾದ ವಿದೇಶಿ ಯಾತ್ರಿಕರ ಬರಹಗಳು ಮಧ್ಯ ಪ್ರಾಚ್ಯ ಮತ್ತು ದಕ್ಷಿಣ ಭಾರತದ ನಡುವೆ ಹೊಂದಿದ್ದ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧ ಕುರಿತ ವಿವರಗಳನ್ನು ಒದಗಿಸುತ್ತವೆ. ಅಲ್ಲದೆ ಅರೇಬಿಯಾದ ವರ್ತಕ ತಬಾರಿ, ಚೀನಾದ ಹ್ಯೂಯೆನ್‌ತ್ಸಾಂಗ್, ಅಲೆಗ್ಸಾಂಡ್ರಿಯಾದ ಕಾಸಂಮಸ್, ಮಾರ್ಕೋ ಪೋಲೋ, ರಾಷ್ಟ್ರಕೂಟರ ಕಾಲದಲ್ಲಿ ಭೇಟಿ ನೀಡಿದ್ದ ಅಲ್‌ಮಸೂದಿ, ಸುಲೇಮಾನ್, ಇಬನ್ ಖಲ್ದೇಜ್, ಹೊಯ್ಸಳರ ಕಾಲದ ವ್ಯಾಪಾರದ ಬಗೆಗೆ ವಿವರ ನೀಡಿದ ಇಬ್ನ ಬತೂತ, ಅಲ್‌ಈದ್ರೇಸ್, ಅಲ್ಬೆರೂನಿ, ಫೆರಿಸ್ತಾ, ಈಸಾಮಿ, ನಿಜಾಮಿ ಮುಂತಾದವರ ಬರಹಗಳು ಅರಬ್ಬರು ದಕ್ಷಿಣ ಭಾರತದಲ್ಲಿ ವ್ಯಾಪಾರವನ್ನು ನಡೆಸುವುದರ ಬಗ್ಗೆ ಮಾಹಿತಿ ನೀಡುತ್ತವೆ.

ದಕ್ಷಿಣ ಭಾರತದಲ್ಲಿ ವ್ಯಾಪಾರದ ಉದ್ದೇಶಕ್ಕಾಗಿ ಅರಬ್ ಮತ್ತು ಪರ್ಶಿಯಾದಿಂದ ವರ್ತಕರು ಇಸ್ಲಾಂ ಧರ್ಮದ ಸ್ಥಾಪನೆಗಿಂತ ಪೂರ್ವದಲ್ಲೇ ಇಲ್ಲಿ ಬಂದು ನೆಲೆಸಿದ್ದರು. ಈ ಬಗ್ಗೆ ವಿದ್ವಾಂಸನಾದ ಪ್ಲೀನಿ ಉಲ್ಲೇಖಿಸುವಂತೆ ಅರಬ್ಬರು ಭಾರತದೊಂದಿಗೆ ವ್ಯಾಪಾರಕ್ಕಾಗಿ ಕ್ರಿ.ಶ. ೧ನೇ ಶತಮಾನದಿಂದಲೇ ಸಂಪರ್ಕವನ್ನು ಹೊಂದಿದ್ದರು.[೩೦] ಕ್ರಿ.ಶ. ೧ನೇ ಶತಮಾನದಲ್ಲಿನ ಅರಬ್ಬರ ವ್ಯಾಪಾರದ ದಾಖಲೆಯನ್ನು ಪರಿಶೀಲಿಸಿದರೆ ಅರಬ್ಬರ ವ್ಯಾಪಾರ ಸಂಬಂಧ ಕರಾವಳಿಯ ಜಿಲ್ಲೆಗಳಲ್ಲಿತ್ತು. ಬಾರಕೂರು, ಮಂಗಳೂರು, ಉಳ್ಳಾಲ, ಮಂಜೇಶ್ವರ ಮತ್ತು ಕಾಸರಗೋಡು ವ್ಯಾಪಾರ ಕೇಂದ್ರಗಳಾಗಿದ್ದು, ಈ ಪ್ರಾಂತ್ಯಗಳಲ್ಲಿ ಮುಸ್ಲಿಂ ಸಮುದಾಯ ಬೆಳವಣಿಗೆಯಾಯಿತೆಂದು ಗಣಪತಿರಾವ್ ಐಗಳ್ ತಿಳಿಸಿರುವನು.[೩೧] ಈ

ಸಮುದಾಯಗಳು ವ್ಯಾಪಾರದ ಆಕರ್ಷಣೆ, ರಾಜಪ್ರಭುತ್ವದ ಪ್ರೋತ್ಸಾಹ, ದೀನಾರ್ ಮಿಶನರಿಗಳ ಪ್ರಭಾವ, ಸೂಫಿ ಸಂತರ ಬೋಧನೆಗಳು ಸಹ ಪ್ರಭಾವ ಬೀರಿ ಹಲವಾರು ಮುಸ್ಲಿಂ ಸಮುದಾಯಗಳ ಬೆಳವಣಿಗೆಗೆ ಕಾರಣವಾಯಿತು. ಇವರು ಆರಂಭದಲ್ಲಿ ಮಲಬಾರ್‌ನ ಕರಾವಳಿ ಮತ್ತು ಸಿಲೋನ್ ಪ್ರದೇಶದಲ್ಲಿ ಬಂದು ನೆಲೆಸಿದ್ದರು ಎಂದು ತಿಳಿಸಿದ್ದಾನೆ. ಕೋಸ್‌ಮಸ್ ಪ್ರಕಾರ ಕ್ರಿ.ಶ. ೪ನೇ ಮತ್ತು ೫ನೇ ಶತಮಾನದಲ್ಲಿ ಪರ್ಶಿಯಾ ಮತ್ತು ಸಿಲೋನ್ ನಡುವೆ ಕುದುರೆ ವ್ಯಾಪಾರವು ಭಾರತದ ಪಶ್ಚಿಮ ಕರಾವಳಿ ಮೂಲಕ ನಡೆಯುತ್ತಿತ್ತು ಎಂದಿದ್ದಾನೆ. ಮಲಬಾರ್ ಕರಾವಳಿ ತೀರಪ್ರದೇಶದಲ್ಲಿ ವರ್ತಕರಾಗಿ ಬಂದಿದ್ದ ಇವರು ಇಸ್ಲಾಂ ಧರ್ಮ ಸ್ವೀಕರಿಸಿದ ನಂತರ ಇಲ್ಲೇ ನೆಲೆ ನಿಂತರು. ರೋಲೆಂಡ್ಸ್‌ನ ದಾಖಲೆಯಂತೆ ಅರಬ್ಬರು ಮಲಬಾರ್ ಕರಾವಳಿಯಲ್ಲಿ ಕ್ರಿ.ಶ. ೭ನೇ ಶತಮಾನದಲ್ಲಿ ನೆಲೆ ನಿಂತರು. ಸೌತ್ ಕೆನರ ಮ್ಯಾನ್ಯುವೆಲ್‌ನಲ್ಲಿ ತಿಳಿಸುವಂತೆ, 'ಕ್ರಿ.ಶ. ೭ನೇ ಶತಮಾನದಿಂದ ಮುಂದೆ ಫಾರ್ಸಿ ಮತ್ತು ಅರಬ್ಬೀ ವ್ಯಾಪಾರಿಗಳು ಭಾರತದ ಪಶ್ಚಿಮ ಕರಾವಳಿಯ ವಿವಿಧ ಬಂದರುಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಇಳಿದು ಸ್ಥಳೀಯ ಸ್ತ್ರೀಯರನ್ನು ಮದುವೆಯಾಗಿ ಇಲ್ಲೆ ನೆಲೇ ನಿಂತರು. ಕ್ರಿ.ಶ. ೯ನೇ ಹಾಗೂ ೧೦ನೇ ಶತಮಾನದ ಅರಬ್ ಬರಹಗಾರರಾದ ಇಡನಕುರ್ದ್‌ಬಾ ಮತ್ತು ಹೌಕಲ್‌ರ ಬರಹಗಳಲ್ಲಿ ಅರಬ್ ವ್ಯಾಪಾರ ಬೆಳೆದು ಬಂದ ವಿಚಾರವನ್ನು ತಿಳಿಯಬಹುದಾಗಿದೆ.

ಹೀಗೆ ಪ್ರಾಚೀನ ಕಾಲಾವಧಿಯಲ್ಲೇ ಮುಸ್ಲಿಂ ಸಮುದಾಯಗಳು ದಕ್ಷಿಣ ಭಾರತದಲ್ಲಿ ನೆಲೆಸಿದ್ದನ್ನು ಗುರುತಿಸಬಹುದು. ಅರಬ್ ವರ್ತಕರಿಗೆ ಮೌರ್ಯರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರ ಆಳ್ವಿಕೆಯ ಪ್ರಭುತ್ವಗಳು ಆಶ್ರಯವನ್ನು ನೀಡಿದವು ಎಂಬ ದಾಖಲೆಗಳು ಸಿಗುತ್ತವೆ. ಚೋಳರ ಕಾಲಾವಧಿಯಲ್ಲಿ ಅರಬ್ಬರು ವ್ಯಾಪಾರದಲ್ಲಿ ತಮ್ಮ ಏಕಸ್ವಾಮ್ಯವನ್ನು ಇಲ್ಲಿ ಸ್ಥಾಪಿಸಿದ್ದರು. ಅರಬ್ ವ್ಯಾಪಾರಸ್ಥರಿಗೆ ಚೇರ(ಕೇರಳ), ಪಾಂಡ್ಯ ಮತ್ತು ಸಿಂಹಳ(ಶ್ರೀಲಂಕಾ) ರಾಜ್ಯಗಳ ಬೆಂಬಲವಿತ್ತು. ಚೋಳರು ಪೌರಾತ್ಯ ರಾಷ್ಟ್ರಗಳೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿದ್ದರು. ಚೋಳರು ದಕ್ಷಿಣ ಭಾರತವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡ ನಂತರ ವಿಶೇಷವಾಗಿ ಪೌರಾತ್ಯ ರಾಷ್ಟ್ರಗಳೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿದ್ದರು. ಪಶ್ಚಿಮ ತೀರಪ್ರದೇಶದ ವ್ಯಾಪಾರದ ಏಕಸ್ವಾಮ್ಯ ಹೊಂದಿದ್ದ ಚೇರ, ಪಾಂಡ್ಯ ಮತ್ತು ಸಿಂಹಳ ಮೈತ್ರಿಕೂಟವನ್ನು ಮುರಿಯಲು ಚೋಳ ದೊರೆ ರಾಜರಾಜ ಚೋಳ ಮತ್ತು ಆತನ ಮಗ ರಾಜೇಂದ್ರ ಚೋಳ ದಾಳಿ ಮಾಡಿದರು. ಈ ವೇಳೆಗೆ ಅರಬ್ಬರು ಕೂಡ ಭಾರತದ ಪಶ್ಚಿಮ ಕರಾವಳಿಯಲ್ಲಿ ವ್ಯಾಪಾರ ಏಕಸ್ವಾಮ್ಯವನ್ನು ಸ್ಥಾಪಿಸಿದ್ದರು. ಅಲ್ಲದೆ ಕೇರಳ(ಚೇರ) ರಾಜರ ಬೆಂಬಲವೂ ಇತ್ತು. ಹಾಗಾಗಿ ಚೋಳರು ಮಲಬಾರನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿದ್ದರು. ಆದರೆ ಅರಬ್ಬರ ವ್ಯಾಪಾರವನ್ನು ನೇರವಾಗಿ ಪಡೆಯಲು ಅಸಮರ್ಥರಿದ್ದಾಗ್ಯೂ ಸಿಂಹಳದ ಮೇಲೆ ದಂಡಯಾತ್ರೆಯನ್ನು ನಡೆಸಿ, ಆಗ ಅಸ್ತಿತ್ವದಲ್ಲಿದ್ದ ರಾಜಧಾನಿ (ಅನುರಾಧಪುರ)ಯನ್ನು ನಾಶ ಮಾಡಿದರು.

ರಾಷ್ಟ್ರಕೂಟರು ಪೌರಾತ್ಯ ರಾಷ್ಟ್ರಗಳು ಮತ್ತು ಪೂರ್ವ ಕರಾವಳಿ ಪ್ರದೇಶಗಳ ಮೇಲೆ ನಿಯಂತ್ರಣವಿಟ್ಟುಕೊಂಡಿದ್ದ ಚೋಳರನ್ನು ದಮನ ಮಾಡಿದರು. ಇದಕ್ಕೆ ಪಾಂಡ್ಯರು, ಚೇರರು

ಮತ್ತು ಸಿಂಹಳದ ಅರಸರು ಬೆಂಬಲಿಸಿದ್ದರು. ಇವರ ಕಾಲದಲ್ಲಿಯೂ ಅರಬ್ಬರು ಆತ್ಮೀಯರಾಗಿದ್ದು ತಮ್ಮ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ಆರಂಭಿಕ ಹಂತದ ಅರಬ್ ವ್ಯಾಪಾರಿಗಳು ದಕ್ಷಿಣ ಭಾರತದ ಅರಸರ ಪ್ರೋತ್ಸಾಹ ಹಾಗೂ ರಾಜಾಶ್ರಯವನ್ನು ಪಡೆದಿದ್ದ ಬಗ್ಗೆ ದಾಖಲೆಗಳು ಕಂಡುಬರುತ್ತವೆ. ಕ್ರಿ.ಶ. ೯೨೬ರ ಥಾಣ ಜಿಲ್ಲೆಯಲ್ಲಿನ ಶಾಸನದ ಉಲ್ಲೇಖದಂತೆ ತಾಜಿಕ(ಅರಬ್ಬಿ)ನೊಬ್ಬ ರಾಷ್ಟ್ರಕೂಟರ ಪ್ರಾಂತ್ಯಾಧಿಕಾರಿಯಾಗಿ ನೇಮಕನಾಗಿದ್ದನು. ಈ ಶಾಸನವು ಸಂಸ್ಕೃತ ಭಾಷೆಯಲ್ಲಿದ್ದು, ೩ನೇ ಇಂದ್ರನ ಕಾಲಕ್ಕೆ ಸಂಬಂಧಿಸಿದ್ದಾಗಿದೆ.[೩೨] ತುಜಿಕಾಸ್ ಮತ್ತು ತುರುಸ್ಕಾಸ್ ಎಂಬ ವ್ಯಾಪಾರಿ ವರ್ಗವು ಭಾರತದ ವಿವಿಧ ಭಾಗಗಳಲ್ಲಿ ಕಂಡುಬರುತ್ತಿತ್ತು.[೩೩] ಕದಂಬರ ಆಳ್ವಿಕೆಯಲ್ಲಿ ಗವರ್ನರ್‌ನಾಗಿ ಮುಸ್ಲಿಂ ವರ್ತಕನನ್ನು ನೇಮಕ ಮಾಡಲಾಗಿತ್ತು. ಮಹಮ್ಮದ್ ಎಂಬ ವ್ಯಕ್ತಿಯು ಗವರ್ನರ್‌ನಾಗಿ ಸೇವೆ ಸಲ್ಲಿಸಿದ್ದನು.[೩೪] ಈತನು ಸಂಯಾನ ಎಂಬ ಪ್ರದೇಶದ ಮೇಲೆ ಹಿಡಿತವನ್ನು ಸಾಧಿಸಿದ್ದನು. ಅಲ್ಲದೆ ಧಾರ್ಮಿಕತೆಯಲ್ಲಿ ಸಾಮರಸ್ಯವಾದಂತಹ ಮನೋಭಾವನೆಯನ್ನು ಹೊಂದಿದ್ದನು. ಮಹಮ್ಮದ್ ಕಾನದುಕ ಎಂಬ ಗ್ರಾಮದ ದೇವಾಲಯಕ್ಕೆ ಆ ಪ್ರದೇಶವನ್ನು ದಾನ ಮಾಡಿ ದನು ಎಂಬ ಉಲ್ಲೇಖ ಶಾಸನದಲ್ಲಿ ಕಂಡುಬರುತ್ತದೆ.[೩೫] ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮುಸ್ಲಿಂ ವ್ಯಾಪಾರವಹಿವಾಟಿಗೆ ಯಾವುದೇ ಅಡ್ಡಿ ಆತಂಕಗಳು ಇರಲಿಲ್ಲವೆಂದು ಅಲ್‌ಇದ್ರೀನಿ ತಿಳಿಸಿದ್ದಾನೆ. ೧೦೫೪ರ ಶಾಸನವೊಂದು ಗೋವಾದ ಕದಂಬ ರಾಜ ಒಂದನೇ ಜಯಕೇಶಿಯ ಅಂಗರಕ್ಷಕ ದಳದ ಮುಖ್ಯಸ್ಥ ಅರಬ್ಬಿ ವರ್ತಕನೆಂಬ ದಾಖಲೆಗಳಿವೆ.

ಅರಬ್‌ನಲ್ಲಿ ಖಲೀಫ ಅಬ್ಬಾಸಾಯಿದ್ ವಿದೇಶಿ ವ್ಯಾಪಾರಕ್ಕೆ ಉತ್ತೇಜನ ನೀಡಿ, ಇಸ್ಲಾಂ ಧರ್ಮದ ಪ್ರಚಾರ ಕಾರ್ಯವನ್ನು ಕೈಗೊಂಡನು. ಅಬ್ಬಾಸಾಯಿದ್‌ನ ನೇತೃತ್ವದಲ್ಲಿ ಇದ್ದಂತಹ ವರ್ತಕರು ಪರ್ಶಿಯಾ ಮತ್ತು ಭಾರತದ ಕರಾವಳಿ ತೀರಪ್ರದೇಶಗಳಲ್ಲಿ ತಮ್ಮ ಮುಸ್ಲಿಂ ವಸಾಹತು ನೆಲೆಗಳನ್ನು ಸ್ಥಾಪಿಸಿದರು. ಅರಬ್‌ರಲ್ಲಿ ಖಲೀಫ ಅಬ್ಬಾಸಾಯಿದ್ ಪ್ರಾಂತ್ಯಗಳಲ್ಲಿ ನಾಲ್ಕು ಪ್ರಮುಖ ಸಾಂಪ್ರದಾಯಿಕ ಒಳಪಂಗಡಗಳನ್ನು ಹೊಂದಿದ್ದವು. ಅವು ಮಾಲಿಕತ್, ಹನಫಿ, ಶಫಿಯಾ ಮತ್ತು ಹನ್‌ಬಲಿ ಒಳಪಂಗಡಗಳಾಗಿ ಕಂಡುಬಂದಿದ್ದು ಇವು ಸುನ್ನಿ ಪಂಥಕ್ಕೆ ಸೇರಿದವುಗಳಾಗಿದ್ದವು. ಈ ನೆಲೆಯಲ್ಲಿ ಭಾರತದಲ್ಲಿ ನೆಲೆಸಿದ್ದ ಅರಬ್ ವರ್ತಕರು ಈ ಧಾರ್ಮಿಕ ಅನುಯಾಯಿಗಳ ಪ್ರಭಾವಕ್ಕೆ ಒಳಗಾಗಿ ಇಸ್ಲಾಂ ಧರ್ಮ ಸ್ವೀಕರಿಸಿದರು. ಇದರ ಮುಖಾಂತರ ಸ್ಥಳೀಯ ಜನಸಮೂಹವು ಈ ಧರ್ಮದ ಪ್ರಭಾವಕ್ಕೆ ಒಳಗಾಗಿ ಮತಾಂತರ ಹೊಂದಿದ್ದವು. ಪರಿಣಾಮವಾಗಿ ಅಧಿಕ ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯಗಳು ಈ ಭಾಗಗಳಲ್ಲಿ ಕಂಡುಬಂದವು.

ಹೀಗೆ ಭಾರತದಲ್ಲಿ ಇಸ್ಲಾಂ ಧರ್ಮ ಸ್ಥಾಪನೆಗಿಂತ ಪೂರ್ವದಲ್ಲಿ ಮುಸ್ಲಿಂ ಸಮುದಾಯಗಳು ಇಲ್ಲಿ ನೆಲೆಸಿದವು. ಇಸ್ಲಾಂ ಧರ್ಮ ಸ್ಥಾಪನೆಯಾದ ಹಲವು ದಶಕಗಳ ನಂತರದಲ್ಲಿ ಕರಾವಳಿ ಪ್ರದೇಶದಲ್ಲಿ ನೆಲೆ ನಿಂತ ಮುಸ್ಲಿಂ ವರ್ತಕರು, ಧಾರ್ಮಿಕ ಮಿಷನರಿಗಳಿಂದ ಈ ಪ್ರದೇಶದಲ್ಲಿ ಇಸ್ಲಾಂ ಧರ್ಮವು ವಿಸ್ತರಿಸಿಕೊಳ್ಳುತ್ತಾ ಹೋಯಿತು. ಇದರ ಪರಿಣಾಮವಾಗಿ ಸ್ಥಳೀಯ ಸಮುದಾಯ ಗಳು ರೂಪುಗೊಂಡವು. ಒಟ್ಟೊಮನ್ ಥಾಖಿಫಿ ಭಾರತಕ್ಕೆ ಬಂದ ಮೊದಲ ಮುಸ್ಲಿಮನು. ಈತನು

ಕ್ರಿ.ಶ. ೬೩೬ರಲ್ಲಿ ಮಲಬಾರಿನ ಚೇರುಮನ್ ಆಸ್ಥಾನಕ್ಕೆ ಭೇಟಿ ನೀಡಿದ್ದನು. ಭಾರತದಲ್ಲಿ ಮೊಟ್ಟಮೊದಲ ಮಸೀದಿಯು ಸ್ಥಾಪಿತವಾಗಿದ್ದು ಕ್ರಿ.ಶ. ೬೨೯ರಲ್ಲಿ ಮಲಿಕ್‌ದಿನಾರ್‌ನಿಂದ ಕಟ್ಟಲ್ಪಟ್ಟಿತು.[೩೬] ಕ್ರಿ.ಶ. ೬೪೪ರಲ್ಲಿ ಮಲಬಾರ್ ಕರಾವಳಿಯ ಬಾರಕೂರು ಪ್ರದೇಶದಲ್ಲಿ ಮಲ್ಲಿಕ್–ಇಬನ್–ಹಚೀಬ್‌ನಿಂದ ಮಸೀದಿಯು ಸ್ಥಾಪಿತವಾಯಿತು. ಬಾರಕೂರನಲ್ಲಿ ಮಸೀದಿ ಕಟ್ಟಿಸಿ ಈ ಮಸೀದಿಯ ಮೇಲ್ವಿಚಾರಕನಾಗಿ ತನ್ನ ಮಗನಾದ ಇಬ್ರಾಹಿಮ್ ಇಬನ್ ಮಲಿಕ್‌ನನ್ನು ಖಾಜಿಯನ್ನಾಗಿ ನೇಮಿಸಿದನು. ನಂತರ ಬಾರಕೂರಿನಿಂದ ಮಂಗಳೂರಿಗೆ ಪ್ರಯಾಣ ಮಾಡಿ ಅಲ್ಲಿಯೂ ಒಂದು ಮಸೀದಿಯನ್ನು ನಿರ್ಮಿಸಿದನು. ಅಲ್ಲಿ ತನ್ನ ಇನ್ನೊಬ್ಬ ಮಗನಾದ ಮೂಸ ಇಬನ್ ಮಲಿಕ್‌ನನ್ನು ಖಾಜಿಯನ್ನಾಗಿ ನೇಮಕ ಮಾಡಿ, ಕಾಸರಗೋಡಿನಲ್ಲಿ ಕ್ರಿ.ಶ. ೬೪೪ರಲ್ಲಿ ಮಸೀದಿಯನ್ನು ನಿರ್ಮಾಣ ಮಾಡಿದನು. ಈ ರೀತಿಯಾಗಿ ಕ್ರಿ.ಶ. ೭ನೇ ಶತಮಾನದ ವೇಳೆಗೆ ಅತಿ ವೇಗದಲ್ಲಿ ಈ ಧರ್ಮ ಅನುಯಾಯಿಗಳ ಮೂಲಕ ಇಸ್ಲಾಂ ಧರ್ಮ ಹಬ್ಬಿತು. ಈ ಅನುಯಾಯಿಗಳಿಗೆ ಆ ಸಂದರ್ಭದಲ್ಲಿ ಆಳ್ವಿಕೆ ಮಾಡುತ್ತಿದ್ದ ರಾಜಪ್ರಭುತ್ವಗಳಿಂದ ಆಶ್ರಯವೂ ದೊರಕಿತು. ಕೆಲವು ಪ್ರಭುತ್ವಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಉದಾಹರಣೆಯು ಸಹ ಕಂಡುಬರುತ್ತದೆ. ಆರ್.ಸಿ. ಮಜುಂದಾರ್ ಪ್ರಕಾರ ದಕ್ಷಿಣ ಭಾರತ ಮತ್ತು ಸಿಲೋನಿನಲ್ಲಿ ಇಸ್ಲಾಮಿ ಪ್ರಭಾವವು ಕ್ರಿ.ಶ. ೭ನೇ ಶತಮಾನದಲ್ಲಿತ್ತು. ಕ್ರಿ.ಶ. ೮೧೫ರಲ್ಲಿ ಕೋಡಂಗಲ್ಲಿನ ದೊರೆ ಪೆರುಮಾಳನು ಇಸ್ಲಾಂ ಧರ್ಮವನ್ನು ಸ್ವೀಕರಿಸಿ, ಮದೀನಾಕ್ಕೆ ಹೋಗಿ ಅಲ್ಲಿಂದ ಕಾಸರಗೋಡಿಗೆ ಮಲ್ಲಿಕ್–ಬಿನ್–ದೀನಾರ್ ಎಂಬ ಮುಸ್ಲಿಂ ಧಾರ್ಮಿಕ ಅನುಯಾಯಿಯನ್ನು ಕಳುಹಿಸಿದನು. ಮಲ್ಲಿಕ್–ಬಿನ್–ದೀನಾರ್ ಮತ್ತು ಅವನ ಅನುಯಾಯಿಗಳು ಕರಾವಳಿಯುದ್ದಕ್ಕೂ ಮತಪ್ರಚಾರ ಮಾಡಿದರು. ಹಾಗೆಯೇ ಚೇರುಮನ್ ಪೆರುಮಾಳನ ನಂತರ ಬಂದ ೧ನೇ ಜಾಮೋರಿನ್ ದೊರೆ ತನ್ನ ರಾಜ್ಯದಲ್ಲಿ ಇಸ್ಲಾಮಿನ ಪ್ರಸಾರಕ್ಕೆ ಉತ್ತೇಜನ ನೀಡಿದ್ದನು. ಹೀಗೆ ದಕ್ಷಿಣ ಭಾರತದಲ್ಲಿ ಮುಸ್ಲಿಂ ಧರ್ಮವು ಪ್ರಭುತ್ವದ ಮೇಲೆ ಹಾಗೂ ಜನ ಸಾಮಾನ್ಯರ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿತ್ತು. ಹೀಗೆ ಅರಬ್ ಮತ್ತು ಪರ್ಶಿಯಾ ಮೂಲದಿಂದ ಭಾರತಕ್ಕೆ ಆಗಮಿಸಿದ ಮುಸ್ಲಿಮರು, ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಹೊಸ ಹೊಸ ಸಮುದಾಯಗಳ ರೂಪದಲ್ಲಿ ಗುರುತಿಸಿಕೊಂಡರು. ಇವುಗಳಲ್ಲಿ ವ್ಯಾಪಾರದ ಹಿನ್ನೆಲೆಯಲ್ಲಿ ಭಾರತಕ್ಕೆ ಬಂದ ಈ ಸಮುದಾಯಗಳು ವೃತ್ತಿ ಆಧಾರಿತ ಹಿನ್ನೆಲೆಯಲ್ಲಿಯೇ ಸಮುದಾಯಗಳ ರೂಪದಲ್ಲಿ ಗುರುತಿಸಿಕೊಂಡರು. ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ಮಾಪಿಳ್ಳೆ, ಮರಕ್ಕರ್, ನವಾಯತ್, ಕೋಯಾ, ತುಳುಕ್ಕರ್, ಲಬ್ಬೆ, ನಾಹ(Naha), ಕೋಯಾಸ್(Kayas), ಬ್ಯಾರಿಗಳು,[೩೭] ಮುಖ್ಬದಂ, ದಖ್ಖನಿಗಳು. ಇವು ಸ್ಥಳೀಯವಾಗಿ ಗುರುತಿಸಿಕೊಂಡ ಸಮುದಾಯಗಳಾಗಿದ್ದು, ವ್ಯಾಪಾರಸ್ಥರಾಗಿ, ಉದ್ದಿಮೆದಾರರಾಗಿ ಹಾಗೂ ಕುಶಲಕರ್ಮಿಗಳಾಗಿ ತಮ್ಮ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದವು. ಹೀಗೆ ಈ ಸಮುದಾಯಗಳು ವಿಶೇಷವಾಗಿ ದಕ್ಷಿಣ ಭಾರತದ ಕರಾವಳಿ ಉದ್ದಕ್ಕೂ ಕಂಡುಬಂದವು. ಇವು ದಕ್ಷಿಣ ಭಾರತದಲ್ಲಿ ವ್ಯಾಪಾರಸ್ಥರಾಗಿ, ಕೃಷಿಕರಾಗಿ, ಉದ್ದಿಮೆದಾರರಾಗಿ ಹಾಗೂ ಕುಶಲಕರ್ಮಿಗಳಾಗಿ ಭಾರತದ ವಿವಿಧ ಭಾಗಗಳಲ್ಲಿ ನೆಲೆಸಿದರು.

ಈ ರೀತಿಯಾಗಿ ಜಾಗತಿಕ ಮಟ್ಟದಲ್ಲಿ ಪ್ರಭುತ್ವ ಮತ್ತು ಆರ್ಥಿಕತೆಯಲ್ಲಿ ಉಂಟಾದ ಸ್ಥಿತ್ಯಂತರಗಳು ಭಾರತದ ಪ್ರಭುತ್ವ, ಆರ್ಥಿಕ ಹಾಗೂ ಸಂಸ್ಕೃತಿಯ ಮೇಲೆ ಅನೇಕ ಪರಿಣಾಮಗಳನ್ನು ಬೀರಿದವು. ಈ ಹಿನ್ನೆಲೆಯಲ್ಲಿ ವಿಜಯನಗರ ಪೂರ್ವದಲ್ಲಿಯೇ ಕಂಡುಬರುವ ಮುಸ್ಲಿಂ ಸಮುದಾಯಗಳು ಭಾರತದ ಆರ್ಥಿಕತೆಯಲ್ಲಿ ಹಾಗೂ ಪ್ರಭುತ್ವಗಳ ಸಂದರ್ಭಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದವು. ಭಾರತದಲ್ಲಿ ವರ್ತಕರಾಗಿ ಕಾಣಿಸಿಕೊಂಡ ಇವು ಹಂತ ಹಂತವಾಗಿ ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಹಲವಾರು ವೃತ್ತಿಗಳಲ್ಲಿ ತೊಡಗಿಕೊಂಡವು. ಇದಕ್ಕೆ ಪೂರಕವಾಗಿ ವರ್ತಕರು, ವರ್ತಕ ಶ್ರೇಣಿಗಳು, ಆಮದು ಮತ್ತು ರಫ್ತು ವ್ಯಾಪಾರ, ಸಾಗಾಣಿಕೆಯ ಸೌಕರ್ಯಗಳು ಹೀಗೆ ಆರ್ಥಿಕ ರೂಪಾಂತರ, ವರ್ತಕ ಸಂಘಗಳ ಪಾತ್ರ ಮುಂತಾದವುಗಳು ಕಂಡುಬಂದವು.

ಅರಬ್ಬರು ಮತ್ತು ಪರ್ಶಿಯನ್ನರು ಕ್ರಿ.ಶ. ೪ನೇ ಶತಮಾನದಿಂದ ಹಿಡಿದು ೧೫ನೇ ಶತಮಾನದ ವರೆಗೆ ಜಾಗತಿಕ ಮಟ್ಟದ ಸಮುದ್ರ ವ್ಯಾಪಾರದ ಮೇಲೆ ಹಾಗೂ ಭಾರತದೊಂದಿಗೆ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ಹಿಡಿದಿಟ್ಟುಕೊಂಡಿದ್ದರು. ನಂತರದಲ್ಲಿ ಕ್ರಿ.ಶ. ೧೪ನೇ ಶತಮಾನದಲ್ಲಿ ಟರ್ಕರ ಪತನಾನಂತರ ಯುರೋಪಿಯನ್ನರು ಭಾರತಕ್ಕೆ ಪ್ರವೇಶ ಪಡೆದರು. ಇಲ್ಲಿಂದಾಚೆಗೆ ಅರಬ್ಬರು ಹೊಂದಿದ್ದ ವ್ಯಾಪಾರದ ಏಕಸ್ವಾಮ್ಯತೆಯೂ ಕೈತಪ್ಪಿ ಹೋಗಿದ್ದರಿಂದ ಈ ಪ್ರದೇಶದಲ್ಲಿ ಅರಬ್ಬರ ಪ್ರಾಬಲ್ಯವು ಕಡಿಮೆಯಾಯಿತು. ಮಧ್ಯಕಾಲೀನ ಭಾರತದ ಚರಿತ್ರೆಯಲ್ಲಿ ಈ ಸಮುದಾಯಗಳ ಅಸ್ಮಿತೆ ಹಾಗೂ ಸ್ಥಿತ್ಯಂತರಗಳ ಅಧ್ಯಯನಗಳನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕ್ರಿ.ಶ. ೧ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದ ಕಾಲಾವಧಿಯವರೆಗಿನ ಮುಸ್ಲಿಂ ಸಮುದಾಯಗಳ ಚಾರಿತ್ರಿಕತೆಯನ್ನು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಪೂರ್ವದವರೆಗೆ ಹೇಗೆ ಇತ್ತು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮುಸ್ಲಿಂ ಸಮುದಾಯಗಳು ವಿಜಯನಗರ ಪೂರ್ವದಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ ತಮ್ಮ ಸ್ಥಾನವನ್ನು ಪಡೆದುಕೊಂಡಿದ್ದನ್ನು ಇಲ್ಲಿ ಗುರುತಿಸಬಹುದು. ಈ ಮೇಲಿನ ವಿವರಣೆಯಿಂದ ಭಾರತದಲ್ಲಿ ನೆಲೆ ನಿಂತ ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ಎರಡು ಬಗೆಯಾಗಿ ವಿಭಾಗಿಸಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ. ಒಂದು ದಕ್ಷಿಣ ಭಾರತದಲ್ಲಿ ವ್ಯಾಪಾರದ ಹಿನ್ನೆಲೆಯಲ್ಲಿ ಭಾರತಕ್ಕೆ ಬಂದು ನೆಲೆಸಿದ ಮುಸ್ಲಿಂ ಸಮುದಾಯಗಳು. ಎರಡನೆಯದಾಗಿ ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದು ನೆಲೆಸಿದ ಮುಸ್ಲಿಂ ಸಮುದಾಯಗಳು. ವಿಜಯನಗರ ಚರಿತ್ರೆ ರಚನೆಯಲ್ಲಿ ಮುಸ್ಲಿಂ ಸಮುದಾಯಗಳನ್ನು ಎರಡು ರೀತಿಯಾಗಿ ಗುರುತಿಸಬಹುದು. ಒಂದು ಪ್ರಭುತ್ವಕೇಂದ್ರಿತದಲ್ಲಿ ರಚನೆಯಾದ ಮುಸ್ಲಿಂ ಸಮುದಾಯಗಳು, ಇನ್ನೊಂದು ವೃತ್ತಿಯಾಧಾರಿತ ಅಥವಾ ಜನಸಾಮಾನ್ಯ ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳು. ಇವು ಅರಬ್ ಮತ್ತು ಪರ್ಶಿಯಾ ಮೂಲಗಳಿಂದ ಬಂದ ಮುಸ್ಲಿಂ ಸಮುದಾಯಗಳಾಗಿದ್ದು, ತಮಿಳುನಾಡು, ಕೇರಳ, ಶ್ರೀಲಂಕಾ, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ವಿಸ್ತರಣೆಗೊಳ್ಳುತ್ತಾ ಬಂದರು.

ಸಾಮಾನ್ಯ ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ಬೈದಾರ್ಸ್(ಕಲ್ಲುಕುಟಿಕ), ತಕರಾಸ್, ಮೊಮಿನ್ಸ್, ಪಿಂಜಾರ, ಲದಾಫ್, ದೂದೇಕುಲಾ, ಮಾನಯಾರ, ಅತ್ತಾರ, ಪಟವೇರ,

ಕಾಜಿ, ಕಲೈಗಾರ, ನಲಬಂದ, ಭಾದುನಜಾರ, ಚಪ್ಪರ್‌ಬಂದ್, ಕಸ್ಸಬ್, ಲಬ್ಬೇಸ್ ಹಾಗೂ ಬಾಗಬಾನ್.[೩೮] ಹೀಗೆ ನಮಗೆ ಲಭ್ಯವಿರುವ ಕೆಲವು ಚರಿತ್ರೆಯ ಆಧಾರಗಳಿಂದ ಮಧ್ಯಕಾಲೀನ ಭಾರತದ ಸಂದರ್ಭದಲ್ಲಿನ ಸಾಮಾನ್ಯ ಸ್ಥಳೀಯ ಸಮುದಾಯಗಳನ್ನು ಗುರುತಿಸಬಹುದಾಗಿದೆ. ಪ್ರಭುತ್ವಕೇಂದ್ರಿತ ಹಿನ್ನೆಲೆಯಲ್ಲಿ ಮೇಲ್ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ಅಫಕಿಸ್, ದಖ್ಖನಿ, ಅಜಮಿಸ್, ಅರಬ್ಬರು, ಹಬಷಿಯರು, ತುರ್ಕರು, ಅಫಘಾನರು, ಶೇಖರು ಹಾಗೂ ಪಠಾಣರು, ಸೈಯ್ಯಿದ್. ವಿದ್ವಾಂಸರ ವರ್ಗದಲ್ಲಿ ಕಂಡುಬರುವ ಸಮುದಾಯಗಳೆಂದರೆ, ಮೊನ್ನಾನಿನ ಮುಖ್ಖದಂ, ಬಫಕೀರರು ಹಾಗೂ ಜಫರೀರು. ಈ ಸಮುದಾಯಗಳು ಅರಬ್ ಮೂಲದವರಾಗಿ ಕೇರಳದಲ್ಲಿ ಬಂದು ನೆಲೆ ನಿಂತವರು.

ಹೀಗೆ ಈ ಮೇಲಿನ ಎಲ್ಲಾ ಪ್ರಮುಖ ಸಮುದಾಯಗಳು ವಿಜಯನಗರ ಪೂರ್ವದಲ್ಲಿ ಕಂಡುಬಂದಿದ್ದು, ಈ ಸಮುದಾಯಗಳು ವಿಜಯನಗರ ಆಡಳಿತಾವಧಿಯಲ್ಲಿಯೂ ಸಹ ಹಾಗೆಯೇ ಮುಂದುವರಿದವು. ಮಧ್ಯಕಾಲೀನ ಭಾರತದ ಜನಕೇಂದ್ರಿತ ಚರಿತ್ರೆಯಲ್ಲಿ ಮುಸ್ಲಿಂ ಸಮುದಾಯಗಳು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಪ್ರದೇಶಗಳ ಮೂಲಕ ಭಾರತಕ್ಕೆ ಪ್ರವೇಶ ಪಡೆದವು. ಅಂತಹವುಗಳಲ್ಲಿ ಕೆಲವು ಉತ್ತರ ಭಾರತದಿಂದ ಪ್ರಭುತ್ವಕೇಂದ್ರಿತ ಹಿನ್ನೆಲೆಯಿಂದ ಬಂದವು. ಹಾಗೆಯೇ ದಕ್ಷಿಣ ಭಾರತಕ್ಕೆ ವ್ಯಾಪಾರದ ಹಿನ್ನೆಲೆಯಲ್ಲಿ ಕೆಲವು ಸಮುದಾಯಗಳು ಆಗಮಿಸಿದವು. ಇನ್ನೂ ಕೆಲವು ಧಾರ್ಮಿಕ ನೆಲೆಗಟ್ಟಿನಲ್ಲಿ ಬಂದರೂ, ತಮ್ಮದೇ ಆದಂತಹ ವೈಶಿಷ್ಟ್ಯತೆಯನ್ನು ಹೊಂದಿದ್ದವು. ಮುಸ್ಲಿಂ ಸಮುದಾಯಗಳಲ್ಲಿ ಸೂಫಿಗಳು, ಉಲೇಮಾಗಳು, ವರ್ತಕರು, ಕುಶಲಕರ್ಮಿಗಳು, ಕೃಷಿಕರು ಹೀಗೆ ವಿವಿಧ ವೃತ್ತಿಯಾಧಾರಿತವಾಗಿ ಅನೇಕರು ಏಳಿಗೆಗೆ ಬಂದರು. ವಿಜಯನಗರ ಕಾಲಾವಧಿಯಲ್ಲಿ ಈ ಸಮುದಾಯಗಳ ರಾಜಕೀಯ, ಸಾಮಾಜಿಕ, ಧಾರ್ಮಿಕ ವಿಚಾರಗಳಲ್ಲಿ ಇವರ ಪಾತ್ರವನ್ನು ಮುಂದಿನ ಆರ್ಥಿಕ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕೊನೆಟಿಪ್ಪಣಿಗಳು

೧. ಇಬನ್ ಖಾಲ್ದೂನ್, ಫ್ರಂಜ್ ರೋಸ್ಥಾಲ್(ಅನು) ದಿ ಮುಖದ್ದಿಮಾ, ಪ್ರಿನ್ಸ್ಟನ್ ಯೂನಿವರ್ಸಿಟಿ ಪ್ರೆಸ್, ೧೯೮೦, ಪು. ೨೧೨.

೨. ಅಸ್ಗರ್ ಅಲಿ, ಇಸ್ಲಾಂ ಹುಟ್ಟು ಮತ್ತು ವಿಕಾಸ, ಪು. ೨೧.

೩. ಅದೇ, ಪು. ೨೬-೨೭.

೪. ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ), ಮೋಹನ್‌ಕೃಷ್ಣ ರೈ ಕೆ. (ಸಂ), ಏಷ್ಯಾದ ಚರಿತ್ರೆ ಸಂ.೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು. ೧೧೭-೧೧೮.

೫. ಜೋಯೆಲ್ ಕಾರ್ಯಿಕೇಲ್, ದಿ ಶೇಪಿಂಗ್ ಅರಬ್ಸ್, ಮ್ಯಾಕ್ಮಿಲನ್ ಪಬ್ಲಿಷರ್ಸ್, ೧೯೬೯ ಪು. ೨೧.

೬. ಅಸ್ಗರ್ ಅಲಿ, ಪೂರ್ವೋಕ್ತ, ಪು. ೪೫–೪೬.

೭. ಅದೇ, ಪು. ೧೬೨.

೮. ಅದೇ, ಪು. ೧೬೪.

೯. ಮಹಮ್ಮದ್ ಅಬ್ಬಾಸ್ ಶೂಸ್ತ್ರಿ(ಮೂ), ಬಿ.ಎಂ. ಶ್ರೀಕಂಠಯ್ಯ(ಅನು), ಇಸ್ಲಾಂ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦, ಪು. ೩೭.

೧೦. ಅದೇ, ಪು. ೩೭.

೧೧. ಅದೇ, ಪು. ೩೮.

೧೨. ಅಸ್ಗರ್ ಅಲಿ, ಪೂರ್ವೋಕ್ತ, ಪು. ೧೭೯–೧೮೦.

೧೩. ಅಬ್ಬಾಸ್ ಶೂಸ್ತ್ರಿ, ಪೂರ್ವೋಕ್ತ, ಪು. ೧೨೭.

೧೪. ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ), ಪೂರ್ವೋಕ್ತ, ಪು. ೧೨೭.

೧೫. ಅದೇ, ಪು. ೧೨೭.

೧೬. ಅದೇ, ಪು. ೧೨೯–೧೩೦.

೧೭. ಕ್ಯಾಥರೇನ ಬಿ. ಏಷರ್, ಇಂಡಿಯಾ ಬಿಫೋರ್ ಯುರೋಪ್, ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್, ಪು.೧೮.

೧೮. ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ.) ಪೂರ್ವೋಕ್ತ, ಪು. ೧೩೨–೧೩೩.

೧೯. ಫೆರಿಸ್ತಾ(ಮೂಲ), ಕುಲಕರ್ಣಿ ಆರ್.ಕೆ.(ಅನು), ತಾರಿಕ್–ಎ–ಫೆರಿಸ್ತಾ, ಆದಿಲ್‌ಶಾಹಿ ಸಂ.೧, ಬಿಎಲ್‌ಡಿ ಸಂಸ್ಥೆ, ಬಿಜಾಪುರ, ೨೦೧೬, ಪು. ೫೨.

೨೦. ಅದೇ, ಪು.೫೨.

೨೧. ಅದೇ, ಪು.೫೩.

೨೨. ಅದೇ ಪು.೫೪.

೨೩. ಮಜುಮ್‌ದಾರ್ ಆರ್.ಸಿ. ರಾಯ್‌ಚೌಧರಿ ಎಚ್.ಸಿ., ಕಾಲಿಕಿಂಕರ್ ದತ್ತ(ಮೂಲ), ಶಾರದಾ ಪ್ರಸಾದ್ ಎನ್.ಎಸ್., (ಅನು), ಭಾರತದ ಪ್ರೌಢ ಇತಿಹಾಸ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೨, ಪು.೨೨೭.

೨೪. ಮಜುಮ್‌ದಾರ್ ಆರ್.ಸಿ. (ಮೂಲ), ಎ.ಬಿ. ನರಸಿಂಹಮೂರ್ತಿ, ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂ.೧೧, ಭಾರತೀಯ ವಿದ್ಯಾಭವನ, ಬೆಂಗಳೂರು, ೨೦೦೨, ಪು.೧೧೫.

೨೫. ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ.) ಪೂರ್ವೋಕ್ತ, ಸಂಪುಟ-೪, ಪು.೨೦.

೨೬. ಮಜುಮ್‌ದಾರ್ ಆರ್.ಸಿ., ಪೂರ್ವೋಕ್ತ, ಪು. ೨೭೧.

೨೭. ಮಹದಿ ಹುಸೇನ್, ತೊಘಲಕ್ ಡೈನಾಸ್ಟಿ, ಎಸ್.ಚಂದ್ ಆ್ಯಂಡ್ ಕೊ., ಎಲ್.ಟಿ.ಡಿ, ದೆಹಲಿ ಪು. ೫೯೨.

೨೮. ದೀಕ್ಷಿತ್ ಜಿ.ಎಸ್., ಸೌಥ್ ಇಂಡಿಯಾ ಆ್ಯನ್ ಎಕ್ಸ್‌ಡಿಷನ್ ಇನ್ ಟೂ ಬಿ ಪಾಸ್ಟ್, ಪು.೯-೧೦.

೨೯. ಕ್ಯಾಥರೇನೆ ಬಿ., ಏಷರ್, ಪೂರ್ವೋಕ್ತ, ಪು.೪-೫.

೩೦. ವಿಕ್ಟರ್ ಎಸ್. ಡಿಸೋಜ, ದಿ ನವಾಯತ್ಸ್ ಆಫ್ ಕೆನರಾ, ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್, ಧಾರವಾಡ, ೧೯೫೫, ಪು. ೫-೭.

೩೧. ವಸಂತ ಮಾಧವ್ ಕೆ.ಜಿ., ರಿಲಿಜಿಯಸ್ ಇನ್ ಕೋಸ್ಟಲ್ ಕರ್ನಾಟಕ, ನ್ಯೂಡೆಲ್ಲಿ, ೧೯೮೫, ಪು.೪.

೩೨. ಎಪಿಗ್ರಾಫಿಯ ಇಂಡಿಕ, ಸಂ. ೩೨, ಶಾ.ಸಂ. ೪, ಪು.೫೫-೫೮.

೩೩. ಗೋಪಾಲ ಎಲ್., ದ ಎಕನಾಮಿಕ್ ಲೈಫ್ ಆಫ್ ನಾರ್ಥನ್ ಇಂಡಿಯಾ, ಪು. ೧೧೩-೧೧೫.

೩೪. ವಸಂತ ಮಾಧವ್ ಕೆ.ಜಿ., ಪೂರ್ವೋಕ್ತ, ಪು.೩೯೬.

೩೫. ಎಪಿಗ್ರಾಫಿಯ ಇಂಡಿಕ, ಪೂರ್ವೋಕ್ತ, ಪು.೪.

೩೬. ವಹಾಬ್ ದೊಡ್ಡಮನೆ ಎ., ಮುಸ್ಲಿಂ ಇನ್ ದಕ್ಷಿಣ ಕನ್ನಡ, ಗ್ರೀನ್ ವರ್ಡ್ಸ್ ಪಬ್ಲಿಕೇಷನ್ಸ್, ೧೯೯೩, ಪು.೨೫.

೩೭. ವಿಕ್ಟರ್ ಎಸ್. ಡಿಸೋಜ, ಪೂರ್ವೋಕ್ತ, ಪು.೧೫-೨೦.

೩೮. ಸೈಯದ್ ಆಜಂ, ಮುಸ್ಲಿಂ ಸೊಸೈಟಿ ಇನ್ ಮಿಡಿವೆಲ್ ಕರ್ನಾಟಕ, ಯೂನಿವರ್ಸಿಟಿ ಆಫ್ ಮೈಸೂರು, ೧೯೮೬, ಪು. ೫೬.

ಅಧ್ಯಾಯ ಮೂರು

ವಿಜಯನಗರ ಚರಿತ್ರೆ ಬರವಣಿಗೆಯಲ್ಲಿ ಹಿಂದೂ ಹಾಗೂ ಮುಸ್ಲಿಂ ನಿರೂಪಣೆಗಳು

೩.೧. ವಿಜಯನಗರ ಅರಸರ ಧೋರಣೆಗಳು

೩.೧.೧. ವಿಜಯನಗರದ ಆಳ್ವಿಕೆಯ ಸ್ವರೂಪ

೩.೧.೨. ಬಹಮನಿ ಮತ್ತು ಶಾಹಿ ರಾಜ್ಯಗಳೊಂದಿಗಿನ ಸಂಬಂಧಗಳು

೩.೨. ಅಧ್ಯಯನಕಾರರ ನಿಲುವುಗಳು

೩.೨.೧. ಪ್ರವಾಸಿ ಕಥನಗಳಲ್ಲಿನ ನಿಲುವುಗಳು

೩.೨.೨. ಸಾಮ್ರಾಜ್ಯಶಾಹಿ ನಿಲುವುಗಳು

೩.೨.೩. ರಾಷ್ಟ್ರೀಯವಾದಿ ನಿಲುವುಗಳು

೩.೨.೪. ಇತ್ತೀಚಿನ ಬರವಣಿಗೆಗಳು

ಅಧ್ಯಾಯ ಮೂರು

ವಿಜಯನಗರ ಚರಿತ್ರೆ ಬರವಣಿಗೆಯಲ್ಲಿ ಹಿಂದೂ ಹಾಗೂ ಮುಸ್ಲಿಂ ನಿರೂಪಣೆಗಳು

ಭಾರತದ ಚರಿತ್ರೆ ಬರವಣಿಗೆಯಲ್ಲಿ ಅದರಲ್ಲೂ ದಕ್ಷಿಣ ಭಾರತದ ಚರಿತ್ರೆ ಬರವಣಿಗೆಯಲ್ಲಿ ವಿಜಯನಗರ ಸಾಮ್ರಾಜ್ಯದ ಚರಿತ್ರೆ ಅತ್ಯಂತ ಹೆಚ್ಚು ಚರ್ಚೆಗೆ ಒಳಗಾಗಿರುವಂಥದ್ದು. ಇದಕ್ಕೆ ರಾಷ್ಟ್ರೀಯವಾದಿ ಹಾಗೂ ಸಾಮ್ರಾಜ್ಯಶಾಹಿ ಚರಿತ್ರೆಕಾರರ ಪೂರ್ವಗ್ರಹಿತವಾದ ವಾದ ಪ್ರತಿವಾದಗಳೇ ಪ್ರಮುಖ ಕಾರಣ. ಆ ಕಾರಣದಿಂದಾಗಿಯೇ ವಿಜಯನಗರದ ಚರಿತ್ರೆ ವೈಭವದಿಂದ ಹಾಗೂ ಕೋಮು ಹಿನ್ನೆಲೆಯಿಂದ ರಚನೆಗೊಳ್ಳುವಂತಾಯಿತು. ಮಾರ್ಕ್ಸ್‌ವಾದಿ ಹಾಗೂ ಪ್ರಗತಿಪರ ಬರವಣಿಗೆಗಳು ಆರಂಭಗೊಂಡ ಬಳಿಕ ಸೆಕ್ಯುಲರ್ ಹಿನ್ನೆಲೆಯಿಂದ ವಿಜಯನಗರವನ್ನು ನೋಡುವ ವೈಧಾನಿಕತೆ ಹಾಗೂ ಸೈದ್ಧಾಂತಿಕತೆ ಹುಟ್ಟಿಕೊಂಡಿತು. ಸೆಕ್ಯುಲರ್ ಧೋರಣೆಗಳು ಕಮ್ಯೂನಲ್ ಧೋರಣೆಗಳಿಗಿಂತ ಭಿನ್ನವಾಗಿ ವಿಜಯನಗರ ಚರಿತ್ರೆಯನ್ನು ನೋಡಿದರೂ ಅಲ್ಲೂ ಕೂಡ ವಿಜಯನಗರದ ಆಳ್ವಿಕೆಯ ಚಾರಿತ್ರಿಕ ಸಂದರ್ಭ ಹಾಗೂ ಅಂದಿನ ವಿದ್ಯಮಾನಗಳು ಪ್ರಧಾನವಾಗಿರದೆ ಸೈದ್ಧಾಂತಿಕ ಕಸರತ್ತುಗಳಷ್ಟೇ ಮುಖ್ಯವಾದವು. ಚರಿತ್ರೆಯನ್ನು ಅಧ್ಯಯನ ನಡೆಸುವ ಪ್ರತಿಯೊಂದು ಪಂಥವೂ ತನ್ನ ಸಿದ್ಧಾಂತಕ್ಕನು ಗುಣವಾಗಿ ವಿಜಯನಗರವನ್ನು ವಸ್ತುವನ್ನಾಗಿರಿಸಿಕೊಂಡಿತು. ಆದರೆ ಹಿಂದೂ-ಮುಸ್ಲಿಂ ಎನ್ನುವ ಧೋರಣೆಗಳು ಪರ-ವಿರೋಧದ ತಾತ್ವಿಕ ಚೌಕಟ್ಟಿನಲ್ಲಿ ವಿಜಯನಗರದ ಚರಿತ್ರೆಯ ಕೇಂದ್ರ ವಸ್ತುವಿಚಾರಗಳಾಗಿ ಹೊರಹೊಮ್ಮಿದವು. ಹೀಗಾಗಿ ವಿಜಯನಗರದ ಚರಿತ್ರೆಯನ್ನು ಚರಿತ್ರೆಯಲ್ಲಿ ವಿಜಯನಗರ ಹಾಗೂ ಚರಿತ್ರೆ ಬರವಣಿಗೆಯಲ್ಲಿ ವಿಜಯನಗರ ಎಂಬುದಾಗಿ ಅರ್ಥೈಸಿಕೊಂಡು ನಿರೂಪಿಸುವ ಅವಶ್ಯಕತೆ ಇದೆ.

ಪ್ರಸ್ತುತ ಅಧ್ಯಾಯದಲ್ಲಿ ವಿಜಯನಗರದ ಚರಿತ್ರೆ ಬರವಣಿಗೆಯಲ್ಲಿನ ಹಿಂದೂ-ಮುಸ್ಲಿಂ ನಿರೂಪಣೆಗಳನ್ನು ಎರಡು ಬಗೆಗಳಲ್ಲಿ ಅರ್ಥೈಸಿಕೊಳ್ಳಲು ಪ್ರಯತ್ನಿಸಲಾಗಿದೆ. ಅವುಗಳೆಂದರೆ ವಿಜಯನಗರದ ಅರಸರ ಧೋರಣೆಗಳು ಹಾಗೂ ಅಧ್ಯಯನಕಾರರ ನಿಲುವುಗಳು. ವಿಜಯನಗರದ ಅರಸರ ಧೋರಣೆಗಳು ಅಂದಿನ ಚಾರಿತ್ರಿಕ ಸಂದರ್ಭದ ರಾಜಕೀಯ ವಿದ್ಯಮಾನಗಳಿಗೆ ಅನುಗುಣವಾಗಿ ರೂಪುಗೊಳ್ಳುತ್ತಿದ್ದವು. ವಿಜಯನಗರದ ಅರಸರು ಬಹಮನಿಗಳೊಂದಿಗೆ ಹಾಗೂ ಬಹಮನಿಗಳು

ವಿಜಯನಗರದೊಂದಿಗೆ, ವಿಜಯನಗರ ಶಾಹಿ ಅರಸು ಮನೆತನಗಳೊಂದಿಗೆ ಹಾಗೂ ಶಾಹಿ ಅರಸುಮನೆತನಗಳು ವಿಜಯನಗರದೊಂದಿಗೆ ಹೊಂದಿದ್ದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳನ್ನು ಇಲ್ಲಿ ಪ್ರಧಾನವಾಗಿ ಚರ್ಚಿಸಲಾಗಿದೆ. ದಕ್ಷಿಣ ಭಾರತದಲ್ಲಿ ಹೊಸದಾಗಿ ಉದಯಿಸಿದ ಬಹಮನಿ ಹಾಗೂ ವಿಜಯನಗರ ಸಾಮ್ರಾಜ್ಯಗಳು ಹೊಸ ರಾಜಕೀಯ ವಾತಾವರಣವೊಂದನ್ನು ಸೃಷ್ಟಿಸಿ ಸಂಘರ್ಷ, ಹೊಂದಾಣಿಕೆ ಹಾಗೂ ಒಪ್ಪಂದಗಳ ಹೊಸ ಯುಗವನ್ನು ಹುಟ್ಟುಹಾಕಿದವು. ಈ ಅನಿವಾರ್ಯತೆಗಳಿಗೆ ಅನುಗುಣವಾಗಿ ಅವರ ಆಡಳಿತ ನೀತಿ ರೂಪುಗೊಂಡಿತು. ಅವರ ಆಡಳಿತ ನೀತಿ ಅಂದಿನ ಸಂದರ್ಭದ ಒತ್ತಡಗಳಿಗೆ ಹಾಗೂ ಆರ್ಥಿಕ ಅನಿವಾರ್ಯತೆಗಳಿಗೆ ಉತ್ತರಗಳನ್ನು ಕಂಡುಹಿಡಿಯುವ ರೀತಿಯಲ್ಲಿದ್ದವೆಯೇ ಹೊರತು ಧಾರ್ಮಿಕ ಸಂಘರ್ಷವನ್ನು ಕೇಂದ್ರವಾಗಿಟ್ಟುಕೊಂಡಿರಲಿಲ್ಲ. ವ್ಯಾಪಾರಿಗಳು, ಕುಶಲಕರ್ಮಿಗಳು ಹಾಗೂ ಸೈನಿಕರ ಎರಡೂ ಸಾಮ್ರಾಜ್ಯಗಳ ನಡುವೆ ಉತ್ತಮ ಸಂಬಂಧಗಳನ್ನು ಬೆಸೆದಿದ್ದರು. ಅದೇ ರೀತಿ ದಖ್ಖನಿ ಭಾಷೆ, ಇಂಡೋ–ಇಸ್ಲಾಮಿಕ್ ವಾಸ್ತುಶೈಲಿ, ಸೂಫಿ ಪಂಥ, ದಾಸ ಪರಂಪರೆ ಇವೆಲ್ಲವೂ ಪರಸ್ಪರ ಕೊಡು ಕೊಳ್ಳುವ ಸಂಬಂಧವನ್ನು ಹೊಂದಿದ್ದವು. ಅರೇಬಿಯನ್–ಪರ್ಶಿಯನ್ ಹಾಗೂ ಯುರೋಪಿಯನ್ ವ್ಯಾಪಾರದ ಪ್ರವೇಶ ಹೊಸ ಬಗೆಯ ಆರ್ಥಿಕತೆಯ ಹುಟ್ಟಿಗೂ ಕಾರಣವಾಯಿತು. ಹಾಗೆಯೇ ಈ ಎಲ್ಲ ಬದಲಾವಣೆಗಳ ಮೂಲಕ ಅಂದಿನ ರಾಜಪ್ರಭುತ್ವದ ಆಡಳಿತ ಸ್ವರೂಪವನ್ನು ತೀರ್ಮಾನಿಸಬೇಕಾಗುತ್ತದೆ.

೩.೧. ವಿಜಯನಗರದ ಅರಸರ ಧೋರಣೆಗಳು

ವಿಜಯನಗರದ ಚರಿತ್ರೆ ಬರವಣಿಗೆಗಳಲ್ಲಿ ನಿರೂಪಿತವಾಗಿರುವ ಕ್ರಮಗಳಲ್ಲಿ ಇಲ್ಲಿನ ಅರಸರ ಬಗೆಗಿನ ಧೋರಣೆಗಳು ಅತ್ಯಂತ ಪ್ರಮುಖವಾಗಿವೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಕುರಿತಂತೆ ಚರಿತ್ರೆಕಾರರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಈ ಹಿನ್ನೆಲೆಯಲ್ಲಿ ವಿಜಯನಗರದ ಸ್ಥಾಪನೆಯ ಸಂದರ್ಭ, ಪ್ರಾದೇಶಿಕತೆ, ವಿದ್ಯಾರಣ್ಯರ ಪಾತ್ರಕ್ಕೆ ಸಂಬಂಧಿಸಿದಂತೆ ಹಲವು ವಾದ ವಿವಾದಗಳು ನಮ್ಮನ್ನು ಎದುರುಗೊಳ್ಳುತ್ತವೆ. ಇಷ್ಟಾದರೂ ಚರಿತ್ರೆಕಾರರ ಒಂದು ಗುಂಪು, ವಿಜಯನಗರ ಚರಿತ್ರೆಯನ್ನು ಕೇವಲ ಒಂದು ಮತಕ್ಕೆ ಸೀಮಿತಗೊಳಿಸುವ ಹುನ್ನಾರಗಳಿಗೆ ಮುಂದಾಗುತ್ತಿದೆ. ಇದಕ್ಕೆ ಪ್ರತಿಯಾಗಿ ಆಧುನಿಕೋತ್ತರ ಚರಿತ್ರೆಕಾರರು ಇವರ ಎಲ್ಲಾ ವಾದಗಳನ್ನು ಹುಸಿಗೊಳಿಸುವ ಹಿನ್ನೆಲೆಯಲ್ಲಿ ಅನೇಕ ತಳಸ್ಪರ್ಶಿಯ ಅಧ್ಯಯನಗಳನ್ನು ಕೈಗೊಳ್ಳುವುದರ ಮೂಲಕ ವಿಜಯನಗರ ಚರಿತ್ರೆಗೆ ಹೊಸ ಆಯಾಮವೊಂದನ್ನು ನೀಡಲು ಮುಂದಾಗಿದ್ದಾರೆ. ಅಂತಹ ಅಧ್ಯಯನಗಳಲ್ಲಿ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯದಲ್ಲಿ ನೆಲೆಸಿದ್ದ ವಿವಿಧ ಧರ್ಮೀಯರ ಬಗೆಗೆ ತಳೆದ ಧೋರಣೆಗಳು ಮುಖ್ಯವಾಗಿವೆ. ಇವು ಚರಿತ್ರೆ ಬರವಣಿಗೆಯಲ್ಲಿ ಇಲ್ಲಿನ ಸ್ಥಳೀಯ ಚರಿತ್ರೆಯನ್ನು ನಿರೂಪಿಸುವಲ್ಲಿ ಸಹಾಯಕವಾಗುತ್ತಿವೆ.

೩.೧.೧. ವಿಜಯನಗರದ ಆಳ್ವಿಕೆಯ ಸ್ವರೂಪ

ಕ್ರಿ.ಶ. ೧೩ನೇ ಶತಮಾನದ ಅಂತ್ಯದ ವೇಳೆಗೆ ದಕ್ಷಿಣ ಭಾರತದಲ್ಲಿ ನಾಲ್ಕು ರಾಜ್ಯಗಳು ಆಳ್ವಿಕೆಯನ್ನು ನಡೆಸುತ್ತಿದ್ದವು. ಉತ್ತರದಲ್ಲಿ ಯಾದವರು, ಕಾಕತೀಯರು, ಮಧ್ಯಭಾಗದಲ್ಲಿ ಹೊಯ್ಸಳರು, ದಕ್ಷಿಣದಲ್ಲಿ ಪಾಂಡ್ಯರು ಇದ್ದರು. ಇವು ಪರಸ್ಪರ ರಾಜ್ಯಗಳ ವಿಸ್ತರಣೆಗಾಗಿ ಸಂಘರ್ಷಗಳಲ್ಲಿ ನಿರತರಾಗಿದ್ದವು.[೧] ಕ್ರಿ.ಶ. ೧೨೯೬ರಿಂದ ಕ್ರಿ.ಶ. ೧೩೩೬ರವರೆಗಿನ ಸುಮಾರು ನಲವತ್ತು ವರ್ಷಗಳ ಕಾಲ ಖಿಲ್ಜಿ ಮತ್ತು ತುಘಲಕ್ ಸಾಮ್ರಾಜ್ಯಗಳಿಂದಾಗಿ ಸೃಷ್ಟಿಯಾದ ಶಕ್ತಿ ಶೂನ್ಯತೆಯ ಫಲವಾಗಿ ದಕ್ಷಿಣದಲ್ಲಿ ವಿಜಯನಗರವು ಒಂದು ರಾಜಕೀಯ ಶಕ್ತಿಯಾಗಿ ಉದಯಿಸಿತು. ದಕ್ಷಿಣ ಭಾರತದ ಮೇಲೆ ದಾಳಿ ಮಾಡಿದ ದೆಹಲಿಯ ಸುಲ್ತಾನರ ಮೊದಲನೆಯ ಅರಸ ಅಲ್ಲಾವುದ್ದೀನ್ ಖಿಲ್ಜಿ. ಆಗ ದಕ್ಷಿಣದಲ್ಲಿ ಆಳ್ವಿಕೆ ನಡೆಸುತ್ತಿದ್ದ ನಾಲ್ಕು ರಾಜ್ಯಗಳ ಶಕ್ತಿ ಸಮತೋಲನಕ್ಕೆ ಅಲ್ಲಾವುದ್ದೀನ್ ಖಿಲ್ಜಿಯಿಂದಾಗಿ ಅಪಾಯದ ಭೀತಿ ಒದಗಿತು.

ಮಹಮ್ಮದ್–ಬಿನ್–ತೊಘಲಕ್‌ನ(೧೩೨೫–೧೩೫೧) ಆಳ್ವಿಕೆಯಲ್ಲಿ ದಕ್ಷಿಣ ಭಾರತದ ಶಕ್ತಿ ಸಮತೋಲನವು ಇನ್ನಷ್ಟು ನಾಶವಾಯಿತು. ಒಂದು ಬಗೆಯ ಶೂನ್ಯತೆಯನ್ನು ಆವರಿಸಿತು. ದಕ್ಷಿಣ ಭಾರತಕ್ಕೆ ಅನ್ವಯಿಸಿದಂತೆ, ಖಿಲ್ಜಿ ಆಡಳಿತಕ್ಕೂ ತುಘಲಕ್ ಆಡಳಿತಕ್ಕೂ ನಡುವೆ ವ್ಯತ್ಯಾಸಗಳಿದ್ದವು. ಖಿಲ್ಜಿ ಅರಸೊತ್ತಿಗೆಯು ಹಾಲಿ ಇದ್ದ ರಾಜ್ಯಗಳನ್ನೇ ಅಧೀನ ರಾಜ್ಯಗಳನ್ನಾಗಿ ಮಾಡಿಕೊಂಡರೆ, ತುಘಲಕ್ ಆಡಳಿತವು ಇರುವ ದೇಶೀಯ ರಾಜ್ಯಗಳನ್ನು ನಾಶ ಮಾಡಿ ನೇರವಾಗಿ ತನ್ನ ನಿಯಂತ್ರಣದಲ್ಲಿರುವ ಆಡಳಿತ ವ್ಯವಸ್ಥೆಯನ್ನು ಕಟ್ಟಲು ಪ್ರಯತ್ನಿಸಿತು. ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ ವರ್ಗಾಯಿಸುವ ವಿಚಾರ ಬಂದದ್ದೇ ಈ ಹೊಸ ನೀತಿಯಿಂದ. ಇದರಿಂದಾಗಿ ಪ್ರಸ್ತುತ ಇದ್ದ ದೇಶೀಯ ರಾಜ್ಯಗಳು ಈ ಹೊಡೆತವನ್ನು ತಾಳಲಾರದೆ ತಮ್ಮ ಅಸ್ತಿತ್ವವನ್ನು ಕಳೆದು ಕೊಳ್ಳಲಾರಂಭಿಸಿದವು. ಹೊಯ್ಸಳ ೩ನೇ ವೀರಬಲ್ಲಾಳ ಮಾತ್ರ ಇದಕ್ಕೆ ಅಪವಾದ. ಆದರೂ ತುಘಲಕ್‌ನ ಆಡಳಿತ ವ್ಯವಸ್ಥೆಯು ದಕ್ಷಿಣದಲ್ಲಿ ರಾಜಕೀಯ ಸ್ಥಿರತೆಯನ್ನು ಮೂಡಿಸುವುದರಲ್ಲಿ ವಿಫಲವಾಯಿತು. ಅದಕ್ಕೆ ಬದಲಾಗಿ ತಕ್ಕಮಟ್ಟಿಗೆ ಇದ್ದ ಸ್ಥಿರತೆಯ ಜಾಗದಲ್ಲಿ ರಾಜಕೀಯ, ಶೂನ್ಯತೆ ಉಂಟಾಯಿತು. ಈ ತೆರವನ್ನು ತುಂಬಲು ಹಲವು ಬಗೆಯ ಸಾಹಸಿಗಳು, ಕ್ಷಯಿಸುತ್ತಿದ್ದ ರಾಜ್ಯಗಳು ಕೈತಪ್ಪಿ ಹೋದವರು ದಕ್ಷಿಣ ಭಾರತದಲ್ಲಿದ್ದರು.[೨]

ವಿಜಯನಗರ ಸ್ಥಾಪನೆಯ ಪೂರ್ವದಲ್ಲಿ ಕುಮ್ಮಟದುರ್ಗದ ಚರಿತ್ರೆಯು ಪ್ರಾದೇಶಿಕ ನೆಲೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಕಲ್ಯಾಣ ಚಾಲುಕ್ಯರ ಅವನತಿ ನಂತರ ಅವರ ಸಾಮ್ರಾಜ್ಯವು ಹೊಯ್ಸಳರು, ಸೇವುಣರು ಮತ್ತು ವಾರಂಗಲ್ಲಿನ ಕಾಕತೀಯರ ನಡುವೆ ಹಂಚಿಕೆಯಾಯಿತು. ಇದೇ ಸಂದರ್ಭದಲ್ಲಿ ಹೊಯ್ಸಳರು ಉತ್ತರದ ಕಡೆಯಿಂದ ದೇವಗಿರಿ ಸೇವುಣರ ದಾಳಿಯನ್ನು ಎದುರಿಸಬೇಕಾಗಿತ್ತು. ಹೊಯ್ಸಳ ಅರಸ ಮೂರನೇ ನರಸಿಂಹನಿಗೂ ಹಾಗೂ ರಾಮನಾಥನಿಗೂ ರಾಜ್ಯ ಹಂಚಿಕೆ ಸಂಬಂಧವಾಗಿ ಮೊದಲಿಂದಲೂ ಅಂತಃಕಲಹ ನಡೆಯುತ್ತಿತ್ತು. ಹೀಗಾಗಿ ಹೊಯ್ಸಳರು

ತಮ್ಮ ರಾಜ್ಯದ ಉತ್ತರ ಭಾಗದ ಗಡಿಗಳನ್ನು ಕಾಯ್ದುಕೊಳ್ಳುವಲ್ಲಿ ಅಸಮರ್ಥರಾದರು. ಈ ಘಟನೆಯು ಸೇವುಣರು ಹೊಯ್ಸಳರ ರಾಜ್ಯದೊಳಗೆ ನುಗ್ಗಲು ಅವಕಾಶವನ್ನು ಕಲ್ಪಿಸಿತು.[೩] ಈ ಅವಕಾಶವನ್ನು ಬಳಸಿಕೊಂಡು ಮುಮ್ಮಡಿ ಸಿಂಗೇಯ ನಾಯಕನು ಹಂಡೆಯ ಪರಿಸರದಲ್ಲಿದ್ದ ಕುಮ್ಮಟದುರ್ಗದಲ್ಲಿ ನೆಲೆಸಿ ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದನು. ಹೀಗೆ ಆಂತರಿಕವಾಗಿ ಹೊಯ್ಸಳರಿಗೂ ಹಾಗೂ ಸೇವುಣರಿಗೂ ರಾಜ್ಯ ವಿಸ್ತರಣೆಯಲ್ಲಿ ಪೈಪೋಟಿಯಿಂದ ಆಗಾಗ ಕದನಗಳು ನಡೆಯುತ್ತಿದ್ದವು. ಈ ಎರಡು ರಾಜ್ಯಗಳ ನಡುವೆ ಇದ್ದ ಕುಮ್ಮಟದ ಮುಮ್ಮಡಿ ಸಿಂಗೇಯನು ಸೇವುಣರ ರಾಜ್ಯ ವಿಸ್ತರಣೆಗೆ ಅಡ್ಡಿಯಾಗಿದ್ದನು.

ಕ್ರಿ.ಶ. ೧೨೮೦ರ ಹಿರೇಕೋಗಿಲೂರ್ ಶಾಸನದ ಪ್ರಕಾರ ಸೇವುಣರ ರಾಮಚಂದ್ರನ ಮಂತ್ರಿ ಮತ್ತು ರಾಯದಂಡನಾಥ ಚಾವುಂಡರಸನು ದೊರೆವಾಡಿಯಲ್ಲಿದ್ದ ಮುಮ್ಮಡಿ ಸಿಂಗಯನ ಮೇಲೆ ದಂಡೆತ್ತಿ ಬಂದನು. ಈ ಯುದ್ಧದಲ್ಲಿ ಸೇವುಣರು ಸೋಲನ್ನು ಅನುಭವಿಸಿದರು. ನಂತರ ೧೨೮೧ರಲ್ಲಿ ಹೊಯ್ಸಳ ರಾಜ್ಯದ ಬೆಮ್ಮತೂಕಕಲ್ಲಿನ(ಚಿತ್ರದುರ್ಗ) ಮೇಲೆ ದಾಳಿ ಮಾಡಿದನು. ಕ್ರಿ.ಶ. ೧೨೮೨–೮೩ರಲ್ಲಿ ಸೇವುಣ ಸೈನ್ಯ ಸಿಂಗೇಯನ ಆಡಳಿತ ಕೇಂದ್ರವಾದ ದೊರೆವಾಡಿಯ(ದರೋಜಿ, ಸಂಡೂರು) ಮೇಲೆ ದಾಳಿ ಮಾಡಿದನು. ಈ ಕದನದಲ್ಲಿ ಸೇವುಣರು ಸೋಲನ್ನು ಅನುಭವಿಸಿದರು. ನಂತರ ಮುಮ್ಮಡಿ ಸಿಂಗೇಯನು ತುಂಗಭದ್ರಾ ನದಿ ದಾಟಿ ಕುಮ್ಮಟದುರ್ಗವನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಕ್ರಿ.ಶ. ೧೨೮೨ರಲ್ಲಿ ಸೇವುಣರು ಕುಮ್ಮಟದ ಮೇಲೆ ದಾಳಿ ಮಾಡಿದರು. ಈ ಕದನದಲ್ಲಿ ಮುಮ್ಮಡಿ ಸಿಂಗೇಯನು ಸೋತು ಸೇವುಣರ ಸಾಮಂತ ಅರಸನಾಗಬೇಕಾಯಿತು. ಈ ಕಾರಣಕ್ಕಾಗಿ ಕುಮ್ಮಟದುರ್ಗದ ಅರಸ ಹೊಯ್ಸಳರ ವಿರುದ್ಧ ಹೋರಾಟ ಮಾಡಬೇಕಾಯಿತು.[೪] ಇವನ ನಂತರದಲ್ಲಿ ಕಂಪಿಲದೇವನು ಅಧಿಕಾರಕ್ಕೆ ಬಂದನು. ಇವನು ಸೇವುಣರ ಅರಸ ರಾಮಚಂದ್ರ ಮತ್ತು ಹೊಯ್ಸಳರ ಅರಸ ಮೂರನೇ ಬಲ್ಲಾಳನ ಸಮಕಾಲೀನನಾಗಿದ್ದನು. ಸೇವುಣರ ಸಾಮಂತನಾಗಿದ್ದರಿಂದ ಕಂಪಿಲನು ಅನಿವಾರ್ಯವಾಗಿ ಹೊಯ್ಸಳರ ವಿರುದ್ಧ ಹಲವು ಯುದ್ಧಗಳನ್ನು ಕೈಗೊಳ್ಳುವಂತಾಯಿತು. ಕ್ರಿ.ಶ. ೧೩೦೩ರ ಜೇನುಕಲ್ಲಿನ ಶಾಸನವು ಹೊಯ್ಸಳ ಮತ್ತು ಕುಮ್ಮಟದುರ್ಗದ ಅರಸನಾದ ಕಂಪಿಲ ನಡುವಿನ ಯುದ್ಧವನ್ನು ಉಲ್ಲೇಖಿಸುತ್ತವೆ. ಹೀಗೆ ಸೇವುಣರು, ಹೊಯ್ಸಳರು, ಕುಮ್ಮಟದುರ್ಗದ ಅರಸರ ನಡುವೆ ಆಂತರಿಕವಾದ ಕದನಗಳು ಮುಂದುವರಿದಿದ್ದವು. ಕ್ರಿ.ಶ. ೧೩೨೫ರಲ್ಲಿ ಮಹಮ್ಮದ್–ಬಿನ್–ತುಘಲಕನು ದೆಹಲಿಯ ಸುಲ್ತಾನನಾದ ನಂತರ ತನ್ನ ಸಹೋದರ ಅಳಿಯ ಬಹ–ಉದ್–ದ್ದೀನ್ ಗುಸ್ತಾಫ್(ಬಾದುರ್‌ಖಾನ್)ನನ್ನು ಗುಲ್ಬರ್ಗಾ ಪ್ರದೇಶದ ಸಗರನಾಡಿಗೆ ರಾಜ್ಯಪಾಲನನ್ನಾಗಿ ನೇಮಿಸಿದನೆಂದು ಕುಮಾರರಾಮನ ಸಾಂಗತ್ಯಗಳು ದೃಢೀಕರಿಸುತ್ತವೆ.[೫] ಹೀಗೆ ದಕ್ಷಿಣ ಭಾರತದಲ್ಲಿ ಹೊಯ್ಸಳ, ಸೇವುಣರ, ಕುಮ್ಮಟದುರ್ಗದ ಅರಸರ ನಡುವೆ ಅಧಿಕಾರ ಸ್ಥಾಪನೆಗಾಗಿ ಮತ್ತು ವೀಕ್ಷಣೆಗೆ ವೈಮನಸ್ಸುಗಳು ನಡೆಯುವ ಸಂದರ್ಭದಲ್ಲಿಯೇ ದೆಹಲಿಯಲ್ಲಿ ಗುರ್ಸಫ್ ಮತ್ತು ತುಘಲಕ್ ನಡುವೆ ಆಂತರಿಕ ಸಮಸ್ಯೆಗಳು ಉದ್ಭವಿಸಿದವು. ಈ ನಡುವಿನ

ನಂತರದ ರಾಜಕೀಯ ಚರಿತ್ರೆಯಲ್ಲಿ ತಾನು ಸಹ ದೆಹಲಿ ಸಿಂಹಾಸನಕ್ಕೆ ಹಕ್ಕುದಾರನೆಂದು ದಂಗೆ ಎದ್ದನು. ಈ ಘಟನೆಯಿಂದ ತುಘಲಕನು ಸಿಟ್ಟಿಗೆದ್ದು ಗುರ್ಸಘನನ್ನು ತನ್ನ ರಾಜ್ಯದಿಂದ ಗಡಿಪಾರು ಮಾಡಿದನು. ಈ ಒಂದು ಸನ್ನಿವೇಶದಿಂದ ಬಾದುರ್‌ಖಾನ್ ತನ್ನ ಸಂಸಾರ ಪರಿವಾರ ಸಮೇತ ಕಂಪಿಲದೇವನ ಆಶ್ರಯಕ್ಕೆ ಬಂದನು. ಕಂಪಿಲರಾಯನು ಬಾದುರ್‌ಖಾನಿಗೆ ರಾಜಾಶ್ರಯ ನೀಡಿ ಅವನಲ್ಲೇ ಇರುವಂತೆ ವ್ಯವಸ್ಥೆ ಮಾಡಿದನು. ಇದರಿಂದ ತುಘಲಕನು ಭಾರೀ ಸೈನ್ಯದೊಂದಿಗೆ ಆಕ್ರಮಣ ಮಾಡಿ ಇವನ ರಾಜ್ಯವನ್ನು ನಿರ್ನಾಮ ಮಾಡಿದನು.[೬]

ಹೀಗೆ ವಿಜಯನಗರ ಸ್ಥಾಪನೆ ಪೂರ್ವದಲ್ಲಿ ಉತ್ತರ ಹಾಗೂ ದಕ್ಷಿಣ ಭಾರತದಲ್ಲಿ ಆದಂತಹ ರಾಜಕೀಯ ಸ್ಥಿತ್ಯಂತರಗಳಿಗೆ ಅಥವಾ ರಾಜಕೀಯ ಸಂಘರ್ಷಗಳಿಗೆ ಧರ್ಮವು ಕಾರಣವಾಗಲಿಲ್ಲ. ಇದನ್ನು ಈ ಮೇಲಿನ ವಿವರಿಸಿದ ಘಟನೆಯಿಂದ ತಿಳಿಯಬಹುದು. ಈ ರೀತಿಯಾದಂತಹ ಚಾರಿತ್ರಿಕ ಘಟನಾವಳಿಗಳನ್ನು ಚರಿತ್ರೆ ವಿದ್ವಾಂಸರು ಮರೆಮಾಚಿ ಧಾರ್ಮಿಕ ಅಂಶವನ್ನು ಒತ್ತಿ ಹೇಳಿರುವುದನ್ನು ನಾವು ನೋಡುತ್ತೇವೆ.

ಜೈನ–ವೈಷ್ಣವ ನಡುವೆ ಧಾರ್ಮಿಕ ಘರ್ಷಣೆಗಳಿಂದ ಜೈನರ ಹಲವು ದೇವಾಲಯಗಳು ನಾಶವಾದವು. ಇದಕ್ಕೆ ಪ್ರತಿಯಾಗಿ ಜೈನರು ಸಹ ವೈಷ್ಣವ ದೇವಾಲಯಗಳನ್ನು ಹಾಳು ಮಾಡಿದರು. ಇದಕ್ಕೆ ಇಂದಿಗೂ ನಮ್ಮೆದುರಿಗಿರುವ ಭಗ್ನ ಸ್ಮಾರಕಗಳು ಸಾಕ್ಷಿಯಾಗಿವೆ.[೭] ಇನ್ನು ವಿಜಯನಗರ ಸ್ಥಾಪನೆ ಕುರಿತು ವಿದ್ಯಾರಣ್ಯರ ಬಗ್ಗೆ ವಿವಾದಗಳು ಕಂಡುಬರುತ್ತವೆ. ಇವರು ಕ್ರಿ.ಶ. ೧೩೭೭ರಿಂದ ೧೩೮೬ರವರೆಗೆ ಪೀಠಾಧಿಪತಿಗಳಾಗಿದ್ದರೆಂದು ಉಲ್ಲೇಖಗಳಿವೆ. ವಿಜಯನಗರದ ಅರಸರು ಶೃಂಗೇರಿ ಮಠಕ್ಕೆ ವಿಶೇಷ ಗೌರವ ಸ್ಥಾನವನ್ನು ಕೊಟ್ಟಿದ್ದರು ಎಂಬುದು ಶಾಸನಗಳಿಂದ ವ್ಯಕ್ತವಾಗುತ್ತದೆ.[೮] ವಿಜಯನಗರ ಸಾಮ್ರಾಜ್ಯದ ಎರಡನೆಯ ಅರಸನಾದ ಒಂದನೇ ಬುಕ್ಕನ ಹಲವು ಶಾಸನಗಳಲ್ಲಿ ವಿದ್ಯಾರಣ್ಯರ ಹೆಸರು ಕಂಡುಬರುತ್ತದೆ. ವಿದ್ಯಾರಣ್ಯರು ಕ್ರಿ.ಶ. ೧೩೬೮ರಲ್ಲಿ ವಿಜಯನಗರ ಸಾಮ್ರಾಜ್ಯದ ಮಂತ್ರಿಯಾಗಿದ್ದರು. ವಿಜಯನಗರದಲ್ಲಿ ಇವರು ಈ ವೇಳೆಗೆ ಪ್ರಾಮುಖ್ಯತೆ ಪಡೆಯಲು ಕಾರಣವೆಂದರೆ ಜೈನರ ಮತ್ತು ಶ್ರೀವೈಷ್ಣವರ ನಡುವೆ ಧಾರ್ಮಿಕ ಘರ್ಷಣೆಗಳು ನಡೆದಿರುವುದು. ಒಂದನೇ ಬುಕ್ಕರಾಯನಿಗೆ ರಾಜಕೀಯ ಹಿತದೃಷ್ಟಿಯಿಂದ, ಆಂತರಿಕ ಭದ್ರತೆಗೆ ಧರ್ಮಗುರುಗಳ ನೆರವು ಅವಶ್ಯಕವಾಗಿತ್ತು. ಇನ್ನೊಂದು ಪ್ರಮುಖ ಅಂಶವೆಂದರೆ ಒಂದನೇ ಬುಕ್ಕರಾಯ ಜೈನ ಹಾಗೂ ವೈಷ್ಣವರ ಸಮಸ್ಯೆಗಳಿಗೆ ಪರಿಹಾರ ನೀಡಿದರೂ ಸಹ, ಅದರ ತೀರ್ಪು ಜೈನರ ಪರವಾಗಿತ್ತು. ಇದು ಆಂತರಿಕವಾಗಿ ಶೈವ ಹಾಗೂ ವೈಷ್ಣವರ ನಡುವಿನ ಬಿಕ್ಕಟ್ಟುಗಳು ಅಥವಾ ಪೈಪೋಟಿಗಳು ಇದ್ದವೆಂದು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರಾರಂಭಿಕ ಹಂತದಲ್ಲಿ ಎಲ್ಲಾ ಧರ್ಮಗಳ ಸೌಹಾರ್ದತೆ ಸಾಮ್ರಾಜ್ಯಕ್ಕೆ ಅಗತ್ಯವಾಗಿತ್ತು.

ಕ್ರಿ.ಶ. ೧೩೮೪ರ ಇಮ್ಮಡಿ ಹರಿಹರನ ತಾಮ್ರಶಾಸನವು ಹರಿಹರನು ವಿದ್ಯಾರಣ್ಯರ ಆಶೀರ್ವಾದದಿಂದ ಹೊಣೆ ಹೊತ್ತಿದನು ಎನ್ನುವ ಅಂಶವನ್ನು ತಿಳಿಸುತ್ತದೆ.[೯] ಇದಕ್ಕೆ ಕಾರಣ ವಿದ್ಯಾರಣ್ಯರು ಇಮ್ಮಡಿ ಹರಿಹರನ ಕಾಲದಲ್ಲಿದ್ದು, ಶೃಂಗೇರಿ ಕಡತ ಉಲ್ಲೇಖಿಸುವಂತೆ ವಿದ್ಯಾರಣ್ಯರು ಕ್ರಿ.ಶ. ೧೩೮೬ರಲ್ಲಿ ಹಂಪಿಯಲ್ಲಿ ಮರಣವನ್ನು ಹೊಂದಿದ್ದರೆಂದು ಮಾತ್ರ ವಿವರಣೆ ನೀಡುತ್ತದೆ. ಕ್ರಿ.ಶ. ೧೩೮೬ರಲ್ಲಿ ವಿದ್ಯಾರಣ್ಯರು ಮರಣ ಹೊಂದಿದ ಸ್ಮರಣಾರ್ಥ ಶೃಂಗೇರಿ ಮಠಕ್ಕೆ ದತ್ತಿ ನೀಡಲಾಯಿತು.[೧೦] ಹೀಗಾಗಿ ಇಲ್ಲಿ ಹಿಂದೂ ರಾಜ್ಯ ರಕ್ಷಣೆಗೆ ರಾಜ್ಯ ಸ್ಥಾಪನೆ ಮಾಡಿದರೆಂದು ಯಾವುದೇ ಶಾಸನಗಳು ಕಂಡುಬರುವುದಿಲ್ಲ. ಕ್ರಿ.ಶ.೧೩೮೦ರ ಇಮ್ಮಡಿ ಹರಿಹರನ ಶೃಂಗೇರಿ ತಾಮ್ರಶಾಸನದಲ್ಲಿಯೂ ಈ ಕುರಿತು ಪ್ರಸ್ತಾಪವಿಲ್ಲ. ಅಲ್ಲದೇ ಮುಖ್ಯವಾಗಿ ಬುಕ್ಕರಾಯ ತಾನು ಅಧಿಕಾರಕ್ಕೆ ಬಂದ ನಂತರ ಧಾರ್ಮಿಕ ಬಿಕ್ಕಟ್ಟು ತಲೆದೋರಿದ್ದು ಜೈನ ಹಾಗೂ ವೈಷ್ಣವ ನಡುವೆ ಎಂಬುದನ್ನು ಗುರುತಿಸಬೇಕು. ಈ ಬಿಕ್ಕಟ್ಟು ಬಗೆಹರಿದ ನಂತರ ವಿದ್ಯಾರಣ್ಯರು ಬುಕ್ಕನ ಆಸ್ಥಾನದಲ್ಲಿ ಮಂತ್ರಿಯಾದರು. ಈ ರೀತಿ ಶ್ರವಣಬೆಳಗೊಳ ಶಾಸನವು ಸಂಗಮರ ಅಧಿಕಾರಾವಧಿಯಲ್ಲಿ ವಿಜಯನಗರದ ಪ್ರಾರಂಭಿಕ ಹಂತದಲ್ಲಿ ಆಂತರಿಕ ಬಿಕ್ಕಟ್ಟುಗಳು ಸಮಾಜದಲ್ಲಿ ಧಾರ್ಮಿಕ ವೈಷಮ್ಯಗಳಿಗೆ ಕಾರಣವಾಗಿತ್ತು ಎಂಬುದನ್ನು ತಿಳಿಸುತ್ತದೆ. ಹಾಗಾಗಿ ವಿಜಯನಗರ ಸಾಮ್ರಾಜ್ಯದ ಆಂತರಿಕ ಭದ್ರತೆಯ ಕಾರಣಗಳಿಗಾಗಿ ವಿದ್ಯಾರಣ್ಯರು ಈ ಸಂದರ್ಭಕ್ಕೆ ಅವಶ್ಯಕವಾಗಿ ಬೇಕಾಯಿತು ಎನ್ನಬಹುದು.

ಈ ಮೇಲಿನ ಎಲ್ಲಾ ವಿವರಣೆಗಳಿಂದಾಗಿ ವಿಜಯನಗರದಲ್ಲಿ ಕಂಡುಬರುತ್ತಿದ್ದ ಎಲ್ಲಾ ಧರ್ಮಗಳು ಪ್ರಭುತ್ವಕ್ಕೆ ಪ್ರಮುಖವಾಗಿದ್ದವು. ಶೈವ, ವೈಷ್ಣವ, ಜೈನ, ಶಾಕ್ತ ಪಂಥಗಳು ಪುರೋಹಿತಶಾಹಿ ಚೌಕಟ್ಟಿನಲ್ಲಿ ಬರುವ ಧರ್ಮಗಳು ಪ್ರಧಾನವಾಗಿದ್ದವು. ಉಳಿದ ಎಲ್ಲಾ ಧರ್ಮಗಳು ಸಹ ರಾಜಾಶ್ರಯಕ್ಕೆ ಒಳಪಟ್ಟಿದ್ದವು. ಅವುಗಳಲ್ಲಿ ಮುಸ್ಲಿಂ ಸಮುದಾಯಗಳು ಸಹ ಅರಸರ ರಾಜಾಶ್ರಯವನ್ನು ಪಡೆದಿದ್ದರು. ವಿಜಯನಗರದ ಅರಸರು ಆಂತರಿಕ ಭದ್ರತೆ ವಿಚಾರಗಳಿಗಾಗಿ ವಿದ್ಯಾರಣ್ಯ ಗುರುಗಳ ಮಾರ್ಗದರ್ಶನವನ್ನು ಪಡೆದರು. ಹೀಗೆ ವಿಜಯನಗರಪೂರ್ವ ಹಾಗೂ ಸ್ಥಾಪನೆಗೆ ಸಂಬಂಧಿಸಿದ ಎಲ್ಲಾ ರಾಜಕೀಯ ಸ್ಥಿತಿಗತಿಗಳನ್ನು ಗಮನಿಸಿದಾಗ ಒಂದು ದುರ್ಬಲ ರಾಜ್ಯವು ಇನ್ನೊಂದು ಪ್ರಬಲ ನಾಯಕನ ಆಕ್ರಮಣಕ್ಕೆ ದಾರಿ ಮಾಡಿಕೊಡುತ್ತಿತ್ತು. ದಕ್ಷಿಣ ಭಾರತದ ಮೇಲೆ ಉತ್ತರ ಭಾರತೀಯರು ನಡೆಸಿದ ದಾಳಿ ಆಂತರಿಕ ದುರ್ಬಲ ಪರಿಸ್ಥಿತಿಯಿಂದ ನಡೆದದ್ದಾಗಿದೆ. ದಕ್ಷಿಣದ ಮೇಲೆ ಮುಸ್ಲಿಮರ ದಂಡಯಾತ್ರೆ ಹಾಗೂ ಅವನನ್ನು ತಡೆಯಲು ಕುಮ್ಮಟದುರ್ಗದ ಕಂಪಿಲರಾಯ ನಡೆಸಿದ ವಿಫಲ ಪ್ರಯತ್ನಗಳ ದೃಷ್ಟಿಯಿಂದಲೂ ಕುಮಾರರಾಮನ ಸಾಂಗತ್ಯದ ಕೃತಿಯು ಮುಖ್ಯವಾಗಿವೆ. ಮುಸ್ಲಿಮರ ದಾಳಿಗೆ ಸಂಬಂಧಿಸಿದ ಅನೇಕ ದಾಖಲೆಗಳು ಆ ಕಾಲದ ಕೆಲವು ಕನ್ನಡ ಕಾವ್ಯಗಳಲ್ಲಿ ಪ್ರಸ್ತಾಪಿತವಾಗಿವೆ. ಅವುಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ.

'ದೇವಾಲಯಗಳನೊಡೆದು ಕೆಡಿಸಿದರು,
ದೇವರ ಶಿಸ್ತು ಧರಣೆಯ

ದೇವರ ಸತ್ಕರ್ಮಗಳ ಕೆಡಿಸಿದರು ಧ
ರಾವಳಿಯದೊಳು ದಾನವರು, ಎಂದು ವಿವರಣೆ ಇದೆ.[೧೧]

ಈ ಕಾವ್ಯವು ಯುದ್ಧದ ಪ್ರಸಂಗಗಳ ಬಗೆಗೆ ವಿವರಣೆಯನ್ನು ನೀಡುತ್ತಿದೆ. ಈ ಯುದ್ಧದ ಪ್ರಸಂಗಗಳು ಕೇವಲ ಪರಕೀಯರ ಜೊತೆಗೆ ನಡೆಯುತ್ತಿರಲಿಲ್ಲ. ಬದಲಾಗಿ ಒಳಗಿನ ಸಣ್ಣಪುಟ್ಟ ಪಾಳೆಯಗಾರರ ನಡುವೆಯೂ ನಡೆಯುತ್ತಿದ್ದವು. ವಿಜಯನಗರಪೂರ್ವದ ಆಳ್ವಿಕೆಯಲ್ಲಿ ಹುಲಿಯಾರ ಮಾರಭೂಪಾಲ ಎಂಬುವವನು ಬಲ್ಲಾಳನ ಸಾಮಂತನಾಗಿದ್ದನು. ಒಳಗಿನವರಾದ ನಮ್ಮಿಬ್ಬರ ಜಗಳ ಹೊರಗಿನವರಿಗೆ ಲಾಭವಾಗಬಾರದೆಂಬ ನೀತಿಯುಕ್ತ ಮಾತುಗಳು ಮುಂದಿನ ಸಾಲಿನಲ್ಲಿವೆ.

ಸುರಿತಾಳ ರಾಜಕಾರ್ಯಕ್ಕೆ ಸುತ್ತಣರಸು
ಳಿರ ಬೇಕೆನೆಗೆಂದು ನಿಮ್ಮ ಸರಿದಾಟದ
ಸ್ಲೆರಿಸಿದೆನ್ ಇಲ್ಲದೊಡೆ ಎಮ್ಮೆ
ನೆರಪತಿಗೆಣೆಯೇ ನಿಮ್ಮವರು

ಎನ್ನುವಲ್ಲಿ ಒಗ್ಗಟ್ಟಿನ ಮಂತ್ರವನ್ನು ಈ ಕಾವ್ಯ ಒಡಮೂಡಿಸುತ್ತಿದೆ. ವೀರರುದ್ರನ ವಿಕ್ರಮವನ್ನು ಮರೆಯದು. 'ಬಲ್ಲಾಳ ನೃಪನು ಧಾರುಣೆಯುಳಿದುಲರಿಯದು', 'ಸುರತಾಳದ ದಂಡು ಸುಳಿಯಲಮ್ಮದು' ಎಂಬಂತಹ ಮಾತುಗಳು ಆ ಕಾಲದ ರಾಜಕೀಯ ಪರವಾಗಿ ಐತಿಹಾಸಿಕ ಒತ್ತಡವನ್ನು ನಿರೂಪಿಸುತ್ತದೆ.[೧೨]

ಕ್ರಿ.ಶ. ೧೩–೧೪ನೇ ಶತಮಾನದಲ್ಲಿ ಮುಸ್ಲಿಮರು ದಕ್ಷಿಣ ಭಾರತದ ಮೇಲೆ ಆಕ್ರಮಣವೆಸಗಿದ ಕಾಲದ ಚಿತ್ರಣವನ್ನು ಇಲ್ಲಿ ವಿಮರ್ಶಿಸಬಹುದು. ಅದು ದಕ್ಷಿಣದಲ್ಲಿನ ದೇವಗಿರಿಯ ಯಾದವರು, ದ್ವಾರಸಮುದ್ರದ ಹೊಯ್ಸಳರು, ವಾರಂಗಲ್ಲಿನ ಕಾಕತೀಯರು ಎಲ್ಲರೂ ರಾಜ್ಯದ ಗಡಿಗಳ ವಿಚಾರದಲ್ಲಿ ಬಿಕ್ಕಟ್ಟುಗಳಿಗೆ ಒಳಪಟ್ಟ ಸಂದರ್ಭದಲ್ಲಿ ಕುಮ್ಮಟದುರ್ಗದ ಕುಮಾರರಾಮನು ತಾನು ಅಧಿಕಾರವನ್ನು ಪಡೆದುಕೊಂಡನು ಎಂಬ ಮಾಹಿತಿ ಈ ಪದ್ಯದಲ್ಲಿ ಸ್ಪಷ್ಟವಾಗಿದೆ.

ವಿಜಯನಗರವನ್ನಾಳಿದ ನಾಲ್ಕು ರಾಜವಂಶಗಳಾದ ಸಂಗಮ, ಸಾಳುವ, ತುಳುವ, ಅರವೀಡು ವಂಶಗಳು ವಿಜಯನಗರ ಸಾಮ್ರಾಜ್ಯವನ್ನು ನಾಲ್ಕು ಮನೆತನದ ಹೆಸರಿನಲ್ಲಿ ಆಳ್ವಿಕೆ ನಡೆಸಿದರು. ಪ್ರಮುಖವಾಗಿ ಇದರ ಆಳ್ವಿಕೆಯಲ್ಲಿ ರಾಜಕೀಯ–ಆರ್ಥಿಕ ಹಿತಾಸಕ್ತಿಗಳು ಭಿನ್ನ ಭಿನ್ನವಾಗಿದ್ದವು. ಮಧ್ಯಕಾಲೀನ ಚರಿತ್ರೆಯಲ್ಲಿ ವಿಜಯನಗರ ಹಾಗೂ ಬಹಮನಿ ಸಂಬಂಧಗಳನ್ನು ಗಮನಿಸಿದಾಗ ರಾಜಕೀಯ ಪೈಪೋಟಿಗಾಗಿ ಇವರ ನಡುವೆ ಘರ್ಷಣೆಗಳು ನಡೆಯುತ್ತಿದ್ದವು.[೧೩] ಕೃಷ್ಣ–ತುಂಗಭದ್ರಾ ನದಿಗಳ ಮಧ್ಯವಿರುವ ರಾಯಚೂರು ದೋ–ಆಬ್ ಪ್ರದೇಶವನ್ನು ವಶಪಡಿಸಿಕೊಳ್ಳಲು ಬಹಮನಿ–ವಿಜಯನಗರ ನಡುವೆ ನಿರಂತರವಾದಂತಹ ಘರ್ಷಣೆಗಳು ನಡೆದವು. ಈ ಪ್ರದೇಶದ ಮೇಲೆ ಆರ್ಥಿಕ ಪ್ರಾಬಲ್ಯವನ್ನು ಸಾಧಿಸುವುದು ಇವರ ಉದ್ದೇಶವಾಗಿತ್ತು.

ವಿಜಯನಗರ ಸಾಮ್ರಾಜ್ಯವು ವಿಸ್ತರಣೆಯಲ್ಲಿ ಸೈನ್ಯ ಬಲದಲ್ಲಿ ಹಾಗೂ ಸಂಪತ್ತಿನಲ್ಲಿ ಬಹಮನಿಗಿಂತ ಪ್ರಬಲವಾಗಿತ್ತು. ಆದರೂ ಸಹ ಅವರು ಬಹಮನಿಯಿಂದ ಸೋಲನ್ನು ಅನುಭವಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ತಮ್ಮ ಸಾಮ್ರಾಜ್ಯದ ಭದ್ರತೆ, ವಿಸ್ತರಣೆ ಹಾಗೂ ಬಹಮನಿ ಸೈನ್ಯಕ್ಕೆ ಸರಿಸಮಾನವಾದಂತಹ ಸೈನಿಕ ಶಕ್ತಿ ಅಗತ್ಯವಾಗಿತ್ತು. ಹಾಗಾಗಿ ಎರಡನೇ ದೇವರಾಯ(ಕ್ರಿ.ಶ. ೧೪೨೪–೧೪೪೬) ಮುಸ್ಲಿಂ ಸೈನ್ಯ ಪಡೆಯನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡನು.[೧೪] ವೆಂಕಟರಮಣಯ್ಯ ಎನ್. ತಿಳಿಸುವಂತೆ ಒಂದನೇ ದೇವರಾಯ(೧೪೦೬–೧೪೨೨)ನ ಆಳ್ವಿಕೆ ಕಾಲದಲ್ಲಿಯೇ ಮುಸ್ಲಿಂ ಸೈನಿಕ ವರ್ಗವಿತ್ತು.[೧೫]

ವಿಜಯನಗರದ ಅರಸರು ಆಂತರಿಕ ಭದ್ರತೆಯನ್ನು ಕೈಗೊಳ್ಳುವುದಲ್ಲದೆ, ಹೊರ ರಾಜ್ಯದ ಸುಲ್ತಾನರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಇವರು ಗುಜರಾತ್ ಮತ್ತು ಮಾಳ್ವದ ಮುಸ್ಲಿಂ ಸುಲ್ತಾನರ ಅರಸರೊಂದಿಗೆ ಸ್ನೇಹ ಸಂಬಂಧವನ್ನು ಹೊಂದಿದ್ದರು.[೧೬] ವಿಜಯನಗರದ ಅರಸರು ಬಹಮನಿ ರಾಜ್ಯದ ಜೊತೆ ಯುದ್ಧಗಳನ್ನು ಮಾಡುತ್ತಿದ್ದರೂ ಸಹ ಅವರ ಜೊತೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಒಂದನೇ ದೇವರಾಯನು ತನ್ನ ಮಗಳನ್ನು ಫಿರೋಜ್‌ಶಹನ ಮಗನೊಂದಿಗೆ ವಿವಾಹ ಮಾಡಿದನು.[೧೭] ಕೃಷ್ಣದೇವರಾಯನು ಗುಲ್ಬರ್ಗಾದಲ್ಲಿ ಬಂಧನದಲ್ಲಿದ್ದ ಎರಡನೇ ಮಹಮ್ಮದ್ ಶಹನನ್ನು ಬಿಡುಗಡೆ ಮಾಡಿ ಸಿಂಹಾಸನದ ಮೇಲೆ ಕೂಡಿಸಿದನು. ಬುಸಾತಿನೇ ಸಲಾತಿನ ಗ್ರಂಥದಲ್ಲಿ ಮಹಮ್ಮದ್ ಇಬ್ರಾಹಿಮ್ ಜುಬೇರ್ ಉಲ್ಲೇಖಿಸಿದಂತೆ, 'ರಾಮರಾಯ ಮತ್ತು ಅಲಿ ಆದಿಲ್‌ಶಾಹಿ ಅವರ ನಡುವೆ ಸಹೋದರತೆಯ ಸಂಬಂಧವಿತ್ತು. ರಾಮರಾಯನ ಮಗ ತೀರಿಕೊಂಡ ಸಂದರ್ಭದಲ್ಲಿ ಅಲಿ ಆದಿಲ್‌ಶಾಹಿ ಸಾಂತ್ವನ ಹೇಳಲು ಸ್ವತಃ ವಿಜಯನಗರಕ್ಕೆ ಭೇಟಿ ನೀಡಿದ್ದನು. ಅಲಿ ಆದಿಲ್‌ಶಾಹಿ ರಾಮರಾಯನ ತಾಯಿ ಯನ್ನು ತನ್ನ ತಾಯಿಯಂತೆ ಗೌರವಿಸುತ್ತಿದ್ದನು. ರಾಮರಾಯನ ತಾಯಿ ತನ್ನ ಮಗನೆಂದು ಹೇಳಿಕೊಳ್ಳುತ್ತಿದ್ದಳು.[೧೮] ದಖ್ಖನಿನ ೫ ಶಾಹಿರಾಜ್ಯಗಳಾದ ವಿಜಾಪುರ, ಅಹಮದ್‌ನಗರ, ಬೀದರ್, ಬರೀರ್‌ಶಾಹಿ, ಗೋಲ್ಕಂಡದ ಸುಲ್ತಾನರ ನಡುವೆ ಯುದ್ಧಗಳು ನಡೆಯುತ್ತಿದ್ದವು. ಇವರಲ್ಲಿ ಒಬ್ಬರು ತಪ್ಪಿದರೆ ಮತ್ತೊಬ್ಬರು ರಾಮರಾಯನ ನೆರವನ್ನು ಕೇಳುತ್ತಿದ್ದರು. ಕ್ರಿ.ಶ. ೧೫೫೭ರಲ್ಲಿ ಗೋಲ್ಕಂಡದ ಸುಲ್ತಾನ ಇಬ್ರಾಹಿಂ ಕುತುಬ್‌ಷನೊಂದಿಗೆ ಸೇರಿ ಒಪ್ಪಂದ ಮಾಡಿಕೊಂಡನು. ಅಹಮದ್ ನಗರದ ಹುಸೇನ್ ನಿಜಾಂಷನು ವಿಜಾಪುರ ರಾಜ್ಯದ ಮೇಲೆ ದಂಡೆತ್ತಿ ಗುಲ್ಬರ್ಗಾ ಕೋಟೆ(ಕಲಬುರ್ಗಿ) ಮುತ್ತಿದನು. ಗುಲ್ಬರ್ಗದ ಇಬ್ರಾಹಿಂ ಆದಿಲ್‌ಶಾಹಿ ರಾಮರಾಯನ ನೆರವನ್ನು ಕೇಳಿದನು. ಈ ರೀತಿಯ ಯುದ್ಧಗಳನ್ನು ನಿಲ್ಲಿಸಲು ರಾಮರಾಯನು ಒಂದು ಪತ್ರ ಬರೆದು ಯುದ್ಧದಿಂದ ಸಂಧಿ ಮಾಡಿ ಸ್ನೇಹದಿಂದ ಇರುವಂತೆ ಇಬ್ರಾಹಿಂ ಮತ್ತು ಕುತುಬ್‌ಶಾಹಿಗಳಿಗೆ ಕಳಿಸಿದನು. ಇಬ್ರಾಹಿಂ ಕುತುಬ್‌ಷಾ ರಾಮರಾಯನ ಸ್ನೇಹಿತನಾಗಿದ್ದನು. ಕುತುಬ್‌ಷ ವಿಜಯನಗರಕ್ಕೆ ಬಂದು ರಾಮರಾಯನಲ್ಲಿ ಶರಣಾದನು. ರಾಮರಾಯನು ಆತನನ್ನು ಸ್ವಾಗತಿಸಿ ಆತನ ಅಂತಸ್ತಿಗೆ ತಕ್ಕಂತೆ ಸತ್ಕರಿಸಿ ಆತನ ವೆಚ್ಚಕ್ಕೆ ಬೇಕಾದ ಹಣವನ್ನು

ಮಾಸಿಕವಾಗಿ ನೀಡಿ ಸಲುಹಿದನು.[೧೯] ಹೀಗೆ ರಾಮರಾಯ ಶಾಹಿ ರಾಜ್ಯಗಳೊಂದಿಗೆ ಉತ್ತಮ ಸಂಬಂಧ ಹೊಂದಿದ್ದನು.

ಈ ಮೇಲಿನ ಅರಸಕೇಂದ್ರಿತವಾದ ಘಟನೆಗಳಿಂದಾಗಿ ಅವರ ರಾಜಕೀಯ, ಸಾಮಾಜಿಕ, ಆರ್ಥಿಕವಾದಂತಹ ಧೋರಣೆಗಳನ್ನು ತಿಳಿದುಕೊಳ್ಳಬಹುದು. ವಿಜಯನಗರವು ಸ್ಥಾಪನೆಯಾದದ್ದು ಕೇವಲ ಹಿಂದೂ ಧರ್ಮವನ್ನು ರಕ್ಷಿಸುವುದಕ್ಕಾಗಿ ಅಲ್ಲ ಎಂಬ ಅಂಶ ಇದರಿಂದ ತಿಳಿಯುತ್ತದೆ. ಆದರೆ ಹಿಂದೂ ಧರ್ಮದ ವಿವಿಧ ಪಂಥ-ಪಂಗಡಗಳು ಸಹಜವಾಗಿಯೇ ಅನುಸರಿಸುವವರ ಸಂಖ್ಯಾಬಲದಿಂದಾಗಿ ಹೆಚ್ಚಿನ ಸವಲತ್ತುಗಳನ್ನು ಪಡೆದುದೇನೋ ನಿಜ. ಆದರೆ ಇತರ ಧರ್ಮಗಳ ಹಿತವನ್ನು ಬಲಿಗೊಟ್ಟು ಅದಕ್ಕೆ ಹೆಚ್ಚಿನ ಒಲವು ತೋರಿಸಲಿಲ್ಲ. ಹಾಗಾಗಿ ಖಿಲ್ಜಿ ಮತ್ತು ತುಘಲಕ್ ಆಡಳಿತಗಳು ದಕ್ಷಿಣದಲ್ಲಿ ವಿಸ್ತರಣಗೊಂಡದ್ದಕ್ಕೆ ಪ್ರೇರಣೆ ರಾಜಕೀಯ ಮತ್ತು ಆರ್ಥಿಕ ಕಾರಣಗಳೇ ಹೊರತು ಧರ್ಮವಲ್ಲ ಎಂದು ಸ್ಪಷ್ಟವಾಗುತ್ತದೆ.

೩.೧.೨ ಬಹಮನಿ ಮತ್ತು ಶಾಹಿ ರಾಜ್ಯಗಳೊಂದಿಗೆ ಸಂಬಂಧಗಳು

ಬಹಮನಿ ರಾಜ್ಯದೊಂದಿಗಿನ ಸಂಬಂಧ

ವಿಜಯನಗರ ಹಾಗೂ ಬಹಮನಿ ರಾಜ್ಯಗಳು ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಸೌಹಾರ್ದತೆಯ ಸಂಬಂಧಗಳನ್ನು ಹೊಂದಿದ್ದರು. ಇವರ ನಡುವೆ ಕಾಲಕಾಲಕ್ಕೆ ಬದಲಾದ ಸಂದರ್ಭಗಳಿಗೆ ತಕ್ಕಂತೆ ರಾಜತಾಂತ್ರಿಕವಾದಂತಹ ಒಪ್ಪಂದಗಳು, ಸಹೋದರತ್ವ, ವೈರತ್ವದ ಯುದ್ಧಗಳು ನಡೆಯುತ್ತಿದ್ದವು.

ಮೊದಲನೆಯ ಸುಲ್ತಾನ ಅಲ್ಲಾವುದ್ದೀನ್ ಗುಲ್ಬರ್ಗಾದಲ್ಲಿ ರಾಜ್ಯಭಾರ ಮಾಡುವ ಸಮಯದಲ್ಲಿ ವಿಜಯನಗರದಲ್ಲಿ ಮೊದಲನೇ ಹರಿಹರನು ರಾಜ್ಯವಾಳುತ್ತಿದ್ದನು. ಮಹಮ್ಮದ ಬಿನ್ ತುಘಲಕ್‌ನು ಗೆದ್ದುಕೊಂಡಿದ್ದ ತನ್ನ ರಾಜ್ಯವನ್ನು ಮರಳಿ ಸಂಪಾದಿಸಲು ಹರಿಹರನು ಮಲಪ್ರಭಾ ನದಿಯ ಉತ್ತರಕ್ಕೆ ಇರುವ ಕಲಡಗಿ ಜಿಲ್ಲೆಯವರೆಗೂ ಅರಸನಾದನು. ಮೊದಲನೇ ಬುಕ್ಕನ ಆಳ್ವಿಕೆಯಲ್ಲಿ ಕೃಷ್ಣಾ ನದಿಯ ದಕ್ಷಿಣಕ್ಕೆ ಬಹು ಭಾಗವು ಕೆನರಾ ಕರಾವಳಿಯೊಂದಿಗೆ ವಿಜಯನಗರದ ಆಳ್ವಿಕೆಯಡಿಯಲ್ಲಿ ಬಂದಿತು. ಸುಲ್ತಾನ್ ಮಹಮ್ಮದ ಷಾನು ಒಂದು ಗಾಯಕ ತಂಡದ ಕಾರ್ಯಕ್ರಮವನ್ನು ಆಲಿಸಿ ಸಂತುಷ್ಟನಾಗಿ, ಗಾಯಕ ತಂಡವರಿಗೆ "ವಿಜಯನಗರದ ರಾಯನ ಕೋಶದ ಮೇಲೆ ಒಂದು ಹುಂಡಿಯನ್ನು ಪ್ರೋತ್ಸಾಹಕವಾಗಿ ನೀಡಿದನು" ಇದು ಉದ್ದೇಶಪೂರ್ವಕವಾಗಿ ಬುಕ್ಕನಿಗೆ ಮಾಡಿದ ಅಪಮಾನವಾಗಿತ್ತು.[೨೦]

ಸಂಗಮ ಮನೆತನದ ಆರಂಭದ ವಿಜಯನಗರ ಅರಸರು ಗುಲ್ಬರ್ಗಾದ ಬಹಮನಿಯ ಮುಸ್ಲಿಂ ರಾಜರೊಂದಿಗೆ ಸತತ ಸಂಘರ್ಷದಲ್ಲಿ ತೊಡಗಿದ್ದರು. ಈ ಬಹಮನಿ ಸಂಸ್ಥಾನವನ್ನು ಸಹ ಕ್ರಿ.ಶ. ೧೩೪೭ರ ಅವಧಿಯಲ್ಲೇ ಸ್ಥಾಪಿಸಲಾಗಿತ್ತು. ಇದು ವಿಜಯನಗರಕ್ಕೆ ಅಂಟಿಕೊಂಡಂತೆ ಇದ್ದುದರಿಂದ ಅಲ್ಲಿಂದ ಸಾಕಷ್ಟು ಕಿರುಕುಳವನ್ನು ವಿಜಯನಗರ ಎದುರಿಸಬೇಕಾಗಿತ್ತು. ವಿಜಯನಗರದ

ಒಟ್ಟು ೧೪ ಅರಸರು ಹಾಗೂ ಬಹಮನಿಯ ಒಟ್ಟು ೧೩ ಸುಲ್ತಾನರ ನಡುವೆ ವಿವಿಧ ಕಾಲಘಟ್ಟದಲ್ಲಿ ಸುಮಾರು ೧೩೦ ವರ್ಷಗಳ ಅವಧಿಯಲ್ಲಿ ೧೧ ಯುದ್ಧಗಳು ನಡೆದವು. ಇದು ಎರಡೂ ರಾಜ್ಯಗಳ ನಡುವೆ ಇದ್ದ ಸಂಘರ್ಷ ಹಾಗೂ ದ್ವೇಷವನ್ನು ತೋರುತ್ತದೆ. ಒಂದು ಕಡೆ ಮುಸ್ಲಿಂ ಆಕ್ರಮಣಕಾರರು ವಿಜಯನಗರವನ್ನು ಲೂಟಿ ಮಾಡಲು ಯತ್ನಿಸುತ್ತಿದ್ದರೆ, ಮತ್ತೊಂದು ಕಡೆ ಅವರ ದಾಳಿ ತಡೆದು, ಹಿಂದೂ ಸಾಮ್ರಾಜ್ಯವನ್ನು ರಕ್ಷಿಸಲು ವಿಜಯನಗರದ ಅರಸರು ಶ್ರಮಿಸುತ್ತಿದ್ದರು. ಕೆಲವು ವೇಳೆ ಬಹಮನಿ ಸುಲ್ತಾನರು ವಿಜಯನಗರದ ಅರಸರನ್ನು ಸೋಲಿಸಿದರೂ ಅದನ್ನು ಸಂಪೂರ್ಣವಾಗಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳುವುದು ಇರಲಿ, ಅದರ ರಾಜಧಾನಿಯನ್ನು ಮುಟ್ಟಲಾಗಲಿಲ್ಲ.[೨೧]

ಬಹಮನಿ ಮತ್ತು ವಿಜಯನಗರಕ್ಕೂ ಘರ್ಷಣೆಯಾಗಲು ಮುಖ್ಯ ಕಾರಣ ಇವರೀರ್ವರ ಮಧ್ಯೆ ಕಂಡುಬರುವ ರಾಯಚೂರು ದೋ-ಆಬ್ ಪ್ರದೇಶ ಅನೇಕ ಕದನಗಳಿಗೆ ತಾಣವಾಯಿತು. ಇದನ್ನು ತಮ್ಮ ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಹಂಬಲ ಎರಡೂ ಮನೆತನಗಳಿಗಿದ್ದಿತು. ಹಾಗಾಗಿ ಎರಡು ರಾಜ್ಯಗಳು ಇವುಗಳನ್ನು ಪಡೆಯುವ ವಿಷಯದಲ್ಲಿ ಮಧ್ಯೆ ವಿರಸವುಂಟಾಯಿತು. ಆ ಸಂದರ್ಭದಲ್ಲಿ ರಾಯಚೂರು ಮತ್ತು ಮುದಗಲ್ ಕೋಟೆಗಳು ಪ್ರತಿಷ್ಠೆಯ ಸಂಕೇತವಾಗಿದ್ದವು. ಮೊದಮೊದಲು ಮುದಗಲ್ ವಿಜಯನಗರದ ಪ್ರದೇಶದ ವ್ಯಾಪ್ತಿಗೆ ಸೇರಿದ್ದರೂ, ಬಹಮನಿ ಅರಸರ ಅಧೀನದಲ್ಲಿದ್ದಿತು. ಈ ಸಂದರ್ಭದಲ್ಲಿ ಬಹಮನಿ ಮತ್ತು ವಿಜಯನಗರದ ಅರಸನ ಬೊಕ್ಕಸದಿಂದ ಹಣ ಪಡೆಯಲು ೩೦೦ ಲಕ್ಷ ಸಂಗೀತಗಾರರಿಗೆ ಪತ್ರ ನೀಡಿದನು. ಆಗ ವಿಜಯನಗರ ಅರಸ ಒಂದನೇ ಬುಕ್ಕ ಕ್ರಿ.ಶ. ೧೩೫೬-೧೩೫೭ರಲ್ಲಿ ಅವಮಾನವಾಗಿ ಬಹಮನಿಯ ಮೇಲೆ ಕ್ರಿ.ಶ. ೧೩೬೬-೬೭ರಲ್ಲಿ ದಾಳಿ ಮಾಡಿದನು. ಇದು ನಂತರ ಮುದಗಲ್ ಬುಕ್ಕನ ವಶವಾಯಿತು. ಈ ಯುದ್ಧವು ಬಹಮನಿ ಸೈನ್ಯಕ್ಕೆ ಅಪಾರ ಹಾನಿಯನ್ನುಂಟು ಮಾಡಿತು. ಇದರಿಂದ ಬಹಮನಿ ಮಹಮ್ಮದ್ ಷಾಹನಿಗೆ ವಿಜಯನಗರದ ಮೇಲೆ ದ್ವೇಷ ಅಸೂಯೆವುಂಟಾಯಿತು. ಈ ಸೇಡನ್ನು ತೀರಿಸಿಕೊಳ್ಳಲು ಕ್ರಿ.ಶ. ೧೩೬೬-೬೭ರಲ್ಲಿ ವಿಜಯನಗರದ ಮೇಲೆ ದಾಳಿ ಮಾಡಿ ಮುದಗಲ್ ಮತ್ತು ಅದವಾನಿಯ ಹತ್ತಿರ ವಿಜಯನಗರದ ಸೈನ್ಯವನ್ನು ಜಯಿಸಿದನು. ಫೆರಿಸ್ತಾನ ಪ್ರಕಾರ ಈ ಯುದ್ದದಲ್ಲಿ ಗಂಡಸರು, ಹೆಂಗಸರು ಮಕ್ಕಳು ಹೀಗೆ ಸುಮಾರು ಐದು ಲಕ್ಷ ಹಿಂದೂಗಳು ಬಲಿಯಾದರು.[೨೨]

ಗುಲ್ಬರ್ಗಾದಲ್ಲಿ ಬಹಮನಿ ರಾಜ್ಯ ಉದಯವಾದರೂ ಅದು ಈ ಪ್ರಾಂತ್ಯದ ಜನರಿಗೆ ಪರಕೀಯವಾಗಿತ್ತು. ಆದರೆ ಕೆಲ ಕಾಲವಾದರೂ ಸ್ಥಿರವಾಗಿ ನಿಲ್ಲುವಂತೆ ಅದು ಕಂಡಿತು. ತುಂಗಭದ್ರಾ ನದಿಯ ಈಚೆಗೆ ವಿಜಯನಗರ ಸಾಮ್ರಾಜ್ಯವು ಆಗ ಉದಯವಾಗಿತ್ತು. ಬಹಮನಿ ಅರಸರಿಗೂ ಮತ್ತು ವಿಜಯನಗದ ಅರಸರಿಗೂ ಘರ್ಷಣೆ ನಡೆಯುತ್ತಿತ್ತು. ಇವೆರಡು ಪಡೆಗಳು ತಾವು ಆಕ್ರಮಿಸಿದ ಭಾಗವನ್ನೆಲ್ಲ ಕೊಳ್ಳೆಹೊಡೆಯುತ್ತ ಸೂರೆ ಮಾಡುತ್ತ ಇಲ್ಲಿನ ಪ್ರದೇಶಗಳ ಜೀವನಕ್ಕೆ

ಘೋರ ಹಿಂಸೆಯನ್ನು ಉಂಟುಮಾಡಿದವು. ಇಷ್ಟೆಲ್ಲಕ್ಕೆ ಕಾರ್ಯಕ್ಷೇತ್ರವಾದುದು ಈಗಿನ ಹೈದರಾಬಾದ್ ಕರ್ನಾಟಕ ಭಾಗ. ಈ ಕಥೆ ಒಂದೇ ವಿಧವಾಗಿ ಜರುಗಿದುದು. ಸುಮಾರು ೨೫೦ ವರ್ಷಗಳವರೆಗೆ ಈ ಯುದ್ಧಗಳಿಗೆ ಜನಸಮುದಾಯ ತತ್ತರಿಸಿ ಹೋಗಿತ್ತು. ಯುದ್ದಗಳ ನೆರಳಲ್ಲಿ ಬದುಕುವಂತಾಗಿತ್ತು. ಇದೇ ಸಂದರ್ಭದಲ್ಲಿಯೇ ನೂರಾರು ಜನ ಸೂಫಿಗಳು, ಅನುಭಾವಿಗಳು, ದಾಸರು ಕಾಣಿಸಿಕೊಂಡರು. ವಿಜಾಪುರದ ಆದಿಲ್‌ಷಾಹಿಗಳು ಈ ಪ್ರಾಂತದಲ್ಲಿ ಸಾಮರಸ್ಯವನ್ನು ಉಂಟುಮಾಡಲು ಆರಂಭಿಸಿದರು. ಭಿನ್ನ ಮತ ಧರ್ಮೀಯರು ಸಂಘರ್ಷಗಳ ನಡುವೆ ಕೂಡಿ ಬಾಳಿ ಸಂತರು ಸಾಮರಸ್ಯ ಪರಿಸರ ನಿರ್ಮಾಣ ಮಾಡಿದರು.[೨೩] ಕ್ರಿ.ಶ. ೧೩೭೫–೭೬ರಲ್ಲಿ ಬುಕ್ಕನು ೨೦೦೦ ಸೈನ್ಯದೊಂದಿಗೆ ದೋ-ಅಬ್ ಪ್ರದೇಶದ ಮೇಲೆ ದಾಳಿ ಮಾಡಿದನು. ಆಗ ಬಹಮನಿ ಸುಲ್ತಾನ ಬುಕ್ಕನೊಂದಿಗೆ ಒಪ್ಪಂದ ಮಾಡಿಕೊಂಡನು. ಆ ಒಪ್ಪಂದದ ಪ್ರಕಾರವಾಗಿ ಬುಕ್ಕನು ಈ ಪ್ರದೇಶಕ್ಕೆ ಒಡೆಯನಾದನು.[೨೪] ಆದರೆ ನಿಜವಾದ ಕಾರಣ ರಾಯಚೂರು ದೋಅಬ್(ನದೀ ಮಧ್ಯ ಪ್ರದೇಶ) ಹಾಗೂ ಕೃಷ್ಣಾ ನದಿಯ ಉತ್ತರದ ತೆಲಂಗಾಣ ಪ್ರದೇಶಗಳನ್ನು ವಶಪಡಿಸಿಕೊಳ್ಳಬೇಕೆಂಬ ಬಹಮನಿ ಸುಲ್ತಾನರ ಆಸೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಈ ಎರಡೂ ರಾಜ್ಯಗಳ ನಡುವೆ ಘರ್ಷಣೆಗಳು ನಡೆದವು.[೨೫]

ಚರಿತ್ರಕಾರನಾದ ಫೆರಿಸ್ತಾನು ಕ್ರಿ.ಶ. ೧೪೧೯ರಲ್ಲಿ ಫಿರೋಜ್ ಷಾನ ಮೇಲೆ ಮೊದಲನೇ ದೇವರಾಯನ ವಿಜಯವನ್ನು ಎಷ್ಟು ತೀವ್ರವಾಗಿ ವರ್ಣಿಸಿದ್ದನೋ ಅಷ್ಟೇ ತೀವ್ರವಾಗಿ ಅಹ್ಮದ್ ಷಾನು ವಿಜಯನಗರ ರಾಜ್ಯವನ್ನು ಕೊಳ್ಳೆ ಹೊಡೆದುದನ್ನು ತನ್ನ ಬರಹಗಳಲ್ಲಿ ವರ್ಣಿಸಿದ್ದಾನೆ. ಯುದ್ಧದಲ್ಲಿ ಗೆದ್ದವರು ಮಹಮ್ಮದೀಯರೇ ಆಗಿರಲಿ ಅಥವಾ ಹಿಂದೂಗಳೇ ಆಗಿರಲಿ, ವಿಜೇತ ಸೈನ್ಯವು ಮಾಡುತ್ತಿದ್ದ ವಿಧ್ವಂಸಕ ಕೃತ್ಯಗಳನ್ನು ಫೆರಿಸ್ತಾನು ಒಂದು ನಿರ್ದಿಷ್ಟ ಶೈಲಿಯಲ್ಲಿ ತನ್ನ ಬರವಣಿಗೆಯಲ್ಲಿ ವರ್ಣಿಸಿದ್ದಾನೆ.

ಈ ರೀತಿಯಾಗಿ ಯುದ್ಧವು ಅಹ್ಮದ್ ಷಾನ ಸಂಪೂರ್ಣ ವಿಜಯದಿಂದ ಕೊನೆಗೊಳ್ಳಲಿಲ್ಲ ಎಂದು ದಕ್ಷಿಣ ಕನ್ನಡ ಜಿಲ್ಲೆಯ ೧೪೩೦ರ ಒಂದು ಶಾಸನವು ಸ್ಪಷ್ಟಪಡಿಸುತ್ತದೆ. ಇಮ್ಮಡಿ ದೇವರಾಯನು ಆ ಸಮಯದಲ್ಲಿ ಭಾರಿಯಾದ ಹಾಗೂ ಬಲಿಷ್ಠವಾದ ತುರುಷ್ಕ ಅಶ್ವದಳವನ್ನು ಸೋಲಿಸಿದುದನ್ನು ಸಹ ಈ ಶಾಸನವು ಹೇಳುತ್ತದೆ.

ಇಮ್ಮಡಿ ದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ವೈಭವೋಪೇತವಾದ ಅವಧಿಯಾಗಿತ್ತು. ಇಮ್ಮಡಿ ದೇವರಾಯನು ಅನೇಕ ಯುದ್ಧಕಲೆಗಳಲ್ಲಿ ಪಳಗಿದವನಾಗಿದ್ದನು. ಇಮ್ಮಡಿ ದೇವರಾಯನು ಅಧಿಕಾರ ವಹಿಸಿಕೊಂಡ ಸಮಯದಲ್ಲಿ ಸಾಮ್ರಾಜ್ಯದ ರಾಜಕೀಯ ಸ್ಥಿತಿ ಅಷ್ಟೊಂದು ಸುಗಮವಾಗಿರಲಿಲ್ಲ. ಮಹಮ್ಮದೀಯರಿಂದ ವಿಜಯನಗರದ ಪ್ರದೇಶಗಳ ಮೇಲೆ ನಿರಂತರವಾಗಿ ದಾಳಿಗಳಾಗುತ್ತಲೇ ಇದ್ದವು. ಮತ್ತೊಂದು ಆಂಧ್ರದ ರಾಜಕೀಯ ಸ್ಥಿತಿ ಅಲ್ಲೋಲ- ಕಲ್ಲೋಲಗೊಂಡ ರೆಡ್ಡಿ ಮನೆತನಗಳು ಪರಸ್ಪರ ಒಳಜಗಳಗಳಲ್ಲಿ ನಿರತರಾಗಿದ್ದವು. ಸಹಜವಾಗಿಯೇ ಈ ಸಮಯದಲ್ಲಿ ಇಲ್ಲಿ ಬಹಮನಿಯ ಹಸ್ತಕ್ಷೇಪ ಉಂಟಾಯಿತು. ವಿಜಯನಗರದ ಬಹುಭಾಗಗಳನ್ನು ಕೊಂಡವೀಡಿನ

ರೆಡ್ಡಿ ದೊರೆಯು ಮುಸ್ಲಿಮರೊಂದಿಗೆ ಕೂಡಿಕೊಂಡನಲ್ಲದೇ ರಾಯನ ಸಾಮಂತರನ್ನು ಸೋಲಿಸುತ್ತಲೇ ಇದ್ದನು. ಇಂತಹ ಕ್ಲಿಷ್ಟ ಸಮಯದಲ್ಲಿ ವಿಜಯನಗರದ ಅರಸನಾದ ದೇವರಾಯನು ಸೈನ್ಯ ಹಾಗೂ ಆಡಳಿತದಲ್ಲಿ ಸಾಕಷ್ಟು ಅನುಭವ ಹೊಂದಿದ್ದನು. ತಂದೆಗೆ ಸಹಾಯಕನಾಗಿ ಕ್ರಿ.ಶ. ೧೪೨೬ರವರೆಗೆ ಸೇವೆ ಸಲ್ಲಿಸಿದನು. ಬಹಮನಿ ಸುಲ್ತಾನರು ಹಾಗೂ ಬೇಡರ ದಂಗೆಗಳನ್ನು ಸಮರ್ಥವಾಗಿ ಎದುರಿಸಿ ಯಶಸ್ವಿಯಾದನು.

ವಿಜಯನಗರದ ಅರಸರು ಯುದ್ಧ ಕೈಗೊಳ್ಳುವ ಮುನ್ನ ರಾಜ್ಯ ಮತ್ತು ಸೈನ್ಯದಲ್ಲಿ ಸುಧಾರಣೆಗಳನ್ನು ಕೈಗೊಂಡ ಅಂಶ ವ್ಯಕ್ತವಾಗುತ್ತದೆ. ಫೆರಿಸ್ತಾನ ಪ್ರಕಾರ ಕ್ರಿ.ಶ. ೧೪೪೨ರ ಅವಧಿಯಲ್ಲಿ ಎರಡನೇ ದೇವರಾಯನು ತನ್ನ ಸೈನ್ಯದ ನ್ಯೂನತೆಗಳನ್ನು ಸರಿಪಡಿಸಲು ಯತ್ನಿಸಿದ್ದನು. ಅದರಂತೆ ಮುಸ್ಲಿಂ ಯೋಧರನ್ನು ಸೇನೆಯಲ್ಲಿ ಸೇರಿಸಿಕೊಳ್ಳುವ ಮತ್ತು ಅಶ್ವಗಳನ್ನು ಆಮದು ಮಾಡಿಕೊಳ್ಳುವ ಪ್ರಯತ್ನ ನಡೆಸಿದ ಅಂಶ ಆಕರಗಳಿಂದ ತಿಳಿದುಬರುತ್ತದೆ. ಫೆರಿಸ್ತಾ ಹೇಳುವಂತೆ ಕ್ರಿ.ಶ. ೧೪೪೨ರ ಹೊತ್ತಿಗೆ ವಿಜಯನಗರ ಸೈನ್ಯವು ಬಹಮನಿಗಳ ವಿರುದ್ಧದ ಯುದ್ಧ. ಈ ಯುದ್ಧಗಳಲ್ಲಿ ಸೋಲನ್ನು ಅನುಭವಿಸಿದ್ದ. ಕ್ರಿ.ಶ. ೧೪೦೬-೦೭ರಲ್ಲಿ ಒಂದನೇ ದೇವರಾಯ, ೧೪೨೨-೨೩ರಲ್ಲಿ ಎರಡನೇ ದೇವರಾಯ, ೧೪೨೬ರಲ್ಲಿ ಎರಡನೇ ದೇವರಾಯ ಬಹಮನಿಯವರೊಂದಿಗೆ ದೋ-ಅಬ್ ಪ್ರದೇಶದ ರಾಯಚೂರು ಮುದಗಲ್‌ಗಳನ್ನು ವಶಪಡಿಸಿಕೊಳ್ಳಲು ನಡೆಸಿದ ಯುದ್ಧಗಳಲ್ಲಿ ವಿಜಯನಗರ ಸೈನ್ಯವು ಸೋಲು ಅನುಭವಿಸಿತು. ಈ ನಿಟ್ಟಿನಲ್ಲಿ ಎರಡನೇ ದೇವರಾಯ ತನ್ನ ಸೈನ್ಯಕ್ಕಾದ ಸೋಲಿಗೆ ಕಾರಣವೇನೆಂದು ಆಸ್ಥಾನದ ಗಣ್ಯರಿಂದ ತಿಳಿದು ಅದನ್ನು ಸರಿಪಡಿಸುತ್ತಾನೆ.[೨೭]

ಇಮ್ಮಡಿ ದೇವರಾಯನು ಬಹಮನಿ ಸುಲ್ತಾನ ಅಲ್ಲಾವುದ್ದೀನನೊಂದಿಗೆ ಮಾಡಿದ ಮೂರನೇ ಬಹಮನಿ ಯುದ್ಧವು ಕ್ರಿ.ಶ. ೧೪೪೩ರಲ್ಲಿ ನಡೆಯಿತು. ಅಬ್ದುಲ್ ರಜಾಕನ ಪ್ರಕಾರ ಈ ಯುದ್ಧದ ಕಾರಣಗಳು ಈ ರೀತಿಯಾಗಿವೆ. ಇಮ್ಮಡಿ ದೇವರಾಯನ ಸಹೋದರರಲ್ಲಿ ಒಬ್ಬನು ದೇವರಾಯನನ್ನು ಕೊಲೆ ಮಾಡಲು ಸಂಚು ಮಾಡಿದನು, ಈ ಸಂದರ್ಭದಲ್ಲಿ ರಾಜ್ಯದ ಹಲವಾರು ಅಧಿಕಾರಿಗಳ ಹಾಗೂ ಹಲವಾರು ಅಮಾಯಕ ಜನರ ಕೊಲೆ ನಡೆದು ರಾಜ್ಯದಲ್ಲಿ ಗೊಂದಲ ಮತ್ತು ಅರಾಜಕತೆಯ ಪರಿಸ್ಥಿತಿ ಉಂಟಾಯಿತು.[೨೮]

ನ್ಯೂನಿಜ್‌ನ ಪ್ರಕಾರ ಕೊಲೆಯ ಪಿತೂರಿಯನ್ನು ನಡೆಸಿದವನು ರಾಜನ ಸೋದರಳಿಯ. ಅಲ್ಲಾವುದ್ದೀನನು ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು, ಈ ತಕ್ಷಣವೇ ಏಳು ಲಕ್ಷ ವರಹಗಳನ್ನು ದೇವರಾಯನು ತನಗೆ ತಲುಪಿಸಬೇಕೆಂದು, ಇದಕ್ಕೆ ತಪ್ಪಿದರೆ ವಿಜಯನಗರದ ಮೇಲೆ ದಾಳಿ ಮಾಡುವುದಾಗಿಯೂ ಬೆದರಿಕೆ ಹಾಕಿದನು. ದೇವರಾಯನು ಈ ಬೆದರಿಕೆಗೆ ಬಗ್ಗಲಿಲ್ಲವಾದ್ದರಿಂದ ಯುದ್ಧವು ಪ್ರಾರಂಭವಾಯಿತು. ೩೬-೨೯ ಈ ಸಮಯದಲ್ಲಿ ಲಕ್ಕಣ್ಣ ದಂಡನಾಯಕನು ತನ್ನ ಸಿಲೋನ್ ದಂಡಯಾತ್ರೆಯನ್ನು ಮುಗಿಸಿಕೊಂಡು ಹಿಂತಿರುಗಿದನು. ವಿಜಯನಗರದ ಸೈನ್ಯವನ್ನು ತಾನೇ ಮುಂದೆ ನಿಂತು ಮುನ್ನುಗ್ಗಿಸಿದನು. ಆ ಸಮಯಕ್ಕಾಗಲೇ ಇಮ್ಮಡಿ ದೇವರಾಯನು

ವಿಜಯನಗರದ ಸೈನ್ಯವನ್ನು ಪುನರ್ ವ್ಯವಸ್ಥೆಗೊಳಿಸಿ, ಅದನ್ನು ಬಲಿಷ್ಠವಾದ ಸಮರ್ಥ ಹಾಗೂ ಆಕ್ರಮಣಕಾರಿ ಪಡೆಯನ್ನಾಗಿ ತಯಾರಿಸಿದ್ದನು. ರಾಯಚೂರು ದೋ-ಅಬ್ ಮೇಲೆ ದಾಳಿ ಮಾಡಿ ಗುಂತಕಲ್ಲನ್ನು ವಶಪಡಿಸಿಕೊಂಡರು. ರಾಯಚೂರು ಮತ್ತು ಬಂಕಾಪುರಗಳಿಗೆ ಮುತ್ತಿಗೆ ಹಾಕಿ, ಬಿಜಾಪುರ ಮತ್ತು ಸೂಗೂರುವರೆಗಿನ ಪ್ರದೇಶವನ್ನು ಪಾಳುಗೆಡವಿದರು. ಅಷ್ಟರಲ್ಲಿಯೇ ಬಹಮನಿ ಸೈನ್ಯವು ಮುನ್ನುಗ್ಗಿ ಬಂದಿತು. ಇಮ್ಮಡಿ ದೇವರಾಯನು ಹಿಮ್ಮೆಟ್ಟಿ ಮುದಗಲ್ ಸೇರಿಕೊಳ್ಳಬೇಕಾಯಿತು. ಮಲಿಕ್-ಅಲ್-ತಿಜಾರನು ರಾಯಚೂರು ಮತ್ತು ಬಂಕಾಪುರದ ಮುತ್ತಿಗೆಯನ್ನು ಸ್ವತಂತ್ರಗೊಳಿಸಿದನು.

ಯುದ್ಧದ ಎರಡನೇ ಹಂತದಲ್ಲಿ ಫೆರಿಸ್ತಾನ ಪ್ರಕಾರ ಕ್ರಿ.ಶ. ೧೪೪೩ ಕೊನೆಯ ಭಾಗದಲ್ಲಿ ಎರಡು ತಿಂಗಳುಗಳ ಅವಧಿಯಲ್ಲಿ, ಎರಡು ಭಾರೀ ಸೇನೆಗಳ ನಡುವೆ ಮುದುಗಲ್ ಬಳಿ ಮೂರು ಕಾಳಗಗಳು ನಡೆದವು. ಮೊದಲನೇ ಕಾಳಗದಲ್ಲಿ ಹಿಂದೂಗಳು ಗೆದ್ದರು, ಎರಡನೇ ಕಾಳಗದಲ್ಲಿ ಮುಸ್ಲಿಮರು ಗೆದ್ದರು, ಮೂರನೇ ಕಾಳಗದಲ್ಲಿ ದೇವರಾಯನ ಹಿರಿಯ ಮಗನು ಕೊಲೆಯಾದನು ಮತ್ತು ಅವನ ಸೈನ್ಯವನ್ನು ಮುದುಗಲ್‌ವರೆಗೆ ಹಿಮ್ಮೆಟ್ಟಿಸಲಾಯಿತು. ಇದೇ ಸಮಯದಲ್ಲಿ ಬಹಮನಿ ಸೈನ್ಯದ ಇಬ್ಬರು ಮುಸ್ಲಿಂ ಅಧಿಕಾರಿಗಳನ್ನು ಹಿಡಿದು ವಿಜಯನಗರದ ಸೆರಮನೆಗೆ ಹಾಕಲಾಯಿತು. ಆಗ ಬಹಮನಿ ಸುಲ್ತಾನನು ನಮ್ಮ ಆ ಇಬ್ಬರು ಅಧಿಕಾರಗಳ ಬೆಲೆ "ಎರಡು ಲಕ್ಷ ಹಿಂದೂಗಳ ಪ್ರಾಣ ಎಂದು ವಿಜಯನಗರಕ್ಕೆ ಬೆದರಿಕೆ ಕಳಿಸಿದಾಗ ದೇವರಾಯನು ಹಿಂದೂಗಳ ಪ್ರಾಣಕ್ಕೋಸ್ಕರ ಸಂಧಿ ಮಾಡಿಕೊಳ್ಳಲು ಒಪ್ಪಿ ತಪ್ಪದೆ ಪೊಗದಿ ಸಲ್ಲಿಸುವುದಾಗಿ ಒಪ್ಪಿಕೊಂಡನು"[೨೯] ಎಂದು ಅಧ್ಯಯನದಿಂದ ತಿಳಿಯಬಹುದು.

ಎರಡನೇ ದೇವರಾಯನ ಮರಣದ ನಂತರ ಸಂಗಮ ವಂಶವು ಕ್ಷೀಣಿಸಿತು. ಸಾಳುವ ವಂಶದವರು ವಿಜಯನಗರದ ಅಧಿಕಾರವನ್ನು ವಹಿಸಿಕೊಂಡರು. ಸಾಳುವ ವಂಶದ ಮೊದಲ ವ್ಯಕ್ತಿಯಾದ ಗುಂಡನ ಮಗನಾದ ಸಾಳುವ ನರಸಿಂಹನು ತನ್ನ ಪರಾಕ್ರಮದಿಂದ ವಿಜಯನಗರದ ಸಿಂಹಾಸನವನ್ನೇರಿದನು. ಕ್ರಿ.ಶ. ೧೪೮೭ರಲ್ಲಿ ಕೃಷ್ಣಾ ನದಿಯ ದಕ್ಷಿಣ ಮತ್ತು ಕರಾವಳಿ ಪ್ರದೇಶಗಳು ನರಸಿಂಹ ಅರಸನ ಹಿಡಿತದಲ್ಲಿದ್ದವು. ಬಹಮನಿ ಸುಲ್ತಾನನಾದ ಮಹಮ್ಮದ ಷಾನು ನಿಜಾಮ್-ಉಲ್-ಮುಲ್ಕ್ ಮತ್ತು ಅಜಂಖಾನರ ನೇತೃತ್ವದಲ್ಲಿ ಆರು ಸಾವಿರ ಸೈನ್ಯದೊಂದಿಗೆ ಕಾಂಜೀವರಂ ಮೇಲೆ ದಾಳಿ ಮಾಡಲು ಕಳುಹಿಸಿಕೊಟ್ಟನು.[೩೦] ಸುಲ್ತಾನನ ಸೈನ್ಯವು ಈ ಮುತ್ತಿಗೆಯಲ್ಲಿ ಯಶಸ್ವಿ ಕಾರ್ಯಾಚರಣೆ ಮಾಡಿ, ಅಲ್ಲಿಯ ದೇವಾಲಯಗಳನ್ನು ನಾಶಗೊಳಿಸಿ ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದು ನಂತರ ಅಲ್ಲಿಂದ ಕಂಚಿಗೆ ಮುತ್ತಿಗೆ ಹಾಕಿದರು. ನರಸಿಂಹನು ಈಶ್ವರ ನಾಯಕನ ನೇತೃತ್ವದಲ್ಲಿ ಬಹಮನಿ ಸುಲ್ತಾನನ ಮೇಲೆ ಯುದ್ಧ ಮಾಡಲು ಸೈನ್ಯವನ್ನು ಕಳುಹಿಸಿದನು, ವಿಜಯನಗರದ ಸೈನ್ಯವು ಸುಲ್ತಾನನ ಸೈನ್ಯವನ್ನು ಸೋಲಿಸಿ, ನಾಶಗೊಳಿಸಿ ದೇವಾಲಯದ ಸಂಪತ್ತನ್ನು ಪುನಃ ವಶಪಡಿಸಿಕೊಂಡರು.

ಕ್ರಿ.ಶ. ೧೫೦೯ರಲ್ಲಿ ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವನ್ನೇರಿದನು. ದಕ್ಷಿಣ ಭಾರತದ ಇತಿಹಾಸದಲ್ಲಿಯೇ ಪ್ರಸಿದ್ಧ ದೊರೆ ಎಂದು ಈತನು ಹೆಸರು ಗಳಿಸಿರುವನು. ಈತನ ಕಾಲದಲ್ಲಿ ವಿಜಯನಗರವು ವೈಭವದ ಉತ್ತುಂಗ ಶಿಖರವನ್ನೇರಿತು. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದಾಗ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು. ದಕ್ಷಿಣ ಭಾರತದ ರಾಜಕೀಯ ಪರಿಸ್ಥಿತಿ ಅಷ್ಟೇನು ಉತ್ತಮವಾಗಿರಲಿಲ್ಲ. ಹಿಂದಿನ ಅರಸರು ಅಸಮರ್ಥರಾಗಿದ್ದರಿಂದ ಸಹಜವಾಗಿಯೇ ರಾಜ್ಯ ದುರ್ಬಲಗೊಂಡು ಆಂತರಿಕ ಪ್ರತಿಭಟನೆಗಳು ಮೇಲುಗೈ ಸಾಧಿಸಿದ್ದವು. ಕೃಷ್ಣದೇವರಾಯನು ತನ್ನ ರಾಜ್ಯದ ಆಂತರಿಕ ಪ್ರತಿಭಟನೆಯನ್ನು ದಮನಗೊಳಿಸಿದನು. ವಿಜಯನಗರ ಹಾಗೂ ದಖ್ಖನ್ನಿನ ಮುಸ್ಲಿಂ ರಾಜ್ಯಗಳ ನಡುವಿನ ಸಂಬಂಧವೂ ಎಂದೂ ಸೌಹಾರ್ದಯುತವಾಗಿರಲಿಲ್ಲ. ಮುಸ್ಲಿಂ ಸಾಮ್ರಾಜ್ಯಗಳನ್ನು ಬಗ್ಗುಬಡಿಯಲು ಕೃಷ್ಣದೇವರಾಯನು ಅಗಾಧವಾದ ಸಿದ್ಧತೆಗಳನ್ನು ಮಾಡಿಕೊಂಡಿದ್ದನು. ಕೃಷ್ಣದೇವರಾಯನು ಮುಸ್ಲಿಂ ರಾಜ್ಯದ ಚಾರಿತ್ರಿಕ ವಿಷಯಗಳನ್ನು ಅರಿಯುವ ಸಲುವಾಗಿ ಗೂಢಚಾರರನ್ನು ಮತ್ತು ಸಲಹೆಗಾರರನ್ನು ನೇಮಿಸಿಕೊಂಡಿದ್ದರು. ಈ ವಿಷಯವು ಕೃಷ್ಣದೇವರಾಯನ 'ಶ್ರೀ ಕೃಷ್ಣದೇವರಾಯನ ದಿನಚರಿ' ಮತ್ತು 'ರಾಯವಾಚಕಮು' ಎಂಬ ಕೃತಿಗಳಿಂದ ನಮಗೆ ತಿಳಿದುಬರುತ್ತದೆ.[೨]

ಕೃಷ್ಣದೇವರಾಯನಿಗೆ 'ಯವನ ರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದಿರುವ ವಿಷಯವು ಕ್ರಿ.ಶ. ೧೫೧೪ರ ಸೆಪ್ಟೆಂಬರ್ ೧ನೇ ತಾರೀಖಿನ ಪ್ರಸಿದ್ಧವಾದ ಕೊಂಡಮರಸಯ್ಯನ ಕಂದಕೂರು ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದಲ್ಲಿ ಕೃಷ್ಣದೇವರಾಯನನ್ನು ಯವನ ರಾಜ್ಯ ಸ್ಥಾಪನಾಚಾರ್ಯ ಎಂದು ಮೊಟ್ಟಮೊದಲ ಸಲ ಕರೆಯಲಾಗಿದೆ. ಇದೇ ಬಿರುದು ಧರಣೀಕೋಟೆ, ಅಹೋಬಲ, ಸಿಂಹಾಚಲ, ತಿರುಪತಿ, ಶ್ರೀಶೈಲ ಮುಂತಾದ ಸ್ಥಳಗಳಲ್ಲಿರುವ ಶಾಸನಗಳಲ್ಲಿ ಪುನರುಚ್ಚಾರವಾಗಿದೆ. 'ಮನುಚರಿತ್ರೆ'ಯಲ್ಲಿ 'ಯವನಕ್ಷೋಣಿಧವಸ್ಥಾಪನಾ ಮಂದೀಭೂತ ಕೃಪಾಕಟಾಕ್ಷ' ಎಂದು ಕೃಷ್ಣದೇವರಾಯನನ್ನು ವಿಶ್ಲೇಷಿಸಿ ಹೊಗಳಲಾಗಿದೆ. ಇದರಿಂದ ಕೃಷ್ಣದೇವರಾಯನು ಮುಸ್ಲಿಂ ರಾಜನಿಗೆ ನೆರವು ನೀಡಿರುವುದು ಗೊತ್ತಾಗುತ್ತದೆ.

ಶಹಪುರದ ವಿಶ್ವಕರ್ಮ ಏಕದಂಡಿ ಮಠದಲ್ಲಿದ್ದ ತಾಮ್ರಶಾಸನವು ಕೃಷ್ಣದೇವರಾಯನು ಕ್ರಿ.ಶ. ೧೫೦೯ರಿಂದ ೧೫೨೯ರವರೆಗೆ ಅಳ್ವಿಕೆ ಮತ್ತು ಕೃಷ್ಣದೇವರಾಯನು ಗುಲ್ಬರ್ಗಾ, ಬೀದರನ್ನು ಪ್ರವೇಶಿಸಿ ಕ್ರಿ.ಶ. ೧೫೨೩ರಲ್ಲಿ ೩ನೇ ಮಹಮ್ಮದಷಾನ ಮೊಮ್ಮಗನನ್ನು ಸುಲ್ತಾನನ್ನಾಗಿ ನೇಮಿಸಿದ್ದನ್ನು ಮತ್ತು ಸುಲ್ತಾನನ ಆಳ್ವಿಕೆಯನ್ನು ಪುನಶ್ಚೇತನಗೊಳಿಸಿದ ಮುಸ್ಲಿಂ ಚಕ್ರಾಧಿಪತ್ಯದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಿದ್ದನ್ನು ತಿಳಿಸುತ್ತದೆ. ಈ ರಾಜಕೀಯ ಸಾಧನೆಯಿಂದಾಗಿ ಬಿರುದು ಪ್ರಾಪ್ತವಾದದ್ದನ್ನು ಈ ಶಾಸನವು ತಿಳಿಸುತ್ತದೆ.[೩]

ಕೃಷ್ಣದೇವರಾಯನ ಮೊದಲ ದಿಗ್ವಿಜಯವು ಬೀದರ್ ಮತ್ತು ಬಿಜಾಪುರಗಳ ಸುಲ್ತಾನರಾಗಿದ್ದ ಎರಡನೇ ಮಹಮ್ಮದ್ ಷಾ ಮತ್ತು ಯೂಸುಫ್ ಆದಿಲ್‌ಷಾಹ ಇವರ ವಿರುದ್ಧವಾಗಿ ನಡೆಯಿತು.

ರಾಯನು ಅವರ ಮೇಲೆ ಸಿಡಿಲಿನಂತೆ ಎರಗಿ ಎರಡೂ ಸೈನ್ಯಗಳನ್ನು ಧೂಳೀಪಟ ಮಾಡಿದನು. ಯುದ್ಧದಲ್ಲಿ ಮಹಮ್ಮದ್ ಷಾಹನು ತೀವ್ರವಾಗಿ ಗಾಯಗೊಂಡು ಯುದ್ಧರಂಗದಿಂದ ನಿರ್ಗಮಿಸಿದನು. ಯೂಸುಫ್ ಷಾಹನು ಯುದ್ಧರಂಗದಲ್ಲಿಯೇ ಮರಣವನ್ನಪ್ಪಿದನು. ಇಂತಹ ಅಪಜಯವನ್ನು ಮುಸ್ಲಿಂ ಸೈನಿಕರಾಗಲಿ, ಸುಲ್ತಾನರಾಗಲಿ ಇಲ್ಲಿಯವರೆಗೂ ಕಂಡಿರಲಿಲ್ಲವೆಂದು ಹೇಳಬಹುದು. ನಂತರ ಕೃಷ್ಣದೇವರಾಯನು ರಾಯಚೂರು ಹಾಗೂ ಗುಲ್ಬರ್ಗಾ ಕೋಟೆಗಳ ಮೇಲೆ ದಾಳಿ ಮಾಡಿ ಅವುಗಳನ್ನು ವಶಪಡಿಸಿಕೊಂಡನು. ಸೈನ್ಯವನ್ನು ಮುನ್ನುಗ್ಗಿಸಿ ಬೀದರ್‌ನಲ್ಲಿ ತನ್ನ ಮಂತ್ರಿಯ ಬಂಧಿಯಾಗಿದ್ದ ಎರಡನೇ ಮಹಮ್ಮದ್ ಷಾಹನನ್ನು ಬಂಧನದಿಂದ ಬಿಡಿಸಿ ಕೃಷ್ಣದೇವರಾಯನು ಅವನನ್ನು ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿದನು. ಈ ಕಾರ್ಯದಿಂದಾಗಿ ಕೃಷ್ಣದೇವರಾಯನಿಗೆ 'ಯವನ ರಾಜ್ಯ ಪ್ರತಿಷ್ಠಾಪನಾಚಾರ್ಯ' ಎಂಬ ಬಿರುದು ಬಂದಿತು. ಬೀದರಿನ ಸುಲ್ತಾನನು ಕೃಷ್ಣದೇವರಾಯನಿಗೆ ಎಂದಿಗೂ ಚಿರಋಣಿಯಾದನು. ಈ ರೀತಿಯಾಗಿ ಬಹಮನಿ ಸುಲ್ತಾನನ ವಿರುದ್ಧದ ಕೃಷ್ಣದೇವರಾಯನ ಯುದ್ಧವು ಮುಕ್ತಾಯಗೊಂಡಿತು.[೩೪]

ಕ್ರಿ.ಶ. ೧೬ನೇ ಶತಮಾನವು ಭಾರತ ಇತಿಹಾಸದ ಹೋರಾಟದ ಕಾಲ, ದಕ್ಷಿಣದಲ್ಲಿ ಈ ಕಾದಾಟವು ಮುಖ್ಯವಾಗಿ ವಿಜಯನಗರ ಮತ್ತು ಬಹಮನಿ ರಾಜ್ಯಗಳಿಗೆ ಸೀಮಿತವಾಗಿದ್ದು, ಆಗಾಗ ಒರಿಸ್ಸಾ, ಗುಜರಾತ್ ಮತ್ತು ಮಾಳವಗಳಿಗೂ ಹಬ್ಬಿತ್ತು. ಈ ಕಡೆ ಉತ್ತರದಲ್ಲಿ ದೆಹಲಿ ಸುಲ್ತಾನರ ಆಡಳಿತ ಹದಗೆಟ್ಟ ಸಂದರ್ಭದಲ್ಲಿ, ಇನ್ನೊಂದು ಕಡೆ ದಖ್ಖನ್ನಿನಲ್ಲಿ ಬಹಮನಿ ಸಾಮ್ರಾಜ್ಯವು ಬಿರಾರ್, ಬೀದರ್, ಅಹಮದ್‌ನಗರ, ಬಿಜಾಪುರ ಮತ್ತು ಗೋಲ್ಕಂಡ ಐದು ಶಾಹಿ ರಾಜ್ಯಗಳಾಗಿ ಭಾಗವಾದರೆ, ವಿಜಯನಗರದಲ್ಲಿ ಆಂತರಿಕ ಭಿನ್ನತೆಗಳು ಮತ್ತು ಪರಸ್ಪರ ಅಸೂಯೆಗಳಿಂದಾಗಿ ಮುಳುಗಿತ್ತು. ಮುಸ್ಲಿಂ ರಾಜ್ಯಗಳು ಬಹುಬೇಗ ದುರ್ಬಲವಾದಂತಹ ಸಂದರ್ಭದಲ್ಲಿ ಕ್ರಿ.ಶ. ೧೪೮೧ರಲ್ಲಿ ಬಾಬರನು ಭಾರತಕ್ಕೆ ಬಂದಾಗ ದಕ್ಷಿಣದಲ್ಲಿ ಈ ಎರಡೂ ಸಾಮ್ರಾಜ್ಯಗಳು ತಡೆಯದೆ ಹೋದರು. ಪರಿಣಾಮವಾಗಿ ಉತ್ತರದಲ್ಲಿ ಕ್ರಿ.ಶ. ೧೫೨೬ರಲ್ಲಿ ಬಾಬರ್ ಮೊಗಲ್ ಸಾಮ್ರಾಜ್ಯ ಸ್ಥಾಪಿಸಿದನ್ನು ಪ್ರಸ್ತುತ ಅಧ್ಯಯನದಲ್ಲಿ ನೋಡಬಹುದು.

ಶಾಹಿ ರಾಜ್ಯಗಳೊಂದಿಗಿನ ಸಂಬಂಧಗಳು

ಕ್ರಿ.ಶ. ೧೫೧೮ರಲ್ಲಿ ಬಹಮನಿ ರಾಜ್ಯ ಅಂತ್ಯವಾಗಿ ಅದು ಐದು ರಾಜ್ಯಗಳಾಗಿ ಒಡೆಯಿತು. ದಕ್ಷಿಣ ಭಾರತದಲ್ಲಿ ಈ ಮನೆತನಗಳ ವಿಭಜನೆಯು ಮುಸ್ಲಿಂ ಸಮುದಾಯಗಳ ವಿಂಗಡನೆಗೆ ಕಾರಣವಾಯಿತು. ಆಗ ಇವು ದಖ್ಖನಿ ಹಾಗೂ ವಿದೇಶಿ ಮುಸ್ಲಿಂ ಪಂಗಡಗಳಾಗಿ ವಿಭಜಿಸಲ್ಪಟ್ಟವು. ಈ ಐದು ರಾಜ್ಯಗಳಾದ ಅಹಮದ್‌ನಗರ, ಬಿಜಾಪುರ, ಬೀದರ್, ಗುಲ್ಬರ್ಗ ಹಾಗೂ ಬಿರಾರ್ ರಾಜ್ಯಗಳು ಪರಸ್ಪರ ಗಡಿಗಳ ಮೇಲಿನ ಹಿಡಿತ ಸ್ಥಾಪಿಸಲು ಕಚ್ಚಾಟವನ್ನು ನಡೆಸುತ್ತಿದ್ದವು. ವಿಜಾಪುರ ಹಾಗೂ ಅಹಮ್ಮದ್ ನಗರ ರಾಜ್ಯಗಳು ವಾಯವ್ಯ ದಿಕ್ಕಿನಲ್ಲಿ ವಿಜಯನಗರ ಸಾಮ್ರಾಜ್ಯದ ಗಡಿಗಳ ನೇರ ಸಮ್ಮುಖದಲ್ಲಿ ಬಂದವು. ವಿಜಯನಗರ ಗೋಲ್ಕಂಡ ಪೂರ್ವದ ಸೀಮಾ ಭಾಗದಲ್ಲಿ ಕಳಿಂಗ

ರಾಜ್ಯವನ್ನು ಸಂಪರ್ಕಿಸಿತು. ಬೀದರ್ ಮತ್ತು ಬಿರಾರ್ ಉತ್ತರಕ್ಕಿದ್ದವು. ಅವು ವಿಜಯನಗರದ ಗಡಿಗಳಿಗೆ ನೇರ ಸಂಪರ್ಕವಾಗಲಿಲ್ಲ.[೩೫]

ಈ ಶಾಹಿ ರಾಜ್ಯಗಳು ಪರಸ್ಪರ ವಿರೋಧಿ ಕುತಂತ್ರಗಳಲ್ಲಿ ಅಲ್ಲದೇ ಪರಸ್ಪರ ಕಲಹಗಳಲ್ಲಿ ತೊಡಗುತ್ತಿದ್ದರು. ಈ ಸುಲ್ತಾನರ ನಡುವಿನ ಪರಸ್ಪರ ವೈರತ್ವವು ವಿಜಯನಗರದೊಂದಿಗೆ ಅವರು ಮೈತ್ರಿಯನ್ನು ಬೆಳೆಸಿದ್ದರು. ಜಾಣತನದ ಮುತ್ಸದ್ದಿತನದಿಂದ ಅವರನ್ನು ಒಲಿಸಿಕೊಂಡು ರಾಮರಾಯನು ಎಲ್ಲಾ ಸುಲ್ತಾನರನ್ನು ಮಿತ್ರರನ್ನಾಗಿಸಿಕೊಂಡಿದ್ದನು. ಅವರ ರಾಜಕಾರಣದಲ್ಲಿ ಮಧ್ಯೆ ಪ್ರವೇಶ ಮಾಡಿ ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ, ತನಗೆ ಅನುಕೂಲವಾಗುವಂತೆ ಮೈತ್ರಿಯನ್ನು ಬದಲಾಯಿಸಿ ಕೊಳ್ಳುತ್ತಿದ್ದನು.

ರಾಮರಾಯನು ನಾಲ್ವರು ಸುಲ್ತಾನರ ಒಂದು ಸಭೆಯನ್ನು ಕರೆದನು. ಅವರು ಒಂದು ಒಪ್ಪಂದ ಮಾಡಿಕೊಳ್ಳಬೇಕು ಯಾರೇ ಒಬ್ಬನು ಅನ್ಯಾಯವಾಗಿ ಇನ್ನೊಬ್ಬನ ಮೇಲೆ ಯುದ್ಧಕ್ಕೆ ಬಂದ ಪಕ್ಷದಲ್ಲಿ ಇತರರು ಮೂವರೂ ಒಂದುಗೂಡಿ ಆಕ್ರಮಣಕಾರನ ವಿರುದ್ಧ ಹೋರಾಡಬೇಕು ಎಂಬುದೇ ಆ ಒಪ್ಪಂದ. ಆದರೆ ಅದು ಬಹಳ ಕಾಲ ನಡೆಯಲಿಲ್ಲ. ಸುಲ್ತಾನರು ಒಂದುಗೂಡಲಿಲ್ಲ. ಕೊನೆಗೆ ತಾವು ಬಹುಕಾಲ ಅಪಮಾನಿತರಾಗಿದ್ದೇವೆ, ರಾಮರಾಯನ ಕೈಗೆ ಸಿಕ್ಕಿ ನೊಂದಿದ್ದೇವೆ ಎಂದು ಅವರು ಅರಿತರು. ಅವರಲ್ಲಿ ತುಂಬಾ ಗಾಸಿಗೊಂಡಿದ್ದವನು ಅಹಮದ್ ನಗರದ ಸುಲ್ತಾನ. ತನ್ನ ಸಿಂಹಾಸನವನ್ನು ನಾಶವಾಗದಂತೆ ಉಳಿಸಿಕೊಳ್ಳಲು ಅವನಿದ್ದ ಮಾರ್ಗವೆಂದರೆ ವೈರಿಗಳೊಂದಿಗೆ ಸಂಧಾನ ಮಾಡಿಕೊಳ್ಳುವುದು.[೩೬]

ರಾಮರಾಯನು ಸುಲ್ತಾನರ ಮತ್ತು ಅವರ ರಾಯಭಾರಿಗಳ ಬಗೆಗೆ ಉದ್ಧಟನಾಗಿ ವರ್ತಿಸುತ್ತಿದ್ದನು. ಇಸ್ಲಾಂ ಧರ್ಮವನ್ನು ಅಗೌರವಿಸುತ್ತಿದ್ದನು ಎಂದು ಮುಸ್ಲಿಂ ಚರಿತ್ರೆಕಾರರು ಆಪಾದಿಸುತ್ತಾರೆ. ಯುದ್ಧದ ಸಮಯಗಳಲ್ಲಿ ಅವನ ಸೈನಿಕರು ಮುಸ್ಲಿಂ ಜನತೆ ಮತ್ತು ಸಂಸ್ಥೆಗಳ ಬಗೆಗೆ ಅತ್ಯಾಚಾರ ತೋರಿಸುತ್ತಿದ್ದರು ಎಂದು ಹೇಳುತ್ತಾರೆ. ಆದರೆ ಈ ಆಪಾದನೆಗಳು ವಾಸ್ತವವಾಗಿ ರಾಮರಾಯನು ಮುಸ್ಲಿಂ ರಾಜ್ಯಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದ್ದಿದ್ದನು. ಕ್ರಿ.ಶ. ೧೫೬೫ರ ಯುದ್ಧದಲ್ಲಿ ವಿಜಯನಗರದ ಸೋಲು ರಾಜತಾಂತ್ರಿಕವಾದ ಕಾರಣಗಳನ್ನು ಹೊಂದಿತ್ತೇ ಹೊರತು ಧರ್ಮವು ಕಾರಣವಾಗಿರಲಿಲ್ಲ. ಈ ಯುದ್ಧದಲ್ಲಿ ರಾಮರಾಯನು ಮರಣವನ್ನು ಹೊಂದಿದನು. ತಿರುಮಲನು ಚಂದ್ರಗಿರಿಗೆ ಪಲಾಯನ ಮಾಡಿದನು.[೩೭]

ತಿರುಮಲನು ಅರವೀಡು ವಂಶದವನಾಗಿದ್ದನು. ಅವನು ಪೆನುಗೊಂಡೆಗೆ ತನ್ನ ಕಾರ್ಯಸ್ಥಾನವನ್ನು ವರ್ಗಾಯಿಸಿದನು. ಅವನ ಮಗ ೧ನೇ ಶ್ರೀರಂಗ ತೆಲುಗು ಪ್ರಾಂತ್ಯವನ್ನು ಪೆನುಗೊಂಡೆಯಿಂದ ಆಳುತ್ತಿದ್ದನು. ರಘುನಾಥನು ಸಾಯಲು ೨ನೇ ಶ್ರೀರಂಗನು ಉತ್ತರಾಧಿಕಾರಿಯಾಗಿ ನೇಮಿತನಾಗಿದ್ದನು. ಮೂರನೇ ಮಗ ರಾಮನು ಕನ್ನಡ ಪ್ರದೇಶಗಳನ್ನು ಪಡೆದನು.[೩೮] ಕ್ರಿ.ಶ. ೧೫೮೫-೧೬೧೪ರ ವರೆಗೆ ವೀರವೆಂಕಟಪತಿ ದೇವರಾಯನು ಹೊನ್ನಾವರದಿಂದ ಕನ್ಯಾಕುಮಾರಿಯವರೆಗಿನ ಕಳಿಂಗ ದೇಶದವರೆಗೆ

ರಾಜ್ಯವಿತ್ತು.[೩೯] ಹಾಗಾಗಿ ಇಲ್ಲಿ ರಾಯನಿಗೂ ಕುತುಬ್‌ಶಾಹಿಗಳಿಗೆ ಕದನಗಳು ನಡೆಯುತ್ತಿದ್ದವು. ಶ್ರೀರಂಗರಾಯನು ಆಂಧ್ರ ಪ್ರಾಂತ್ಯಗಳಲ್ಲಿ ಯುದ್ಧ ಸನ್ನದ್ಧನಾಗಿದ್ದಾಗ ಅದೇ ಸಮಯಕ್ಕಾಗಿ ಕಾಯುತ್ತಿದ್ದ ಆದಿಲ್‌ಷಹಾನು ವಿಜಯನಗರದ ಮೇಲೆ ದಾಳಿ ಮಾಡುವ ಸಾಹಸಕ್ಕೆ ಕೈಹಾಕಿದನು. ಆದರೆ ಪೆನುಗೊಂಡವನ್ನು ಜಯಿಸಲು ಆಗಲಿಲ್ಲ. ಇದೇ ಸಮಯದಲ್ಲಿ ಮೊಘಲ್ ಚಕ್ರವರ್ತಿ ಅಕ್ಬರ್ ಮಹಾಶಯನು ಉತ್ತರ ಹಿಂದೂಸ್ತಾನದಲ್ಲಿ ತನ್ನ ಸಾಮ್ರಾಜ್ಯವನ್ನು ಹಿಮಾಚಲದಿಂದ ನರ್ಮದಾ ನದಿಯವರೆಗೂ ವಿಸ್ತರಿಸಿದ್ದು, ದಕ್ಷಿಣ ಹಿಂದೂಸ್ತಾನದ ಕಡೆ ಕಣ್ಣು ಹಾಯಿಸಿದ್ದನು. ದಕ್ಷಿಣ ದೇಶದ ಚೈತ್ಯಯಾತ್ರೆಯನ್ನು ಪ್ರಾರಂಭಿಸುವುದಕ್ಕೆ ಮುಂಚೆ ಅಕ್ಬರ್ ಮಹಾಶಯನು ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ವೀರವೆಂಕಟಪತಿರಾಯನ ಜತೆಯಲ್ಲಿ ಸ್ನೇಹವನ್ನು ಬೆಳೆಸಿದರೆ ತನ್ನ ಕಾರ್ಯ ಸುಗಮವಾಗಿ ನೆರವೇರುವುದೆಂದು ಆಲೋಚಿಸಿದನು. ಅದರಂತೆಯೇ ವಿಜಯನಗರದ ಅಧಿಪತಿಯ ಮೈತ್ರಿಯನ್ನು ಬಯಸಿ ತನ್ನ ರಾಯಭಾರಿಗಳನ್ನು ಎರಡು ಬಾರಿ ಅಂದರೆ ಕ್ರಿ.ಶ. ೧೬೦೦ ಮತ್ತು ೧೬೧೪ರಲ್ಲಿ ವಿಜಯನಗರಕ್ಕೆ ಕಳಿಸಿಕೊಟ್ಟನು. ಆದರೆ ವೀರವೆಂಕಟಪತಿರಾಯನಿಗೆ ಅಕ್ಬರ್ ಮಹಾಶಯನ ಜತೆಯಲ್ಲಿ ಸ್ನೇಹ ಬೆಳೆಸುವುದು ಇಷ್ಟವಿರಲಿಲ್ಲ. ಆದ್ದರಿಂದ ಸಂಧಾನಕ್ಕೆ ಬಂದಿದ್ದ ರಾಯಭಾರಿಗಳನ್ನು ಹಿಂದಕ್ಕೆ ಕಳುಹಿಸಿದನು. ಒಂದು ವೇಳೆ ಅಕ್ಬರ್ ಚಕ್ರವರ್ತಿ ತನ್ನ ಮೇಲೆ ಯುದ್ಧ ಘೋಷಿಸಿದರೂ ತಾನು ಅದನ್ನು ಎದುರಿಸುವುದಕ್ಕೆ ಸಿದ್ಧನಾಗಿರುವುದಾಗಿ ರಾಯಭಾರಿಗಳ ಜತೆಯಲ್ಲಿ ಹೇಳಿಕಳಿಸಿದನು. ಇದರಿಂದ ಮೊಘಲ್ ಚಕ್ರವರ್ತಿಯು ದಕ್ಷಿಣ ದೇಶದ ಚೈತ್ರಯಾತ್ರೆಯ ಯೋಜನೆಯನ್ನು ಕೈಬಿಡಬೇಕಾಯಿತು.[೪೦]

ವೀರವೆಂಕಟಪತಿರಾಯನ ಕಾಲಾವಧಿಯಲ್ಲಿ ಸಾಮ್ರಾಜ್ಯದ ನಾನಾ ಭಾಗಗಳಲ್ಲಿ ಬಂಡಾಯಗಳು ತಲೆಯೆತ್ತುತ್ತಿದ್ದವು. ಮಧುರೆ, ಜಿಂಜಿ, ತಂಜಾವೂರು, ವೆಲ್ಲೂರು ಮುಂತಾದ ಕಡೆ ಇದ್ದ ಮಾಂಡಲಿಕರೂ, ಸಾಮಂತರಾಜರೂ ಸಾಮ್ರಾಜ್ಯ ನಿಷ್ಠೆಯಿಂದ ವಿಮುಖರಾದರು. ವಿಜಯನಗರದ ಬೊಕ್ಕಸಕ್ಕೆ ಸಲ್ಲಬೇಕಾಗಿದ್ದ ಕಪ್ಪಕಾಣಿಕೆಗಳನ್ನು ಸಲ್ಲಿಸುವುದಕ್ಕೆ ನಿರಾಕರಿಸಿದರು. ಚಕ್ರವರ್ತಿಯ ಆಜ್ಞೆಗಳನ್ನು ಉಲ್ಲಂಘಿಸುವುದಕ್ಕೆ ಪ್ರಾರಂಭಿಸಿದರು. ಇದೇ ಸಮಯದಲ್ಲಿ ಮೈಸೂರಿನಲ್ಲೂ ರಾಜದ್ರೋಹದ ಕುರುಹುಗಳು ಕಾಣಿಸಿಕೊಂಡವು. ಅಲ್ಲಿ ಅರಸರಾಗಿದ್ದ ರಾಜ ಒಡೆಯರು(ಕ್ರಿ.ಶ. ೧೫೭೮–೧೬೧೭) ಮಹತ್ವಾಕಾಂಕ್ಷಿಗಳೂ, ಸ್ವಾತಂತ್ರ್ಯಾಪೇಕ್ಷಿಗಳೂ ಆಗಿದ್ದರು. ಅವರು ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿದ್ದು ಮಾತ್ರವಲ್ಲದೆ ತಮ್ಮ ರಾಜ್ಯದ ಎಲ್ಲೆಗಳನ್ನು ವಿಸ್ತರಿಸುವ ಯೋಜನೆಯಲ್ಲೂ ಮುಂದಾದರು. ರಾಜ ಒಡೆಯರ ಈ ವಿದ್ರೋಹದಿಂದ ವೀರವೆಂಕಟಪತಿರಾಯನಿಗೂ, ಅವನ ಅಣ್ಣನ ಮಗನೂ, ಸಾಮ್ರಾಜ್ಯದ ರಾಜಪ್ರತಿನಿಧಿಯೂ ಆಗಿದ್ದ ತಿರುಮಲರಾಯನಿಗೂ ವೈಮನಸ್ಸು ಉಂಟಾಯಿತು. ತಿರುಮಲರಾಯನು ರಾಜದ್ರೋಹಿಗಳ ಜತೆಯಲ್ಲಿ ಸೇರಿಕೊಂಡು ಸಾಮ್ರಾಜ್ಯದ ವಿರುದ್ಧವಾಗಿ ಪಿತೂರಿಗಳನ್ನು ನಡೆಸುತ್ತಿದ್ದನೆಂದು ವೆಂಕಟಪತಿರಾಯನಿಗೆ ಮನವರಿಕೆಯಾಯಿತು. ಇದರಿಂದ ಅವನಿಗೆ ರಾಜಪ್ರತಿನಿಧಿಯಾದ ತಿರಮಲರಾಯನ ಮೇಲೆ ತುಂಬಾ ಅಸಮಾಧಾನ ಉಂಟಾಯಿತು.[೪೧]

ಇದೇ ಸಮಯದಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ತಿರುಮಲರಾಯನನ್ನು ಪದಚ್ಯುತಿಗೊಳಿಸಿದರು. ವೆಂಕಟಪತಿರಾಯನು ಅವನಿಗೆ ಯಾವ ಸಹಾಯವನ್ನು ಮಾಡದೆ ತಟಸ್ಥನಾಗಿದ್ದನು. ಬಹಳ ಸುಲಭವಾಗಿ ರಾಜ ಒಡೆಯರು ವಿಜಯನಗರದ ರತ್ನಸಿಂಹಾಸನವನ್ನು ಏರಿದರು. ವೀರವೆಂಕಟಪತಿರಾಯನೂ ರಾಜ ಒಡೆಯರ ಈ ಕಾರ್ಯವನ್ನು ಸಂಪೂರ್ಣವಾಗಿ ಅನುಮೋದಿಸಿ, ಅವರನ್ನೇ ಮೈಸೂರಿನಲ್ಲಿ ರಾಜಪ್ರತಿನಿಧಿಯನ್ನಾಗಿ ನೇಮಕ ಮಾಡಿದನು. ಹೀಗೆ ಕ್ರಿ.ಶ. ೧೬೧೦ರಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಲಾಂಛನಗಳು, ಪ್ರಾತಿನಿಧ್ಯವೂ, ಸಿಂಹಾಸನವೂ, ಮೈಸೂರು ಒಡೆಯರ ಮನೆನತಕ್ಕೆ ಲಭಿಸಿತು.[೨೨]

೩.೨. ಅಧ್ಯಯನಕಾರರ ನಿಲುವುಗಳು

ವಿಜಯನಗರದ ನಾಲ್ಕು ರಾಜವಂಶಗಳ ಆಳ್ವಿಕೆಯನ್ನು ಕುರಿತಂತೆ ಚರಿತ್ರೆಕಾರರು ವಿಭಿನ್ನ ದೃಷ್ಟಿಕೋನಗಳಿಂದ ಚರಿತ್ರೆಯನ್ನು ರಚಿಸಿರುವುದು ಕಂಡುಬರುತ್ತದೆ. ವಿಜಯನಗರದ ಚರಿತ್ರೆ ಬರವಣಿಗೆಯ ಈ ಬೆಳವಣಿಗೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ನಾಲ್ಕು ನೆಲೆಗಳಲ್ಲಿ ವಿವರಿಸಲಾಗಿದೆ. ಅವುಗಳೆಂದರೆ ಪ್ರವಾಸಿ ಕಥನಗಳಲ್ಲಿನ ನಿಲುವುಗಳು, ಸಾಮ್ರಾಜ್ಯಶಾಹಿ ಬರಹಗಾರರ ನಿಲುವುಗಳು, ರಾಷ್ಟ್ರೀಯವಾದಿ ಚರಿತ್ರೆಕಾರರ ನಿಲುವುಗಳು ಹಾಗೂ ವಿಜಯನಗರ ಕುರಿತಂತೆ ಇತ್ತೀಚೆಗೆ ಕಂಡುಬಂದ ಬರವಣಿಗೆಗಳು.

೩.೨.೧. ಪ್ರವಾಸಿ ಕಥನಗಳಲ್ಲಿನ ನಿಲುವುಗಳು

ವಿಜಯನಗರಕ್ಕೆ ಭೇಟಿ ಕೊಟ್ಟಂತಹ ವಿದೇಶಿ ಪ್ರವಾಸಿಗರ ಕೆಲವೊಂದು ಪ್ರಮುಖ ಕಥನಗಳನ್ನು ಆಯ್ದುಕೊಂಡು ವಿಜಯನಗರದಲ್ಲಿ ನೆಲೆ ನಿಂತ ಅಥವಾ ಇದ್ದಂತಹ ಮುಸ್ಲಿಂ ಸಮುದಾಯಗಳ ಕುರಿತು ಮಾಹಿತಿಯನ್ನು ನೀಡಿದ ಪ್ರವಾಸಿಗರ ಕಥನಗಳ ಧೋರಣೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ವಿಜಯನಗರಕ್ಕೆ ಭೇಟಿ ನೀಡಿದ್ದ ಪ್ರವಾಸಿಗರಲ್ಲಿ ಮುಖ್ಯವಾಗಿ ಇಬ್ನ್–ಎ–ಬತೂತ, ಡೋಮಿಂಗೋ ಪಾಯಸ್, ಬಾರ್ಬೋಸ್, ಪೆರ್ನಾಂವ್ ನ್ಯೂನಿಜ್, ವರ್ತಿಮಾ, ಟಾಮ್, ಪಿರೇಸ್, ಇಟಲಿಯ ನಿಕೊಲೊ ಕೊಂಟಿ, ಸೀಸರ್ ಫೆಡರಿಕ್, ರಷ್ಯಾದ ನಿಕಿಟನ್, ಪರ್ಶಿಯಾದ ಅಬ್ದುಲ್ ರಜಾಕ್ ಮುಂತಾದವರ ಕಥನಗಳು ಬಹುಮುಖ್ಯವಾದದ್ದಾಗಿವೆ. ಇವರ ಕಥನಗಳಲ್ಲಿನ ಮುಸ್ಲಿಂ ಸಮುದಾಯಗಳ ಉಲ್ಲೇಖಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ.

ಅರಬ್ ಪ್ರವಾಸಿಗರಲ್ಲಿ ಒಬ್ಬನಾದ ಇಬ್ನೆ ಬತೂತ ಭಾರತಕ್ಕೆ ಕ್ರಿ.ಶ. ೧೩೩೩ರಿಂದ ಕ್ರಿ.ಶ. ೧೩೪೭ರವರೆಗೆ ಭೇಟಿ ನೀಡಿದ್ದನು. ವಿಜಯನಗರ ಸಾಮ್ರಾಜ್ಯದಲ್ಲಿ ಸಂಚರಿಸಿ, ಹರಿಹರನ ಆಳ್ವಿಕೆಯ ಸಂದರ್ಭದಲ್ಲಿ ಹೊನ್ನಾವರ ಪ್ರದೇಶದಲ್ಲಿ ಕೆಲವು ಕಾಲ ನೆಲೆಸಿದ್ದನು. ಈ ಸಂದರ್ಭದಲ್ಲಿ ಹೊನ್ನಾವರದಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯದ ಬಗ್ಗೆ ಮಾಹಿತಿಯನ್ನು ತನ್ನ ಪ್ರವಾಸಿ ಕಥನವಾದ 'ಇಬನ್ ಜುಲೈ' ಕೃತಿಯಲ್ಲಿ ದಾಖಲಿಸಿರುವನು. ಇಬನ್ ಬತೂತನ ದಾಖಲಿಸಿರುವಂತೆ 'ಹೊನ್ನಾವರದ ಪ್ರಾಂತ್ಯವನ್ನು ಒಬ್ಬ ಮುಸ್ಲಿಂ ಸುಲ್ತಾನನಾದ ಜಲಾಲುದ್ದೀನನು ಆಳ್ವಿಕೆ ನಡೆಸುತ್ತಿದ್ದನು.

ಈ ಪ್ರಾಂತ್ಯ ವಿಜಯನಗರ ರಾಜ್ಯಕ್ಕೆ ಸೇರಿದ್ದಾಗಿದ್ದು, ಜಲಾಲುದ್ದೀನ್ ಇಸ್ಲಾಂ ಧರ್ಮದ ಪರಿಪಾಲಕನಾಗಿದ್ದು, ಪ್ರತಿನಿತ್ಯ ಸೂರ್ಯೋದಯ ಆಗುವ ಮೊದಲೇ ಮಸೀದಿಗೆ ಪ್ರಾರ್ಥನೆ ಮಾಡುತ್ತಿದ್ದ'[೪೩]ನೆಂದು ತಿಳಿಸಿರುವನು. ವಿಜಯನಗರ ಸ್ಥಾಪನೆ ನಂತರ ಆರಂಭಿಕ ಅರಸರ ಆಳ್ವಿಕೆಯ ಸಂದರ್ಭದಲ್ಲೇ ಮುಸ್ಲಿಂ ಅಧಿಕಾರಿಗಳನ್ನು ತಮ್ಮ ಅಧೀನ ಸಂಸ್ಥಾನಗಳಲ್ಲಿ ನೇಮಿಸಿಕೊಳ್ಳುತ್ತಿದ್ದ ರೆಂಬ ಮಾಹಿತಿಯನ್ನು ಇಲ್ಲಿ ಗಮನಿಸಬೇಕು. ಈ ಹಿನ್ನೆಲೆಯಲ್ಲಿ ಹಿಂದುತ್ವದ ಧೋರಣೆಗಳನ್ನು ಬಿಂಬಿಸುವ ಸಿದ್ಧಾಂತಗಳಿಗೆ ಈ ಮೇಲಿನ ಉಲ್ಲೇಖಗಳು ವ್ಯತಿರಿಕ್ತವಾಗಿದ್ದು, ವಿಜಯನಗರ ಚರಿತ್ರೆಯ ವಾಸ್ತವವಾದ ರಚನೆಗೆ ಉತ್ತರವನ್ನು ನೀಡುತ್ತದೆ ಎಂಬುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

ಪರ್ಶಿಯಾದ ಪ್ರವಾಸಿಗರಲ್ಲಿ ಅತಿಮುಖ್ಯವಾಗಿ ಕಾಣಿಸಿಕೊಳ್ಳುವ ಪ್ರವಾಸಿಗನೆಂದರೆ ಅಬ್ದುಲ್ ರಜಾಕ್. ಈತನು ಸುಲ್ತಾನ ರುಖ್‌ಷಾನನ ರಾಜ್ಯದ ರಾಯಭಾರಿಯಾಗಿ ಎರಡನೇ ದೇವರಾಯನ ಆಳ್ವಿಕೆಯಲ್ಲಿ ವಿಜಯನಗರದ ಆಸ್ಥಾನಕ್ಕೆ ಕ್ರಿ.ಶ. ೧೪೪೧ರಲ್ಲಿ ಭೇಟಿ ನೀಡಿದ್ದನು. 'ಮತ್ಲ-ಅಸ್-ಸಾ-ದೈನ್' ಎಂಬ ಕೃತಿಯಲ್ಲಿ ತನ್ನ ಪ್ರವಾಸಿ ಕಥನವನ್ನು ದಾಖಲಿಸಿದ್ದಾನೆ. ರಜಾಕ್ ವಿಜಯನಗರ ಸಾಮ್ರಾಜ್ಯದಲ್ಲಿ ಎರಡು ವರ್ಷ ಕಾಲ ನೆಲೆಸಿ ಕ್ರಿ.ಶ. ೧೪೪೩ರಲ್ಲಿ ತನ್ನ ರಾಷ್ಟ್ರಕ್ಕೆ ಹಿಂತಿರುಗಿದನು. ವಿಜಯನಗರ ರಾಜ್ಯಕ್ಕೆ ರಾಯಭಾರಿಯಾಗಿ ಆಗಮಿಸಿದ ಅಬ್ದುಲ್ ರಜಾಕ್‌ನಿಗೆ ಎರಡನೇ ದೇವರಾಯ ಗೌರವಾನ್ವಿತವಾಗಿ ಸ್ವಾಗತಿಸಿ, ರಜಾಕ್‌ನ ಸಂಸ್ಕೃತಿಗೆ ಧಕ್ಕೆ ಆಗದಂತೆ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದನು. ರಜಾಕ್‌ನ ಬರವಣಿಗೆಯಲ್ಲಿ ಕಂಡುಬರುವಂತೆ ಎರಡನೇ ದೇವರಾಯ ತನ್ನೊಂದಿಗೆ ಆಸಕ್ತಿಯಿಂದ ಚರ್ಚಿಸುತ್ತಿದ್ದ ವಿಚಾರಗಳನ್ನು ತಿಳಿಸಿರುವನು. ಅವುಗಳಲ್ಲಿನ ಕೆಲವು ವಿವರಣೆಗಳನ್ನು ಹೀಗೆ ತಿಳಿಯಬಹುದು. 'ವಾರಕ್ಕೆ ಎರಡು ಸಲ ಸಂಜೆಯ ಹೊತ್ತು ರಾಜನು ನನಗೆ ಹೇಳಿ ಕಳುಹಿಸಿ ನನ್ನ ದೊರೆಯಾದ ಖಾಖಾನ್‌ನ ಬಗ್ಗೆ ಪ್ರಶ್ನೆಗಳನ್ನು ಹಾಕಿ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದನು. ನನ್ನನ್ನು ಕುರಿತು ರಾಜನು ನನ್ನ ದೊರೆ ಖಾಖಾನ್, ಅವನ ಅಮೀರರು, ಅವನ ಸೈನ್ಯ ಹಾಗೂ ಕುದುರೆಗಳು ಮತ್ತು ಅವನ ದೇಶದ ದೊಡ್ಡ ನಗರಗಳಾದ ಸಮರ್‌ಕಂಡ್, ಹೆರಾತ್ ಮತ್ತು ಷಿರಾಜ್ ಇವುಗಳ ಬಗ್ಗೆ ಅತ್ಯಂತ ಸ್ನೇಹದ ನುಡಿಗಳನ್ನು ಆಡಿ, ತನ್ನ ಕಡೆಯಿಂದ ಒಬ್ಬ ದಕ್ಷ ರಾಯಭಾರಿಯನ್ನು ಹಲವಾರು ಸಾಲು ಆನೆಗಳನ್ನು ಹದಿನೆಂಟು ಖ್ವಾಜಗಳನ್ನು ಮತ್ತು ಇತರ ಬಹುಮಾನಗಳನ್ನು ಕಳುಹಿಸುವುದಾಗಿ ಹೇಳಿದನು'[೪೪] ಎಂದು ರಜಾಕ್ ತನ್ನ ಅನುಭವಗಳನ್ನು ಈ ಕಥನದಲ್ಲಿ ಹೇಳಿದ್ದಾನೆ.

ಈ ಮೇಲಿನ ಉಲ್ಲೇಖವನ್ನು ವಿಮರ್ಶಿಸಿದಾಗ ಅಥವಾ ಮರು ಓದಿಗೆ ಒಳಪಡಿಸಿದಾಗ ಭಿನ್ನ ರೀತಿಯ ಚಿತ್ರಣವು ವಿಜಯನಗರ ಚರಿತ್ರೆಯಲ್ಲಿ ಕಂಡುಬರುತ್ತದೆ. ಎರಡನೇ ದೇವರಾಯನು ಮುಸ್ಲಿಂ ರಾಜ್ಯಗಳೊಂದಿಗೆ ಉದಾರವಾದ ನೀತಿಯನ್ನು ಅನುಸರಿಸುತ್ತಿದ್ದನೆಂದು ಇಲ್ಲಿ ತಿಳಿಯಬಹುದಾಗಿದೆ. ಇಲ್ಲಿ ಮುಖ್ಯವಾಗಿ ಪ್ರಭುತ್ವದ ಧೋರಣೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ(ರಾಜಕೀಯ, ಆರ್ಥಿಕ ಪ್ರಾಬಲ್ಯ) ಎರಡನೇ ದೇವರಾಯನು ಪರ್ಶಿಯಾದ ರಾಯಭಾರತ್ವವನ್ನು ಸ್ವೀಕರಿಸಿದ್ದನು.

ಈತನು ಸದಾ ತನ್ನ ರಾಜ್ಯದ ರಾಜಕೀಯ, ಆರ್ಥಿಕ, ಸೈನಿಕ ವ್ಯವಸ್ಥೆಯನ್ನು ಉತ್ತಮಪಡಿಸಲು ಪ್ರಯತ್ನಿಸುತ್ತಿದ್ದನು. ತನ್ನ ರಾಜ್ಯದ ಆಡಳಿತ ವ್ಯವಸ್ಥೆಯನ್ನು ಇತರೆ ರಾಜ್ಯಗಳ ರಾಜಕೀಯ ಆಡಳಿತ ವ್ಯವಸ್ಥೆಗಿಂತ ಭಿನ್ನವಾದ ವ್ಯವಸ್ಥೆಯನ್ನು, ರಾಜಕೀಯ ಪರಿಕಲ್ಪನೆಗಳನ್ನು ತನ್ನ ರಾಜ್ಯಕ್ಕೆ ಅನುಸರಿಸುವ ಆಲೋಚನೆಯನ್ನು ಮಾಡುತ್ತಿದ್ದನು. ಈ ಹಿನ್ನೆಲೆಯಲ್ಲಿ ತಮ್ಮ ಸಂಸ್ಕೃತಿಯನ್ನು ಪೋಷಿಸುವುದರ ಜೊತೆಗೆ, ಭಿನ್ನ ಸ್ವರೂಪದ ಬೇರೆ ಸಂಸ್ಕೃತಿಯನ್ನು ಗೌರವಿಸಿ, ಅವರ ರಾಯಭಾರಿಗಳನ್ನು ತನ್ನ ರಾಜ್ಯದಲ್ಲಿ ಸ್ವಾಗತಿಸಿ ಅವರಿಗೆ ಇಲ್ಲಿನ ಸಂಸ್ಕೃತಿಯನ್ನು ಸ್ವತಂತ್ರವಾಗಿ ಆಚರಿಸಿಕೊಳ್ಳುವ ಅವಕಾಶವನ್ನು ನೀಡಿದ್ದನು. ಹಾಗಾಗಿ ಈ ಮೇಲಿನ ಉಲ್ಲೇಖವು ವಸಾಹತುಶಾಹಿ, ರಾಷ್ಟ್ರೀಯವಾದಿ ಬರಹಗಾರರ ನಿಲುವುಗಳಿಗೆ ಪ್ರತಿಯಾಗಿ ಭಿನ್ನ ಸ್ವರೂಪದ ದೃಷ್ಟಿಕೋನವನ್ನು ತೋರಿಸುತ್ತಿದೆ. ವಾಸ್ತವಿಕವಾಗಿ ದೇವರಾಯನ ಆಳ್ವಿಕೆಯಲ್ಲಿ ಹಿಂದೂ–ಮುಸ್ಲಿಂ ನಡುವೆ ಧಾರ್ಮಿಕ ಸಂಘರ್ಷಗಳು ಉದ್ಭವಿಸಿರಲಿಲ್ಲ. ಪ್ರಭುತ್ವದ ಹಿನ್ನೆಲೆಯಲ್ಲಿ ಸಾಮಾನ್ಯವಾಗಿ ವೈರತ್ವದ ಘರ್ಷಣೆಗಳಾಗುತ್ತಿದ್ದವೇ ಹೊರತು, ಕೋಮು ರೀತಿಯ ಹಿನ್ನೆಲೆಯಲ್ಲಿ ಕದನಗಳು ಉಂಟಾಗುತ್ತಿರಲಿಲ್ಲವೆಂಬುದಕ್ಕೆ ಈ ಉಲ್ಲೇಖ ನಮಗೆ ಪ್ರಮುಖ ಆಕರವಾಗಿದೆ.

ಈ ರೀತಿಯಾಗಿ ಅಬ್ದುಲ್ ರಜಾಕನು ಪ್ರಭುತ್ವಕೇಂದ್ರಿತ ಹಿನ್ನೆಲೆಯಲ್ಲಿ ಇದ್ದಂತಹ ರಾಜಕೀಯ ಚಿತ್ರಣವನ್ನು ವಿವರಿಸುವುದರ ಜೊತೆಗೆ, ವಿಜಯನಗರದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳ ಸಾಮಾಜಿಕ ಸ್ಥಿತಿಯನ್ನು ಸಹ ತಿಳಿಸಿರುವನು. ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವಿನ ಸಂಬಂಧವನ್ನು ತಿಳಿಸುತ್ತಾ, ಸೂಫಿ ಸಂತರ ಮಾಹಿತಿಯನ್ನು ತಿಳಿಸಿರುವನು. ಕ್ರಿ.ಶ. ೧೪೪೩ರಲ್ಲಿ ರಜಾಕ್ ಮಂಗಳೂರಿನಲ್ಲಿ ನೆಲೆಸಿದ್ದ ಸೂಫಿ ಸಂತನಾದ 'ಷರೀಫ್ ಎಮಿರ್‌ಸೈಯದ್ ಅಲ್ಲಾವುದ್ದೀನ್ ಮಸ್ಸೆಡಿ' ಎಂಬ ಯೋಗಿಯನ್ನು ಭೇಟಿ ಮಾಡಿದ್ದನು. 'ಈ ಸಂತನಿಗೆ ಹಿಂದೂ–ಮುಸ್ಲಿಂ ಸಮುದಾಯಗಳು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು'[೪೫] ಎಂಬುದನ್ನು ಪ್ರಸ್ತಾಪಿಸಿದ್ದಾನೆ. ಅಲ್ಲದೆ ವಿಜಯನಗರದ ರಾಯಭಾರಿಗಳಲ್ಲಿ ಒಬ್ಬ ಮುಸ್ಲಿಂ ರಾಯಭಾರಿಯಾದ 'ಖ್ವಾಜಾಮಸೂದ'ನು ಮಂಗಳೂರು ನಗರದಲ್ಲಿ ತೀರಿಕೊಂಡನೆಂದು ತಿಳಿಸಿದ್ದಾನೆ. ಈ ರೀತಿಯಾಗಿ ರಜಾಕನ ಕಥನಗಳಲ್ಲಿ ಮುಸ್ಲಿಂ ರಾಯಭಾರಿಗಳ ಬಗ್ಗೆ, ಸೂಫಿ ಸಂತನ ಬಗ್ಗೆ, ಹಿಂದೂ–ಮುಸ್ಲಿಂ ನಡುವಿನ ಸಂಬಂಧ, ಹಿಂದೂ ಸಮುದಾಯಗಳ ಮೇಲೆ ಸೂಫಿ ಸಂತನ ಪ್ರಭಾವ ಪ್ರಭುತ್ವದ ಮೇಲೆ ಮುಸ್ಲಿಂ ರಾಜ್ಯಗಳ ಸಂಬಂಧಗಳ ಬಗೆಗೆ ತನ್ನ ಕಥನದಲ್ಲಿ ದಾಖಲಿಸಿರುವನು.

ಮುಸ್ಲಿಂ ಸಮುದಾಯಗಳ ಬಗ್ಗೆ ಮಾಹಿತಿಯನ್ನು ನೀಡುವ ಪ್ರಮುಖ ಪ್ರವಾಸಿ ಕಥನವೆಂದರೆ ದುಆರ್ತೆ ಬಾರ್ಬೋಸ್. ಬಾರ್ಬೋಸನ ಕಥನದಲ್ಲಿ ಮುಸ್ಲಿಂ ಸಮುದಾಯಗಳ ಬಗೆಗೆ ಮಾಹಿತಿಯನ್ನು ನೀಡಿದ್ದಾನೆ. ಬಾರ್ಬೋಸನು ಪೋರ್ಚುಗೀಸ್ ವ್ಯಾಪಾರಸ್ಥನಾಗಿದ್ದು, ಕ್ರಿ.ಶ. ೧೫೦೦ರಲ್ಲಿ ಭಾರತಕ್ಕೆ ಬಂದಿದ್ದನು. ಈತ ಭಾರತದ ವಿವಿಧ ರಾಜ್ಯಗಳಲ್ಲಿ ಸಂಚರಿಸಿ, ಜನರ ನಡೆ ನುಡಿ, ಸಂಸ್ಕೃತಿ ಕುರಿತು ದಾಖಲಿಸಿದ್ದಾನೆ. ಬಾರ್ಬೋಸ್‌ನ ಪ್ರವಾಸಿ ಕಥನದಲ್ಲಿ ಉಲ್ಲೇಖಿಸುವಂತೆ, ಮುಸ್ಲಿಂ

ವರ್ತಕರು ಸಮಕಾಲೀನ ಸಂದರ್ಭದಲ್ಲಿ ಆಳುತ್ತಿದ್ದ ಪ್ರಭುತ್ವದ ರಾಜ್ಯಗಳಲ್ಲಿ ಪರಸ್ಪರ ಆಗುವಂತಹ ಸಾಮಾಜಿಕ ಚಲನೆಯ ಸ್ಥಿತಿಗತಿಗಳನ್ನು ಗುರುತಿಸಬಹುದು. ವಿಜಯನಗರದಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯಗಳು ತಮ್ಮ ವ್ಯಾಪಾರದ ಉದ್ದೇಶಕ್ಕಾಗಿ ವಿವಿಧ ರಾಜ್ಯಗಳಲ್ಲಿ ಸಂಚರಿಸುತ್ತಿದ್ದವು. ಹಾಗಾಗಿ ವಿಜಯನಗರದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳು ದಕ್ಷಿಣ ಭಾರತದ ಹಾಗೂ ಉತ್ತರ ಭಾರತದ ರಾಜ್ಯಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಕಾರಣಗಳಿಗಾಗಿ ಮುಕ್ತವಾದ ಒಡನಾಟವನ್ನು ಹೊಂದಿದ್ದರು. ಜೊತೆಗೆ ಈ ಸಮುದಾಯಗಳು ವಿಜಯನಗರದ ಆರ್ಥಿಕ ಪ್ರಗತಿಯಲ್ಲಿ ಹೊಂದಿದಂತಹ ಪಾತ್ರವನ್ನು ಇವನ ಕಥನದಿಂದ ತಿಳಿದುಕೊಳ್ಳಬಹುದು. ಈ ಅವಧಿಯಲ್ಲಿ ಉತ್ತರ ಭಾರತದ ಮತ್ತು ದಕ್ಷಿಣ ಭಾರತದಲ್ಲಿ ಮುಸ್ಲಿಂ ವರ್ತಕರು ತಮ್ಮ ವ್ಯಾಪಾರದ ಪ್ರಾಬಲ್ಯವನ್ನು ಹೊಂದಿದ್ದರು. ಆದರೆ ಪೋರ್ಚುಗೀಸರು ಭಾರತಕ್ಕೆ ಪ್ರವೇಶಿಸಿದ ನಂತರ ಹೇಗೆ ತಮ್ಮ ಏಕಸ್ವಾಮ್ಯವನ್ನು ಕಳೆದುಕೊಂಡರು ಎಂಬ ಮಾಹಿತಿಯು ಈ ಕಥನದಲ್ಲಿ ವ್ಯಕ್ತವಾಗಿದೆ.

ಬಾರ್ಬೋಸನು ತನ್ನ ಕಥನದಲ್ಲಿ ವಿಜಯನಗರ ರಾಜ್ಯದಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದಂತಹ ಪ್ರಮುಖ ಪಟ್ಟಣ ಪ್ರದೇಶಗಳು, ಬಂದರುಗಳು, ಆಂತರಿಕ ಮತ್ತು ವಿದೇಶಿ ವರ್ತಕರ ವ್ಯಾಪಾರ ವಹಿವಾಟುಗಳು, ಆಮದು–ರಫ್ತು ಮಾಡುತ್ತಿದ್ದ ವಸ್ತುಗಳು ಹೀಗೆ ವಿವಿಧ ಮಾಹಿತಿಗಳ ವಿವರ ತಿಳಿಸಿದ್ದಾನೆ. ಬಾರ್ಬೋಸ್‌ನ ಉಲ್ಲೇಖದಲ್ಲಿ 'ಈ ಮುಸ್ಲಿಂ ವರ್ತಕರು ಮುಖ್ಯವಾಗಿ ಅರಬ್ಬರು, ಪರ್ಶಿಯನ್ನರು, ಮಾಮೋಲಿಕರು, ತುರ್ಕಿಗಳು, ಖೋರಸಾನಿಯರು ಹಾಗೂ ದಖ್ಖನಿ ಮುಸ್ಲಿಂ ಸಮುದಾಯಗಳು ಕಂಡುಬಂದಿದ್ದು, ಇವರು ವ್ಯಾಪಾರದ ಉದ್ದೇಶಗಳಿಗಾಗಿ ಭಾರತದ ವಿವಿಧ ರಾಜ್ಯಗಳಲ್ಲಿ ಬಂದು ನೆಲೆಸಿದ್ದರು. ಈ ರೀತಿಯ ವಿವಿಧ ರಾಷ್ಟ್ರಗಳಿಂದ ಬಂದು ನೆಲೆಸಿದ ಈ ಸಮುದಾಯದವರು ರಾಜ್ಯದ ಎಲ್ಲಾ ವ್ಯಾಪಾರಸ್ಥ ಪ್ರದೇಶಗಳಲ್ಲಿ ಕಂಡುಬರುತ್ತಿದ್ದರು'[೪೬] ಎಂದು ವಿವರಿಸಿದ್ದಾನೆ. ವಿಜಯನಗರ ರಾಜ್ಯವು ತನ್ನ ಆಂತರಿಕ ರಾಜ್ಯ–ರಾಜ್ಯಗಳ ನಡುವೆ ಹಾಗೂ ವಿದೇಶಿ ರಾಜ್ಯಗಳ ನಡುವೆ ಕೈಗೊಳ್ಳುತ್ತಿದ್ದ ವ್ಯಾಪಾರದ ಸಂಪರ್ಕದ ಅಂಶಗಳನ್ನು ಇಲ್ಲಿ ತಿಳಿಸಲಾಗಿದೆ. ವಿಜಯನಗರ ತನ್ನ ಸುತ್ತಮುತ್ತಲಿನ ರಾಜ್ಯಗಳಾದ ಗುಜರಾತ್, ದೆಹಲಿ, ಒರಿಸ್ಸಾ, ಮುಂಬಯಿ, ಸಿಲೋನ್, ಕ್ಯಾಲಿಕಟ್, ದೀಯುಗಳೊಂದಿಗೆ ಹಾಗೂ ವಿದೇಶಿ ರಾಷ್ಟ್ರಗಳಾದ ಏಡನ್, ಓರ್ಮುಸ್, ಪೆಗು, ಮಾಲ್ಡೀವ್ ಮುಂತಾದ ವಿದೇಶಿ ರಾಜ್ಯಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು. ಬಾರ್ಬೋಸನು ಮುಸ್ಲಿಂ ಸಮುದಾಯಗಳ ನೆಲೆಗಳನ್ನು ತಿಳಿಸುತ್ತಾ, ಇವರು ಮಲಬಾರ್, ಭಟ್ಕಳ, ಹೊನ್ನಾವರ, ಮಂಗಳೂರು, ಕಣ್ಣಾನೂರು, ಗೋವಾ, ಚೋಲಮಂಡಳ, ಪುಲಿಕಾಟ್, ಸಿಲೋನ್‌ಗಳಲ್ಲಿ ನೆಲೆಸಿದ್ದು, ಈ ಸಮುದಾಯಗಳ ಪಾತ್ರವನ್ನು ವಿವರಿಸಲಾಗಿದೆ.

ಮಲಬಾರ್‌ನಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯದ ಬಗೆಗೆ ತಿಳಿಸುತ್ತಾ "ಈ ಪ್ರದೇಶದಲ್ಲಿ ಮುಸ್ಲಿಮರು ಬೃಹತ್ ಸಂಖ್ಯೆಯಲ್ಲಿ ನೆಲೆಸಿದ್ದು, ಸಮುದ್ರತೀರದ ವ್ಯಾಪಾರವೆಲ್ಲವು ಇವರ ಕೈಯಲ್ಲಿತ್ತು. ಮಲಬಾರ್‌ನಲ್ಲಿ ನೆಲೆಸಿದ್ದ ಮುಸ್ಲಿಮರನ್ನು 'ಮಾಪುಳ್ಳ'(ಮಾಪಿಳ್ಳೆ) ಎಂದು ಕರೆಯುತ್ತಿದ್ದರು. ಮುಸ್ಲಿಂ

ಸಮುದಾಯಗಳು ಶ್ರೀಮಂತ ವರ್ತಕರಾಗಿದ್ದು, ಪೋರ್ಚುಗೀಸರು ಆಗಮಿಸುವವರೆಗೆ ಇವರು ಉಚ್ಛ್ರಾಯ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದರು. ಮಲಬಾರ್‌ನಲ್ಲಿ ಅನೇಕ ಮಸೀದಿಗಳು ಕಂಡುಬರುತ್ತವೆ. ಮುಸ್ಲಿಂ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟ ಹಲವು ಹಿಂದೂ ಸಮುದಾಯಗಳು ಸಹ ಮತಾಂತರ ಆಗುತ್ತಿದ್ದರು. ಈ ಮಲಬಾರಿ ಮುಸ್ಲಿಮರ ಪ್ರಭಾವ ಈ ಪ್ರದೇಶದಲ್ಲಿ ಎಷ್ಟಿತ್ತೆಂದರೆ ಇವರು ಸ್ವತಃ ತಮ್ಮದೇ ಒಂದು ಪ್ರಭುತ್ವವನ್ನು ಸ್ಥಾಪಿಸುವ ಹಂತದಲ್ಲಿದ್ದರು. ಮಲಬಾರ್‌ನ ಮುಸ್ಲಿಂ ವರ್ತಕರು ಏಡನ್, ಸಿಲೋನ್, ಕೋಯ್ಲಾಂ ರಾಜ್ಯದ ಕಾಯೆಲ್, ಚೋಳ ರಾಜ್ಯದಲ್ಲಿನ ಕ್ಯಾಲಿಕಟ್(ಮಧುರೆ ಜಿಲ್ಲೆ) ಕಾಯೆಲ್ ರಾಜ್ಯಗಳೊಂದಿಗೆ ವ್ಯಾಪಾರವನ್ನು ನಡೆಸುತ್ತಿದ್ದರು. ಈ ಮಲಬಾರಿಗಳು ಸಿಂಹಳ ರಾಜ್ಯದಿಂದ ಆನೆಗಳನ್ನು ಕೊಂಡುಕೊಂಡು, ಅದನ್ನು ವಿಜಯನಗರ, ದಖ್ಖನ್, ಚೋಳ ಮತ್ತು ಕ್ಯಾಂಬೆ ರಾಜ್ಯದ ವರ್ತಕರಿಗೆ ಮಾರುತ್ತಿದ್ದರು. ಈ ಮಲಬಾರಿಗಳು ಸಿಂಹಳ ರಾಜ್ಯದಲ್ಲಿ ಹೋಗಿ ನೆಲೆಸಿದ್ದರು" ಎಂದು ವಿವರಿಸಿದ್ದಾನೆ. ಆದರೆ ಪೋರ್ಚುಗೀಸರು ಮಲಬಾರ್ ಪ್ರಾಂತ್ಯವನ್ನು ತಮ್ಮ ಸ್ವಾಧೀನಕ್ಕೆ ಒಳಪಡಿಸಿಕೊಂಡಾಗ, ಮಲಬಾರ್ ಮುಸ್ಲಿಂ ವರ್ತಕ ಸಮುದಾಯ ಚೋಳಮಂಡಲದಲ್ಲಿ ನೆಲೆ ನಿಂತರು ಎಂದು ತಿಳಿಸಿದ್ದಾನೆ.

ವಿಜಯನಗರ ರಾಜ್ಯಕ್ಕೆ ಸೇರಿದ್ದ ಪುಲಿಕಾಟ್ ಪ್ರದೇಶದಲ್ಲಿಯೂ ಮುಸ್ಲಿಂ ವರ್ತಕರು ಕಂಡು ಬರುತ್ತಿದ್ದರು. ಪುಲಿಕಾಟ್ ಬಂದರು ಪ್ರದೇಶದಲ್ಲಿ ಮುಸ್ಲಿಮರು 'ಪೆಗು' ಎಂಬ ದೇಶದೊಂದಿಗೆ ವ್ಯಾಪಾರ ಸಂಪರ್ಕ ಹೊಂದಿದ್ದರು. ಪುಲಿಕಾಟ್‌ನಲ್ಲಿ ಬಟ್ಟೆಗಳಿಗೆ ಬೇಡಿಕೆಯಿದ್ದು ಮಲಕ್ಕಾ, ಪೆಗು, ಗುಜರಾತ್ ಮತ್ತು ಮಲಬಾರಿನ ವರ್ತಕರು ಇಲ್ಲಿ ವ್ಯಾಪಾರ ನಡೆಸುತ್ತಿದ್ದರು. ಹೊನ್ನಾವರ ಪ್ರದೇಶದಿಂದ ಅಕ್ಕಿಯನ್ನು ಮಲಬಾರಿಗಳು ಕೊಂಡು ವಿದೇಶಿ ಮುಸ್ಲಿಂ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದರು. ಓರ್ಮಸ್ಸಿನಿಂದ ಭಟ್ಕಳಕ್ಕೆ ಕುದುರೆ ಮತ್ತು ಮುತ್ತುಗಳನ್ನು ತರುತ್ತಿದ್ದರು. ಇಲ್ಲಿಂದ ವಿಜಯನಗರ ರಾಜ್ಯಕ್ಕೆ ರಫ್ತು ಆಗುತ್ತಿದ್ದವು. ಬಾರ್ಕೂರು ಮತ್ತು ಬಸ್ರೂರು ಪಟ್ಟಣದಿಂದ ಭತ್ತವನ್ನು ಮಲಬಾರಿಗಳು ಕೊಂಡುಕೊಳ್ಳುತ್ತಿದ್ದರು. ಮಂಗಳೂರು ಪಟ್ಟಣದಲ್ಲಿಯು ಮುಸ್ಲಿಮರು ನೆಲೆಸಿದ್ದು, ಇಲ್ಲಿಂದ ಮಲಬಾರಿಗೆ ಕಂದು ಬಣ್ಣದ ಅಕ್ಕಿ ರವಾನೆಯಾಗುತ್ತಿತ್ತು. ಮಲಬಾರ್, ಸಿಲೋನ್‌ನಲ್ಲಿನ ವರ್ತಕ ಸಮುದಾಯ ಇಲ್ಲಿ ಹೆಚ್ಚು ವ್ಯಾಪಾರವನ್ನು ನಡೆಸುತ್ತಿದ್ದವು. ಬಾರ್ಬೋಸ್ ಕಥನದಲ್ಲಿ ಮುಖ್ಯವಾಗಿ ಬಹಮನಿ ಮತ್ತು ವಿಜಯನಗರದ ನಡುವೆ ಇದ್ದ ವ್ಯಾಪಾರ ಸಂಬಂಧವನ್ನು ತಿಳಿಸಿದ್ದಾನೆ. ದಖ್ಖನ್ ರಾಜ್ಯಕ್ಕೆ(ಬಹಮನಿ, ಆದಿಲ್‌ಶಾಹಿ) ಸೇರಿದ ಪ್ರದೇಶವಾದ 'ಚೌಲ್' ಬೃಹತ್ ವ್ಯಾಪಾರ ಕೇಂದ್ರವಾಗಿದ್ದು, ಮಲಬಾರ್ ವರ್ತಕರು ಇಲ್ಲಿ ತಮ್ಮ ವ್ಯಾಪಾರ-ವಾಣಿಜ್ಯವನ್ನು ನಡೆಸುತ್ತಿದ್ದರು. ದಖ್ಖನ್ ರಾಜ್ಯಕ್ಕೆ ಸೇರಿದ್ದ ಇನ್ನೊಂದು ಪಟ್ಟಣ ಪ್ರದೇಶವಾದ 'ದುಬುಲ್'ನಲ್ಲಿ ಮಲಬಾರ್, ಏಡನ್, ಮಲಕ್ಕಾ, ಕ್ಯಾಂಬೆ, ಓರ್ಮಸ್ ವರ್ತಕರು ಕುದುರೆಗಳನ್ನು ತಂದು ಇಲ್ಲಿ ಮಾರುತ್ತಿದ್ದರು. ಪೋರ್ಚುಗೀಸರು ಈ ಪ್ರದೇಶದಲ್ಲಿ ತಮ್ಮ ಪ್ರಭಾವ ಬೀರಿದ್ದರಿಂದ ಮುಸ್ಲಿಂ ವರ್ತಕರ ಪ್ರಭಾವ ಇಲ್ಲಿ ಕಡಿಮೆಯಾಯಿತು. 'ಬಹಮನಿ ರಾಜ್ಯಕ್ಕೆ ಸೇರಿದ್ದ ಗೋವಾ ವ್ಯಾಪಾರ

ಬಂದರಿನಲ್ಲಿ ಮಲಬಾರ್, ಕ್ಯಾಂಬೆ, ಓರ್ಮುಸ್, ಏಡನ್‌ದಿಂದ ಹಡಗುಗಳು ಬಂದು ತಮ್ಮ ವ್ಯಾಪಾರ ಮಾಡುತ್ತಿದ್ದರು'[೪೭] ಎಂದು ಉಲ್ಲೇಖಿಸಿದ್ದಾನೆ. ಈ ರೀತಿ ಬಾರ್ಬೋಸ್ ಬಹಮನಿ ಮತ್ತು ಆದಿಲ್‌ಶಾಹಿಗಳ ವಿಚಾರ ತಿಳಿಸುತ್ತಾನೆ. ಇಲ್ಲಿನ ಮುಸ್ಲಿಂ ಸಮುದಾಯಗಳ ಸಾಮಾಜಿಕ ಜೀವನವನ್ನು ಈ ರೀತಿ ಬರೆಯುತ್ತಾನೆ. ಇಲ್ಲಿನ ಮುಸ್ಲಿಂ ಸಮುದಾಯ 'ಅರಬ್ಬಿ, ಪಾರ್ಸಿ ಮತ್ತು ದಖನೀ ಭಾಷೆ ಆಡುತ್ತಿದ್ದರು'[೪೮] ಎಂದು ತಿಳಿಸಿರುವನು. ಅಲ್ಲದೆ ಬಹಮನಿ ಮತ್ತು ವಿಜಯನಗರ ನಡುವೆ ನಡೆದ ಯುದ್ಧಗಳ ಬಗ್ಗೆ ಮಾಹಿತಿ ನೀಡಿರುವನು. ಹೀಗೆ ಬಾರ್ಬೋಸ್‌ನು ಪ್ರಮುಖವಾಗಿ ವಿಜಯನಗರದಲ್ಲಿನ ಮುಸ್ಲಿಂ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗಳನ್ನು ತನ್ನ ಪ್ರವಾಸಿ ಕಥನದಲ್ಲಿ ದಾಖಲಿಸಿದ್ದಾನೆ.

ವಿಜಯನಗರ ಪಟ್ಟಣದಲ್ಲಿ ನೆಲೆ ನಿಂತ ಮುಸ್ಲಿಂ ಸಮುದಾಯದ ಮಾಹಿತಿಯ ಕುರಿತು ಬೆಳಕು ಚೆಲ್ಲುವಂತಹ ಮತ್ತೊಂದು ಪ್ರವಾಸಿ ಕಥನವೆಂದರೆ ಡೋಮಿಂಗೊ ಪಾಯಸ್. ಈತನು ಕ್ರಿ.ಶ. ೧೫೨೦ರಲ್ಲಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ತಾನು ಕಂಡುಕೊಂಡ ಮಾಹಿತಿಯನ್ನು ತಿಳಿಸಿರುವನು. ಮುಸ್ಲಿಮರು ವಿಜಯನಗರ ಪಟ್ಟಣದ ಕೊನೆಯ ಭಾಗದಲ್ಲಿ ನೆಲೆಸಿದ್ದರು. ಇವರು ದೇಶ ಮತ್ತು ವಿದೇಶಗಳಿಂದ ಬಂದಂತಹ ಮುಸ್ಲಿಮರಾಗಿದ್ದರು ಎಂಬುದಾಗಿ ತಿಳಿಸಿರುವನು. ಹಾಗಾಗಿ ಇಲ್ಲಿ ವಿವಿಧ ರಾಷ್ಟ್ರಗಳಿಂದ ಬಂದು ನೆಲೆಸಿದ ಮುಸ್ಲಿಂ ಸಮುದಾಯಗಳು ವ್ಯಾಪಾರಸ್ಥರಾಗಿ, ಸೈನಿಕರಾಗಿ ಇಲ್ಲಿ ನೆಲೆಸಿದ್ದರು ಎಂಬ ಅಂಶಗಳು ಇವನ ಕಥನದಿಂದ ತಿಳಿದುಬರುತ್ತದೆ. ಇವರ ಆಹಾರಪದ್ಧತಿಯನ್ನು ತಿಳಿಸುತ್ತಾನೆ. ಇವರು ಅತಿ ಹೆಚ್ಚು ಗೋಧಿಯನ್ನು ಸೇವಿಸುತ್ತಿದ್ದರೆಂದು ತಿಳಿಸುತ್ತಾನೆ. ವಿಜಯನಗರ ರಾಜ್ಯದಲ್ಲಿ ಕಂಡುಬರುವ ಮುಸ್ಲಿಂ ಸೈನ್ಯದ ಬಗ್ಗೆ ಮಾಹಿತಿ ನೀಡುತ್ತಾನೆ, ಇವರಲ್ಲಿ ನಿಪುಣರಾದಂತಹ ಮುಸ್ಲಿಂ ಬಿಲ್ಲುಗಾರರು ವಿಜಯನಗರ ಸೈನ್ಯದಲ್ಲಿ ಸೇರಿಕೊಂಡಿದ್ದರು ಎಂಬ ಉಲ್ಲೇಖಗಳು ಈ ಕಥನದಲ್ಲಿ ಕಂಡುಬರುತ್ತದೆ.

ವರ್ತಿಮಾ ಕ್ರಿ.ಶ. ೧೫೦೨ರಲ್ಲಿ ಭಾರತಕ್ಕೆ ಬಂದಿದ್ದ. ಇವನು ಭಟ್ಕಳದಲ್ಲಿ ನೆಲೆ ನಿಂತ ಅನೇಕ ಮೂರರ(ಮುಸ್ಲಿಂ) ಕುರಿತು ಮಾಹಿತಿ ನೀಡಿದ್ದಾನೆ. ಅದೇ ರೀತಿ ಪರ್ಶಿಯಾದಿಂದ ಕುದುರೆಗಳು ಕಣ್ಣಾನೂರಿಗೆ ಬಂದು, ಇಲ್ಲಿಂದ ವಿಜಯನಗರಕ್ಕೆ ರವಾನೆ ಆಗುತ್ತಿದ್ದವೆಂದು ತಿಳಿಸಿದ್ದಾನೆ. ಇನ್ನು ಸೀಜರ್ ಫ್ರೆಡರಿಕ್‌ನು ಕ್ರಿ.ಶ. ೧೫೬೭ರಲ್ಲಿ ವಿಜಯನಗರಕ್ಕೆ ವ್ಯಾಪಾರದ ಉದ್ದೇಶಕ್ಕೆ ಬಂದಿದ್ದು, ಈ ಸಂದರ್ಭದಲ್ಲಿ ವಿಜಯನಗರ ರಾಜ್ಯವು ಕುದುರೆಗಳನ್ನು ಆಮದು ಮಾಡಿಕೊಳ್ಳುತ್ತಿತ್ತು ಎಂಬ ಅಂಶ ಇವನ ಕಥನದಿಂದ ತಿಳಿದುಬರುತ್ತದೆ. ಅಲ್ಲದೆ ಕ್ರಿ.ಶ. ೧೫೬೫ರಲ್ಲಿ ನಡೆದ ರಕ್ಕಸತಂಗಡಿ ಯುದ್ಧದ ಬಗ್ಗೆ ಮಾಹಿತಿಯನ್ನು ಸಹ ನೀಡಿದ್ದಾನೆ.

ಹೀಗೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರು ಇಲ್ಲಿದ್ದ ಮುಸ್ಲಿಂ ಸಮುದಾಯಗಳ ಕುರಿತು ಅನೇಕ ವಿಧವಾದ ಮಾಹಿತಿಯನ್ನು ನೀಡಿರುವುದು ಕಂಡುಬರುತ್ತದೆ. ಇಲ್ಲಿ ನಡೆಯುತ್ತಿದ್ದ ವ್ಯಾಪಾರ ವಹಿವಾಟು, ಜನಜೀವನ, ಸಾಮಾಜಿಕ ಸಂಬಂಧಗಳು

ಮುಂತಾದ ಸಮುದಾಯಕೇಂದ್ರಿತ ವಿಚಾರಗಳು ಪ್ರವಾಸಿ ಕಥನಗಳಲ್ಲಿ ಚಿತ್ರಿತವಾಗಿವೆ. ಕೇವಲ ವಿಜಯನಗರ ರಾಜ್ಯಕ್ಕೆ ಮಾತ್ರ ಈ ಸಮುದಾಯಗಳು ಸೀಮಿತವಾಗದೆ ಪಕ್ಕದ ಬಹಮನಿ ಹಾಗೂ ನಂತರದ ಆದಿಲ್‌ಶಾಹಿ ಮನೆತನಗಳ ಆಳ್ವಿಕೆಯಲ್ಲಿ ಇದ್ದ ಮುಸ್ಲಿಂ ಸಮುದಾಯಗಳೊಂದಿಗೂ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸಂಬಂಧವನ್ನು ಇಟ್ಟುಕೊಂಡಿದ್ದವು ಎನ್ನುವ ಸಂಗತಿ ಈ ಮೇಲಿನ ಕಥನಗಳಲ್ಲಿ ಉಲ್ಲೇಖಿತವಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರ ಚರಿತ್ರೆಯನ್ನು ಮರು ಓದಿಗೆ ಒಳಪಡಿಸಿದಾಗ ಚರಿತ್ರೆಯಲ್ಲಿ ಮರೆಮಾಚಿದಂತಹ ಹೊಸ ವಿಚಾರಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ವಿಜಯನಗರ ಚರಿತ್ರೆ ರಚನೆಯಲ್ಲಿ ಸಮಕಾಲೀನ ಸಂದರ್ಭದಲ್ಲಿ ಭೇಟಿ ನೀಡಿದಂತಹ ಪ್ರವಾಸಿಗರನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಆದರೆ ವಿಜಯನಗರ ಅವನತಿ ನಂತರ ವಿಜಯನಗರಕ್ಕೆ ಭೇಟಿ ಕೊಟ್ಟಂತಹ ಪ್ರವಾಸಿಗರನ್ನು ಅಧ್ಯಯನಕ್ಕೆ ಒಳಪಡಿಸಿದಾಗ ವಿಜಯನಗರ ಚರಿತ್ರೆ ರಚನೆಯಲ್ಲಿ ಹೊಸ ರೂಪ ಅಥವಾ ತಿರುವು ಕಂಡುಕೊಳ್ಳುವ ಸಾಧ್ಯತೆಗಳಿವೆ. ವಿಜಯನಗರ ಮತ್ತು ಬಹಮನಿ ನಡುವಿನ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿ ಕುರಿತು ಮಾಹಿತಿ ನೀಡುವ ಪ್ರವಾಸಿ ಕಥನಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಇವೆರಡು ರಾಜ್ಯಗಳ ನಡುವೆ ವಾಸ್ತವಿಕವಾದಂತಹ ಸಂಬಂಧವನ್ನು ಗುರುತಿಸಬಹುದಾಗಿದೆ. ಹಾಗಾಗಿ ಪ್ರಭುತ್ವದ ಆಳ್ವಿಕೆಯ ಸಂದರ್ಭದಲ್ಲಿ ಪ್ರಭುತ್ವದ ಧೋರಣೆಗಳಲ್ಲಿ ಪ್ರಜೆಗಳ ಮೇಲೆ ಇರುವಂತಹ ವಾಸ್ತವಿಕ ಪರಿಸ್ಥಿತಿಯ ಮನೋಭಾವನೆಯನ್ನು ಅರಿಯಲು ಇನ್ನೂ ಸೂಕ್ಷ್ಮ ಅಧ್ಯಯನಗಳು ನಡೆಯಬೇಕಾಗಿದೆ.

ದಕ್ಷಿಣ ಭಾರತದ ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ತಿಳಿಸಿಕೊಡುವಲ್ಲಿ ಅರೇಬಿಯನ್ ಹಾಗೂ ಪರ್ಶಿಯನ್ ದಾಖಲೆಗಳು ಮಹತ್ವದ್ದಾಗಿವೆ. ಕ್ರಿ.ಶ. ೮ನೇ ಶತಮಾನದಿಂದ ೧೬ನೇ ಶತಮಾನದಲ್ಲಿ ಕಂಡುಬರುವ ಅರಬ್ಬರ ಪ್ರವಾಸಿ ಕಥನಗಳಲ್ಲಿ ತಮಿಳುನಾಡು, ಕೇರಳ, ಕರ್ನಾಟಕದ ಕರಾವಳಿ ತೀರದಲ್ಲಿ ನೆಲೆಸಿದ್ದ ಮುಸ್ಲಿಂ ವರ್ತಕ ಸಮುದಾಯಗಳ ಕುರಿತು ಉಲ್ಲೇಖಗಳು ಕಂಡುಬರುತ್ತವೆ. ಇಬನ್-ಖುರ್ದೇಶನು ಕ್ರಿ.ಶ. ೯ನೇ ಶತಮಾನದಲ್ಲಿ ಭಾರತದ ಚರಿತ್ರೆಯನ್ನು ತಿಳಿಸುವ ಬರಹಗಾರನಾಗಿದ್ದನು. ಈತನು ಮಲಬಾರಿನ ಬಂದರು ಪಟ್ಟಣಗಳಿಂದ ಮುಸ್ಲಿಂ ವರ್ತಕ ಸಮುದಾಯಗಳು ವಿದೇಶಕ್ಕೆ ಅಕ್ಕಿಯನ್ನು ರಫ್ತು ಮಾಡುತ್ತಿದ್ದರೆಂಬುದನ್ನು ದಾಖಲಿಸಿದ್ದಾನೆ. ಕ್ರಿ.ಶ. ೧೦ನೇ ಶತಮಾನದಲ್ಲಿ ಇಬನ್ ಫಾಕ್ಯೂಹ, ಇಬನ್ ರುಶ್ತ, ಅಬುಜದ ಮತ್ತು ಮಸೂದಿ ಕೇರಳದ ವರ್ತಕರ ಬಗ್ಗೆ ಮಾಹಿತಿಯನ್ನು ನೀಡುತ್ತಾರೆ. ಕ್ರಿ.ಶ. ೧೧ನೇ ಶತಮಾನದಲ್ಲಿ ಅಲ್-ಬರೋನಿ, ಇದ್ರೀಸಿ ಮತ್ತು ಯಾಕುತ್ ಹಾಗೂ ಕ್ರಿ.ಶ. ೧೨-೧೩ನೇ ಶತಮಾನದಲ್ಲಿ ಎ.ಡಿ. ರಶಿದುದ್ದೀನ್-ಅಲ್-ಖಾಜ್ವಿನಿ, ಅಬ್ದುಲ್ ಫಿದಾ, ಪ್ರಮುಖ ಅರಬ್ ವಿದ್ವಾಂಸರು ಕಂಡುಬರುತ್ತಾರೆ. ಇವರು ದಕ್ಷಿಣ ಭಾರತದ ಕರಾವಳಿ ಪ್ರದೇಶಗಳಲ್ಲಿ ಮುಸ್ಲಿಂ ಸಮುದಾಯಗಳ ಚಾರಿತ್ರಿಕ ದಾಖಲೆಗಳು ಕಂಡುಬರುತ್ತವೆ. ಈ ದಾಖಲೆಗಳು ಭಾರತದ ಚರಿತ್ರೆ ರಚನೆಯಲ್ಲಿ ಮುಸ್ಲಿಂ ಸಮುದಾಯಗಳ ಚರಿತ್ರೆಯು ಪ್ರಾಚೀನ ಕಾಲಕ್ಕೆ ಕೊಂಡ್ಯೊಯುತ್ತದೆ. ಇನ್ನು ಮುಂದುವರಿದು ಕ್ರಿ.ಶ. ೧೫ನೇ

ಶತಮಾನ ಅಂದರೆ ವಿಜಯನಗರ ಕಾಲದಲ್ಲಿ ದಕ್ಷಿಣ ಪ್ರಾಂತ್ಯಗಳಿಗೆ ಭೇಟಿ ನೀಡಿದ್ದ ವಿದ್ವಾಂಸರು, ಪ್ರವಾಸಿಗಳ ಬರಹಗಳು ಸಹ ಲಭ್ಯವಾಗುತ್ತವೆ. ಕ್ರಿ.ಶ. ೧೪ನೇ ಶತಮಾನದಲ್ಲಿ ಇಬನ್–ನೆ–ಬತೂತ (೧೩೪೧–೧೩೭೮) ಕಲ್ಲಿಕೋಟೆ, ಕ್ಯೋಲನ್, ಮಲಬಾರ್ ಪ್ರಾಂತ್ಯಗಳ ಸಂಗತಿಗಳನ್ನು ದಾಖಸಿದ್ದಾನೆ. ಕ್ರಿಶ. ೧೬ನೇ ಶತಮಾನಕ್ಕೆ ವೇಳೆಗೆ ಯುರೋಪಿಯನ್ ಆಗಮನ ನಂತರದಲ್ಲಿ ಮುಸ್ಲಿಂ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ಕುರಿತು ಮಾಹಿತಿಯನ್ನು ತಿಳಿಸುವ ವಿದ್ವಾಂಸರ ಬರಹಗಳು ಲಭ್ಯವಿದೆ. ಅವರಲ್ಲಿ ಶೇಕ್–ಜಿಯನುದ್ದೀನ್–ಮಾ–ಖದೂಮ್‌ನ ಕೃತಿ 'ತಹರಿದ್ ಅಹಲಿಲ್' ಇಮಾನ್–ಅಲಿ–ಜಿನಾದಿ ಅಬದತಿಸ್ಸುಲ್‌ಬನ್‌ನು ಕ್ರಿ.ಶ. ೧೫ನೇ ಶತಮಾನದಲ್ಲಿ ಇವನು ಇದ್ದನೆಂಬುದನ್ನು ತಿಳಿಸುತ್ತದೆ. ಕಾಯಲಪಟ್ಟಣಂ ಹಾಗೂ ಖಿಜಕ್ಕರೇ ಪ್ರದೇಶದಲ್ಲಿ ನೆಲೆಸಿದ್ದನು. ನಂತರದಲ್ಲಿ ಕ್ರಿ.ಶ. ೧೫ನೇ ಶತಮಾನದಲ್ಲಿ ಉತ್ತರಾರ್ಧದಲ್ಲಿನ ಕೊಚ್ಚಿನ್ ಹಾಗೂ ನಂತರ ಪೊನ್ನಾನಿಗೆ ವಲಸೆ ಬಂದರು ಎನ್ನುವ ಮಾಹಿತಿಯನ್ನು ತಿಳಿಸುತ್ತಾನೆ.[೪೯]

ವಿಜಯನಗರದ ಮುಸ್ಲಿಂ ಚರಿತ್ರೆಯನ್ನು ತಿಳಿಯುವುದರಲ್ಲಿ ಪರ್ಷಿಯನ್ ಕೃತಿಗಳು ಪೂರಕ ವಾದಂತಹ ಮಾಹಿತಿಯನ್ನು ತಿಳಿಸಿಕೊಡುತ್ತವೆ. ಮುಸ್ಲಿಂ ವಿದ್ವಾಂಸರಲ್ಲಿ ಅತಿಮುಖ್ಯವಾಗಿ ಪ್ರಾಮುಖ್ಯತೆ ಪಡೆದವರವಲ್ಲಿ ಫೆರಿಸ್ತಾನು ಮುಖ್ಯನಾಗಿದ್ದಾನೆ. ಇವನು ನಂತರದಲ್ಲಿ ಬಿಜಾಪುರದಲ್ಲಿ ವರ್ಗಾವಣೆಯಾದನು. ಅವನ ತಾರಿಕ್–ಐ–ಫೆರಿಸ್ತಾ ಕೃತಿಯು ಮುಖ್ಯವಾದುದು. ಈ ಕೃತಿಯು ವಿಜಯನಗರ ಹಾಗೂ ಬಹಮನಿ ನಡುವಿನ ಸಂಬಂಧ ಕುರಿತ ದಾಖಲೆಯನ್ನು ತಿಳಿಸುತ್ತದೆ. ಮಹಮ್ಮದ್ ಇಬ್ರಾಹಿಮ್ ಜುಬೇರಿಯ 'ಬುಸಾತಿನೆ ಸಲಾತೀನ' ಕೃತಿಯು ವಿಜಾಪುರ ಆದಿಲ್‌ಶಾಹಿಗಳ ಚರಿತ್ರೆಯನ್ನು ತಿಳಿಸುತ್ತದೆ. ವಿಜಯನಗರದ ಅರಸರು ಹಾಗೂ ಶಾಹಿಗಳ ರಾಜಕೀಯ, ಸಾಮಾಜಿಕ ಸಂಬಂಧ ತಿಳಿಸಿದ್ದಾನೆ. ಈ ನಡುವಿನ ಕಾಲಕಾಲಕ್ಕೆ ಇದ್ದಂತಹ ರಾಜಕೀಯ ಸಂಬಂಧ, ಸೌಹಾರ್ದತೆಯ ಸಂಬಂಧ ಹಾಗೂ ವೈರತ್ವದ ಸಂಬಂಧಗಳ ಕುರಿತು ವಿವರಣೆ ಸಿಗುತ್ತದೆ. ಹೀಗೆ ವಿಜಯನಗರ ಕಾಲದಲ್ಲಿನ ಮುಸ್ಲಿಂ ಸಮುದಾಯಗಳ ಕುರಿತಂತೆ ಹಲವು ಅರಬ್ ಮತ್ತು ಪರ್ಷಿಯನ್ ದಾಖಲೆಗಳು ಅವರ ಸ್ಥಿತಿಗತಿಗಳ ಕುರಿತಂತೆ ಮಾಹಿತಿಯನ್ನು ತಿಳಿಸುತ್ತದೆ.

೩.೨.೨. ಸಾಮ್ರಾಜ್ಯಶಾಹಿ ನಿಲುವುಗಳು

ವಿಜಯನಗರದ ಚರಿತ್ರೆಗೆ ಸಂಬಂಧಿಸಿದಂತೆ ಕೆಲಸ ಮಾಡಿದ ಮೊದಲ ಮೂರು ಬ್ರಿಟಿಶ್ ಅಧಿಕಾರಿಗಳೆಂದರೆ ಮಾರ್ಕ್ ವಿಲ್ಕ್ಸ್, ಕರ್ನಲ್ ಕೋಲಿನ್ ಮೆಕೆಂಜಿ ಮತ್ತು ರಾಬರ್ಟ್ ಸಿವೆಲ್. ಮಾರ್ಕ್ ವಿಲ್ಕ್ಸ್ ೧೮೧೦ರಲ್ಲಿ ವಿಜಯನಗರಕ್ಕೆ ಸಂಬಂಧಿಸಿದ ತನ್ನ ಕೆಲಸವನ್ನು ಸಿದ್ಧಪಡಿಸಿದ. ವಿಲ್ಕ್ಸ್ ಇಂಗ್ಲಿಶ್ ಈಸ್ಟ್ ಇಂಡಿಯಾ ಕಂಪನಿಯ ರಾಜಕೀಯ ಪ್ರತಿನಿಧಿಯಾಗಿದ್ದು, ಮೈಸೂರು ಒಡೆಯರ ಆಸ್ಥಾನದಲ್ಲಿದ್ದನು. ವಿಲ್ಕ್ಸ್‌ನು ಸ್ಥಳೀಯವಾಗಿ ದೊರಕಿದ ಆಕರಗಳನ್ನು ಇಟ್ಟುಕೊಂಡು ತನ್ನ ಕೃತಿಯನ್ನು ಸಿದ್ಧಪಡಿಸಿದನು. ಈತನ ಬರವಣಿಗೆಗೆ ಹದಿನೆಂಟನೆಯ ಶತಮಾನದಲ್ಲಿ ಕನ್ನಡ ಭಾಷೆಯಲ್ಲಿ ರಚಿತವಾಗಿದ್ದ ಕೃತಿಯೊಂದಕ್ಕೆ ಮೂಲವಾಯಿತು. ವಿಲ್ಕ್ಸ್ ಮತ್ತು ಮೆಕೆಂಜಿ ಇವರ

ಬರಹಗಳು ಸಂಪೂರ್ಣವಾಗಿ ವಿಜಯನಗರದ ಚರಿತ್ರೆಗೆ ಸಂಬಂಧಪಟ್ಟವುಗಳಾಗಿರದೆ ಕೆಲವೊಂದು ಮಾಹಿತಿಗಳನ್ನಷ್ಟೇ ನೀಡುತ್ತವೆ. ಮೆಕೆಂಜಿಯು ಅನೇಕ ಸ್ಥಳೀಯ ವಿದ್ಯಾವಂತ ಜನರ ನೆರವನ್ನು ಪಡೆದುಕೊಂಡು ಅಪಾರವಾದ ಮಾಹಿತಿಯನ್ನು ಸಂಗ್ರಹಿಸಿದ. ಅಂದಿನ ಸಂದರ್ಭದಲ್ಲಿ ಲಭ್ಯವಿದ್ದ ಕೃತಿಗಳು, ಹಸ್ತಪ್ರತಿಗಳು ಹಾಗೂ ಶಾಸನಗಳ ನೆರವಿನಿಂದ ತನ್ನ ಕೃತಿಯನ್ನು ಸಿದ್ಧಪಡಿಸಿದ. ಮೆಕೆಂಜಿಯ ಸಂಗ್ರಹ ೧೮೧೫ರಲ್ಲಿ ಸಿದ್ಧವಾಯಿತು. ಮೆಕೆಂಜಿಯ ಬರಹವನ್ನು ಕೈಫಿಯೆತ್ತು ಎಂಬ ಹೆಸರಿನಿಂದಲೂ ಕರೆಯಲಾಗುತ್ತದೆ. ಕೈಫಿಯೆತ್ತುಗಳು ಸ್ಥಳಪುರಾಣ, ಚಾರಿತ್ರಿಕ ವಿವರಗಳು ಹಾಗೂ ಕಲ್ಪಿತ ವಿಷಯಗಳನ್ನು ಒಳಗೊಂಡಿರುವ ಬರಹಗಳು.

ಭಾರತದ ಚರಿತ್ರೆ ಲೇಖನ ಪರಂಪರೆಯಲ್ಲಿ ವಿಜಯನಗರ ಚರಿತ್ರೆಯನ್ನು ಮೂರು ದಶಕಗಳ ಅವಧಿಯಲ್ಲಿ(೧೯೨೦–೧೯೪೦) ಪ್ರಾದೇಶಿಕ ನಿಲುವುಗಳಿಗೆ ಅಧ್ಯಯನಕಾರರು ಹೆಚ್ಚಿನ ಒತ್ತನ್ನು ನೀಡಿದರು. ೧೯೩೦ರ ವೇಳೆಗೆ ಸಾಮ್ರಾಜ್ಯದ ಉಗಮಕ್ಕೆ ಸಂಬಂಧಿಸಿದ ಮತ್ತು ಆ ಸಾಮ್ರಾಜ್ಯವು ಯಾವ ಭಾಷಿಕರಿಗೆ ಸಂಬಂಧಿಸಿದ್ದು ಎನ್ನುವ ವಿಚಾರಗಳ ಪ್ರತಿಪಾದನೆಗಳು ಇವರ ಬರವಣಿಗೆಗಳಲ್ಲಿ ಕಂಡುಬರುತ್ತದೆ. ಈ ಸಮಕಾಲೀನ ಅವಧಿಯಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಮುಸ್ಲಿಂ ಪ್ರಭುತ್ವದ ದೌರ್ಜನ್ಯಗಳ ವಿರುದ್ಧ ದಕ್ಷಿಣದಲ್ಲಿ ಉದಯಿಸಿದ ಹಿಂದೂ ರಾಜ್ಯವೆಂಬುದಾಗಿ ಬಿಂಬಿಸಲಾಯಿತು. ಇವರು ಮುಖ್ಯವಾಗಿ ಸಾಂಪ್ರದಾಯಿಕ ಆಕರಗಳಿಗೆ ಮಹತ್ವವನ್ನು ನೀಡಿದರು.[೩೦]

ಫಾದರ್ ಹೆರಾಸ್ ಎಂಬ ವಸಾಹತುಶಾಹಿ ಚರಿತ್ರೆಕಾರ ಹೊಯ್ಸಳ ಹಾಗೂ ಸಂಗಮರ ಮಧ್ಯೆ 'ಧಾರ್ಮಿಕ ವಂಶ ಸಂಬಂಧ'ವನ್ನು ಕಲ್ಪಿಸಿ ಹೊಯ್ಸಳರು ಮುಸ್ಲಿಂ ಆಕ್ರಮಣಕಾರರ ವಿರುದ್ಧ ಹಿಂದೂ ಸಾಮ್ರಾಜ್ಯ ಸ್ಥಾಪಿಸಲು ಸಂಗಮ ವಂಶಕ್ಕೆ ಪ್ರೇರಣೆ ನೀಡಿದರೆಂದು ಬರೆಯುವುದರ ಮೂಲಕ ವಿಜಯನಗರ ಸಾಮ್ರಾಜ್ಯದ ಉದಯದ ಕಥನದ ಮತೀಯ ಭಾವನೆ ಆರಂಭವಾಯಿತು.[೩೧]

ರಾಬರ್ಟ್ ಸಿವೆಲ್ ೧೯೦೦ರಲ್ಲಿ 'ಎ ಫರಗಾಟನ್ ಎಂಪೈರ್' ಎನ್ನುವ ಕೃತಿಯನ್ನು ರಚಿಸಿದನು. ಈ ಕೃತಿಯು ೧೭ ಅಧ್ಯಾಯಗಳನ್ನು ಒಳಗೊಂಡಿದೆ. ವಿಜಯನಗರದ ಚರಿತ್ರೆಯನ್ನು ಆ ಕಾಲದ ಪ್ರವಾಸಿಗರ ದಾಖಲೆಗಳನ್ನು ಅನುಸರಿಸಿ ಸಿವೆಲ್ ಪುನರ್ ರೂಪಿಸುವ ಪ್ರಯತ್ನವನ್ನು ಮಾಡಿದನು. ಮುಖ್ಯವಾಗಿ ಬ್ಯಾರಡಸ್, ಡೋಮಿಂಗೋ ಪಾಯಸ್, ನ್ಯೂನಿಜ್ ಇವರ ಕಥನಗಳನ್ನು ಸಿವೆಲ್ ಆಧಾರವಾಗಿಟ್ಟುಕೊಂಡನು. ಅದೇ ರೀತಿ ಸ್ಥಳೀಯವಾಗಿ ಸಿಗಬಹುದಾದ ಎಲ್ಲಾ ಮಾಹಿತಿಗಳನ್ನು ಪಡೆದುಕೊಂಡನು. ಇವನು ಮದರಾಸು ಪ್ರೆಸಿಡೆನ್ಸಿಯುದ್ದಕ್ಕೂ ಸಂಚರಿಸಿ ಮಾಹಿತಿ ಸಂಗ್ರಹಿಸಿಕೊಂಡನು. ಬ್ರಿಟಿಶ್ ಸರಕಾರ ಈ ಕೆಲಸಕ್ಕಾಗಿಯೇ ಸಿವೆಲ್‌ನನ್ನು ನಿಯೋಜಿಸಿತ್ತು. ದಕ್ಷಿಣ ಭಾರತದ ಚರಿತ್ರೆಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸುವುದು ಅವನಿಗೆ ಒಪ್ಪಿಸಿದ ಜವಾಬ್ದಾರಿಯಾಗಿತ್ತು. ಬ್ರಿಟಿಶರು ಭಾರತದ ಚರಿತ್ರೆಯನ್ನು ಪುನಾರಚಿಸುವ ಕೆಲಸವನ್ನು ಕೈಗೊಂಡಿದ್ದರಲ್ಲಿ ಅವರ ಸ್ವಾರ್ಥವೂ ಅಡಕವಾಗಿತ್ತು. ಭಾರತದ ಚರಿತ್ರೆಯನ್ನು ಅಭ್ಯಸಿಸುವುದರ ಜೊತೆ ಜೊತೆಗೆ ಬ್ರಿಟಿಶ್ ಆಳ್ವಿಕೆ ಭಾರತದಲ್ಲಿ ಅನಿವಾರ್ಯ ಎನ್ನುವ ನಂಬಿಕೆಯೊಂದನ್ನು ಹುಟ್ಟು ಹಾಕುವ ಉದ್ದೇಶ ಬ್ರಿಟಿಶರದ್ದಾಗಿತ್ತು.

ರಾಬರ್ಟ್ ಸಿವೆಲ್ ಈ ಹಿನ್ನೆಲೆಯಿಂದಲೇ ತನ್ನ ಕೃತಿ ರಚನೆಯಲ್ಲಿ ತೊಡಗಿದನು. ಹಿಂದೂ–ಮುಸ್ಲಿಮರ ನಡುವೆ ದ್ವೇಷವನ್ನು ಹೆಚ್ಚಿಸುವ ಎಲ್ಲ ಲಕ್ಷಣಗಳು ವಿಜಯನಗರ ಸಾಮ್ರಾಜ್ಯವನ್ನು ಕುರಿತಾದ ಈ ಚರಿತ್ರೆಯ ಕೃತಿಯಲ್ಲಿದೆ. ವಿಜಯನಗರದ ಅವನತಿಗೆ ಮುಸ್ಲಿಂ ದೊರೆಗಳು ಕಾರಣ ಎನ್ನುವುದರ ಮೂಲಕ ಹಿಂದೂ–ಮುಸ್ಲಿಂ ಎನ್ನುವುದು ಒಂದು ಇನ್ನೊಂದಕ್ಕೆ ಡಿಕ್ಕಿ ಹೊಡೆಯುವಂತದ್ದು ಎಂಬುದನ್ನು ವ್ಯಾಖ್ಯಾನಿಸಿದನು. ಉದಾಹರಣೆಗೆ ನರಸಿಂಹನ ಕಾಲದಲ್ಲಿ ಸುಲ್ತಾನರೊಂದಿಗೆ ಮಾಡಿದ ಯುದ್ಧದ ಪ್ರಸಂಗವನ್ನು ಕೋಮು ರೀತಿಯಲ್ಲಿ ಚಿತ್ರಿಸಿದ್ದಾನೆ.[೫೨] ಸಿವೆಲ್‌ನು ಪ್ರಮುಖವಾಗಿ ಡೊಮಿಂಗೊ ಪಾಯಸ್ ಮತ್ತು ನ್ಯೂನಿಜ್‌ನ ಕಥನಗಳನ್ನು ಹೆಚ್ಚಾಗಿ ಬಳಸಿಕೊಂಡನು. ಆ ಕಥನಗಳಲ್ಲಿ ಪ್ರಧಾನ ವಿಚಾರವಾದ ಮುಸ್ಲಿಮರ ದಾಳಿ, ಹಿಂದೂ ಸಾಮ್ರಾಜ್ಯ ರಕ್ಷಣೆ ಮುಂತಾದವು ಸಿವೆಲ್ ಮುಸ್ಲಿಂ ವಿರೋಧಿ ನೆಲೆಯಲ್ಲಿ ವಿಜಯನಗರ ಚರಿತ್ರೆಯನ್ನು ರಚಿಸಿದ್ದನ್ನು ತೋರಿಸುತ್ತವೆ. ಕ್ರಿ.ಶ.೧೪ನೆಯ ಶತಮಾನದಲ್ಲಿ ಯುರೋಪಿನ ಮೇಲೆ ಮುಸ್ಲಿಂ ದಾಳಿ ನಡೆದದ್ದನ್ನು ಯಥಾವತ್ತಾಗಿ ಭಾರತದ ಸಂದರ್ಭದಲ್ಲೂ ಕಂಡುಕೊಳ್ಳಲಾಯಿತು. ಉತ್ತರದಿಂದ ಬಂದ ಮಲ್ಲಿಕಾಫರನ ಸೈನ್ಯ ಹಾಗೂ ಹೊಯ್ಸಳರ ಅವನತಿ ಇವೆರಡನ್ನು ಇಟ್ಟುಕೊಂಡು ಕೋಮುವಾದಿ ಹಿನ್ನೆಲೆಯ ಚರಿತ್ರೆ ಬರವಣಿಗೆ ಆರಂಭಗೊಂಡಿತು. ಭಾರತವನ್ನು ಹಿಂದೂ ಯುಗ ಹಾಗೂ ಮುಸ್ಲಿಂ ಯುಗಗಳನ್ನಾಗಿ ವಿಂಗಡಿಸಿದ್ದನ್ನು ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಸಿವೆಲ್ ವಿಜಯನಗರವನ್ನು ಹಿಂದೂ ಸಾಮ್ರಾಜ್ಯವನ್ನಾಗಿ ಹಾಗೂ ಬಹಮನಿಯನ್ನು ಮುಸ್ಲಿಂ ಸಾಮ್ರಾಜ್ಯವನ್ನಾಗಿ ಪರಿಭಾವಿಸಿ ಆ ಹಿನ್ನೆಲೆಯಿಂದಲೇ ಚರಿತ್ರೆ ನಿರ್ಮಾಣದಲ್ಲಿ ತೊಡಗಿದ.

ವಿಜಯನಗರದ ಸೈನಿಕ ಚಟುವಟಿಕೆಗಳು, ತಂತ್ರಜ್ಞಾನದಲ್ಲಿ ಮುಂದುವರಿದಿದ್ದು ಹಾಗೂ ಇತರ ರಾಜ್ಯಗಳೊಂದಿಗೆ ಸತತ ಸ್ಪರ್ಧೆಯಲ್ಲಿದ್ದು ಕೂಡ ಅದೊಂದು ಆಕಸ್ಮಿಕ ಬೆಳವಣಿಗೆ ಹಾಗೂ ಪ್ರಾದೇಶಿಕ ಬೆಳವಣಿಗೆಯ ಫಲಿತಾಂಶವಾಗಿತ್ತು ಎಂಬುದಾಗಿ ಸಾಮ್ರಾಜ್ಯಶಾಹಿ ಬರಹಗಾರರು ಅಭಿಪ್ರಾಯಪಟ್ಟರು. ಜೊತೆಗೆ ವಿಜಯನಗರ ಸಾಮ್ರಾಜ್ಯದ ಪ್ರಭುತ್ವವನ್ನು ವಿಸ್ತರಿಸುವಲ್ಲಿ ಪ್ರಬಲ ಪ್ರತಿಸ್ಪರ್ಧಿಯಾಗಿ ಸವಾಲಾಗಿ ನಿಂತಿರುವುದು ಬಹಮನಿ ದೊರೆಗಳು ಎಂದು ಬಿಂಬಿಸಲಾಯಿತು. ಆದರೆ ವಿಜಯನಗರ ಸಾಮ್ರಾಜ್ಯ ವಿಸ್ತರಣೆಗೆ ಒರಿಸ್ಸಾದ ಗಜಪತಿ ಸಾಮ್ರಾಟರು ಕೂಡ ಇವರಿಗೆ ಎದುರಾಳಿಗಳಾಗಿದ್ದರು. ಇದರಿಂದಾಗಿ ಕೃಷ್ಣದೇವರಾಯನು ಈ ರಾಜ್ಯವನ್ನು ಸೋಲಿಸಿ ರಾಜ್ಯದ ಉಸ್ತುವಾರಿಯನ್ನು ನೋಡಿಕೊಳ್ಳುಲು ಮುಂದಾದನು. ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿನ ಪೋರ್ಚುಗೀಸರ ಆಕ್ರಮಣ, ಅಚ್ಯುತನಿಂದ ಧಾರ್ಮಿಕ ದತ್ತಿ ಮತ್ತು ಅವನಿಗೆ ಸಂಬಂಧಿಸಿದ ಶಾಸನಗಳ ವಿವರಣೆಯನ್ನು ಸಿವೆಲ್ ನೀಡುತ್ತಾನೆ. ವಿಜಯನಗರ ಸಾಮ್ರಾಜ್ಯದ ಅಂತ್ಯದ ಆಳ್ವಿಕೆ, ಕರಾವಳಿಯ ಮೇಲೆ ಪೋರ್ಚುಗೀಸರ ಆಕ್ರಮಣ ಗೋವಾಕ್ಕೆ ನ್ಯಾಯಸ್ಥಾನವನ್ನು ಸಿಕ್ಕಿದ ವಿಷಯಗಳನ್ನು ತಿಳಿಸಿದ್ದಾನೆ. ೧೫೬೫ರ ವಿಜಯನಗರದ ವಿನಾಶ, ಅಳಿಯ ರಾಮರಾಯನ ಆಳ್ವಿಕೆ, ಅವನ ಕಾಲದಲ್ಲಿ ಆದಂತಹ ನಿರ್ಣಾಯಕ ತಾಳಿಕೋಟೆ ಯುದ್ಧ, ಕ್ರಿ.ಶ. ೧೫೬೫ರಲ್ಲಿ ಹಿಂದೂಗಳಿಗೆ

ಸಂಪೂರ್ಣ ಸೋಲು, ರಾಮರಾಯನ ಮರಣ, ವಿಜಯನಗರದಲ್ಲಿ ಭಯ, ರಾಜಕುಟುಂಬದ ಪಲಾಯನ, ಮಹಾನಗರದ ಸುಲಿಗೆ, ಅದರ ಸಂಪೂರ್ಣ ಧ್ವಂಸ, ಕ್ರಿಶ. ೧೫೬೭ರಲ್ಲಿ ಪೋರ್ಚುಗೀಸ್ ವ್ಯಾಪಾರದ ಅವನತಿ ಮತ್ತು ಗೋವಾದ ಸಮೃದ್ಧಿಯ ಕ್ಷೀಣತೆಯ ವಿವರಗಳು ಬ್ರಿಟಿಶರು ಚಿತ್ರಿಸಿದ ಹಿಂದೂ-ಮುಸ್ಲಿಮರ ನಡುವಿನ ವಿರೋಧಿ ಭಾವನೆಯ ಹಿನ್ನೆಲೆಯ ಅತಿರೇಕದ ವಿವರಣೆಗಳಾಗಿ ಕಂಡುಬರುತ್ತವೆ.[೫೨]

ರಾಬರ್ಟ್ ಸಿವೆಲ್‌ನ ಕೃತಿಗೆ ಪ್ರತಿಯಾಗಿ ಬಿ.ಸೂರ್ಯನಾರಾಯಣರಾವ್ ೧೯೦೫ರಲ್ಲಿ 'ನೆವರ್ ಟು ಬಿ ಫರಗಾಟನ್ ಎಂಪೈರ್' ಎನ್ನುವ ಕೃತಿಯನ್ನು ರಚಿಸಿದರು. ಸಿವೆಲ್ ವಿಜಯನಗರವನ್ನು ಮರೆತುಹೋದ ಮಹಾಸಾಮ್ರಾಜ್ಯ ಎಂಬುದಾಗಿ ಕರೆದರೆ, ಸೂರ್ಯನಾರಾಯಣರಾವ್ ಎಂದೆಂದಿಗೂ ಮರೆಯಲಾಗದ ಸಾಮ್ರಾಜ್ಯ ಎಂಬುದಾಗಿ ಪ್ರತಿಪಾದಿಸಿದರು. ರಾವ್ ಅವರ ಪ್ರಕಾರ ವಿಜಯನಗರ ಮರೆತುಹೋದ ಸಾಮ್ರಾಜ್ಯವಲ್ಲ. ಅದು ಮರೆಯಲಾಗದ, ಎಂದೆಂದಿಗೂ ಮರೆಯಲಾಗದ ಸಾಮ್ರಾಜ್ಯ ಏಕೆಂದರೆ ವಿಜಯನಗರದ ಆಳ್ವಿಕೆ ಕೊನೆಗೊಂಡಿದ್ದರೂ, ಆ ಅವಧಿಯಲ್ಲಿ ನಿರ್ಮಾಣಗೊಂಡ ಸ್ಮಾರಕಗಳು, ಕೆತ್ತಿಸಲ್ಪಟ್ಟ ಶಾಸನಗಳು ರಚನೆಗೊಂಡ ಸಾಹಿತ್ಯ ಕೃತಿಗಳು, ಟಂಕಿಸಲ್ಪಟ್ಟ ನಾಣ್ಯಗಳು ಇಂದಿಗೂ ಜೀವಂತವಾಗಿವೆ. ಹಾಗೂ ವಿಜಯನಗರದ ಬಗ್ಗೆ ಅಧ್ಯಯನಗಳು ಇಂದು ಹಾಗೂ ಎಂದೆಂದಿಗೂ ನಡೆಯುತ್ತಿರುತ್ತವೆ. ಈ ಕಾರಣಗಳಿಂದಾಗಿ ವಿಜಯನಗರವು ಸದಾ ನೆನಪಿನಲ್ಲಿರುವ ಸಾಮ್ರಾಜ್ಯವಾಗಿವೆ ಎನ್ನುವುದು ರಾವ್ ಅವರ ಅಭಿಪ್ರಾಯ. ಸೂರ್ಯನಾರಾಯಣರಾವ್ ಅವರು ಸಿವೆಲ್‌ನನ್ನು ವಸಾಹತುಶಾಹಿ ದೃಷ್ಟಿಕೋನದಿಂದ ಚರಿತ್ರೆ ನಿರ್ಮಿಸಿದ್ದಕ್ಕೆ ತರಾಟೆಗೆ ತೆಗೆದುಕೊಂಡರೇನೋ ನಿಜ, ಆದರೆ ಸಿವೆಲ್ ಮಾಡಿದ ತಪ್ಪನ್ನೇ ರಾವ್ ಅವರು ಮುಂದುವರಿಸಿಕೊಂಡು ಬಂದಿರುವುದು ತಿಳಿದುಬರುತ್ತದೆ. ವಿಜಯನಗರವನ್ನು ಹಿಂದೂ ಸಾಮ್ರಾಜ್ಯ, ವೈಭವಯುತ ಸಾಮ್ರಾಜ್ಯ ಮುಂತಾಗಿ ಕೊಂಡಾಡಿ, ಮುಸಲ್ಮಾನರ ದಾಳಿಯನ್ನು ಎದುರಿಸಲು ಸ್ಥಾಪನೆಗೊಂಡ ಸಾಮ್ರಾಜ್ಯ ಎನ್ನುವ ಮತೀಯ ಒಲವುಗಳು ಕಂಡುಬರುತ್ತವೆ. ವಿಜಯನಗರದ ಅವನತಿಗೆ ಬಹಮನಿ ಸೈನಿಕರು ಕಾರಣ ಎನ್ನುವುದು ರಾವ್ ಅವರ ಅಭಿಪ್ರಾಯ. ವಿಜಯನಗರದ ಅರಸರೊಳಗಿದ್ದ ಮನಸ್ತಾಪಗಳು, ಸಾಮಂತ ಅರಸರು ಸ್ವತಂತ್ರರಾಗಲು ಹವಣಿಸುತ್ತಿದ್ದುದು, ವಿಜಯನಗರದ ಅವನತಿಯ ಬಳಿಕ ಸ್ಥಳೀಯ ನಾಯಕರು ನಡೆಸಿದ ಲೂಟಿ, ಸ್ಮಾರಕಗಳ ಬಗ್ಗೆ ಸ್ಥಳೀಯ ಜನತೆ ತೋರಿದ ಉದಾಸೀನತೆ, ಸ್ಮಾರಕಗಳ ನಾಶಕ್ಕೆ ಸ್ವಾಭಾವಿಕ ಕಾರಣಗಳು ಮುಂತಾದವುಗಳ ಕುರಿತು ಸೂರ್ಯನಾರಾಯಣರಾವ್ ಹಾಗೂ ಆ ಪರಂಪರೆಯನ್ನು ಮುಂದುವರಿಸಿದ ಇನ್ನಿತರ ದೇಶಿ ವಿದ್ವಾಂಸರು ಹೆಚ್ಚಿನ ಮಾಹಿತಿ ನೀಡಿರುವುದು ಕಂಡುಬರುವುದಿಲ್ಲ. ವಿಜಯನಗರದ ಅವನತಿಗೆ ಸಂಬಂಧಿಸಿದ ಈ ಕಾರಣಗಳ ಕುರಿತು ಈ ರೀತಿಯಾಗಿ ವಿಶ್ಲೇಷಿಸಬಹುದು.

ವಿಜಯನಗರದ ಅರಸರು ಎಂದೂ ಕೂಡ ತಾವು ಹಿಂದೂ ಧರ್ಮದ ಉಳಿವಿಗಾಗಿ ಹೋರಾಡುವುದಾಗಲಿ, ದಕ್ಷಿಣ ಭಾರತದ ಸಮಾಜವನ್ನಾಗಲಿ, ಸಂಸ್ಕೃತಿಯನ್ನಾಗಲಿ ರಕ್ಷಣೆ

ಮಾಡುವಂತಹ ನಿಲುವುಗಳನ್ನಾಗಲಿ ಇಟ್ಟುಕೊಂಡು ರಾಜ್ಯದಾದ್ಯಂತ ವ್ಯವಸ್ಥೆ ರಚಿಸಿದ ಆಕರಗಳು ಸಿಗುವುದಿಲ್ಲ. ವಿಜಯನಗರದ ಅರಸರು ಈ ಹಿಂದೆ ಆಳ್ವಿಕೆ ನಡೆಸಿದ ಅರಸರ ಆದರ್ಶವನ್ನು ಪಾಲಿಸಿ ಧರ್ಮಕ್ಕನುಸಾರವಾಗಿ ಆಡಳಿತ ನಡೆಸಿ ಆ ಕಾಲದ ಜನರ ಬೆಂಬಲ ಪಡೆದಿದ್ದರು ಎಂಬ ವಿಚಾರವನ್ನು ಅಲ್ಲಗಳೆಯಲಾಗದು. ಇಲ್ಲಿ ಧರ್ಮವೆಂಬ ಪದವನ್ನು ಬಳಸಿದಾಗ ಆಧುನಿಕ ಕಾಲಘಟ್ಟದಲ್ಲಿ ಬಳಕೆಯಾಗುವ ರಿಲೀಜನ್‌ಗೆ ಸಂಬಂಧ ಕಲ್ಪಿಸಲು ಅಸಾಧ್ಯ. ಅವರು ಪಾಲಿಸಿದ್ದು ಆ ಕಾಲದ ರಾಜಧರ್ಮವಾಗಿತ್ತು. ನಾವು ಇವತ್ತು ಸೆಕ್ಯುಲರ್ ಪರಿಕಲ್ಪನೆಯಲ್ಲಿ ಅದನ್ನು ಕಲ್ಪಿಸಿಕೊಳ್ಳಬಹುದು ಅಥವಾ ಧರ್ಮ ಸಹಿಷ್ಣುತೆಯ ಹರಿಕಾರರು ವಿಜಯನಗರದರಸರು ಎಂದೂ ಕೂಡ ಲೇಬಲ್ ಮಾಡಬಹುದು.[೫೪] ವಿಜಯನಗರ ಕಾಲದ ಅರಸರು ತಮ್ಮ ಆಳ್ವಿಕೆಯಲ್ಲಿ ಎಲ್ಲಾ ಧರ್ಮೀಯರನ್ನು ಸಮಾನವಾಗಿ ಕಾಣುತ್ತಿದ್ದನು. ಎಲ್ಲಾ ಧರ್ಮೀಯರು ರಾಜ್ಯದ ಆಳ್ವಿಕೆಯಲ್ಲಿ ಸೇವಕರಾಗಿದ್ದರು. ರಾಜ್ಯದ ಆಳ್ವಿಕೆಯಲ್ಲಿ ಅಥವಾ ಆಡಳಿತದಲ್ಲಿ ಹಿಂದೂ–ಮುಸ್ಲಿಮರು ಉನ್ನತ ಹುದ್ದೆಯನ್ನು ಅಲಂಕರಿಸಿದ್ದರು. ವಿಜಯನಗರದ ಅರಸರಿಗೆ ಒಂದು ಸಮುದಾಯವನ್ನು ಓಲೈಸುವುದಾಗಲಿ, ದೂರವಿಡುವ ಸಣ್ಣತನವಾಗಲಿ ಅವರಿಗೆ ಇರಲಿಲ್ಲ. ಅದು ಆ ನೆಲದ ಗೌರವವನ್ನು, ಸಂಪ್ರದಾಯವನ್ನು ಎತ್ತಿ ಹಿಡಿಯುವ ಧರ್ಮವಾಗಿತ್ತು.

ರಾಬರ್ಟ್ ಸಿವೆಲ್‌ನ ಕೃತಿಗೆ ಆಧಾರಗಳಲ್ಲಿ ಸೀಜರ್ ಫ್ರೆಡೆರಿಕ್ ಎಂಬ ಪೋರ್ಚುಗೀಸ್ ಪ್ರವಾಸಿಯ ಬರಹವೂ ಸೇರಿದೆ. ಸಿವೆಲ್‌ನು ಫ್ರೆಡಿರಿಕ್‌ನ ಕೃತಿಯಲ್ಲಿಯ ಕೆಲವು ಮುಖ್ಯ ಸಂಗತಿಗಳನ್ನು ಬಿಟ್ಟು ಬಿಟ್ಟಿದ್ದಾನೆ. ತಾಳಿಕೋಟೆ ಯುದ್ಧ ಮುಗಿದು ಎರಡು ವರುಷಗಳ ಮೇಲೆ ಭೇಟಿ ಕೊಟ್ಟ ಫ್ರೆಡಿರಿಕ್‌ವಿಜಯನಗರದಲ್ಲಿ ತಾನು ಕಂಡ ಸಂಗತಿಗಳನ್ನು ವಿವರಿಸಿದ್ದಾನೆ. 'ಫ್ರೆಡಿರಿಕ್‌ನ ವರ್ಣನೆಯಲ್ಲಿ ವಿಜಯನಗರದಲ್ಲಿ ಇನ್ನೂ ವಸತಿಗಳು, ವ್ಯಾಪಾರ, ವ್ಯವಹಾರ, ಸಣ್ಣಪುಟ್ಟ ಪ್ರಮಾಣದಲ್ಲಿಯಾದರೂ ಉಳಿದುಕೊಂಡಿದ್ದಂತೆ ಭಾಸವಾಗುತ್ತದೆ. ಉದಾಹರಣೆಗೆ ಫ್ರೆಡಿರಿಕ್ ಏಳು ತಿಂಗಳು ವಿಜಯನಗರದಲ್ಲಿದ್ದನು ಹಾಗೂ ತನ್ನೆಲ್ಲ ವ್ಯವಹಾರಗಳನ್ನು ಅಲ್ಲಿ ಪೂರೈಸಿದ್ದಾಗಿ ತಿಳಿಸುತ್ತಾನೆ. ದೇವಾಲಯಗಳು ಗಾರೆಯಿಂದ ಮತ್ತು ಮಾರ್ಬಲ್‌ನಿಂದ ಮಾಡಲ್ಪಟ್ಟಿವೆ. ಉಳಿದ ಮನೆಗಳೆಲ್ಲ ಮಣ್ಣಿನಲ್ಲಿ ಇವೆ. ನಾನು ಅನೇಕ ರಾಜಸ್ಥಾನಗಳನ್ನು ನೋಡಿದ್ದೇನೆ. ಆದರೆ ವಿಜಯನಗರದ ಅರಮನೆಗೆ ಹೋಲಿಸಬಹುದಾದದ್ದು ನಾನು ಒಂದೂ ನೋಡಿಲ್ಲ' ಎಂದು ಆತನು ವಿವರವಾಗಿ ಅರಮನೆಯ ಆವರಣವನ್ನು ವರ್ಣಿಸುತ್ತಾನೆ. ಎಲ್ಲೂ ಕಟ್ಟಡಗಳು ನಾಶವಾದ ಅಥವಾ ರಿಪೇರಿ ಮಾಡಿದ ವಿಷಯಗಳು ಇಲ್ಲ. ಅಲ್ಲಿ ಕಾವಲುಗಾರರಿದ್ದರು, ಸೈನಿಕರಿದ್ದರು, ಮಂಟಪಗಳು, ಶಾಲೆಗಳು ಇದ್ದವು. ಒಂಬತ್ತು ದ್ವಾರಗಳಿದ್ದವು. ಈ ನಗರವು ಕಳ್ಳರಿಂದ ಮುಕ್ತವಾಗಿದೆ. ತಾಳಿಕೋಟೆ ಯುದ್ಧ ಮುಗಿದು ಎರಡು ವರ್ಷಗಳ ನಂತರ ಹಂಪಿಯಲ್ಲಿ ಇಷ್ಟೆಲ್ಲವನ್ನು ಕಂಡ ಫ್ರೆಡಿರಿಕ್‌ನ ಗ್ರಂಥವನ್ನು ಓದಿಯೂ ಈ ಸಂಗತಿಗಳನ್ನು ಮರೆಮಾಚಿ ಸಿವೆಲ್‌ನೇ ವಿಜಯನಗರದಲ್ಲಿ ಮುಸ್ಲಿಮರು ಐದು ತಿಂಗಳು ದೇವಾಲಯಗಳನ್ನು ಅರಮನೆಯನ್ನು ನಾಶ ಮಾಡಿದರೆಂದು ತಿರುಚಿ ಬರೆದಂತಿದೆ. ಫ್ರೆಡಿರಿಕ್‌ನ ಈ ವಿವರಗಳು ವಿಜಯನಗರದ ಪತನಕ್ಕೆ ಬೇರೆ ಕಾರಣಗಳಿರಬಹುದೆಂಬ ಸೂಚನೆಯನ್ನು ನೀಡುತ್ತವೆ.[೫೫]

ಜಾರ್ಜ್ ಮೈಕಲ್‌ನು ವಿಜಯನಗರ ಆರ್ಕಿಟೆಕ್ಚರಲ್ ಇನ್‌ವೆನ್ಟರಿ ಆಫ್ ದಿ ಅರ್ಬನ್ ಕೋರ್ ಎಂಬ ಮೂರು ಸಂಪುಟಗಳನ್ನು(೧೯೯೦-೨೦೦೧) ಪ್ರಕಟಿಸಿದನು. ಈ ಕೃತಿಯು ವಿಜಯನಗರದ ಹಂಪಿ ಪ್ರದೇಶದಲ್ಲಿ ಕಂಡುಬರುವ ಸ್ಮಾರಕಗಳ ರಚನೆ, ಶೈಲಿ, ವಿನ್ಯಾಸ, ವಿವಿಧ ವಾಸ್ತುಶೈಲಿ ಕುರಿತ ವಿವರಗಳನ್ನು ತಿಳಿಸುತ್ತದೆ. ಪ್ರಮುಖವಾಗಿ ಇಂಡೋ-ಇಸ್ಲಾಮಿಕ್ ಸ್ಮಾರಕಗಳಿಗೆ ಸಂಬಂಧಿಸಿದ ವಿವರಗಳನ್ನು ನೀಡಿದ್ದಾನೆ. ಕಮಲ್‌ಮಹಲ್, ಗಜಶಾಲೆ, ರಾಣಿಸ್ನಾನಗೃಹ ಕುರಿತು ಪ್ರಭುತ್ವ ಸ್ಮಾರಕಗಳ ಮೇಲೆ ಇಸ್ಲಾಮಿಕ್ ವಾಸ್ತುಶೈಲಿಯ ರಚನೆಗಳನ್ನು ಕುರಿತು ಮಾಹಿತಿ ಸಲ್ಲಿಸಲಾಗಿದೆ. ಜೊತೆಗೆ ಮುಸ್ಲಿಂ ಸ್ಮಾರಕಗಳಾದ ಗೋರಿ ಕಟ್ಟಡಗಳು, ಮಸೀದಿಗಳ ವಿನ್ಯಾಸ, ಆಕರ, ರಚನೆ ಕುರಿತು ವಿಶ್ಲೇಷಿಸಲಾಗಿದೆ. ಅದೇ ರೀತಿಯ ವಿಜಯನಗರದಲ್ಲಿ ಕಂಡುಬಂದಿದ್ದ ಸ್ಮಾರಕಗಳ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಹಲವು ಪ್ರಮುಖ ವಿದ್ವಾಂಸರು ಕಾರ್ಯವನ್ನು ಮಾಡಿದ್ದಾರೆ. ಅದರಲ್ಲಿ ಜಾರ್ಜ್ ಮಿಶೆಲ್, ಜಾನ್ ಎಮ್. ಫ್ರಿಟ್ಜ್, ನೋಷಿರ್ ಗೋಬಿ ಮುಂತಾದವರು ಹಂಪಿ ಸ್ಮಾರಕಗಳ ಕುರಿತು ವಿವರಿಸಿದ್ದಾರೆ. ಆದರೆ ವಾಸ್ತುಶೈಲಿಯ ಮೂಲಕ ಧಾರ್ಮಿಕ ಸಾಮರಸ್ಯವನ್ನು ತಿಳಿಸುವ ಪ್ರಯತ್ನಕ್ಕೆ ಇವರ್ಯಾರೂ ಮುಂದಾಗಲಿಲ್ಲ.

೩.೨.೩. ರಾಷ್ಟ್ರೀಯವಾದಿ ನಿಲುವುಗಳು

ಸಿವೆಲ್ ನಂತರ ಇವನ ಕೃತಿಯನ್ನು ಆಧಾರವಾಗಿಟ್ಟುಕೊಂಡು ರಾಷ್ಟ್ರೀಯವಾದಿಗಳು ಹಲವು ಕೃತಿಗಳನ್ನು ರಚಿಸಿದರು. ಸಿವೆಲ್‌ನ ನಂತರ ವಿಜಯನಗರದ ಚರಿತ್ರೆಯ ಕುರಿತು ಕೆಲಸ ಮಾಡಿದ ಭಾರತೀಯ ವಿದ್ವಾಂಸರಲ್ಲಿ ಕೃಷ್ಣಸ್ವಾಮಿ ಅಯ್ಯಂಗಾರ್ ಪ್ರಮುಖರು. ಅವರ ಪ್ರಕಾರ ವಿಜಯನಗರದ ಸ್ಥಾಪನೆ ಮತ್ತು ಅವನತಿ ಇವೆರಡಕ್ಕೂ ಹಿಂದೂ-ಮುಸ್ಲಿಂ ನಡುವಿನ ಸಂಘರ್ಷವೇ ಮೂಲ ಕಾರಣ ಎಂದಿದ್ದಾರೆ. ಅಯ್ಯಂಗಾರ್ ಅವರು ತಮ್ಮ ವಾದವನ್ನು ಮುಸ್ಲಿಂ ವಿರೋಧಿ ನೆಲೆಯಲ್ಲಿ ಹಾಗೂ ರಾಷ್ಟ್ರೀಯತೆಯ ನೆಲೆಯಲ್ಲಿ ಮಂಡಿಸಿದರು. ವಿಜಯನಗರದ ಚರಿತ್ರೆಯನ್ನು ವಿಶಾಲ ಭಾರತದ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿಟ್ಟು ನೋಡುವ ಪ್ರಯತ್ನವನ್ನು ಮಾಡಿದರು. ಹೊಯ್ಸಳ ಅರಸ ಮೂರನೆಯ ಬಲ್ಲಾಳನು ಮುಸ್ಲಿಮರನ್ನು ದಕ್ಷಿಣ ಭಾರತದಿಂದ ಹೊಡೆದಟ್ಟಲು ಮಾಡಿದ ಪ್ರಯತ್ನಗಳು, ಅವರ ಪರಿಣಾಮಗಳು, ಆ ಪ್ರಯತ್ನವನ್ನು ವಿಜಯನಗರದ ಅರಸರು ಮುಂದುವರಿಸಿದ್ದು, ಇವೇ ಮುಂತಾದುವು ಅಯ್ಯಂಗಾರ್ ಅವರ ಅಧ್ಯಯನದ ಪ್ರಮುಖ ವಸ್ತುಗಳು. ಮೂರನೆಯ ವೀರಬಲ್ಲಾಳನು ದಕ್ಷಿಣದಿಂದ ಮಹಮ್ಮದೀಯರನ್ನು ಹೊರಗಟ್ಟಲು ದೇಶಭಕ್ತಿಯುತವಾದ ಪ್ರಯತ್ನ ಮಾಡಿದನು. ಅದೊಂದು ಹಿಂದೂಗಳ ಮಹಾನ್ ರಾಷ್ಟ್ರೀಯ ಯುದ್ಧ ಎನ್ನುವುದು ಅಯ್ಯಂಗಾರ್ ಅವರ ಹೇಳಿಕೆ. ಮುಸ್ಲಿಮರಿಂದ ಹಿಂದೂಗಳ ರಕ್ಷಣೆಗಾಗಿ ವಿಜಯನಗರ ಸಾಮ್ರಾಜ್ಯ ಹುಟ್ಟಿಕೊಂಡಿತು ಎನ್ನುವ ಮತೀಯವಾದ ಅಯ್ಯಂಗಾರ್ ಅವರ ಕೃತಿಗಳಲ್ಲಿ ಕಂಡುಬರುತ್ತದೆ. ಅವರ 'ಸೌತ್ ಇಂಡಿಯಾ ಆ್ಯಂಡ್ ಹರ್ ಮೊಹಮ್ಮಡನ್ ಇನ್‌ವೇಡರ್ಸ್'(೧೯೨೧) ಕೃತಿಯು ಹಿಂದೂ-ಮುಸ್ಲಿಂ ಸಂಘರ್ಷವನ್ನೇ ಪ್ರಧಾನ ವಸ್ತುವನ್ನಾಗಿಟ್ಟುಕೊಂಡಿದೆ. ರೆವೆರೆಂಡ್ ಹೆನ್ರೀ ಹೆರಾಸ್ ಅವರು ಇದೇ

ರೀತಿಯ ವಾದಗಳನ್ನು ಮಂಡಿಸಿದ್ದಾರೆ. ಮುಸ್ಲಿಮರಿಂದ ಹಿಂದೂ ಧರ್ಮವನ್ನು ರಕ್ಷಿಸುವುದು ಹಾಗೂ ಮುಸ್ಲಿಂ ದಾಳಿಯಿಂದಾದ ಅವಮಾನದ ವಿರುದ್ಧ ಸೇಡು ತೀರಿಸಿಕೊಳ್ಳುವುದು ಇದೇ ಮೊದಲಾದ ಕೋಮುವಾದಿ ಹಿನ್ನೆಲೆಯ ವಿವರಗಳನ್ನು ಹೆರಾಸ್ ಅವರ ಬರಹಗಳು ನೀಡುತ್ತವೆ.[೫೬]

೧೯೦೯ರಲ್ಲಿ ಆಲೂರು ವೆಂಕಟರಾಯರು 'ಕರ್ನಾಟಕ ಸಿಂಹಾಸನಚಾರ್ಯ ಶ್ರೀ ವಿದ್ಯಾರಣ್ಯ', 'ಕರ್ನಾಟಕದ ಗತವೈಭವ'ದಲ್ಲಿ, ವಿದ್ಯಾರಣ್ಯರು ಹಾಗೂ 'ಕರ್ನಾಕದ ವೀರ ರತ್ನಗಳು' (೧೯೩೦) ಕೃತಿಗಳಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ವಿದ್ಯಾರಣ್ಯರು ಕಾರಣರಾಗಿದ್ದಾರೆ, ವಿದ್ಯಾರಣ್ಯರಿಗೆ ಹರಿಹರ ಬುಕ್ಕರು ವಿಧೇಯರಾಗಿದ್ದು, ಅವರ ಮಾರ್ಗದರ್ಶನದಲ್ಲಿ ಹೇಗೆ ರಾಜ್ಯ ಸ್ಥಾಪನೆ ಮಾಡಿದರೆಂಬ ವಿಚಾರಗಳನ್ನು ತಿಳಿಸಿದ್ದಾರೆ. ಹಿಂದೂ ಧರ್ಮ ರಕ್ಷಣೆಗೆ ವಿದ್ಯಾರಣ್ಯರ ಸಹಾಯವನ್ನು ಪಡೆದುಕೊಂಡು ಅವರ ಮಾರ್ಗದರ್ಶನದಲ್ಲೇ ರಾಜ್ಯ ಸ್ಥಾಪನೆ, ಆಡಳಿತವನ್ನು ನಡೆಸಿದರೆಂದು ತಿಳಿಸುತ್ತಾರೆ. ಕರ್ನಾಟಕದ ಪದದ ಉತ್ಪತ್ತಿ ಕುರಿತು ವಿವರಿಸಿದ್ದಾರೆ. ಕೃಷ್ಣದೇವರಾಯ ಕನ್ನಡ ಮೂಲದವನೆಂದು ವಾದ ಮಾಡಲಾಗಿದೆ. ಕರ್ನಾಟಕ ವೈಭವೀಕರಣವನ್ನು ಸಾಹಿತ್ಯ, ಕಲೆ, ದಾಸಪರಂಪರೆ, ವಚನಗಳ ರಚನೆ ಮಹತ್ವವನ್ನು ತಿಳಿಸಿದ್ದಾರೆ. ಕೃಷ್ಣದೇವರಾಯನನ್ನು ಅಕ್ಬರ್‌ಗೆ ಹೋಲಿಸಿದ್ದಾರೆ. ಕೃಷ್ಣದೇವರಾಯರನು ಮುಸ್ಲಿಮರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದನು, ಕೃಷ್ಣದೇವರಾಯನ ಘಟನೆ ಕುರಿತು ವಿಶ್ಲೇಷಿಸುತ್ತಾ ಹೇಗೆ ಮುಸ್ಲಿಂ ರಾಜ್ಯಗಳ ವಿಸ್ತರಣೆಯನ್ನು ತಡೆಹಿಡಿದವೆಂಬುದಕ್ಕೆ ಹಿಂದೂ-ಮುಸ್ಲಿಂ ವಿರೋಧ ನೆಲೆಯಲ್ಲಿ ಕರ್ನಾಟಕದ ಪ್ರಭಾವವನ್ನು ವಿವರಿಸಿದ್ದಾರೆ.

ಕೆ. ರಾಮಸ್ವಾಮಿ ಅಯ್ಯಂಗಾರ್ ಅವರು ೧೯೧೬ರಲ್ಲಿ ಜೀರ್ಣವಿಜಯನಗರಾದರ್ಶನಂ ಕೃತಿಯಲ್ಲಿ ವಿಜಯನಗರ ಸ್ಥಾಪನೆಯಿಂದ ಹಿಡಿದು ಅವನತಿವರೆಗಿನ(೧೩೩೬-೧೫೬೫) ಚರಿತ್ರೆಯನ್ನು ಭಾಷಿಕ ನೆಲೆಯಲ್ಲಿ ಚರ್ಚಿಸಿದ್ದಾರೆ. ಇವರು ವಿಜಯನಗರದ ಮೂಲವು ತೆಲುಗು ಪ್ರಾಂತ್ಯವೆಂದು ವಾದಿಸಿದ್ದಾರೆ. ಇದಕ್ಕೆ ತೆಲುಗು ಸಾಹಿತ್ಯವನ್ನು ಅವಲಂಬಿಸಿ ತಮ್ಮ ವಾದವನ್ನು ಮಂಡಿಸಿದ್ದಾರೆ. ಕೃಷ್ಣದೇವರಾಯನನ್ನು ಆಂಧ್ರಪ್ರದೇಶಕ್ಕೂ, ಆಂಧ್ರ ರಾಜರಿಗೂ, ಆಂಧ್ರ ಭಾಷೆಗೂ, ಸೇರಿದವನೆಂದು ತಿಳಿಸಿದ್ದಾರೆ.

ದೇಸಾಯಿ ಪಾಂಡುರಂಗರಾಯರು ವಿಜಯನಗರದ ಕ್ರೈಸ್ತ ಜನಾಂಗವೆಂಬ ಲೇಖನವನ್ನು ಜಯಕರ್ನಾಟಕ ಸಂಪುಟ-೪, ಸಂಚಿಕೆ ೭, ೧೯೩೬ರಲ್ಲಿ ಪ್ರಕಟ ಮಾಡಿದರು. ಇವರು ವಿಜಯನಗರ ದಲ್ಲಿ ಕ್ರೈಸ್ತ ಧರ್ಮದ ಹರಡುವಿಕೆ ಹೇಗೆ ಕಂಡುಬಂದಿತು ಎಂಬುದನ್ನು ತಿಳಿಸಿದ್ದಾರೆ. ಕ್ರಿ.ಶ. ೧೫ನೇ ಶತಮಾನದಲ್ಲಿ ಯುರೋಪಿಯನ್ನರ ವ್ಯಾಪಾರದ ಹಿಂದೆ ಧರ್ಮ ಪ್ರಸಾರದ ಉದ್ದೇಶವು ನಿಧಾನವಾಗಿ ಹರಡಿತೆಂಬುದನ್ನು ತಿಳಿಸಿದ್ದಾರೆ. ಇವರು ಇಟಲಿ ಪ್ರವಾಸಿ ನಿಕೊಲೊ-ಡೆ-ಕೊಂಟಿ, ರಷ್ಯಾದ ನಿಕಟಿನ್ ಪೋರ್ಚುಗೀಸ್ ಪ್ರವಾಸಿ ವಾಸ್ಕೋ-ಡ-ಗಾಮಾ. ಇವರ ಪ್ರವಾಸ ಕಥನಗಳನ್ನು ಆಯ್ದುಕೊಂಡು ವಿಜಯನಗರ ಕಾಲದಲ್ಲಿ ಹೇಗೆ ಪ್ರಭಾವ ಬೀರಿದರು ಎಂಬ ಅಂಶ ತಿಳಿಸಿದ್ದಾರೆ.

ಎಂ.ಯು. ಕೃಷ್ಣರಾವ್ ಅವರ ಕರ್ನಾಟಕ ಚರಿತ್ರೆ ೧೯೫೯ರಲ್ಲಿ ಪ್ರಕಟಗೊಂಡಿತು. ಇದರಲ್ಲಿ ವಿಜಯನಗರ ಸ್ಥಾಪಕರು ಸಂಗಮ ಅರಸರು ಎಂದು ತಿಳಿಸಿದ್ದಾರೆ. ಸಂಗಮದಿಂದ ಹಿಡಿದು ತುಳುವ ವಂಶದವರೆಗಿನ ಆಳ್ವಿಕೆಯಲ್ಲಿ ವಿಜಯನಗರದ ಅರಸರು ಮುಸ್ಲಿಂ ರಾಜ್ಯಗಳೊಂದಿಗೆ ಹೊಂದಿದ ಸಂಬಂಧ ಕೃಷ್ಣದೇವರಾಯನ ಕೊಲೆಯ ಪ್ರಯತ್ನ ಕುರಿತಾಗಿ ತಿಳಿಸಲಾಗಿದೆ. ಮುಸ್ಲಿಂ ರಾಜ್ಯಗಳೊಂದಿಗೆ ಮಾಡಿದ ಯುದ್ಧ, ಸಾಹಿತ್ಯಕ್ಕೆ ನೀಡಿದ ಕೊಡುಗೆ, ರಾಮರಾಯನೊಂದಿಗೆ ಹೊಂದಿದ ಸಂಬಂಧ ಪೋರ್ಚುಗೀಸ್‌ರ ಆಗಮನ ಕುರಿತು ರಾಮರಾಯನ ರಾಜ್ಯಭಾರ, ರಕ್ಕಸ ತಂಗಡಿ ಕಥನ ಕುರಿತು ತಿಳಿಸಲಾಗಿದೆ. ವಿಜಯನಗರ ರಕ್ಕಸತಂಗಡಿ ಕದನದಲ್ಲಿ ಸೋಲನ್ನು ಅನುಭವಿಸಿ ನಾಶವಾದ ಪ್ರಸಂಗಗಳನ್ನು ವಿವರಿಸಿದ್ದಾರೆ.

ಜಿ.ಎಸ್. ದೀಕ್ಷಿತ್ ವಿಜಯನಗರ ಕಾಲದಲ್ಲಿ ಕನ್ನಡಿಗರು ಕಡಲ ಸಾಹಸ ಲೇಖನವು ಜಯಕರ್ನಾಟಕ ನವರಾಜ್ಯೋದಯ ಸಂಚಿಕೆಯಲ್ಲಿ ಪ್ರಕಟಗೊಂಡಿತ್ತು. ಇದರಲ್ಲಿ ಆಮುಕ್ತಮಾಲ್ಯದ, ಕೃಷ್ಣದೇವರಾಯನು ವ್ಯಾಪಾರದ ಧೋರಣೆ ಕಂಡುಬರುತ್ತದೆ. ಬಂದರು ಪಟ್ಟಣಗಳ ಅಭಿವೃದ್ಧಿ, ವಿದೇಶಿ ವರ್ತಕ ವ್ಯಾಪಾರ ವ್ಯವಹಾರ ಕುರಿತು ಮಾಹಿತಿ ನೀಡಲಾಗಿದೆ. ಈ ವರ್ತಕರಿಗೆ ನೆಲೆಸಲು ಉತ್ತಮ ವಸತಿ ನೆಲೆ ನೀಡುವುದು ಅಲ್ಲದೇ ಆನೆ, ಕುದುರೆ, ವಜ್ರ, ವೈಢೂರ್ಯಗಳು ಹೇಗೆ ಅವರಿಂದ ವಿಜಯನಗರಕ್ಕೆ ಆಮದಾಗುತ್ತಿದ್ದವು ಎಂಬ ಅಂಶಗಳು ತಿಳಿದುಬರುತ್ತವೆ.

ಸಾಲೆತ್ತೂರ್ ಬಿ.ಎ. ಮತ್ತು ವೆಂಕಟರಮಣಯ್ಯ ಎನ್. ಇವರು ವಿಜಯನಗರದ ಚರಿತ್ರೆಯನ್ನು ಪ್ರಾದೇಶಿಕ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿಟ್ಟು ವ್ಯಾಖ್ಯಾನಿಸಿದರು. ಸಾಲೆತ್ತೂರ್ ವಿಜಯನಗರದ ಹುಟ್ಟು ಹಿಂದೂ ಧರ್ಮದ ರಕ್ಷಣೆಗಾಗಿ ಆಯಿತು ಎಂಬುದಾಗಿ ಬರೆಯುತ್ತಾರೆ. ಅವರು ವಿಜಯನಗರವನ್ನು ಕನ್ನಡ ಮಾತನಾಡುವ ಕರ್ನಾಟಕಕ್ಕೆ ಸೀಮಿತಗೊಳಿಸಿಕೊಂಡು ಕರ್ನಾಟಕದ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ನೋಡಿದರು. ಅವರ 'ಸೋಶಿಯಲ್ ಆ್ಯಂಡ್ ಪೊಲಿಟಿಕಲ್ ಲೈಫ್ ಇನ್ ದ ವಿಜಯನಗರ ಎಂಪೈರ್(೧೯೩೪)' ಕೃತಿಯು ಈ ಕುರಿತು ಚರ್ಚಿಸುತ್ತದೆ. ಸಾಲೆತ್ತೂರ್ ಮತ್ತು ಹೆರಾಸ್ ವಿಜಯನಗರಕ್ಕೆ ಕರ್ನಾಟಕದ ಮೂಲವನ್ನು ಮಂಡಿಸಿದರು. ವೆಂಕಟರಮಣಯ್ಯನವರು ತೆಲುಗು ಮಾತನಾಡುವ ಆಂಧ್ರಕ್ಕೆ ಸೀಮಿತಗೊಳಿಸಿಕೊಂಡು ವಿಜಯನಗರದ ಚರಿತ್ರೆಯನ್ನು ನಿರ್ಮಿಸಿದರು. ಅವರು ಸಾಮ್ರಾಜ್ಯದ ತೆಲುಗು ಮೂಲವನ್ನು ಮಂಡಿಸಿದರು. ಅವರ ಪ್ರಕಾರ ವಿಜಯನಗರದ ಸ್ಥಾಪಕರಾದ ಸಂಗಮ ಸೋದರರು ಕನ್ನಡಿಗರಲ್ಲ, ಅವರು ತೆಲುಗು ಮಾತನಾಡುವವರು ಹಾಗೂ ಆಂಧ್ರಕ್ಕೆ ಸೇರಿದವರು. ಈ ರೀತಿಯಾಗಿ ವಿಜಯನಗರದ ಚರಿತ್ರೆಯನ್ನು ಪ್ರಾದೇಶಿಕವಾಗಿ ಸೀಮಿತಗೊಳಿಸಿಕೊಂಡು ಅಭಿಮಾನದಿಂದ ಚರಿತ್ರೆ ನಿರ್ಮಿಸುವ ಪ್ರಯತ್ನಗಳು ನಡೆದವು. ಬಿ.ಎ. ಸಾಲೆತ್ತೂರ್ ಹಾಗೂ ದೇಸಾಯಿ ಪಾಂಡುರಂಗರಾಯರು 'ಕನ್ನಡ ನಾಡಿನ ಚರಿತ್ರೆ' ಕೃತಿಯನ್ನು ರಚಿಸಿದರು. 'ಅಧಿಕಾರದ ಹಂತ ಹಂತವು ಕರ್ನಾಟಕದ ತುಳುವ ಅರಸುಗಳ ಕೈಯಿಂದ ಕೃಷ್ಣದೇವರಾಯನ ಅಳಿಯನಾದ ರಾಮರಾಯನು ಸೇರಿತು. ಅರವೀಡು ಸಂತತಿ ಆಂಧ್ರ ಮನೆತನದ ಕೈಗೆ ಹೋಯಿತು.

ಈತನೇ ಸುಪ್ರಸಿದ್ಧನಾದ ಅಳಿಯ ರಾಮರಾಯನೆಂದು ರೂಢಿಯ ಹೆಸರುಳ್ಳ ರಾಜ್ಯಾಧಿಕಾರಿ. ಈತನೇ ಕ್ರಿ.ಶ. ೧೫೪೩–೧೫೭೦ರವರೆಗೆ ಆಳಿದ ಚಕ್ರವರ್ತಿ ಸದಾಶಿವರಾಯನನ್ನು ಸಿಂಹಾಸನಕ್ಕೆ ಏರಿಸಿದನು ಮತ್ತು ದುರ್ಬಲವಾದ ಆಳ್ವಿಕೆಯಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತವನ್ನು ನಡೆಸಿದನು. ಚಕ್ರವರ್ತಿ ಸದಾಶಿವರಾಯನ ಆಳ್ವಿಕೆಯಲ್ಲಿ ದಖನ್ ಸುಲ್ತಾನರು ಸಂಮಿಳಿತವಾದ ಹಿಂದೂಗಳನ್ನು ರಕ್ಕಸತಂಗಡಿ ಯುದ್ಧರಂಗದಲ್ಲಿ ಸಂಪೂರ್ಣವಾಗಿ ಸೋಲಿಸಿದರು. ರಾಮರಾಯನೇ ಈ ಯುದ್ಧದಲ್ಲಿ ಸತ್ತುಬಿದ್ದನು. ವಿಜಯನಗರದ ಮಹಾ ರಾಜಧಾನಿ ಸೂರೆಯಾಯಿತು. ಅದರ ಉತ್ತರ ಪ್ರಾಂತಗಳು ಮುಸ್ಲಿಮರ ಸಂಸ್ಥಾನಗಳಿಗೆ ಸೇರಿ ಹೋದವು. ಆದರೆ ಹಿಂದೂಗಳು ಪೂರ್ತಿ ನಾಶವಾಗಲಿಲ್ಲ. ಅವರು ರಾಜಧಾನಿಯನ್ನು ಪೆನುಗೊಂಡೆಗೂ ಅಲ್ಲಿಂದ ಚಂದ್ರಗಿರಿಗೂ, ವೆಲ್ಲೂರಿಗೂ ತೆಗೆದುಕೊಂಡು ಹೋಗಿ ೪೪ ವರುಷ ಕಾಲ ಮುಸ್ಲಿಮರ ಮೇಲೆ ನಿಂತು ತಡೆಗಟ್ಟಿದರು.[೫೭]

ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಮುಖ್ಯ ಕಾರಣ ಅದರ ಒಳಗೆ ಅಧಿಕಾರಕ್ಕಾಗಿ ನಡೆದ ಅಂತಃಕಲಹ ಹಾಗೂ ಆಕ್ರಮಣಶೀಲತೆ, ಕೃಷ್ಣದೇವರಾಯನ ವಾರಸುದಾರರನ್ನು ದುರ್ಬಲಗೊಳಿಸಿ ಅರವೀಡು ಮನೆತನದ ಅಳಿಯ ರಾಮರಾಯ ಹಾಗೂ ಅವರ ಸಹೋದರರು ಸ್ವಂತ ಅಧಿಕಾರ ಸ್ವಾರ್ಥಕ್ಕಾಗಿ ವಿಜಯನಗರ ಸಾಮ್ರಾಜ್ಯಕ್ಕೆ ದೊಡ್ಡ ದ್ರೋಹವನ್ನು ಬಗೆದರು. ಇಡೀ ಸಾಮ್ರಾಜ್ಯವನ್ನು ಆಂತರಿಕವಾಗಿ ದುರ್ಬಲಗೊಳಿಸಿದರು. ಪರಕೀಯರ ಆಕ್ರಮಣದೆದುರು ಸೆಟೆದು ನಿಲ್ಲುವಂತೆ ನಿಸ್ಸತ್ವಗೊಳಿಸಿದರು. ವಿಜಯನಗರ ಉಗಮದ ಸಂಗಮ ವಂಶದ ದ್ರೋಹವನ್ನು, ದುರಾಕ್ರಮಣ ಶೀಲತೆಯನ್ನು ಬಿಚ್ಚಿಟ್ಟ ಇತಿಹಾಸಕಾರರು, ಅದರ ಪತನದ ವಿಷಯದಲ್ಲಿ ಅರವೀಡು ವಂಶದ ದ್ರೋಹವನ್ನು ಮರೆಮಾಚಿದರು. ಹಿಂದೂ ಧರ್ಮ ಸಂಸ್ಕೃತಿಗಳ ರಕ್ಷಣೆಯ ವಿಜಯನಗರ ಸಾಮ್ರಾಜ್ಯದ ಉದ್ದೇಶವಾಗಿದ್ದರೆ ಅರವೀಡು ವಂಶದವರ ಸ್ವಾರ್ಥಪರ ಅಧಿಕಾರದಾಹದಿಂದ ಈ ಸಾಮ್ರಾಜ್ಯ ಪತನವಾಗುತ್ತಿರಲಿಲ್ಲ. 'ವಿಜಯನಗರದ ಪತನವನ್ನು ಯಾವುದಾದರೂ ವ್ಯಕ್ತಿಗಳಿಗೆ ಆರೋಪಿಸುವುದಾದರೆ ಈ ಅರವೀಡು ಸಹೋದರರರದೂ ಅದರಲ್ಲಿ ಪಾಲಿದ್ದದ್ದು ಸ್ಪಷ್ಟ. ಕೃಷ್ಣದೇವರಾಯನ ವಾರಸುದಾರರನ್ನು ಸೆರೆಯಲ್ಲಿಟ್ಟದ್ದೊಂದೇ ಅಲ್ಲದೇ ತುಳುವ ವಂಶದ ಸದಾಶಿವರಾಯನನ್ನು ಸೆರೆಮನೆಯಲ್ಲಿಯೇ ಕೊಲೆಗೈದು ಈ ಅರವೀಡು ಸಹೋದರರು ಅಧಿಕಾರ ಹಿಡಿದರು[೫೮] ರಾಜಾರಾಮ ಹೆಗಡೆಯವರು ಸಿವೆಲ್‌ನ ಕಥನದಲ್ಲಿನ ಹಿಂದೂ ರಾಷ್ಟ್ರ ಹಾಗೂ ಕರ್ನಾಟಕತ್ವಗಳ ಸಂಕೇತಗಳ ಕುರಿತು ಟೀಕಿಸುತ್ತಾರೆ. ಅಂದಿನ ಸಮಕಾಲೀನ ಸಂದರ್ಭದಲ್ಲಿ ಕರ್ನಾಟಕತ್ವದ ಸಂಕೇತಗಳು, ಸಿವೆಲ್ ಕೃತಿಯಲ್ಲಿ ಆಕರವಾಗಿ ಕಂಡುಬರುವುದಿಲ್ಲ. ಅವನ ಕಥನದಲ್ಲಿ ಹಿಂದೂ ಎಂಬುದೊಂದು ಮತಧರ್ಮವೊಂದರ ಅಷ್ಟೇ ಪ್ರಸ್ತಾಪವಿದೆ. ವಿಜಯನಗರ ಸಾಮ್ರಾಜ್ಯದ ಉಗಮ ಹಾಗೂ ವಿನಾಶಗಳ ಹಿಂದೆ ಕಾರಣಶಕ್ತಿಯಾಗಿ ಧರ್ಮಗಳು(ಹಿಂದೂ–ಮುಸ್ಲಿಂ) ಕುರಿತ ಮಹತ್ವವನ್ನು ಕೃತಿಯಲ್ಲಿ ಚರ್ಚಿಸಲಾಗಿದೆ. ಉದಾಹರಣೆಗೆ ಫೆರಿಸ್ತಾನು ವಿಜಯನಗರ ಪತನ ಕುರಿತು ದಾಖಲಿಸುತ್ತಾ, ರಾಮರಾಯನ ದುಷ್ಕೃತ್ಯಗಳು ಹಾಗೂ ಅವನ ಸೈನಿಕರು ಮುಸ್ಲಿಂ ಹೆಂಗಸರನ್ನು ಅವಮಾನಿಸಿದ್ದು ಹಾಗೂ ಕುರಾನ್ ಗ್ರಂಥಕ್ಕೆ ಅಗೌರವ

ತೋರಿಸಿದ್ದು ರಕ್ಕಸಗಿ–ತಂಗಡಗಿ ಯುದ್ಧಕ್ಕೆ ಕಾರಣವಾದವು ಎಂದು ತಿಳಿಸುತ್ತಾನೆ. ಈ ಹೇಳಿಕೆ ಯನ್ನಾಧರಿಸಿ ರಾಬರ್ಟ್ ಸಿವೆಲ್ 'ಹಿಂದೂಗಳ ಈ ವರ್ತನೆ ಇಸ್ಲಾಂ ಅನುಯಾಯಿಗಳನ್ನು ಕೆರಳಿಸಿದವಷ್ಟೇ ಅಲ್ಲ, ರಾಮರಾಯನ ಮಿತ್ರ ಪಕ್ಷದವರಾದ ಬಿಜಾಪುರದ ಜನರಲ್ಲೂ ಕೋಪವನ್ನು ಕೆರಳಿಸಿದವು ಹಾಗೂ ವಿಜಯನಗರ ಪತನಕ್ಕೆ ಅದೇ ಬುನಾದಿಯಾಯಿತು ಎನ್ನುತ್ತಾನೆ.[೫೯]

ಕೋಡದ ಎಸ್.ಬಿ. ಅವರ 'ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ ಮುಸ್ಲಿಂ ಬಾಂಧವ್ಯ' (೧೯೬೬) ಕೃತಿಯು ವಿಜಯನಗರ ಹಾಗೂ ಬಹಮನಿ ಕುರಿತ ಪ್ರಮುಖ ಮಾಹಿತಿಯನ್ನು ನೀಡುತ್ತದೆ. ರಾಮರಾಯನ ಆಡಳಿತ, ಯುದ್ಧಗಳು, ಬಹಮನಿಯೊಂದಿಗೆ ಹೊಂದಿದ ರಾಜಕೀಯ, ಸಾಮಾಜಿಕ ಸಂಬಂಧ ತಿಳಿಸಿದ್ದಾರೆ. ವಿಜಯನಗರದಲ್ಲಿ ಮುಸ್ಲಿಂ ಅಧಿಕಾರಿಗಳಿದ್ದರೆಂಬುದನ್ನು ಹೆಸರಿಸಿದ್ದಾನೆ. ಅಲ್ಲದೇ ಉದ್ದಿಮೆಗಳು ಬೆಳೆದುದರ ಬಗ್ಗೆ ವಿಜಯನಗರದ ಬಂದರುಗಳು, ವಿದೇಶಿ ವ್ಯಾಪಾರಿಗಳ ಮಾರುಕಟ್ಟೆಗಳಾಗಿದ್ದವು. ಕೋಡದ ಎಸ್.ಬಿ. ಅವರ ಇನ್ನೊಂದು ಕೃತಿ 'ವಿಜಯನಗರದ ನಿರ್ಣಾಯಕ ಯುದ್ಧ'(೧೯೬೮) ವಿಜಯನಗರ ಹಾಗೂ ಬಹಮನಿ ಸಂಬಂಧಗಳು ಯಾವ ರೀತಿ ಬೆಳೆದು, ಅವು ಹೇಗೆ ಯುದ್ಧಕ್ಕೆ ಕಾರಣವಾಯಿತು ರಕ್ಕಸಗಿ ತಂಗಡಗಿ ಕದನವು ದಕ್ಷಿಣ ಭಾರತದ ಮೇಲೆ ಯಾವ ರೀತಿಯ ಬದಲಾವಣೆಗಳಾದವು ಎಂಬುದನ್ನು ವಿಶ್ಲೇಷಿಸಲಾಗಿದೆ. ಇವರ ಇನ್ನೊಂದು ಕೃತಿಯಾದ 'ವಿಜಯನಗರದ ಉಚ್ಛ್ರಾಯ ಕಾಲ'(೧೫೪೨–೬೪) ರಕ್ಕಸಗಿ ತಂಗಡಗಿ ಕದನಕ್ಕಿಂತ ಮುಂಚಿನ ರಾಜಕೀಯ ಪರಿಸ್ಥಿತಿ ಕುರಿತು ವಿವರಿಸುತ್ತದೆ.

ತ್ರಿವಿಕ್ರಮ ಅವರ 'ಅರವೀಡುವಂಶ ಕೃತಿ'ಯಲ್ಲಿ ವಿಜಯನಗರವು ರಕ್ಕಸತಂಗಡಿ ಕದನದಲ್ಲಿ ಸೋತು ತನ್ನ ರಾಜಧಾನಿಯನ್ನು ಪೆನುಗೊಂಡಕ್ಕೆ ಬದಲಾಯಿಸಿತು ಎಂಬುದಾಗಿ ಹೇಳಲಾಗಿದೆ. ನಂತರದಲ್ಲಿ ಕ್ರಿ.ಶ. ೧೫೬೪ರಿಂದ ೧೬೧೦ರವರೆಗೆ ವಿಜಯನಗರವನ್ನು ಅರವೀಡು ವಂಶದವರು ಆಳ್ವಿಕೆ ನಡೆಸಿದರು. ಈ ಸಂದರ್ಭದಲ್ಲಿ ವೆಂಕಟಾದ್ರಿ ದೇವರಾಯನ ಆಳ್ವಿಕೆಯು ಪ್ರಮುಖವಾಗಿತ್ತು ಎಂಬುದನ್ನು ವಿವರಿಸಿದ್ದಾನೆ. ವಿಜಯನಗರ ತನ್ನ ರಾಜ್ಯವನ್ನು ಆಂಧ್ರ, ತಮಿಳುನಾಡಿನವರೆಗೂ ಹೇಗೆ ವಿಸ್ತರಿಸಿಕೊಂಡಿತ್ತು ಎಂಬುದನ್ನು ತಿಳಿಸಲಾಗಿದೆ. ಮುಸ್ಲಿಂ ಸೈನ್ಯ ಪಡೆ, ಅವರು ಉತ್ಸವದಲ್ಲಿ ಪಾಲ್ಗೊಳ್ಳುವ ಬಗೆಯನ್ನು ದಾಖಲಿಸಿದ್ದಾರೆ.

ಕೆ.ಎ. ನೀಲಕಂಠಶಾಸ್ತ್ರಿ, ಟಿ.ವಿ. ಮಹಾಲಿಂಗಂ, ಎ. ಅಪ್ಪಾದೊರೈ ಮುಂತಾದವರು ವಿಜಯನಗರದ ರಾಜ್ಯ ವ್ಯವಸ್ಥೆಯ ಕುರಿತು ತಮ್ಮ ಚಿಂತನೆಗಳನ್ನು ಮುಂದಿಟ್ಟರು. ಇವರ ಕೃತಿಗಳು ಆಡಳಿತ ಮತ್ತು ಆರ್ಥಿಕತೆಯ ಕುರಿತು ಉಪಯುಕ್ತ ಮಾಹಿತಿಗಳನ್ನು ನೀಡುತ್ತವೆ. ಟಿ.ವಿ. ಮಹಾಲಿಂಗಂ ಅವರು ವಿಜಯನಗರ ಸಾಮ್ರಾಜ್ಯವನ್ನು ಆಡಳಿತ ದೃಷ್ಟಿಕೋನದಲ್ಲಿ ವಿವರಣೆಗೆ ಒಳಪಡಿಸಿದರು. ಅವರ ಕೃತಿಯಾದ 'ಅಡ್ಮಿನಿಸ್ಟ್ರೇಷನ್ ಆ್ಯಂಡ್ ಸೋಶಿಯಲ್ ಲೈಫ್ ಆಫ್ ಅಂಡರ್ ವಿಜಯನಗರ'(೧೯೩೬), ಎ. ಅಪ್ಪಾದೊರೈ ಅವರ 'ಎಕನಾಮಿಕ್ ಕಂಡೀಷನ್ಸ್ ಇನ್ ಸೌತ್ ಇಂಡಿಯಾ. ಎ.ಡಿ. ೧೦೦೦–೧೫೦೦ ಎರಡು ಸಂಪುಟಗಳು(೧೯೪೦) ವಿಜಯನಗರದ

ಆಡಳಿತ, ಸಾಮಾಜಿಕ ಹಾಗೂ ಆರ್ಥಿಕ ಜೀವನದ ಕುರಿತು ಮಾಹಿತಿಗಳನ್ನು ಒದಗಿಸುತ್ತವೆ. ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಬಗೆಯ ಸ್ಥಳೀಯ ಆಡಳಿತ ಘಟಕಗಳನ್ನು ಮಾಡಿಕೊಂಡಿದ್ದರು. ಈ ಘಟಕಗಳು ಸ್ವಯಂ ಆಡಳಿತ ವ್ಯವಸ್ಥೆಯನ್ನು ಹೊಂದಿದಂತೆ ಸ್ಥಳೀಯ ಸರ್ಕಾರದ ಬಗ್ಗೆ ವಿವರಿಸಿದ್ದಾರೆ. ಹೀಗೆ ಸ್ಥಳೀಯ ಸರ್ಕಾರದ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದ ವಿವರಗಳನ್ನು ತಮ್ಮದೇ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ವಿವರಿಸಿದರು. ಈ ಸಿದ್ಧಾಂತದ ಸಮಗ್ರವಾಗಿ ಆಧಾರಗಳನ್ನು ಎ.ವಿ. ವೆಂಕಟರತ್ನಂ ಅವರು 'ಲೋಕಲ್ ಗವರ್ನಮೆಂಟ್ ಇನ್ ವಿಜಯನಗರ ಎಂಪೈರ್' ಕೃತಿಯನ್ನು ರಚಿಸಿದರು. ಇವರು ಪ್ರಮುಖವಾಗಿ ಅಗ್ರಹಾರಗಳು, ಮಠಗಳು, ಗ್ರಾಮಸಭೆಗಳು, ನಾಡು ಮತ್ತು ವರ್ತಕ ಸಂಘಗಳು ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಹೇಗೆ ಗುರುತಿಸಿಕೊಂಡಿದ್ದರು ಎಂಬ ವಿಚಾರಗಳನ್ನು ತಿಳಿಸಿದ್ದಾರೆ. ಟಿ.ವಿ. ಮಹಾಲಿಂಗಂ, ಎ.ವಿ. ವೆಂಕಟರತ್ನಂ ಜೊತೆಗೆ ಜಿ.ಎಸ್. ದೀಕ್ಷಿತ್, ಬಿ.ಆರ್. ಗೋಪಾಲ್ ಮತ್ತು ಪಿ.ಬಿ. ದೇಸಾಯಿ ಚರಿತ್ರೆಕಾರರು ಸಹ ಸಾಮಂತ, ಒಕ್ಕೂಟ, ವಿಕೇಂದ್ರೀಕೃತ ರಾಜ್ಯಾಡಳಿತ ವ್ಯವಸ್ಥೆಯನ್ನು ತಿಳಿಸಿದ್ದಾರೆ. ಶಿವಣ್ಣ ಕೆ.ಎಸ್ ಅವರು 'ಅಗ್ರೇರಿಯನ್ ಸಿಸ್ಟಮ್ ಆಫ್ ಕರ್ನಾಟಕ'(೧೩೩೬–೧೭೬೧) ಕೃತಿಯು ವಿಜಯನಗರ ಕಾಲದಲ್ಲಿನ ಕೃಷಿವ್ಯವಸ್ಥೆ, ನೀರಾವರಿ ಬೆಳೆಗಳು ಕುರಿತ ಆರ್ಥಿಕ ಚಟುವಟಿಕೆಗಳನ್ನು ಕುರಿತು ವಿವರಿಸಿದ್ದಾರೆ. ವಿಜಯನಗರದಲ್ಲಿ ಬೆಳೆಯುವ ಬೆಳೆಗಳು ಅಂತರಿಕ ಹಾಗೂ ವಿದೇಶಿ ವ್ಯಾಪಾರಕ್ಕೆ ಬೇಡಿಕೆ ಇರುವಂತೆ ವಸ್ತುಗಳನ್ನು ಬೆಳೆಯುತ್ತಿದ್ದರೆಂದು ತಿಳಿಸಿದ್ದಾರೆ.

ವಿಜಯನಗರದ ರಾಜ್ಯವ್ಯವಸ್ಥೆ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಬರೆದ ವಿದೇಶಿ ವಿದ್ವಾಂಸರ ಪೈಕಿ ಜಪಾನಿನ ನೊಬುರು ಕರಾಶಿಮ ಹಾಗೂ ಅಮೆರಿಕದ ಬರ್ಟನ್ ಸ್ಟೈನ್ ಪ್ರಮುಖರು. ಬರ್ಟನ್ ಸ್ಟೈನ್ ಅವರು ನೀಲಕಂಠಶಾಸ್ತ್ರಿ ಅವರ ಕೇಂದ್ರೀಕೃತ ಸರ್ಕಾರ ಮಾದರಿಗೆ ಬದಲಾಗಿ ವಿಕೇಂದ್ರೀಕೃತ ಸರ್ಕಾರ ವ್ಯವಸ್ಥೆಯ ಕುರಿತು ಕತೂಹಲಕಾರಿ ಚರ್ಚೆಯನ್ನು ಮುಂದಿಡುತ್ತಾರೆ. ಅವರು ವಿಕೇಂದ್ರೀಕೃತ ರಾಜ್ಯಾಡಳಿತ ವ್ಯವಸ್ಥೆಯನ್ನು 'ಸೆಗ್‌ಮೆಂಟರಿ ಸ್ಟೇಟ್' ಎನ್ನುವ ಹೊಸ ಮಾದರಿಯನ್ನುಟ್ಟು ಪ್ರತಿಪಾದಿಸುತ್ತಾರೆ. ನೀಲಕಂಠಶಾಸ್ತ್ರಿಯವರಂತೆ ಸ್ಟೈನ್ ಅವರು ಚೋಳ ರಾಜ್ಯವ್ಯವಸ್ಥೆಯ ಕುರಿತಾಗಿ ಚರ್ಚಿಸುತ್ತ, ಅಲ್ಲಿ ಅಸ್ತಿತ್ವದಲ್ಲಿದ್ದ 'ನಾಡು'ಗಳೆಂಬ ಹಲವಾರು ಕೇಂದ್ರಗಳ ಕರಿತು ಅಧ್ಯಯನ ನಡೆಸಿ ಅಲ್ಲಿನ ಫಲಿತಗಳನ್ನು ವಿಜಯನಗರಕ್ಕೂ ವಿಸ್ತರಿಸುತ್ತಾರೆ.

ನೊಬುರು ಕರಾಶಿಮ ಅವರು ತನ್ನ ಕೃತಿಗಳಾದ 'ಸೌತ್ ಇಂಡಿಯನ್ ಹಿಸ್ಟರಿ ಆ್ಯಂಡ್ ಸೊಸ್ಯಟಿ: ಸ್ಟಡೀಸ್ ದಿ ಇನ್‌ಸ್ಕ್ರಿಪ್ಷನ್ಸ್' ಎ.ಡಿ. ೮೫೦–೧೮೦೦(೧೯೮೪) ಮತ್ತು 'ಟುವರ್ಡ್ಸ್ ಎ ನ್ಯೂ ಫಾರ್‌ಮೇಶನ್, ಸೌತ್ ಇಂಡಿಯನ್ ಸೊಸ್ಯಾಟಿ ಅಂಡರ್ ವಿಜಯನಗರ ರೂಲ್'(೧೯೯೨) ಇವುಗಳಲ್ಲಿ ಉಳಿಗಮಾನ್ಯ ವ್ಯವಸ್ಥೆಯ ಕುರಿತಾದ ವಿವಿಧ ವ್ಯಾಖ್ಯಾನಗಳನ್ನು ನೀಡಿದ್ದಾರೆ. ನೊಬುರು ಕರಾಶಿಮ ಕೇಂದ್ರೀಕೃತ ಸರ್ಕಾರ ಮಾದರಿಯನ್ನು ಒಪ್ಪುವುದಿಲ್ಲ. ಸ್ಟೈನ್ ಅವರಂತೆ ವಿಕೇಂದ್ರೀಕೃತ ಸರ್ಕಾರದ ಬಗ್ಗೆ ಕರಾಶಿಮ ಬರೆಯುತ್ತಾರೆ.

೩.೨.೪. ಇತ್ತೀಚಿನ ಬರವಣಿಗೆಗಳು

ವಿಜಯನಗರದ ಕುರಿತಾಗಿ ಬಂದಿರುವ ಬರಹಗಳನ್ನು ವಿಮರ್ಶಿಸಿದವರಲ್ಲಿ ವೈ. ಸುಬ್ಬರಾಯಲು ಅವರು ಪ್ರಮುಖರು. ಇವರು ನಾಯಂಕಾರ ಪದ್ಧತಿ, ರಾಜ್ಯವ್ಯವಸ್ಥೆ ರೂಪಗೊಂಡಿರುವ ಬಗೆ, ತಮಿಳು ಪ್ರಾಂತ್ಯದಲ್ಲಿದ್ದ ರಾಜಕಾರಣದ ನೆಲೆಗಳು ಈ ಮುಂತಾದ ವಿಚಾರಗಳನ್ನು ಬಹಳ ಮುಖ್ಯವಾಗಿ ಶಾಸನಗಳನ್ನು ಆಧರಿಸಿ ವಿಶ್ಲೇಷಿಸಿದ್ದಾರೆ. ಅವರ 'ರೀಸೆಂಟ್ ಡೆವಲಪ್ಮೆಂಟ್ಸ್ ಇನ್ ದಿ ಹಿಸ್ಟರಿಯೋಗ್ರಾಫಿ ಆಫ್ ದಿ ವಿಜಯನಗರ ಸ್ಟೇಟ್' ಎನ್ನುವ ಲೇಖನದಲ್ಲಿ ಬರ್ಟನ್ ಸ್ಟೈನ್ ಹಾಗೂ ನೊಬುರು ಕರಾಶಿಮ ಅವರ ನಡುವಿನ ಅಕಡೆಮಿಕ್ ವಾದ-ಪ್ರತಿವಾದಗಳನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿ ವಿಶ್ಲೇಷಿಸಿದ್ದಾರೆ. ವಿಜಯನಗರಕ್ಕೆ ಸಂಬಂಧಿಸಿದಂತೆ ಸಿಗುವ ತಮಿಳು, ತೆಲುಗು, ಮಲಯಾಳಂ ಹಾಗೂ ಕನ್ನಡ ಶಾಸನಗಳನ್ನು ಅಧ್ಯಯನ ನಡೆಸಿ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕುರಿತಂತೆ ಇದ್ದ ಹಲವಾರು ಗೊಂದಲಗಳಿಗೆ ಸ್ಪಷ್ಟವಾದ ಉತ್ತರಗಳನ್ನು ನೀಡಿದ್ದಾರೆ.[೬೦]

ರಾಜರಾಮ ಹೆಗಡೆ ಅವರು ತಮ್ಮ 'ಗತ ಕಥನ' ಕೃತಿಯಲ್ಲಿ ವಿಜಯನಗರದ ಪಥನದ ಕುರಿತಾದ ಕಥನಗಳನ್ನು ವಿವರಿಸಿದ್ದಾರೆ. ಹಂಪಿಯ ಪತನದ ಕುರಿತಂತೆ ರಾಬರ್ಟ್ ಸಿವೆಲ್ ನೀಡಿರುವ ಮತೀಯ ಚಿತ್ರಣವನ್ನು ಈ ಕೃತಿಯಲ್ಲಿ ವಿಮರ್ಶಿಸಲಾಗಿದೆ. ೧೫೬೫ರ ಯುದ್ಧದ ತಕ್ಷಣ ಹಂಪಿ ನಾಶವಾಯಿತು ಎನ್ನುವ ಧೋರಣೆಗಳನ್ನು ಇಲ್ಲಿ ಮರುಓದಿಗೆ ಒಡ್ಡಲಾಗಿದೆ. ಅರವೀಡು ವಂಶದ ತಿರುಮಲರಾಯ ೧೫೬೭ರಲ್ಲಿ ಮತ್ತೊಮ್ಮೆ ಹಂಪಿಯನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ನಡೆಸಲು ಪ್ರಯತ್ನಿಸಿದ ವಿಚಾರಗಳನ್ನು ಇಟಲಿಯ ಪ್ರವಾಸಿಗ ಸೀಜರ್ ಫೆಡರಿಕನ ಕಥನಗಳ ಮೂಲಕ ಈ ಕೃತಿಯಲ್ಲಿ ವಿವರಿಸಲಾಗಿದೆ.[೬೧]

ಬಾರ್ಕೂರು ಉದಯ ಅವರು 'ವಸಾಹತುಶಾಹಿ ಇತಿಹಾಸ ಮತ್ತು ಚರಿತ್ರೆಯ ವಾಸ್ತವ ವಿಜಯನಗರ ಸಾಮ್ರಾಜ್ಯದ ಕುರಿತು ಒಂದು ಇಣುಕು ನೋಟ'(೨೦೧೦, ಹೊಸತು) ಲೇಖನದಲ್ಲಿ ವಸಾಹತುಶಾಹಿಗಳ ಧೋರಣೆಗಳನ್ನು ಟೀಕಿಸಿದ್ದಾರೆ. ಹಿಂದೂ-ಮುಸ್ಲಿಂ ನಡುವೆ ಒಡೆದು ಆಳುವ ನೀತಿಯನ್ನು ಬ್ರಿಟಿಶರು ಅನುಸರಿಸಿ ಚರಿತ್ರೆಯನ್ನು ಹೇಗೆ ತಿರುಚಲಾಯಿತು ಎಂಬುದನ್ನು ಉದಾಹರಣೆ ಸಮೇತ ವಿವರಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯು ಆಕಸ್ಮಿಕ ಹಾಗೂ ಪ್ರಾದೇಶಿಕ ಬೆಳವಣಿಗೆಯ ಫಲಿತಾಂಶವಾಗಿತ್ತೆ ವಿನಾ ಇಸ್ಲಾಂ ಧರ್ಮದ ವಿರುದ್ಧ ಹುಟ್ಟಿಕೊಂಡಿದ್ದು ಹಿಂದೂ ಧರ್ಮವನ್ನು ರಕ್ಷಿಸುವ ಸಲುವಾಗಿ ಹುಟ್ಟಿರಲಿಲ್ಲವೆಂದಿದ್ದಾರೆ. ವಿಜಯನಗರದ ಅರಸರು ಪ್ರಸ್ತುತ ಬಳಕೆಯಲ್ಲಿರುವ ಧರ್ಮವೆಂಬ ಅರ್ಥದಲ್ಲಿ ಬದುಕುತ್ತಿರಲಿಲ್ಲ. ಅವರು ರಾಜಧರ್ಮವನ್ನು ಪಾಲಿಸುತ್ತಿದ್ದರು. ಹಾಗಾಗಿ ರಾಜ್ಯದಲ್ಲಿ ಅನೇಕ ಮುಸ್ಲಿಂ ಸೈನ್ಯ ಪಡೆಯಿತ್ತೆಂದು ಹೇಳಿದ್ದಾರೆ. ಒಂದು ಸಮುದಾಯವನ್ನು ಓಲೈಸುವುದಾಗಲಿ, ದೂರವಿಡುವ ಕ್ರಮವಾಗಲಿ ರಾಜರು ಪಾಲಿಸುತ್ತಿರಲಿಲ್ಲ ಎಂಬುದನ್ನು ತಿಳಿಸಿದ್ದಾರೆ. ಮುಸ್ಲಿಂ ಸೈನಿಕರನ್ನು ತಮ್ಮ ರಾಜ್ಯದಲ್ಲಿ ಸೇರಿಸಿಕೊಂಡಿದ್ದು ಅದೇ ರೀತಿ ದೆಹಲಿ ಸುಲ್ತಾನರು

ನಾಯಕರ ಪದ್ಧತಿಯನ್ನು ಅನುಸರಿಸುತ್ತಿದ್ದರು. ಪರ್ಶಿಯನ್ ಮತ್ತ ಅರೇಬಿಯನ್ ಭಾಷೆಯಲ್ಲಿ ಕಂದಾಯ ವಸೂಲಿ ಮತ್ತು ಆಡಳಿತಕ್ಕೆ ಸಂಬಂಧಿಸಿದ ಅನೇಕ ಶಬ್ದಗಳನ್ನು ಕನ್ನಡ, ಮರಾಠಿ ಮತ್ತು ತೆಲುಗು ಭಾಷೆಯಲ್ಲಿ ಇವರು ಬಳಸಿದರು ಎಂಬುದನ್ನು ತಮ್ಮ ಲೇಖನದಲ್ಲಿ ವಿಮರ್ಶಿಸಿದ್ದಾರೆ.[೬೨]

ಬಿ.ಎ. ವಿವೇಕ ರೈ ಅವರು ಸಂಪಾದಿಸಿದ 'ಪ್ರವಾಸಿ ಕಂಡ ವಿಜಯನಗರ' ಎನ್ನುವ ಕೃತಿಯಲ್ಲಿ ಹಂಪಿ ಪ್ರದೇಶಕ್ಕೆ ವಿವಿಧ ಕಾಲಘಟ್ಟಗಳಲ್ಲಿ ಆಗಮಿಸಿದ ೧೨ ವಿದೇಶಿ ಪ್ರವಾಸಿಗರ ಕಥನಗಳನ್ನು ಚಿತ್ರಿಸಲಾಗಿದೆ. ಅದೇ ರೀತಿ ಅನುಬಂಧದಲ್ಲಿ ಶೆಟ್ಟರ್, ವಿ. ಸೀತಾರಾಮಯ್ಯ, ಕುವೆಂಪು ಮತ್ತು ಅಂಬಿಕಾತನಯದತ್ತ ಅವರ ಬರಹಗಳನ್ನು ನೀಡಲಾಗಿದೆ.[೬೩]

ಮೋಹನ್‌ಕೃಷ್ಣ ರೈ ಕೆ. ಅವರ 'ದೇಶಿ ಮತ್ತು ವಿದೇಶಿ ಸಂಕಥನ' ಎಂಬ ಲೇಖನವು ವಿಜಯನಗರ ಚರಿತ್ರೆ ಬರವಣಿಗೆ ಯಾವ ರೀತಿಯಾಗಿ ಚರಿತ್ರೆಕಾರರ ಹಿತಾಸಕ್ತಿಗೆ ವೇದಿಕೆಯಾಯಿತು, ದೇಶಿ ಮತ್ತು ವಿದೇಶಿ ಆಕರಗಳು ಚರಿತ್ರೆ ಅಧ್ಯಯನದ ವಿವಿಧ ಪಂಥಗಳಿಗೆ ಹೇಗೆ ಆಹಾರಗಳಾದವು ಎಂಬ ವಿಶ್ಲೇಷಣೆಯನ್ನು ನಡೆಸುತ್ತದೆ. ವಿಜಯನಗರ ಚರಿತ್ರೆ ವಿಜಯನಗರಕ್ಕಷ್ಟೇ ಸೀಮಿತಗೊಳ್ಳದೇ ಹಲವಾರು ಹಿತಾಸಕ್ತಿಗಳ ಈಡೇರಿಕೆಗೆ ಹೇಗೆ ವೇದಿಕೆಯಾಯಿತು, ಹಿಂದು-ಮುಸ್ಲಿಂ ಭಾವನೆಗಳು, ವಸಾಹತುಶಾಹಿ-ರಾಷ್ಟ್ರೀಯವಾದಿ ಅವಶ್ಯಕತೆಗಳ, ಅಭಿಮಾನ ಮತ್ತು ಹಿರಿಮೆಗಳ ಸಂಕೇತವಾಗಿ ವಿಜಯನಗರ ಚರಿತ್ರೆ ಬಳಕೆಯಾದ ವಿವರಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ.[೬೪]

ವಿರೂಪಾಕ್ಷಿ ಪೂಜಾರಹಳ್ಳಿ ಅವರ 'ಕಮಲಾಪುರದ ದಾದಾಪೀರ ಛತ್ರ ಕುರಿತ ಲೇಖನ' (೧೯೯೭)ವು ಸಾಪ್ತಾಹಿಕ ಪ್ರಭದಲ್ಲಿ ಪ್ರಕಟಗೊಂಡಿದೆ. ಕಮಲಾಪುರದಲ್ಲಿ ಕಂಡುಬರುವ ವಿಜಯನಗರ ಕಾಲಾವಧಿಯ ದಾದಾಪಿರ್ ಛತ್ರವು ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯಲ್ಲಿ ನಿರ್ಮಾಣ ಗೊಂಡಿರುವುದು. ಮುಸ್ಲಿಂ ಸೂಫಿಯೊಬ್ಬನ ವಂಶಸ್ಥರು ಈ ಛತ್ರದ ನಿರ್ವಹಣೆಯನ್ನು ಮಾಡುತ್ತಿದ್ದ ರೆಂಬುದನ್ನು ತಿಳಿಸಿದ್ದಾರೆ.[೬೫]

ವಿರೂಪಾಕ್ಷಿ ಪೂಜಾರಹಳ್ಳಿ ಅವರ 'ಕೃಷ್ಣದೇವರಾಯನ ತೀರ್ಥಯಾತ್ರೆಗಳು', ವಿಜಯನಗರಕಾಲದ ಸಂಸ್ಕೃತಿ' ಎನ್ನುವ ಕೃತಿಗಳು ಪ್ರಮುಖವಾಗಿವೆ. ತೀರ್ಥಯಾತ್ರೆಗಳ ಪರಿಕಲ್ಪನೆಯು ಭಾರತದಂತಹ ಬಹುಸಂಸ್ಕೃತಿಯ ನಾಡಿನಲ್ಲಿ ಹುಟ್ಟಿ ಬೆಳೆದ ಬಗೆಯನ್ನು ತಿಳಿಸಿರುವರು. ಇದರೊಂದಿಗೆ ಕೃಷ್ಣದೇವರಾಯನು ಕೈಗೊಂಡ ತೀರ್ಥಯಾತ್ರೆಗಳ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿದ್ದಾರೆ. ಕೃಷ್ಣದೇವರಾಯನು ವಿಜಯನಗರ ಸಾಮ್ರಾಜ್ಯದ ಸಾಮ್ರಾಟನಾದ ಬಳಿಕ ಇಲ್ಲಿನ ಸಾಂಸ್ಕೃತಿಕ ಚರಿತ್ರೆಯನ್ನು ಪ್ರಾಸಂಗಿಕವಾಗಿ ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ. ವಿಜಯನಗರದ ಅರಸರು ಕೇವಲ ತಮ್ಮ ಸಾಮ್ರಾಜ್ಯದ ವಿಸ್ತರಣೆಗೆ ಹೆಚ್ಚು ಗಮನ ಹರಿಸದೆ, ಇಲ್ಲಿ ನೆಲೆಸಿದ್ದ ಹಲವು ಸಮುದಾಯಗಳ ಸಂಸ್ಕೃತಿಗಳಿಗೂ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರು. ಈ ಸಾಮ್ರಾಜ್ಯದ ಕೃಷಿವ್ಯವಸ್ಥೆ, ಬೇಟೆ, ಅಂದಿನ ವಾಸ್ತುಶೈಲೆಯ ಪ್ರಕಾರಗಳ ವಿವರಗಳನ್ನು ಆಧಾರಗಳ ಸಹಿತವಾಗಿ ವಿಶ್ಲೇಷಣೆಗೆ ಒಳಪಡಿಸಿರುವರು.[೬೬]

ಚಿನ್ನಸ್ವಾಮಿ ಸೋಸಲೆ ಎನ್. ಅವರ 'ಸಾಮ್ರಾಜ್ಯ ಮತ್ತು ಸಂಸ್ಥಾನ(೨೦೦೪) ಕೃತಿಯಲ್ಲಿ, ವಿಜಯನಗರ ಹಾಗೂ ಅಂದಿನ ಸ್ಥಳೀಯ ಅರಸು ಮನೆತನಗಳಿಂದ ಇಕ್ಕೇರಿಯ ನಾಯಕರು, ಮೈಸೂರು ಒಡೆಯ ಸಾಂಸ್ಕೃತಿಕ ಚರಿತ್ರೆಯನ್ನು ಇಲ್ಲಿ ವಿವರಿಸಲಾಗಿದೆ. ಹಾಗೆಯೇ ವಿಜಯನಗರದ ಅವಧಿಯಲ್ಲಿ ಸಾಮಾಜಿಕ ಸ್ಥಿತಿಗತಿಗಳು ಯಾವ ರೀತಿಯಾಗಿದ್ದವು, ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ತಳಸಮುದಾಯಗಳು ನಿರ್ವಹಿಸುತ್ತಿದ್ದ ಪಾತ್ರವನ್ನು ಇಲ್ಲಿ ಸಮಗ್ರವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಸಂಪೂರ್ಣವಾಗಿ ಗೌಣವಾಗಿದ್ದ ಜನಸಾಮಾನ್ಯರ ಚರಿತ್ರೆಯನ್ನು ಬೆಳಕಿಗೆ ತರುವ ಪ್ರಯತ್ನವನ್ನು ಈ ಕೃತಿಯು ಮಾಡಿದೆ. ವಿಜಯನಗರದ ರಾಜಧಾನಿಯಲ್ಲಿ ಅಸ್ಪೃಶ್ಯ ಸಮುದಾಯಗಳು ಎದುರುಸುತ್ತಿದ್ದೆ ಶೋಷನೀಯ ಸ್ಥಿತಿಗತಿಗಳನ್ನ ಆಕರಗಳ ಮೂಲಕ ವಿಸ್ತೃತವಾಗಿ ಚರ್ಚಿಸಿದೆ.[೬೭] ಚಿನ್ನಸ್ವಾಮಿ ಸೋಸಲೆ ಎನ್. ಮತ್ತು ಮಹದೇವ ಸಿ., ಅವರು ಸಂಪಾದಿಸಿರುವ ಹಂಪಿ ಅಂದು-ಇಂದು ಎಂಬ ಕೃತಿಯು ಒಟ್ಟು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲೆರಡು ಅಧ್ಯಾಯಗಳು ಹಂಪಿ ಪ್ರದೇಶವು ಪ್ರಾಚೀನ ಕಾಲದಲ್ಲಿ ಗಳಿಸಿಕೊಂಡಿದ್ದ ಪ್ರಾಮುಖ್ಯ ಹಾಗೂ ಶಾಸನಗಳ ಕುರಿತ ಮಾಹಿತಿಯನ್ನು ಒದಗಿಸುತ್ತದೆ. ನಂತರದ ಅಧ್ಯಾಯಗಳು ಹಂಪಿ ಪ್ರದೇಶವನ್ನು ಬದಲಾದ ಚರಿತ್ರೆ ಅಧ್ಯಯನದ ಶಿಸ್ತಿಗೆ ಒಳಪಡಿಸಿ ಹಲವು ತಳಸ್ಪರ್ಶಿಯ ಅಧ್ಯಯಗಳಿಗೆ ದಾರಿ ಮಾಡಿಕೊಟ್ಟಿದೆ. ಹಂಪಿಯು ಪ್ರಾಚೀನ ಕಾಲದಿಂದ ಹಿಡಿದು ವಿಶ್ವ ಪರಂಪರೆಯ ತಾಣವಾಗಿ ಪರಿವರ್ತಿತವಾಗಿರುವ ಸಂದರ್ಭವನ್ನು ಬಹು ಜಾಗರೂಕತೆಯಿಂದ ಅಧ್ಯಯನ ಮಾಡಲಾಗಿದೆ.[೬೮]

ಸೋಮಶೇಖರ ಎಸ್.ವೈ., ಅವರ ಹಂಪಿ ಬಜಾರುಗಳು(೧೯೯೭), ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ(೨೦೧೨) ಕೃತಿಗಳನ್ನು ರಚಿಸಿದ್ದಾರೆ. ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯವು ವ್ಯಾಪಾರ ಕ್ಷೇತ್ರದಲ್ಲಿ ಅಂತಾರಾಷ್ಟೀಯ ಪ್ರಖ್ಯಾತಿಯನ್ನು ಪಡೆದುಕೊಂಡಿತ್ತು. ಈ ಹಿನ್ನೆಲೆಯಲ್ಲಿ ರಾಜಧಾನಿ ಹಂಪಿ ಪಟ್ಟಣದಲ್ಲಿ ಅನೇಕ ಬಜಾರುಗಳನ್ನು ನಿರ್ಮಿಸಿಕೊಂಡಿತ್ತು. ಒಟ್ಟು ಏಳು ಬಜಾರುಗಳಿದ್ದವು. ಇವು ಅಂದಿನ ಆರ್ಥಿಕತೆಯನ್ನು ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿಯಲು ಸಹಾಯಕವಾಗಿದ್ದವು. ಹಾಗೆಯೇ ಈ ಬಜಾರುಗಳ ಕಾರ್ಯವೈಖರಿಯನ್ನು ಸಮಗ್ರವಾಗಿ ವಿವರಿಸಲಾಗಿದೆ. ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯವು ಸದಾ ವೈರಿಗಳಿಂದ ರಕ್ಷಿಸಿಕೊಳ್ಳಲು ಸದಾ ಸನ್ನದ್ದವಾಗಿದ್ದ ಸೈನಿಕ ವ್ಯವಸ್ಥೆಯನ್ನು ಹೊಂದಿರಬೇಕಾಗಿತ್ತು. ಏಕೆಂದರೆ ಮಧ್ಯಕಾಲಿನ ರಾಜಕೀಯ ವ್ಯವಸ್ಥೆಯು ಅರಾಜಕತೆಗಳಿಂದ ಕೂಡಿದ್ದು, ಪ್ರಭುತ್ವದ ಅರಸರಲ್ಲಿದ್ದ ಸ್ವಾರ್ಥ ಸಾಧನೆಗಳು ಮೂಲಕಾರಣವಾಗಿದ್ದವು. ಹಾಗಾಗಿ ವಿಜಯನಗರ ಕಾಲದ ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಅಂದಿನ ಸೈನಿಕ ವ್ಯವ್ಯಸ್ಥೆಯನ್ನು ಹಂತಹಂತವಾಗಿ ಈ ಕೃತಿಯಲ್ಲಿ ಚರ್ಚಿಸಲಾಗಿದೆ. ವಿಜಯನಗರ ಕಾಲದಲ್ಲಿ ಕಂಡುಬರುತ್ತಿದ್ದ ಸೈನ್ಯದ ವಿವಿಧ ಅಂಗಗಳು, ಅದರ ಪರಿಕರಗಳು, ಯುದ್ಧದ ನೀತಿಯಿಂದ ಉಂಟಾದ ಬದಲಾವಣೆಯಿಂದಾಗಿ ಹೊಸ ಮುಸ್ಲಿಂ ಸೈನಿಕರನ್ನು ನೇಮಿಸಿಕೊಂಡ ವಿವರಗಳನ್ನು ಈ ಕೃತಿಯಲ್ಲಿ ಚರ್ಚಿಸಿದ್ದಾರೆ.[೬೯]

ಲಕ್ಷ್ಮಣ್ ತೆಲಗಾವಿ ಅವರು ಸಂಪಾದಿಸಿರುವ 'ಜೀರ್ಣವಿಜಯನಗರಾದರ್ಶಂ' ಕೃತಿಯು ಹಂಪಿ ಕುರಿತ ಪ್ರಥಮ ಪ್ರವಾಸಿ ಕೈಪಿಡಿಯಾಗಿದ್ದು ಇದರಲ್ಲಿ ಲೇಖಕರಾದ ಕೆ. ರಾಮಸ್ವಾಮಯ್ಯಂಗಾರ್ ಅವರ ಸ್ವಾನುಭವಗಳನ್ನ ದಾಖಲಿಸಿದ್ದಾರೆ. ರಮಸ್ವಾಮಯ್ಯಂಗರ್ ಈ ಕೈಪಿಡಿಯನ್ನು ಪೂರ್ವಭಾಗ ಹಾಗೂ ಉತ್ತರಭಾಗಗಳಾಗಿ ವಿಂಗಡಿಸಿದ್ದಾರೆ. ವಿಜಯನಗರದ ಚರಿತ್ರೆಯನ್ನು ಆರಂಭದಿಂದ ಅಂತ್ಯದವರೆಗಿನ ಚರಿತ್ರೆಯನ್ನು ಸ್ವವಿವರವಾಗಿ ನಿರೂಪಿಸಿದ್ದಾರೆ. ಪೂರ್ವಭಾಗದಲ್ಲಿ ಕೇವಲ ರಾಜಕೀಯ ಘಟನೆಗಳನ್ನು ಅಷ್ಟೇ ಅಲ್ಲದೆ ಸಾಹಿತ್ಯಿಕ, ಸಾಂಸ್ಕೃತಿಕ ಸಾಮಾಜಿಕ ಸಂದರ್ಭಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಉತ್ತರ ಭಾಗ ಅಥವಾ ಶಿಥಿಲ(ಜೀರ್ಣ) ವಿಜಯನಗದ ಸ್ಮಾರಕಗಳ ವಿವರಣೆಯನ್ನ ನೀಡಿದ್ದಾರೆ.[೭೦]

ಸಿ.ಟಿ.ಎಂ. ಕೊಟ್ರಯ್ಯ(ಮೂಲ), ಎಂ. ಧ್ರುವನಾರಾಯಣ ಅನುವಾದಿಸಿರುವ 'ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ' ಕೃತಿಯು ಪ್ರಾಚೀನ ಭಾರತದ ನೀರಾವರಿಯ ವಿವಿಧ ಹಂತಗಳನ್ನು ಪರಿಚಯಿಸುವುದರ ಜೊತೆಗೆ ದಕ್ಷಿಣ ಭಾರತದ ನೀರಾವರಿ ವ್ಯವಸ್ಥೆ ಬಗೆಗೆ ಮಾಹಿತಿಯನ್ನು ನೀಡಿದ್ದಾರೆ. ವಿಜಯನಗರದ ಅವಧಿಯಲ್ಲಿ ಅಂದಿನ ಅರಸರು ಆಯಾ ಸಂದರ್ಭಗಳಿಗೆ ಅನುಸಾರವಾಗಿ ಜನಸಾಮಾನ್ಯನ ಅಭಿವೃದ್ಧಿಗಾಗಿ ಕೈಗೊಂಡ ನೀರಾವರಿ ವ್ಯವಸ್ಥೆಗಳ ಮಾಹಿತಿಯನ್ನು ಇವರು ಒದಗಿಸಿದ್ದಾರೆ. ಹಾಗೆಯೇ ವಿಜಯನಗರ ಕಾಲದಲ್ಲಿದ್ದ ಕಾಲುವೆಗಳು, ಬಾವಿಗಳು, ಕೆರೆಕಟ್ಟೆಗಳನ್ನು ನಿರ್ಮಿಸಿದ ಬಗೆ, ಅವುಗಳಿಗೆ ಬಳಸಿರುವ ತಂತ್ರಜ್ಞಾನದ ಕುರಿತು ಚರ್ಚಿಸಿದ್ದಾರೆ.[೭೧]

ಪುರುಷೋತ್ತಮ ಬಿಳಿಮಲೆ ಹಾಗೂ ಚಲುವರಾಜು ಅವರ ಪ್ರಕಟಿಸಿದ 'ಹಂಪಿ ಜಾನಪದ' (೧೯೯೬) ಕೃತಿಯಲ್ಲಿ ಹಂಪಿ ಪರಿಸರದಲ್ಲಿ ಮುಸ್ಲಿಂ ಆಚರಣೆಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಚಲುವರಾಜು, 'ಹಂಪಿಯ ಸ್ಮಾರಕಗಳಲ್ಲಿ ಜನಪದೀಯ ಅಂಶಗಳು'(೨೦೦೨) ಕೃತಿಯಲ್ಲಿ ಹಂಪಿಯಲ್ಲಿ ಕಂಡುಬರುವ ಮುಸ್ಲಿಂ ಸ್ಮಾರಕಗಳನ್ನು ಆಯ್ದುಕೊಂಡು ಆ ಮೂಲಕ ಅವರ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಮೊಹರಂ ಆಚರಣೆ, ದರ್ಗಾಗಳು, ಬೆಟ್ಟದ ಮೇಲಿನ ಪಾದದ ಗುರುತಿನ ಐತಿಹ್ಯ ಹೀಗೆ ಮುಸ್ಲಿಂ ಜಾನಪದ ಸಂಬಂಧಿಸಿದ ಅಂಶಗಳನ್ನು ದಾಖಲಿಸಿದ್ದಾರೆ.[೭೨]

ಕೊಟ್ರೇಶ್ ಎಂ. ಅವರ 'ಬಳ್ಳಾರಿ ಜಿಲ್ಲೆಯ ಕೋಟೆಗಳು'(೨೦೦೧) ಕೃತಿಯು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ಕೋಟೆಗಳ ರಚನೆಯಲ್ಲಿ ಮುಸ್ಲಿಂ ವಾಸ್ತುಶೈಲಿಯು ಹೇಗೆ ಪ್ರಭಾವ ಬೀರಿತ್ತೆಂಬುದನ್ನು ತಿಳಿಸಿಕೊಟ್ಟಿದ್ದಾರೆ. ಮಹದೇವ ಸಿ. ಅವರ 'ವಿಜಯನಗರದ ಗಾರೆಶಿಲ್ಪ'(೨೦೦೦), 'ಕುಮ್ಮಟದುರ್ಗದ ಅರಸರು'(೨೦೦೯), ಮಹದೇವ ಸಿ., ಸುಬ್ಬಣ್ಣ ರೈ, ಮಾಧವ ಪೆರಾಜೆ ಸಂಪಾದಿತ 'ಹೊಸಪೇಟೆ ತಾಲೂಕು ದರ್ಶನ'(೨೦೦೨), ಕೃತಿಗಳು ವಿಜಯನಗರದ ಇತ್ತೀಚಿನ ಸಂಶೋಧನೆ ಬಗ್ಗೆ ತಿಳಿಸುತ್ತವೆ. ವಿಜಯನಗರದ ವಾಸ್ತುಶೈಲಿಯಲ್ಲಿ ಗಾರೆಶಿಲ್ಪಗಳ ರಚನೆಯ ಕುರಿತು ಮಾಹಿತಿ ನೀಡಿದ್ದಾರೆ. ವಿಜಯನಗರ ಕಾಲಕ್ಕೆ ಸಂಬಂಧಿಸಿದ ಮುಸ್ಲಿಂ ಸ್ಮಾರಕಗಳ ಕುರಿತು ವಿಶ್ಲೇಷಣೆ ಮಾಡಲಾಗಿದೆ.[೭೩]

ಶಿವಣ್ಣ ಕೆ. ಸಂಪಾದಿತ ಕೃತಿ ಕರ್ನಾಟಕ ಚರಿತ್ರೆ ಸಂಪುಟ ೩ ಕೃತಿಯು ಮಧ್ಯಕಾಲೀನ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರ ಸಾಮ್ರಾಜ್ಯ ಹೇಗೆ ಉದಯವಾಯಿತು ಇದರ ಜೊತೆಗೆ ಇಲ್ಲಿನ ರಾಜ್ಯಾಡಳಿತ ವ್ಯಸ್ಥೆಯಲ್ಲಿ ಅಮರನಾಯಕರು ನಿರ್ವಹಿಸುತ್ತಿದ್ದ ಪಾತ್ರವನ್ನು ವಿವರಿಸಿದ್ದಾರೆ. ವಿಜಯನಗರದ ಅಂದಿನ ಕೃಷಿ ವವ್ಯಸ್ಥೆ, ವ್ಯಾಪಾರ ವಾಣಿಜ್ಯ ಧಾರ್ಮಿಕ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.[೪೪]

ಕೊನೆಟಿಪ್ಪಣಿಗಳು

೧. ದೀಕ್ಷಿತ್ ಜಿ.ಎಸ್., ಸಂಗಮರ ಕಾಲದ ವಿಜಯನಗರ, ಬಿ.ಎಂ.ಶ್ರೀ., ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ೧೯೯೧. ಪು. ೬.

೨. ಷೇಕ್ ಅಲಿ ಬಿ.(ಪ್ರಸಂ.), ಶಿವಣ್ಣ ಕೆ.ಎಸ್.(ಸಂ.), 'ಕರ್ನಾಟಕ ಚರಿತ್ರೆ ಸಂ.-೩', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೭. ಪು. ೨೧.

೩. ಮಹದೇವ. ಸಿ., ಕುಮ್ಮಟದುರ್ಗದ ಅರಸರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯. ಪು. ೧.

೪. ಅದೇ, ಪು. ೧೧-೧೨.

೫. ಅಬ್ದುಲ್ ಮನ್ನಾನ್ ಬಿ., ವಿಜಯನಗರ ಪಟ್ಟಣದಲ್ಲಿ ಮುಸ್ಲಿಂ ಧರ್ಮ, ವಿಜಯನಗರ ಅಧ್ಯಯನ, ಸಂ.೯, ೨೦೦೪, ಪು. ೭೮.

೬. ಅದೇ, ಪು. ೭೮.

೭. ದೀಕ್ಷಿತ್ ಜಿ.ಎಸ್., ಪೂರ್ವೋಕ್ತ, ಪು. ೧೦೫.

೮. ಷೇಕ್ ಅಲಿ.ಬಿ.(ಪ್ರಸಂ.), ಶಿವಣ್ಣ ಕೆ.ಎಸ್.(ಸಂ.), ಪೂರ್ವೋಕ್ತ, ಪು. ೧೯-೨೦.

೯. ಎಫಿಗ್ರಾಫಿಯ ಕರ್ನಾಟಿಕ, ಇ.ಸಿ. ೭., ಎಸ್.ಕೆ. ೨೮೧.

೧೦. ಸಹನ. ಆರ್.ಆರ್., ವಿಜಯನಗರ ಸಾಮ್ರಾಜ್ಯದ ಅವನತಿ: ಒಂದು ಅಧ್ಯಯನ(ಕ್ರಿ.ಶ. ೧೩೩೬-೧೬೪೬), ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೫, ಪು. ೭೪.

೧೧. ರವೀಂದ್ರನಾಥ ಕೆ. (ಲೇ.), ಯೋಗೀಶ್ವರಪ್ಪ ಎನ್.(ಸಂ.), 'ಕನ್ನಡ ಕಾವ್ಯಗಳಲ್ಲಿ ಚಾರಿತ್ರಿಕ ಅಂಶಗಳು', ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೬, ಪು. ೧೨೨-೧೨೩.

೧೨. ಅದೇ, ಪು. ೧೨೩-೧೨೩.

೧೩. ಕೋಡದ ಎಸ್.ಬಿ., ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ–ಮುಸ್ಲಿಂ ಬಾಂಧವ್ಯ. ೧೯೯೬, ಪು. ೬.

೧೪. ಅದೇ, ಪು. ೬.

೧೫. ವೆಂಕಟರಮಣಯ್ಯ ಎನ್., ವಿಜಯನಗರ ಚರಿತ್ರೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೦, ಪು. ೯೫.

೧೬. ರಾಮ್ ಗೋಪಾಲ್, ಹಿಂದೂ ಕಲ್ಚರ್ ಡ್ಯೂರಿಂಗ್ ಆ್ಯಂಡ್ ಆಫ್ಟರ್ ಮುಸ್ಲಿಂ ರೂಲ್, ನ್ಯೂ ದೆಹಲಿ, ೧೯೯೪, ಪು. ೪೨.

೧೭. ರಿಚರ್ಡ್ ಎಂ. ಈಟನ್, ಎ ಸೋಷಿಯಲ್ ಹಿಸ್ಟರಿ ಆಫ್ ದಿ ದಖ್ಖನ್–೧೩೦೦–೧೭೬೧ ಸಂಪುಟ–೧, ೨೦೦೫, ಪು. ೫೦.

೧೮. ಕೃಷ್ಣ ಕೊಲ್ಹಾರಕುಲಕರ್ಣಿ, ಬುಸಾತಿನ ಸಲಾತೀನ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯, ಪು. ೭೮.

೧೯. ವೆಂಕಟರಮಣಯ್ಯ ಎನ್., ಪೂರ್ವೋಕ್ತ, ಪು. ೧೯೯೫–೯೭.

೨೦. ಮೋಹನ್‌ಕೃಷ್ಣ ರೈ ಕೆ., ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೯, ಪು. ೩೩.

೨೧. ವೆಂಕಟರಮಣಯ್ಯ ಎನ್.(ಮೂಲ), ಗುರುಮೂರ್ತಿ ಪೆಂಡಕೂರ್(ಅನು), ವಿಜಯನಗರ ಚರಿತ್ರೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೦, ಪು.೯೪–೯೫.

೨೨. ಅದೇ, ಪು. ೯೫–೯೬.

೨೩. ದೀಕ್ಷಿತ್ ಜಿ.ಎನ್., ರಾಮಸ್ವಾಮಿ, ಭಾರ್ಗವಿ ಶಿವಯ್ಯ, ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆಗಳು, ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು, ೧೯೯೭, ಪು. ೨೫–೨೬.

೨೪. ಪಾಟೀಲ ಎಂ.ಬಿ., ಗುಲಬರ್ಗಾ ಜಿಲ್ಲೆ, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ೧೯೯೭, ಪು. ೫೮–೫೯.

೨೫. ಮದ್ವಾಚಾರ್, ಮೊಗಲರ ಇಂಡಿಯ, ಪಿ.ಎ.ಎನ್ ಪಬ್ಲಿಕೇಶನ್, ಬೆಂಗಳೂರು, ೧೯೮೧, ಪು. ೩೨–೩೩.

೨೬. ಷೇಕ್ ಅಲಿ(ಪ್ರಸಂ.), ಶಿವಣ್ಣ ಕೆ.ಎಸ್.(ಸಂ.), ಪೂರ್ವೋಕ್ತ, ಪು. ೨೪೨.

೨೭. ಶೈಲೇಂದ್ರನಾಥ್ ಸೆನ್, ಇಂಡಿಯಾ ಹಿಸ್ಟರಿ ಆ್ಯಂಡ್ ಕಲ್ಚರ್, ಎಂ.ಸಿ. ಮಿಲನ್ ಇಂಡಿಯಾ, ನ್ಯೂಡೆಲ್ಲಿ, ೨೦೦೭, ಪು. ೧೩೯

೨೮. ವಿಪುಲಸಿಂಗ್, ಗೀತಾ ಷಣ್ಮುಗವೆಲ್ ಆ್ಯಂಡ್ ಜಾಸ್ಮಿನ್ ಧಿಲೋನಿ, ಅವರ್ ಸ್ಟೋರಿ ಸೋ

ಫಾರ್ ಡೋರ್ಲಿಂಗ್ ಕಿನೆದ್ರಿಸಲೈ ಇಂಡಿಯಾ ಪ್ರೈ.ಲಿ., ನ್ಯೂಡೆಲಿ, ೨೦೦೯, ಪು. ೩೨–೩೪.

೨೯. ನಾಮದೇವ ಶ್ರೀ ಜಾಧವ್, ಹಿಸ್ಟರಿ ಆ್ಯಂಡ್ ಕಲ್ಚರ್ ಆಫ್ ಬೀದರ್ ೧೪೦೦ ಟು ೧೯೮೪ ಎ ಸ್ಟಡಿ, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಗುಲಬರ್ಗಾ ಯೂನಿವರ್ಸಿಟಿ, ಗುಲಬರ್ಗಾ, ಪು.೪೯–೫೬.

೩೦. ರಾಮನಂದ ಚಟರ್ಜಿ, ದ ಮಾರ್ಡನ್ ರಿವ್ಯೂ(ಮ್ಯಾಗಝಿನ್), ಕಲ್ಕತಾ, ಪು. ೫೩೦.

೩೧. ಮನ್ಸಲ್ ಲಾಂಗ್ ವರ್ಥ್ ಡೆಮ್ಸ್, ದ ಬುಕ್ ಆಫ್ ದೌರೆಟ್ ಬಾರ್ಬೋಸ್, ಏಷಿಯನ್ ಎಜುಕೇಷನಲ್ ಸರ್ವಿಸಸ್, ನ್ಯೂಡೆಲ್ಲಿ, ೧೯೮೯, ಪು. ೧೭೨–೧೭೬.

೩೨. ಕಿಶೋರಿ ಶರಣ್ ಲಾಲ್, ಸ್ಟಡೀಸ್ ಇನ್ ಮಿಡಿವೆಲ್ ಇಂಡಿಯನ್ ಹಿಸ್ಟರಿ, ರಂಜಿತ್ ಪ್ರಿಂಟರ್ಸ್, ನ್ಯೂಡೆಲ್ಲಿ, ಪು. ೧೮೭–೧೮೮.

೨೩. ರಘುನಾಥ ರೈ., ಥೀಮ್ಸ್ ಇನ್ ಇಂಡಿಯನ್ ಹಿಸ್ಟರಿ, ವಿ.ಕೆ. ಇಂಡಿಯನ್ ಎಂಟರ್‌ಪ್ರೈಸಸ್, ನ್ಯೂಡೆಲ್ಲಿ, ೨೦೦೭, ಪು. ೧೫೪.

೩೪. ಗಂಗಮ್ಮ ಎಮ್., ದಖ್ಖನ್ ಬಹಮನಿ ರಾಜ್ಯ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೬, ಪು. ೧೫೪–೧೫೬.

೩೫. ಕೋಡದ ಎಸ್.ಬಿ., ವಿಜಯನಗರದ ಉಚ್ಛ್ರಾಯ ಕಾಲ(೧೫೪೨–೬೪), ಪ್ರಭಾ ಪಬ್ಲಿಕೇಷನ್ಸ್, ಧಾರವಾಡ, ೧೯೬೬ ಪು. ೬–೭.

೩೬. ಷೇಕ್ ಅಲಿ(ಪ್ರ.ಸಂ.), ಶಿವಣ್ಣ ಕೆ.ಎಸ್.(ಸಂ.), ಪೂರ್ವೋಕ್ತ, ಪು.೫೧.

೩೭. ಅದೇ, ಪು.೫೨.

೩೮. ಅದೇ, ಪು.೫೫.

೩೯. ತ್ರಿವಿಕ್ರಮ, ವಿಜಯನಗರದ ಅರವೀಡು ಮನೆತನ, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೭೨, ಪು. ೨೧–೨೨.

೪೦. ಅದೇ, ಪು. ೨೩–೨೫.

೪೧. ಅದೇ, ಪು. ೨೫.

೪೨. ಅದೇ, ಪು. ೨೭.

೪೩. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪುಟ–೨, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೬, ಪು. ೬೮–೬೯.

೪೪. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪುಟ–೨, ೨೦೦೬, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ಪು. ೧೪೮.

೪೫. ಅದೇ, ಪು. ೧೫೬.

೪೬. ಅದೇ, ಪು. ೩೦೭.

೪೭. ಅದೇ, ಪು. ೨೫೬-೨೫೭.

೪೮. ಅದೇ, ಪು. ೨೫೮-೨೫೯.

೪೯. ಮಾಯನ್ನುಕುಟ್ಟಿ ಓ., ಅರೇಬಿಯನ್ ಅಕೌಂಟ್ಸ್ ಫಾರ್ ದಿ ಕೇರಳ ಹಿಸ್ಟರಿ, ಸೌತ್ ಇಂಡಿಯಾ ಹಿಸ್ಟರಿ ಕಾಂಗ್ರೆಸ್, ೨೦೦೬, ೫೯.

೫೦. ವಿಜಯ್ ಪೂಣಚ್ಚ ತಂಬಂಡ(ಸಂ), ಸುಬ್ಬರಾಯಲು, ರೀಸೆಂಟ್ ಡೆವಲಪ್ಮೆಂಟ್ ಇನ್ ದಿ ಹಿಸ್ಟೋರಿಯೋಗ್ರಾಫಿ ಆಫ್ ದಿ ವಿಜಯನಗರ ಸ್ಟೇಟ್, ಜರ್ನಲ್ ಆಫ್ ಕರ್ನಾಟಕ ಸ್ಟಡೀಸ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪು. ೫೯೮.

೫೧. ಒಕ್ಕುಂದ ಎಂ.ಡಿ., ಭಾರತ: ಧಾರ್ಮಿಕ ಹಿಂಸೆ ಹಾಗೂ ಸೌಹಾರ್ದತೆ, ಲಡಾಯಿ ಪ್ರಕಾಶನ, ಧಾರವಾಡ, ೨೦೧೭, ಪು. ೪೪.

೫೨. ಸಿವೆಲ್ ರಾಬರ್ಟ್(ಮೂಲ), ಸದಾನಂದ ಕನವಳ್ಳಿ(ಅನು), ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨. ಪು. ೨೨೩.

೫೩. ಬಾರ್ಕೂರು ಉದಯ, ವಾಸ್ತವದ ಒಡಕುಗಳು ಇತಿಹಾಸದ ತೊಡಕುಗಳು, ಚಿಂತನ ಪುಸ್ತಕ, ಬೆಂಗಳೂರು, ೨೦೧೨, ಪು. ೧೭.

೫೪. ಅದೇ, ಪು. ೧೭–೧೮.

೫೫. ವಿಜಯ್ ಪೂಣಚ್ಚ ತಂಬಂಡ(ಸಂ), ಜರ್ನಲ್ ಆಫ್ ಕರ್ನಾಟಕ ಸ್ಟಡೀಸ್, ವ್ಯಾಲ್ಯುಂ–೫–೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪು. ೮೩–೮೭.

೫೬. ಮೋಹನ್‌ಕೃಷ್ಣ ರೈ ಕೆ., ಪೂರ್ವೋಕ್ತ, ಪು. ೩೬–೪೬

೫೭. ಅದೇ, ಪು. ೪೮.

೫೮. ರಾಜಾರಾಮ ಹೆಗಡೆ, ವಿಜಯನಗರ ಪತನದ ಕಥನಗಳು, ಕನ್ನಡ ನಾಡು–ನುಡಿ ಚಿಂತನೆ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ೨೦೧೧, ಪು. ೪೯೮.

೫೯. ಅದೇ, ಪು. ೪೯೮.

೬೦. ವಿಜಯ್ ಪೂಣಚ್ಚ ತಂಬಂಡ, ಪೂರ್ವೋಕ್ತ, ಪು. ೮೩–೧೦೦.

೬೧. ರಾಜಾರಾಮ ಹೆಗಡೆ, ವಿಜಯನಗರ ಪತನದ ಕಥನಗಳು, ಕನ್ನಡ ನಾಡು–ನುಡಿ ಚಿಂತನೆ ಕನ್ನಡ ಸಾಹಿತ್ಯ ಸಮ್ಮೇಳನ, ಗಂಗಾವತಿ, ೨೦೧೧, ಪು. ೪೯೮.

೬೨. ಬಾರ್ಕೂರು ಉದಯ, ವಾಸ್ತವದ ಒಡಕುಗಳು ಇತಿಹಾಸದ ತೊಡಕುಗಳು, ಚಿಂತನ ಪುಸ್ತಕ, ಬೆಂಗಳೂರು, ೨೦೧೨, ಪು. ೧೭.

೬೩. ವಿವೇಕ ರೈ ಬಿ.ವಿ., ಪ್ರವಾಸಿ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು. ೬೪

೬೪. ಮೋಹನ್‌ಕೃಷ್ಣ ರೈ ಕೆ., ಪೂರ್ವೋಕ್ತ, ಪು. ೩೬–೪೬

೬೫. ವಿರೂಪಾಕ್ಷಿ ಪೂಜಾರಹಳ್ಳಿ, ದಾದಾಪೀರ ಛತ್ರ (ಲೇಖನ) ಕನ್ನಡಪ್ರಭ ಪತ್ರಿಕೆ, ಸಾಪ್ತಾಹಿಕ, ೧೯೯೭, ಪುರವಣಿ–೪

೬೬. ವಿರೂಪಾಕ್ಷಿ ಪೂಜಾರಹಳ್ಳಿ, ಶ್ರೀಕೃಷ್ಣದೇವರಾಯನ ತೀರ್ಥಯಾತ್ರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫, ಪು.

೬೭. ಚಿನ್ನಸ್ವಾಮಿ ಸೋಸಲೆ ಎನ್., ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು. ೫೮

೬೮. ಮಹದೇವ ಸಿ., ಚಿನ್ನಸ್ವಾಮಿ ಸೋಸಲೆ ಎನ್., (ಸಂ), ಹಂಪಿ ಅಂದು–ಇಂದು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೧೩

೬೯. ಸೋಮಶೇಖರ ವೈ.ಎಸ್., ಹಂಪಿ ಬಜಾರಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು. ೫೮

೭೦. ಲಕ್ಷ್ಮಣ್ ತೆಲಗಾವಿ(ಸಂ), ಕೆ. ರಾಮಸ್ವಾಮಯ್ಯಂಗಾರ್, ಜೀರ್ಣವಿಜಯನಗರಾದರ್ಶಂ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫, ಪು.೫

೭೧. ಕೊಟ್ರೇಶ್ ಸಿ.ಟಿ.ಎಂ.(ಮೂಲ), ಧ್ರುವನಾರಾಯಣ ಎಂ.(ಅನು), ವಿಜಯನಗರ ಕಾಲದ ನೀರಾವರಿ ವ್ಯವಸ್ಥೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೫೮

೭೨. ಪುರುಷೋತ್ತಮ ಬಿಳಿಮಲೆ, ಚಲುವರಾಜು, ಹಂಪಿ ಜಾನಪದ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬, ಪು. ೪೫

೭೩. ಕೊಟ್ರೇಶ್ ಎಂ., ಬಳ್ಳಾರಿ ಜಿಲ್ಲೆಯ ಕೋಟೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧, ಪು. ೫

೭೪. ಷೇಕ್ ಅಲಿ(ಪ್ರಸಂ.), ಶಿವಣ್ಣ ಕೆ.ಎಸ್.(ಸಂ.), ಪೂರ್ವೋಕ್ತ, ಪು. ೫೧.

ಅಧ್ಯಾಯ ನಾಲ್ಕು

ಮುಸ್ಲಿಂ ಸಮುದಾಯಗಳು ಹಾಗೂ ವಸತಿ ನೆಲೆಗಳು

೪.೧ ಮುಸ್ಲಿಂ ಸಮುದಾಯಗಳು

೪.೧.೧. ದಖ್ಖನಿ ಮುಸ್ಲಿಂ ಸಮುದಾಯಗಳು

೪.೧.೨. ಕರಾವಳಿ ಪ್ರದೇಶದ ಮುಸ್ಲಿಂ ಸಮುದಾಯಗಳು

೪.೨ ಮುಸ್ಲಿಂ ವಸತಿ ನೆಲೆಗಳು

೪.೨.೧. ತಮಿಳು ಪ್ರದೇಶ

೪.೨.೨. ಕನ್ನಡ ಪ್ರದೇಶ

೪.೨.೩. ಮಲಯಾಳಂ ಪ್ರದೇಶ

೪.೨.೪. ಆಂಧ್ರ ಪ್ರದೇಶ

ಅಧ್ಯಾಯ ನಾಲ್ಕು

ಮುಸ್ಲಿಂ ಸಮುದಾಯಗಳು ಹಾಗೂ ವಸತಿ ನೆಲೆಗಳು

೪.೧. ಮುಸ್ಲಿಂ ಸಮುದಾಯಗಳು

ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಾದ್ಯಂತ ತನ್ನ ಗಡಿಯನ್ನು ವಿಸ್ತರಿಸಿಕೊಂಡಿತ್ತು. ಇಲ್ಲಿ ವಿವಿಧ ಧರ್ಮಕ್ಕೆ ಸಂಬಂಧಿಸಿದ ಹಲವಾರು ಸಮುದಾಯಗಳು ನೆಲೆಸಿದ್ದವು. ಸಬಾಲ್ಟ್ರನ್ ನೆಲೆಯಲ್ಲಿ ಈ ಸಮುದಾಯಗಳ ಅಧ್ಯಯನ ಕೈಗೊಂಡಾಗ, ಅಂದಿನ ಸಂದರ್ಭದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಹಲವಾರು ಸಮುದಾಯಗಳ ಪಾತ್ರವನ್ನು ಈ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಗುರುತಿಸ ಬಹುದಾಗಿದೆ. ಅಂತಹ ಸಮುದಾಯಗಳಲ್ಲಿ ಮುಸ್ಲಿಂ ಸಮುದಾಯಗಳ ಅಧ್ಯಯನವು ಒಂದಾಗಿದೆ. ಈ ನೆಲೆಯಲ್ಲಿ ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ವಿಶ್ಲೇಷಿಸಿದಾಗ ವಿಜಯನಗರ ಚರಿತ್ರೆ ರಚನೆಯಲ್ಲಿ ಇವರು ಸಹ ತಮ್ಮದೇ ಆದ ಪಾತ್ರವನ್ನು ವಹಿಸಿರುವುದು ಕಂಡುಬರುತ್ತದೆ. ಮಧ್ಯಕಾಲೀನ ಭಾರತವು ಮುಸ್ಲಿಂ ಪ್ರಭುತ್ವಗಳ ಆಳ್ವಿಕೆಗೆ ಒಳಪಟ್ಟಿತ್ತು. ಉತ್ತರದಲ್ಲಿ ಮುಸ್ಲಿಂ ಪ್ರಭುತ್ವದ ಸ್ಥಾಪನೆಯಿಂದಾಗಿ ದಕ್ಷಿಣದಲ್ಲಿ ಅದರ ವಿಸ್ತಾರವು ಹಂತ ಹಂತವಾಗಿ ಕಂಡುಬಂದಿತು. ಈ ಅವಧಿಯಲ್ಲಿ ದಕ್ಷಿಣ ಭಾರತದಲ್ಲಿನ ಮುಸ್ಲಿಂ ಸಮುದಾಯಗಳು ರಾಜಕೀಯ, ಆರ್ಥಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದವು. ಹಾಗಾಗಿ ಮುಸ್ಲಿಮರು ರಾಜಕೀಯ, ಆರ್ಥಿಕ ಹಾಗೂ ಧಾರ್ಮಿಕ ಚಟುವಟಿಕೆ ಗಳಿಂದಾಗಿ ಉತ್ತರ ಭಾರತ ಹಾಗೂ ದಕ್ಷಿಣ ಭಾರತದಾದ್ಯಂತ ವಿಸ್ತರಿಸುತ್ತಾ ಹೋದರು. ಇವರು ವಿವಿಧ ವೃತ್ತಿಗಳ ಹಿನ್ನೆಲೆಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡರು. ಇವುಗಳ ಆಧಾರದ ಮೇಲೆ ಮುಸ್ಲಿಂ ಸಮುದಾಯಗಳನ್ನು ಮೂರು ಕಾಲಘಟ್ಟದಲ್ಲಿ ವಿಂಗಡಿಸಬಹುದಾಗಿದೆ. ಒಂದು; ಕ್ರಿ.ಶ. ಆರನೇ ಶತಮಾನದಿಂದಲೇ ಮುಸ್ಲಿಂ ಸಮುದಾಯಗಳು ಭಾರತದಲ್ಲಿ ನೆಲೆ ನಿಂತಿದ್ದು, ಅವರು ಅಂದಿನ ಸಾಮಾಜಿಕ ವ್ಯವಸ್ಥೆಯ ವಿವಿಧ ವೃತ್ತಿಯಲ್ಲಿ ತೊಡಗಿಕೊಂಡು ಪ್ರಾದೇಶಿಕವಾರು ಸ್ಥಳೀಯರಾಗಿ ತಮ್ಮ ನೆಲೆಗಳನ್ನು ವಿಸ್ತರಿಸುತ್ತಾ ಹೋದರು. ದಕ್ಷಿಣ ಭಾರತದ ಆರ್ಥಿಕ ಚಟುವಟಿಕೆ ಗಳಲ್ಲಿ ಅಥವಾ ವ್ಯಾಪಾರ ವಹಿವಾಟುಗಳಲ್ಲಿ ಪ್ರಮುಖವಾಗಿ ಕಂಡುಬರುವ ಹಲವು ಮುಸ್ಲಿಂ ಸಮುದಾಯಗಳು ಇಸ್ಲಾಂ ಸ್ಥಾಪನೆಯ ಪೂರ್ವದಲ್ಲೇ ಇಲ್ಲಿ ನೆಲೆ ನಿಂತಿದ್ದವು. ಎರಡನೆಯದು ಕ್ರಿ.ಶ. ೧೨ನೇ ಶತಮಾನದ ಅವಧಿಯ ಉತ್ತರ ಭಾರತದಲ್ಲಿ ರಾಜಕೀಯ ಪ್ರಭುತ್ವ ಸ್ಥಾಪನೆಯಾದ ನಂತರ ಇವರಲ್ಲಿ ಕೆಲವರು ದಕ್ಷಿಣ ಭಾರತ ಪ್ರದೇಶಗಳಿಗೂ ವಿಸ್ತರಣೆ ಹೊಂದಿದರು. ಹೀಗೆ ಉತ್ತರದಲ್ಲಿ

ಕಂಡುಬರುವ ಮುಸ್ಲಿಂ ಸಮುದಾಯಗಳು ದಕ್ಷಿಣ ಭಾರತದವರೆಗೂ ಬಂದು ನೆಲೆ ನಿಂತವು. ಮೂರನೇ ಕಾಲಘಟ್ಟ ಕ್ರಿ.ಶ. ೧೬ನೇ ಶತಮಾನದ ವೇಳೆಗೆ ಭಾರತದಲ್ಲಿ ಪೋರ್ಚುಗೀಸರ ಪ್ರವೇಶದಿಂದಾಗಿ ಇಲ್ಲಿನ ರಾಜಕೀಯ ಆರ್ಥಿಕ, ಸಾಮಾಜಿಕ ವಲಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತಿದ್ದ ಮುಸ್ಲಿಂ ಸಮುದಾಯಗಳ ಜನಜೀವನದ ಮೇಲೆ ಅನೇಕ ಪರಿಣಾಮ ಬೀರುತ್ತಿದ್ದವು. ಇದರಿಂದ ಹಲವು ಸಮುದಾಯಗಳು ತಮ್ಮ ವೃತ್ತಿಯನ್ನು ಬದಲಾಯಿಸಿಕೊಂಡು ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆ ನಿಂತವು. ಹೀಗೆ ಸಮುದಾಯಗಳು ಪ್ರದೇಶದಿಂದ ಪ್ರದೇಶಕ್ಕೆ ಸ್ಥಿತ್ಯಂತರಗೊಳ್ಳುತ್ತಾ ಸಾಗಿದವು. ಇದರಿಂದಾಗಿಯೂ ಹಲವು ಸಮುದಾಯಗಳು ದಕ್ಷಿಣ ಭಾರತದ ವಿವಿಧ ಪ್ರದೇಶಗಳಲ್ಲಿ ಚೆದುರಿಹೋದವು. ಅವು ಮುಂದೆ ಹೊಸ ಸಮುದಾಯಗಳ ರೂಪದಲ್ಲಿ ಕಾಣಿಸಿಕೊಂಡವು. ಹೀಗೆ ಚರಿತ್ರೆಯ ವಿವಿಧ ಕಾಲಾವಧಿಯಲ್ಲಿ ಮುಸ್ಲಿಂ ಸಮುದಾಯಗಳ ರಚನೆಯನ್ನು ಆರಂಭಿಕ ಹಂತದಿಂದ ಮಧ್ಯಕಾಲೀನ ಹಂತದವರೆಗೂ ವರ್ಗೀಕರಿಸಬಹುದಾಗಿದೆ. ಈ ಮುಸ್ಲಿಮರು ವ್ಯಾಪಾರಿ ವರ್ಗ, ಅಧಿಕಾರಿವರ್ಗ, ಸೈನಿಕವರ್ಗ, ಕುಶಲಕರ್ಮಿಗಳು, ವಿದ್ವಾಂಸರು, ಸೂಫಿ ಸಂತರ ವರ್ಗಗಳಾಗಿ ಕಂಡುಬರುತ್ತಾರೆ. ಈ ಸಮುದಾಯಗಳಲ್ಲಿ ಕೆಲವು ವೃತ್ತಿಯ ಹಿನ್ನೆಲೆಯಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡು ಹೊಸ ಸಮುದಾಯಗಳಾಗಿ ರಚನೆಗೊಂಡವು. ಇನ್ನು ಕೆಲವು ಸಮುದಾಯಗಳು ಜಾಗತಿಕ ಮಟ್ಟದಲ್ಲಿ ತಮ್ಮ ಮೂಲ ಸ್ಥಾನವನ್ನು ಪಡೆದಿದ್ದು, ಭಾರತದಲ್ಲಿ ಸ್ಥಳೀಯವಾಗಿಯೂ ಗುರುತಿಸಿಕೊಂಡವು., ಹಾಗಾಗಿಯೇ ಭಾರತದಲ್ಲಿ ನೆಲೆ ನಿಂತ ಮುಸ್ಲಿಂ ಸಮುದಾಯಗಳು ವಿದೇಶಿ ಮೂಲವಾಗಿದ್ದು, ,ನಂತರದಲ್ಲಿ ಇವು ಸ್ಥಳೀಯವಾಗಿಯೂ ತಮ್ಮನ್ನು ಗುರುತಿಸಿಕೊಂಡವು. ಪ್ರಾದೇಶಿಕವಾಗಿ ಇವರು ವಿವಿಧ ಸಮುದಾಯಗಳ ಸ್ವರೂಪದಲ್ಲಿ ತಮ್ಮ ಸ್ಥಾನವನ್ನು ಪಡೆದುಕೊಂಡರು. ಮಧ್ಯಕಾಲೀನ ಸಂಧರ್ಭದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳು ಭಾರತದಾದ್ಯಂತ ತಮ್ಮ ರಾಜಕೀಯ ಬಲಾಢ್ಯತೆಯೊಂದಿಗೆ ಆರ್ಥಿಕ, ಸಾಮಾಜಿಕ ಚಲನೆಯನ್ನು ಹೊಂದಿದ್ದವು. ಈ ಹಿನ್ನೆಲೆಯಲ್ಲಿ ಉತ್ತರ ಭಾರತದ ಭೌಗೋಳಿಕ ಪರಿಸರದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೇ ದಕ್ಷಿಣ ಭಾರತದಲ್ಲಿಯೂ ಚೆದುರಿ ಹೋಗಿರುವುದನ್ನು ಕಾಣಬಹುದಾಗಿದೆ. ಈ ವಲಸೆಯ ಪ್ರಕ್ರಿಯೆಯಿಂದಾಗಿ ಈ ಸಮುದಾಯಗಳು ಭಾರತದ ಚರಿತ್ರೆಯ ಪ್ರಾಚೀನ ಕಾಲದಿಂದ ಹಿಡಿದು ಪ್ರಸ್ತುತ ಕಾಲಾವಧಿಯವರೆಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡವು. ಇವೆಲ್ಲದರ ಆಧಾರದ ಮೇಲೆ ವಿಜಯನಗರ ಕಾಲಾವಧಿಯ ಮುಸ್ಲಿಂ ಸಮುದಾಯಗಳನ್ನು ಗುರುತಿಸಲು ಸಮಕಾಲೀನ ಸಂದರ್ಭದ ದಾಖಲೆಗಳ ಜೊತೆಗೆ ವಿಜಯನಗರ ಪೂರ್ವದ ಹಾಗೂ ವಿಜಯನಗರೋತ್ತರ ಕಾಲಾವಧಿಯಲ್ಲಿ ಸಿಕ್ಕಂತಹ ದಾಖಲೆಗಳನ್ನು ಇಟ್ಟುಕೊಂಡು ಮುಸ್ಲಿಂ ಸಮುದಾಯಗಳ ಪರಿಚಯವನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿಜಯನಗರದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳ ಮೂಲ ಹಾಗೂ ಅವರ ವೃತ್ತಿಯನ್ನು ಈ ಮುಂದಿನಂತೆ ವಿವರಿಸಲಾಗಿದೆ.

ಭಾರತದಲ್ಲಿ ಕ್ರಿ.ಶ. ೭ನೇ ಶತಮಾನದಿಂದ ಕಂಡುಬರುವ ಮುಸ್ಲಿಂ ಸಮುದಾಯಗಳು ವಿಜಯನಗರದ ಆಳ್ವಿಕೆಯಲ್ಲಿಯೂ ಮುಂದುವರಿದವುಗಳಾಗಿದ್ದು, ಇಂದಿಗೂ ಈ ಸಮುದಾಯಗಳು

ಕಂಡುಬರುತ್ತಿವೆ. ಹಾಗಾಗಿ ವಿಜಯನಗರ ಆಳ್ವಿಕೆಯಲ್ಲಿ ಕಂಡುಬರುವ ಸಮುದಾಯಗಳ ಚರಿತ್ರೆಯನ್ನು ಎರಡು ರೀತಿಯಾಗಿ ವಿಭಜಿಸಲಾಗಿದೆ.

೧. ವರ್ತಕಕೇಂದ್ರಿತ ಮುಸ್ಲಿಂ ಸಮುದಾಯಗಳು.

೨. ಪ್ರಭುತ್ವಕೇಂದ್ರಿತ ಮುಸ್ಲಿಂ ಸಮುದಾಯಗಳು.

ಈ ಮೇಲಿನ ವರ್ಗೀಕರಣದಲ್ಲಿ ಕಂಡುಬರುವ ಹಲವು ಸಮುದಾಯಗಳನ್ನು ವರ್ತಕ ವರ್ಗ, ಅಧಿಕಾರಿ/ಸೈನಿಕವರ್ಗ, ವಿದ್ವಾಂಸ/ಸಾಹಿತಿಗಳ ವರ್ಗ, ಗುಲಾಮರ ವರ್ಗ, ಧಾರ್ಮಿಕ ಅನುಯಾಯಿಗಳ ವರ್ಗ, ಸೂಫಿ ಸಂತರ ವರ್ಗಗಳಾಗಿ ಇದರಲ್ಲಿ ಗುರುತಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೩ನೇ ಶತಮಾನದಿಂದ ಹಿಡಿದು ಕ್ರಿ.ಶ. ೧೬ನೇ ಶತಮಾನದವರಿಗೆ ಈ ಸಮುದಾಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಭಾರತದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳ ಬಗ್ಗೆ ಚರಿತ್ರೆಕಾರರು ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಭಾರತದ ಮುಸ್ಲಿಮರಲ್ಲಿ ಮೊದಲು ಜಾತಿಗಳನ್ನು ಗುರುತಿಸಿದ್ದು ಕ್ರಿ.ಶ. ೧೪ನೇ ಶತಮಾನದಲ್ಲಿ ಕಂಡುಬರುವ ಜಿಯಾವುದ್ದೀನ್ ಬರನಿಯ ಬರವಣಿಗೆಗಳಿಂದಾಗಿ ಎಂದು ಚಾರಿತ್ರಿಕ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಇವನು ತನ್ನ ಕೃತಿಯಾದ 'ಫತ್ವ-ಇ-ಜಹನಾಮದಾರಿ'ಯಲ್ಲಿ ಮೊದಲಿಗೆ ಮೂರು ಜಾತಿಗಳ ಉಲ್ಲೇಖವನ್ನು ನೀಡಿದ್ದಾನೆ.[೧] ಒಂದು ಅಶ್ರಫ್‌ಗಳು, ಎರಡು ಅಜ್ಲಫ್‌ಗಳು, ಮೂರು ಅಜ್ರಲ್ಸ್‌ಗಳು. ಟರ್ಕ್, ಅರಬ್ ಮೂಲದಿಂದ ಬಂದು ನೆಲೆಸಿದ ಸಮುದಾಯಗಳಿಗೆ ಅಶ್ರಫ್‌ಗಳೆಂದು ಕರೆಯಲಾಗುತ್ತದೆ. ಹಿಂದುಳಿದ ವರ್ಗಗಳಿಂದ ಮತಾಂತರ ಹೊಂದಿದ ಸಮುದಾಯಗಳಿಗೆ ಅಜ್ಲಫ್‌ಗಳೆಂದು ಕರೆಯಲಾಗುತ್ತದೆ ಹಾಗೂ ದಲಿತ ಜಾತಿಗಳಿಂದ ಮತಾಂತರ ಪಡೆದ ದಲಿತ ಮುಸ್ಲಿಮರಿಗೆ ಅಜ್ರಲ್ಸ್‌ಗಳೆಂದು ಕರೆಯುತ್ತಾರೆ. ಅಶ್ರಫ್‌ಗಳಲ್ಲಿ ನಾಲ್ಕು ಉಪಜಾತಿಗಳಿವೆ. ಅವುಗಳೆಂದರೆ ಸೈಯ್ಯದ್, ಶೇಖ್, ಪಠಾಣ್ ಹಾಗೂ ಮೊಘಲರು.

ಮಧ್ಯಕಾಲೀನ ಸಂದರ್ಭದ ಮುಸ್ಲಿಂ ಸಮುದಾಯಗಳ ಕುರಿತ ದಾಖಲೆಗಳು ವಿರಳವಾಗಿ ಕಂಡುಬರುತ್ತದೆ. ಶಾಸನಗಳ ಉಲ್ಲೇಖಗಳು, ಪ್ರವಾಸಿಗರ ವರದಿಗಳು ಅಲ್ಪ ಮಾಹಿತಿಯನ್ನು ನೀಡುತ್ತವೆ. ಹಾಗಾಗಿ ಪ್ರಸ್ತುತ ಇಂದು ಮುಸ್ಲಿಂ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಸಮುದಾಯಗಳು ವಿವಿಧ ಕಾಲಘಟ್ಟದಲ್ಲಿ ಸ್ಥಾಪನೆಗೊಂಡು ಇಂದಿಗೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ವಸಾಹತು ಕಾಲಾವಧಿಯ ದಾಖಲೆಗಳೂ ಸಹ ಮಧ್ಯಯುಗೀನ ಸಂಧರ್ಭದಲ್ಲಿ ಇದ್ದಂತಹ ಮುಸ್ಲಿಂ ಸಮುದಾಯಗಳ ಬಗೆಗೆ ಮಾಹಿತಿಯನ್ನು ನೀಡುತ್ತವೆ. ಈ ಕುರಿತ ಬ್ರಿಟಿಶ್ ಅವಧಿಯ ಸಂದರ್ಭದಲ್ಲಿ ಜನಗಣತಿಯ ದಾಖಲೆಗಳಿಂದ ಭಾರತದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳ ಪಟ್ಟಿ ನಮಗೆ ಲಭ್ಯವಾಗುತ್ತದೆ. ಇಲ್ಲಿ ಮುಖ್ಯವಾಗಿ ಸಮಕಾಲೀನ ಸಂದರ್ಭದ ಸಾಹಿತ್ಯಿಕ ಆಕರಗಳು ಅಥವಾ ಪ್ರವಾಸಿ ಕಥನಗಳು ಪ್ರಭುತ್ವಕೇಂದ್ರಿತ ಹಿನ್ನೆಲೆಯಲ್ಲಿ

ಚಾರಿತ್ರಿಕ ದಾಖಲೆಗಳನ್ನು ನೀಡುತ್ತವೆ. ಇವು ಪ್ರಮುಖವಾಗಿ ಮೇಲ್ವರ್ಗಕ್ಕೆ ಸಂಬಂಧಿಸಿದ ಸಮುದಾಯಗಳ ಕುರಿತ ದಾಖಲೆಗಳನ್ನು ನಮಗೆ ಒದಗಿಸುತ್ತವೆ. ರಾಜಪ್ರಭುತ್ವಕ್ಕೆ ನೇರ ಸಂಪರ್ಕ ಹೊಂದಿದಂತಹ ಅಥವಾ ಆರ್ಥಿಕತೆಯಲ್ಲಿ ಪ್ರಾಬಲ್ಯವನ್ನು ಪಡೆದಂತಹ ಸಮುದಾಯಗಳು ಮಧ್ಯಕಾಲೀನ ಸಂದರ್ಭದ ಚರಿತ್ರೆಯಲ್ಲಿ ಕೇಂದ್ರಬಿಂದುವಾಗಿ ಗುರುತಿಸಿಕೊಂಡಿವೆ. ಇಲ್ಲಿ ಸಾಮಾನ್ಯ ವರ್ಗವು ನಿರ್ಲಕ್ಷ್ಯಕ್ಕೆ ಒಳಪಟ್ಟಿದ್ದರಿಂದ ಮಧ್ಯಕಾಲೀನ ಚಾರಿತ್ರಿಕ ದಾಖಲೆಗಳಲ್ಲಿ ಲಭ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ವಸಾಹತು ಕಾಲಘಟ್ಟದಲ್ಲಿ ಕಂಡುಬರುವ ಪ್ರಮುಖ ಸಮುದಾಯಗಳು ಹಾಗೂ ಪ್ರಾಚೀನ ಅವಧಿಯಿಂದ ಇಂದಿನವರೆಗೆ ಮುಂದುವರಿಯುತ್ತಿರುವ ಸಮುದಾಯಗಳನ್ನು ತೌಲನಿಕ ಅಧ್ಯಯನ ಕೈಗೊಂಡು ವಿಜಯನಗರ ಕಾಲಕ್ಕೆ ಲಭ್ಯವಿರುವ ಸಮುದಾಯಗಳನ್ನು ಗುರುತಿಸುವ ಪ್ರಯತ್ನ ಈ ಅಧ್ಯಾಯದಲ್ಲಿ ಮಾಡಲಾಗಿದೆ. ವಿಶಾಲವಾದ ವಿಜಯನಗರ ಸಾಮ್ರಾಜ್ಯದ ವಿವಿಧ ಪ್ರದೇಶಗಳಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯಗಳನ್ನು ಆಯಾ ಪ್ರದೇಶದ ಹಿನ್ನೆಲೆಯಿಂದಲೇ ಇಲ್ಲಿ ಅಧ್ಯಯನ ನಡೆಸಲಾಗಿದೆ.

೪.೧.೧. ದಖ್ಖನಿ ಮುಸ್ಲಿಂ ಸಮುದಾಯಗಳು

ಸಾಮಾನ್ಯ ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ಬೈದಾರ್ಸ್(ಕಲ್ಲುಕುಟಿಕ), ತಕರಾಸ್, ಮೊಮಿನ್ಸ್, ಪಿಂಜಾರ, ಲದಾಫ್, ದೂದೇಕುಲಾ, ಮಾನಯಾರ, ಅತ್ತಾರ, ಪಟವೇರ, ಕಾಜಿ, ಕಲೈಗಾರ, ನಲಬಂದ, ಭಾದುನಜಾರ, ಚಪ್ಪರ್‌ಬಂದ್, ಕಸ್ಸಬ್, ಲಬ್ಬೇಸ್, ಬಾಗಬಾನ್. ಇಲ್ಲಿಯವರಿಗೂ ಕೆಲವು ಆಧಾರಗಳಿಂದ ಮಧ್ಯಯುಗೀನ ಸಂದರ್ಭದಲ್ಲಿನ ಸಾಮಾನ್ಯ ಸ್ಥಳೀಯ ಸಮುದಾಯಗಳಾಗಿ ಇವುಗಳನ್ನು ಗುರುತಿಸಬಹುದಾಗಿದೆ. ಪ್ರಭುತ್ವಕೇಂದ್ರಿತ ಹಿನ್ನೆಲೆಯಲ್ಲಿ ಮೇಲ್ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ಅಫಕಿಸ್, ದಖ್ಖನಿ, ಅಜಮಿಸ್, ಅರಬ್ಬರು, ಹಬಷಿಯರು, ತುರ್ಕರು, ಅಫಘಾನರು, ಶೇಖರು ಮತ್ತು ಸಯ್ಯದರು. ಕಂಡುಬರುವರು.

ಕ್ರಿ.ಶ. ೯ನೇ ಶತಮಾನದಲ್ಲಿ ಮಲ್ಲಿಕ್ ದಿನಾರ್ ಅವರಿಂದ ಸುಮಾರು ೧೨ ಮಸೀದಿಗಳನ್ನು ನಿರ್ಮಿಸಿದ್ದನು. ಈ ಹಿನ್ನೆಲೆಯಲ್ಲಿ ಹಲವು ಮೇಲ್ವರ್ಗವನ್ನು ಪ್ರತಿನಿಧಿಸುವ ಸಮುದಾಯಗಳು ಇಲ್ಲಿ ಕಂಡುಬಂದವು. ಇದರಲ್ಲಿ ಮುಖ್ಯವಾಗಿ ಸಿ.ಎನ್. ಅಹಮ್ಮದ್ ಮೌಲವಿ ಅವರ ಮಹತಾಯ 'ಮಾಪಿಳ್ಳ ಸಾಹಿತ್ಯ ಪಾರಮ್ಪರ್ಯಂ' ಸಾಹಿತ್ಯವು ಚೇರ ಅರಸ ಪೆರುಮಾಳ ಅವಧಿಯಲ್ಲಿ ಕಂಡುಬರುವ ವಿದ್ವಾಂಸನಾಗಿದ್ದನು. ಕರಾವಳಿ ಪ್ರದೇಶದಲ್ಲಿ ಅರೇಬಿಕ್ ಶಿಕ್ಷಣವು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಹಾಗಾಗಿ ಈ ಶಿಕ್ಷಣವನ್ನು ಕೊಡಲು ಉಲೇಮಾಗಳು ಬಂದು ಈ ಪ್ರದೇಶದಲ್ಲಿ ನೆಲೆಸಿದ್ದರು. ಕೇರಳವು ಅರೇಬಿಕ್ ಶಿಕ್ಷಣದ ಪ್ರಮುಖ ಕೇಂದ್ರವಾಗಿತ್ತು. ಕ್ರಿ.ಶ. ೮ನೇ ಶತಮಾನದಲ್ಲಿ ಷೇಕ್ ಜೈನುದ್ದೀನ್ ಪ್ರಮುಖ ವಿದ್ವಾಂಸನಾಗಿದ್ದು, ಇವನ ಕೃತಿ 'ತುಹಫತುಲ್ ಮುಜಹಿದ್ದೀನ್' ಕೃತಿಯನ್ನು ರಚಿಸಿದನು. ಮಲಬಾರಿನ ಪೊನ್ನಾಲಿಯಲ್ಲಿ ಜುಮ್ಮಾ ಮಸೀದಿಯೂ ಸಹ ಶಿಕ್ಷಣ ಕೇಂದ್ರವಾಗಿತ್ತು. ಮಲಬಾರಿನ ಮುಸ್ಲಿಮರು ಅರೇಬಿಕ್–ಮಲಯಾಳಂ, ಉರ್ದು ಭಾಷೆಯನ್ನು ಅಭಿವೃದ್ಧಿಪಡಿಸಿದರು. ಧಾರ್ಮಿಕ ಶಿಕ್ಷಣವನ್ನು ಅರೇಬಿಕ್–ಮಲೆಯಾಳಂ

ಭಾಷೆಯಲ್ಲಿ ನೀಡಲಾಗುತ್ತಿತು. ಕೇರಳದಲ್ಲಿ ಕಂಡುಬರುವ ಪ್ರಮುಖ ವಿದ್ವಾಂಸನೆಂದರೆ, ಮೌಲಾನ ಚಲ್ಲಿಕತ್ ಕುನ್ನಿಮಹಮ್ಮದ್ ಹಾಜಿ. ಈತ ಮಲಯಾಳಿ ಮುಸ್ಲಿಮರಲ್ಲಿ ಪ್ರಥಮ ಪದವಿಯನ್ನು ಪಡೆದ ಮುಸ್ಲಿಮನು. ಈ ವ್ಯಕ್ತಿಯಿಂದ ಈ ಪ್ರದೇಶದಲ್ಲಿ ಶಿಕ್ಷಣಕ್ಕೆ ಮಹತ್ವ ನೀಡಿ ಮುಂದೆ ವಿದ್ವಾಂಸರ ಹುಟ್ಟಿಗೆ ಕಾರಣನಾದನು. ಹಲವಾರು ಉನ್ನತ ಕಾಲೇಜುಗಳು ಸ್ಥಾಪನೆಗೊಂಡು ಶೈಕ್ಷಣಿಕ ಹಾಗೂ ಸಾಮಾಜಿಕ ಸುಧಾರಕರು ಏಳಿಗೆಗೆ ಬಂದರು. ಅವರಲ್ಲಿ ಪ್ರಮುಖರಂದರೆ ವಕ್ಕೊಂ ಅಬ್ದುಲ್ ಖಾದರ್ ಮೌಲ್ವಿ ಕೆ.ಎಮ್. ಮೌಲ್ವಿ ಇ.ಕೆ. ಮೌಲ್ವಿ ಪಿ.ಎನ್.ಮಹಮ್ಮದ್ ಮೌಲ್ವಿ ಪಿ.ಪಿ. ಉನ್ನಿಮುಯಿಉದ್ದೀನ್, ಚೆರಸುರಿ ಅಹಮ್ಮದ್ ಕುತ್ತಿ ಮೌಲ್ವಿ ಮುಂತಾದವರು ಪ್ರಮುಖರಾಗಿ ಕಂಡುಬರುತ್ತಾರೆ. ಈ ರೀತಿ ಅರೇಬಿಕ್ ಶಿಕ್ಷಣವು ಕ್ರಿ.ಶ. ೮ನೇ ಶತಮಾನದಲ್ಲೇ ಕೇರಳದಲ್ಲಿ ಜಾರಿಯಲ್ಲಿತ್ತು. ಉದಾಹರಣೆಗೆ ಕೇರಳದ ಕ್ರಿ.ಶ. ೮೪೮ರಲ್ಲಿನ ತರಸಿಪಳ್ಳಿಯ ತಾಮ್ರಶಾಸನವು ಒಂದು ಭೂಮಿಯನ್ನು ದಾನ ಕೊಡುವ ಬಗೆಗೆ ಇದೆ. ಚೇರ ಅರಸ ಸ್ಥಾನುರವಿ ಅನದ ಹಾಗೂ ಅರಬ್ಬರ ೧೦ ಜನರ ವ್ಯಾಪಾರಿಗಳ ನಡುವೆ ಒಪ್ಪಂದವಾಗಿದ್ದು, ಇಲ್ಲಿ ಅರಬ್ ವ್ಯಾಪಾರಿ ಅರಸನ ಮುಂದೆ ಸಹಿ ಹಾಕಿದ ಘಟನೆಯನ್ನು ವಿವರಿಸುತ್ತದೆ. ಆ ವ್ಯಾಪಾರಿಗಳು ಈ ಶಾಸನವನ್ನು ಅರಬ್ ಭಾಷೆಯಲ್ಲಿ ಬರೆಸಿ, ಅರಬ್ಬಿ ಭಾಷೆಯಲ್ಲಿ ಸಹಿಯನ್ನು ಹಾಕಿರುವರು. ಹೀಗೆ ವಿದ್ವಾಂಸರ ವರ್ಗದಲ್ಲಿ ಕಂಡುಬರುವ ಸಮುದಾಯಗಳೆಂದರೆ, ಪೊನ್ನಾನಿನ ಮುಖ್ದಂ, ಬಫಕೀರರು, ಜಫರೀರು ಪ್ರಮುಖವಾಗಿವೆ. ಈ ಸಮುದಾಯಗಳು ಅರಬ್ ಮೂಲದವಾಗಿ ಕೇರಳದಲ್ಲಿ ಬಂದು ನೆಲೆ ನಿಂತವು.

ಹೀಗೆ ಈ ಮೇಲಿನ ಪ್ರಮುಖ ಸಮುದಾಯಗಳು ವಿಜಯನಗರ ಪೂರ್ವದಲ್ಲಿ ಕಂಡುಬಂದಿದ್ದು, ಈ ಸಮುದಾಯಗಳು ವಿಜಯನಗರ ಆಡಳಿತಾವಧಿಯಲ್ಲಿಯೂ ಸಹ ಮುಂದುವರಿದವು. ಮುಸ್ಲಿಂ ಸಮುದಾಯಗಳನ್ನು ವಿವಿಧ ವರ್ಗಗಳಲ್ಲಿ ಹಾಗೂ ಹಂತಗಳಲ್ಲಿ ಹೀಗೆ ಗುರುತಿಸಬಹುದು. ದಕ್ಷಿಣ ಭಾರತದ ಮುಸ್ಲಿಂ ಸಮುದಾಯಗಳ ರಚನೆಯು ವಿವಿಧ ಹಂತಗಳಲ್ಲಿ ಕಂಡುಬರುತ್ತದೆ. ಮಲಬಾರ್/ ಕರಾವಳಿ ತೀರ ಪ್ರದೇಶದಲ್ಲಿ ಕ್ರಿ.ಶ. ೭ನೇ ಶತಮಾನದಲ್ಲೇ ಅರಬ್ ಮೂಲದ ವ್ಯಾಪಾರ ಸಮುದಾಯಗಳು ತಮ್ಮ ಅಸ್ಮಿತೆಯನ್ನು ಪಡೆದುಕೊಂಡಿತ್ತು. ಕ್ರಿ.ಶ. ೧೩ನೇ ಶತಮಾನದ ಉತ್ತರದಿಂದ ದಕ್ಷಿಣಕ್ಕೆ ಅಲ್ಲಾವುದ್ದೀನ್ ಖಿಲ್ಜಿ ದಾಳಿ ಮಾಡಿದ ನಂತರ ಹಲವು ಮುಸ್ಲಿಂ ಸಮುದಾಯಗಳು ಇಲ್ಲೇ ನೆಲೆ ನಿಲ್ಲಲು ಆರಂಭಿಸಿದವು. ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್ ಸೇರಿದಂತೆ ಆಗಿನ ಬಹುತೇಕ ಮುಸ್ಲಿಮರು ಅಪ್ಘಾನರಾಗಿದ್ದರು.[೨] ಸಿಂಧ್ ಪ್ರಾಂತ್ಯದ ಮೂಲಕ ಭಾರತಕ್ಕೆ ಪ್ರವೇಶಿದವರಲ್ಲಿ ಬಹುತೇಕ ಜನ ತುರ್ಕಿಗಳು ಮತ್ತು ಮಂಗೋರಿಯನ್‌ರಾಗಿದ್ದರು. ಹಾಗೆಯೇ ಅವರು ಸುನ್ನಿಗಳು ಕೂಡಾ ಆಗಿದ್ದರು. ಮಹಮ್ಮದ್ ಬಿನ್ ತುಘಲಕ್ ದೆಹಲಿಯಿಂದ ದೇವಗಿರಿಗೆ ರಾಜಧಾನಿಯನ್ನು ಸ್ಥಳಾಂತರಿಸಿದ ಸಂದರ್ಭದಲ್ಲಿ ದೆಹಲಿಯಲ್ಲಿದ್ದ ಬಹುತೇಕ ಜನ ದಕ್ಷಿಣದತ್ತ ಹರಿದುಬಂದಿದ್ದರು. ತುಘಲಕ್ ದೇವಗಿರಿಯಿಂದ ಮತ್ತು ದೆಹಲಿಗೆ ರಾಜಧಾನಿ ವರ್ಗಾವಣೆ ಮಾಡಿದ ಸಂದರ್ಭದಲ್ಲಿ ಕೆಲವರು ಅವನ ಜೊತೆಗೆ ತೆರಳಲಿಲ್ಲ. ಹೀಗೆ ದೌಲತಾಬಾದ್ ಎಂದು ಕರೆಯುವ ದಖನ್‌ನ

ಹಲವು ಪ್ರಾಂತ್ಯಗಳಲ್ಲಿ ಹರಡಿ ಹೋದರು. ಮಾತ್ರವಲ್ಲ, ಇಲ್ಲಿಯೇ ಉಳಿದುಬಿಟ್ಟರು. ಹೀಗೆ ಉಳಿದ ಅಧಿಕಾರಿಗಳು ಮತ್ತು ಸಣ್ಣಪುಟ್ಟ ಸೈನಿಕರು ತಮ್ಮದೇ ಸ್ವತಃ ಅಸ್ತಿತ್ವವನ್ನು ತುಘಲಕ್ ವಿರುದ್ಧದ ದಂಗೆಯ ಸಂದರ್ಭದಲ್ಲಿ ಕಂಡುಕೊಂಡರು.

ಬಾರ್ಬೋಸ್‌ನ ಉಲ್ಲೇಖದಲ್ಲಿ 'ಈ ಮುಸ್ಲಿಂ ವರ್ತಕರು ಮುಖ್ಯವಾಗಿ ಅರಬ್ಬರು, ಪರ್ಶಿಯನ್ನರು, ಮಾಮೋಲಿಕರು, ತುರ್ಕಿಗಳು, ಖೋರಸಾನಿಯರು ಹಾಗೂ ದಖ್ಖನಿ ಮುಸ್ಲಿಂ ಸಮುದಾಯಗಳು ಕಂಡುಬಂದಿದ್ದು, ಇವರು ವ್ಯಾಪಾರದ ಉದ್ದೇಶಗಳಿಗಾಗಿ ಭಾರತದ ವಿವಿಧ ರಾಜ್ಯಗಳಲ್ಲಿ ಬಂದು ನೆಲೆಸಿದ್ದರು. ಈ ರೀತಿಯ ವಿವಿಧ ರಾಷ್ಟ್ರಗಳಿಂದ ಬಂದು ನೆಲೆಸಿದ ಈ ಸಮುದಾಯಗಳು ರಾಜ್ಯದ ಎಲ್ಲಾ ವ್ಯಾಪಾರಸ್ಥ ಪ್ರದೇಶಗಳಲ್ಲಿ ಕಂಡುಬರುತ್ತಿದ್ದವು'[೩] ಎಂದು ವಿವರಿಸಿದ್ದಾನೆ. ವಿಜಯನಗರ ರಾಜ್ಯವು ತನ್ನ ಆಂತರಿಕ ರಾಜ್ಯ–ರಾಜ್ಯಗಳ ನಡುವೆ ಹಾಗೂ ವಿದೇಶಿ ರಾಜ್ಯಗಳ ನಡುವೆ ಕೈಗೊಳ್ಳುತ್ತಿದ್ದ ವ್ಯಾಪಾರದ ಸಂಪರ್ಕದ ಅಂಶಗಳನ್ನು ಇಲ್ಲಿ ತಿಳಿಸಲಾಗಿದೆ. ವಿಜಯನಗರ ತನ್ನ ಸುತ್ತಮುತ್ತಲಿನ ರಾಜ್ಯಗಳಾದ ಗುಜರಾತ್, ದೆಹಲಿ, ಒರಿಸ್ಸಾ, ಮುಂಬಯಿ, ಸಿಲೋನ್, ಕ್ಯಾಲಿಕಟ್, ದೀಯುಗಳೊಂದಿಗೆ ಹಾಗೂ ವಿದೇಶಿ ರಾಷ್ಟ್ರಗಳಾದ ಏಡನ್, ಓರ್ಮಸ್, ಪೆಗು, ಮಾಲ್ಡೀವ್ ಮುಂತಾದ ವಿದೇಶಿ ರಾಜ್ಯಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು. ಬಾರ್ಬೋಸ್‌ನು ಮುಸ್ಲಿಂ ಸಮುದಾಯಗಳ ನೆಲೆಗಳನ್ನು ತಿಳಿಸುತ್ತಾ, ಇವರು ಮಲಬಾರ್, ಭಟ್ಕಳ, ಹೊನ್ನಾವರ, ಮಂಗಳೂರು, ಕಣ್ಣಾನೂರು, ಗೋವಾ, ಚೋರಮಂಡಳ, ಪುಲಿಕಾಟ್, ಸಿಲೋನ್‌ಗಳಲ್ಲಿ ನೆಲೆಸಿದ್ದರೆಂದು ದಾಖಲಿಸಿದ್ದಾನೆ. ಉತ್ತರ ಭಾರತದಲ್ಲಿ ಪ್ರಭುತ್ವಕೇಂದ್ರಿತ ಹಿನ್ನೆಲೆಯಲ್ಲಿ ಸಮುದಾಯಗಳು ಕಂಡುಬಂದರೆ, ದಕ್ಷಿಣ ಭಾರತದಲ್ಲಿ ವ್ಯಾಪಾರದ ಹಿನ್ನೆಲೆಯಲ್ಲಿ ಕಂಡುಬಂದವು. ಇದಲ್ಲದೆ ಮುಸ್ಲಿಂ ಧಾರ್ಮಿಕ ಹಿನ್ನೆಲೆಯಲ್ಲಿ ಸೂಫಿಗಳಾಗಿ, ಉಲೇಮಾಗಳಾಗಿ ಕೆಲವು ಸಮುದಾಯಗಳು ಏಳಿಗೆಗೆ ಬಂದವು. ಅದೇ ರೀತಿ ಸ್ಥಳೀಯ ವ್ಯಾಪಾರಸ್ಥರಾಗಿ, ಕುಶಲಕರ್ಮಿಗಳಾಗಿ ವೃತ್ತಿಯಾಧಾರಿತವಾದಂತಹ ಸಮುದಾಯಗಳು ರೂಪಗೊಂಡವು.

ಈ ರೀತಿಯಾಗಿ ಮೇಲೆ ವಿವರಿಸಿದ ಸಮುದಾಯಗಳು ಜನಸಾಮಾನ್ಯರ ಅಥವಾ ವರ್ತಕ ಸಮುದಾಯಗಳ ನೆಲೆಯಲ್ಲಿ ಕಂಡುಬಂದಿದ್ದು, ವರ್ತಕ ವರ್ಗ, ವಿದ್ವಾಂಸ/ಸಾಹಿತ್ಯ ವರ್ಗ, ಸ್ಥಳೀಯ ಮತಾಂತರ ಹೊಂದಿದ ವರ್ಗಗಳಾಗಿ ಗುರುತಿಸಿಕೊಂಡವು. ಹಾಗೆಯೇ ಪ್ರಭುತ್ವಕೇಂದ್ರಿತ ಸಮುದಾಯಗಳ ಹಿನ್ನೆಲೆಯಲ್ಲಿ ದಖ್ಖನಿ ಮುಸ್ಲಿಂ ಸಮುದಾಯವು ಕಂಡುಬರುತ್ತದೆ. ಸಮುದ್ರಮಾರ್ಗದ ಮೂಲಕ ಆಗಮಿಸಿ, ವರ್ತಕವರ್ಗಕ್ಕೆ ಸೇರಲ್ಪಟ್ಟ ಹಲವಾರು ಮುಸ್ಲಿಂ ಸಮುದಾಯಗಳು ಸ್ಥಾಪಿತವಾದರೆ, ಇನ್ನು ಭೂಮಾರ್ಗದ ಮೂಲಕ ದಕ್ಷಿಣ ಭಾರತದಲ್ಲಿ ರಾಜಕೀಯ/ಪ್ರಭುತ್ವದ ಹಿನ್ನೆಲೆಯಲ್ಲಿ ಆಗಮಿಸಿ ನೆಲೆಸಿದ ಸಮುದಾಯಗಳನ್ನು ದಖ್ಖನಿ ಮುಸ್ಲಿಂ ಸಮುದಾಯಗಳಾಗಿ ಗುರುತಿಸಬಹುದಾಗಿದೆ. ದಖ್ಖನಿ ಮುಸ್ಲಿಮರು ಕ್ರಿ.ಶ. ೧೩೧೦ರಲ್ಲಿ ಮಲ್ಲಿಕ್ ಕಾಫರ್‌ನ ದಾಳಿಯ ಸಂದರ್ಭದಲ್ಲಿ ಕಂಡುಬಂದರು. ಇವರು ಮುಖ್ಯವಾಗಿ ಸೈನಿಕ ವರ್ಗ, ಅಧಿಕಾರಿಗಳ ವರ್ಗ, ಉಲೇಮಾಗಳ ವರ್ಗ, ಸೂಫಿ

ವರ್ಗಗಳಲ್ಲಿ ಗುರುತಿಸಿಕೊಂಡು ಸಾಮ್ರಾಜ್ಯ ವಿಸ್ತರಣೆಯಲ್ಲಿ ಹಾಗೂ ಧಾರ್ಮಿಕ ವಿಸ್ತರಣೆಯ ಕಾರ್ಯದಲ್ಲಿ ತೊಡಗಿಕೊಂಡರು.

ಸುನ್ನಿ, ಷಿಯಾ, ವಹಬೀಗಳು ಅಥವಾ ಅಹಲೆ-ಹದೀಗಳು

ಸುನ್ನತ್ ಜಮಾತ್

ಇಸ್ಲಾಂ ಧರ್ಮ ಸ್ಥಾಪನೆ ಬಳಿಕ ಪೈಗಂಬರ್ ಮರಣದ ನಂತರ ಆಂತರಿಕವಾಗಿ ಇಸ್ಲಾಂ ಧರ್ಮದಲ್ಲಿ ಒಡಕುಂಟಾಯಿತು. ಪರಿಣಾಮವಾಗಿ ಸುನ್ನಿ, ಷಿಯಾ, ವಹಾಬೀಗಳೆಂಬ ಪಂಥಗಳು ಹುಟ್ಟಿಕೊಂಡವು. ಸಾಂಪ್ರದಾಯಿಕ ನೆಲೆಯಲ್ಲಿ ಕಂಡುಬರುವ ಪಂಥವೇ ಸುನ್ನತ್ ಜಮಾತ್‌ವಾಗಿದೆ. ಇವರು ಇಸ್ಲಾಂ ದೇವತಾಶಾಸ್ತ್ರಜ್ಞರಾಗಿದ್ದರು. ಇವರನ್ನು 'ಇಮಾಮ'ರೆಂದು ಕರೆಯಲಾಗುತ್ತಿತ್ತು. ಸುನ್ನಿ ಪಂಥವನ್ನು ಅನುಸರಿಸುವ ಸಮುದಾಯಗಳು ಈ ಇಮಾಮರಿಗೆ ಅನುಯಾಯಿಗಳಾಗಿರುತ್ತಾರೆ. ಅಬುಹನೀಫ್ ಎಂದು ವ್ಯವಹೃತನಾಗಿರುವ ಥಾನೆತ್ತನ ಮಗ ಇಮಾಮ್ ನೋಮಾನನು ಕ್ರಿ.ಶ. ೭೦೨-೭೭೨ರಲ್ಲಿ ಜೀವಿಸಿದ್ದನು. ಇವನು ಪರ್ಷಿಯಾದವನಾಗಿದ್ದನು. ಇವನ ಅನುಯಾಯಿಗಳು ತುರ್ಕಿಸ್ತಾನ್, ಮಧ್ಯ ಏಷ್ಯ, ಆಫ್‌ಘಾನಿಸ್ತಾನ, ಬೇರಾಚಿಸ್ತಾನ, ಭಾರತ ಮೊದಲಾದೆಡೆಗಳಲ್ಲೆಲ್ಲಾ ಬಹಳಷ್ಟು ಮಂದಿ ವಾಸವಾಗಿದ್ದರು. ಇವನ ದೇವತಾಶಾಸ್ತ್ರದ ವಿಶೇಷತೆ ಏನೆಂದರೆ-ಅನುಮಾನಿಕ ಮತ್ತು ದೃಷ್ಟಾಂತ ರೀತಿಯಲ್ಲಿ ತರ್ಕಿಸುವುದು ಮತ್ತು ಕಾಲ ದೇಶ ಅನುಸಾರ ಬದಲಾವಣೆ ಮಾಡಿಕೊಳ್ಳುವುದು. ಇದ್ರೀಸನ ಮಗ ಇಮಾಮ್ ಮಹಮ್ಮದ್ (ಕ್ರಿ.ಶ.೭೭೨-೮೨೬)ನು ಪ್ಯಾಲೆಸ್ಟೈನಿನಲ್ಲಿ ಹುಟ್ಟಿದ. ಇವನ ಅನುಯಾಯಿಗಳು ಈಜಿಪ್ಟ್, ಅರೇಬಿಯಾ, ದಕ್ಷಿಣ ಭಾರತ, ವಾಯವ್ಯ ಪರ್ಷಿಯ ಮೊದಲಾದೆಡೆಗಳಲ್ಲಿದ್ದಾರೆ. ಮದೀನದಲ್ಲಿ ಹುಟ್ಟಿದ ಅರಬ್ ಅನಸಿನ ಮಗ ಇಮಾಮ್ ಮಾಲಿದ್(ಕ್ರಿ.ಶ.೭೧೬-೮೦೧) ಇವನ ಅನುಯಾಯಿಗಳು ಉತ್ತರ ಆಫ್ರಿಕಾದಲ್ಲಿದ್ದಾರೆ. ಇರಾನಿನಲ್ಲಿ ಹುಟ್ಟಿದ ಅರಬ್ ಹಮ್‌ಬಲಿನ ಮಗ ಇಮಾಮ್ ಅಹಮ್(ಕ್ರಿ.ಶ.೭೮೬-೮೭೩) ಇವನ ಅನುಯಾಯಿಗಳು ಅರೇಬಿಯದಲ್ಲಿದ್ದಾರೆ. ಹೀಗೆ ವಿಶ್ವದಾದ್ಯಂತ ಸುನ್ನಿ ಅನುಯಾಯಿಗಳು ನೆಲೆಸಿದರು.[೪] ಹೀಗೆ ಭಾರತದಲ್ಲಿ ಸುನ್ನಿ ಅನುಯಾಯಿಗಳು ದಕ್ಷಿಣ ಭಾರತದಲ್ಲಿ ಸೂಫಿ ಮಿಷನರಿಗಳಾಗಿ ಕ್ರಿ.ಶ. ೭ನೇ ಶತಮಾನದಲ್ಲಿ ಕಂಡುಬರುತ್ತಾರೆ. ಹಾಗೆಯೇ ಉತ್ತರ ಭಾರತದಲ್ಲಿ ಕ್ರಿ.ಶ. ೧೨ನೇ ಶತಮಾನದ ವೇಳೆಗೆ ಭಾರತಕ್ಕೆ ಬಂದರು. ಈ ಪಂಥವು ಇಸ್ಲಾಂ ಧರ್ಮದ ಮೂಲಭೂತ ತತ್ವಗಳನ್ನು ಅನುಸರಿಸುವ ಸಾಂಪ್ರದಾಯಿಕ ಪಂಥವಾಗಿತ್ತು. ಆದರೆ ಇದು ಭಾರತಕ್ಕೆ ಪ್ರವೇಶಿಸಿದಾಗ ಹಲವು ವರ್ಗಗಳಲ್ಲಿ ವಿಭಜನೆಗೊಂಡಿತ್ತು. ಅವು ಸಾಂಪ್ರದಾಯಿಕ ಪಂಥಗಳಾಗಿ ಜಮಾತ್ ಎಂದು, ಅನುಭಾವಿ ಪಂಥವಾಗಿ ಸೂಫಿಗಳು ಕಂಡುಬಂದರು. ಆದರೆ ವಿಜಯನಗರ ಕಾಲಾವಧಿಯಲ್ಲಿ ಪ್ರಾಂತೀಯ ನೆಲೆಗಟ್ಟಿನಲ್ಲಿ ಬೇರೆ ಬೇರೆಯಾಗಿ ಗುರುತಿಸಿಕೊಂಡಿತು. ಕರಾವಳಿ ಪ್ರದೇಶದ ಸುನ್ನಿಗಳು ಹಾಗೂ ದಕ್ಷಿಣ ಭಾರತದಲ್ಲಿನ ಸುನ್ನಿ ವರ್ಗಗಳು ಭಿನ್ನವಾಗಿದ್ದರು. ಕರಾವಳಿಯಲ್ಲಿ ಕಂಡುಬರುವ ಸುನ್ನಿಗಳು ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ವಿಜಯನಗರಪೂರ್ವದಿಂದಲೂ ಶಾಶ್ವತವಾಗಿ ನೆಲೆ

ನಿಂತವರು. ಇನ್ನು ದಕ್ಷಿಣ ಭಾರತದ ಸುನ್ನಿಗಳು ದಖ್ಖನಿಗಳಾಗಿ ಗುರುತಿಸಿಕೊಂಡರು. ಇವರು ಉತ್ತರ ಭಾರತದಿಂದ ವಲಸೆ ಬಂದ ಪ್ರಭುತ್ವ ಹಿನ್ನೆಲೆಯ ಸುನ್ನಿ ಜಮಾತ್‌ಗಳಾಗಿದ್ದರು. ಈ ಜಮಾತ್‌ಗಳೂ ಸುಲ್ತಾನರ ಆಶ್ರಯವನ್ನು ಪಡೆಯುವಂಥವುಗಳಾಗಿದ್ದರು. ಹಾಗಾಗಿ ಸುಲ್ತಾನರು ಸುನ್ನಿ ಪಂಥದವರಾಗಿದ್ದರೆ ಸುನ್ನಿ ಇಮಾಮರಿಗೆ ಬೆಂಬಲ ಸಿಗುತ್ತಿತ್ತು. ಈ ಕಾರಣಕ್ಕಾಗಿ ಬಹಮನಿ ರಾಜ್ಯ ಸ್ಥಾಪನೆಯ ನಂತರ ದಕ್ಷಿಣ ಭಾರತದಲ್ಲಿ ಸುಲ್ತಾನರು ಸುನ್ನಿ, ಷಿಯಾ ಪಂಥವನ್ನು ಅನುಸರಿಸುವರಾಗಿದ್ದರು. ಇವರ ಪ್ರಭಾವ ಇಲ್ಲಿ ನೆಲೆ ನಿಂತ ಮುಸ್ಲಿಂ ಸಮುದಾಯಗಳ ಮೇಲೆ ಬೀರುತ್ತಿತ್ತು. ಸುನ್ನಿ, ಷಿಯಾ ಘರ್ಷಣೆಗಳು ನಡೆದು ಶಾಹಿ ರಾಜ್ಯಗಳಿಂದ ವಿಜಯನಗರ ರಾಜಧಾನಿಗೆ ವಲಸೆ ಬಂದರು. ಹೀಗೆ ಸುನ್ನಿ, ಷಿಯಾಗಳ ಪ್ರವೇಶವು ವಿಜಯನಗರದಲ್ಲಿ ಆಗಿದ್ದಲ್ಲದೆ ಇವರಿಗೆ ರಾಜಾಶ್ರಯ ಹಾಗೂ ಪ್ರೋತ್ಸಾಹ ಸಹ ಸಿಕ್ಕತು. ಹೀಗೆ ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಸುನ್ನಿಗಳ ಚರಿತ್ರೆಯೂ ಕರಾವಳಿ ಹಾಗೂ ದಖ್ಖನ್ ಪ್ರಾಂತಗಳಲ್ಲಿ ಭಿನ್ನವಾಗಿತ್ತು.

ಷಿಯಾ ಪಂಥ

ಷಿಯಾ ಪಂಥದವರು ಅಲಿಯ ಅನುಯಾಯಿಗಳಾಗಿದ್ದಾರೆ. ಮಹಮ್ಮದ್ ಪೈಗಂಬರ್ ನಂತರ ಬಂದ ಖಲೀಫನ ಸ್ಥಾನಕ್ಕೆ ಸುನ್ನಿ ಪಂಥದವರು ಅಬುಬಕರ್‌ನನ್ನು ಪಟ್ಟಕ್ಕೆ ತರುವ ಬೆಂಬಲ ಮಾಡಿದರೆ, ಪೈಗಂಬರ್ ಅವರ ಅಳಿಯ ಅಲಿಯನ್ನು ಪಟ್ಟಕ್ಕೆ ತರಬೇಕು ಎನ್ನುವ ಬೆಂಬಲ ಷಿಯಾ ಪಂಥದವರದ್ದಾಗಿತ್ತು. ಸುನ್ನಿಗಳು ಅಬುಬಕರ್‌ನನ್ನು ಸರಿಯಾದ ಉತ್ತರಾಧಿಕಾರಿ ಎಂದು ಖಲೀಫನನ್ನಾಗಿ ಆಯ್ಕೆ ಮಾಡಿದರು. ಅವನ ಬಳಿಕ ಉಮರನನ್ನು, ಅವನ ತರುವಾಯ ಉಸ್ಮಾನನನ್ನು, ಅವನ ತರುವಾಯ ನಾಲ್ಕನೆಯದಾಗಿ ಅಲಿಯನ್ನು ನೇಮಿಸಿದರು. ಆದರೆ ಷಿಯಾಗಳು ಇದನ್ನು ಒಪ್ಪದೆ, ಕುರಾನಿನಲ್ಲಿ ಅಡಗಿರುವ ತತ್ವಗಳು ಬಹು ಸಂಗ್ರಹ ರೀತಿಯಲ್ಲಿಯೂ ಜಟಿಲವಾಗಿಯೂ ಹೇಳಿವೆಯೆಂದೂ ಅವುಗಳನ್ನು ಬಿಡಿಸಿ ಅರ್ಥ ಹೇಳುವವನು ಮಹಮ್ಮದನಷ್ಟೇ ಪರಿಶುದ್ಧಾತ್ಮನೂ ದೈವನಿಯಮಿತನೂ ಅಳಿಯನೂ ಆದ ಅಲಿಯೊಬ್ಬನೇ ಎಂದು ಸಾಧಿಸಿದರು. ಈ ಅಲಿಯ ನಂತರ, ಅವನಿಗೆ ಫಾತಿಮಳಲ್ಲಿ ಹುಟ್ಟಿದ ಸಂತತಿಯವರನ್ನು ಮಾತ್ರ ಉತ್ತರಾಧಿಕಾರಿಗಳೆಂದು ಅಂಗೀಕರಿಸಿ ಅವರನ್ನು ಇಮಾಮರು ಎಂದು ಕರೆದರು. ಅಲಿಯಿಂದ ಮೊದಲು ಮಾಡಿ ಹಸನ್ ಮಗನಾದ ಮಹಮ್ಮದನನ್ನು ಕೊನೆ ಮಾಡಿ ಹನ್ನೆರಡು ಜನ ಖಲೀಫರು ಕಂಡುಬರುತ್ತಾರೆ. ಈ ಹನ್ನೆರಡನೇ ವ್ಯಕ್ತಿಯಾಗಿ ಮಹಮ್ಮದ್ ಮಗುವಾಗಿದ್ದಾಗಲೇ ಅದೃಶ್ಯನಾದನೆಂದು, ಇನ್ನೂ ಜೀವಂತನಾಗಿಯೇ ಇರುವನೆಂದೂ, ಹಾಗೆಯೇ ಜೀವಂತನಾಗಿರುವ ಯೇಸು ಕ್ರಿಸ್ತನೊಡನೆ ಮತ್ತೆ ಕಾಣಿಸಿಕೊಳ್ಳುವರೆಂದು, ದೈವಾಜ್ಞೆಯ ಮೇರೆಗೆ ಅವರಿಬ್ಬರೂ ಮತ್ತೆ ಕಾಣಿಸಿಕೊಳ್ಳುವನೆಂದೂ, ದೈವಾಜ್ಞೆಯ ಮೇರೆಗೆ ಅವರಿಬ್ಬರೂ ಮತ್ತೆ ಪ್ರಪಂಚದಲ್ಲಿ ಧರ್ಮೋದ್ಧಾರ ಮಾಡುತ್ತಾರೆಂದೂ ಷಿಯಾಗಳು ನಂಬುತ್ತಾರೆ. ಇವರು ಸುನ್ನತ್ ಜಮಾತರ ಇಮಾಮರನ್ನು ಒಪ್ಪದೆ ಈಗಲೂ ತಮ್ಮಲ್ಲಿಯೇ ಬೇರೆ ಇಮಾಮರನ್ನು ಆಯ್ದುಕೊಳ್ಳುತ್ತಾರೆ. ಇಷ್ಟೇ ಅಲ್ಲದೆ ಕೆಲವು ಮತ ಪ್ರಕ್ರಿಯೆಗಳಲ್ಲೂ,

ಮದುವೆ, ಆಸ್ತಿ, ಹಕ್ಕು ಮೊದಲಾದ ವಿಷಯಗಳಲ್ಲೂ ಇಬ್ಬರಿಗೂ ಭಿನ್ನತೆಗಳಿವೆ. ಷಿಯಾಗಳಲ್ಲಿಯೇ ೧೨ ಇಮಾಮಿಗಳು ೭ ಇಮಾಮಿಗಳು ಎಂಬ ಒಳಪಂಗಡಗಳಿವೆ. ಏಳು ಇಮಾಮಿ ಪಂಗಡದವರು ಭಾರತದಲ್ಲಿ, ಅರೇಬಿಯಾದ ಯಮನ್ ಪ್ರಾಂತದಲ್ಲೂ ಇದ್ದಾರೆ. ಭೋರರು ಮತ್ತು ಖೋಜರು ಎಂದು ಈಗ ಕರೆಯುವ ಈ ಜನರು ಮಹಾರಾಷ್ಟ್ರ ಪ್ರಾಂತ್ಯದಲ್ಲಿನ ಆಗಾಖಾನನಿಗೆ ಶಿಷ್ಯರಾಗಿ ನಡೆಯುತ್ತಾರೆ.[೫] ದಕ್ಷಿಣ ಭಾರತದಲ್ಲಿ ಶಾಹಿ ರಾಜ್ಯಗಳ ಸ್ಥಾಪನೆ ನಂತರದಲ್ಲಿ ಇವರ ಪ್ರಭಾವ ಕಂಡುಬಂದಿತು. ಆದಿಲ್‌ಶಾಹಿ ಕಾಲದಲ್ಲಿ ಷಿಯಾಗಳ ಪ್ರಭಾವವು ಅಧಿಕವಾಗಿ ಕಂಡುಬಂದಿತು. ಸುನ್ನಿ, ಷಿಯಾಗಳ ಆಂತರಿಕ ಘರ್ಷಣೆಗಳು ಅಧಿಕವಾಗಿ ಕಂಡುಬಂದವು. ಉದಾಹರಣೆಗೆ ಎರಡನೇ ಇಬ್ರಾಹಿಂ ಆಳ್ವಿಕೆಯಲ್ಲಿ ಶಾ ಸಿಬಗತ್ ಎಂಬ ಸುನ್ನಿ ಸೂಫಿಯು ಬಿಜಾಪುರದ ಷಿಯಾಗಳು ತಾಜಿಯಾ ಮೆರವಣಿಗೆ ತೆಗೆಯಬಾರದೆಂದು ಹಠ ಹಿಡಿದಾಗ ಸುಲ್ತಾನನು ಈ ಸಂತನನ್ನು ಗೃಹಬಂಧನದಲ್ಲಿಡುತ್ತಾನೆ. ಅಲ್ಲದೇ ಮಾರನೇ ದಿನ ಅವನಿಗೆ ಮೆಕ್ಕಾ ಯಾತ್ರೆಗೆ ಹೋಗಲು ಆಜ್ಞಾಪಿಸುತ್ತಾನೆ.[೬]

ಸೈಯದ್ ಸಮುದಾಯ

ಹದ್ರಿಮಿಯನ್ನರು ಎಂತಲೂ ಸೈಯದ್ ಸಮುದಾಯದವರನ್ನು ಕರೆಯಲಾಗುತ್ತದೆ. ಹದಮಿ ಎಂಬ ಪ್ರಾಂತ್ಯವು ಇವರ ಮೂಲ ನೆಲೆಯಾಗಿದೆ. ಇದು ಅರೇಬಿಯಾದ ನೈರುತ್ಯ ಭಾಗದಲ್ಲಿ ಕಂಡುಬರುತ್ತದೆ. ಕ್ರಿ.ಶ. ೫ನೇ ಶತಮಾನದಿಂದಲೇ ಭಾರತದೊಂದಿಗೆ ಇವರು ವ್ಯಾಪಾರ ಸಂಪರ್ಕ ಹೊಂದಿದ್ದರು. ಹಾಗಾಗಿ ಇವರು ಮೂಲತಃ ನೈರುತ್ಯ ಅರೇಬಿಯಾ ಮೂಲದವರು.[೭] ಇವರು ಭಾರತದ ಪ್ರಮುಖ ಕರಾವಳಿ ತೀರ ಪ್ರದೇಶವಾದ ಮುಕುಲ್ಲಾ ಮತ್ತು ಕಿಹರ್‌ಗಳಲ್ಲಿ ಕಂಡುಬರುತ್ತಾರೆ.[೮] ಕ್ರಿ.ಶ. ೭ನೇ ಶತಮಾನದಲ್ಲಿ ಅರೇಬಿಯಾದಿಂದ ಆಗ್ನೇಯ ಏಷ್ಯಾದ ಮೂಲಕ ಭಾರತಕ್ಕೆ ಚಿಕ್ಕ ಗುಂಪಿನಲ್ಲಿ ವ್ಯಾಪಾರ ಉದ್ದೇಶಕ್ಕೆ ಬಂದು ನೆಲೆಸಿದರು. ಕ್ರಿ.ಶ. ೧೩ನೇ ಶತಮಾನದ ವೇಳೆಗೆ ಅರಬ್ ವ್ಯಾಪಾರಿ ಸಮುದಾಯಗಳು ತಮ್ಮ ವ್ಯಾಪಾರ ನೆಲೆಗಳನ್ನು ಇಲ್ಲಿ ಹೊಂದಿದ್ದವು. ಹಾಗಾಗಿ ಸೈಯಿದ್ ಮನೆತನವು ಮಹಮ್ಮದ್ ಪೈಗಂಬರ್ ಅವರ ಮಗಳಾದ ಫಾತಿಮಾ ಹಾಗೂ ಅಳಿಯ ಅಲಿ ಮತ್ತು ಮೊಮ್ಮಕ್ಕಳಾದ ಹಸನ್–ಹುಸೇನ್ ಅವರ ವಂಶದರೆಂದು ತಮ್ಮನ್ನು ಹೇಳಿಕೊಳ್ಳುತ್ತಾರೆ. ಸಯ್ಯಿದ್ ಮನೆತನದಲ್ಲಿ ಪ್ರಮುಖವಾಗಿ ಕಂಡುಬರುವ ಮನೆತನಗಳೆಂದರೆ ಬಶ್ಶೈಬನ್ನರು, ಬ್ರಮರು, ನಾಜಿಗಳು, ಇದ್ರೂಸಿಯರು, ಜುಬೈದಿಯರು, ಮುಖಬಿಲರು, ಬಿಲಫಕೀರರು ಮತ್ತು ಸಕಾಫಿಯರು.[೯] ಪೀರ್ ಮಹಬಿರ್ ಖಾನದಾಯತ್ ಎಂಬ ಅರಬ್‌ನ ಧಾರ್ಮಿಕ ಬೋಧಕನು ಕ್ರಿ.ಶ. ೧೪ನೇ ಶತಮಾನದಲ್ಲಿ ಬಿಜಾಪುರಕ್ಕೆ ಭೇಟಿ ನೀಡಿದ್ದನು. ಇವರ ಬೋಧನೆಗೆ ಪ್ರಭಾವಕ್ಕೆ ಒಳಗಾಗಿ ಕೆಲವರು ಹಿಂದೂ ಧರ್ಮದಿಂದ ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದರು.[೧೦] ಸೈಯ್ಯದರಿಗೆ ಪೀರಜಾದೆಗಳೆಂತಲೂ ಅಥವಾ ಮಶೇಕರೆಂತಲೂ ಕರೆಯುತ್ತಾರೆ. ಬಿಜಾಪುರದ ಆದಿಲ್‌ಶಾಹಿ ಆಳ್ವಿಕೆಯಲ್ಲಿ ಬಹುಜನರಿಗೆ ಉಪದೇಶ ಮಾಡಿ ಮುಸಲ್ಮಾನ ಧರ್ಮಕ್ಕೆ ಮತಾಂತರಿಸಿದ ಸತ್ಪುರುಷರೆಂಬ

ಧರ್ಮ ಪ್ರಚಾರಕರೇ ತಮ್ಮ ಮೂಲ ಪುರುಷರೆಂದು ಇವರು ಹೇಳುತ್ತಾರೆ. ಆ ಧರ್ಮ ಪ್ರಚಾರಕರು ಅರಬಸ್ತಾನದಿಂದ ಬಂದಂಥ ಫಾತಿಮಾ ಮತ್ತು ಅಲಿ ದಂಪತಿಗಳ ವಂಶದವರಿಗೆ ಸಯ್ಯಿದರೆಂದು ಹೇಳುತ್ತಾರೆ. ಹಸನನ ವಂಶದವರಿಗೆ ಹಸನೀ ಎಂತಲೂ, ಹುಸೇನನ ವಂಶದವರಿಗೆ ಹುಸೇನೀ ಎಂತಲೂ ಹೆಸರುಗಳಿವೆ. ಸಯ್ಯಿದ್ ಸಮುದಾಯದ ಒಳಗೆ ಉಪ ಪಂಗಡಗಳಿವೆ. ಸೈಯ್ಯದರು ತಮ್ಮ ಹೆಸರಿನ ಹಿಂದೆ ಸೈಯಿದ್(ಪವಿತ್ರ) ಅಥವಾ ಮೀರ(ಮುಖ್ಯ) ಎಂಬ ಬಿರುದು ಹಚ್ಚಿಕೊಂಡು, ಮುಂದೆ 'ಶಹಾ'(ಅರಸು) ಎಂಬ ಉಪಪದವನ್ನು ಸಹ ಹಚ್ಚಿಕೊಂಡರು. ಉದಾಹರಣೆಗೆ ಕಾಶಿಮವೆಂಬ ಹೆಸರಿನ ವ್ಯಕ್ತಿಯು ತನಗೆ ಸೈಯ್ಯದ್ ಕಾಶೀಮ ಶಹಾ ಅಥವಾ ಸೈಯ್ಯದ್ ಮೀರಕಾಶಿಮಶಾಹಾ' ಎಂಬ ಹೆಸರುಗಳಿಂದ ಗುರುತಿಸಿಕೊಂಡನು. ಮಹಿಳೆಯರು ತಮ್ಮ ಹೆಸರಿನ ಮುಂದೆ ಸೈಯ್ಯದ್ ಬದಲಿಗೆ ಬಿಬೀ ಎಂಬ ಉಪನಾಮ ಇಟ್ಟುಕೊಂಡರು.[೧೧]

ಭಾರತದ ವಸಾಹತು ಕಾಲಘಟ್ಟದ ಅವಧಿಯಲ್ಲಿ ಇವರ ವಲಸೆ ಅಧಿಕವಾಗಿ ಕಂಡುಬಂದಿತು. ಮಿಷನರಿಗಳು ಮತ್ತು ವ್ಯಾಪಾರಿಗಳು ಇಸ್ಲಾಮನ್ನು ಪ್ರಚಾರ ಮಾಡಲು ಅರಬ್ ವರ್ತಕರೊಂದಿಗೆ ಭಾರತಕ್ಕೆ ಬಂದಿದ್ದರು.

ಹದ್ರಮಿಯನ್ ಪ್ರಾಂತ್ಯದಿಂದ ವಲಸೆ ಬಂದವರಲ್ಲಿ ಸೈಯ್ಯದ್ ಮನೆತನದವರು ಪ್ರಮುಖರು. ಇವರು ಉಲೇಮಾಗಳಾಗಿ ಬಂದರುಗಳಲ್ಲಿ ನೆಲೆಸಿದ್ದರು. ಇಸ್ಲಾಂ ಧರ್ಮದ ನಾಯಕರಾಗಿದ್ದರು. ಇವರು ಧಾರ್ಮಿಕ ಗುರುಗಳಾಗಿದ್ದರು ಹಾಗೂ ಸುಲ್ತಾನರ ಆಳ್ವಿಕೆಯಲ್ಲಿ ಮೇಲ್ದರ್ಜೆಯ ಅಧಿಕಾರಿ ಅಥವಾ ಉಲೇಮಾಗಳ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಹದರಮಿಯನ್ನರು ಭಾರತದಲ್ಲಿ ದೆಹಲಿ, ಗುಜರಾತ್, ದಖ್ಖನ್ ಹಾಗೂ ಮಲಬಾರ್ ಪ್ರಾಂತ್ಯದಲ್ಲಿ ಅತ್ಯಧಿಕವಾಗಿ ನೆಲೆಸಿದ್ದರು.

ಆಗ್ನೇಯ ಏಷ್ಯಾದಲ್ಲಿ ಇವರು ಶಾಫಿಯ ಪಂಥಕ್ಕೆ ಸೇರಿದವರಾಗಿದ್ದರು. ಭಾರತದಲ್ಲಿ ಹನಫಿ ಪಂಥದಲ್ಲಿ ಇವರು ಗುರುತಿಸಿಕೊಂಡಿದ್ದಾರೆ. ಹಾಗಾಗಿ ಭಾರತದಲ್ಲಿ ನೆಲೆ ನಿಂತ ಸಯ್ಯದರು ಆಲಿಮ್, ಸೂಫಿ ಮತ್ತು ವ್ಯಾಪಾರ ವರ್ಗಗಳಲ್ಲಿ ಗುರುತಿಸಿಕೊಂಡಿದ್ದರು.[೧೨]

ಮಲಬಾರಿನಲ್ಲಿ ಸಯ್ಯದ್‌ರನ್ನು ತಂಗಲ್ಸ್(Tangals) ಎಂಬ ಹೆಸರಿನಲ್ಲಿ ಕರೆಯಲಾಗುತ್ತಿತ್ತು. ಇವರು ಮಲಬಾರಿನಲ್ಲಿ ವರ್ತಕರಾಗಿ ಕಂಡುಬರುತ್ತಿದ್ದರು. ಇವರು ಹತ್ತಿ ಬಟ್ಟೆಯ ವ್ಯಾಪಾರವನ್ನು ನಡೆಸುತ್ತಿದ್ದರು. ಕ್ಯಾಲಿಕಟ್, ಕೊಚ್ಚಿನ್ ಮತ್ತು ಕ್ವೂಲನ್‌ನಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದರು. ಕ್ರಿ.ಶ. ೬ನೇ ಶತಮಾನದಲ್ಲಿ ವ್ಯಾಪಾರದ ಹಿನ್ನೆಲೆಯಲ್ಲಿ ಮಲಬಾರಿಗೆ ಬಂದು ನೆಲೆಸಿ, ಮಿಷನರಿಗಳಾಗಿಯೂ ಸಹ ಇಸ್ಲಾಂ ಧರ್ಮ ಪ್ರಚಾರ ಕಾರ್ಯವನ್ನು ಮಾಡಿದರು. ಹೀಗೆ ಹದ್ರಮಿ ಸೈಯ್ಯದ್‌ರು ಭಾರತದಾದ್ಯಂತ ವಿಸ್ತರಿಸಿಕೊಂಡಿದ್ದರು. ಇವರಲ್ಲಿ ೧೦ನೇ ಶತಮಾನದಲ್ಲೇ ಅಹಮದ್ ಎಬನ್ ಎಸಾ ಅಲ್-ಮಹಜಿರ್ ಹದರಾಂವತ್ ಬಾಸ್ರದಿಮದ ಭಾರತಕ್ಕೆ ಸಂಚಾರವನ್ನು ಕೈಗೊಂಡಿದ್ದನು.[೧೩] ಈ ಸಮುದಾಯಗಳು ವಿಜಯನಗರ ಅವಧಿಯಲ್ಲಿ ಕರಾವಳಿ ಭಾಗಗಳಲ್ಲಿ ವಿದ್ವಾಂಸರಾಗಿ, ಧಾರ್ಮಿಕ ಮುಖಂಡರಾಗಿ ಅತಿ ಹೆಚ್ಚಾಗಿ ಗುರುತಿಸಿಕೊಂಡಿದ್ದರು.

ಶೇಕರು

ಶೇಕರೆಂದರೆ ಹಿರಿಯರು ಎಂದರ್ಥ. ಇವರಲ್ಲಿ ಎರಡು ವರ್ಗಗಳಿವೆ. ಮಹಮ್ಮದ್ ಪೈಗಂಬರ ಅವರ ಮಾವನಾದ ಅಬುಬಕರ್ ಸಿದಿಕ್ ವಂಶದವರಿಗೆ ಸಿದಿಕರಂತಲೂ, ಆ ಪೈಗಂಬರ್‌ನ ಅಳಿಯನಾದ ಉಮೇರಲ್ ಫರೂಕನ ವಂಶದವರಿಗೆ ಫರೂಕಿಗಳೆಂತಲೂ ಕರೆಯುವರು. ಇವರು ತಮ್ಮ ಹೆಸರಿನ ಹಿಂದೆ 'ಶೇಖ್' ಎಂಬ ಬಿರುದು ಇಟ್ಟಿಕೊಂಡಿದ್ದರು. ಇವರ ಸ್ವರೂಪ, ಉಡುಗೆ, ಸ್ಥಿತಿ ಮುಂತಾದವುಗಳೆಲ್ಲ ಸೈಯ್ಯದರಂತೆ ಇದ್ದವು. ಇವರು ಸೈಯ್ಯದ್, ಮೊಘಲ, ಪಠಾಣ್ ಈ ಮೂರು ಸಮುದಾಯಗಳ ಜೊತೆ ಕೌಟುಂಬಿಕ ಸಂಬಂಧವನ್ನು ಇಟ್ಟುಕೊಂಡಿದ್ದರು. ಶೇಕರು ಎಂದರೆ ನಾಯಕ ಅಥವಾ ಪೂಜ್ಯನೀಯ ನಾಯಕ ಎಂದರ್ಥ.[೧೪] ಇವರು ಮೂಲತಃ ಅರಬ್ಬರಾಗಿದ್ದರು. ಖುರೈಷಿ ಪಂಗಡಕ್ಕೆ ಸೇರಿದವರಾಗಿದ್ದರು. ಪೈಗಂಬರ್ ಖುರೈಷಿ ಪಂಗಡಕ್ಕೆ ಜನಿಸಿದವರಾಗಿದ್ದರು. ಅರೇಬಿಕ್‌ನಲ್ಲಿ ಶೇಕ್ ಎಂದರೆ ನಾಯಕ ಮತ್ತು ಗೌರವಾನ್ವಿತ ವ್ಯಕ್ತಿ ಎಂದರ್ಥ. ಶೇಕರು ಸಹಬಾ ಎಂಬುವರ ಮೂಲದವರಾಗಿದ್ದರು ಎಂದು ಸಹ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅರಬ್‌ನಲ್ಲಿ ಇಸ್ಲಾಂ ಸ್ಥಾಪನೆ ಪೂರ್ವದಲ್ಲಿ ಹಲವಾರು ಸ್ವತಂತ್ರ ಆಡಳಿತದ ಬುಡಕಟ್ಟುಗಳಿದ್ದವು. ಪ್ರತಿಯೊಂದು ಬುಡಕಟ್ಟಿಗೂ ಒಬ್ಬ ಶೇಕ್ ಅಥವಾ ನಾಯಕನಿದ್ದನು. ಶೇಕ್ ಎಂದರೆ ಒಂದು ಗುಂಪಿನ ಅಥವಾ ಬುಡಕಟ್ಟಿನ ನಾಯಕ ಎಂದು ಅರ್ಥ ನೀಡುತ್ತಿತ್ತು. ಅರಬ್‌ನಲ್ಲಿ ಈ ನಾಯಕನನ್ನು ಅವನ ವಂಶ, ವಯಸ್ಸು, ಬೌದ್ಧಿಕತೆ, ಧೈರ್ಯ, ವಿವೇಕ, ಮುಂದಾಳತ್ವ ಗುಣಗಳನ್ನು ಪರಿಶೀಲಿಸಿ ಆ ಬುಡಕಟ್ಟಿನವರು ಆರಿಸುತ್ತಿದ್ದರು. ಆದರೆ ಈ ಆಯ್ಕೆ ವಂಶಪರಂಪರಾಗತವಾಗಿರಲಿಲ್ಲ. ಇವರ ಮುಖ್ಯ ಕರ್ತವ್ಯವೆಂದರೆ ಇತರೆ ಗುಂಪಿನ ಜನರನ್ನು ನಡೆಸುವುದು. ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವ ಕೆಲಸ ಶೇಕ್ ಅವನದಾಗಿತ್ತು. ಇವನ ಕಾರ್ಯ ಸಾಧನೆಯ ಫಲವಾಗಿ ಜಯಗೊಳಿಸಿದ ಅಥವಾ ಕೊಳ್ಳೆ ಹೊಡೆದ ಭಾಗವನ್ನು ಇವನಿಗೆ ಹಂಚುತ್ತಿದ್ದರು.[೧೫] ಈ ಶೇಕರು ಮುಂದೆ ಇಸ್ಲಾಂ ಸ್ಥಾಪನೆ ನಂತರ ಖುರೈಷಿ ಅಥವಾ ಪೈಗಂಬರ್ ಅನುಯಾಯಿಗಳಾಗಿ, ಇಸ್ಲಾಂ ಪ್ರಚಾರದಲ್ಲಿ ಮುಂದಾಳತ್ವವನ್ನು ವಹಿಸಿದರು. ಶೇಕರನ್ನು ಎರಡು ಬಗೆಯಲ್ಲಿ ಗುರುತಿಸಬಹುದು. ಸೂಫಿಯ ಹಿನ್ನೆಲೆಯಲ್ಲಿ ಮತಪ್ರಚಾರ ಮಾಡುವ ವರ್ಗ, ಇನ್ನೊಂದು ಪ್ರಭುತ್ವ ಅಥವಾ ರಾಜಕೀಯ ಹಿನ್ನೆಲೆಯಲ್ಲಿ ಮುಸ್ಲಿಂ ಪ್ರಭುತ್ವ ವಿಸ್ತರಣೆಯಲ್ಲಿ ಸೈನಿಕವರ್ಗ. ಮಲಬಾರ್‌ನಲ್ಲಿ ಇಸ್ಲಾಂ ಆಗಮನದ ವೇಳೆಯಲ್ಲಿ ಶೇಕ್‌ರು ತಮ್ಮ ಪಾತ್ರವನ್ನು ಬೀರಿದರು. ಪೆರುಮಾಳು ಮೇಲೆ ಶೇಕ್‌ರ ಪ್ರಭಾವವಿತ್ತು ಎಂಬುದು ಮುಖ್ಯವಾಗಿದೆ. ತುಹಫತ–ಅಲ್–ಮುಜಾಹಿದ್ದೀನ್‌ನಲ್ಲಿ ಉಲ್ಲೇಖಿಸುವಂತೆ 'ವಿದೇಶಿ ವ್ಯಾಪಾರಸ್ಥರಿಗೆ ಸಂಬಂಧಿಸಿದ ಸಾಕಷ್ಟು ಹಡಗುಗಳು ಬಂದರು ಪಟ್ಟಣಗಳಲ್ಲಿದ್ದವು. ಶೇಕ್‌ನು ಅಲ್ಲಿಯ ಹಡಗೊಂದರ ಮಾಲೀಕನಿಗೆ ತನ್ನನ್ನು ಮತ್ತು ತನ್ನೊಡನಿರುವ ಬಡಜನರ ಗುಂಪನ್ನು ಹಡಗಿನಲ್ಲಿ ಹತ್ತಿಸಿಕೊಂಡು ಹೋಗಲು ವಿನಂತಿಸಿದನು'.[೧೬]

ಭಾರತದಲ್ಲಿ ಶೇಕರು ಉತ್ತರ ಭಾರತದಲ್ಲಿ ಪ್ರಮುಖ ಸೈನಿಕ ವರ್ಗವಾಗಿ ಕಾಣಿಸಿಕೊಂಡರು. ಅಲ್ಲಾವುದ್ದೀನ್ ಖಿಲ್ಜಿ. ಮಹಮ್ಮದ್–ಬಿನ್–ತೊಘಲಕ್ ದಕ್ಷಿಣ ಭಾರತದಲ್ಲಿ ರಾಜ್ಯ ವಿಸ್ತಾರ

ಮಾಡಿದ ನಂತರ ಹಾಗೂ ಬಹಮನಿ ರಾಜ್ಯ ಸ್ಥಾಪನೆ ನಂತರ ಶೇಕ್ ಸಮುದಾಯ ವಿಸ್ತರಿಸಿಕೊಂಡಿತು. ಶೇಕ್ ಸೂಫಿಗಳು ದಕ್ಷಿಣ ಭಾರತದಲ್ಲಿ ಇಸ್ಲಾಂ ಪ್ರಚಾರ ಕಾರ್ಯವನ್ನು ಕೈಗೊಂಡರು. ವಿಜಯನಗರ ರಾಜಧಾನಿಯಲ್ಲಿ ಈ ಸಮುದಾಯವು ನೆಲೆಸಿದ್ದರೆಂಬುದಕ್ಕೆ ಮುಸ್ಲಿಂ ಸಮುದಾಯಗಳ ಸ್ಮಾರಕಾವಶೇಷಗಳು ಸಾಕ್ಷಿಯಾಗಿವೆ. ಕಡ್ಡಿರಾಂಪುರದಲ್ಲಿ ಗೋರಿಕಟ್ಟಡವು ಸೂಫಿ ಸಂತ ಶೇಕ್ ನೂರುಲ್ಲಾಖಾದ್ರಿದಿಂದಾಗಿತ್ತು. ಗೋರಿ ಕಟ್ಟಡಗಳು, ಅಧಿಕಾರಿಗಳ ಸಮಾಧಿಗಳ ಅಧ್ಯಯನ ಕೈಗೊಂಡಾಗ ಶೇಕರ ಸಮಾಧಿಗಳು ಸಹ ಕಂಡುಬರುತ್ತವೆ.

೪.೧.೨. ಕರಾವಳಿ ಪ್ರದೇಶದ ಮುಸ್ಲಿಂ ಸಮುದಾಯಗಳು

ಬ್ಯಾರಿ ಸಮುದಾಯ

ಬ್ಯಾರಿ ಸಮುದಾಯವು ವ್ಯಾಪಾರ ಸಮುದಾಯವಾಗಿತ್ತು. ಈ ಸಮುದಾಯ ಮೂಲತಃ ವ್ಯಾಪಾರ ವರ್ಗದಲ್ಲಿ ಗುರುತಿಸಿಕೊಂಡಿತ್ತು. ಬ್ಯಾರಿ ಎಂಬ ಪದವು ತುಳು ಪದವಾದ ಬ್ಯಾರ ಎಂದಾಗಿದ್ದು, ಇದರ ಅರ್ಥ ವ್ಯಾಪಾರ ಮಾಡುವವನು ಎಂದಾಗುತ್ತದೆ. ನೂರಿ ಎಂಬ ಬರಹಗಾರನ ಪ್ರಕಾರ ತುಳು ಪಾಡ್ದನಗಳಲ್ಲಿ ಬ್ಯಾರಿ ಸಮುದಾಯದ ಬಗ್ಗೆ ಉಲ್ಲೇಖ ಕಂಡುಬರುತ್ತದೆ. ಬೊಬ್ಬರ್ಯ ಎಂಬ ಪಾಡ್ದನ ದಕ್ಷಿಣ ಕನ್ನಡದಲ್ಲಿ ಮುಸ್ಲಿಂ ವ್ಯಾಪಾರ ಸಮುದಾಯವು ನೆಲೆಸಿತ್ತು ಎಂಬ ಮಾಹಿತಿ ಇದೆ. ಪಾಡ್ದನಗಳಲ್ಲಿ ಮುಸ್ಲಿಮರು ಕಲ್ಲು, ತೆಂಗಿನ ನಾರು ಮತ್ತು ಇತರ ಸರಕುಗಳ ವ್ಯಾಪಾರ ನಡೆಸುತ್ತಿದ್ದರು ಎನ್ನುವ ಮಾಹಿತಿ ಸಿಗುತ್ತದೆ. ಇವರು ಸರಕುಗಳ ವ್ಯಾಪಾರಸ್ಥರಾಗಿ ಕಂಡುಬಂದಿದ್ದರಿಂದ ತುಳು ಭಾಷೆಯಲ್ಲಿ ಬ್ಯಾರಿ ಎಂಬ ಪದ ರೂಢಿಗೆ ಬಂದಿತು. 'ಬ್ಯಾರ' ಮಾಡುವವ ಅಂದರೆ ವ್ಯಾಪಾರಿ ಎಂದರ್ಥ ನೀಡುತ್ತದೆ.[೧೭] ಹಾಗಾಗಿ ಇಂದಿಗೂ ತುಳುನಾಡಿನ ಮುಸ್ಲಿಮರು ಬ್ಯಾರಿ ಎಂದು ಗುರುತಿಸಿಕೊಂಡಿದ್ದಾರೆ.

ಬ್ಯಾರಿಗಳ ಮೂಲದ ಕುರಿತಂತೆ ಬೊಬ್ಬರ್ಯ ಪಾಡ್ದನದ ಉಲ್ಲೇಖಗಳು ಅವರ ಚರಿತ್ರೆಯನ್ನು ತಿಳಿಯಲು ಸಹಾಯಕವಾಗಿದೆ. ಮುರವೆ ಬ್ಯಾರಿ, ಅವರ ಹೆಂಡತಿ ಫಾತಿಮ ಮತ್ತು ಮಕ್ಕಳು ಕಾಯಿರು, ಕಲಸಪ್ಪೇ ಗೆಂಡ, ಬೊಂಬಯ, ಸಿಕಿರಿಸುನಿ, ಸುಮುನ್ನಿ ಅನಂತ, ಸರಪೊಲಿ ಮತ್ತು ಸುನಜನನಾಯಕ ಎಂಬುವವರ ಬಗೆಗೆ ವಿವರಗಳು ಬೊಬ್ಬರ್ಯ ಪಾಡ್ದನದಲ್ಲಿ ಕಂಡುಬರುತ್ತವೆ. ಕರಾವಳಿ ಕರ್ನಾಟಕ ಭಾಗದಲ್ಲಿ ಬ್ಯಾರಿ ಸಮುದಾಯ ಅಧಿಕವಾಗಿ ಕಂಡುಬರುತ್ತದೆ. ವಿದ್ವಾಂಸರಾದ ಇಚಲನಗೂಡ್ ಹೇಳುವಂತೆ ಬ್ಯಾರಿ ಪದವು ಅರೇಬಿಕ್ ಪದವಾದ ಬಹಾರಿ ಎಂಬುದಾಗಿದ್ದು, ಸಮುದ್ರ ಎಂದರ್ಥ ನೀಡುತ್ತದೆ. ಸಮುದ್ರದಲ್ಲಿ ಕೆಲಸವನ್ನು ಮಾಡುವವರಿಗೆ ಬಹಾರಿ, ಬ್ಯಾರಿ ಎಂದು ಕರೆಯಲಾಯಿತು. ಇದಕ್ಕೆ ನಾವಿಕರು ಎಂಬ ಇನ್ನೊಂದು ಅರ್ಥವಿದೆಯೆಂದು ಹಲವು ವಿದ್ವಾಂಸರು ಅಭಿಪ್ರಾಯವನ್ನು ಪಟ್ಟಿದ್ದಾರೆ. ಬ್ಯಾರಿ ಪದವು ತುಳು ಪದವಾಗಿದ್ದು, ಇದು ವ್ಯಾಪಾರ ಎಂಬ ಅರ್ಥ ನೀಡುತ್ತದೆ. ಬಿ.ಎ. ಸಾಲೆತ್ತೋರ್ ಅವರ ಪ್ರಕಾರ, 'ತುಳು ಮಾತೃಗಳು ಹಾಗೂ ಅರಬ್ ತಂದೆಗೆ ಜನಿಸಿದ ಮಕ್ಕಳೇ ಬ್ಯಾರಿಯಾಗಿದ್ದಾರೆ.'[೧೮] ಹಾಗಾಗಿ ಈ ಬ್ಯಾರಿಗಳು ಮೂಲತಃ

ವ್ಯಾಪಾರ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇವರು ಅರಬ್ ಮೂಲದಿಂದ ಬಂದು ಸ್ಥಳೀಯ ಹೆಣ್ಣುಮಕ್ಕಳೊಂದಿಗೆ ವೈವಾಹಿಕ ಸಂಬಂಧವನ್ನು ಬೆಳೆಸಿದರು. ಮುಂದೆ ಇವರು ಸ್ಥಳೀಯವಾಗಿ ಬ್ಯಾರಿಗಳು ಎಂದು ಗುರುತಿಸಿಕೊಂಡರು. ಆರಂಭದಲ್ಲಿ ಬ್ಯಾರಿ ಸಮುದಾಯ ಮುಖ್ಯವಾಗಿ ದಕ್ಷಿಣ ಕನ್ನಡ ಭಾಗದಲ್ಲಿ ನೆಲೆ ನಿಂತಿತು. ಇವರು ಮುಖ್ಯವಾಗಿ ವ್ಯಾಪಾರ ವೃತ್ತಿಯನ್ನು ಮಾಡುತ್ತಿದ್ದರು. ಕ್ರಿ.ಶ. ೬ನೇ ಶತಮಾನದಲ್ಲಿ ನೆಲೆ ನಿಂತ ಈ ಸಮುದಾಯವು ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಹೀಗೆ ಇವರು ಮೂಲತಃ ವ್ಯಾಪಾರ ವೃತ್ತಿಯನ್ನು ಹೊಂದಿದ್ದು ವಿಜಯನಗರ ಕಾಲಾವಧಿಯಲ್ಲಿ ಕರಾವಳಿ ಭಾಗಗಳಲ್ಲಿ ನೆಲೆಸಿದ್ದರು.

ನವಾಯತರು

ಕರಾವಳಿ ಕರ್ನಾಟಕ ತೀರಪ್ರದೇಶದಲ್ಲಿ ಪ್ರಮುಖವಾಗಿ ಕಂಡುಬರುವ ಸಮುದಾಯವೆಂದರೆ ನವಾಯತರು. ನವಾಯತ ಪದವನ್ನು ವಿವಿಧ ರೀತಿಯಲ್ಲಿ ಕರೆಯಲಾಗುತ್ತದೆ. ನಿವಾಯತ, ನಾವಯತ್, ನಾತ, ನೈತಿಯ, ನೊವೊಯತ್, ನೈತಿಯ, ನೈತೆಯನಿ ಹಾಗೂ ನಿವೊಯತ್ ಎನ್ನಲಾಗುತ್ತದೆ. ಅರೇಬಿಕ್, ಪರ್ಶಿಯನ್ ಮತ್ತು ಉರ್ದು ಭಾಷೆಗಳಲ್ಲಿ ವಿವಿಧ ಪ್ರಕಾರವಾಗಿ ಉಚ್ಚರಿಸಲಾಗುತ್ತದೆ. ಅರೇಬಿಕ್‌ನಲ್ಲಿ ನಾಯತ್ ಅಥವಾ ನವಾಯತ್ ಎಂದು ಉರ್ದುವಿನಲ್ಲಿ ನಾಯತ್ ಮತ್ತು ನವಾಯತ್ ಎಂದು ಸಹ ಕರೆಯಲಾಗುತ್ತದೆ.[೧೯]

ನವಾಯತರ ಮೂಲ ಮತ್ತು ಪದದ ಅರ್ಥಕ್ಕೆ ಸಂಬಂಧಿಸಿದಂತೆ ಚರಿತ್ರೆಕಾರರು ವಿವಿಧ ಅರ್ಥವನ್ನು ಅಥವಾ ವಿವರವನ್ನು ನೀಡುತ್ತಾರೆ. ಇವುಗಳಿಂದಾಗಿ ನವಾಯತರ ಮೂಲ ಮತ್ತು ಅರ್ಥವನ್ನು ತಿಳಿಯಲು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಒಂದು ಅರಬ್ ಮೂಲದ ನವಾಯತರು ಹಾಗೂ ಇನ್ನೊಂದು ಭಾರತದ ಮೂಲದವರು.

ಅರಬ್ ಮತ್ತು ಪರ್ಶಿಯನ್ ಬರಹಗಾರರು ನವಾಯತರ ಮೂಲದ ಬಗ್ಗೆ ತಿಳಿಸುತ್ತಾ ಅವರು ಅರಬ್‌ದಿಂದ ಬಂದವರು ಎಂದಿದ್ದಾರೆ. ತರುಜಕ್–ಐ–ವಾಲ ಜಾಹಿ ಬರಹನ್ ಖಾನ್ ಹಾನ್‌ದಿ ತಿಳಿಸುವಂತೆ ನವಾಯತರು ಅರಬ್ಬರು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ಅರಬ್ ಭಾಷೆಯಲ್ಲಿ ನಾಯತ್ ಎಂದರೆ ಬೆನ್ನೆಲೆಬು ಎಂದರ್ಥ. ಅದು ಒಗ್ಗಟ್ಟನ್ನು ಪ್ರತಿಬಿಂಬಿಸುತ್ತದೆ. ಈ ಸಮುದಾಯವು ಒಬ್ಬ ನಾಯಕನನ್ನು ಒಳಗೊಂಡಂತೆ ಹಲವು ಸದಸ್ಯರನ್ನು ಪ್ರತಿಬಿಂಬಿಸುವ ಗುಂಪನ್ನು ಸೂಚಿಸುತ್ತದೆ. ಖಷಪುಲ್–ಅನ್ಸಾಬನ ಕರ್ತೃ ಆಲಮಾ ಜಲಾಲುದ್ದೀನ್ ಹೇಳುವಂತೆ ಇವರು ಅರಬ್‌ನ ಅಬ್ದುಲ್ಲಾ ವಾಯತ್‌ನ ವಂಶಸ್ಥರು. ಮೊದಲು ಅವರನ್ನು ಬಾನವಾಯತ್ ಎಂದು ಕರೆಯಲಾಗುತ್ತಿತ್ತು. ನಂತರ ಅವರ ಮಕ್ಕಳಿಗೆ ವಾಯತ(wayat) ಎಂದು ಕರೆಯಲಾಯಿತು. ಕಾಲಾಂತರದಲ್ಲಿ ನವಾಯತ್ ಎಂದು ಬದಲಾಯಿತು. ಇವರು ಮದೀನಾವನ್ನು ಬಿಟ್ಟು ಬಾಗ್ದಾದಿನಿಂದ ಮೂರು ದಿನಗಳವರೆಗಿನ ಪ್ರಯಾಣದ ನಂತರ ಕಂಡುಬರುವ ವಾಯತ್

ಸ್ಥಳದಲ್ಲಿ ನೆಲೆ ನಿಂತರು. ಆದರೆ ಈ ಸ್ಥಳದಿಂದ ವಾಯತ್ ಎಂಬ ಹೆಸರು ಆ ವಂಶಸ್ಥರಿಗೆ ಬಂದಿತು ಎನ್ನುವುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ನಫತಾ-ಉಲ್-ಅಮ್ಬಾರಿಯಾದ ಲೇಖಕನಾದ ಮೌಲಾನಾ ಮಹಮ್ಮದ್ ಬಾಖರ್ ಆಗ ತಿಳಿಸುವಂತೆ ನವಾಯತ್ ಸಮುದಾಯದ ಮೂಲಸ್ಥರು ಅಥವಾ ಪೂರ್ವಿಜರು ನಾಯತ್‌ರಾಗಿದ್ದರು. ನಾಯತನು ಪೈಗಂಬರ್ ಅವರ ಮೂಲದ ನಜಾರ್-ಬಿನ್-ಕನ್ನಾನನ ಮಗನಾಗಿದ್ದನು ಎಂದು ಉಲ್ಲೇಖಿಸಲಾಗಿದೆ. ಜಫ್ಫಾರ್ ಷರೀಫ್ ಹೇಳುವಂತೆ ನವ-ಆಯ್-ತೆ ಸಮುದಾಯವು ಅರಬ್ ಮೂಲದವರಾಗಿದ್ದು, ಅವರು ಹೊಸದಾಗಿ ಬಂದವರು ಎಂದರ್ಥ.[೨೦]

ಖಾಮಸ್‌ನ ಅರೇಬಿಕ್ ಡಿಕ್ಷನರಿಯಲ್ಲಿ ನವಾಯತರು ಒಂದು ಬುಡಕಟ್ಟು ನಾವಿಕರಾಗಿದ್ದು, ಅವರೇ ನವ್ವಾತಿ ಅನಿಸಿಕೊಂಡರು. ಈ ಪದದ ಬಹುವಚನ ಪದ ನೂತಿ. ಇದರ ಅರ್ಥ ನಾವಿಕ ಎಂದಾಗುತ್ತದೆ. ಸೈಯದ್ ಸುಲೇಮಾನ್ ನಾದವಿ ತಿಳಿಸುವಂತೆ ಅರಬ್ ಸಮುದ್ರಯಾನದ ನಾವಿಕರೆ ನೂತಿ ಮತ್ತು ನವ್ವಾತ್ ಎಂದು ಗುರುತಿಸಿಕೊಂಡವರು. ಅರಬ್ ನಾವಿಕರಾದ ನವ್ವಾತ್ ದಕ್ಷಿಣ ಭಾರತದಲ್ಲಿ ಬಂದು ನೆಲೆಸಿದರು.[೨೧]

ಈ ಮೇಲಿನ ಹೇಳಿಕೆಗಳನ್ನು ಗಮನಿಸಿದಾಗ ನವಾಯತರು ಮೂಲತಃ ಅರಬ್‌ದಿಂದ ಭಾರತಕ್ಕೆ ಬಂದು ನೆಲೆಸಿದರು. ಇವರು ಹೊರದೇಶದಿಂದ ಬಂದು ತಮ್ಮ ನೆಲೆಯನ್ನು ಕಟ್ಟಿ ಕೊಂಡಿದ್ದರಿಂದ ಇವರಿಗೆ ಹೊಸದಾಗಿ ಬಂದವರು ಎನ್ನಲಾಗುತ್ತದೆ. ವಿಲ್ಕ್ಸ್ ಹೇಳುವಂತೆ ನವಾಯತ ಪದವು ಸಾಮಾನ್ಯವಾಗಿ ಹಿಂದೂಸ್ತಾನ ಹಾಗೂ ಮರಾಠಿ ಪದವಾಗಿದ್ದು ಹೊಸದಾಗಿ ಬಂದವರು ಎಂದು ತಿಳಿಸಿದ್ದಾರೆ. ಸಂಸ್ಕೃತ ಭಾಷೆಯ ಪದವಾದ ನವಾಯತವನ್ನು ಬಿಡಿಸಿದಾಗ ನಾವ ಅಂದರೆ ಹೊಸ ಮತ್ತು ಆಯತ್ ಅಂದರೆ ಬಂದವರು. ಅಂದರೆ 'ಹೊಸದಾಗಿ ಬಂದವರು' ಎಂದರ್ಥವಾಗುತ್ತದೆ. ಈ ನವಾಯತ ಸಮುದಾಯದ ಬಗ್ಗೆ ಇನ್ನಿತರ ವಿದ್ವಾಂಸರು ಅಭಿಪ್ರಾಯ ಪಡುವಂತೆ ದೋಣಿಯಿಂದ ಬಂದವರಾಗಿದ್ದು, ನಾವ ಅಥವಾ ನಾವ್ ಎಂದರೆ ದೋಣಿ ಎಂದು ಸಂಸ್ಕೃತ ಭಾಷೆಯ ಅರ್ಥ ಕೊಡುತ್ತದೆ.

ನವಾಯತ ಎಂಬ ಪದವು 'ನವ' ಎಂಬ ಕೊಂಕಣಿ ಭಾಷೆಯದಾಗಿದ್ದು ಸಂಸ್ಕೃತದಲ್ಲಿ 'ನವ' ಅಂದರೆ 'ಹೊಸ' ಎಂದು ಹಾಗೂ ಹೊಸದಾಗಿ ಮತಾಂತರ ಹೊಂದಿದವರು ಎನ್ನಲಾಗುತ್ತದೆ. ತಾರಿಖ್-ಉನ್-ನವಾಯತ್ ಕೃತಿಯಲ್ಲಿ ಉಲ್ಲೇಖಿಸುವಂತೆ ಮಲಬಾರ್ ಭಾಷೆಯಲ್ಲಿ ನವಾಯತ ಅರ್ಥ ದೊರೆ ಅಥವಾ ನಾಯಕ ಎಂದಾಗುತ್ತದೆ.[೨೨]

ಮೌಲಾನ ಮಹಮ್ಮದ್ ಬಖರ್ ಆಗ ಅವರು ನಾಯತ್ ಹೆಸರನ್ನು ಅರ್ಥೈಸುತ್ತಾ ಈ ರೀತಿ ತಿಳಿಸಿದ್ದಾರೆ. ನಾಯತ್‌ನು ನಾಜಿರ್-ಬಿನ್-ಕನ್ನಾನನ ಮಗನಾಗಿದ್ದು, ನಾಜಿರ್‌ನು ಪೈಗಂಬರ್‌ರ ಕಾಲಕ್ಕೆ ಸೇರಿದವನಾಗಿದ್ದನು. ಇನ್ನೊಂದು ಹೇಳಿಕೆ ಪ್ರಕಾರ ಆಲಮಾ ಜಲಾಲುದ್ದೀನ್ ಸಯೂತಿ ಅಬ್ದುಲ್ಲಾ ವಾಯತ್ ಹೆಸರಿನಿಂದ ಕಂಡುಬಂದಿದ್ದು, ಇವರು ಪೈಗಂಬರ್‌ರ ನಂತರದ ಕಾಲಾವಧಿಯಲ್ಲಿ

ಜೀವಿಸಿದವರು ಎನ್ನಲಾಗಿದೆ. ಅಬ್ದುಲ್ಲಾ ವಾಯತ್‌ನು ನಾಯತ್‌ನ ವಂಶಸ್ಥರಾಗಿದ್ದರೆ ಅವರ ಬುಡಕಟ್ಟು ಪಂಗಡ ನಾಯತ್ ಆಗುತ್ತಿತ್ತೇ ಹೊರತು ವಾಯತ್ ಆಗುತ್ತಿರಲಿಲ್ಲ ಎಂದು ಬಾಕರ್ ಆಗ ಮತ್ತು ಸಯೂತಿ ಅವರು ವಿಮರ್ಶಿಸಿದ್ದಾರೆ.

ತಾರಿಕ್-ಉನ್-ನವಾಯತ್ ವಿದ್ವಾಂಸರು ತಿಳಿಸುವಂತೆ ನವಾಯತ್ ಸಮುದಾಯಕ್ಕೆ ಅರಬ್‌ನ ಮೂರು ಗುಂಪುಗಳು ಮೂಲವಾಗಿ ಕಂಡುಬರುತ್ತದೆ.[೨೩] ಪೈಗಂಬರ್ ಅವರ ವಂಶಕ್ಕೆ ಸೇರಿದ್ದ ನಜಾರ್-ಬಿನ್-ಕನ್ನಾನ ನವಾಯತ್ ಸಮುದಾಯಕ್ಕೆ ಸೇರಿದವನು. ಈ ಗುಂಪಿನ ಸದಸ್ಯ ನಾಯತ್‌ನಾಗಿದ್ದು ನಜಾರ್-ಬಿನ್-ಕನ್ನಾನನ ಮಗನಾಗಿದ್ದನು. ಅವರು ಬಾನ್-ಉನ್-ನಾಜರ್ ಅಥವಾ ನಾಜರ್‌ರ ಮಕ್ಕಳು ಎನಿಸಿಕೊಂಡರು. ದ್ವಿತೀಯ ಗುಂಪು ಮಾಲಿಕ್‌ನ ವಂಶಕ್ಕೆ ಸೇರಿದ್ದಾಗಿದ್ದು, ನಾಜರ್‌ನ ಮಗನಾಗಿದ್ದು, ಇವನಿಗೆ ಷೇಕ್ ಖುರೈಷಿ ಎಂದು ಕರೆಯುತ್ತಿದ್ದರು. ಮೂರನೇ ಗುಂಪು ಫಾತಿಮಾ ಜುಹರಾನ ವಂಶಸ್ಥರಾಗಿದ್ದು, ಫಾತಿಮಾ ಪೈಗಂಬರ್ ಅವರ ಪುತ್ರಿ, ಹಾಗಾಗಿ ನಾಯತನು ನಾಜರ್-ಬಿನ್-ಕನ್ನಾನನ ಮಗನಾಗಿದ್ದು, ಈ ಗುಂಪುಗಳು ಸೇರಿಕೊಂಡವು. ಹಾಗಾಗಿ ನವಾಯತರು ಪೈಗಂಬರ್‌ರ ಬುಡಕಟ್ಟಿಗೆ ಸೇರಿದವರಾಗಿದ್ದಾರೆ.

ಈ ಮೇಲಿನ ವ್ಯಾಖ್ಯಾನಗಳನ್ನು ಗಮನಿಸಿದಾಗ ನವಾಯತರು ಮೂಲತಃ ಅರಬ್ಬರಾಗಿದ್ದು, ಪೈಗಂಬರ್ ಅವರ ಬುಡಕಟ್ಟಾದ ಖುರೈಷಿ ಪಂಗಡಕ್ಕೆ ಸೇರಿದವರಾಗಿದ್ದರು. ಈ ಪಂಗಡದ ಒಂದು ಗುಂಪು ಭಾರತಕ್ಕೆ ಪ್ರವೇಶ ಪಡೆಯಿತು. ಭಾರತದ ಸ್ಥಳೀಯರು ಇವರಿಗೆ ಹೊರಗಿನಿಂದ ಬಂದಿದ್ದರಿಂದಾಗಿ ಹೊಸದಾಗಿ ದೋಣಿಯಲ್ಲಿ ಬಂದವರು ಎಂದು ಕರೆದರು. ಹೀಗೆ ಇವರು ನವಾಯತರಾಗಿ ಗುರುತಿಸಿಕೊಂಡರು. ಆರಂಭಿಕ ಹಂತದಲ್ಲಿ ಹೊಸ ಜನಸಮುದಾಯವಾಗಿ ನವಾಯತ ಎಂಬ ಹೆಸರಿನಲ್ಲಿ ಗುರುತಿಸಿಕೊಂಡ ಈ ಸಮುದಾಯವು ಕಾಲಾಂತರದಲ್ಲಿ ವಿವಿಧ ಸಮುದಾಯಗಳ ರೂಪದಲ್ಲಿ ವಿಭಜನೆಯಾಯಿತು. ಅದು ಮುಂದೆ ಅರಬ್ ಮೂಲದ ಅಥವಾ ವಿದೇಶಿ ಮೂಲದ ಸಮುದಾಯ ಹಾಗೂ ಸ್ಥಳೀಯ ರೂಪದ ಸಮುದಾಯವಾಗಿ ಕಂಡುಬಂದಿತು.

ವಿಲ್ಕ್ಸ್ ಹೇಳುವಂತೆ ನವಾಯತರು ಹಾಷೆಮ್ ಮನೆತನಕ್ಕೆ ಸೇರಿದವರು. ಇವರು ಕ್ರಿ.ಶ. ೮ನೇ ಶತಮಾನದಲ್ಲಿ ಅರೇಬಿಯಾದ ತೀರದಲ್ಲಿ ಖಲೀಫ್ ಅಬ್ದುಲ್ಲಾ ಮಾಲಿಕ್ ಬಿನ್ ಮಾರವಾನನ ಇರಾಕ್‌ನ ಗವರ್ನರ್‌ನಾಗಿದ್ದ ಹಜಾಜ್-ಬಿನ್-ಯೂಸುಫ್‌ನ ಕಿರುಕುಳಕ್ಕೆ ಒಳಪಟ್ಟಿದ್ದರಿಂದ ಅರೇಬಿಯಾವನ್ನು ತೊರೆದರು. ಈ ನವಾಯತರು ಒಂದೇ ಬುಡಕಟ್ಟಿಗೆ ಸೇರಿದವರೆಂದು ಸಾದತ್‌ನಾಮದಲ್ಲಿ ಉಲ್ಲೇಖವಿದೆ. ನವಾಯತ ಸಮುದಾಯದ ಪೂರ್ವಜರಲ್ಲಿ ಕೆಲವರು ಅರೇಬಿಯಾವನ್ನು ಬಿಟ್ಟು ಬಂದವರಾಗಿದ್ದರು. ಮುಸ್ಲಿಂ ಬರಹಗಾರರ ದಾಖಲೆಗಳು ತಿಳಿಸುವಂತೆ ಖಲೀಫನಿಗೂ ಹಾಗೂ ಅಬ್ದುಲ್ಲಾ ನಡುವೆ ವಾದ-ವಿವಾದ ನಡೆದವು. ಅದರಲ್ಲಿ ಅಬ್ದುಲ್ಲಾ ಮೇಲುಗೈ ಸಾಧಿಸಿದನು. ಪರಿಣಾಮವಾಗಿ ಅಬ್ದುಲ್ಲಾನಿಗೆ ಮದೀನವನ್ನು ಬಿಡುವಂತೆ ಆದೇಶ ಮಾಡಲಾಯಿತು. ಹಾಗಾಗಿ ಮದೀನವನ್ನು ಬಿಟ್ಟು ಬಾಗ್ದಾದಿಗೆ ಬಂದು ವಾಯತ ಎಂಬ

ಹಳ್ಳಿಯಲ್ಲಿ ವಾಸವಾದನು. ಈ ಹಳ್ಳಿಯಿಂದ ಬಂದ ಗುಂಪನ್ನು ವಾಯತ ಎನ್ನಲಾಯಿತು. ಅದು ನಂತರದಲ್ಲಿ ನವಾಯತರು ಎಂಬ ರೂಪವನ್ನು ಪಡೆಯಿತು ಎಂಬ ಅಭಿಪ್ರಾಯವನ್ನು ಸಹ ಇಲ್ಲಿ ವ್ಯಕ್ತಪಡಿಸಲಾಗಿದೆ.

ಈ ನವಾಯತ ಸಮುದಾಯವು ಮಲಬಾರ್ ತೀರಪ್ರದೇಶದಲ್ಲಿ ಬಂದು ನೆಲೆಸಿದ್ದು, ಇವರು ವರ್ತಕರಾಗಿ ಹಾಗೂ ಸೈನಿಕರಾಗಿ ಹಲವು ರಾಜಮನೆತನಗಳ ಅವಧಿಯಲ್ಲಿ ಕಾಣಿಸಿ ಕೊಂಡರು. ಇವರು ದಕ್ಷಿಣ ಭಾರತದ ಆಂಧ್ರಪ್ರದೇಶ ಹಾಗೂ ಕರ್ನಾಟಕದ ಭಟ್ಕಳದಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬಂದರು. ಈ ಹಿನ್ನೆಲೆಯಲ್ಲಿ ಇವರನ್ನು ನವಾಯತ ಅಥವಾ ಭಟ್ಕಳಿ ಎಂತಲೂ ಕರೆಯಲಾಗುತ್ತದೆ. ಕ್ರಿ.ಶ. ೧೫ನೇ ಶತಮಾನದಲ್ಲಿ ನವಾಯತರು ಬಟ್ಟೆ ವ್ಯಾಪಾರವನ್ನು ಕೈಗೊಂಡಿದ್ದರು. ಹಾಗಾಗಿ ವಿಜಯನಗರ ಆಳ್ವಿಕೆ ಸಂದರ್ಭದಲ್ಲಿ ಈ ಸಮುದಾಯವು ಸ್ಥಳೀಯ ಅದರಲ್ಲೂ ಕರಾವಳಿ ಪ್ರದೇಶಗಳಲ್ಲಿ ಸ್ಥಳೀಯ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರು. ನವಾಯತ ಸಮುದಾಯಗಳಲ್ಲಿ ಮೂರು ಒಳಪಂಗಡಗಳು ಕಂಡುಬರುತ್ತವೆ. ೧. ಭಟ್ಕಳಿ ಅಥವಾ ಕೆನರಾದ ನವಾಯತರು, ೨. ದಖ್ಖನಿ ನವಾಯತರು, ೩. ಕೊಂಕಣಿ ಮುಸ್ಲಿಮರು[೨೪]

ಸಿದ್ಧಿಗಳು ಅಥವಾ ಹಬಷಿಯರು

ಇವರ ಮೂಲ ನೆಲೆಯು ಆಫ್ರಿಕವಾಗಿದ್ದು, ನೀಗ್ರೊ ಜನಾಂಗಕ್ಕೆ ಸೇರಿದ ಬುಡಕಟ್ಟು ಸಮುದಾಯವಾಗಿದೆ. ಆಫ್ರಿಕಾದ ಜಾಂಜಿಬಾರ್ ಎಂಬ ದ್ವೀಪದಲ್ಲಿ ಒಬ್ಬ ಸುಲ್ತಾನ ಆಳುತ್ತಿದ್ದ. ಆಫ್ರಿಕಾ ಖಂಡದಲ್ಲಿ ಎಲ್ಲ ಅನಾಚಾರ, ದೌರ್ಜನ್ಯ ಮುಂತಾದವುಗಳಿಗೆ ಆಗ ಜಾಂಜಿಬಾರ್ ತವರುಮನೆಯಾಗಿತ್ತು. ಅರಬ್ ವರ್ತಕರು ನೀಡುವ ಹೆಂಡ ಮತ್ತು ಆಧುನಿಕ ವಸ್ತುಗಳ ಸಲುವಾಗಿ ದೃಢಕಾಯರಾದ ಸಿದ್ಧಿಯರನ್ನು ಗುಲಾಮರನ್ನಾಗಿ ಎಳೆದು ತಂದು ವಿವಿಧ ಪ್ರದೇಶಗಳಲ್ಲಿ ಬಹಿರಂಗವಾಗಿ ಮಾರಾಟ ಮಾಡುತ್ತಿದ್ದರು. ಸಿದ್ಧಿಯರು ಭಾರತೀಯ ಸಮಾಜಕ್ಕೆ ಗುಲಾಮರಾಗಿ ಪರಿಚಯವಾದರು. ಅರಬ್ಬರು ತಮ್ಮ ವ್ಯಾಪಾರ ವ್ಯವಹಾರದ ಸರಕುಗಳ ಜೊತೆಗೆ ಸಿದ್ಧಿಯರನ್ನು ಗುಲಾಮರನ್ನಾಗಿ ಮಾಡಿಕೊಂಡು ಭಾರತದಲ್ಲಿ ಮಾರುತ್ತಿದ್ದರು.[೨೫] ಆಫ್ರಿಕಾದ ಅರಣ್ಯಪ್ರದೇಶದಲ್ಲಿ ವಾಸವಾಗಿದ್ದ ಇವರನ್ನು ಮೊದಲಿಗೆ ಅರಬ್ಬರು, ಆನಂತರದಲ್ಲಿ ಪೋರ್ಚುಗೀಸರು ಹಿಡಿದು ದಕ್ಷಿಣ ಭಾರತದ ತೀರಪ್ರದೇಶದಲ್ಲಿ ತಂದು, ಗುಲಾಮರಾಗಿ ಮಾರಾಟ ಮಾಡುತ್ತಿದ್ದರು.[೨೬]

ಈ ಸಮುದಾಯವು ಹಿಂದೂ, ಕ್ರಿಶ್ಚಿಯನ್ ಮತ್ತು ಮುಸ್ಲಿಂ ಧರ್ಮವನ್ನು ಸ್ವೀಕರಿಸಿದ್ದರಿಂದ, ಮೂರು ಧರ್ಮದಲ್ಲಿಯೂ ಇವರು ಕಂಡುಬರುತ್ತಾರೆ. ಸಿದ್ಧಿ ಸಮುದಾಯ(ಮುಸ್ಲಿಂ) ಉತ್ತರ ಕನ್ನಡ ತೀರಪ್ರದೇಶದಲ್ಲಿ ಅತಿ ಹೆಚ್ಚಾಗಿ ಕಂಡುಬರುತ್ತದೆ.

ಆಫ್ರಿಕಾದ ಸಿದ್ಧಿಗಳನ್ನು ಕಾಂಗೋ, ಬೆಜಾ ಮುಂತಾದ ಮೂಲದಿಂದ ತಂದು ಅರಬ್ಬರು ಮತ್ತು ಪೋರ್ಚುಗೀಸರು ಭಾರತದಲ್ಲಿ ಮಾರುತ್ತಿದ್ದರು. ಹಾಗಾಗಿ ಸಿದ್ಧಿಗಳು **ಬೇಜಾ** ಎಂಬ ಗುಂಪಿನವರು ಆಗಿದ್ದರು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಸಿದ್ಧಿ ಎಂಬ ಹೆಸರು 'ಸಿದಿ'

ಎಂಬುದರಿಂದ ಬಂದಿರಬಹುದು. ಹರ್ಬರ್ಟ್ ರಿಸ್ಲೇ ಎಂಬ ವಿದ್ವಾಂಸ ಸಿದ್ಧಿ ಎಂದರೆ ಕೂಲಿಕಾರ ಎಂದು ಹೇಳಿದ್ದಾನೆ. ಇದಲ್ಲದೆ ಸಿದ್ಧಿವಾಸ ಎಂಬ ತಮ್ಮ ಮೂಲದೇವತೆಯಿಂದ ಈ ಹೆಸರು ಬಂದಿತೆಂಬುದು ಸಿದ್ಧಿ ಜನರ ನಂಬಿಕೆಯಾಗಿದೆ. ಭಾರತದಲ್ಲಿ ಸಾಹೇಬ್ ಎಂದು ಕರೆಯುವಂತೆ ಉತ್ತರ ಆಫ್ರಿಕಾದಲ್ಲಿ ಸಿದ್ಧಿಗಳೆಂದು ಕರೆಯಲ್ಪಡುತ್ತಾರೆ.[೨೭] ಸಿದ್ಧಿಯರನ್ನು ಪಾಶ್ಚಾತ್ಯರು ಸಿದಿ ಎಂದು ಕರೆಯುತ್ತಾರೆ. ಸಿದಿ ಎಂಬ ಪದವು ನೀಗ್ರೋ ಪದಕ್ಕೆ ಪರ್ಯಾಯ ಪದ. ಎನ್.ಆರ್. ನಾಯಕರು ಹೇಳುವಂತೆ 'ಸಯೀದ್' ಎಂದರೆ 'ಸರ' ಎನ್ನುವ ಪದದಂತೆ ಗೌರವಸೂಚಕ ಪದವಾಗಿದೆ. ಆದರೂ ಇದರ ಮೂಲ ಪದದ ಬಗೆಗಿನ ಉಲ್ಲೇಖಗಳು ಸ್ಪಷ್ಟವಾದಂತಹ ನಿಲುವುಗಳು ಕಂಡುಬರುವುದಿಲ್ಲ.

ಸಿದ್ಧಿಗಳಿಗೆ ಹಬಷಿಗಳೆಂದು ಕರೆಯುತ್ತಾರೆ. ಮಹಮ್ಮದ್ ಪೈಗಂಬರ್ ಅವರ ಗುಲಾಮನಾದ ಆಫ್ರಿಕಾದ ಕಪ್ಪು ವ್ಯಕ್ತಿಯಾದ ಬಿಲಾಲ್-ಇಬನ್-ರಬಹ ಎಂಬ ವ್ಯಕ್ತಿಯು ಇಸ್ಲಾಂ ಸ್ಥಾಪನೆ ನಂತರ ಪ್ರಾರ್ಥನೆ ಸಲ್ಲಿಸಲು ಮೊದಲ ಬಾರಿಗೆ ಆಜಾನ(Azan)ನ್ನು ಕೂಗಿದ್ದನು. ಆಫ್ರೋ-ಇಂಡಿಯನ್ ಎಂತಲೇ ಕರೆಯಲಾಗುವ ಸಿದ್ಧಿಗಳು ಮೂಲತಃ ಇಥಿಯೊಪಿಯ ಪ್ರದೇಶದವರು.[೨೮] ಪೂರ್ವ ಆಫ್ರಿಕಾದ ಈ ಜನರನ್ನು ವರ್ತಕರು ಇರಾಕ್, ಇರಾನ್, ಭಾರತದ ಕರಾವಳಿ ತೀರಪ್ರದೇಶದಲ್ಲಿ ಹಾಗೂ ಪ್ರಪಂಚದ ವಿವಿಧ ಭಾಗಗಳಿಗೆ ಮಾರುತ್ತಿದ್ದರು. ಕ್ರಿ.ಶ. ೧೪ ಮತ್ತು ೧೯ನೇ ಶತಮಾನದಲ್ಲಿ ಅರಬ್ ವರ್ತಕರು ಹಾಗೂ ಗುಲಾಮ ವ್ಯಾಪಾರಸ್ಥರು, ಪೋರ್ಚುಗೀಸರೊಂದಿಗೆ ಭಾರತಕ್ಕೆ ಬಂದಂತಹ ಇವರು ಭಾರತದ ವಿವಿಧ ಭಾಗಗಳಲ್ಲಿ ನೆಲೆ ನಿಂತರು. ಇವರಿಗೆ ಹಬಷಿಯರು ಅಥವಾ ಸಿದ್ಧಿಗಳೆಂದು ಕರೆಯಲಾಯಿತು.[೨೯] ಭಾರತದಲ್ಲಿ ಕಂಡುಬರುವ ಆಫ್ರಿಕಾದ ಅಬೇಸಿನಿಯನ್ನರು, ನ್ಯೂಬಿಯನ್ನರು, ಸೋಮಾಲಿಯರು, ಜಂಜಿಬರಿಯದಿಂದ ಬಂದಂತಹ ಸಿದ್ಧಿಗಳಾಗಿದ್ದರು. ಇವರು ಧಾರ್ಮಿಕ ಹಿನ್ನೆಲೆಯಲ್ಲಿಯೂ ವಿಭಜಿತರಾಗಿದ್ದರು. ಇವರಲ್ಲಿ ಅಧಿಕ ಸಂಖ್ಯೆಯಲ್ಲಿ ದಕ್ಷಿಣ ಭಾರತಕ್ಕೆ ಆಫ್ರಿಕಾದ ಹಾರ್ನ್ ಅಥವಾ ಇಥಿಯೋಪಿಯ ಪ್ರದೇಶದಿಂದ ಬಂದವರಾಗಿದ್ದರು. ಇವರನ್ನು ಅರಬ್ಬರು ಅಲ್-ಹಬಷ ಎಂದು ಕರೆದರು.[೩೦] ೧೩ನೇ ಶತಮಾನದ ವೇಳೆಗೆ ಉತ್ತರ ಭಾರತದಲ್ಲಿ ಇವರು ಪ್ರಮುಖ ಗುಲಾಮರಾಗಿ ಸುಲ್ತಾನರ ಆಳ್ವಿಕೆಯಲ್ಲಿ ಕಂಡುಬಂದಿದ್ದರು. ರಜಿಯಾ ಸುಲ್ತಾನ ಕಾಲದಲ್ಲಿ ಜಮಾಲ್ ಅಲ್-ದಿನ್ ಯಾಕುತ್ ಎಂಬ ಹಬಷಿ ಗುಲಾಮನು ನಿಷ್ಠಾವಂತನಾಗಿದ್ದನು.

ಇಬ್-ನೆ-ಬತೂತ(ಕ್ರಿ.ಶ.೧೩೩೩-೪೭)ನು ಭಾರತದ ಪ್ರವಾಸದಲ್ಲಿ ತಾನು ಕಂಡಿದ್ದನ್ನು ತಿಳಿಸಿರುವಂತೆ ಉತ್ತರ ಭಾರತದಿಂದ ಹಿಡಿದು ಸಿಲೋನಿನವರೆಗೆ ಪ್ರಮುಖವಾಗಿ ರಕ್ಷಕರು ಹಾಗೂ ಸೈನಿಕರಾಗಿ ಅಧಿಕ ಸಂಖ್ಯೆಯಲ್ಲಿ ಹಬಷಿಯರು ನೇಮಕಗೊಂಡಿದ್ದರು. ೧೪ನೇ ಶತಮಾನದ ವೇಳೆಗೆ ಮಲ್ಲಿಕ್ ಸರವಾರ ಎಂಬ ಗುಲಾಮನು ಉತ್ತರಪ್ರದೇಶದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಿದ್ದನು. ಬಂಗಾಳದಲ್ಲಿ ೮೦೦ ಹಬಷಿ ಗುಲಾಮರನ್ನು ಪ್ರಮುಖವಾಗಿ ಸೈನಿಕರ ವೃತ್ತಿಗೆ ಕೊಂಡುಕೊಳ್ಳಲಾಗಿತ್ತು

(೧೪೫-೭೪). ಹೀಗೆ ಇಲ್ಲಿಂದ ಮುಂದಿನ ಕಾಲಾವಧಿಯಲ್ಲಿ ಬೇರೆ ಬೇರೆ ಪ್ರದೇಶದಲ್ಲಿ ವಿಸ್ತರಿಸುತ್ತಾ ಹೋದರು.

ದಕ್ಷಿಣ ಭಾರತದಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ದೇವಗಿರಿ ಮತ್ತು ವಾರಂಗಲ್ ಆಕ್ರಮಣದಿಂದಲೂ ಹಬಷಿಯನ್ನರು ಇಲ್ಲಿ ನೆಲೆ ನಿಂತರು. ಖಿಲ್ಜಿಯ ಆಕ್ರಮಣದ ನಂತರ ಮಹಮ್ಮದ್ ಬಿನ್ ತೊಘಲಕ್‌ನ ಕಾಲಾವಧಿಯಲ್ಲಿ ಹಾಗೂ ಕ್ರಿ.ಶ. ೧೩೪೭ರಲ್ಲಿ ಸ್ವತಂತ್ರವಾದ ಬಹಮನಿ ಸಾಮ್ರಾಜ್ಯದಲ್ಲಿ ಇವರು ಕಂಡುಬರುತ್ತಾರೆ. ಕ್ರಿ.ಶ. ೧೪ ಮತ್ತು ೧೫ನೇ ಶತಮಾನದಲ್ಲಿ ಸೈನ್ಯ ಹಾಗೂ ಆಡಳಿತದಲ್ಲಿ ಬಹಳಷ್ಟು ಆಫ್ರಿಕಾದ ಹಬಷಿಯರನ್ನು ನೇಮಿಸಿಕೊಳ್ಳಲಾಗಿತ್ತು.[೩೧] ಪರ್ಶಿಯಾದ ವಿದ್ವಾಂಸರ ದಾಖಲೆ ಪ್ರಕಾರ ಸೈನಿರಾಗಿ, ದಂಡನಾಯಕರಾಗಿ, ಅಧಿಕಾರಿಗಳಾಗಿ ಹಬಷಿಯನ್ನರು ಬೀದರ್‌ನಲ್ಲಿ ಕಂಡುಬಂದಿದ್ದರು ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ದಿಲಾವರ್ ಖಾನ ಎಂಬ ಹಬಷಿಯನ್ ಸುಲ್ತಾನ ಮಹಮ್ಮದ್‌ನ(೧೪೮೨-೧೫೧೮) ಆಸ್ಥಾನದಲ್ಲಿದ್ದನು. ವಿಜಯನಗರದಲ್ಲಿಯೂ ಆಫ್ರಿಕಾ ಮೂಲದ ಗುಲಾಮರನ್ನು ಕೊಂಡುಕೊಂಡು ಇವರನ್ನು ಸೈನಿಕರಾಗಿ ಹಾಗೂ ಅಧಿಕಾರಿಗಳಾಗಿ ಇಲ್ಲಿ ನೇಮಿಸಿರುವುದಾಗಿ ಕಂಡುಬರುತ್ತದೆ.[೩೨] ಪೋರ್ಚುಗೀಸರು ನೀಗ್ರೋ ಗುಲಾಮರನ್ನು ಸೈನಿಕ ಕಾರ್ಯಾಚರಣೆಗೆ ಬಳಸಿಕೊಂಡಿದ್ದರು.[೩೩] ಸಿದ್ಧಿಗಳು ಇಂದಿಗೂ ಉತ್ತರ ಕನ್ನಡ ಘಟ್ಟ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ಇವರು ತಮ್ಮ ಸಮುದಾಯಗಳಲ್ಲೆ ಚಿಕ್ಕ ಚಿಕ್ಕ ಗುಂಪುಗಳಾಗಿ ವಿಘಟನೆ ಆಗಿ ಇಲ್ಲಿನ ಗ್ರಾಮಗಳಲ್ಲಿ ನೆಲೆ ನಿಂತಿದ್ದಾರೆ ಅಥವಾ ಸ್ವತಂತ್ರವಾದ ವಾಸದ ನೆಲೆಗಳಲ್ಲಿ ಇರುತ್ತಾರೆ. ಅವರ ಮುಖ್ಯ ಉದ್ಯೋಗ ಕೃಷಿ. ಅರಣ್ಯಗಳಲ್ಲಿ ಕೆಲಸಗಾರರಾಗಿಯೂ ದುಡಿಯುತ್ತಾರೆ. ಇವರು ಮುಸ್ಲಿಮರಲ್ಲಿ ಸುನ್ನಿ ಪಂಥಕ್ಕೆ ಸೇರಿದವರಾಗಿದ್ದು, ಬಾಬಾ ಘೋರ್ ಗುರುವನ್ನು ಈ ಭಾಗಗಳಲ್ಲಿ ನಂಬುತ್ತಾರೆ. ಬಾಬಾಘೋರ್‌ನು ಮಹಮ್ಮದ್ ಪೈಗಂಬರ್ ಅವರ ಶಿಷ್ಯನಾಗಿದ್ದನು.[೩೪]

ಮಾಪಿಳ್ಳೆ

ಮಾಪಿಳ್ಳೆಗಳು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುವಂತಹ ಸಮುದಾಯವಾಗಿದ್ದು, ಇವರಲ್ಲಿ ಮುಸ್ಲಿಂ ಮಾಪಿಳ್ಳೆ ಸಮುದಾಯವು ಕೇರಳ ಪ್ರದೇಶದಲ್ಲಿ ಕಂಡುಬರುತ್ತದೆ. ಇವರಿಗೆ 'ಜೊನಾಕ ಮಾಪಿಳ್ಳ' ಎಂದು ಸಹ ಕರೆಯುತ್ತಾರೆ.[೩೫] ಬುಕಾನನ್ ಪ್ರಕಾರ, 'ಮಾಪಿಳ್ಳೆಯವರು ವ್ಯಾಪಾರಿಗಳು ಹಾಗೂ ಕೃಷಿಕರಾಗಿದ್ದರು'. ಮಾಪಿಳ್ಳೆ ಎಂಬ ಪದವು ಮಹಾ(ದೊಡ್ಡ) ಮತ್ತು ಪಿಳ್ಳ(ಮಗು) ಪದಗಳ ಸಂಮಿಶ್ರ ರೂಪವಾಗಿದೆ. ಅಂದರೆ ಇದು ಗೌರವಾರ್ಥ ಪದವಾಗಿ ಕಂಡುಬರುತ್ತದೆ. ಇವರು ಮಲಬಾರ್ ತೀರಪ್ರದೇಶದಲ್ಲಿ ಇಸ್ಲಾಂ ಸ್ಥಾಪನೆ ಪೂರ್ವದಲ್ಲಿ ಬಂದು ನೆಲೆಸಿದ್ದರು. ಇವರು ಮಲಯಾಳಂ ಭಾಷೆಯನ್ನು ಮಾತನಾಡುವರು.[೩೬] ಈ ಸಮುದಾಯವು ಕೇರಳ ರಾಜ್ಯದ ಸಮುದ್ರ ತೀರಪ್ರದೇಶದಲ್ಲಿ ಮಾತ್ರ ಕಂಡುಬರದೇ ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ, ತಮಿಳುನಾಡಿನ ಪಶ್ಚಿಮ ಭಾಗದ ಜಿಲ್ಲೆಗಳಲ್ಲಿ ಇಂದಿಗೂ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಮೂಲತಃ ಅರಬ್‌ನ ಪರ್ಶಿಯಾದಿಂದ ಬಂದವರಾಗಿದ್ದು, ಇನ್ನು ಕೆಲವರು ಮಲೇಶಿಯಾದಿಂದ

ಬಂದು ನೆಲೆ ನಿಂತಿದ್ದನ್ನು ಕಾಣಬಹುದು. ವಿಜಯನಗರಕ್ಕೆ ಭೇಟಿ ನೀಡಿದ್ದ ಬಾರ್ಬೋಸನ ಪ್ರವಾಸಿ ಕಥನಗಳಲ್ಲಿ ಉಲ್ಲೇಖಿಸುವಂತೆ, 'ಮಲಬಾರಿನಲ್ಲಿ ನೆಲೆಸಿದ್ದ ಮುಸ್ಲಿಮರನ್ನು ಮಾಪಿಳ್ಳೆ ಎಂದು ಕರೆಯಲಾಗುತ್ತದೆ. ಇವರು ವ್ಯಾಪಾರಿಗಳಾಗಿದ್ದರು' ಎಂದಿದ್ದಾನೆ. ಈ ಸಮುದಾಯ ವರ್ಗವು ಮಲಬಾರ್ ಪ್ರಾಂತ್ಯಗಳಲ್ಲಿ ನೆಲೆ ನಿಂತಿದ್ದರು. ವಿದೇಶಿ ವ್ಯಾಪಾರದ ಕಡೆ ಇವರು ಗಮನ ಹರಿಸಿದ್ದರಿಂದ ಮಲಬಾರ್ ತೀರಪ್ರದೇಶ ಅಥವಾ ಬಂದರು ಪಟ್ಟಣಗಳಲ್ಲಿ ನೆಲೆ ನಿಂತಿದ್ದರು. ಇವರು ವಿಜಯನಗರ ಸಾಮ್ರಾಜ್ಯದ ಪ್ರಜೆಗಳಾಗಿ ಜನಸಾಮಾನ್ಯರ ವರ್ಗದಲ್ಲಿ ಗುರುತಿಸಿಕೊಂಡಿದ್ದರು. ಈ ಸಮುದಾಯದವರು ಮಲಬಾರ್, ಕೋರಮಂಡಲ, ಕೇರಳ ಪ್ರದೇಶಗಳಲ್ಲಿ ನೆಲೆಸಿದ್ದರು. ಇಲ್ಲಿನ ಸ್ಥಳೀಯ ಹೆಣ್ಣುಗಳೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ್ದರು. ಹಾಗಾಗಿ ಅವರ ಪತ್ನಿಯರು ಮೀನುಗಾರಿಕೆ ಉದ್ದಿಮೆಯಲ್ಲಿ ತೊಡಗಿದ್ದರು. ಹಾಗೆಯೇ ಮುಂದುವರಿದು ಮಾಪಿಳ್ಳೆಗಳು ಮಲಬಾರ್ ಪ್ರಾಂತ್ಯದಲ್ಲಿ ಅರಬ್ ಮತ್ತು ಪರ್ಶಿಯಾ ರಾಜ್ಯಗಳಿಂದ ತರಿಸಿಕೊಳ್ಳುತ್ತಿದ್ದ ಕುದುರೆಗಳಿಗೆ ಮಧ್ಯವರ್ತಿ ವ್ಯಾಪಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮಾಪಿಳ್ಳೆಯ ಉಪಪಂಗಡವಾಗಿ ಕೋಯಾ ಮುಸ್ಲಿಂ ಸಮುದಾಯವು ಕಾಣಿಸಿಕೊಳ್ಳುತ್ತದೆ. ಇವರು ನಾಯರ್ ಸಮುದಾಯದಿಂದ ಮತಾಂತರಗೊಂಡ ಮುಸ್ಲಿಂ ಸಮುದಾಯವಾಗಿದೆ. ಹಾಗಾಗಿ ಮೂಲತಃ ಇವರು ಕೃಷಿ ವೃತ್ತಿಯನ್ನು ಮಾಡುತ್ತಿದ್ದರು. ಮಾಪಿಳ್ಳೆ ಸಮುದಾಯದಲ್ಲಿ ಹಲವು ಉಪಪಂಗಡಗಳು ಕಂಡುಬರುತ್ತವೆ. ಅವುಗಳೆಂದರೆ ಕೋಯಾ ಸಮುದಾಯ ಹಾಗೂ ತುಳುಕ್ಕರ್ ಸಮುದಾಯ.

ಕೋಯಾ

ಕೋಯಾ ಸಮುದಾಯವು ಮಾಪಿಳ್ಳೆ ಸಮುದಾಯದ ಒಳಪಂಗಡವಾಗಿದೆ. ಈ ಸಮುದಾಯವು ಹಿಂದೂ ಧರ್ಮದಲ್ಲಿ ಕಂಡುಬರುವ ಕ್ಷತ್ರಿಯವರ್ಗಕ್ಕೆ ಸೇರಿದ ನಾಯರ್ಸ್ ಸಮುದಾಯಕ್ಕೆ ಸಂಬಂಧಿಸಿದವರು. ಜಾಮೋರಿನ್ ಆಳ್ವಿಕೆಯ ಅವಧಿಯಲ್ಲಿ ಇವರು ಕಲ್ಕತ್ತಾದಲ್ಲಿ ಸೈನಿಕರಾಗಿ ನೇಮಕವಾದರು. ನಂತರದ ದಿನಗಳಲ್ಲಿ ಈ ಸಮುದಾಯದವರು ದಕ್ಷಿಣ ಮಲಬಾರ್ ಪ್ರದೇಶದಲ್ಲಿ ಬಂದು ನೆಲೆ ನಿಂತರು. ಜಾಮೋರಿಯನ್ ಈ ಸಮುದಾಯದವರನ್ನು ಶಾ–ಬಂದರ್–ಕೋಯಾ ಎಂದು ಕರೆದಿದ್ದನು.[೩೭]

ತುಳುಕ್ಕರ್

ತುಳುಕ್ಕರ್ ಎಂಬ ಪದವು ತುರ್ಕಿ ಎಂಬ ಶಬ್ದದಿಂದ ಉದ್ಭವಿಸಿರುವ ಪದವಾಗಿದೆ. ಈ ಸಮುದಾಯ ಕೇರಳದ ಮಧ್ಯ ಮತ್ತು ದಕ್ಷಿಣಭಾಗಗಳಲ್ಲಿ ಕಂಡುಬರುತ್ತದೆ. ಕೇರಳದಲ್ಲಿ ಇವರಿಗೆ 'ಅನ್ನ' ಎಂದು ಕರೆಯುತ್ತಾರೆ. ಈ ಭಾಗದಲ್ಲಿ ಕಂಡುಬರುವ ಇವರು ಸ್ಥಳೀಯ ಮುಸ್ಲಿಮರಾಗಿ ಗುರುತಿಸಿಕೊಂಡಿದ್ದಾರೆ. ಇವರಿಗೆ ಮಾಪಿಳ್ಳೆ ಎಂದು ಸಹ ಕರೆಯುತ್ತಾರೆ. ಇದು ಮಾಪಿಳ್ಳೆ ಸಮುದಾಯಕ್ಕೆ ಸೇರಿದ ಒಳಪಂಗಡವಾಗಿದೆ. ಈ ಸಮುದಾಯ 'ಹನಫಿ' ಪಂಗಡಕ್ಕೆ ಸೇರಿದವರಾಗಿದ್ದು, ಇವರು ವಿಜಯನಗರ ಆಳ್ವಿಕೆ ಸಂದರ್ಭದಲ್ಲಿ ಸಾಮಾನ್ಯ ಮುಸ್ಲಿಮರಾಗಿ ಕಂಡುಬರುತ್ತಿದ್ದರು.[೩೮]

ಲಬ್ಬೆ

ದಕ್ಷಿಣ ಭಾರತದ ತಮಿಳುನಾಡು, ಕೇರಳ ತೀರಪ್ರದೇಶದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯವೆಂದರೆ ಲಬ್ಬೆ. ಇವರನ್ನು ಲಬ್ಬೈ, ಲಬ್ಬಾ, ಲಬ್ಬಬೀನ್ ಎಂಬ ಹೆಸರಿನಿಂದಲೂ ಕರೆಯಲಾಗುತ್ತಿತ್ತು.[೩೯] ಈ ಸಮುದಾಯವು ಕ್ರಿ.ಶ. ೧೩ನೇ ಶತಮಾನದಲ್ಲಿ ಪರ್ಶಿಯಾದಿಂದ ವ್ಯಾಪಾರದ ಉದ್ದೇಶಗಳಿಗಾಗಿ ಕರಾವಳಿ ತೀರಪ್ರದೇಶದಲ್ಲಿ ಬಂದು ನೆಲೆಸಿತು. ಈ ಸಮುದಾಯದ ವ್ಯಾಪಾರಸ್ಥರು, ಚರ್ಮ, ತಂಬಾಕು, ಧಾನ್ಯಗಳು, ಸಾಂಬಾರು ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದರು. ಚೀನ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ಈ ಸರಕುಗಳುನ್ನು ರಫ್ತು ಮಾಡುತ್ತಿದ್ದರು. ಈ ಸಮುದಾಯ ಕೋರಮಂಡಲ ತೀರಪ್ರದೇಶದಲ್ಲಿ ನೆಲೆಸಿತ್ತು. ಲಬ್ಬೆ ಪದವು ಅರಬ್ಬಿ ಮೂಲದ್ದಾಗಿದೆ. ಈ ಸಮುದಾಯವು ವಿಜಯನಗರ ಆಳ್ವಿಕೆಯ ಸಂದರ್ಭದಲ್ಲಿ ವ್ಯಾಪಾರಸ್ಥರಾಗಿ ಗುರುತಿಸಿಕೊಂಡಿತ್ತು. ಈ ಸಮುದಾಯ ಪಾಂಡ್ಯ ರಾಜಪ್ರಭುತ್ವದ ಕಾಲದಿಂದ ಸೈನಿಕ ವೃತ್ತಿಯಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದರು. ಈ ಸಮುದಾಯದಲ್ಲಿ ಕೆಲವರು 'ಹನಫಿ' ಎಂಬ ಪಂಥಕ್ಕೆ ಸೇರಿದ ಸಮುದಾಯವಾಗಿದ್ದು, ಇವರಲ್ಲಿ ಕೆಲವರು ದಖ್ಖನ್ ಪ್ರಾಂತ್ಯದಲ್ಲಿ ಬಂದು ನೆಲೆಸಿದರು.

ಮುಖ್ದಂ

ಕೇರಳದ ಪೊನ್ನಾನಿ ಎಂಬ ಪ್ರದೇಶದಲ್ಲಿ ಕಂಡುಬರುವ ಪ್ರಸಿದ್ಧ ಮನೆತನ ಮುಖ್ದಂ. ಇವರು ಅರೇಬಿಕ್ ವಿದ್ವಾಂಸರಾಗಿದ್ದರು. ಅನುಭವದಾರರೂ ಆದ ಇವರು ವೈಶಿಷ್ಟ್ಯಪೂರ್ಣ ಸ್ಥಾನವನ್ನು ಪಡೆದಿದ್ದರು. ಇವರು ಪರಿಣಾಮಕಾರಿಯಾದ ಜ್ಞಾನವನ್ನು, ಪಾಂಡಿತ್ಯವನ್ನು, ಧರ್ಮಶ್ರದ್ದೆಯನ್ನು ಪಡೆದಂತವರಾಗಿದ್ದರು. ಪೊನ್ನಾನಿ ಪ್ರದೇಶವು ಅರೇಬಿಕ್ ಅಧ್ಯಯನದ ಮುಖ್ಯ ಕೇಂದ್ರವಾಗಿತ್ತು. ಹಾಗಾಗಿ ಪೊನ್ನಾನಿಯನ್ನು ಮಲಬಾರಿನ ಮೆಕ್ಕ ಎಂದು ಕರೆಯುತ್ತಿದ್ದರು. ಕ್ರಿ.ಶ. ೯೨೮ರಲ್ಲಿ ಶೇಕ್ ಜೈಯಿನ್-ಅಲ-ದೀನ್-ಇಬನ್ ಎಂಬುವನು ಈ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದ್ದನು.[೪೦] ಇದರಿಂದ ಈತನಿಗೆ ಮುಖ್ದದ್ದಂ ಎಂಬ ಬಿರುದು ಸಿಕ್ಕಿತು. ಹಾಗಾಗಿ ಮುಖ್ದದ್ದಂ ತಮ್ಮ ಹೆಸರಿನ ಹಿಂದೆ ಮಾಬರಿ ಎಂದು ಸೇರಿಸಿಕೊಂಡರು. ಮಾಬರ್ ಅರೇಬಿಕ್ ಪದವಾಗಿದ್ದು ಕೋರಮಂಡಲ ತೀರಪ್ರದೇಶದಲ್ಲಿ ಇವರನ್ನು ಮಾಬರ್ ಎಂದು ಕರೆಯಲಾಗುತ್ತಿತ್ತು. ಮುಖ್ದದ್ದಂ ಸಮುದಾಯದ ಮೂಲನೆಲೆಯು ಯೆಮಿನ್ ಆಗಿದ್ದು, ದಕ್ಷಿಣ ಭಾರತದ ತಮಿಳುನಾಡಿಗೆ ಕ್ರಿ.ಶ. ೯ನೇ ಶತಮಾನದಲ್ಲಿ ವಲಸೆ ಬಂದು ನೆಲೆಸಿದ್ದರು. ಹಾಗಾಗಿ ಈ ಒಂದು ಗುಂಪು ಮಾಬರ್‌ನಲ್ಲಿ ಹಾಗೂ ಇನ್ನೊಂದು ಗುಂಪು ಕಾಯಲ್‌ಪಟ್ಟನಂ(ಮಾಬರ್ ಮತ್ತು ಕಾಯಲ್ ಪಟ್ಟಣಂ ತಮಿಳುನಾಡಿನಲ್ಲಿವೆ) ಬಂದು ನೆಲೆ ನಿಂತರು. ಷೇಕ್ ಜೈಯಿನ್ ತಾತನಾದ ಅಹಮ್ಮದ್ ಅಲ್ ಮಾಬರಿಯು ಮಾಬರ್ ಪ್ರದೇಶದಿಂದ ಕೊಚ್ಚಿನ್‌ಗೆ ವಲಸೆ ಹೋಗಿದ್ದನು. ಕೊಚ್ಚಿನ್‌ನಲ್ಲಿ ಶೇಕ್ ಜೈಯಿದ್ ಅಲ್-ದಿನ್-ಇಬನ್ ಕ್ರಿ.ಶ. ೮೭೧ರಲ್ಲಿ ಜನಿಸಿದನು. ಶೇಕ್ ಜೈಯಿದ್ ಕೊಚ್ಚಿನ್‌ನಿಂದ ಪೊನ್ನಾನಿಗೆ ಬಂದು ನೆಲೆ ನಿಂತು ಮಸೀದಿಯನ್ನು ನಿರ್ಮಿಸಿದನು.[೪೧]

ಈ ಕುಟುಂಬದ ಇನ್ನೊಬ್ಬ ಮುಖ್ಯ ವಿದ್ವಾಂಸ ಅಹಮ್ಮದ್ ಜೈನ್ ಅಲ್ ಇಬನ್ ಮಹಮ್ಮದ್ ಅಲ ಗಜ್ಜಲಿ(೧೦೨೮). ಈ ಹಿನ್ನೆಲೆಯಲ್ಲಿ ಮುಖ್ಬದ್ದಂ ಮನೆತನ ಅಥವಾ ಸಮುದಾಯ ವಿದ್ವಾಂಸ ಅಥವಾ ಸಾಹಿತ್ಯ ವರ್ಗ ಮತ್ತು ಧರ್ಮ ಪ್ರಚಾರದ ವರ್ಗಕ್ಕೆ ಸೇರಿದ್ದಾಗಿದ್ದು, ತಮಿಳುನಾಡಿನಲ್ಲಿ ನೆಲೆಸಿದಂತಹ ಮುಸ್ಲಿಂ ಸಮುದಾಯಗಳಿಗೆ ಇಸ್ಲಾಂ ತತ್ವಗಳನ್ನು ಪ್ರಸರಿಸುವ ಕಾರ್ಯವನ್ನು ಮಾಡುತ್ತಿತ್ತು.

ಪುಸಲನರು

ಪುಸಲನರು ಮಲಬಾರಿನ ತೀರಪ್ರದೇಶದಲ್ಲಿ ಮೀನುಗಾರಿಕೆ ವೃತ್ತಿಯನ್ನು ಮಾಡುವ ಸಮುದಾಯವಾಗಿದೆ. ಇವರಿಗೆ ಪುಸಲನರು, ಮುಯಿಸ್ಲನರು ಮತ್ತು ಪುಟಿಯ ಎಂತಲೂ ಕರೆಯುತ್ತಾರೆ. ಮಲಬಾರಿನ ಕಾಸರಗೋಡು, ಕಣ್ಣೂರು, ತ್ರಿಚೂರು, ಕೋಯಿಕೋಡ್ ಮತ್ತು ಮಲ್ಲಾಪುರಂ ಪ್ರದೇಶಗಳಲ್ಲಿ ಅತಿ ಹೆಚ್ಚಾಗಿ ಕಂಡುಬರುತ್ತಾರೆ. ಪುಸಲನ್ ಸಮುದಾಯವು ಸ್ಥಳೀಯ ಅಥವಾ ಪ್ರಾದೇಶಿಕ ಸಮುದಾಯವಾಗಿದ್ದು, ಮೂಲತಃ ಮುಕುವ್ವನ್ ಸಮುದಾಯದಿಂದ ಮತಾಂತರ ಹೊಂದಿದ ಸಮುದಾಯವಾಗಿದೆ. ಮುಕುವ್ವನ್ ಎಂದರೆ ಮೀನುಗಾರರು ಎಂದರ್ಥ. ಇವರು ತಮ್ಮನ್ನು ಮಾಪಿಳ್ಳೆಯರೆಂತಲೂ ಕರೆದುಕೊಳ್ಳುವರು. ಈ ಸಮುದಾಯ ಸ್ಥಳೀಯ ವರ್ತಕ ಸಮುದಾಯವಾಗಿದೆ. ೧೮೯೧ರ ಮದ್ರಾಸ್ ವರದಿ ತಿಳಿಸುವಂತೆ, ಪುಸಲನರು ಮತಾಂತರ ಹೊಂದಿದ ಸಮುದಾಯವಾಗಿದೆ. ಕ್ರಿ.ಶ. ೬೪೩ರಲ್ಲಿ ಮಲ್ಲಿಕ್–ಇಬನ್–ದಿನಾರ್ ತನ್ನ ೨೦ ಜನ ಮುಸ್ಲಿಂ ಗುಂಪಿನೊಂದಿಗೆ ಭಾರತಕ್ಕೆ ಇಸ್ಲಾಂ ಪ್ರಸಾರಕ್ಕೆ ಮಲಬಾರ್ ಕರಾವಳಿ ತೀರಪ್ರದೇಶದಲ್ಲಿ ನೆಲೆಸಿದನು. ಅರಬ್ ವರ್ತಕರೊಂದಿಗೆ ಈ ಮಿಷನರಿಗಳು ಭಾರತದಲ್ಲಿ ಬಂದು ನೆಲೆ ನಿಂತರು. ಪರಿಣಾಮವಾಗಿ ಇವರ ಪ್ರಭಾವಕ್ಕೆ ಒಳಗಾಗಿ ಇಲ್ಲಿನ ಸ್ಥಳೀಯರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಅಲ್ಲದೆ ಈ ಮಿಷನರಿಗಳಿಗೆ ಸ್ಥಳೀಯ ಅರಸರ ಪ್ರೋತ್ಸಾಹ ಸಹ ಸಿಗುತ್ತಿತ್ತು. ಪುಸಲನ್ ಎಂದರೆ ಹೊಸದಾಗಿ ಮತಾಂತರ ಹೊಂದಿದ ಸಮುದಾಯ ಎಂದರ್ಥ. ಈ ಸಮುದಾಯವು ಕರಾವಳಿ ರೇಖೆಯ ಉದ್ದಕ್ಕೂ ಕಂಡುಬರುತ್ತದೆ. ಮಲಬಾರಿನ ತಳಸಮುದಾಯ ಅಥವಾ ನಿರ್ಲಕ್ಷ್ಯಕ್ಕೆ ಒಳಗಾದವರು ಇಸ್ಲಾಂ ಧರ್ಮವನ್ನು ಸ್ವೀಕರಿಸುತ್ತಿದ್ದರು.[೨]

ಅತ್ತರ್ ಸೈಬಲು ಸಮುದಾಯ

ಅತ್ತರ್ ಸಾಬ್ ಸಮುದಾಯವು ವ್ಯಾಪಾರ ವೃತ್ತಿಯದ್ದಾಗಿದೆ. ಅತ್ತರ್ ಎಂದರೆ ಸುಗಂಧದ್ರವ್ಯ ಎಂದರ್ಥ. ಇವರು ಸಾಂಪ್ರದಾಯಿಕವಾದಂತಹ ಸುಗಂಧದ್ರವ್ಯವನ್ನು ತಯಾರಿಸಿ ಮಾರುವ ವ್ಯಾಪಾರ ವೃತ್ತಿಯನ್ನು ಮಾಡುತ್ತಿದ್ದರು. ಇವರು ಹೆಚ್ಚಾಗಿ ಆಂಧ್ರಪ್ರದೇಶದಲ್ಲಿ ಕಂಡುಬರುತ್ತಿದ್ದರು. ಮುಸ್ಲಿಮರ ಸಂಪ್ರದಾಯದಲ್ಲಿ ಕುರಾನಿನ ಹದೀಸ್‌ನಲ್ಲಿ ಉಲ್ಲೇಖಿಸುವಂತೆ ಪ್ರತಿ ಮುಸ್ಲಿಂ ವ್ಯಕ್ತಿಯು ತನ್ನ ದೇಹದಲ್ಲಿ ಪರಿಮಳವಾದಂತಹ ದ್ರವ್ಯ ಹೊಂದಿ, ನಂತರ ನಮಾಜ್ ಮಾಡಬೇಕೆಂದು ಉಲ್ಲೇಖವಾಗಿದೆ. ಹಾಗಾಗಿ ಮುಸ್ಲಿಂ ಸಮುದಾಯದಲ್ಲಿ ಅತ್ತರ್‌ಗೆ ಬೇಡಿಕೆಯಿತ್ತು. ಇವರು ಹೆಚ್ಚಾಗಿ ಮದನಪಲ್ಲಿ,

ಗುರ್ರಂಕೊಂಡ, ತಮ್ಮಪುರಂ, ಗರನಿಮಿತ್ತ, ಲಕ್ಕಿರೆಡ್ಡಿಪಳ್ಳಿ, ಮೋಲ, ಅನಂತಪುರ ಪ್ರದೇಶಗಳಲ್ಲಿ ಕಂಡುಬರುತ್ತಿದ್ದರು.[೪೩]

ಒಸ್ಸಾನರು

ಮಲ್ಲಿಕ್-ದಿನಾರ್ ಜೊತೆಗೆ ವಲಸೆ ಬಂದ ಅನುಯಾಯಿಗಳಲ್ಲಿ ಒಂದು ವರ್ಗ ಒಸ್ಸಾನ್‌ನಲ್ಲಿ ನೆಲೆ ನಿಂತರು. ವಲಸೆ ಬಂದವರು ಒಸ್ಸಾನರು ಆಗಿದ್ದಾರೆ. ಈ ಸಮುದಾಯ ಕ್ರಿ.ಶ. ೬ನೇ ಶತಮಾನದಲ್ಲಿ ಮಲ್ಲಿಕ್-ದಿನಾರ್ ಜೊತೆಗೆ ೧೨ ಜನರನ್ನು ಕರೆದುಕೊಂಡು ಭಾರತಕ್ಕೆ ಬಂದಿತು. ಈ ವ್ಯಕ್ತಿಗಳು ಒಸ್ಸಾನ ಸಮುದಾಯಕ್ಕೆ ಸೇರಿದವರಾಗಿದ್ದರು. ಇದು ಇಸ್ಲಾಂ ಪ್ರಚಾರಕ್ಕೆ ಭಾರತಕ್ಕೆ ಪ್ರವೇಶ ಪಡೆದಿತ್ತು. ಕ್ಯಾಲಿಕಟ್‌ನ ಕಾಸರಗೋಡು ಜಿಲ್ಲೆಯು ಇವರ ಮೂಲನೆಲೆಯಾಗಿತ್ತು. ಇಸ್ಲಾಂ ಪ್ರಚಾರ ಕಾರ್ಯ ಮುಗಿದ ನಂತರ ಮಲ್ಲಿಕ್-ದಿನಾರ್ ಮತ್ತು ೧೧ ಜನ ವ್ಯಕ್ತಿಗಳು ಮುಸುಕಾಟಿಗೆ ಹಿಂತಿರುಗಿದರು. ಆದರೆ ಅವರಲ್ಲಿ ಒಬ್ಬ ಒಸ್ಸಾನ ಕ್ಯಾಲಿಕಟ್‌ನಲ್ಲಿ ಉಳಿದುಕೊಂಡನು. ಆತನು ಸ್ಥಳೀಯ ಹೆಣ್ಣನ್ನು ವಿವಾಹವಾದನು. ಈ ವಂಶವು ಕ್ಯಾಲಿಕಟ್‌ನಲ್ಲಿ ವಿಸ್ತರಿಸುತ್ತಾ ಹೋಯಿತು. ಹೀಗೆ ಈ ವಂಶಕ್ಕೆ ಸೇರಿದ ಸಮೂಹವನ್ನು ಒಸ್ಸಾನವೆಂದು ಕರೆಯಲಾಯಿತು. ಈ ಸಮುದಾಯದವರು ಮಲಯಾಳಂ ಭಾಷೆಯನ್ನು ಮಾತನಾಡುವರು. ಮಲಯಾಳಂ ಭಾಷೆ ಹಾಗೂ ಬರಹ ಇವರಲ್ಲಿ ಕಂಡುಬರುತ್ತದೆ. ಇವರು ತಮಿಳುನಾಡಿನಲ್ಲಿಯೂ ಅತ್ಯಧಿಕವಾಗಿ ಕಂಡುಬರುತ್ತಾರೆ.

೪.೨. ಮುಸ್ಲಿಂ ವಸತಿನೆಲೆಗಳು

ವಿಜಯನಗರ ಸಾಮ್ರಾಜ್ಯವು ದಕ್ಷಿಣ ಭಾರತದಾದ್ಯಂತ ತಮ್ಮ ಆಳ್ವಿಕೆಯನ್ನು ವಿಸ್ತರಿಸಿಕೊಂಡಿತ್ತು. ಪ್ರಮುಖವಾಗಿ ಹಂಪಿ ರಾಜಧಾನಿ ಪ್ರದೇಶ ಸೇರಿದಂತೆ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡಿನ ಕೋರಮಂಡಲ ತೀರಪ್ರದೇಶ, ಕೇರಳದ ಮಲಬಾರ್, ಒರಿಸ್ಸಾ ಸೇರಿದಂತೆ ಸಿಲೋನ್‌ವರೆಗೂ (ಶ್ರೀಲಂಕಾ) ವಿಜಯನಗರ ತನ್ನ ಗಡಿಯನ್ನು ವಿಸ್ತರಿಸಿಕೊಂಡಿತ್ತು. ಈ ಸಾಮ್ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಸಮುದಾಯಗಳೊಂದಿಗೆ ಮುಸ್ಲಿಂ ಸಮುದಾಯಗಳು ಸಹ ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ತಮ್ಮ ನೆಲೆಗಳನ್ನು ಹೊಂದಿದ್ದರು. ಈ ಸಮುದಾಯಗಳು ವಿಜಯನಗರ ಸಾಮ್ರಾಜ್ಯದಲ್ಲಿ ಮಾತ್ರವಲ್ಲದೆ ಇಡೀ ದಕ್ಷಿಣ ಭಾರತ ಹಾಗೂ ಉತ್ತರ ಭಾರತದಲ್ಲಿಯೂ ಇವರು ಸಂಚರಿಸುತ್ತಿದ್ದರು. ಅಂತಹವರಲ್ಲಿ ಪ್ರಮುಖವಾಗಿ ಮುಸ್ಲಿಂ ವ್ಯಾಪಾರಿಗಳಾಗಿ, ಸಮುದ್ರಯಾನಿಗಳಾಗಿ, ವರ್ತಕರಾಗಿ, ಅಧಿಕಾರಿಗಳಾಗಿ, ಸೈನಿಕರಾಗಿ, ಸೂಫಿಗಳಾಗಿ, ಧಾರ್ಮಿಕ ವರ್ಗಗಳಾಗಿ, ಕುಶಲಕರ್ಮಿಗಳಾಗಿ ವಿವಿಧ ಪ್ರಾಂತ್ಯಗಳಲ್ಲಿ ತಮ್ಮ ಅಸ್ತಿತ್ವವನ್ನು ರೂಪಿಸಿಕೊಂಡಿದ್ದರು. ಇವರ ಅಸ್ತಿತ್ವದ ಬಗ್ಗೆ ಅನೇಕ ಶಾಸನಗಳು, ಪ್ರವಾಸಿ ಕಥನಗಳು, ಸಾಹಿತ್ಯಿಕ ಆಧಾರಗಳು ನಮಗೆ ಮಾಹಿತಿಯನ್ನು ನೀಡುತ್ತವೆ. ಕ್ರಿ.ಶ. ೬ನೇ ಶತಮಾನ ದಿಂದಲೇ ದಕ್ಷಿಣ ಭಾರತದಲ್ಲಿ ಇವರು ತಮ್ಮ ನೆಲೆಗಳನ್ನು ಹೊಂದಿದ್ದರು. ಮುಸ್ಲಿಂ ಸಮುದಾಯವು ಮೂಲತಃ ವಿದೇಶಿ ಮೂಲದವರಾಗಿದ್ದಾರೆ. ಇವರಲ್ಲಿ ಅನೇಕ ಪಂಗಡಗಳಿವೆ. ಅವುಗಳಲ್ಲಿ ಕೆಲವರು ವ್ಯಾಪಾರದ ಹಿನ್ನೆಲೆ ಇಟ್ಟುಕೊಂಡು ದಕ್ಷಿಣದ ತೀರ ಪ್ರದೇಶಗಳಿಗೆ ಬಂದರು. ಇದಲ್ಲದೆ ಇವರು

ಭಾರತಕ್ಕೆ ಇನ್ನೂ ಹಲವು ಘಟನಾವಳಿಗಳ ಮೂಲಕವಾಗಿ ಆಗಮಿಸಿದರು ಎನ್ನುವುದನ್ನು ರೋಮಿಲ ಥಾಪರ್ ತಮ್ಮ ಪ್ರಾಚೀನ ಭಾರತ: ಉಗಮದಿಂದ ಕ್ರಿ.ಶ. ೧೩೦೦ರವರೆಗೆ ಕೃತಿಯಲ್ಲಿ ತಿಳಿಸಿದ್ದಾರೆ. ಇವರು ಹೇಳುವಂತೆ "ವ್ಯಾಪಾರಸ್ಥರಾಗಿ ಬಂದವರಲ್ಲದೆ ಇನ್ನೂ ಕೆಲವರು ಪರ್ಶಿಯಾದಲ್ಲಿ ನಡೆದ ಧಾರ್ಮಿಕ ಹಿಂಸಾಚಾರದಿಂದ ತಪ್ಪಿಸಿಕೊಂಡು ಭಾರತದಲ್ಲಿ ಬಂದು ನೆಲೆಸಿದರು. ಜಾಗತಿಕ ಚರಿತ್ರೆ ಪುಟಗಳಲ್ಲಿ ಕ್ರಿಶ ೭ನೇ ಶತಮಾನದಲ್ಲಿ ಅರಬ್ಬರ ಸೈನ್ಯವು ಪರ್ಷಿಯವನ್ನು ಆಕ್ರಮಿಸಿತು. ಇಲ್ಲಿನ ಕೆಲವು ಜೊರಾಸ್ಟ್ರೀಯರನ್ನು ಇಸ್ಲಾಂ ಧರ್ಮಕ್ಕೆ ಮತಾಂತರಿಸಲಾಯಿತು. ಇವರಲ್ಲಿ ಕೆಲವರು ಭಾರತಕ್ಕೆ ವಲಸೆ ಬರಲು ಇಚ್ಛಿಸಿದರು. ಈ ಕಾರ್ಯವನ್ನು ಅವರು ೮ನೇ ಶತಮಾನದ ಪ್ರಾರಂಭದಿಂದ ಆರಂಭಿಸಿದರು. ಈ ಹಿಂದೆಯೇ ವ್ಯಾಪಾರದ ಸಂಬಂಧ ಹೊಂದಿದ್ದ ಭಾರತಕ್ಕೆ ಅವರು ಬಂದು, ಮುಂಬೈನ ಉತ್ತರಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಬಂದು ನೆಲೆಸಿದರು. ಅವರ ಪೀಳಿಗೆಯವರು ನಂತರದ ಕಾಲದಲ್ಲಿ ಪಾರಸಿ ಎಂಬ ಹೆಸರು ಪಡೆದ ಸಮುದಾಯವನ್ನು ಸ್ಥಾಪಿಸಿ, ತಮ್ಮ ನಾಡಿನ ಮೂಲ ಮತ್ತು ತಮ್ಮ ಭಾಷೆಯನ್ನು ಆ ಮೂಲಕ ಪ್ರತಿನಿಧಿಸಿದರು. ಇವರಲ್ಲಿ ಕೆಲವರು ಗ್ರಾಮಾಂತರ ಪ್ರದೇಶಗಳಲ್ಲಿ ನೆಲೆಸಿದರೂ ವ್ಯಾಪಾರ-ವಹಿವಾಟಿನ ಕೇಂದ್ರಗಳ ಹತ್ತಿರ ತಮ್ಮ ನೆಲೆಯನ್ನು ಹುಡುಕಿಕೊಂಡರು. ಇತರರು ಆಗ ಪ್ರಚಲಿತದಲ್ಲಿದ್ದ ವ್ಯಾಪಾರ ವಹಿವಾಟಿನ ವ್ಯೂಹದಲ್ಲಿ ಹೆಚ್ಚು ತೊಡಗಿಸಿಕೊಂಡರು. ಕ್ರಿ.ಶ. ೯ನೇ ಶತಮಾನದಲ್ಲಿ ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅರಬ್ ಅಧಿಕಾರಿಗಳನ್ನು ಪಶ್ಚಿಮ ಏಷಿಯಾದೊಡಗಿನ ವಾಣಿಜ್ಯಿಕ ಸಂಬಂಧಗಳಿಗೆ ಮುಖ್ಯವಾಗಿದ್ದ ಸಂಜನ ಪ್ರದೇಶದಲ್ಲಿ ನೇಮಕಾತಿ ಮಾಡಲಾಯಿತು. ಈ ವಸಾಹತುಗಳು ಶಾಂತಿಯುತವಾಗಿದ್ದಂತೆ ಕಂಡುಬರುತ್ತದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಉತ್ತರದಲ್ಲಿ ಹಲವು ಮುಸ್ಲಿಂ ಸಮುದಾಯಗಳು ನೆಲೆ ನಿಂತ ನಂತರ ಇವರು ದಕ್ಷಿಣದ ವರ್ತಕರೊಂದಿಗೆ ವ್ಯಾಪಾರ ಸಂಪರ್ಕವನ್ನು ಏರ್ಪಡಿಸಿಕೊಂಡರು. ಕ್ರಿ.ಶ. ೧೨-೧೩ನೇ ಶತಮಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಸುಲ್ತಾನರು ಉತ್ತರದಿಂದ ದಕ್ಷಿಣದ ಮೇಲೆ ದಾಳಿ ಮಾಡಿದಾಗ ಹಲವು ಸಮುದಾಯಗಳು ಇಲ್ಲಿಗೆ ವಲಸೆ ಬಂದರು. ಇವರು ವಿಜಯನಗರ ಸಾಮ್ರಾಜ್ಯದಲ್ಲಿ ಹಾಗೆಯೇ ಮುಂದುವರಿದರು.

ಶೇಖ್ ಝೈನುದ್ದೀನ್ ಮಖದೂಮ್‌ನ ತುಹಫಿತುಲ್ ಮುಜಾಹಿದೀನ್ ಕೃತಿಯಲ್ಲಿ ಮಲಬಾರ್ ಪ್ರಾಂತ್ಯದಲ್ಲಿನ ಮುಸ್ಲಿಂ ವಸತಿ ನೆಲೆಗಳ ಕುರಿತು ತಿಳಿಸಿದ್ದಾನೆ. ಇವನು ಉಲ್ಲೇಖಿಸುವಂತೆ 'ಮಲಬಾರ್ ಪ್ರದೇಶಗಳಲ್ಲಿ ಮಸೀದಿಗಳನ್ನು ಕಟ್ಟಿಸಿ ಮತ್ತು ಇಸ್ಲಾಂ ಧರ್ಮದ ಸಂದೇಶವನ್ನು ಪ್ರಸಾರ ಮಾಡುತ್ತಾ ಶರಫ್‌ಬಿನ್ ಮಾಲಿಕ್, ಮಾಲಿಕ್ ಬಿನ್ ದೀನಾರ, ಹಬೀಬ ಬಿನ್ ಮಾಲಿಕ್ ಮತ್ತು ಉಳಿದವರು ಮಾಡಿದ ಪ್ರಯತ್ನದ ಫಲವಾಗಿ ಈ ಮಲಬಾರ್ ಕರಾವಳಿಯಲ್ಲಿ ಜನರು ಇಸ್ಲಾಂ ಧರ್ಮವನ್ನು ಅಲ್ಲಲ್ಲಿ ಸ್ವೀಕರಿಸಲು ಆರಂಭಿಸಿದರು. ತತ್ಪರಿಣಾಮವಾಗಿ ಪ್ರಪಂಚದ ಅನೇಕ ಭಾಗಗಳಿಂದ ವ್ಯಾಪಾರಿಗಳು ದೊಡ್ಡ ಸಂಖ್ಯೆಯಲ್ಲಿ ಇಲ್ಲಿಯ ಸ್ಥಳಗಳಿಗೆ ಬರತೊಡಗಿದರು. ಹೀಗಾಗಿ ಕ್ಯಾಲಿಕಟ್, ವೆಲಿಯಂಕೋಡೆ, ತಿರುರಂಗಡಿ, ತನೂರ, ಪೊನ್ನಾನಿ, ಪರಪ್ಪನಂಗಡಿ, ಹಾರವಹ್ಹಾ,

ಥಾಲಿಯಂ ಬಂದರದ ಸುತ್ತಮುತ್ತಲಿನ ಪ್ರದೇಶಗಳು, ಕಕ್ಕಡ, ತಿಕ್ಕೋಡಿ, ಪಂತಲಯಾನಿಯ ಸುತ್ತಮುತ್ತಲಿನ ಪ್ರದೇಶಗಳು, ಕನ್ನೂರ ಈಣಕ್ಕಾಡ, ತಿರುವಂಗಡಿ, ಮಾಹೆ, ಚೆಮ್ಮನಾಡ, ದರ್ಮಾದಂ ಇದರ ಸುತ್ತಮುತ್ತಲಿನ ಪ್ರದೇಶಗಳು, ವಾಲಿಪಟ್ಟಣಂದ ದಕ್ಷಿಣದಲ್ಲಿ ಮತ್ತು ನಾಡಪುರಂ, ಕೊಡಂಗಲ್ಲೂರಿನ ದಕ್ಷಿಣದಲ್ಲಿ ಕೊಚ್ಚಿ, ವೈಪೀನ, ಪಲ್ಲಿಪ್ಪುರಂ ಹಾಗೆಯೇ ಕರಾವಳಿಯ ಇನ್ನುಳಿದ ಅನೇಕ ಪ್ರದೇಶಗಳು ದಟ್ಟವಾದ ಜನಸಂಖ್ಯೆಯಿಂದ ತುಂಬಿದವು. ಮತ್ತು ಅವೆಲ್ಲಾ ವ್ಯಾಪಾರ ವಾಣಿಜ್ಯಗಳ ಪಟ್ಟಣಗಳಾದವು.'[೪೪] ಅಲ್ಲದೇ ಮುಸ್ಲಿಮರಿಗೆ ಅರಸರು ಉತ್ತಮ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದರೆಂದು ತಿಳಿಸಿದ್ದಾನೆ.

ದಕ್ಷಿಣ ಭಾರತದ ತಮಿಳುನಾಡಿನ ಪೂರ್ವಭಾಗದಲ್ಲಿ ಕಂಡುಬರುವ ಮುಸ್ಲಿಮರನ್ನು ಸೋನಾಕರ್(sonakar) ಎಂದು ಕರೆಯುತ್ತಿದ್ದರು.[೪೫] ನಂತರ ಇವರಿಗೆ ತುಳುಕ್ಕರರು, ರೌಥರರು, ಲಬ್ಬೆ ಮತ್ತು ಮರಕ್ಕಯಾರ ಸಮುದಾಯಗಳು ಎಂಬುದಾಗಿ ಕರೆಯಲಾಯಿತು. ಆಗ್ನೇಯ ಏಷ್ಯಾದ ರಾಷ್ಟ್ರಗಳಲ್ಲಿ ಇವರು ಚುಲಿಯನ್ನರು ಎಂದು ಗುರುತಿಸಿಕೊಂಡರು.[೪೬] ಈ ರೀತಿಯ ಹೆಸರುಗಳು ಪ್ರಾಚೀನ ಕಾಲದ ಶಾಸನ, ಸ್ಥಳೀಯ ಸಂಸ್ಕೃತಿ ತಮಿಳು ಹಾಗೂ ಬ್ರಿಟಿಶ್ ದಾಖಲೆಗಳಲ್ಲಿ ಕಂಡುಬರುತ್ತವೆ.

ರಾಷ್ಟ್ರಕೂಟರ ಕಾಲಾವಧಿಯಿಂದಲೂ ಕಂಡುಬರುವ ಶಾಸನದಲ್ಲಿ ಉಲ್ಲೇಖಿಸುವಂತೆ ಅರಬ್ ಮುಸ್ಲಿಮರಿಗೆ ತಜ್ಜಿಕರು ಎಂದು ಕರೆಯಲಾಗಿದೆ. ಸಂಯಾನ್ ಫಲಕದ ಆಧಾರದ ಪ್ರಕಾರ ರಾಷ್ಟ್ರಕೂಟರ ಕಾಲದಲ್ಲಿ ಕೊಂಕಣ ಪ್ರದೇಶದಲ್ಲಿ ತಜ್ಜಿಕರು ಎಂಬ ಗವರ್ನರ್ ಇದ್ದನೆಂದು ಹಾಗೂ ಪ್ರವಾಸಿ ಕಥನಗಳು ತಿಳಿಸುವಂತೆ ಇವರ ವ್ಯಾಪಾರದ ಕೇಂದ್ರಗಳು ರಾಷ್ಟ್ರಕೂಟರ ಅವಧಿಯಲ್ಲಿ ಇದ್ದವೆಂದು ತಿಳಿಸುತ್ತದೆ.

ಮುಸ್ಲಿಂ ಸಮುದಾಯಗಳು ಪ್ರಮುಖವಾಗಿ ಬಂದರುಪಟ್ಟಣ, ರಾಜಧಾನಿ ಪ್ರದೇಶ, ಬೃಹತ್ ನಗರಗಳಲ್ಲಿ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ವ್ಯಾಪಾರಿ ಮಾರ್ಗಗಳಲ್ಲಿ ಇವರ ವಸತಿ ನೆಲೆಗಳು ಪ್ರಮುಖವಾಗಿ ಕಂಡುಬರುತ್ತವೆ. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಕರಾವಳಿ ಭಾಗಗಳಲ್ಲಿ ವ್ಯಾಪಾರಿ ಸಮುದಾಯಗಳು ಅತಿ ಹೆಚ್ಚಾಗಿ ಕಂಡುಬಂದರೆ, ರಾಜಧಾನಿ ಪ್ರದೇಶದಲ್ಲಿ ವರ್ತಕ ವರ್ಗ, ಸೈನಿಕವರ್ಗ, ಕರಕುಶಲಕರ್ಮಿ ಸಮುದಾಯಗಳು ನೆಲೆಸಿದ್ದವು. ವಿಜಯನಗರ ಆಳ್ವಿಕೆಗೆ ಒಳಪಟ್ಟ ಪ್ರಮುಖ ಪ್ರದೇಶಗಳಲ್ಲಿ ಮುಖ್ಯವಾಗಿ ಕೋರಮಂಡಲ ಪ್ರದೇಶ, ಮಲಬಾರ್ ಪ್ರದೇಶ, ಆಂಧ್ರ, ಕರ್ನಾಟಕ, ಒರಿಸ್ಸಾ, ಗೋವಾ, ಸಿಲೋನ್ ಪ್ರದೇಶಗಳಲ್ಲಿ ಮುಸ್ಲಿಂ ವಸತಿನೆಲೆಗಳು ಕಂಡುಬರುತ್ತವೆ.

೪.೨.೧. ತಮಿಳು ಪ್ರದೇಶ

ಈಗಿನ ತಮಿಳುನಾಡಿನ ಪ್ರದೇಶವನ್ನು ವಿಜಯನಗರ ಕಾಲದಲ್ಲಿ ಕೋರಮಂಡಲ ಪ್ರದೇಶವೆಂದು ಕರೆಯಲಾಗುತ್ತಿತ್ತು. ಕೋರಮಂಡಲ ತೀರಪ್ರದೇಶವು ವಿದೇಶಿ ವ್ಯಾಪಾರ ಹಾಗೂ ಒಳನಾಡಿನ

ವ್ಯಾಪಾರ ವಿಸ್ತರಣೆಗೆ ಪ್ರಮುಖ ವಾಣಿಜ್ಯ ಕೇಂದ್ರವಾಗಿತ್ತು. ಹಾಗಾಗಿ ಈ ಪ್ರದೇಶದಲ್ಲಿ ಸ್ಥಳೀಯ ಹಾಗೂ ವಿದೇಶಿ ವರ್ತಕರು ನೆಲೆಸಿದ್ದರು. ಕೋರಮಂಡಲ ಪ್ರದೇಶವು ಮುಸ್ಲಿಂ ಸಮುದಾಯಗಳ ಪ್ರಾಚೀನ ನೆಲೆಗಳಲ್ಲಿ ಒಂದಾಗಿದೆ. ಕ್ರಿ.ಶ. ೭೩೪ರಲ್ಲಿ ಚೋಳ ರಾಜ್ಯದ ರಾಜಧಾನಿಯಾದ ಉರ್ರೈಯಾರ ಚುರ್ರೈಯಾರ(ಆಧುನಿಕ ತಿರುಚಿನಾಪಳ್ಳಿ)ಯಲ್ಲಿ ಒಂದು ಮಸೀದಿ ನಿರ್ಮಾಣವಾಗಿದೆ. ಕೋರಮಂಡಲದಲ್ಲಿ ಕಂಡುಬರುವ ಪ್ರಮುಖ ಬಂದರುಪಟ್ಟಣಗಳೆಂದರೆ ಪುಲಿಕಾಟ್, ಪೋರ್ಟೋ ನೋವೋ, ನಾಗಪಟ್ಟಣಂ, ತೊಂಡಿ, ದೇವಿಪಟ್ಟಣಂ, ಕಿಲಕ್ಕರೈ, ಕಾಯಲ್ಪಟ್ಟಣಂ, ಕೊಲಚಲ್ ಇವು ಕೋರಮಂಡಲ ಪ್ರದೇಶದ ಪ್ರಮುಖ ಬಂದರುಗಳು ಹಾಗೂ ವ್ಯಾಪಾರದ ಪ್ರಮುಖ ಪ್ರದೇಶಗಳಾಗಿದ್ದವು. ಕೋರಮಂಡಲ ತೀರಪ್ರದೇಶದಲ್ಲಿ ನೆಲೆಸಿದ್ದ ಪ್ರಮುಖ ಸಮುದಾಯಗಳೆಂದರೆ ರೌಥಾರರು ಮರಕ್ಕಯಾರರು, ಲಬ್ಬೆಗಳು ಹಾಗೂ ದಖ್ನಿಗಳು.

ಕೋರಮಂಡಲ ತೀರಪ್ರದೇಶದ ವ್ಯಾಪಾರಿವರ್ಗವು ಪೂರ್ವ ಕರಾವಳಿಯವರೆಗೂ ತಮ್ಮ ಸಂಪರ್ಕವನ್ನು ಹೊಂದಿದ್ದರು. ಇವರ ವ್ಯಾಪಾರದ ನೆಲೆಯು ಪುಲಿಕಾಟ್‌ನಿಂದ ಆರಂಭವಾಗಿ ಕೊಲಕಲ್(ಕನ್ಯಾಕುಮಾರಿ) ಮಾರ್ಗವಾಗಿ ಪೂರ್ವಕರಾವಳಿಯವರೆಗೆ ವಿಸ್ತರಿಸಿಕೊಂಡಿದ್ದರು. ತಂಜಾವೂರ್ ಪ್ರದೇಶವು ಶ್ರೀಮಂತ ವರ್ತಕ ಪ್ರಾಂತ್ಯವಾಗಿದ್ದು, ಇದರಿಂದಾಗಿ ಶ್ರೀಮಂತ ವರ್ತಕರು ಇಲ್ಲಿ ಹೆಚ್ಚಾಗಿ ನೆಲೆಸಿದ್ದರು. ಅರಬ್ ಮತ್ತು ಭಾರತಕ್ಕೆ ಸಂಪರ್ಕ ಪಟ್ಟಣಗಳಾಗಿ ರಾಮನಾಥಪುರಂ ಮತ್ತು ತಿರುವೆಲ್‌ವೆಲಿ ಬಂದರುಗಳು ಪ್ರಮುಖವಾಗಿದ್ದವು. ಇದರಿಂದಾಗಿ ಇಲ್ಲಿ ವಿದೇಶಿ ಮೂಲದ ಮುಸ್ಲಿಂ ಸಮುದಾಯಗಳು ಹೆಚ್ಚಾಗಿ ಇಲ್ಲೇ ನೆಲೆಸಿದ್ದರು. ಕ್ರಿ.ಶ. ೧೨–೧೩ನೇ ಶತಮಾನದಲ್ಲಿ ಕೋರಮಂಡಲ ಕರಾವಳಿ ಪ್ರದೇಶವು ಮುಸ್ಲಿಂ ಸಮುದಾಯಗಳ ನೆಲೆಗಳ ವಿಸ್ತರಣೆಯನ್ನು ಕಂಡಿತು. ಇವುಗಳೊಂದಿಗೆ ಇಸ್ಲಾಂ ಧರ್ಮವು ಈ ಪ್ರದೇಶದಲ್ಲಿ ವಿಸ್ತರಣೆ ಹೊಂದಿ ಮುಸ್ಲಿಂ ನೆಲೆಗಳಲ್ಲಿಯೇ ಪ್ರಮುಖ ಪ್ರದೇಶವಾಗಿ ಗುರುತಿಸಿಕೊಂಡಿತ್ತು. ಇವರು ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ತಮಿಳು ಭಾಷೆಯನ್ನು ಅವರ ಮಾತೃಭಾಷೆಯಾಗಿ ಬಳಸಿಕೊಂಡರು. ಇದಕ್ಕೆ ಬಹುಮುಖ್ಯ ಕಾರಣ, ಇವರಿಗೆ ಸ್ಥಳೀಯ ಅರಸರು ನೀಡುತ್ತಿದ್ದ ಪ್ರಾಮುಖ್ಯತೆ, ಪ್ರೋತ್ಸಾಹ ಹಾಗೂ ಅನುಕೂಲತೆಗಳು. ಇವರು ಪ್ರಮುಖವಾಗಿ ನಾಗೂರ್, ಕರೈಕ್ಕರೈ, ಕೀಲಕ್ಕರೈ, ಅದಿರಾಮಪಟ್ಟಣಂ, ಮನದಪಂ, ವೇದಲೈ, ನಾಗಪಟ್ಟಣಂ, ಪೋರ್ಟೋನೋವೋ ಬಂದರು ಪ್ರದೇಶಗಳಲ್ಲಿ ವ್ಯಾಪಾರ ಚಟುವಟಿಕೆಯಲ್ಲಿ ಕೆಲವರು ತೊಡಗಿಸಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಈ ಪಟ್ಟಣಗಳು ಮುಸ್ಲಿಂ ಸಮುದಾಯಗಳ ಶಾಶ್ವತ ನೆಲೆಗಳಾದವು. ಇವರುಗಳಲ್ಲಿ ಹೆಚ್ಚಿನ ಪಾಲು ಅರಬ್ ಸಮುದ್ರಯಾನಿಗಳಾಗಿ, ನಾವಿಕರಾಗಿ, ಹಡಗು ತಯಾರಕರಾಗಿ ಹಾಗೂ ಬಹುಮುಖ್ಯವಾಗಿ ವ್ಯಾಪಾರಿ ವೃತ್ತಿಗಳಲ್ಲಿ ತಮ್ಮನ್ನು ಗುರುತಿಸಿಕೊಂಡರು. ವ್ಯಾಪಾರಿ ಸಮುದಾಯಗಳ ಜೊತೆಗೆ ಧಾರ್ಮಿಕ ಮಿಷನರಿಗಳು ಸಹ ಇಲ್ಲಿ ಬಂದು ನೆಲೆಸಿದರು.[೪೭]

ಮುಸ್ಲಿಂ ವರ್ತಕರು ಸ್ಥಳೀಯ ಅರಸರ ಪ್ರಾಂತ್ಯಗಳಲ್ಲಿ ಅಗಾಧವಾದ/ಅಪರಿಮಿತವಾದ ಪ್ರಾಬಲ್ಯವನ್ನು ಪಡೆದುಕೊಂಡಿದ್ದರು. ಇವರಲ್ಲಿ ಬೆರಳಣಿಕೆಯಷ್ಟು ಜನ ಜಮೀನ್ದಾರರಾಗಿ ಸೇವೆ

ಸಲ್ಲಿಸುತ್ತಿದ್ದರು. ಕೋರಮಂಡಲದ ಪ್ರದೇಶಗಳಲ್ಲಿ ನಾವಿಕರಾಗಿ, ಆಡಳಿತಗಾರರಾಗಿ ಹಾಗೂ ಸಮುದ್ರತೀರದ ರಕ್ಷಕರಾಗಿಯೂ ಸೇವೆಯನ್ನು ಸಹ ಮಾಡುತ್ತಿದ್ದರು. ಪ್ರಮುಖವಾಗಿ ಸಿಲೋನ್, ಮಲಕ್ಕಾ ಮತ್ತು ಇತರ ಪೂರ್ವರಾಷ್ಟ್ರಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು. ಕ್ರಿ.ಶ. ೧೫ನೇ ಶತಮಾನದವರೆಗೆ ಅಂದರೆ ಪೋರ್ಚುಗೀಸರು ಭಾರತವನ್ನು ಪ್ರವೇಶಿಸುವವರೆಗೆ ಪ್ರಾಬಲ್ಯವನ್ನು ಪಡೆದುಕೊಂಡಿದ್ದರು.

ಕ್ರಿ.ಶ. ೧೩-೧೪ನೇ ಶತಮಾನದಲ್ಲಿ ಕೋರಮಂಡಲದ ಮುಸ್ಲಿಮರು ಸಮುದ್ರತೀರ ಪ್ರದೇಶದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದರು. ಕೋರಮಂಡಲ, ಪುಲಿಕಾಟ್, ಪೋರ್ಟೋನೋವೋ, ನಾಗಪಟ್ಟಣಂ, ಕುಲಶೇಖರಪಟ್ಟಣಗಳಲ್ಲಿ ವ್ಯಾಪಾರ ಚುರುಕಾಗಿ ನಡೆಯುತ್ತಿತ್ತು. ಈ ಬಂದರು ಪಟ್ಟಣಗಳು ಸಂಪೂರ್ಣವಾಗಿ ಮುಸ್ಲಿಂ ವರ್ತಕ ಸಮುದಾಯಗಳ ಕೈಯಲ್ಲಿ ಇತ್ತು. ಯುರೋಪಿಯನ್ ದಾಖಲೆಗಳಲ್ಲಿ ಈ ಬಂದರು ಪ್ರದೇಶಗಳಿಗೆ ಮೂರರ ಬಂದರು ಪ್ರದೇಶಗಳೆಂದು ಕರೆಯಲಾಗಿದೆ. ಸುಸನ್‌ವೇಲೆನು ತಿಳಿಸುವಂತೆ ಈ ಬಂದರು ಪ್ರದೇಶಗಳಿಗೆ 'ಮರಕ್ಕಯಾರರ ಬಂದರುಗಳು' ಎಂದು ಹೆಸರಿಸಿದ್ದಾರೆ. ಈ ವರ್ತಕರು ಆಗ್ನೇಯ ಏಷ್ಯಾದ ರಾಷ್ಟ್ರಗಳೊಂದಿಗೆ ಮತ್ತು ಸಿಲೋನ್ ಹಾಗೂ ದೂರಪ್ರಾಚ್ಯ ದೇಶಗಳ ಸುಲ್ತಾನರೊಂದಿಗೆ ವಾಣಿಜ್ಯ ಸಂಪರ್ಕವನ್ನು ಹೊಂದಿದ್ದರು.

ಕೋರಮಂಡಲ ಪ್ರದೇಶದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ರೌಥರ್, ಲಬ್ಬೆ, ಮರಕ್ಕಯಾರರು ಮತ್ತು ದಖ್ಖನಿಗಳು ಅಧಿಕವಾಗಿ ಕಂಡುಬರುತ್ತಿದ್ದರು. ಕೋರಮಂಡಲದ ತೀರಪ್ರದೇಶದ ಪ್ರಮುಖ ಪಟ್ಟಣಗಳಲ್ಲಿ ಕಂಡುಬರುವ ಮಾಹಿತಿ ಈ ಕೆಳಗಿನಂತಿದೆ.

ಕೀಲಕರೈ ಪ್ರದೇಶವು ಮುಸ್ಲಿಂ ಸಮುದಾಯಗಳ ನೆಲೆಯಾಗಿದ್ದು, ಅರಬ್ಬರ ಬಂದರು ಪಟ್ಟಣವಾಗಿತ್ತು. ಮುಖ್ಯವಾಗಿ ಅರಬ್ಬರು ಹಾರಮುಜ್, ಕಾಯರ್, ಬಹರೇನ್ ಮತ್ತು ಒಮನ್ ದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು. ಕುದುರೆ ವ್ಯಾಪಾರಕ್ಕೆ ಕೀಲಕರೈ ಪ್ರಾಂತ್ಯ ಪ್ರಸಿದ್ಧಿಯನ್ನು ಪಡೆದುಕೊಂಡಿತ್ತು. ಈ ಬಂದರು ಪ್ರದೇಶದಲ್ಲಿ ಕುದುರೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಕಿಲಕರೈ(Tiruperunthurai) ಪ್ರಾಂತ್ಯದಿಂದ ದಕ್ಷಿಣ ಭಾರತದ ವಿವಿಧ ರಾಜ್ಯಗಳಿಗೆ ಕುದುರೆಗಳನ್ನು ರಫ್ತು ಹಾಗೂ ಮಾರಾಟ ಮಾಡಲಾಗುತ್ತಿತ್ತು. ಸುಲೈಮಾನ್ ಮತ್ತು ಅಬುಜಾಯಿದ್ ತಿಳಿಸುವಂತೆ ಮುತ್ತು-ರತ್ನಗಳನ್ನು ಮಾರುವ ವ್ಯಾಪಾರ ಸಮುದಾಯವು ಇಲ್ಲಿ ಪ್ರಮುಖವಾಗಿತ್ತು. ಕ್ರಿ.ಶ. ೧೨-೧೩ನೇ ಶತಮಾನದ ವೇಳೆಗೆ ಈ ಪ್ರಾಂತ್ಯದಲ್ಲಿ ಮುತ್ತುಗಳ ಕೈಗಾರಿಕೆಯು ಸಹ ಸ್ಥಾಪನೆಯಾಗಿ ಪ್ರಸಿದ್ಧಿ ಪಡೆದುಕೊಂಡಿತ್ತು. ಮಾರ್ಕೋ ಪೋಲೊ ಮತ್ತು ವಾಸಕ್ ತಿಳಿಸುವಂತೆ, 'ಈ ಪ್ರಾಂತ್ಯವು ಕ್ರಿ.ಶ. ೧೨ನೇ ಶತಮಾನದಲ್ಲಿ ಮುತ್ತು, ಮೀನುಗಾರಿಕೆ ಹಾಗೂ ಕುದುರೆಗಳ ವ್ಯಾಪಾರದಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ವಿಜಯನಗರ ಕಾಲಾವಧಿಯಲ್ಲಿ ವ್ಯಾಪಾರಿವರ್ಗ ಹಾಗೂ ಕಾರ್ಮಿಕ ವರ್ಗಗಳು ಪ್ರಮುಖ ಪಾತ್ರ ವಹಿಸಿದ್ದವು.

ಕೇದ/ಖೇದ ಪಟ್ಟಣವು ಜವಳಿ ವ್ಯಾಪಾರದ ಆಮದಿಗೆ ಪ್ರಮುಖವಾದ ಬಂದರು ಪ್ರದೇಶವಾಗಿತ್ತು. ಹೆಚ್ಚಿನ ಮೌಲ್ಯದ ಜವಳಿ ಹಡಗುಗಳು ಬಂದರುಗಳಲ್ಲಿ ನೆಲೆಸಿ ವರ್ತಕರ ಮನೆಗಳಲ್ಲಿ ನೆಲೆಸಿದ್ದರು. ಕೋರಮಂಡಲದ ತಮಿಳು ಮುಸ್ಲಿಮರು ಮಲಯ ರಾಜ್ಯದ ರಾಜರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಕೇದ ಪ್ರದೇಶದಲ್ಲಿ ಹಡಗು ವ್ಯಾಪಾರವನ್ನು ಮುಸ್ಲಿಮರು ಕೈಗೊಳ್ಳುತ್ತಿದ್ದರು. ಈ ಪ್ರದೇಶದ ಸ್ಥಳೀಯ ಆಡಳಿತಗಾರರು ಹಡಗು ವ್ಯಾಪಾರಕ್ಕೆ ಉತ್ತೇಜನ ನೀಡಿದ್ದರು. ಚುಲಿಯಾಸ್ ಮುಸ್ಲಿಮರು ಹಡಗುಗಳ ಮಾರಾಟದ ಮಧ್ಯವರ್ತಿಗಳಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದರು.

ಕೇದ ಮತ್ತು ಪೆನಾಗ್ ಪ್ರದೇಶಗಳು ವ್ಯಾಪಾರದ ಮುಖ್ಯ ಮಾರ್ಗವಾಗಿವೆ. ಕೋರಮಂಡಲದ ಮುಸ್ಲಿಮರು ಬೃಹತ್ ಸಂಖ್ಯೆಯಲ್ಲಿ ಸಿಗುವ ಆನೆಗಳನ್ನು ಕಡಿಮೆ ಬೆಲೆಗೆ ಕೊಂಡುಕೊಂಡು ಇದನ್ನು ಕೋರಮಂಡಲದಲ್ಲಿ ಮಾರಿ ಅಧಿಕ ಲಾಭವನ್ನು ಪಡೆಯುತ್ತಿದ್ದರು. ಕೋರಮಂಡಲದ ಮುಸ್ಲಿಂ ವರ್ತಕರು ಮಧ್ಯವರ್ತಿಗಳಾಗಿ ವಿಜಯನಗರ, ಬಹಮನಿ ರಾಜ್ಯಗಳಿಗೆ ಸಂಚರಿಸಿ ಕುದುರೆಗಳನ್ನು ಮಾರಿ ಅಧಿಕ ಲಾಭ ಪಡೆಯುತ್ತಿದ್ದರು.[೪೮]

ಕ್ರಿ.ಶ. ೧೫೧೧ರಲ್ಲಿ ಮಲಕ್ಕಾ ಪ್ರದೇಶವನ್ನು ಪೋರ್ಚುಗೀಸರು ವಶಪಡಿಸಿಕೊಂಡರು. ಇಲ್ಲಿಂದ ಇಲ್ಲಿನ ಮುಸ್ಲಿಂ ವರ್ತಕರು ಬೃಹತ್ ಸಂಖ್ಯೆಯಲ್ಲಿ ಕೇದ ದ್ವೀಪಸಮೂಹಕ್ಕೆ ತಮ್ಮನ್ನು ತಾವು ವಿಸ್ತರಿಸಿಕೊಂಡರು. ಕೇದಾದಲ್ಲಿ ವಲಸೆ ಬಂದ ಇವರಿಗೆ ಅಲ್ಲಿನ ಸ್ಥಳೀಯ ಅರಸರ ಪ್ರೋತ್ಸಾಹ, ಬೆಂಬಲವು ದೊರಕಿತು. ಇಲ್ಲಿ ನೆಲೆಸಿದ ಮುಸ್ಲಿಂ ಸಮುದಾಯಗಳು ಇಸ್ಲಾಂ ಸಂಸ್ಕೃತಿಯ ಬೆಳವಣಿಗೆಯನ್ನು ಸಹ ಮಾಡಿತು.

೪.೨.೨. ಕನ್ನಡ ಪ್ರದೇಶ

ಹಂಪಿ ಪ್ರದೇಶ

ವಿಜಯನಗರ ರಾಜಧಾನಿ ಪಟ್ಟಣವಾದ ಹಂಪಿಯು ಮುಸ್ಲಿಂ ಸಮುದಾಯಗಳ ಪ್ರಮುಖ ವಸತಿನೆಲೆಯಾಗಿತ್ತು. ಹಂಪಿ ಪ್ರದೇಶವು ವ್ಯಾಪಾರದ ಅತಿ ದೊಡ್ಡ ನಗರವಾಗಿದ್ದಲ್ಲದೆ ಇಲ್ಲಿ ಅರಸುಮನೆತನದವರು ಸಹ ನೆಲೆಸಿದ್ದರು. ಹಾಗಾಗಿ ಇಲ್ಲಿ ಆಡಳಿತ, ಆರ್ಥಿಕ, ಧಾರ್ಮಿಕ, ಚಟುವಟಿಕೆಗಳು ಚುರುಕಾಗಿತ್ತಲ್ಲದೇ, ಶ್ರೀಮಂತಿಕೆಯಿಂದ ಕೂಡಿತ್ತು. ಇಲ್ಲಿ ಸಿಗುವಂತಹ ಸ್ಮಾರಕಾವಶೇಷಗಳಿಂದ ವಿಜಯನಗರ ಚರಿತ್ರೆಯನ್ನು ಮರು ಅಧ್ಯಯನ ನಡೆಸಲಾಗುತ್ತಿದೆ. ವಿಜಯನಗರ ಚರಿತ್ರೆಯಲ್ಲಿ ಅನೇಕ ಸ್ಮಾರಕಗಳು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ಕಂಡುಬಂದಿದ್ದು, ಅವುಗಳಲ್ಲಿ ಕೆಲವು ಇಂದಿಗೂ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಹಾಗಾಗಿ ಇಲ್ಲಿ ಮುಸ್ಲಿಂ ವರ್ತಕರು, ಸೈನಿಕರು, ಕುಶಲಕರ್ಮಿಗಳು, ಸೂಫಿ ಸಂತರು ಇಲ್ಲಿ ನೆಲೆಸಿದ್ದರು ಎಂದು ತಿಳಿಯಬಹುದು. ಇಷ್ಟೇ ಅಲ್ಲದೆ, ಇವರು ಈ ರಾಜ್ಯದ ವಿವಿಧ ಭಾಗಗಳಲ್ಲಿಯೂ ನೆಲೆಸಿದ್ದರು. ವಿದೇಶಿ ಪ್ರವಾಸಿಗರಾದ ನಿಕೊಲೆ-ದಿ-ಕಾಂಟಿ, ಅಬ್ದುಲ್ ರಜಾಕ್, ದುಆರ್ತೆ-ಬಾರ್ಬೋಸಾ, ಡೋಮಿಂಗೋ ಪಾಯೆಸ್, ನ್ಯೂನಿಜ್ ಮೊದಲಾದವರು ಈ ರಾಜಧಾನಿ ಪಟ್ಟಣವನ್ನು ವಿಜಯನಗರವೆಂದು ಕರೆದಿದ್ದಾರೆ.

ದುಆರ್ತೆ ಬಾರ್ಬೋಸಾ ವಿಜಯನಗರ ರಾಜಧಾನಿ ಹಂಪಿ ಪಟ್ಟಣಕ್ಕೆ ಭೇಟಿ ನೀಡಿದಾಗ ಇಲ್ಲಿ ಮುಸ್ಲಿಂ ವರ್ತಕ ಸಮುದಾಯ ನೆಲೆಸಿದ ಮಾಹಿತಿಯನ್ನು ತಿಳಿಸಿದನು. ಅವನು ಉಲ್ಲೇಖಿಸುವಂತೆ 'ನಗರದಲ್ಲಿ ಶ್ರೀಮಂತ ಸರದಾರರು ವಾಸ ಮಾಡುವ ಮನೆಗಳು ಇವೆ. ಜನಸಾಮಾನ್ಯರ ಮನೆಗಳೆಲ್ಲಾ ಹುಲ್ಲುಹೊದಿಸಿದವುಗಳು. ನಗರದ ಬೀದಿಗಳು ಚೌಕಗಳು ವಿಶಾಲವಾಗಿದ್ದವು. ನಾನಾ ದೇಶದ ಮತ್ತು ನಾನಾ ಜನಾಂಗದ ಜನರು ಈ ಬೀದಿಗಳಲ್ಲಿಯೂ ಚೌಕಗಳಲ್ಲಿಯೂ ತುಂಬಿರುತ್ತಾರೆ. ಏಕೆಂದರೆ ಇಲ್ಲಿ ಅನೇಕ ಮೂರ್ ವರ್ತಕರು ಮತ್ತು ಶ್ರೀಮಂತ ಜೆಂಟೈಲ್ ನಿವಾಸಿಗಳಲ್ಲದೆ ಬೇರೆ ಕಡೆಗಳಿಂದ ಅಸಂಖ್ಯಾತ ಸಂಖ್ಯೆಯಲ್ಲಿ ಇಲ್ಲಿಗೆ ಬಂದು ಮುತ್ತಿಕೊಂಡಿರುವ ಜನರಿದ್ದಾರೆ. ಇಲ್ಲಿಗೆ ಬರಬಹುದಾದವರೆಲ್ಲ ಬಂದು ಇಲ್ಲಿದ್ದು ವ್ಯಾಪಾರ ಸಾಪಾರಗಳಲ್ಲಿ ತೊಡಗಿದ್ದಾರೆ. ಯಾರು ಬೇಕಾದರೂ ಅಡೆತಡೆಗಳಿಲ್ಲದೆ ಸುರಕ್ಷಿತವಾಗಿ ಇಲ್ಲಿರಬಹುದು. ಯಾರಿಂದಲೂ ಅವರಿಗೆ ತೊಂದರೆ ಇಲ್ಲ. ಎಲ್ಲಿಂದ ಬಂದರೆಂದು ಯಾರೂ ಕೇಳುವುದಿಲ್ಲ. ಯಾವ ಜನಾಂಗದವರೆಂದು ಪ್ರಶ್ನೆ ಮಾಡುವುದಿಲ್ಲ. ಅವರು ಮೂರ್‌ರಾಗಿರಬಹುದು ಅಥವಾ ಕ್ರೈಸ್ತರಾಗಿರಬಹುದು. ಎಲ್ಲರೂ ತಮ್ಮ ಮತ ಧರ್ಮದಂತೆ ಅಥವಾ ತಮ್ಮ ಇಷ್ಟದಂತೆ ಇರಬಹುದು.'[೯] ಹಂಪಿಗೆ ಹೊಂದಿಕೊಂಡಿದ್ದ ಅನೇಕ ಚಿಕ್ಕ ಪುಟ್ಟ ಪಟ್ಟಣಗಳಿದ್ದವು. ಅವುಗಳನ್ನು ಹಂಪಿಯ ಉಪನಗರವೆಂದು ಕರೆಯಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಕಮಲಾಪುರ, ಕಡ್ಡಿರಾಂಪುರ, ಹೊಸಪೇಟೆ ನಗರ, ಮಲಪನಗುಡಿ, ಕೃಷ್ಣಪುರಗಳಲ್ಲಿ ಇವರ ನೆಲೆಗಳು ಕಂಡುಬರುವವು. ಫೆರಿಸ್ತಾ ಉಲ್ಲೇಖಿಸುವಂತೆ 'ಎರಡನೇ ದೇವರಾಯನು ಮುಸ್ಲಿಮರಿಗಾಗಿ ವಿಜಯನಗರದಲ್ಲಿ ಮಸೀದಿಯೊಂದನ್ನು ಕಟ್ಟಿಸಿದನು' ಎಂದು ತಿಳಿಸಿದ್ದಾನೆ. ಇಲ್ಲಿ ಕಂಡುಬರುವ ಸಮುದಾಯಗಳೆಂದರೆ ರೌಥಾರರು, ದಖ್ಖನಿಗಳು, ಸೂಫಿಗಳು, ನೆಲೆಸಿದ್ದರು. ಬಾರ್ಬೋಸ ವಿಜಯನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ತಾನು ಕಂಡ ಸಂಗತಿಗಳನ್ನು ಈ ರೀತಿ ಉಲ್ಲೇಖಿಸುತ್ತಾನೆ, 'ಶ್ರೀ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಹೆಚ್ಚು ಕಡಿಮೆ ಎಲ್ಲಾ ಗ್ರಾಮಗಳಲ್ಲಿ ಜೆಂಟೈಲರೇ ಇರುವರು. ಇವರಲ್ಲಿ ಕೆಲವು ಮೂರರಿದ್ದಾರೆ. ಉಳಿದ ಊರುಗಳು ಅವನಿಗೆ ಸೇರಿದವುಗಳು. ಅಲ್ಲಿ ತನ್ನ ಪರವಾಗಿ ರಾಜ್ಯಪಾಲರುಗಳನ್ನು ತೆರಿಗೆ ವಸೂಲಿಕಾರರನ್ನು ನೇಮಿಸಿದ್ದಾನೆ' ಎಂದು ತನ್ನ ಪ್ರವಾಸ ಕಥನದಲ್ಲಿ ತಿಳಿಸಿದ್ದಾನೆ.

ಹಂಪಿ ಪ್ರದೇಶದಲ್ಲಿ ಪ್ರಭುತ್ವ ಹಿನ್ನೆಲೆಯ ವರ್ಗ, ವ್ಯಾಪಾರಸ್ಥರ ವರ್ಗ, ಕುಶಲಕರ್ಮಿಗಳ ವರ್ಗ, ಧಾರ್ಮಿಕ ವರ್ಗ ಹೀಗೆ ಎಲ್ಲಾ ವಿವಿಧ ಸಮುದಾಯಗಳು ಇಲ್ಲಿ ಕಂಡುಬರುತ್ತವೆ. ಇಲ್ಲಿ ನಿರ್ಮಾಣವಾದಂತಹ ಇಂಡೋ-ಇಸ್ಲಾಮಿಕ್ ಶೈಲಿಯ ಮಸೀದಿಗಳು, ವಸತಿನೆಲೆಗಳು, ಸಮಾಧಿ ಕಟ್ಟಡಗಳು, ದರ್ಗಾಗಳು ಇವರ ರಾಜಧಾನಿ ಪ್ರದೇಶದಲ್ಲಿ ಮುಸ್ಲಿಮರ ಇರುವಿಕೆ ಬಗೆಗೆ ಮಾಹಿತಿ ನೀಡುತ್ತವೆ. ಕಡ್ಡಿರಾಂಪುರದಲ್ಲಿ ಇರುವ ಗೋರಿ ಕಟ್ಟಡಗಳು, ಅನಂತಶಯನಗುಡಿಯ ರೈಲ್ವೆ ಹಳಿಗಳ ಸಮೀಪದಲ್ಲಿ ಕಂಡುಬರುವ ಸಮಾಧಿ, ಕಟ್ಟಡಗಳು, ಹಂಪಿ ಪ್ರದೇಶದಲ್ಲಿರುವ ಸಮಾಧಿ, ಮಸೀದಿ ಕಟ್ಟಡಗಳು ವಿಜಯನಗರ ಹಂಪಿ ಪ್ರದೇಶದ ಸುತ್ತಲೂ ಇವರು ಇದ್ದ ಬಗ್ಗೆ ಮಾಹಿತಿ ತಿಳಿಸುತ್ತದೆ.

ವಿಜಯನಗರದ ಹಂಪಿ ಪ್ರದೇಶವು ವ್ಯಾಪಾರಕ್ಕೆ ಪ್ರಸಿದ್ಧ ಸ್ಥಳವಾಗಿತ್ತು. ವಿದೇಶಿ ವರ್ತಕರು ವ್ಯಾಪಾರ-ವಾಣಿಜ್ಯದ ಚಟುವಟಿಕೆಗಳಲ್ಲಿ ತೊಡಗಿದ್ದರು ಎಂಬುದಕ್ಕೆ ಪ್ರವಾಸಿ ಕಥನಗಳು ಮಾಹಿತಿ ನೀಡುತ್ತವೆ. ಪ್ರವಾಸಿ ಕಥನದಲ್ಲಿ ಉಲ್ಲೇಖಿಸುವಂತೆ, 'ಮಧ್ಯಕಾಲೀನ ಚರಿತ್ರೆಯಲ್ಲಿ ವ್ಯಾಪಾರ ಸಂಘಗಳು ಮಹತ್ವದ ಪಾತ್ರ ವಹಿಸಿದ್ದವು. ಯುರೋಪಿನಾದ್ಯಂತ ವ್ಯಾಪಾರವು ವಾಣಿಜ್ಯ ಮತ್ತು ವರ್ತಕ ಸಂಘಗಳಿಂದ ಬಹುಮಟ್ಟಿಗೆ ಪ್ರಭಾವಿತವಾಗಿತ್ತು. ವರ್ತಕರು ತಮ್ಮದೇ ಆದ ವೃತ್ತಿ ಸಂಘಗಳಿಂದ ಬಹುಮಟ್ಟಿಗೆ ಪ್ರಭಾವಿತವಾಗಿತ್ತು. ವರ್ತಕರು ತಮ್ಮದೇ ಆದ ವೃತ್ತಿ ಸಂಘಗಳನ್ನು ರೂಪಿಸಿಕೊಂಡಿದ್ದರು'.

ವಿಜಯನಗರ ಪಟ್ಟಣವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದ್ದ ದೊಡ್ಡ ವ್ಯಾಪಾರ ಕೇಂದ್ರವೂ ಆಗಿತ್ತು. ರಷ್ಯಾ, ಪರ್ಶಿಯಾ, ಇಟಲಿ ಮತ್ತು ಪೋರ್ಚುಗಲ್ಲುಗಳಿಂದ ೧೫-೧೬ನೇ ಶತಮಾನಗಳಲ್ಲಿ ಇಲ್ಲಿಗೆ ಬಂದ ಪ್ರವಾಸಿಗರು ವಿಜಯನಗರ ಪಟ್ಟಣವು ಕರ್ನಾಟಕ ವಾಣಿಜ್ಯ ಚಟುವಟಿಕೆಗಳಿಗೆ ಕೇಂದ್ರಸ್ಥಾನವಿತ್ತೆಂದು ತಿಳಿಸಿದ್ದಾರೆ. ಅವರಲ್ಲಿ ಪ್ರಮುಖನಾಗಿರುವ ಪಾಯೆಸ್ ತಿಳಿಸುವಂತೆ, 'ಈ ನಗರದಲ್ಲಿ ಜಗತ್ತಿನ ಪ್ರತಿಯೊಂದು ರಾಷ್ಟ್ರದಿಂದ ಬಂದ ವಿವಿಧ ಜನರನ್ನು ನೋಡಬಹುದು. ಅದಕ್ಕೆ ಕಾರಣ ಅಲ್ಲಿ ನಡೆಯುವ ವ್ಯಾಪಾರ-ವಹಿವಾಟಾಗಿದೆ. ವಿಜಯನಗರದಲ್ಲಿ ಒಂದು ಲಕ್ಷ ಮನೆಗಳಿದ್ದವು. ಸರಾಸರಿ ಒಂದು ಮನೆಗೆ ೫ ಜನರಂತೆ ಲೆಕ್ಕ ಹಾಕಿದರೆ, ೧೬ನೇ ಶತಮಾನದಲ್ಲಿ ಈ ವ್ಯಾಪಾರಿ ಕೇಂದ್ರದ ಜನಸಂಖ್ಯೆ ೫ ಲಕ್ಷ ಹೊಂದಿತ್ತು.' ಎಂದು ತಿಳಿಸಿದ್ದಾನೆ.

ವಿಜಯನಗರ ಸಾಮ್ರಾಜ್ಯದಲ್ಲಿ ವ್ಯಾಪಾರಿ ವರ್ಗಗಳಷ್ಟೇ ಅಲ್ಲದೆ ಇವರ ಸೈನ್ಯದಲ್ಲಿ ಮುಸ್ಲಿಂ ರಾವುತರು ಕಂಡುಬರುತ್ತಾರೆ. ಇವರ ಬಗ್ಗೆ ಶಾಸನಗಳು ಉಲ್ಲೇಖವನ್ನು ನೀಡುತ್ತವೆ. ಹಂಪಿ ಶಾಸನದಲ್ಲಿ ಉಲ್ಲೇಖ ಬರುವಂತೆ ಕ್ರಿ.ಶ. ೧೪೨೦ರಲ್ಲಿ ಮಿಯಾರಾಹುತನಿಗೆ ಪುಣ್ಯವಾಗಬೇಕೆಂದು ಬಸವ ಎಂಬ ನಾಯಕನು ಗೋರಿ ಮತ್ತು ಮಸೀದಿಯನ್ನು ಕಟ್ಟಿಸಿದ ಉಲ್ಲೇಖವಿದೆ. ಸಕಲಜ ರಾವುತನು ಚಿಕ್ಕರಾಯರಿಗೆ ಪುಣ್ಯವಾಗಬೇಕೆಂದು ಗುಮ್ಮಟವನ್ನು ಕಟ್ಟಿಸಿದನೆಂದು ಶಾಸನ ತಿಳಿಸುತ್ತದೆ.[೩೦]

ಕ್ರಿ.ಶ. ೧೪೩೯ರ ಒಂದು ಶಾಸನದಲ್ಲಿ 'ದೇವರಾಯ ಮಹಾರಾಯನ ಕಟ್ಟಿಗೆಯ ಸೇವೆಯ ಅಹಮದಖಾನನು ರಾಜನಿಗೆ ಧರ್ಮವಾಗಬೇಕೆಂದು ಧರ್ಮಶಾಲೆ ಮತ್ತು ಬಾವಿಯನ್ನು ಕಟ್ಟಿಸಿದ ಪ್ರಸ್ತಾಪವಿದೆ.' ಕ್ರಿ.ಶ. ೧೪೪೧ರ ಶಾಸನ 'ದಾವಿಮನ ಮಗ ಬರಿಯಮನು ಆರು ವರಹಗಳಿಗೆ ಮನೆಯನ್ನು ಕೊಂಡು ದಾನವಾಗಿ ಬಿಟ್ಟ ವಿಷಯವನ್ನು ಉಲ್ಲೇಖಿಸುತ್ತದೆ.' ವಿಜಯನಗರ ಕಾಲದ ಉಲ್ಲೇಖವಿಲ್ಲದ ಇನ್ನೊಂದು ಶಾಸನ 'ಪಿಲಿಕುಂಚಲಕನು ಬಯಿರಾವುತನಿಗೆ ಬಾವಿಯನ್ನು ಕೊಟ್ಟ ವಿಷಯ ತಿಳಿಸುತ್ತದೆ.' ಈ ಶಾಸನದ ಉಲ್ಲೇಖಗಳು ಹಂಪಿ ರಾಜಧಾನಿ ಪಟ್ಟಣದಲ್ಲಿ ಇವರು ನೆಲೆಸಿದ್ದರೆಂದು ಸ್ಪಷ್ಟಪಡಿಸುತ್ತವೆ.[೩೧]

ಕ್ರಿ.ಶ. ಸುಮಾರು ೧೪ನೇ ಶತಮಾನದಿಂದ ೧೬ನೇ ಶತಮಾನದವರೆಗೆ ಹಂಪಿಯು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಅರಬ್, ಪರ್ಶಿಯನ್ ವ್ಯಾಪಾರಸ್ಥರು ಹಂಪಿಯ ಹಲವಾರು ಬಜಾರುಗಳಲ್ಲಿ

ವ್ಯಾಪಾರವನ್ನು ನಡೆಸುತ್ತಿದ್ದರು. ೧೫ನೇ ಶತಮಾನದಲ್ಲಿ ಪೋರ್ಚುಗೀಸರ ಪ್ರಭಾವ ಹೆಚ್ಚಾಗಿ ಮುಸ್ಲಿಂ ವ್ಯಾಪಾರಸ್ಥರು ಪಶ್ಚಿಮ ಕರಾವಳಿಯಿಂದ ಕಾಲ್ತೆಗೆದರು. ಕುದುರೆ ವ್ಯಾಪಾರದ ಏಕಸ್ವಾಮ್ಯತೆ ಪೋರ್ಚುಗೀಸರ ಅಧೀನದಲ್ಲಾಯಿತು. 'ವಿಜಯನಗರ ಅರಸರು ಕುದುರೆಗಳನ್ನು ಸಂಗ್ರಹಿಸುವ ಆತುರದಲ್ಲಿ ಪೋರ್ಚುಗೀಸರ ವಿಸ್ತರಣೆಯ ಹಂಚಿಕೆಗಳನ್ನು ಅರ್ಥ ಮಾಡಿಕೊಳ್ಳದಾದರು. ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡು ಹಲವು ಪ್ರಮುಖ ಬಂದರುಗಳನ್ನು ಬಿಟ್ಟುಕೊಟ್ಟರು. ಪೋರ್ಚುಗೀಸ್ ಅರಸರು ಮತ್ತು ವಿಜಯನಗರದ ಅರಸರು ಮೈತ್ರಿ ಸಂಬಂಧ ಬೆಳೆಸಿದರು. ವ್ಯಾಪಾರ ಸಂಬಂಧದ ಜೊತೆಗೆ ಪರಸ್ಪರ ಸೇನಾ ಸಹಾಯ ಮಾಡಲು ಒಪ್ಪಿದರು. ಪರಿಣಾಮವಾಗಿ ವಿಜಯನಗರ ಪಟ್ಟಣವು ಆಮದು ಮತ್ತು ರಫ್ತು ವ್ಯಾಪಾರದಲ್ಲಿ ಅಪಾರ ನಷ್ಟ ಅನುಭವಿಸಿತು. ಪೋರ್ಚುಗಲ್ ಆಮದು ಮತ್ತು ರಫ್ತಿನಲ್ಲಿ ಏಕಸ್ವಾಮ್ಯತೆ ಪಡೆದುಕೊಂಡಿತು.'

ಕರಾವಳಿ ಕರ್ನಾಟಕ

ಈಗಿನ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡ ಪ್ರಾಂತ್ಯಗಳು ಕೆನರಾವೆಂದು ಕರೆಯಲಾಗುತ್ತದೆ. ಕ್ರಿ.ಶ. ೧೦ನೇ ಶತಮಾನದಿಂದ ೧೫ನೇ ಶತಮಾನದ ಆರ್ಥಿಕ ಚಟುವಟಿಕೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು. ಪಶ್ಚಿಮ ಕರಾವಳಿಯು ಒಳನಾಡಿನ ವ್ಯಾಪಾರ ಮಾರ್ಗವನ್ನು ಅಂತಾರಾಷ್ಟ್ರೀಯ ವ್ಯಾಪಾರ ಮಾರ್ಗದೊಂದಿಗೆ ಸಂಪರ್ಕಿಸುವ ತಾಣವಾಗಿತ್ತು. ಇಬ್–ನೆ–ಬತುತಾ ಮಂಗಳೂರಿಗೆ ಭೇಟಿ ನೀಡಿದಾಗ ಇಲ್ಲಿನ ಮುಸ್ಲಿಂ ವಸತಿನೆಲೆಯ ಬಗ್ಗೆ ದಾಖಲಿಸಿದ್ದಾನೆ. ಅವನು ತಿಳಿಸುವಂತೆ ಮಂಗಳೂರಿನಲ್ಲಿ ನಾಲ್ಕು ಸಾವಿರ ಮುಸಲ್ಮಾನರು ಕಂಡುಬರುತ್ತಿದ್ದರು.[೫೨] ಇವುಗಳಲ್ಲಿ ಅನೇಕ ಮಾರ್ಗಗಳ ಮೂಲಕ ಒಳನಾಡಿನ ವ್ಯಾಪಾರ ಜರುಗುತಿತ್ತು. ಅಮದುಗಳಲ್ಲಿ ಕೆಲವುಗಳನ್ನು ಈ ಮುಂದಿನಂತೆ ತಿಳಿಯಬಹುದಾಗಿದೆ. ಕರ್ನಾಟಕದ ಬಂದರುಗಳಾದ ಹೊನ್ನಾವರ, ಭಟ್ಕಳ ಮತ್ತು ಮಂಗಳೂರು ಮಧ್ಯದ ಮಾರ್ಗವಾಗಿತ್ತು. ಮತ್ತೊಂದು ಮಾರ್ಗ ಕಂಚಿಯಿಂದ ಅರಸೀಕೆರೆ, ಬೇಲೂರು ಮಾರ್ಗವಾಗಿ ಮಂಗಳೂರಿಗೆ ತಲುಪುತ್ತಿತ್ತು. ಹೊನ್ನಾವರದಿಂದ ಬನವಾಸಿ, ಬಳ್ಳಿಗಾವೆ, ಬಂಕಾಪುರ ಉಚ್ಚಂಗಿಯವರೆಗೂ ಒಂದು ಮಾರ್ಗ ಸಿಕ್ಕಿದ್ದು, ಉತ್ತರದ ದೇವಗಿರಿಯಿಂದ ಕಲ್ಯಾಣ, ನಿಡುಗಲ್ಲು, ದೋರಸಮುದ್ರ, ಚನ್ನರಾಯಪಟ್ಟಣ, ಶ್ರವಣಬೆಳಗೊಳ, ತೊಣ್ಣೂರು ಹಾಗೂ ಶ್ರೀರಂಗಪಟ್ಟಣಕ್ಕೆ ಸೇರುತ್ತಿತ್ತು ಎಂದು ಎಂ.ಎಂ. ವೆಂಕಟರತ್ನಂ ಅವರು ಗುರುತಿಸಿದ್ದಾರೆ. ಅಲ್ಲಿಂದ ನಂತರದಲ್ಲಿ ತಲಕಾಡಿಗೆ ರಸ್ತೆಯು ಸಂಪರ್ಕಿಸುತ್ತಿತ್ತು. ಅರಬ್ಬರು ಈ ಮಾರ್ಗಗಳ ಮೂಲಕ ವ್ಯಾಪಾರ–ವಹಿವಾಟಿನ ಸಂಚಾರವಿದ್ದಿತು. ಮುಸ್ಲಿಂ ಸಮುದಾಯಗಳು ಬಂದರು ಪಟ್ಟಣಗಳಲ್ಲಿ ಕರಾವಳಿ ಉದ್ದಕ್ಕೂ ತಮ್ಮ ನೆಲೆಯನ್ನು ಹೊಂದಿದ್ದರು. ಮುಸ್ಲಿಂ ಸಮುದಾಯಗಳು ಮಂಗಳೂರು, ಹೊನ್ನಾವರ, ಭಟ್ಕಳ, ಬಸ್ರೂರು, ಬಾರಕೂರು, ಮಂಜೇಶ್ವರ, ಕುಂಬ್ಳೆ, ನೀಲೇಶ್ವರ ಕಾರವಾರ, ಅಂಕೋಲಾ ಮುಂತಾದವುಗಳು ವ್ಯಾಪಾರದ ಪಟ್ಟಣಗಳಾಗಿದ್ದು ಈ ಪ್ರದೇಶಗಳಲ್ಲಿ ಮುಸ್ಲಿಂ ಸಮುದಾಯಗಳು ನೆಲೆಸಿದ್ದರು ಎಂದು ಪ್ರವಾಸಿ ಕಥನಗಳು ವಿವರಿಸುತ್ತವೆ.

೪.೨.೩. ಮಲಯಾಳಂ ಪ್ರದೇಶ

ಬಾರ್ಬೋಸ್ ಮಲಬಾರ್ ಪ್ರಾಂತ್ಯದಲ್ಲಿ ವಿವಿಧ ರಾಜ್ಯದ ವರ್ತಕರು ನೆಲೆಸಿದ ಬಗ್ಗೆ ತಿಳಿಸಿದ್ದಾನೆ. ಕ್ಯಾಲಿಕಟ್ ರಾಜ್ಯದಲ್ಲಿ ಗುಜರಾತಿಗಳು ಎಂಬ ಜೆಂಟೈರ್ ವರ್ತಕರೂ ಇದ್ದಾರೆ. ಇವರು ಕ್ಯಾಂಬೆಯಿಂದ ಇಲ್ಲಿಗೆ ಬಂದವರು. ತಮ್ಮ ಜಾತಿಪದ್ಧತಿಗಳನ್ನು ಇಲ್ಲಿಯೂ ಆಚರಿಸುತ್ತಾರೆ. ಹಡಗುಗಳನ್ನಿಟ್ಟುಕೊಂಡು ಸಾಂಬಾರ ವಸ್ತುಗಳು, ಗಂದಿಗೆ ಸಾಮಾನುಗಳು, ಬಟ್ಟೆ, ತಾಮ್ರ ಮತ್ತು ಇತರ ವಸ್ತುಗಳನ್ನು ಇಲ್ಲಿ ಕೊಂಡು ಕ್ಯಾಂಬೆಗೆ ಕಳುಹಿಸುತ್ತಾರೆ. ದಖನ್ನಿನಲ್ಲಿರುವ ತಮ್ಮ ಇತರ ವ್ಯಾಪಾರಿಗಳೊಡನೆಯೂ ವ್ಯವಹಾರ ನಡೆಸುತ್ತಾರೆ.

ಮಲಬಾರ್ ನಾಡಿನಲ್ಲಿ ಜೆಂಟೈಲರ್ ಭಾಷೆಯನ್ನಾಡದ ಮತ್ತು ಅವರ ಬಣ್ಣದಂತಿರುವ ಅನೇಕ ಮೂರ್‌ರಿದ್ದಾರೆ. ಆದರೆ ಒಂದು ವ್ಯತ್ಯಾಸ ಮಾತ್ರ ಇದೆ. ಏನೆಂದರೆ ಇವರು ತಲೆಯ ಮೇಲೆ ದುಂಡಾದ ಚಿಕ್ಕ ಟೋಪಿಯನ್ನಿಟ್ಟು ಉದ್ದದ ಗಡ್ಡ ಬೆಳೆಸುತ್ತಾರೆ. ಇವರು ಇಲ್ಲಿಯ ಒಟ್ಟು ಜನಸಂಖ್ಯೆಯಲ್ಲಿ ಐದನೇ ಒಂದು ಭಾಗ ಇದ್ದಾರೆಂದು ಹೇಳಬಹುದು. ಇವರನ್ನು ಇಲ್ಲಿಯ ನಿವಾಸಿಗಳು ಮೂರ್ ಮಾಪುಳ್ಳೇ ಎಂದು ಕರೆಯುತ್ತಾರೆ. ಸಮುದ್ರ ತೀರದ ವ್ಯಾಪಾರವೆಲ್ಲಾ ಹೆಚ್ಚು ಕಡಿಮೆ ಇವರ ಕೈಯಲ್ಲಿದೆ. ಒಳನಾಡುಗಳಲ್ಲಿ ಮನೆಮಠ ಮಾಡಿಕೊಂಡು ಸುಖವಾಗಿದ್ದಾರೆ. ಪೋರ್ಚುಗಲ್ ದೊರೆ ಇಂಡಿಯ ದೇಶವನ್ನು ಕಂಡುಹಿಡಿಯದಿದ್ದರೆ ಮಲಬಾರನ್ನು ಮೂರ್ ರಾಜ ಆಳುತ್ತಿದ್ದ. ಏಕೆಂದರೆ ಅನೇಕ ಜನ ಜಂಟೈಲರು ಸಣ್ಣಪುಟ್ಟ ಕಾರಣಗಳಿಗಾಗಿ ಮೂರ್‌ರಾಗಿ ಬಿಟ್ಟಿದ್ದಾರೆ. ಹೀಗೆ ಮತಾಂತರ ಹೊಂದಿದವರು ಬಗ್ಗೆ ಮೂರ್‌ರು ಹೆಚ್ಚು ಗೌರವ ತೋರಿಸುತ್ತಾರೆ. ಹೆಂಗಸಾದರೆ ಅವರನ್ನು ಕೂಡಲೇ ಮದುವೆಯಾಗುತ್ತಾರೆ. ಈ ನಾಡಿನಲ್ಲಿ ಇವರ ಅನೇಕ ಮಸೀದಿಗಳಿವೆ. ಅಲ್ಲಿ ಒಂದಾಗಿ ಸಭೆ ಸೇರಿ ತಮ್ಮ ವಿಚಾರಗಳನ್ನು ಆಲೋಚಿಸುತ್ತಾರೆ.

ಕಲಿಕ್ಯಾಟ್‌ನಲ್ಲಿ ಪರದೇಶಿ ಎಂಬ ವಿದೇಶದ ಮೂರ್‌ರು ಇದ್ದಾರೆ. ಇವರು ಅರಬ್ಬರು, ಪರ್ಶಿಯನ್‌ರು, ಗುಜರಾತಿಗಳು, ಖೋರಸಾನಿಯರು ಮತ್ತು ದಖನೀಯರು ಇವರು ಭಾರಿ ವರ್ತಕರು.[೫೩]

ಬಾರ್ಬೋಸ್ ಉಲ್ಲೇಖಿಸುವಂತೆ ನಸರಿಂಗನ(ವಿಜಯನಗರ) ರಾಜ್ಯಕ್ಕೆ ಸೇರಿದ ತುಳಿನಾಟನ್ನು (ತುಳು ನಾಡನ್ನು) ಬಿಟ್ಟು ಸಮುದ್ರ ತೀರದಲ್ಲಿಯೇ ಮುಂದುವರಿದರೆ ಮಲಬಾರ್ ರಾಜ್ಯ ಸಿಕ್ಕುತ್ತದೆ. ಕುನ್ಪಳದಿಂದ(ಕುಂಬಳ) ಮಲಬಾರ್ ಎಂಬ ನಾಡು ಪ್ರಾರಂಭವಾಗುತ್ತದೆ. ಹಿಂದೆ ಇಲ್ಲಿ ಸೆರ್ನ ಪೆರಿಮಾಳ(ಚೇರುಮನ್ ಪೆರಿಮಾಳ್) ಎಂಬ ರಾಜ ಆಳುತ್ತಿದ್ದ. ಆಮೇಲೆ ಮೆಕ್ಕಾದ ಮೂರರು ಇಂಡಿಯಾ ಕಂಡುಹಿಡಿದು ಇಲ್ಲಿ ಸಮುದ್ರದ ಮೇಲೆ ಓಡಾಡಲಾರಂಭಿಸಿದರು. ಹೀಗೆ ಮಾಡಿದ್ದು ೬೧೦ ವರ್ಷಗಳ ಹಿಂದೆ. ಇಲ್ಲಿ ಸಿಕ್ಕುವ ಮೆಣಸಿಗಾಗಿ ಅವರು ಇಲ್ಲಿಗೆ ಬಂದು ಹೋಗುತ್ತಿದ್ದರು. ಸಾಮಾನ್ಯವಾಗಿ ಕೌಲಾಂ ಎಂಬಲ್ಲಿ ಸಿಕ್ಕಿದ ಮೆಣಸನ್ನು ಹಡಗುಗಳಿಗೆ ತುಂಬುತ್ತಿದ್ದರು. ಇಲ್ಲಿಯೆ ರಾಜನೂ ಇದ್ದನು. ಬರಬರುತ್ತಾ ಮೂರರು ತಮ್ಮ ಪ್ರಭಾವವನ್ನು ರಾಜನ ಮೇಲೆ ಬೀರಿ

ಅವನನ್ನು ಮೂರನಾಗಿ ಮಾಡಿ ಮೆಕ್ಕಾಕ್ಕೆ ಕರೆದುಕೊಂಡು ಹೊರಟರು. ದಾರಿ ಮಧ್ಯೆ ರಾಜ ಸತ್ತ. ಇಡೀ ತನ್ನ ರಾಜ್ಯವನ್ನು ದಾನ ಮಾಡಿ ತಾನು ಹಡಗು ಏರಿದ. ಹಳ್ಳದಲ್ಲಿ ೧೦-೧೨ ಜಾಗವನ್ನು ಉಳಿಸಿಕೊಂಡ. ಅದನ್ನು ತನ್ನ ತಂಗಿಯ ಮಗನಿಗೆ ಕೊಟ್ಟನು. ಆ ಸ್ಥಳ ಅಭಿವೃದ್ಧಿ ಮಾಡಬೇಕೆಂದು ತಿಳಿಸಿದ. ಆ ಸ್ಥಳವೇ ಕ್ಯಾಲಿಕ್ಯಾಟ್. ರಾಜನು ಮೂರನಾದ ಸ್ಥಳ ಪವಿತ್ರವಾದ್ದುದೆಂದು ಮೂರರು ಭಾವಿಸಿದ್ದಾರೆ." ಮಲಯಾಳಂ ಪ್ರಾಂತ್ಯದಲ್ಲಿ ಮುಸ್ಲಿಂ ಸಮುದಾಯ ವರ್ಗ ವಿಸ್ತರಣೆಗೊಂಡು ಚರಿತ್ರೆಯನ್ನು ತನ್ನ ಕಥನದಲ್ಲಿ ತಿಳಿಸಿದ್ದಾರೆ. ಮಲಬಾರ್ ಪ್ರದೇಶವು ಮುಸ್ಲಿಂ ಸಮುದಾಯಗಳ ಪ್ರಮುಖ ನೆಲೆಯಾಗಿತ್ತು. ಬಾರ್ಬೋಸ್ ತಿಳಿಸುವಂತೆ, 'ಈ ನಾಡಿನಲ್ಲಿ ಎಲ್ಲರೂ ಮಲಿಯಮಾ (ಮಲೆಯಾಳಿ) ಎಂಬ ಒಂದೇ ಭಾಷೆಯನ್ನಾಡುತ್ತಾರೆ.'[೪]

ಕೇರಳವು ವಿಜಯನಗರ ಸಾಮ್ರಾಜ್ಯದ ಮುಸ್ಲಿಂ ವಸತಿ ನೆಲೆಗಳಲ್ಲಿ ಒಂದಾಗಿದೆ. ಕೇರಳದಲ್ಲಿ ಕಂಡುಬರುವ ಬಂದರುಪಟ್ಟಣಗಳು, ಮಸೀದಿಗಳು ಇದನ್ನು ಪುಷ್ಟೀಕರಿಸುತ್ತವೆ. ಇವರು ಇಲ್ಲಿ ನೆಲೆಸಿರುವುದರ ಬಗೆಗೆ ಅನೇಕ ಐತಿಹ್ಯಗಳಿವೆ. ಕೇರಳದ ಮಸೀದಿಗಳನ್ನು 'ಪಲ್ಲಿ ಮಾಖಮ್' ಎಂದು ಕರೆಯಲಾಗುತ್ತದೆ. ಕರುನಾಡಪಲ್ಲಿ ಶೇಷ್‌ಪಲ್ಲಿ ಗೋರಿಯು ಅತ್ಯಂತ ಪ್ರಾಚೀನವಾದುದು. ಇದರೊಂದಿಗೆ ಖಲೀಫನಾದ ಅಬ್ದುಲ್ ಖಾದಿರ್ ಸನಿ ಬಲಘತನಿಯ ಅನುಯಾಯಿಯಾದ ಶೇಕ್ ಹಸನ್-ಬಿನ್-ಅಲಿಯ ಸಮಾಧಿ ಇಲ್ಲಿ ಕಂಡುಬರುತ್ತದೆ.

ಅಬ್ದುಲ್ ಖದರ್ ಸಾನಿ ಸೂಚಿಸಿದಂತೆ ಹಸನ್ ದಕ್ಷಿಣದ ಕಡೆ ತನ್ನ ಪ್ರಯಾಣ ಬೆಳೆಸಿ, ಕೇರಳ ರಾಜ್ಯದ ದಕ್ಷಿಣದಲ್ಲಿನ ಸಮುದ್ರತೀರವನ್ನು ಪ್ರವೇಶಿಸಿ, ಅಲ್ಲಿ ಕೆಲವು ಕಾಲ ನೆಲೆಸಿದನು. ಇಲ್ಲಿ ಪ್ರಾರ್ಥನೆಯಲ್ಲಿ ಕಾಲ ಕಳೆದನು. ಕೇರಳದ ಸ್ಥಳೀಯ ನಾಯಕರು ಇವನಿಂದ ಆಕರ್ಷಿತರಾಗಿ ಧಾರ್ಮಿಕ ಶ್ರದ್ಧೆ ಮತ್ತು ಬೌದ್ಧಿಕ ಜ್ಞಾನವನ್ನು ಇಲ್ಲಿನ ಸ್ಥಳೀಯರಿಗೆ ಬೋಧಿಸಿದರು. ಈ ಸಂತತಿಯವರಿಗೆ ಸ್ಥಳೀಯ ನಾಯಕರು ತಮ್ಮ ಪ್ರದೇಶಕ್ಕೆ ಆಹ್ವಾನಿಸಿ ಒಂದು ಭೂಮಿಯನ್ನು ದಾನ ನೀಡಿದರು. ಹಾಗೆಯೇ ಅವರಿಗೆ ಒಂದು ಮಸೀದಿಯನ್ನು ಸಹ ನಿರ್ಮಿಸಿಕೊಟ್ಟರು. ಸ್ಥಳೀಯ ಐತಿಹ್ಯಗಳು ತಿಳಿಸುವಂತೆ ಇವರಿಗೆ ನೀಡಿದ ದಾನದ ಪ್ರದೇಶವು ಸುರಕ್ಷಿತವಾಗಿರಲಿಲ್ಲ. ಆ ಪ್ರದೇಶದಲ್ಲಿ ವಿಷಕಾರಿಯಾದ ಹಾವುಗಳು ವಾಸವಾಗಿದ್ದವು. ಆದರೂ ಶೇಕ್ ಅವರು ಈ ದಾನ ಭೂಮಿಯನ್ನು ಸಂತೋಷವಾಗಿ ಸ್ವೀಕರಿಸಿ, ಇಲ್ಲಿಯೇ ನೆಲೆಸಲು ನಿರ್ಧರಿಸಿದರು. ಶೇಕ್‌ನು ಈ ವಿಷಕಾರಿ ಹಾವುಗಳನ್ನು ಒಂದು ಪೆಟ್ಟಿಗೆಯಲ್ಲಿ ಸಂಗ್ರಹಿಸಿ ಸ್ಥಳೀಯ ನಾಯಕರ ಎದುರಿಗೆ ಒಪ್ಪಿಸಿದನು. ಇದನ್ನು ಕಂಡ ನಾಯಕರು ಆಶ್ಚರ್ಯಕರಾಗಿ ಶೇಕ್‌ನಲ್ಲಿರುವ ನೈಸರ್ಗಿಕ ಶಕ್ತಿಯನ್ನು ಅರಿತರು.

ಶೇಕ್ ಒಬ್ಬ ಸೂಫಿ ಸಂತನಾಗಿದ್ದು, ಇವರು ಧಾರ್ಮಿಕತೆಯಲ್ಲಿ ಹಿಂದೂ-ಮುಸ್ಲಿಂ ನಡುವೆ ಸೌಹಾರ್ದಯುತವಾದ ಸಂಬಂಧವನ್ನು ಬೆಳೆಸಿದ್ದನು. ಶೇಕ್ ಈ ಪ್ರಾಂತ್ರದಲ್ಲಿ ನೆಲೆಸಿ, ಅನೇಕ ಜನರಿಗೆ ಮಾರ್ಗದರ್ಶಕನಾಗಿದ್ದನು. ಇವನ ಬೋಧನೆಗಳ ಪ್ರಭಾವದಿಂದ ಅನೇಕ ಮುಸ್ಲಿಮರು

ಇಲ್ಲೇ ನೆಲೆ ನಿಂತರು ಎಂದು ಐತಿಹ್ಯಗಳು ತಿಳಿಸುತ್ತವೆ. ಇದರೊಂದಿಗೆ ಮಸೀದಿ, ಶೈಕ್ಷಣಿಕ ಸಂಸ್ಥೆಗಳು ಪ್ರಾರಂಭವಾದವು. ಕೇರಳದಲ್ಲಿ ಪ್ರಮುಖವಾಗಿ ಶೇಕರು, ಮಾಪಿಳ್ಳೆ, ನವಾಯತರು, ಲಬ್ಬೆಗಳು, ದಖ್ಖನಿಗಳು ಹೆಚ್ಚಾಗಿ ಕಂಡುಬರುವರು.

ಕೇರಳದ ಪ್ರದೇಶದಲ್ಲಿ ಮಾಪಿಳ್ಳೆ ಮುಸ್ಲಿಂ ಸಮುದಾಯವು ಹೆಚ್ಚಾಗಿ ಕಂಡುಬರುತ್ತದೆ. ಮಲ್ಲಿಕ್-ಇಬನ್-ದಿನಾರ್ ಕೇರಳಕ್ಕೆ ಭೇಟಿ ನೀಡಿ, ಅಲ್ಲಿಂದ ಉತ್ತರದ ಮಂಗಳೂರಿನಿಂದ ಹಿಡಿದು ದಕ್ಷಿಣದ ಕೊವಿಲ್ ಪಟ್ಟಣದವರಗೆ ಸಂಚರಿಸಿದನು. ಇವನ ಪ್ರಭಾವದಿಂದ ೧೧ ಮಸೀದಿಗಳು ನಿರ್ಮಾಣವಾದವು ಎಂದು ಜೈನುದ್ದೀನ್ ಮಹದಂ ತನ್ನ ಕೃತಿಯಾದ ತುಹಫತ್-ಉಲ್-ಮುಜಾಹಿದ್ದಿನ್‌ನಲ್ಲಿ ಉಲ್ಲೇಖಿಸಿದಂತೆ ಮಲ್ಲಿಕ್‌ದೀನ್ ಮತ್ತು ಅವನ ಅನುಯಾಯಿಗಳು ಹತ್ತು ಮಸೀದಿಗಳನ್ನು ನಿರ್ಮಿಸಿದರು. ಅವು ಕನ್ನಾನೂರು, ದಕ್ಷಿಣದ ಕೊಲ್ಲಂ, ಮದಯಿ, ಬಾರಕೂರು, ಮಂಜಲೂರು, ಕಂಜರೊಡ್, ಶ್ರೀಕಂದಪುರಂ, ಧರ್ಮದಂ, ಪಂತಲಾಯಿಸಿಕೊಲ್ಲಂ ಮತ್ತು ಚಲಿಯಂ ಪ್ರಾಂತ್ಯಗಳಲ್ಲಿ ಮಸೀದಿಗಳು ನಿರ್ಮಿತವಾದವು.[೨೫]

ಕೇರಳದ ಉತ್ತರಭಾಗದ ಮಲಬಾರ್‌ನಲ್ಲಿ ಪ್ರಮುಖವಾಗಿ ವ್ಯಾಪಾರವು ಪೂರ್ವದ ಕಾಲಾವಧಿಯಿಂದಲೂ ತನ್ನ ಆಧಿಪತ್ಯವನ್ನು ಪಡೆದುಕೊಂಡಿತು. ಪ್ರಾಚೀನ ಉಲ್ಲೇಖಗಳಲ್ಲಿ ಕಂಡು ಬರುವಂತೆ ಇಲ್ಲಿನ ನೌರ, ತಿಂದೀಸ್, ಮುಸಿರೀಸ, ನೆಲಕಿಂದ ಮುಂತಾದ ಬಂದರುಗಳು ಪ್ರಮುಖವಾಗಿದ್ದವು.

ಮಲಬಾರಿನ ಪ್ರಾಚೀನ ಪ್ರದೇಶದ ಎಲಮ್‌ಕುಲಂ ಕುನ್ಹಾನ ಪಿಳ್ಳೆ ಸೂಚಿಸುವಂತೆ ವಂಚಿ, ತೊಂಡಿ, ಮಾಣಥ್ಯೆ ಮತ್ತು ಇಜಿಹಿಮಲ್ಯೆ ಪ್ರದೇಶಗಳು ಪ್ರಾಚೀನ ಕಾಲದಿಂದಲೂ ವ್ಯಾಪಾರಕ್ಕೆ ಪ್ರಸಿದ್ಧಿಯಾಗಿತ್ತು. ಮಲಬಾರಿನಲ್ಲಿ ಪ್ರಮುಖ ವ್ಯಾಪಾರ ಮಾರ್ಗಗಳಾಗಿ ಕಂಡುಬರುವ ಪ್ರದೇಶಗಳೆಂದರೆ ಮತಾಯಿ, ಧರ್ಮತಂ, ಪಂತಾಲಯಾನಿ, ಕೊಲ್ಲಂ, ಖೋಜಿಕೊಡೆ, ಪೊನ್ನಾನಿ ಪ್ರದೇಶಗಳಾಗಿವೆ.[೨೬]

ಮತಾಯಿ ಪ್ರದೇಶದಲ್ಲಿ ಮುಸ್ಲಿಂ ವರ್ತಕ ಸಮುದಾಯಗಳು ಇದ್ದವು. ಕ್ರಿ.ಶ. ೧೧೨೪ರ ಶಾಸನವು ಮತಾಯಿಯಲ್ಲಿ ಮಸೀದಿಯು ನಿರ್ಮಾಣವಾದ ಬಗ್ಗೆ ಉಲ್ಲೇಖವಿದೆ. ಈ ಪ್ರಾಂತ್ಯದಲ್ಲಿಯು ಸಹ ಮಲ್ಲಿಕ್-ದಿನಾರ್-ಮಸೀದಿಯನ್ನು ನಿರ್ಮಿಸಿದನು. ಕ್ರಿ.ಶ. ೯ನೇ ಶತಮಾನದಿಂದಲೂ ವ್ಯಾಪಾರದ ಸಂಪರ್ಕವನ್ನು ಮುಸ್ಲಿಮರು ಈ ಪ್ರಾಂತ್ಯದಲ್ಲಿ ಹೊಂದಿದ್ದರು. ಕ್ರಿ.ಶ. ೧೨ನೇ ಶತಮಾನದಲ್ಲಿ ಮುಸ್ಲಿಂ ಸಮುದಾಯಗಳ ಚಟುವಟಿಕೆಗಳು ಈ ಪ್ರ್ಯಾಂತ್ಯದಲ್ಲಿ ಬೆಳವಣಿಗೆಯಾಯಿತು. ಕ್ರಿ.ಶ. ೧೨೨೪ರಲ್ಲಿ ಒಂದು ಮಸೀದಿಯು ನಿರ್ಮಾಣವಾಯಿತು. ಎಲಿಮಾಲ ನಾರಾಯಣ ಕುಮಾರ ಶಾಸನ ಉಲ್ಲೇಖಿಸುವಂತೆ ಮಣಿಗ್ರಾಮಂ ವರ್ತಕ ಸಂಘವು ಆ ಪ್ರಾಂತ್ಯದ ಆಂತರಿಕ ವ್ಯಾಪಾರದ ಕೇಂದ್ರಗಳನ್ನು ಹೊಂದಿದ್ದು, ಅಂತಾರಾಷ್ಟ್ರೀಯ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು.

೪.೨.೪. ಆಂಧ್ರಪ್ರದೇಶ

ವಿಜಯನಗರ ಆಧಿಪತ್ಯದ ಆಂಧ್ರಪ್ರದೇಶದ ಪ್ರಾಂತ್ಯಗಳಲ್ಲಿ ಇವರು ನೆಲೆಸಿದ್ದರು. ವಿಜಯನಗರದ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳೆಂದರೆ ಅನಂತಪುರ, ಕಡಪ, ಚಿತ್ತೂರು ಮತ್ತು ಕರ್ನೂಲ್. ಕ್ರಿ.ಶ. ೧೫೬೫ರ ರಕ್ಕಸತಂಗಡಿ ಕದನದ ನಂತರ ವಿಜಯನಗರ ರಾಜಧಾನಿಯನ್ನು ಹಂಪಿಯಿಂದ ಪೆನುಗೊಂಡಕ್ಕೆ ವರ್ಗಾಯಿಸಲಾಯಿತು. ಅರವೀಡು ವಂಶದ ಆಡಳಿತ ಅವಧಿಯಲ್ಲಿ ಪೆನುಗೊಂಡ ಪ್ರದೇಶದಲ್ಲಿ ಸಿಕ್ಕಂತಹ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿ ಕಟ್ಟಡಗಳು, ಸ್ಮಾರಕಗಳು ಮುಸ್ಲಿಂ ಸಮುದಾಯಗಳು ಈ ಪ್ರದೇಶದಲ್ಲಿ ನೆಲೆಸಿದ್ದ ಬಗ್ಗೆ ಮಾಹಿತಿ ನೀಡುತ್ತವೆ.

ಪೆನುಗೊಂಡ

ಕ್ರಿ.ಶ. ೧೩೪೯-೫೦ರ ಸಂದರ್ಭದಲ್ಲಿ ಒಂದನೇ ಬುಕ್ಕರಾಯನು ತನ್ನ ಆಧಿಪತ್ಯಕ್ಕೆ ಸೇರಿಸಿಕೊಂಡಿದ್ದನು. ಆಂಧ್ರಪ್ರದೇಶದ ಸಂಗನಪಳ್ಳಿಯಲ್ಲಿ ದೊರೆತ ಶಾಸನದ ಆಧಾರದ ಮೇಲೆ ಪೆನುಗೊಂಡ ಪ್ರದೇಶವನ್ನು ಕ್ರಿ.ಶ. ೧೩೪೨ರವರೆಗೂ ಗಣಿಗೆದೇವ ದಂಡನಾಯಕ ಮಾಚೆನ ಮಗನಾದ ಗಣಿಗಿದೇವ ದಂಡನಾಯಕನು ಆಳ್ವಿಕೆ ನಡೆಸುತ್ತಿದ್ದನು. ಇದನ್ನು ಕ್ರಿ.ಶ. ೧೩೪೯-೫೦ರ ಸಂದರ್ಭದಲ್ಲಿ ವಿಜಯನಗರ ಅರಸನಾದ ಒಂದನೇ ಬುಕ್ಕರಾಯನು ತನ್ನ ಆಧಿಪತ್ಯಕ್ಕೆ ಸೇರಿಸಿಕೊಂಡನು. ಅಲ್ಲಿಂದಾಚೆಗೆ ಪೆನುಗೊಂಡ ಪ್ರದೇಶವು ವಿಜಯನಗರದ ಆಳ್ವಿಕೆಗೆ ಒಳಪಟ್ಟಿತ್ತು. ವಿಜಯನಗರ ಆಳ್ವಿಕೆಯಲ್ಲಿ ಪೆನುಗೊಂಡ ಪಟ್ಟಣವು ಎರಡನೆಯ ರಾಜಧಾನಿಯಾಗಿತ್ತು. ಈ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ವ್ಯಾಪಾರಸ್ಥರು, ಕುಶಲಕರ್ಮಿಗಳು, ಸೂಫಿ ಸಂತರ ವರ್ಗ ನೆಲೆಸಿದ್ದರೆನ್ನಬಹುದು. ಕ್ರಿ.ಶ. ೧೨ನೇ ಶತಮಾನದಲ್ಲಿ ಇರಾನ್‌ನ ಶಾಹಪುದಿಂದ ಆಗಮಿಸಿದ ಬಾಬಾ ಪಕ್ರುದ್ದೀನ್ ಒಬ್ಬ ಖ್ಯಾತ ಸೂಫಿಯಾಗಿದ್ದನು. ಇತನು ಪೆನುಗೊಂಡದಲ್ಲಿ ನೆಲೆಸಿದ್ದನು. ಇವನ ಅನುಯಾಯಿಗಳಾದ ಹಲವರು ಮುಸ್ಲಿಂ ಸಮುದಾಯಗಳು ಇಲ್ಲೇ ತಮ್ಮ ವಸತಿ ನೆಲೆಗಳನ್ನು ಸ್ಥಾಪಿಸಿಕೊಂಡವು. ಈತನ ಕಾಲಾನಂತರ ಇವನ ನೆನಪಿಗಾಗಿ ಬಾಬಾಯ್ಯನ ದರ್ಗವನ್ನು ಇಲ್ಲಿ ನಿರ್ಮಾಣ ಮಾಡಲಾಯಿತು. ಈ ದರ್ಗಾದಲ್ಲಿ ಇಂದಿಗೂ ಅನೇಕ ಮುಸ್ಲಿಂ ಆಚರಣೆಗಳು ಅಸ್ತಿತ್ವದಲ್ಲಿರುವುದನ್ನು ನಾವು ಕಾಣಬಹುದು. ಈ ದರ್ಗಾವು ಹಿಂದೂ-ಮುಸ್ಲಿಂ ಎರಡು ಸಮುದಾಯಗಳ ಸಾಮರಸ್ಯದ ಸಂಕೇತಗಳಾಗಿವೆ.

ಪೆನುಗೊಂಡ ಪಟ್ಟಣವು ವಿಜಯನಗರ ಸಾಮ್ರಾಜ್ಯದ ಎರಡನೇ ರಾಜಧಾನಿಯಾಗಿತ್ತು. ಈ ಪ್ರದೇಶವನ್ನು ಕ್ರಿ.ಶ. ೧೩೪೯-೫೦ರ ಸಂದರ್ಭದಲ್ಲಿ ಒಂದನೇ ಬುಕ್ಕರಾಯನು ವಶಪಡಿಸಿಕೊಂಡಿದ್ದನು. ಇಲ್ಲಿಂದ ಆಚೆಗೆ ಈ ಪಟ್ಟಣದ ಕೋಟೆಯ ನಿರ್ವಹಣೆಯು ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿಯೇ ಮುಂದುವರಿಯಿತು. ಪೆನುಗೊಂಡ ಕೋಟೆಯಲ್ಲಿ ಮುಸ್ಲಿಂ ಸಮುದಾಯಗಳು ನೆಲೆಸಿದ್ದವು ಎನ್ನುವುದಕ್ಕೆ ನಮಗೆ ಅನೇಕ ಸ್ಮಾರಕಗಳು ಇಂದಿಗೂ ಲಭ್ಯವಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಶೇರ್‌ಖಾನ್ ಮಸೀದಿ, ಬಾಬಾಯ್ಯ ದರ್ಗ.

ಪೆನುಗೊಂಡ ಕೋಟೆಯ ಆವರಣದಲ್ಲಿ ಶೇರ್‌ಖಾನ್ ಮಸೀದಿಯು ಕಂಡುಬರುತ್ತದೆ. ಈ ಮಸೀದಿಯು ಕ್ರಿ.ಶ.೧೫೬೪ರ ಸುಮಾರಿಗೆ ಮುಸ್ಲಿಮರಿಗಾಗಿ ವಿಜಯನಗರದ ಅರಸ ಸದಾಶಿವರಾಯನು ಕಟ್ಟಿಸಿದನೆಂದು ಶಾಸಾನಾಧಾರಗಳಿಂದ ತಿಳಿದುಬರುತ್ತದೆ.

ಹೀಗೆ ಮುಸ್ಲಿಂ ವಸತಿನೆಲೆಗಳು ವಿಜಯನಗರ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ವ್ಯಾಪಾರಿವರ್ಗವು ಸಮುದ್ರತೀರ ಪ್ರದೇಶಗಳಾದ ಕೋರಮಂಡಲ ತೀರಪ್ರದೇಶ, ಮಲಬಾರ್, ಕೆನರಾ, ಗೋವಾ ಪ್ರದೇಶಗಳಲ್ಲಿ ಅತಿ ಹೆಚ್ಚಾಗಿ ನೆಲೆಸಿತ್ತು. ವಿಜಯನಗರ ರಾಜಧಾನಿ ಪಟ್ಟಣ ಹಾಗೂ ಸುತ್ತಲಿನ ಪ್ರಾಂತ್ಯಗಳ ಆಡಳಿತ ವರ್ಗ, ಕುಶಲಕರ್ಮಿ ವರ್ಗಗಳನ್ನು ಗುರುತಿಸ ಬಹುದು. ಇನ್ನು ಸೂಫಿ ವರ್ಗವು ವಿಜಯನಗರ ಸಾಮ್ರಾಜ್ಯದ ಮುಸ್ಲಿಂ ವಸತಿನೆಲೆಗಳ ಎಲ್ಲಾ ಪ್ರಾಂತ್ಯಗಳಲ್ಲಿ ಹರಡಿಕೊಂಡಿತ್ತು.

ಕೊನೆ ಟಿಪ್ಪಣಿಗಳು

೧. ಮುಜಾಫ್ಫರ್ ಅಸ್ಸಾದಿ, ಮಾಯಾವತಿ ಮತ್ತು ಮುಸ್ಲಿಂ ಜಾತಿಗಳ ಪ್ರತಿರೋಧ, ಪ್ರಜಾವಾಣಿ, ಏಪ್ರಿಲ್ ೧೩, ೨೦೧೭.

೨. ದೇವುಪತ್ತಾರ್, ಬಹಮನಿ ಸಾಮ್ರಾಜ್ಯ–ಪರ್ಷಿಯಾ ಪ್ರಭಾವ–ಪ್ರೇರಣೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೧೫, ಪು. ೧೨೯.

೩. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪುಟ–೩, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೬, ಪು. ೩೦೭.

೪. ಮಹಮ್ಮದ್ ಅಬ್ಬಾಸ್ ಶೂಸ್ತ್ರಿ(ಪ್ರ.ಸಂ), ಬಿ.ಎಂ. ಶ್ರೀಕಂಠಯ್ಯ(ಅನು), ಇಸ್ಲಾಂ ಸಂಸ್ಕೃತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೦, ಪು. ೨೯.

೫. ಅದೇ, ಪು. ೨೯–೩೦.

೬. ಚನ್ನಬಸಪ್ಪ ಕೆ., ಎನ್.ವಿ. ಅಸ್ಕಿ, ಎರಡನೇ ಇಬ್ರಾಹಿಂ ಆದಿಲ್‌ಷಾಹಿ ಕಾಲದ ಸೂಫಿ ಸಂತರು, ಅನ್ವೇಷಣೆ, ಕೆ.ಎಲ್.ಇ. ವಿದ್ಯಾಸಂಸ್ಥೆ, ಬೆಳಗಾವಿ, ೨೦೧೨, ಪು. ೧೨.

೭. ನತಾಲಿ ಮೊಬಿನಿ–ಕೆಶಿಶ್, ದಿ ಹದ್ರಮಿ ಅವೇಡಿಂಗ್ ಕಮ್ಯೂನಿಟಿ ಆ್ಯಂಡ್ ಐಡೆಂಟಿಟಿ ಇನ್ ದಿ ನೆದರ್‌ಲ್ಯಾಂಡ್ ಈಸ್ಟ್ ಇಂಡಿಸ್, ನ್ಯೂಯಾರ್ಕ್, ೧೯೦೦, ಪು. ೧೭.

೮. ಅದೇ, ಪು. ೧೮.

೯. ಜೇಮ್ಸ್ ಎಂ ಕ್ಯಾಂಬೆಲ್, ಬಿಜಾಪುರ ಗ್ಯಾಸೆಟಿಯರ್, ೨೦೦೧, ಪು. ೨೮೭.

೧೦. ಅದೇ, ಪು. ೨೮೨.

೧೧. ಅದೇ, ಪು. ೨೮೨.

೧೨. ಓಮರ್ ಖಾಲಿದಿ, ಮುಸ್ಲಿಂ ಇನ್ ದಖ್ಖನ್: ಎ ಹಿಸ್ಟಾರಿಕಲ್ ಸರ್ವೆ, ಗ್ಲೋಬಲ್ ಮೀಡಿಯಾ ಪಬ್ಲಿಕೇಷನ್ಸ್, ೨೦೦೬, ಪು. ೪೩.

೧೩. ಅದೇ, ಪು. ೫೩.

೧೪. ಮೊಹಮ್ಮದ್ ಪಿ.ಎಚ್., ಸೋಷಿಯೊ-ಕಲ್ಚರಲ್ ಪ್ರೊಫೈಲ್ ಆಫ್ ದಿ ಮುಸ್ಲಿಂ ರಿಲೀಜಿಯಸ್ ಕಮ್ಯೂನಿಟೀಸ್ ಇನ್ ಆಂಧ್ರಪ್ರದೇಶ್, ೨೦೧೨, ಪು. ೯೨-೯೩.

೧೫. ಮಹಮ್ಮದ್ ಅಬ್ಬಾಸ್ ಶೂಸ್ತ್ರಿ(ಪ್ರ.ಸಂ), ಬಿ.ಎಂ. ಶ್ರೀಕಂಠಯ್ಯ(ಅನು), ಪೂರ್ವೋಕ್ತ ಪು. ೩೪-೩೫.

೧೬. ಕುಲಕರ್ಣಿ ಆರ್.ಕೆ., ಆದಿಲ್‌ಶಾಹಿ, ಸಂಪುಟ-೧೭, ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ, ೨೦೧೭, ಪು. ೩೦.

೧೭. ವಹಾಬ್ ದೊಡ್ಡಮನೆ ಎ., ಮುಸ್ಲಿಂ ಇನ್ ದಕ್ಷಿಣ ಕನ್ನಡ, ಗ್ರೀನ್‌ವರ್ಡ್ ಪಬ್ಲಿಕೇಷನ್, ೧೯೯೩, ಪು. ೧೧೭.

೧೮. ಅದೇ ಪು. ೧೧೭.

೧೯. ವಿಕ್ಟರ್ ಎಸ್., ಡಿಸೋಜಾ, ದಿ ನವಾಯತ್ಸ್ ಆಫ್ ಕೆನರಾ, ಕನ್ನಡ ರಿಸರ್ಚ್ ಇನ್ಸ್‌ಟಿಟ್ಯೂಟ್, ಧಾರವಾಡ, ೧೯೫೫, ಪು. ೧೩.

೨೦. ಅದೇ, ಪು. ೧೪.

೨೧. ಅದೇ, ಪು. ೧೪.

೨೨. ಅದೇ, ಪು. ೧೫.

೨೩. ಅದೇ, ಪು.೧೭.

೨೪. ಅದೇ, ಪು. ೨೩.

೨೫. ಸೋಮಶೇಖರ, ಸಿದ್ಧಿಯರ ಸಾಮಾಜಿಕ ಸ್ಥಿತ್ಯಂತರಗಳು', ಕನ್ನಡ ವಿಶ್ವವಿದ್ಯಾಲಯ, ಹಂಪಿ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ೨೦೧೦, ಪು. ೧೭.

೨೬. ಸೂರ್ಯನಾಥ ಯು. ಕಾಮತ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ-೧, ೧೯೮೪, ಪು. ೩೩೭.

೨೭. ಸುರೇಖಾ ಜಿ. ರಾಠೋಡ, ಸಿದ್ಧಿ ಸಮುದಾಯ: ಲಿಂಗಸಂಬಂಧಿ ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮, ಪು. ೩೦.

೨೮. ಅಬ್ದುಲ್ ಅಜೀಜ್ ವೈ. ಲೋದಿ, ಆಫ್ರಿಕನ್ ಸೆಟಲ್‌ಮೆಂಟ್ಸ್ ಇನ್ ಇಂಡಿಯ, ನೋರ್ಡಿಕ್ ಜನರಲ್ ಆಫ್ ಆಫ್ರಿಕನ್ ಸ್ಟಡಿಸ್, ೧೯೯೨, ಪು. ೮೩–೮೬.

೨೯. ಓಮರ್ ಖಾಲಿದಿ, ಪೂರ್ವೋಕ್ತ, ಪು. ೭೮ .

೩೦. ಅದೇ, ೭೮–೭೯.

೩೧. ಅದೇ, ಪು. ೮೧.

೩೨. ಅದೇ, ಪು. ೮೧.

೩೩. ಸೋಮಶೇಖರ, ಪೂರ್ವೋಕ್ತ, ಪು. ೧೯.

೩೪. ಸೂರ್ಯನಾಥ ಕಾಮತ್. ಯು., ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–೧, ೧೯೮೪, ಪು. ೩೭೪.

೩೫. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ–೨, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೬, ಪು. ೩೦೭.

೩೬. ಅದೇ, ಪು. ೩೦೬–೩೦೭.

೩೭. ಜೇಮ್ಸ್ ಕೇಂಬಲ್, ಗ್ಯಾಸೆಟಿಯರ್ ಆಫ್ ಬಾಂಬೆ, ಪ್ರೆಸಿಡೆನ್ಸಿ, ಸಂ.XXII, ಧಾರವಾಡ, ೧೮೮೪, ಪು. ೨೨೨.

೩೮. ವಹಾಬ್ ದೊಡ್ಡಮನೆ ಎ., ಪೂರ್ವೋಕ್ತ, ಪು. ೧೧೭–೧೧೮.

೩೯. ಅದೇ, ಪು. ೨೨೨–೨೨೩.

೪೦. ಕುಲಕರ್ಣಿ ಆರ್.ಕೆ., ಆದಿಲ್‌ಶಾಹಿ, ಸಂಪುಟ–೧೭, ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ, ೨೦೧೭, ಪು. ೧–೨.

೪೧. ಮಹಮ್ಮದ್ ಕೆ.ಎಂ., ಮಖದಮ್ಸ್ ಆಫ್ ಕೇರಳ, ದಿ ಅನೌನ್ ಅರೆಬಿಕ್ ಸ್ಕಾಲರ್ಸ್ ಆಫ್ ಎಮಿನೆನ್ಸ್, ಜರ್ನಲ್ ಆಫ್ ಕೇರಳ, ಸ್ಟಡೀಸ್ ಯೂನಿವರ್ಸಿಟಿ ಆಫ್ ಕೇರಳ, ೧೯೭೫, ಪು. ೨೪೧–೨೪೨.

೪೨. ಸಿದ್ದಿಖಿ ಎಂ.ಕೆ.ಎ., ಮಾರ್ಜಿನಲ್ ಮುಸ್ಲಿಂ ಕಮ್ಯೂನಿಟೀಸ್ ಇನ್ ಇಂಡಿಯ, ಹೊಸ ದೆಹಲಿ, ಪು. ೫೦೪.

೪೩. ಮೊಹಮ್ಮದ್ ಪಿ.ಎಚ್., ಪೂರ್ವೋಕ್ತ ಪು. ೧೩.

೪೪. ಕುಲಕರ್ಣಿ ಆರ್.ಕೆ., ಪೂರ್ವೋಕ್ತ, ಪು. ೪೪.

೪೫. ರಾಜ ಮಹಮ್ಮದ್, ಕೋರಮಂಡಲ ಮುಸ್ಲಿಂ ಮೆರಿಟೈಮ್ ಟ್ರೇಡ್ ವಿತ್ ಕೇದಾ ಆ್ಯಂಡ್ ವೆನಾಗ್, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಸೆಶನ್–೩೪, ೨೦೧೪, ಪು. ೬೧೧–೬೧೬.

೪೬. ಅದೇ, ಪು. ೬೧೧–೬೧೨.

೪೭. ರಾಜ ಮಹಮ್ಮದ್ ಜೆ., ಪೂರ್ವೋಕ್ತ, ಪು. ೬೧೨–೬೧೪.

೪೮. ಅದೇ, ಪು. ೬೧೩–೬೧೬.

೪೯. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು. ೨೬೮.

೫೦. ದೇವರಕೊಂಡಾರೆಡ್ಡಿ, ಹಂಪಿ ಶಾಸನ ಸಂ–೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾ.ಸಂ. ೨೨೪.

೫೧. ಅದೇ, ಶಾ.ಸಂ. ೩೧೫.

೫೨. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು. ೯೧.

೫೩. ಅದೇ, ಪು. ೩೦೭.

೫೪. ಅದೇ ಪು. ೨೭೯–೨೮೦.

೫೫. ಅಬ್ದುಲ್ ನಿಜಾರ್ ಎಂ., ಮೇಕಿಂಗ್ ಆಫ್ ಸಾಕ್ರಿಡ್ ಸ್ಪೇಶಸ್ ಆ್ಯಂಡ್ ಕೇರಳಾ ಮುಸ್ಲಿಮ್ಸ್ ಎ ಸ್ಟಡಿ ಆನ್ ಮಾಖಮ್ಸ್ ಇನ್ ಕೇರಳಾ, ಎಸ್‌ಐಹೆಚ್‌ಸಿ, ೩೫, ವಾರಂಗಲ್, ೨೦೧೫, ಪು. ೨೩೨–೨೩೭.

೫೬. ಹೈದರ್ ಅಲಿ ಎ., ಎ ಮೆಡೀವಲ್ ಟ್ರೇಡ್ ಮಾರ್ಟ್ ಆಫ್ ನಾರ್ಥ್ ಮಲಬಾರ್, ಮತಾಯಿ, ಎಸ್‌ಐಎಚ್ ಸಿ–೩೪, ೨೦೧೪, ಪು. ೪೮೫–೪೮೭.

ಅಧ್ಯಾಯ ಐದು

ಮುಸ್ಲಿಂ ಸಮಾಜ ರಚನೆ

೫.೧. ಸಾಮಾಜಿಕ ಜೀವನ

೫.೨. ಆಹಾರಪದ್ಧತಿ

೫.೩. ವೇಷಭೂಷಣಗಳು

೫.೪. ನಂಬಿಕೆ ಮತ್ತು ಆಚರಣೆ

೫.೫. ಕ್ರೀಡೆ ಮತ್ತು ಮನೋರಂಜನೆ

೫.೬. ಶಿಕ್ಷಣ ಮತ್ತು ಭಾಷೆ

೫.೭. ಸಂಸ್ಕಾರಗಳು

೫.೮. ಸೂಫಿಗಳು

ಅಧ್ಯಾಯ ಐದು

ಮುಸ್ಲಿಂ ಸಮಾಜ ರಚನೆ

ವಿಜಯನಗರ ಚರಿತ್ರೆ ರಚನೆಯಲ್ಲಿ ಮುಸ್ಲಿಂ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯು ಭಿನ್ನ ಸ್ವರೂಪದಲ್ಲಿ ನಮಗೆ ಗೋಚರಿಸುತ್ತದೆ. ಮುಸ್ಲಿಂ ಸಮುದಾಯಗಳು ವಿಜಯನಗರ ಸಾಮ್ರಾಜ್ಯದಾದ್ಯಂತ ವಿಸ್ತರಿಸಿಕೊಂಡಿದ್ದವು. ದಕ್ಷಿಣ ಭಾರತದ ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ, ಸಿಲೋನ್ ಪ್ರದೇಶದಾದ್ಯಂತ ಇವರ ವಸತಿ ನೆಲೆಗಳು ಕಂಡುಬರುತ್ತವೆ. ದಕ್ಷಿಣ ಭಾರತದ ವಿವಿಧ ಭಾಗ ಅಥವಾ ಪ್ರಾಂತ್ಯಗಳಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳು ಇಸ್ಲಾಂ ಧರ್ಮದ ಮೂಲತತ್ವಗಳನ್ನು ಅನುಸರಿಸುತ್ತಿದ್ದವು. ಆದರೆ ಪ್ರಾದೇಶಿಕವಾಗಿ ಈ ಸಮುದಾಯಗಳ ಆಚರಣೆ, ನಂಬಿಕೆ, ಸಾಂಸ್ಕೃತಿಕ ವಾದಂತಹ ಅಂಶಗಳಲ್ಲಿ ಭಿನ್ನ ಸ್ವರೂಪವನ್ನು ಪಡೆದುಕೊಂಡಿದ್ದವು.

ವಿಜಯನಗರ ಸಾಮ್ರಾಜ್ಯದ ಮುಸ್ಲಿಂ ಸಮುದಾಯಗಳಲ್ಲಿ ಕರಾವಳಿ ಭಾಗ/ಪ್ರಾಂತ್ಯದ ಸಮುದಾಯಗಳು ಪ್ರಾಚೀನ ಕಾಲಾವಧಿಯಿಂದಲೂ ಕಂಡುಬರುತ್ತವೆ. ಇವರು ವರ್ತಕರಾಗಿ ಬಂದರುಗಳಲ್ಲಿ ವಾಸವಾಗಿದ್ದ ಕಾರಣಕ್ಕಾಗಿ ಇಲ್ಲಿನ ಸ್ಥಳೀಯ ಸಂಸ್ಕೃತಿಯಲ್ಲಿ ಬೆರೆತವರಾಗಿದ್ದಾರೆ. ಹಾಗಾಗಿ ಇವರು ಈ ಪ್ರದೇಶದಲ್ಲಿ ಸ್ಥಳೀಯವಾಗಿ ಗುರುತಿಸಿಕೊಂಡರು. ಮುಸ್ಲಿಂ ಸಮಾಜದ ರಚನೆಯಲ್ಲಿ ಈ ಭಾಗದ ಮುಸ್ಲಿಮರು ಮಾಪಿಳ್ಳೆ, ಬ್ಯಾರಿ, ನವಾಯತ, ಮರಕ್ಕರ್, ರಾವುತರು, ತುಳುಕ್ಕರ್ ಹೀಗೆ ವಿವಿಧ ಸಮುದಾಯಗಳಾಗಿ ವಿಭಜನೆಗೊಂಡಿದ್ದರು. ಅದೇ ರೀತಿ ಕ್ರಿ.ಶ. ೧೪ನೇ ಶತಮಾನದಲ್ಲಿ ದಖ್ಖನ್‌ನಲ್ಲಿ ತುರ್ಕರು, ಅಫಘನ್ನರು, ಸಯ್ಯನ್ನರು ಹಾಗೂ ಪರ್ಶಿಯನ್ನರು ರಾಜಪ್ರಭುತ್ವದಡಿಯಲ್ಲಿ ಅಥವಾ ಮೇಲ್ವರ್ಗದಲ್ಲಿ ಗುರುತಿಸಿಕೊಂಡರು. ಹೀಗೆ ಈ ಮೇಲಿನ ಎರಡು ವರ್ಗಗಳಲ್ಲಿನ ಸಮುದಾಯಗಳು ಮೂಲತಃ ವಿದೇಶಿ ಮೂಲದವರಾಗಿದ್ದರಿಂದ ಇವರು ಭಾರತದ ಸಾಮಾಜಿಕ ರಚನೆಯಲ್ಲಿ ಪರದೇಶಿಗಳಾಗಿ ಗುರುತಿಸಿಕೊಂಡರು. ಪರದೇಶಿ ಎಂದರೆ ವಿದೇಶಿಯರು ಎಂದರ್ಥ. ಇವರು ಬಹುಮಟ್ಟಿಗೆ ಭಾರತೀಯ ಪ್ರಜೆಗಳಿಂದ ಮತ್ತು ಆಶ್ರಿತರಿಂದ ದೂರವಿರುತ್ತಿದ್ದರು. ಇವು ಆರಂಭಿಕ ಹಂತದಲ್ಲಿ ದುರಹಂಕಾರಿ ಶ್ರೀಮಂತ ವರ್ಗಗಳಾಗಿದ್ದವು. ನಂತರದಲ್ಲಿ ಇವರು ಭಾರತದ ಸಮಾಜ ರಚನೆಯಲ್ಲಿ ತಮಗೆ ಅನೂಕೂಲಕರವೆನಿಸಿದ ಜಾತಿ ವ್ಯವಸ್ಥೆಯನ್ನು ಮಾಡಿಕೊಂಡರು. ಅದು ಮುಸ್ಲಿಂ ಮನೋಭಾವಕ್ಕೆ ಅಂದು ಹೊರತಾಗಿತ್ತು. ಈ ರೀತಿಯ ಸಮುದಾಯ ವ್ಯವಸ್ಥೆಗೆ ಭಾರತೀಯ ಪ್ರಾದೇಶಿಕತೆಯು ಸಹ ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ

ಇವರ ಸಾಮಾಜಿಕ ರಚನೆಯ ಅಧ್ಯಯನವನ್ನು ಎರಡು ವರ್ಗದಲ್ಲಿ ಗುರುತಿಸಬಹುದು. ಮೊದಲನೆಯದಾಗಿ ವಿಜಯನಗರ ರಾಜಧಾನಿ ಪಟ್ಟಣದಲ್ಲಿನ ಮೇಲ್ವರ್ಗದ ಮುಸ್ಲಿಂ ಸಮುದಾಯಗಳು ಹಾಗೂ ಎರಡನೆಯದು ಕರಾವಳಿ ಬಂದರು ಪಟ್ಟಣಗಳಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳು. ಹಾಗಾಗಿ ಇವರ ಸಾಮಾಜಿಕ ರಚನೆಯಲ್ಲಿ ಸಾಕಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಹೀಗೆ ಭಾರತದ ಚರಿತ್ರೆಯಲ್ಲಿ ಉತ್ತರದಲ್ಲಿ ಅಸ್ತಿತ್ವದಲ್ಲಿದ್ದ ಮುಸ್ಲಿಂ ಸಮುದಾಯಗಳು ಇಲ್ಲಿನ ಸಮುದಾಯಗಳ ಮೇಲೆ ಬೀರಿದ ಪ್ರಭಾವ ಹಾಗೂ ಇಲ್ಲಿನ ಮುಸ್ಲಿಂ ಸಮುದಾಯಗಳು ಇತರ ಸಮುದಾಯಗಳ ಮೇಲೆ ಬೀರಿದ ಪ್ರಭಾವವನ್ನು ಮುಖ್ಯವಾಗಿ ಚರ್ಚಿಸಬೇಕಾಗಿದೆ. ಆ ಹಿನ್ನೆಲೆಯಲ್ಲಿ ಸೂಫಿಗಳ ಪಾತ್ರ, ಹಿಂದೂ–ಮುಸ್ಲಿಂ ನಡುವಿನ ಸಂಬಂಧ, ನಂಬಿಕೆ, ವೈವಾಹಿಕ ಸಂಬಂಧಗಳು, ಕ್ರೀಡೆ, ಹೀಗೆ ಈ ಅವಧಿಯಲ್ಲಿ ಸಾಂಸ್ಕೃತಿಕವಾಗಿ ವಿಭಿನ್ನವಾಗಿ ಗುರುತಿಸಿಕೊಂಡಿದ್ದ ಮುಸ್ಲಿಂ ಸಮಾಜದ ಸಾಮಾಜಿಕ ರಚನೆಯನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

ವಿಜಯನಗರ ಕಾಲದ ಸಾಮಾಜಿಕ ಜೀವನವನ್ನು ಒಮ್ಮೆ ಅವಲೋಕಿಸಿದಾಗ ಈ ಸಾಮ್ರಾಜ್ಯದಲ್ಲಿ ಹಾಗೂ ರಾಜಧಾನಿ ಪಟ್ಟಣದಲ್ಲಿ ಹಲವಾರು ಧರ್ಮಗಳು ಅಸ್ತಿತ್ವದಲ್ಲಿದ್ದು ಕಂಡುಬರುತ್ತದೆ. ಆಯಾ ಧರ್ಮಗಳಿಗೆ ಸೇರಿದ ಅನುಯಾಯಿಗಳು ತಮ್ಮದೇ ಆದ ಸಂಪ್ರದಾಯ, ಆಚಾರ–ವಿಚಾರಗಳನ್ನು ಹೊಂದಿದ್ದರು. ವಿಜಯನಗರದಲ್ಲಿ ಹಿಂದೂ ಧರ್ಮ, ಜೈನ ಧರ್ಮ, ಬೌದ್ಧ ಧರ್ಮ, ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು ನೆಲೆಸಿದ್ದವು. ಹೀಗೆ ವಿವಿಧ ಧರ್ಮಗಳಿಗೆ ಸೇರಿದ ಈ ಜನರ ಜೀವನವಿಧಾನ, ಆಯಾ ಧರ್ಮಗಳ ಆಚಾರ–ವಿಚಾರಗಳನ್ನು ಲಭ್ಯವಿರುವ ಆಕರಗಳಿಂದ ಅಧ್ಯಯನ ಮಾಡಲಾಗಿದೆ. ಅದರಲ್ಲಿ ಮುಸ್ಲಿಮರ ಧರ್ಮ, ಆಚರಣೆ, ನಂಬಿಕೆ, ಸಾಮಾಜಿಕ ಸ್ಥಿತಿಗತಿಗಳನ್ನು ಮಾತ್ರ ಈ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ವಿಜಯನಗರ ಕಾಲದಲ್ಲಿ ವಿವಿಧ ಧರ್ಮಗಳಿಗೆ ಸೇರಿದ ಜನರೊಟ್ಟಿಗೆ ಮುಸ್ಲಿಮರು ಸಹ ವಾಸವಾಗಿದ್ದರು ಎಂಬುದು ಒಂದು ವಿಶೇಷ. ವಿಜಯನಗರ ಸಾಮ್ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ಧರ್ಮಗಳಲ್ಲಿ ತಮ್ಮ ತಮ್ಮ ಸಂಪ್ರದಾಯ, ಆಚರಣೆಗಳಿಗೆ ಇಲ್ಲಿ ಸಮಾನ ಅವಕಾಶವಿತ್ತು. ಹಾಗೆಯೇ ಆಯಾ ಧರ್ಮಗಳಿಗೆ ಅನುಸಾರವಾದ ಮಾನ್ಯತೆ ಇತ್ತು.

ಮಧ್ಯಕಾಲೀನ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದ ವಿಜಯನಗರದ ಅರಸರು ಧರ್ಮಸಹಿಷ್ಣುತೆ ಮನೋಭಾವನೆಯನ್ನು ಹೊಂದಿದ್ದರು. ಹಾಗಾಗಿ ಇವರ ಆಳ್ವಿಕೆಯಲ್ಲಿ ಎಲ್ಲಾ ಧರ್ಮದವರನ್ನು ಸಮಾನರಾಗಿ ಕಾಣುತ್ತಿದ್ದರು. ಇದರಿಂದ ಇವರ ಸಾಮ್ರಾಜ್ಯದಲ್ಲಿನ ಪ್ರಜೆಗಳಿಗೆ ತಮಗೆ ಇಷ್ಟವಾದ ಧರ್ಮವನ್ನು ಹಾಗೂ ಸಂಪ್ರದಾಯಗಳನ್ನು ಆಚರಿಸಿಕೊಳ್ಳುವ ಸ್ವಾತಂತ್ರವನ್ನು ನೀಡಿದ್ದರು. ವಿಜಯನಗರ ಸಾಮ್ರಾಜ್ಯದಲ್ಲಿ ಆಳ್ವಿಕೆ ಮಾಡಿದ ಅರಸರು ಮುಖ್ಯವಾಗಿ ವೈಷ್ಣವ ಮತ್ತು ಶೈವ ಧರ್ಮದ ಅನುಯಾಯಿಗಳಾಗಿದ್ದರು. ಹಾಗಾಗಿ ಅರಸರು ಈ ಧರ್ಮಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದ್ದರು. ಅದರ ಪರಿಣಾಮವಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ವೈಷ್ಣವ ಹಾಗೂ ಶೈವ ಹಿಂದೂ ದೇವಾಲಯಗಳಲ್ಲದೆ ಹಲವು ಜೈನ ಬಸದಿಗಳು ಸಹ ಕಂಡುಬಂದಿವೆ. ಅದೇ ರೀತಿ

ಬುದ್ಧನ ಜಾತಕ ಕಥೆಗಳನ್ನು ಹೇಳುವ ಬೌದ್ಧ ಶಿಲ್ಪಗಳು ಸಹ ಕಂಡುಬರುತ್ತವೆ. ಅದರಂತೆಯೇ ಇಸ್ಲಾಂ ಧರ್ಮಕ್ಕೆ ಸಂಬಂಧಪಟ್ಟಂತೆ ಮಸೀದಿಗಳು, ಈದ್ಗಾ ಮೈದಾನಗಳು, ದರ್ಗಾಗಳು, ಸೂಫಿ ಸಂತರ ಧಾರ್ಮಿಕ ಕಟ್ಟಡಗಳನ್ನು ಕಾಣಬಹುದು.

ವಿಜಯನಗರ ಸಾಮ್ರಾಜ್ಯದ ಮುಸ್ಲಿಮರ ಜನಜೀವನದ ಬಗ್ಗೆ ಅಧ್ಯಯನ ಮಾಡುವಾಗ ಲಭ್ಯವಿರುವ ಆಕರಗಳ ಆಧಾರದ ಮೇಲೆ ಮುಸ್ಲಿಂ ಸಮಾಜವು ಮುಖ್ಯವಾಗಿ ಇಸ್ಲಾಂ ಷರಿಯತ್ (ಕಾನೂನು) ಪ್ರಕಾರವೇ ನಡೆಯುತ್ತಿತ್ತು ಎನ್ನುವ ಅಂಶ ತಿಳಿದುಬರುತ್ತದೆ. ಇಸ್ಲಾಂ ಧರ್ಮೀಯರು ತಮ್ಮ ಪವಿತ್ರ ಧಾರ್ಮಿಕ ಗ್ರಂಥವಾದ ಕುರಾನ್‌ನಲ್ಲಿ ತಿಳಿಸಿರುವ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಮುಸ್ಲಿಮರಿಗೆ 'ಕುರಾನ್' ಗ್ರಂಥವು ಅತ್ಯಂತ ಪವಿತ್ರವಾಗಿದ್ದು, ಅದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರು. ಹಾಗಾಗಿ ಇಮ್ಮಡಿ ದೇವರಾಯ ಮುಸ್ಲಿಮರು ಮತ್ತು ಹಿಂದೂಗಳು ಸಮಾನರೆಂದು ತೋರಲು ಆತ ತನ್ನ ಸಿಂಹಾಸನದ ಪಕ್ಕದಲ್ಲಿ 'ಕುರಾನ್' ಪ್ರತಿ ಮತ್ತು 'ಭಗವದ್ಗೀತೆ'ಯನ್ನು ಇರಿಸಿದ್ದನು.[೧] ಈ ಹೇಳಿಕೆಯಿಂದ ಇಲ್ಲಿನ ಮುಸ್ಲಿಮರು ಕುರಾನ್ ಗ್ರಂಥಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು, 'ಕುರಾನ್'ನಲ್ಲಿ ತಿಳಿಸಿರುವ ನಿಯಮಗಳನ್ನು ಪಾಲಿಸುತ್ತಿದ್ದರು ಎನ್ನಬಹುದು. ಹಾಗಾಗಿ ಈ ಅಧ್ಯಯನದಲ್ಲಿ ವಿಜಯನಗರ ಕಾಲದಲ್ಲಿ ಮುಸ್ಲಿಮರ ಜೀವನಕ್ರಮ ತಿಳಿಯುವುದಕ್ಕಿಂತ ಮುಂಚಿತವಾಗಿ 'ಕುರಾನ್' ಗ್ರಂಥದಲ್ಲಿ ಇರುವ ಪ್ರಮುಖ ತತ್ವಗಳನ್ನು ತಿಳಿಯಬೇಕು. ಈ ತತ್ವಗಳನ್ನು ಸಂಕ್ಷಿಪ್ತವಾಗಿ ತಿಳಿದರೆ ಮುಸ್ಲಿಮರ ಸಾಮಾಜಿಕ ಜೀವನವನ್ನು ಅರಿಯಬಹುದು.

೫.೧. ಸಾಮಾಜಿಕ ಜೀವನ

ಇಬ್-ನೆ-ಬತುತಾ ಮಲಬಾರಿನಲ್ಲಿ ಪ್ರಯಾಣ ಕೈಗೊಂಡ ಸಂದರ್ಭದಲ್ಲಿ ಹಿಂದೂ ಹಾಗೂ ಮುಸ್ಲಿಂ ನಡುವಿನ ಸಾಮಾಜಿಕ ಸ್ಥಿತಿಗಳ ಬಗ್ಗೆ ತಿಳಿಸುತ್ತಾನೆ. ಇವನು ತಿಳಿಸುವಂತೆ ಮಲಬಾರಿನಿಂದ ಗೋವಾದವರೆಗೆ ಅಲ್ಲಲ್ಲಿ ವಿಶ್ರಾಂತಿ ತಾಣಗಳಿವೆ. ಅಲ್ಲಿ ಪ್ರಯಾಣಿಕರ ಕುಡಿಯುವ ನೀರಿನ ಬಾವಿಗಳಿರುತ್ತವೆ. ಹಿಂದೂವೊಬ್ಬನು ಇದರಿಂದ ನೀರು ಸೇದಿ ಕೊಡುತ್ತಾನೆ. ಕುಡಿಯುವವನು ಹಿಂದೂವಾದರೆ ಪಾತ್ರೆಗಳಲ್ಲಿಯೇ ನೀರು ಕೊಡುತ್ತಾನೆ. ಮುಸಲ್ಮಾನನಾದರೆ ಅವನ ಬೊಗಸೆಗೆ ನೀರು ಹೊಯ್ಯುತ್ತಾನೆ. ಕುಡಿಯುವವನು ಸಾಕೆಂದು ತಲೆ ಅಲ್ಲಾಡಿಸುವವರೆಗೆ ನೀರು ಹೊಯ್ಯುತ್ತಲೇ ಇರುತ್ತಾನೆ. ಮಲಬಾರಿನ ಹಿಂದೂಗಳು ತಮ್ಮ ಮನೆಯೊಳಕ್ಕೆ ಮುಸಲ್ಮಾನರನ್ನು ಬಿಡುವುದಿಲ್ಲ, ಅಥವಾ ತಮ್ಮ ಪಾತ್ರೆಗಳಲ್ಲಿ ಊಟ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇದಕ್ಕೆ ವಿರುದ್ಧವಾಗಿ ಮುಸಲ್ಮಾನರು ಮಾಡಿದರೆ ಪಾತ್ರೆಗಳನ್ನು ಚಚ್ಚಿ ಹಾಕುತ್ತಾರೆ ಅಥವಾ ಅವನ್ನೇ ಅವನಿಗೆ ಕೊಟ್ಟು ಬಿಡುತ್ತಾರೆ. ಹಿಂದೂಗಳು ಅಡುಗೆ ಮಾಡಿ ಮುಸಲ್ಮಾನರಿಗೆ ಬಾಳೆಯ ಎಲೆಯ ಮೇಲೆ ಬಡಿಸುತ್ತಾರೆ. ಮಿಕ್ಕಿದ್ದನ್ನು ನಾಯಿಗಳಿಗೂ, ಹಕ್ಕಿಗಳಿಗೂ ಹಾಕುತ್ತಾರೆ. ಮಲಬಾರಿನಲ್ಲಿರುವ ರಸ್ತೆಯ ಬಳಿ ಮುಸಲ್ಮಾನರ ಮನೆಗಳಿವೆ. ಅಲ್ಲಿ ಇಳಿದು ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳಬಹುದು. ಹೀಗಿಲ್ಲದಿದ್ದರೆ ಮುಸಲ್ಮಾನರು ಈ ದೇಶದಲ್ಲಿ ಪ್ರಯಾಣ ಮಾಡುವುದೇ ಕಷ್ಟ.[೨] ಅಲ್ಲದೇ ಇನ್ನು ಮುಂದುವರಿಸುತ್ತಾ,

'ಈ ದೇಶದ ಹಿಂದೂಗಳು ಮುಸಲ್ಮಾನರನ್ನು ಬಹಳ ಗೌರವಿಸುತ್ತಾರೆ. ಆದರೆ ತಮ್ಮ ಮನೆಯೊಳಕ್ಕೆ ಬಿಡುವುದಿಲ್ಲ ಅಥವಾ ತಮ್ಮೊಡನೆ ಊಟ ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲ. ನಾವು ದಾರಿಯಲ್ಲಿ ಹೋಗುತ್ತಿದ್ದರೆ ನಮಗೆ ದಾರಿ ಬಿಟ್ಟು ಪಕ್ಕಕ್ಕೆ ನಿಂತುಕೊಳ್ಳುತ್ತಾರೆ'.[೩] ಬತುತಾನ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಉಲ್ಲೇಖಗಳು ಅಂದಿನ ಸಾಮಾಜಿಕ ಸಂಕರಗಳನ್ನು ತಿಳಿಸುತ್ತದೆ. ಇಲ್ಲಿ ಹಿಂದೂ ಹಾಗೂ ಮುಸ್ಲಿಂ ಸಮುದಾಯಗಳು ಸಾಮಾಜಿಕ ವಿಷಯಗಳಲ್ಲಿ ಒಂದು ಅಂತರವನ್ನು ಕಾಯ್ದುಕೊಂಡಿದ್ದರೂ, ಆರ್ಥಿಕ ವಿಷಯದಲ್ಲಿ ಪ್ರಾತಿನಿಧ್ಯತೆಯನ್ನು ಪಡೆಯುವುದಕ್ಕೆ ಹವಣಿಸುತ್ತಿದ್ದರು ಎಂಬುದನ್ನು ಗುರುತಿಸಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಸಿಕ್ಕಿರುವ ಶಾಸನಗಳು, ಸಮಾಧಿಗಳು, ಪ್ರಾಕ್ತನ ಅವಶೇಷಗಳ ಆಧಾರದ ಮೇಲೆ ಮುಸ್ಲಿಮರ ಜನಜೀವನ ಚಿತ್ರಣವನ್ನು ನಾವು ತಿಳಿಯಬಹುದು. ಹಾಗೆಯೇ ವಿಜಯನಗರ ಪೂರ್ವದಿಂದಲೂ ಮುಸ್ಲಿಂ ಸಮುದಾಯಗಳು ಇಲ್ಲಿ ನೆಲೆಸಿದ್ದವು ಎನ್ನುವ ಅಂಶಗಳನ್ನು ಈ ಅವಧಿಯಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ಪ್ರವಾಸಿಗರ ಕಥನಗಳಿಂದ ತಿಳಿಯಬಹುದಾಗಿದೆ.[೪] ವಿಜಯನಗರ ಮತ್ತು ಬಹಮನಿ ರಾಜ್ಯದ ನಡುವಿನ ವೈವಾಹಿಕ ಸಂಬಂಧಗಳಿಂದಾಗಿಯೂ ಮುಸ್ಲಿಮರು ವಿಜಯನಗರದಲ್ಲಿ ಕಾಣಿಸಿಕೊಂಡರು. ಒಂದನೇ ದೇವರಾಯ ತನ್ನ ಮಗಳನ್ನು ಬಹಮನಿ ರಾಜ್ಯದ ಸುಲ್ತಾನ ಫಿರೋಜ್‌ಷಾನಿಗೆ ಕೊಟ್ಟು ವಿವಾಹ ಮಾಡಿಸಿದನು. ಇದರಿಂದ ಫಿರೋಜ್ ಷಾ ತನ್ನ ಸೈನಿಕರನ್ನು ಒಂದನೇ ದೇವರಾಯನ ರಾಜ್ಯಕ್ಕೆ ಕಳುಹಿಸಿದನು. ಈ ರೀತಿ ಮುಸ್ಲಿಂ ಸೈನಿಕ ಸಮುದಾಯವು ವಿಜಯನಗರದಲ್ಲಿ ಬಂದು ನೆಲೆಸಿತು.[೫] ಎರಡನೇ ದೇವರಾಯ ಮುಸ್ಲಿಮ್ ಸೈನಿಕರನ್ನು ತನ್ನ ಸೈನ್ಯಕ್ಕೆ ನೇಮಕ ಮಾಡಿಕೊಂಡು ಅವರಿಗೆ ಪ್ರತ್ಯೇಕವಾದ ನೆಲೆಯನ್ನು ವಾಸಿಸಲು ಒದಗಿಸಿಕೊಟ್ಟನು. ಈ ಬಗ್ಗೆ ವಿದೇಶಿ ಪ್ರವಾಸಿಗನಾದ ಡೋಮಿಂಗೋ ಪೆಯಾಸ್‌ನು ಪಟ್ಟಣದ ತೀರಾ ಕೊನೆಯ ಭಾಗದಲ್ಲಿ ಮುಸ್ಲಿಮರ ವಾಸಸ್ಥಾನಗಳಿದ್ದವು.[೬] ಅಲ್ಲಿ ಮುಸ್ಲಿಮರು ಬಹಳ ಸಂಖ್ಯೆಯಲ್ಲಿದ್ದರೆಂದು ಹೇಳಿದ್ದಾನೆ. ಇದಲ್ಲದೆ ಮುಸ್ಲಿಮರು ಪಟ್ಟಣದ ಬೇರೆ ಬೇರೆ ಸ್ಥಳಗಳಲ್ಲೂ ವಾಸವಾಗಿದ್ದರು. ಶೃಂಗಾರದ ಹೆಬ್ಬಾಗಿಲಿನ ಸುತ್ತಲಿನ ಪ್ರದೇಶದಿಂದ ಹಿಡಿದು ಅಹಮ್ಮದ್ ಖಾನ್ ಧರ್ಮಶಾಲೆಯ ಪೂರ್ವದ ಕಡೆಯಲ್ಲಿ ಮಾಲ್ಯವಂತ ಪರ್ವತದ ಸುತ್ತಲಿನ ಪ್ರದೇಶದಲ್ಲಿ ವಾಸವಾಗಿದ್ದರು. ತಳವಾರಘಟ್ಟ ಹೆಬ್ಬಾಗಿಲನವರೆಗೆ ಅವರ ವಾಸ್ತವ್ಯ ಹಬ್ಬಿತ್ತು. ಇದರ ಜೊತೆಗೆ ಕಮಲಾಪುರ, ಕಡೇ(ಕಡ್ಡಿ)ರಾಮಪುರ, ಹೊಸಪಟ್ಟಣ(ಹೊಸಪೇಟೆ)ದಲ್ಲೂ ಮುಸ್ಲಿಮರ ವಸತಿ ನೆಲೆಗಳು ಇದ್ದವು. ಇವರು ಈ ಮೇಲಿನ ವಸತಿ ಪ್ರದೇಶಗಳಲ್ಲಿ ವಾಸವಾಗಿದ್ದರು ಎನ್ನುವುದಕ್ಕೆ ಪೂರಕವಾಗಿ ಈ ಪ್ರದೇಶಗಳಲ್ಲಿ ಇಂದಿಗೂ ನಮಗೆ ಸಾಕಷ್ಟು ಸಮಾಧಿಗಳು ಕಂಡುಬರುತ್ತವೆ.

ರಾಜಪ್ರಭುತ್ವಗಳು ಆಡಳಿತವನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಇಲ್ಲಿನ ಯಾವುದೇ ಧರ್ಮದ ರೂಢಿ ಸಂಪ್ರದಾಯಗಳನ್ನು ಪಾರಂಪರಿಕವಾಗಿ ಅನುಸರಿಸಿಕೊಂಡು ಬರುವುದು ಸಾಮಾನ್ಯ. ಆದರೆ ವಿಜಯನಗರದ ಅರಸರು ಇವರ ಸಾಮ್ರಾಜ್ಯದಲ್ಲಿ ಬಹುಸಂಖ್ಯಾತರಾಗಿದ್ದ ವೈದಿಕರಿಂದ

ನಿರ್ಮಾಣಗೊಂಡಿದ್ದ ಹಿಂದೂ ಸಮಾಜದಲ್ಲಿ ವೈದಿಕ ಧರ್ಮದ ಅನುಸಾರವಾಗಿ ತಮ್ಮ ಸಮಾಜವನ್ನು ರೂಪಿಸಿಕೊಂಡಿದ್ದರು. ಇವರು ಧಾರ್ಮಿಕ ಗ್ರಂಥಗಳ ಅನುಸಾರವಾಗಿ ತಮ್ಮ ಸಮಾಜವನ್ನು ರೂಪಿಸಿಕೊಂಡಿದ್ದರು. ಉದಾಹರಣೆಗೆ ಇಮ್ಮಡಿ ದೇವರಾಯನು ತನ್ನ ಹಿಂದಿನವರು ಹಾಕಿಕೊಟ್ಟ ಪೂರ್ವ ನಿದರ್ಶನಗಳಿಗೆ ಅನುಗುಣವಾಗಿ ಪ್ರಾಚೀನ ಆಚಾರ, ವಿಚಾರಗಳನ್ನು ಆಧರಿಸಿ ವಿವಿಧ ಜಾತಿಗಳ ಕರ್ತವ್ಯಗಳನ್ನು ರಕ್ಷಿಸಿದನು.[೭] ಹಾಗಾಗಿ ಅವನು ಪೂರ್ವಜರು ರೂಪಿಸಿದ ನಿಯಮ ಕಟ್ಟಳೆಗಳನ್ನು ಪಾಲಿಸುತ್ತಿದ್ದ ಎಂಬ ಅಂಶವನ್ನು ತಿಳಿಯಬಹುದು. ಹಿಂದೂ ಸಮಾಜವು ಪ್ರಾಚೀನ ಕಾಲದಿಂದಲೂ ರಾಜವಂಶಗಳ ಆಳ್ವಿಕೆಯಲ್ಲಿ ತನ್ನದೇ ಆದ ಸಂಪ್ರದಾಯಗಳನ್ನು ಹೊಂದಿತ್ತು. ಇದೇ ಸಂಪ್ರದಾಯವನ್ನು ವಿಜಯನಗರ ಸಾಮ್ರಾಜ್ಯವು ಸಹ ಹೊಂದಿತ್ತು. ಅದೇ ರೀತಿ ಸಮಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲಿ ಬಲಿಷ್ಠಗೊಳ್ಳುತ್ತಿದ್ದ ಮುಸ್ಲಿಂ ಸಮಾಜವು ಇವರಿಗೆ ಮುಖ್ಯವಾಗಿತ್ತು. ಇವರು ಇಸ್ಲಾಂ ಷರಿಯತ್ ಪ್ರಕಾರ ತಮ್ಮ ಜೀವನವನ್ನು ನಡೆಸುತ್ತಿದ್ದರು. ಇವರು ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಂಡಿದ್ದ ಆಹಾರಪದ್ಧತಿ, ವೇಷಭೂಷಣ, ಆಚರಣೆ, ನಂಬಿಕೆಗಳನ್ನು, ಈ ಮುಂದಿನಂತೆ ಚರ್ಚಿಸಲಾಗಿದೆ.

೫.೨. ಆಹಾರಪದ್ಧತಿ

ವಿಜಯನಗರ ಸಾಮ್ರಾಜ್ಯದಲ್ಲಿ ಕಂಡುಬರುವ ಜನಸಾಮಾನ್ಯರು ಬಳಸುವಂತಹ ಆಹಾರವನ್ನೆ ಮುಸ್ಲಿಮರು ಬಳಸುತ್ತಿದ್ದರು. ಇವರ ಮುಖ್ಯವಾದ ಆಹಾರವೆಂದರೆ ಧಾನ್ಯಗಳು. ರಾಗಿ, ಜೋಳ, ಅಕ್ಕಿ, ಗೋಧಿ ಬಳಸುತ್ತಿದ್ದರು. ಅಬ್ದುಲ್ ರಜಾಕ್‌ನು ಮುಸ್ಲಿಮರು ಅತಿ ಹೆಚ್ಚಾಗಿ ಬಳಕೆ ಮಾಡುತ್ತಿದ್ದ ಆಹಾರದ ಬಗ್ಗೆ ತನ್ನ ಪ್ರವಾಸಿ ಕಥನದಲ್ಲಿ ತಿಳಿಸಿದ್ದಾನೆ. ರಾಜಧಾನಿಯಲ್ಲಿದ್ದ ಮುಸ್ಲಿಮರು ಗೋಧಿಯನ್ನು ಹೆಚ್ಚಾಗಿ ಬಳಸುತ್ತಿದ್ದರು, ಸಮತೋಲನ ಆಹಾರ ಎಂಬ ಪರಿಕಲ್ಪನೆಯು ಆಗ ಇರಲಿಲ್ಲ ಎಂದು ರಜಾಕ್ ತಿಳಿಸಿದ್ದಾನೆ. ಮುಸ್ಲಿಮರ ಪ್ರಿಯವಾದ ಆಹಾರ ಗೋಧಿಯಾಗಿತ್ತು. ಅಲ್ಲದೇ ಮಾಂಸವನ್ನು ಸಹ ಸೇವಿಸುತ್ತಿದ್ದರು. ಆದರೆ ಹಂದಿ ಸೇವನೆ ಇವರಿಗೆ ಅನಿಷ್ಟವಾಗಿತ್ತು. ಮುಸ್ಲಿಮರ ನೆಲೆಯಲ್ಲಿ ಸಿಕ್ಕ ದಾದನರಾವುತನ ಮಗ ಸಖಲಾದಿರಾವುತ ಒಂದು ಗುಮ್ಮಟ ಕಟ್ಟಿಸಿ ಶಾಸನ ಬರೆಯಿಸಿದ್ದನು. ಇದರಲ್ಲಿ ಈ ಗುಮ್ಮಟವನ್ನು ನಾಶ ಮಾಡಿದರೆ ಹಂದಿಯನ್ನು ತಿಂದ ಪಾಪಕ್ಕೆ ಸಮಾನ ಎಂದು ತಿಳಿಸಿದೆ.[೮] ಇಬ್–ನೆ–ಬತುತನು ಹೊನ್ನಾವರದಲ್ಲಿ ವಿಜಯನಗರದ ರಾಜ್ಯಪಾಲನಿಗೆ ನೇಮಕನಾಗಿದ್ದ ಸುಲ್ತಾನ ಜಲಾಲುದ್ದೀನ್‌ನ ಆಹಾರ ಕ್ರಮವನ್ನು ತಿಳಿಸಿದ್ದಾನೆ. ಅವನು ತಿಳಿಸುವಂತೆ 'ನಾನು ನನ್ನ ಕೆಲವು ಸಹಪಾಠಿಗಳು ಸುಲ್ತಾನನೊಡನೆ ಭೋಜನ ಮಾಡಿದ್ದೇವೆ. ತಾಳಂ(ಥಾಳಿ) ಎಂದು ಕರೆಯುವ ತಟ್ಟೆಯಲ್ಲಿ ಅನ್ನ, ತುಪ್ಪ, ಉಪ್ಪು ಹಾಕಿದ ಮೆಣಸಿನ ಗೊಜ್ಜು, ಹಸಿಶುಂಠಿ, ನಿಂಬೆಹಣ್ಣು ಮತ್ತು ಮಾವಿನಕಾಯಿ, ಉಪ್ಪಿನಕಾಯಿ, ತರಕಾರಿಯ ಪಲ್ಯ, ಹಾಲಿನಿಂದ ಮಾಡಿದ ಪಾಯಸ ಮುಂತಾದವುಗಳನ್ನು ಬಡಿಸಿದರು. ಜೊತೆಗೆ ಹುರಿದ ಕೋಳಿಯನ್ನು ನಾನಾ ತರಹದ ಮೀನನ್ನು ಅನ್ನದ ಜೊತೆ ಬಡಿಸಿದರು. ಕೊನೆಯಲ್ಲಿ ಮಜ್ಜಿಗೆಯನ್ನು ಬಡಿಸಿದರು. ಇಲ್ಲಿಗೆ

ಊಟ ಮುಗಿದಂತೆ. ಮಜ್ಜಿಗೆಯನ್ನು ಬಡಿಸಿದರೆ ಊಟ ಮಾಡಬೇಕಾದ್ದು ಮತ್ತೇನು ಇಲ್ಲವೆಂದು ಅರ್ಥ. ಎಲ್ಲ ಆದ ಮೇಲೆ ಬಿಸಿನೀರು ಕುಡಿಯುತ್ತಾರೆ'.[೯]

ವಿಜಯನಗರದಲ್ಲಿ ಸರ್ವೆಸಾಮಾನ್ಯವಾಗಿ ಆಹಾರದ ಸ್ವರೂಪವು ಇಲ್ಲಿನ ಭೌತಿಕ ಪರಿಸರ, ಜನರ ಅಭ್ಯಾಸ ಮತ್ತು ಪದ್ಧತಿಗಳ ಪರಿಣಾಮವಾಗಿತ್ತು.[೧೦] ಅಂದರೆ ವಿಜಯನಗರ ರಾಜ್ಯದಲ್ಲಿ ವೈಷ್ಣವ, ಶೈವ ಮತ್ತು ಜೈನ ಧರ್ಮೀಯರನ್ನು ಹೊರತುಪಡಿಸಿ ಅರಸರು ಮತ್ತು ಇಲ್ಲಿ ನೆಲೆಸಿದ್ದ ಸಾಮಾನ್ಯ ಜನರು ಮಾಂಸ, ಮೀನು ಮತ್ತು ಹಕ್ಕಿಯ ಮಾಂಸಾಹಾರ ಸೇವನೆಯ ಅಭ್ಯಾಸ ಮಾಡಿಕೊಂಡಿದ್ದರು.[೧೧] ಮುಸ್ಲಿಂ ವಿದೇಶಿ ಪ್ರವಾಸಿಗನಾದ ಅಬ್ದುಲ್ ರಜಾಕನಿಗೆ ಇಮ್ಮಡಿ ದೇವರಾಯ ಈ ರೀತಿ ಅತಿಥಿ ಸತ್ಕಾರ ಮಾಡುತ್ತಿದ್ದನು. ಅಬ್ದುಲ್ ರಜಾಕನಿಗೆ ಪ್ರತಿದಿನ ಎರಡು ಕುರಿ, ನಾಲ್ಕು ಜೊತೆ ಕೋಳಿ, ಐದು ಮಣ ಅಕ್ಕಿ, ಒಂದು ಮಣ ಬೆಣ್ಣೆ, ಒಂದು ಮಣ ಸಕ್ಕರೆ ಮತ್ತು ಎರಡು ಚಿನ್ನದ ವರಾಹಗಳನ್ನು ಸರಬರಾಜು ಮಾಡುವ ವ್ಯವಸ್ಥೆಯಾಗಿತ್ತು.[೧೨] ಹಾಗಾಗಿ ಸಾಮಾನ್ಯವಾಗಿ ಮುಸ್ಲಿಮರ ಪ್ರಿಯವಾದ ಆಹಾರ ಮಾಂಸ, ಅಕ್ಕಿ, ಗೋಧಿಯಾಗಿತ್ತು ಎಂದು ತಿಳಿಯಬಹುದಾಗಿದೆ.

೫.೩. ವೇಷಭೂಷಣಗಳು

ವಿಜಯನಗರದ ಸಾಮಾನ್ಯ ಜನರ ಉಡುಗೆ ತೊಡುಗೆ ಬಗ್ಗೆ ವಿದೇಶಿ ಪ್ರವಾಸಿಗರು ತಿಳಿಸಿಲ್ಲ. ಶ್ರೀಮಂತ ವರ್ಗದ ಜನರ ಉಡುಗೆ ಬಗ್ಗೆ ವಿವರಣೆ ದೊರೆಯುತ್ತದೆ. ಅಬ್ದುಲ್ ರಜಾಕನ ಪೋಷಾಕಿನ ಬಗ್ಗೆ ತಿಳಿದಾಗ, ಈತ ಝ್ಯುತುನ್ ಸ್ಯಾಟಿನ್ ಬಟ್ಟೆಯ ನಿಲುವಂಗಿಯನ್ನು ಧರಿಸಿದ್ದ ಹಾಗೂ ತನ್ನ ಕೊರಳ ಸುತ್ತ ರಾಜಶ್ರೇಷ್ಠವಾದ ಅಪ್ಪಟ ಮುತ್ತುಗಳ ಕೊರಳಪಟ್ಟಿಯನ್ನು ಧರಿಸಿದ್ದ. ಅದರ ಬೆಲೆಯನ್ನು ರತ್ನಪಡಿ ವ್ಯಾಪಾರಿಗೂ ಲೆಕ್ಕ ಹಾಕಲು ಕಷ್ಟವಾಗುತ್ತಿತ್ತು ಎನ್ನುವ ವಿವರಣೆ ಲಭ್ಯವಿದೆ.[೧೩] ಅಬ್ದುಲ್ ರಜಾಕ್ ಮುಸ್ಲಿಂ ಪ್ರವಾಸಿಗನಾಗಿದ್ದು, ಈತನ ವೇಷಭೂಷಣದ ಉಲ್ಲೇಖ ನೋಡಿದಾಗ ಸಾಮಾನ್ಯವಾಗಿ ಮೇಲ್ವರ್ಗದ ಮುಸ್ಲಿಮರು ನಿಲುವಂಗಿಯನ್ನು ಧರಿಸುತ್ತಿದ್ದರು ಎಂಬ ಅಂಶ ತಿಳಿದುಬರುತ್ತದೆ. ವಿಜಯನಗರ ಸಾಮ್ರಾಜ್ಯದ ಹಂಪಿ ಪರಿಸರದ ಶೃಂಗಾರದ ಹೆಬ್ಬಾಗಿಲಿನಲ್ಲಿ ಒಂದು ಮುಸ್ಲಿಂ ಕಾವಲುಗಾರನ ಶಿಲ್ಪವಿದೆ. ಈ ಕಾವಲುಗಾರ ಉದ್ದನೆಯ ನಿಲುವಂಗಿ ಧರಿಸಿದ್ದಾನೆ. ಕೆಳಭಾಗದಲ್ಲಿ ನಡುಪಟ್ಟಿಯಂತೆ ಬಟ್ಟೆ ಧರಿಸಿದ್ದು ಕಂಡುಬರುತ್ತದೆ. ಅದನ್ನು ಹಲವು ಮಡಿಕೆಗಳಾಗಿ ತುಂಬಿ ಬಿಗಿಯಾಗಿ ಕಟ್ಟಿಕೊಂಡಿದ್ದಾನೆ. ತಲೆಯ ಮೇಲೆ ರುಮಾಲು ಸುತ್ತುಕೊಂಡಂತೆ ಟೊಪ್ಪಿಗೆ ಹಾಕಿಕೊಂಡಿದ್ದಾನೆ. ಪಾದರಕ್ಷೆಯನ್ನು ಧರಿಸಿದ್ದು, ಕೈಯಲ್ಲಿ ಕೋಲನ್ನು ಹಿಡಿದುಕೊಂಡು ದ್ವಾರಬಾಗಿಲನ್ನು ಕಾಯುತ್ತಿರುವ ದೃಶ್ಯವಿದೆ. ಇದರಿಂದ ಮೇಲ್ವರ್ಗದವರಂತೆ ಈ ಪರಿಸರದಲ್ಲಿ ಕೆಳದರ್ಜೆಯ ನೌಕರರಾದ ಮುಸ್ಲಿಮರು ನಿಲುವಂಗಿಯನ್ನು ಧರಿಸುತ್ತಿದ್ದರೆಂದು ತಿಳಿಯಬಹುದು. ಆದರೆ ಸ್ತ್ರೀಯರ ವೇಷಭೂಷಣದ ಬಗ್ಗೆ ಯಾವುದೇ ಮಾಹಿತಿ ತಿಳಿದುಬರುವುದಿಲ್ಲ. ಬಹುಶಃ ಇವರ ಸಮಾಜದಲ್ಲಿ ಪರ್ದಾಪದ್ಧತಿ ಇದ್ದುದರಿಂದ ಸ್ತ್ರೀಯರ ಸ್ಥಿತಿಗತಿ ಬಗ್ಗೆ ಉಲ್ಲೇಖಗಳು ಕಂಡುಬರುವುದಿಲ್ಲ. ಮುಸ್ಲಿಂ ಸ್ತ್ರೀಯರಿಗೆ ಅನೇಕ ಕಟ್ಟುಪಾಡುಗಳಿದ್ದದ್ದು ಕಾರಣವಿರಬೇಕು. ಆದರೆ ಮುಸ್ಲಿಮರು ನೆಲೆಸಿದ

ಸ್ಥಳಗಳಲ್ಲಿ ಹಲವು ಮಹಿಳಾ ಗೋರಿಗಳು ಕಂಡುಬಂದಿವೆ. ಪುರುಷರ ಸಮಾಧಿಯ ಮೇಲೆ ಗೋರಿಗಳನ್ನು ಕಟ್ಟುವಂತೆ ಮಹಿಳಾ ಸಮಾಧಿಯ ಮೇಲೆ ಗೋರಿಯನ್ನು ಕಟ್ಟಿಸಿದ್ದಾರೆ. ಮಾಲ್ಯವಂತ ಪರ್ವತದ ರಘುನಾಥ ದೇವಾಲಯದ ಎಡಭಾಗದ ಗದ್ದೆಯ ಪಕ್ಕದಲ್ಲಿ ಗುಮ್ಮಟಾಕಾರದ ಮಹಿಳಾ ಗೋರಿ ಕಂಡುಬರುತ್ತದೆ. ಇದೇ ರೀತಿಯ ಮಹಿಳಾ ಗೋರಿ(ಗುಮ್ಮಟ ರಹಿತ) ಕಡ್ಡಿರಾಂಪುರದಲ್ಲಿ ಕಂಡುಬರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪುರುಷರ ಸಮಾಧಿಯಂತೆ ಮಹಿಳಾ ಸಮಾಧಿಗಳನ್ನು ಕಟ್ಟಿಸಿದ್ದು ಇವರ ಸಮಾಜದಲ್ಲಿ ಮಹಿಳೆಯರು ಉತ್ತಮವಾದ ಸ್ಥಾನಮಾನಗಳನ್ನು ಹೊಂದಿದ್ದರು ಎನ್ನಬಹುದು. ಮುಸ್ಲಿಂ ಸಮಾಜದಲ್ಲಿ ಪುರುಷರು ಹೆಂಡತಿ, ತಾಯಿ ಅಥವಾ ಮಕ್ಕಳ ಮೇಲೆ ಜವಾಬ್ದಾರಿಯನ್ನು ಹೊಂದಿದ್ದರು. ಅವರಿಗೆ ಗೌರವವನ್ನು ನೀಡುತ್ತಿದ್ದರು. ಏಕೆಂದರೆ ಸಿಕ್ಕಂತಹ ಶಾಸನದಲ್ಲಿ ಶಾಪಗ್ರಸ್ತ ಸಾಲಿನಲ್ಲಿ ಪುರುಷರಷ್ಟೆ ಅಲ್ಲದೆ ಮಹಿಳೆಯರ ಕುಟುಂಬದ ಜವಾಬ್ದಾರಿಯನ್ನು ಪರೋಕ್ಷವಾಗಿ ಸೂಚಿಸುತ್ತದೆ. ಇದರಲ್ಲಿ ದಾದರಾವುತನ ಮಗ ಸಲಾಖಾತ್‌ರಾವುತ್ ಕಟ್ಟಿಸಿದ ಗುಮ್ಮಟಕ್ಕೆ ಯಾರಾದರೂ ಚ್ಯುತಿ ತಂದರೆ, ಅವರು ತಾಯಿಯನ್ನು ಮೆಕ್ಕಾ ತೀರ್ಥದಲ್ಲಿ ಕೊಂದ ಪಾಪಕ್ಕೆ ಸಮವೆಂದು ತಿಳಿಸಲಾಗಿದೆ.[೧೪]

ಇಬ್-ನೆ-ಬತುತಾ ಉಲ್ಲೇಖಿಸುವಂತೆ ಹೊನ್ನಾವರದ ಸ್ತ್ರೀಯರು ಹೊಲಿಯದೆ ಇರುವ ವಸ್ತ್ರಗಳನ್ನು(ಸೀರೆಗಳನ್ನು) ಧರಿಸುತ್ತಾರೆ. ಈ ವಸ್ತ್ರದ ಒಂದು ಭಾಗವನ್ನು ಸೊಂಟಕ್ಕೆ ಸುತ್ತಿಕೊಂಡು, ಇನ್ನೊಂದು ಭಾಗವನ್ನು ಭುಜದ ಮೇಲೂ ತಲೆಯ ಮೇಲೂ ಹೊದ್ದುಕೊಳ್ಳುತ್ತಾರೆ. ಇವರು ರೂಪವತಿಯರೂ, ಸಚ್ಚಾರಿತ್ರರೂ ಆಗಿದ್ದಾರೆ. ಪ್ರತಿಯೊಬ್ಬರೂ ಮೂಗಿಗೆ ಚಿನ್ನದ ಉಂಗುರವನ್ನು ಹಾಕಿಕೊಳ್ಳುತ್ತಾರೆ. ಒಂದು ವಿಶೇಷವೆಂದರೆ ಇವರೆಲ್ಲರೂ ಕುರಾನ್‌ನನ್ನು ಬಾಯಿಪಾಠ ಮಾಡಿರುವುದು. ಹೊನ್ನಾವರನಲ್ಲಿ ಹೆಣ್ಣುಮಕ್ಕಳಿಗೆ ೧೩ ಶಾಲೆಗಳು, ಗಂಡುಮಕ್ಕಳಿಗೆ ೨೩ ಶಾಲೆಗಳಿವೆ. ಹೀಗಿರುವುದನ್ನು ನಾನೆಲ್ಲಿಯೂ ನೋಡಿಲ್ಲ.[೧೫]

ಹೊನ್ನಾವರದಲ್ಲಿ ಸ್ಥಳೀಯ ವೇಷಭೂಷಣವನ್ನು ಅವರು ಅಳವಡಿಸಿಕೊಂಡಿದ್ದರು ಎಂಬುದಕ್ಕೆ ಇಬ್-ನೆ-ಬತುತಾನ ದಾಖಲೆಗಳು ಸಾಕ್ಷಿಯಾಗಿವೆ.[೧೬] ಇದರೊಂದಿಗೆ ಶೈಕ್ಷಣಿಕ ರಂಗದಲ್ಲಿ ಅರೆಬಿಕ್ ಶಿಕ್ಷಣವನ್ನು ಪಡೆದುಕೊಂಡು ಪ್ರಾವಿಣ್ಯತೆ ಹೊಂದಿದ್ದರು. ಇಬ್-ನೆ-ಬತುತಾ ತಿಳಿಸುವಂತೆ "ಸಮುದ್ರ ತೀರದಲ್ಲಿ ವಾಸವಾಗಿದ್ದ ಸ್ತ್ರೀಯರು ಎಲ್ಲರೂ ಕುರಾನನ್ನು ಬಾಯಿಪಾಠ ಮಾಡಿರುವುದು"[೧೫] ಹೀಗೆ ಇವರು ಇಸ್ಲಾಂ ತತ್ತ್ವಗಳನ್ನು ಪಾಲಿಸುತ್ತಿದ್ದರು.

೫.೪. ನಂಬಿಕೆ ಮತ್ತು ಆಚರಣೆಗಳು

ಮುಸ್ಲಿಂ ಸಮುದಾಯದವರ ನಂಬಿಕೆ ಮತ್ತು ಆಚರಣೆಗಳಲ್ಲಿ ಮುಖ್ಯವಾದುದು ಅಂತಿಮ ಸಂಸ್ಕಾರದ ಅವಧಿಯಲ್ಲಿ ನಡೆಯುವ ಗೋರಿಗಳ ನಿರ್ಮಾಣ. ಅಸಂಖ್ಯಾತ ಗೋರಿಗಳ ಸ್ಮಾರಕಗಳನ್ನು ಪಟ್ಟಣದ ಸುತ್ತಮುತ್ತಲೂ ಕಾಣಬಹುದಾಗಿದೆ. ವಿಜಯನಗರ ಪಟ್ಟಣದಲ್ಲಿ ವಾಸವಾಗಿದ್ದ ಮುಸ್ಲಿಮರಿಗೆ ತಮ್ಮ ಧರ್ಮ ಆಚರಣೆಗಳಿಗೆ ಯಾವುದೇ ಅಡ್ಡಿ ಬಾರದಂತೆ ವಿಜಯನಗರದ ಅರಸರು ಮಸೀದಿಗಳ

ವಿಜಯನಗರ ಕಾಲದಲ್ಲಿ ವಾಸವಾಗಿದ್ದ ಮುಸ್ಲಿಮರು ಈ ಎರಡು ಹಬ್ಬಗಳನ್ನು ಆಚರಿಸುತ್ತಿದ್ದರು ಎನ್ನುವುದಕ್ಕೆ ದೊರೆತಿರುವ ಈದ್ಗಾ ಮೈದಾನವೇ ಸಾಕ್ಷ್ಯಾಧಾರವಾಗಿದೆ. ವಿಜಯನಗರಕ್ಕೆ ಭೇಟಿ ನೀಡಿದ ಅಬ್ದುಲ್ ರಜಾಕ್ ತನ್ನ ರಾಯಭಾರತ್ವದ ಕೆಲಸವನ್ನು ವಿಜಯನಗರ ಸಾಮ್ರಾಜ್ಯದಲ್ಲಿ ಮುಗಿಸಿಕೊಂಡು ತನ್ನ ದೇಶಕ್ಕೆ ಮರು ಪ್ರಯಾಣ ಮಾಡುವ ಸಂದರ್ಭದಲ್ಲಿ ರಂಜಾನ್ ಹಬ್ಬದ ಉಲ್ಲೇಖ ನೀಡಿದ್ದಾನೆ. "ರಂಜಾನ್ ತಿಂಗಳ ಮೊದಲನೇ ದಿನ ಓಮನ್ ಸಮುದ್ರದ ತೀರವನ್ನು ದಾಟಿ ಮಂಗನೊರನ್ನು(ಮಂಗಳೂರು) ತಲುಪಿದ ನಂತರ ಮಂಗಳೂರಿನಲ್ಲಿ ರಂಜಾನ್ ಉಪವಾಸ ನಂತರ ಮಾಡುವ ಹಬ್ಬವನ್ನು ಮುಗಿಸಿ ನಾನು ಮನೊರ್(ಹೊನ್ನಾವರ) ಬಂದರಿಗೆ ಹೋಗಿ ಅಲ್ಲಿ ಒಂದು ಹಡಗನ್ನು ಗೊತ್ತು ಮಾಡಿದೆ" ಎಂದು ಹೇಳಿದ್ದಾನೆ.[೧೮] ಇದರಿಂದ ಈ ಕಾಲದಲ್ಲಿ ವಾಸವಾಗಿದ್ದ ಮುಸ್ಲಿಮರು ಈ ಹಬ್ಬಗಳನ್ನು ಆಚರಿಸುತ್ತಿದ್ದರು ಎನ್ನಬಹುದು. ಈ ತಿಂಗಳಲ್ಲಿ ಉಪವಾಸ ವ್ರತವನ್ನು ದೇವರ ಹೆಸರಿನಲ್ಲಿ ಇಡೀ ತಿಂಗಳು ಪೂರ್ತಿ ಕೈಗೊಳ್ಳುವರು. ರಂಜಾನ್ ತಿಂಗಳು ಮುಸ್ಲಿಮರ ಪವಿತ್ರ ತಿಂಗಳಾದ್ದರಿಂದ ಈ ತಿಂಗಳಲ್ಲಿ ಜಕಾತ್(ದಾನ)ವನ್ನು ಮಾಡುವರು. ಬಡವರಿಗೆ ಹಣ ಅಥವಾ ಧಾನ್ಯವನ್ನು ದಾನ ಮಾಡುವ ಪದ್ಧತಿ ಇದೆ. ತಿಂಗಳ ಪೂರ್ತಿ(೩೦ ದಿನಗಳು) ಉಪವಾಸವ್ರತ ಕೈಗೊಂಡ ನಂತರ ರಂಜಾನ್ ಹಬ್ಬವನ್ನು ಇವರು ಆಚರಿಸುತ್ತಿದ್ದರು. ರಂಜಾನ್ ಹಬ್ಬವನ್ನು ಅರಬ್ಬಿ ಭಾಷೆಯಲ್ಲಿ ಈದ್-ಉಲ್-ಫಿತರ್ ಎಂದು ಕರೆಯುತ್ತಾರೆ. ಈ ಹಬ್ಬವನ್ನು ವಿಜಯನಗರ ಕಾಲದ ಮುಸ್ಲಿಮರು ಆಚರಿಸುತ್ತಿದ್ದರು.

ರಂಜಾನ್ ಹಬ್ಬದಂತೆ ಮುಸ್ಲಿಮರ ಇನ್ನೊಂದು ಪ್ರಮುಖ ಹಬ್ಬ 'ಬಕ್ರೀದ್'. ಈ ಹಬ್ಬದ ಆಚರಣೆಯು ನಾಲ್ಕು ಸಾವಿರ ವರ್ಷಗಳ ಹಿಂದೆ ಘಟಿಸಿದ ಖುರ್ಬಾನಿ(ಬಲಿದಾನ) ದೈವ ಮತ್ತು ಮನುಷ್ಯರ ನಡುವೆ ನಡೆದ ಸತ್ವಪರೀಕ್ಷೆಯ ಹಿನ್ನೆಲೆಯನ್ನು ಹೊಂದಿದೆ. ಇದು ಅಲ್ಲಾಹನಿಗೆ ಪ್ರಿಯರಾದ ಹಜರತ್ ಇಬ್ರಾಹಿಂ ಮತ್ತು ಹಜರತ್ ಇಸ್ಮಾಯಿಲ್ ತ್ಯಾಗ ಬಲಿದಾನದ ಸ್ಮರಣಾರ್ಥವಾಗಿ ಆಚರಿಸುವ ಹಬ್ಬವಾಗಿದೆ. ಹಜರತ್ ಇಬ್ರಾಹಿಂ ಅಲ್ಲಾಹನ ಆದೇಶದಂತೆ ತನ್ನ ಮಗನನ್ನು ಬಲಿದಾನ ಕೊಡಬೇಕೆನ್ನುವ ಕನಸನ್ನು ಕಂಡನು. ತಮ್ಮ ಮಗನಾದ ಇಸ್ಮಾಯಿಲ್‌ನನ್ನು ಮೆಕ್ಕಾ ನಗರದ ಸಮೀಪದಲ್ಲಿರುವ ಮೀನಾ ನಗರಕ್ಕೆ ಕರೆದುಕೊಂಡು ಹೋಗಿ ಅಲ್ಲಾಹನ ಆಜ್ಞೆಯನ್ನು ಮಗನಿಗೆ ತಿಳಿಸಿದನು. ದೇವರ ಆಜ್ಞೆ ಪಾಲಿಸಿ ನನ್ನನ್ನು ಬಲಿ ಕೊಡುವಂತೆ ಆತ ತಂದೆಗೆ ತಿಳಿಸಿದ. ಅಲ್ಲಾಹನ ಹೆಸರಿನಲ್ಲಿ ಬಲಿ ಕೊಡುವುದಕ್ಕಾಗಿ ಕತ್ತಿಯನ್ನು ಎತ್ತಿದಾಗ ಒಂದು ಅದ್ಭುತ ಪವಾಡ ವಾಯಿತು. ದೇವರ ಆದೇಶದಂತೆ 'ಜಿಬ್ರಾಯಿಲ್' ಎಂಬ ದೇವದೂತರು ಬಂದು ಬಲಿಗಾಗಿ ಮಲಗಿದ್ದ ಇಸ್ಮಾಯಿಲ್ ಅವರ ಬದಲಿಗೆ ಟಗರೊಂದು ಬಲಿಯಾಗುವಂತೆ ಮಾಡಿದರು.[೧೯] ಈ ಘಟನೆಯ ನೆನಪಿಗಾಗಿ ಮುಸ್ಲಿಮರು ಬಕ್ರೀದ್ ಹಬ್ಬವನ್ನು ಆಚರಿಸುತ್ತಾರೆ. ಆ ದಿನ ಕುರಿ, ಗೋವು ಮತ್ತು ಒಂಟೆಗಳನ್ನು ದೇವರ ಹೆಸರಿನಲ್ಲಿ ಬಲಿದಾನ ಮಾಡಿ ಮುಸ್ಲಿಂ ಬಾಂಧವರಿಗೆ ಹಂಚುತ್ತಾರೆ.

ವಿಜಯನಗರ ಕಾಲದ ಮುಸ್ಲಿಂ ಜನರು ಬಕ್ರೀದ್ ಹಬ್ಬವನ್ನು ಸಹ ಆಚರಿಸುತ್ತಿದ್ದರು. ವಿಜಯನಗರದ ಅರಸರು ಮಸೀದಿ ಕಟ್ಟಲು ಅನುಮತಿ ನೀಡಿದ್ದರು. ಮಸೀದಿಗಳಲ್ಲಿ ಗೋವು ಬಲಿದಾನ ಮಾಡಲು ರಾಮರಾಯ ಅನುಮತಿ ನೀಡಿದ್ದನು. ತಿರುಮಲರಾಯನು ರಾಮರಾಯನಿಗೆ ಗೋವು ಬಲಿದಾನ ನಿಷೇಧಾಜ್ಞೆಗೆ ಕೇಳಿಕೊಂಡನು. ಆದರೆ ರಾಮರಾಯನು ಇದನ್ನು ತಿರಸ್ಕರಿಸಿ ಹೀಗೆ ಹೇಳುತ್ತಾನೆ, "ಮುಸ್ಲಿಮ್ ಜನಾಂಗ ಸ್ವತಂತ್ರವಾಗಿ ತಮ್ಮ ಸಂಪ್ರದಾಯ ಆಚರಿಸಬಹುದೆಂದು ಹೇಳಿ ಧರ್ಮ ಆಚರಣೆಗೆ ಒಪ್ಪಿಗೆ ನೀಡಿದ್ದೇನೆ."[೨೦] ಈ ಉಲ್ಲೇಖಗಳ ಅನ್ವಯ ವಿಜಯನಗರದಲ್ಲಿ ಇತರ ಧರ್ಮೀಯರಂತೆ ಮುಸ್ಲಿಮರು ರಂಜಾನ್ ಮತ್ತು ಬಕ್ರೀದ್ ಹಬ್ಬಗಳನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಆಚರಿಸುತ್ತಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.

ವಿಜಯನಗರದ ಮುಸ್ಲಿಮರು ತಮ್ಮ ಧರ್ಮ, ನಂಬಿಕೆ, ಆಚರಣೆಗಳಲ್ಲಿ ಬಲವಾದ ನಂಬಿಕೆ ಹೊಂದಿದ್ದರು. ಮುಸ್ಲಿಮರ ಪ್ರಮುಖ ಇಸ್ಲಾಂ ತತ್ವಗಳಲ್ಲಿ 'ಹಜ್‌ಯಾತ್ರೆ' ಪ್ರಮುಖವಾದುದಾಗಿದೆ. ಪವಿತ್ರ ಸ್ಥಳವಾದ ಮೆಕ್ಕಾಕ್ಕೆ ಜೀವನದಲ್ಲಿ ಒಂದು ಬಾರಿಯಾದರೂ ಹೋಗಬೇಕು ಎಂಬುದು ಮುಸ್ಲಿಮರ ನಂಬಿಕೆ. ವಿಜಯನಗರದಲ್ಲಿ ವಾಸವಾಗಿದ್ದ ಮುಸ್ಲಿಮರು ಇದನ್ನು ಸಹ ಪಾಲಿಸುತ್ತಿದ್ದರು. ಮೆಕ್ಕಾಕ್ಕೆ ಯಾತ್ರೆಯ ಬಗ್ಗೆ ಕ್ರಿ.ಶ. ೧೪೭೮ರಲ್ಲಿ ಹಂಪಿ ಶಾಸನ 'ಸಖಲಾದಿರಾಹುತನು ಗುಮ್ಮಟವನ್ನು ಕಟ್ಟಿಸಿದ್ದು, ಅದರ ಒಳಕ್ಕೆ ಹೂಳು ತಂದರೆ ಮೆಕ್ಕಾ ತೀರ್ಥದಲ್ಲಿ ತಾಯಿಯನ್ನು ಕೊಂದ ಪಾಪ ಬರುವುದು ಎಂದು ಹೇಳಿ ಕಲಾಬಿನ(ಬಹುಶಃ ಕಲ್ಮ) ಆಣೆ ಇಟ್ಟಿರುತ್ತಾನೆ.'[೨೧] ಎಂದು ಉಲ್ಲೇಖವಾಗಿದೆ. ಮುಸ್ಲಿಮರ ಧರ್ಮ, ನಂಬಿಕೆ ಮತ್ತು ಆಚರಣೆಗಳ ಅಧ್ಯಯನ ಮಾಡಿದಾಗ ಇವರು ಇಸ್ಲಾಂ ಷರಿಯತ್ ಪ್ರಕಾರ ನಿರ್ಭೀತಿಯಿಂದ ತಮ್ಮ ಜೀವನವನ್ನು ನಡೆಸುತ್ತಿದ್ದರು ಎನ್ನುವ ವಿಚಾರ ತಿಳಿದುಬರುತ್ತದೆ.

ಮೊಹರಂ ಆಚರಣೆ

ಹಂಪಿ ಪರಿಸರದಲ್ಲಿ ಹಿಂದೂ ಹಾಗೂ ಮುಸ್ಲಿಮರ ಸಾಮರಸ್ಯಕ್ಕೆ ಮೊಹರಂ ಹಬ್ಬ ಉತ್ತಮವಾದ ಉದಾಹರಣೆಯಾಗಿದೆ. ಈಗಲೂ ಹಿಂದೂ ಮತ್ತು ಮುಸ್ಲಿಮರ ನಡುವಿನ ಬಾಂಧವ್ಯ ತಾನೇ ತಾನಾಗಿ ಕ್ರಿಯಾಶೀಲವಾಗಿದೆ. ಮೊಹರಂ ಎನ್ನುವುದು ತಿಂಗಳಿಗೆ ಅನ್ವಯವಾಗುವ ಹೆಸರು. ಇದು ಮುಸ್ಲಿಮರ ಹೊಸ ವರ್ಷದ ಪ್ರಥಮ ತಿಂಗಳಾಗಿದೆ. ಮೊಹರಂ ಆಚರಣೆ ಹಿನ್ನೆಲೆಯಲ್ಲಿ ನೋಡಿದಾಗ ಇದು ದುಃಖದ ಸಂಕೇತವಾಗಿ ಸೂಚಿತವಾಗಿದೆ. ಈ ತಿಂಗಳಲ್ಲಿ ಮಹಮ್ಮದ್ ಪೈಗಂಬರ್ ಅವರ ವಂಶಸ್ಥರಾದ 'ಇಮಾಮ್ ಹುಸ್ಸೇನ್' ಅವರು ದಾರುಣವಾಗಿ ಹುತಾತ್ಮರಾದ ತಿಂಗಳು. ಹುಸೇನ್ ಅವರು ಮಹಮ್ಮದ್ ಪೈಗಂಬರ್ ಅವರ ಮೊಮ್ಮಗ. ಪ್ರವಾದಿ ಮಹಮ್ಮದರ ನಿಧನದ ನಂತರ, ಅವರು ಹಾಕಿಕೊಟ್ಟಿದ್ದ ದಾರಿಯಲ್ಲೇ ನಡೆಯಬಲ್ಲ ಒಬ್ಬರನ್ನು ಖಲೀಫರನ್ನಾಗಿ(ಆಧ್ಯಾತ್ಮಿಕ ನಾಯಕರನ್ನಾಗಿ) ಆಯ್ಕೆ ಮಾಡಿಕೊಳ್ಳಲಾರಂಭಿಸಿದರು. ಖಲೀಫನಾಗಿದ್ದ ಅಬುಸುಪಿಯಾನ ನಂತರ 'ಯಜ್ಜಿದ್'ನು 'ಖಲೀಫತ್'ಗಾಗಿ ಸಿಂಹಾಸನವನ್ನು ಏರಿದ. ಕ್ರೂರಿಯಾಗಿದ್ದ ಯಜ್ಜಿದ್ ತಾನು

ಪೈಗಂಬರ್ ಅವರ ಉತ್ತರಾಧಿಕಾರಿಯೆಂದೇ ಹೇಳಿಕೊಳ್ಳುತ್ತಿದ್ದ. ಇಮಾಮ್ ಹುಸೇನ್ ಅವರು ಯಜ್ಜಿದ್‌ಗೆ ನಿಷ್ಠೆ ತೋರಲು ನಿರಾಕರಿಸಿದರು. ಹಾಗಾಗಿ ಭಿನ್ನಮತವು ತಲೆದೋರಿತು. ನಿರಂಕುಶಾಧಿಕಾರಿ ಯಾಗಿದ್ದ ಯಜ್ಜಿದ್ ಇಮಾಮ್ ಹುಸೇನ್ ಅವರಿಗೆ ನಿರಂತರ ಹಿಂಸೆಯನ್ನು ನೀಡಲು ಪ್ರಾರಂಭಿಸಿದನು. ಯಜ್ಜಿದ್‌ನ ಕ್ರೂರ ನಡವಳಿಕೆ ಮತ್ತು ನಿರಂಕುಶ ಆಡಳಿತದಿಂದ ಬೇಸತ್ತ ಅನುಯಾಯಿಗಳು ಹುಸೇನ್ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದರು. ಹುಸೇನ್ ಮೆಕ್ಕಾ ನಗರದಲ್ಲಿದ್ದಾಗ ಯಜ್ಜಿದ್ ಕೊಲೆ ಸಂಚು ಮಾಡಿದ. ಇದನ್ನು ತಿಳಿದ ಹುಸೇನ್ ಅವರು ತಮ್ಮ ಸಂಗಡಿಗರೊಂದಿಗೆ 'ಕರ್ಬಲಾ'ವನ್ನು ತಲುಪಿದರು. ಇದನ್ನು ಮೊಹರಂನ ಎರಡನೇ ದಿನ ಎನ್ನಲಾಗಿದೆ. ಏಳನೇ ದಿನ ಹುಸೇನ್ ಮತ್ತು ಪರಿವಾರದವರು ಹಸಿವು ಮತ್ತು ಬಾಯಾರಿಕೆಗಳಿಂದ ನರಳುವಂತೆ ಹಿಂಸೆ ನೀಡಲಾಯಿತು. ಹತ್ತನೇ ಮೊಹರಂ ದಿನ ಹುಸೇನ್ ಮತ್ತು ಅವರ ಸಂಗಡಿಗರು ಧೈರ್ಯದಿಂದ ಹೊರ ನಡೆದು ಯಜ್ಜಿದ್‌ನ ಸೈನ್ಯದೊಡನೆ ಹೋರಾಡಿ ವೀರಮರಣ ವನ್ನಪ್ಪಿದರು. ಹುಸೇನ್ ಅವರ ಆರು ತಿಂಗಳ ಮಗು 'ಅಲಿ ಆಜ್‌ಗರ್'ನ್ನು ಕ್ರೂರಿಗಳು ಕೊಂದು ಹಾಕಿದರು. ನಂತರ ಹುಸೇನನ್ನು ಹಾಗೂ ಅವರ ಸಂಗಡಿಗರನ್ನು ಕ್ರೂರವಾಗಿ ಕೊಂದರು. ಇಂತಹ ಧಾರುಣ ಘಟನೆ ಮೊಹರಂ ತಿಂಗಳ ೧೦ ದಿನಗಳಲ್ಲಿ ನಡೆದಿದ್ದರಿಂದ ಮುಸ್ಲಿಂ ಸಮುದಾಯದವರು 'ಮೊಹರಂ' ದಿನಗಳನ್ನು ದುಃಖದ ಸಂಕೇತವಾಗಿ ಆಚರಿಸುತ್ತಾರೆ.[೨೨]

ಭಾರತದಲ್ಲಿ ಇಸ್ಲಾಂ ಧರ್ಮದ ಪ್ರವೇಶವಾದ ಮೇಲೆ ದಕ್ಷಿಣ ಭಾರತದಲ್ಲಿ 'ಮೊಹರಂ' ಆಚರಣೆ 'ಷಿಯಾ' ಜನರಿಂದ ಆರಂಭವಾಯಿತು. ಆದರೆ ಬಹಮನಿ ಸುಲ್ತಾನರ ಕಾಲದಲ್ಲಿ ಇರಾನಿಯರ ಮಹತ್ವ ಅಧಿಕವಾಗಿದ್ದ ಕಾರಣ ಅವರ ಸಾಮಾಜಿಕ ಪ್ರಭಾವಕ್ಕೆ ಇಲ್ಲಿಯ ಸ್ಥಳೀಯರು ಒಳಗೊಂಡರೆಂದು ಹೇಳಲಾಗಿದೆ. ಹೀಗೆ ಈ ರೀತಿಯ ಆಚರಣೆಗಳು ವಿಜಯನಗರ ಕಾಲದಲ್ಲಿ ಸ್ಥಳೀಯ ಜನರ ಮೇಲೆ ಪ್ರಭಾವ ಬೀರಿದವು. ಹಂಪಿ ಪರಿಸರದಲ್ಲಿ ಹಿಂದೂ ಹಾಗೂ ಮುಸ್ಲಿಮರು ಯಾವುದೇ ಭೇದಭಾವ ವ್ಯತ್ಯಾಸ ಇಲ್ಲದೆ ಸೌಹಾರ್ದಯುತವಾಗಿ ಹಬ್ಬವನ್ನು ಆಚರಿಸುತ್ತಿದ್ದರು. ವಿಜಯನಗರ ಸಾಮ್ರಾಜ್ಯದಲ್ಲಿ ವಾಸವಾಗಿದ್ದ ಹಿಂದೂ ಹಾಗೂ ಮುಸ್ಲಿಮರು ಆಚರಿಸುತ್ತಿದ್ದ ಈ ಹಬ್ಬದ ಪ್ರಭಾವವನ್ನು ಇಂದಿಗೂ ಕಾಣಬಹುದಾಗಿದೆ. ಈ ಹಬ್ಬ ಹತ್ತು ದಿನಗಳ ಕಾಲ ನಡೆಯುತ್ತದೆ. ಸಣ್ಣ ಪುಟ್ಟ ಕೈ ದೇವರುಗಳನ್ನು (ಪಂಜೆ) ಶುದ್ಧಗೊಳಿಸಿ ಮನೆಯ ಒಂದು ಕೋಣೆಯಲ್ಲಿ ಇಲ್ಲವೇ ಮಸೀದಿಯ ಸಮೀಪದ ಕಟ್ಟೆಯೊಂದರಲ್ಲಿ ಪ್ರತಿಷ್ಠಾಪಿಸುತ್ತಾರೆ. ಹಾಗೆಯೇ ಅವುಗಳನ್ನು ಪೂಜಿಸುತ್ತಾರೆ. ಈ ದೇವರುಗಳಿಗೆ 'ಪೀರ್ಲರು' ಎಂಬ ಹೆಸರು ಇದೆ. ಹಿಂದೂ-ಮುಸ್ಲಿಮರು ಈ ಪಂಜೆಗಳ ದರ್ಶನ ಪಡೆದು ಮೊಹರಂ ಪದಗಳನ್ನು ಹಾಡುವರು. ಈ ದೇವರೆದುರು ಕೆಲವರಿಗೆ ಆವೇಶ ಬರುತ್ತದೆ. ಆವೇಶ ಬಂದವರು ಭವಿಷ್ಯ ಹೇಳುತ್ತಾರೆ. ಅವರಿಂದ ಭವಿಷ್ಯ ಕೇಳಲು ಊರಿನ ಜನರೆಲ್ಲಾ ಗುಂಪಾಗಿ ಕೂಡುತ್ತಾರೆ. ಈ ಹಬ್ಬವನ್ನು ಮೊಹರಂ ಹತ್ತನೇ ದಿನ ಹುಸೇನ್ ಅವರು ಧರ್ಮದ ಏಳ್ಗೆಗಾಗಿ ಸತ್ತರೆಂಬ ನಂಬಿಕೆಯನ್ನು ಆಧರಿಸಿ ಆಚರಿಸುತ್ತಾರೆ. ಮನೆಯಲ್ಲಿ, ಮಸೀದಿಯಲ್ಲಿ ಅಥವಾ ಇತರೆಡೆಗಳಲ್ಲಿ ಇರಿಸಲಾದ ಕೈ ದೇವರುಗಳನ್ನು ಎತ್ತಿಕೊಂಡು

ಮೆರವಣಿಗೆ ಹೋಗುತ್ತಾರೆ. ಮೆರವಣಿಗೆಯ ಮುಂದೆ ತಾಳಬದ್ಧವಾಗಿ ಕುಣಿಯುವ ಗುಂಪು ಹೆಜ್ಜೆ ಹಾಕುತ್ತಾ ಮೆಲ್ಲಮೆಲ್ಲನೆ ಸಾಗುತ್ತಿರುತ್ತದೆ. ಕುಣಿಯುವ ಗುಂಪಿನ ಹಿಂದೆ ಪಂಜೆ ಹಿಡಿದುಕೊಂಡವರು ಹೋಗುವರು. ಐದು ಜನ ಈ ಪಂಜೆಯನ್ನು ಹಿಡಿಯುತ್ತಾರೆ. ಇವರ ಮೈಯಲ್ಲಿ ದೈವದ ಪ್ರವೇಶವಾಗಿರುತ್ತದೆಂಬ ನಂಬಿಕೆಯಿದೆ. ಮೊಹರಂ ಸಂದರ್ಭದಲ್ಲಿ ಮುಸ್ಲಿಮರ ಜೊತೆ ದಲಿತರು, ಬೇಡರು, ಅಗಸರು, ಆಯಗಾರರು ಹೆಚ್ಚು ಸಕ್ರಿಯವಾಗಿ ಭಾಗವಹಿಸುತ್ತಾರೆ. ಈ ರೀತಿಯ ಆಚರಣೆ ಹಂಪಿ ಪರಿಸರದಲ್ಲಿ ನಿಜಕ್ಕೂ ಹಿಂದೂ–ಮುಸ್ಲಿಮರ ಐಕ್ಯತೆಗೆ ಸಾಕ್ಷಿಯಾಗಿದೆ. ಈ ರೀತಿ ವಿಜಯನಗರ ಸಾಮ್ರಾಜ್ಯದಲ್ಲಿನ ಈ ಹಬ್ಬದ ಪ್ರಭಾವವನ್ನು ಇಂದಿಗೂ ನೋಡಬಹುದು. ಮೊಹರಂ ಆಚರಣೆಯು ಹಿಂದೂ–ಮುಸ್ಲಿಮರ ಐಕ್ಯತೆಗೆ ಹಾಗೂ ಸರ್ವಧರ್ಮ ಸಮನ್ವಯತೆಗೆ ಉತ್ತಮ ಉದಾಹರಣೆಯಾಗಿದೆ.

ಮಸೀದಿಗಳು

ಮುಸ್ಲಿಂ ಸಮುದಾಯಗಳ ಧಾರ್ಮಿಕ ಆರಾಧನಾ ಕೇಂದ್ರವೆಂದರೆ ಮಸೀದಿಗಳು. ಕ್ರಿ.ಶ. ೬–೭ನೇ ಶತಮಾನದಲ್ಲೇ ಮುಸ್ಲಿಮರ ಪ್ರಾರ್ಥನಾ(ಮಸೀದಿಗಳು) ಕಟ್ಟಡಗಳು ಕಂಡುಬರುತ್ತವೆ. ಈ ಮಸೀದಿ ನಿರ್ವಹಣೆಗೆ ಒಬ್ಬ ವ್ಯಕ್ತಿಯನ್ನು ನೇಮಿಸುತ್ತಿದ್ದರು. ಇವರನ್ನು ಮೌಜಿನ್ ಎಂದು ಕರೆಯಲಾಗುತ್ತಿತ್ತು. ಇವನ ಕೆಲಸ ಮಸೀದಿಯನ್ನು ಸ್ವಚ್ಛ ಮಾಡುವುದು, ದಿನಕ್ಕೆ ಐದು ಬಾರಿ ನಮಾಜ್(ಪ್ರಾರ್ಥನೆ) ಮಾಡಲು ಮುಸ್ಲಿಂ ಸಮುದಾಯಗಳಿಗೆ ಆಜಾವನ್ನು(ಕರೆಯೋಲೆ) ಕೂಗುವ ಕೆಲಸ ಇವನದಾಗಿತ್ತು. ಇದಲ್ಲದೆ ಮುಸ್ಲಿಂ ವ್ಯಕ್ತಿಯೊಬ್ಬ ಮಡಿದಾಗ ಸಂಸ್ಕಾರ ಕಾರ್ಯವನ್ನು ಮಾಡುವುದಾಗಿತ್ತು. ಮುಸ್ಲಿಂ ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ವ್ಯಕ್ತಿಯ ದೇಹವನ್ನು ಸ್ವಚ್ಛ (ಸ್ನಾನ) ಮಾಡಿಸಿ ಮುಂದಿನ ವಿಧಿವಿಧಾನಕ್ಕೆ ಸಿದ್ಧತೆ ಕೈಗೊಳ್ಳುವ ಕೆಲಸವನ್ನು ಮಾಡುತ್ತಿದ್ದನು. ಹಾಗೂ ಸೂಫಿ ಗೋರಿಗಳ ನಿರ್ವಹಣೆ ಮಾಡಲು ಒಬ್ಬನನ್ನು ಆಯ್ಕೆ ಮಾಡಲಾಗುತ್ತಿತ್ತು.

ಮಸೀದಿಗಳು ಶೈಕ್ಷಣಿಕ ಸಂಸ್ಥೆಗಳಾಗಿ ಅಥವಾ ಶಿಕ್ಷಣ ಕೊಡುವ ಶಾಲೆಗಳಾಗಿಯೂ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಕರಾವಳಿ ಭಾಗದಲ್ಲಿ ಮಲ್ಲಿಕ್–ದಿನಾರ್ ಕಟ್ಟಿಸಿದ ಮಸೀದಿಗಳು ಕರಾವಳಿ ಪ್ರಾಂತ್ಯಗಳ ಉದ್ದಕ್ಕೂ ಕಂಡುಬರುತ್ತವೆ. ಈತನು ಕಣ್ಣನೂರು, ದಕ್ಷಿಣ ಕೊಲ್ಲಂ, ಮದಯಿ(ಪಲಯಗಡಿ), ಬಾರಕೂರು, ಮಂಗಳೂರು, ಕಾಸರಗೋಡು, ಶ್ರೀಕಂದಪುರಂ, ಧರ್ಮದಂ, ಪಂಟಲಾಯಿನಿ, ಕೊಲ್ಲಂ ಮತ್ತು ಚಲಿಯಂಗಳಲ್ಲಿ ಮಸೀದಿಗಳನ್ನು ಕಟ್ಟಿಸಿದನು. ಈ ಮಸೀದಿಗಳು ಮುಖ್ಯವಾಗಿ ಕೇರಳ ಹಾಗೂ ಕರ್ನಾಟಕ ಭಾಗಗಳಲ್ಲಿ ನಿರ್ಮಿಸಲ್ಪಟ್ಟವು.

ವಿಜಯನಗರ ಪ್ರದೇಶದಲ್ಲಿ ಸೂಫಿಗಳ ಪ್ರಭಾವವಿತ್ತೆಂಬುದಕ್ಕೆ ಇಲ್ಲಿ ಕಂಡುಬರುವ ಕಟ್ಟಡಗಳ ಅವಶೇಷಗಳು ಸಾಕ್ಷಿಯಾಗಿವೆ. ಹಂಪಿ ಪ್ರದೇಶ ವ್ಯಾಪ್ತಿಯಲ್ಲಿ ಕಂಡುಬರುವ ಕಡ್ಡಿರಾಂಪುರದಲ್ಲಿರುವ ಗೋರಿ ಕಟ್ಟಡ ಸಮಾಧಿಯು 'ನೂರುಲ್ಲಾ ಖಾದ್ರಿ' ಎಂಬ ಸೂಫಿಯದು.[೨೩] ನೂರುಲ್ಲಾ ಖಾದ್ರಿಯು ಖಾದ್ರಿ ಪಂಥಕ್ಕೆ ಸೇರಿದವನು ಎನ್ನುವುದು ಅವರ ಹೆಸರೇ ಸೂಚಿಸುತ್ತದೆ.

ತಮಿಳುನಾಡಿನಲ್ಲಿ ಕ್ರಿ.ಶ.೧೨-೧೩ನೇ ಶತಮಾನದಲ್ಲಿ ಷಾದಿಲ ಸೂಫಿ ಆದೇಶ ಕಂಡುಬರುತ್ತದೆ. ಅಬ್ದುಲ್ ಹಸನ್ ಅಲಿ ಷಾದಿಲಿ(೧೧೯೬-೧೨೫೮) ಎಂಬ ಸೂಫಿಯಿಂದ ಈ ಮಾರ್ಗ ರಚನೆಗೊಂಡಿತು. ಈತ ತಮಿಳುನಾಡಿನ ಪ್ರದೇಶದಲ್ಲಿ ತನ್ನ ಅನುಯಾಯಿಗಳೊಂದಿಗೆ ತನ್ನ ಅನುಭಾವ ತತ್ವಗಳನ್ನು ಪ್ರಚಾರಪಡಿಸಿದನು. ನಂತರದಲ್ಲಿ ಶೇಕ್ ಅಬುಬಕರ್ ಅಹಮ್ಮದ್ ಇಬ್ರಾಹಿಂ ಮಧುರೈನಲ್ಲಿ ಹಾಗೂ ತಮಿಳುನಾಡಿನ ಕಾಯಲ್‌ಪಟ್ಟಣಂನಲ್ಲಿ ಅಬುಬಕರ್ ಮಿಸ್‌ಕೀನ್ ಎಂಬ ಸೂಫಿಗಳ ಪ್ರಭಾವವು ಕಂಡುಬಂದಿತ್ತು. ಷಾದಿಲ ಸೂಫಿ ಮಾರ್ಗವು ತಮಿಳುನಾಡು, ಶ್ರೀಲಂಕಗಳಲ್ಲಿ ತಮ್ಮ ಶಾಖೆಗಳನ್ನು ಆರಂಭಿಸಿತು. ಇದು ಫಿಷಿಯ್ಯಾ ಹಾಗೂ ಬಕರಿಯ್ಯಾ ಎಂಬ ಸಂಸ್ಥೆಗಳನ್ನು ಪ್ರಾರಂಭಿಸಿತು. ಇನ್ನು ಕೇರಳದಲ್ಲಿ ಷಾದಿಲ್ ಸಂದೇಶವು ಶೇಕ್‌ಮೀರ್ ಅಹಮದ್ ಇಬ್ರಾಹಿಂ ಹೆಸರಿನ ಮೀರ್ ಅಂಜಾದ್ ಇಬ್ರಾಹಿಂ ಹಾಗೂ ಶೇಕ್ ಅಬ್ದುಸಲಾಂ ಇಬ್ರಾಹಿಂ ಸಲೀಮ್ ಎನ್ನುವ ಇಬ್ಬರು ಸಹೋದರರಿಂದ ಪ್ರಚಾರಗೊಂಡಿತು. ಈ ಷಾದಿಲ ಅನುಭಾವ ಪಂಥವು ವಿಜಯನಗರ ಪೂರ್ವದಿಂದ ಹಿಡಿದು ವಿಜಯನಗರ ಕಾಲಾವಧಿ ಹಾಗೂ ನಂತರದ ಅವಧಿಯಲ್ಲಿ ಮುಂದುವರಿಯಿತು.[೨೪] ವಿಜಯನಗರ ಕಾಲದಲ್ಲಿ ಸೂಫಿಸಂ ತತ್ವಸಿದ್ಧಾಂತಗಳು ಅಥವಾ ಆದೇಶವು ಎರಡು ಭಿನ್ನ ಸ್ವರೂಪದಲ್ಲಿ ಬೆಳವಣಿಗೆಯಾಯಿತು. ಅರಬ್ ಪ್ರಭಾವಕ್ಕೆ ಒಳಗಾಗಿದ್ದ ಹಾಗೂ ನೇರ ಸಂಬಂಧವನ್ನು ಹೊಂದಿದ್ದ ಕರಾವಳಿ ಪ್ರದೇಶದ ಮುಸ್ಲಿಂ ಮಿಷನರಿಗಳ ತತ್ವಸಿದ್ಧಾಂತಗಳು ದಖ್ಖನ್ ಪ್ರಾಂತ್ಯಕ್ಕಿಂತ ಭಿನ್ನವಾಗಿತ್ತು. ವಿಜಯನಗರ ರಾಜಧಾನಿ ಪ್ರದೇಶದಲ್ಲಿ ಬಹಮನಿ ರಾಜ್ಯದಲ್ಲಿದ್ದ ಸೂಫಿಸಂ ಅನುಭಾವ ಪಂಥಗಳ ಪ್ರಭಾವವು ಇದೇ ವೇಳೆಗೆ ಕಂಡುಬರುತ್ತವೆ. ಇವುಗಳ ಹಿನ್ನೆಲೆಯಲ್ಲಿ ಇಲ್ಲಿ ಚಿಸ್ತಿ ಖಾದ್ರಿಯಾ ಆದೇಶಗಳು ಬೆಳವಣಿಗೆಯಾದವು.

೫.೫. ಕ್ರೀಡೆ ಮತ್ತು ಮನರಂಜನೆ

ವಿಜಯನಗರ ಸಾಮ್ರಾಜ್ಯದಲ್ಲಿ ಉತ್ಸವಗಳು ಹಾಗೂ ಕ್ರೀಡೆಗಳು ವಿಜೃಂಭಣೆಯಿಂದ ನಡೆಯುತ್ತಿದ್ದವು. ಈ ಕುರಿತಾಗಿ ಪ್ರವಾಸಿಗರ ವರದಿಗಳು ಸಾಕಷ್ಟು ಮಾಹಿತಿಯನ್ನು ನೀಡುತ್ತವೆ. ವಿಜಯನಗರ ಸಾಮ್ರಾಜ್ಯದಲ್ಲಿ ಅರಸರು ಹಲವು ಉತ್ಸವಗಳನ್ನು ನಡೆಸುತ್ತಿದ್ದರು. ಈ ಉತ್ಸವಗಳು ಧಾರ್ಮಿಕ ಹಿನ್ನೆಲೆಯಲ್ಲಿ ನಡೆಯುತ್ತಿದ್ದವು. ಇವರ ಕಾಲದಲ್ಲಿ ಆಚರಣೆಯಲ್ಲಿದ್ದ ಹಬ್ಬಗಳಲ್ಲಿ ಮಹಾನವಮಿ ಹಾಗೂ ವಿಜಯದಶಮಿಗಳಿಂದ ಕೂಡಿದ ನವರಾತ್ರಿ ಹಬ್ಬ ವಿಶೇಷ ಪ್ರಾಮುಖ್ಯತೆ ಇತ್ತು. ಒಂಬತ್ತು ದಿನಗಳು ನಡೆಯುವ ಈ ಉತ್ಸವದಲ್ಲಿ ಒಂದೊಂದು ರೀತಿಯ ತೇರು, ಅಲಂಕಾರ, ಪೂಜೆ ನಡೆಯುತ್ತಿದ್ದವು.

ನವರಾತ್ರಿಯ ಮೊದಲನೆಯ ದಿನ ಅರಮನೆ ಎದುರಿಗೆ ಒಂಬತ್ತು ರಥಗಳನ್ನು ನಿಲ್ಲಿಸುತ್ತಿದ್ದರು. ಅವುಗಳ ಎದುರಿನಲ್ಲಿ ಆ ದಿನದಿಂದ ಒಂಬತ್ತು ದಿನಗಳು ಕೋಣಗಳನ್ನು ಹಾಗೂ ಆಡುಗಳನ್ನು ಬಲಿ ಕೊಡುತ್ತಿದ್ದರು. ಅನಂತರ ಅಲ್ಲಿ ನೆರೆದಿದ್ದ ಸುಂದರವಾಗಿ ಅಲಂಕರಿಸಿದ್ದ ಆನೆಗಳು ಮತ್ತು ಕುದುರೆಗಳ ಮೇಲೆ ನೀರು ಚಿಮುಕಿಸಿ ಗುಲಾಬಿ ಹೂಗಳನ್ನು ಹಾಕುತ್ತಿದ್ದರು. ಇವೆಲ್ಲವೂ

ನಿಯಮಾನುಸಾರವಾಗಿ ನಡೆಯುತ್ತಿತ್ತು. ರಾಜನು ಸಿಂಹಾಸನದ ಮೇಲೆ ಕುಳಿತು ನಾರಿಯರ ಹಾಗೂ ವೇಶ್ಯಾಸ್ತ್ರೀಯರ ಮನೋಹರವಾದ ನೃತ್ಯಗಳನ್ನು, ಜಟ್ಟಿಗಳ ರೋಮಾಂಚಕರವಾದ ಕತ್ತಿಯ ವರಸೆಗಳನ್ನು ವೀಕ್ಷಿಸುತ್ತಿದ್ದನು. ಕೊನೆಯ ದಿನ ಎಂದರೆ ವಿಜಯದಶಮಿಯ ದಿನದಂದು ರಾಜನು ಅಶ್ವಾರೋಹಿಯಾಗಿ ತನ್ನ ಎಲ್ಲಾ ದಂಡನಾಯಕರನ್ನು ಅವರ ಸೈನ್ಯಗಳನ್ನು ಪರಿಶೀಲಿಸುತ್ತ ಸುಮಾರು ಎರಡು ಹರಿದಾರಿಯಷ್ಟು ದೂರ ಮೆರವಣಿಗೆಯಲ್ಲಿ ಹೋಗಿ ಬರುತ್ತಿದ್ದನು. ನವರಾತ್ರಿ ಹಬ್ಬದ ಕೊನೆಯಲ್ಲಿ ಅಪಾರ ಧನವನ್ನು ದಾನರೂಪದಲ್ಲಿಯೂ, ಬಹುಮಾನಗಳ ರೂಪದಲ್ಲಿಯೂ ಹಂಚಲಾಗುತ್ತಿತ್ತು.[೨೫]

ವಿಜಯದಶಮಿಯ ಉತ್ಸವಗಳಲ್ಲಿ ಸೇನಾವೀಕ್ಷಣೆಯ ಕಾರ್ಯಕ್ರಮ ಮುಖ್ಯವಾದದ್ದು. ದಂಡ ನಾಯಕರು, ಸೈನಿಕರು ತಮ್ಮ ಪ್ರದರ್ಶನವನ್ನು ತೋರಿಸುತ್ತಿದ್ದರು. ಇಂತಹ ವೈಭವದ ಹಬ್ಬದಲ್ಲಿ ಮುಸ್ಲಿಂ ಸೈನ್ಯಪಡೆ ಭಾಗವಹಿಸುತ್ತಿತ್ತು. ಮುಸ್ಲಿಂ ದಂಡನಾಯಕರ ಹತ್ತಿರ ಈಟಿಗಳು ಮತ್ತು ಟರ್ಕಿ, ಬಿಲ್ಲುಬಾಣಗಳು ಮತ್ತು ಗುರಾಣಿಗಳಿಂದ ಕೂಡಿದ ಸುಸಜ್ಜಿತವಾದ ಸೈನ್ಯವಿತ್ತು. ಅವರು ಸಿಡಿ ಗುಂಡುಗಳು, ಭಲ್ಲೆಗಳು ಮತ್ತು ಆಕಾಶಬಾಣಗಳು ಬಳಸಿ ಈ ನವರಾತ್ರಿ ಉತ್ಸವದಲ್ಲಿ ತಮ್ಮ ಪ್ರದರ್ಶನ ಮಾಡುತ್ತಿದ್ದರು. ಇಲ್ಲಿ ಮುಸ್ಲಿಂ ಸೈನಿಕರು ಇಂತಹ ಉತ್ಸವದಲ್ಲಿ ಪ್ರಜೆಗಳಾಗಿ ಭಾಗವಹಿಸಿ ಆಚರಿಸುತ್ತಿದ್ದರೆನ್ನುವುದು ಗಮನಾರ್ಹ.

ಅದೇ ರೀತಿ ಮುಸ್ಲಿಮರ ಕುಸ್ತಿಪಟುಗಳನ್ನು ಕಾಣಬಹುದು. ಕ್ರಿ.ಶ. ೧೪೪೧ರ ಕಾಲದ ಶಾಸನದಲ್ಲಿ ಮುಸ್ಲಿಂ ಪೈಲ್ವಾನನ ಉಲ್ಲೇಖವಿದೆ. "ಶ್ರೀಮತಿ ಹಾಮಾದಿಯ ಮೀರಿ ಪಾಲುವಾನನು ದಾವಿಯನ ಮಗ ಬರಿಯಮ ಕೊಟ್ಟ ಮನೆಯ ಕ್ರಯಗ(ದೆ) ಅಕ್ಷರದಲು ಆರುವರಾಹಕೆ ಬಿಟ್ಟ ಶಾಸನ ಮಲುಖಾನನ ಪಾಗೆ...[೨೬]

ಈ ಶಾಸನದಲ್ಲಿ 'ಮೀರಿ ಪಾಲುವಾನ' ಎಂಬ ವ್ಯಕ್ತಿಯ ಹೆಸರು 'ಮೀರ್‌ಪಹೀಲ್‌ವಾನ್' ಆಗಿರಬಹುದು.[೨೭] ವಿಜಯನಗರ ಕಾಲದಲ್ಲಿ ಮುಸ್ಲಿಂ ಕುಸ್ತಿಪಟುಗಳು ಸಹ ಇದ್ದರು. ಇವರು ಮಲ್ಲಯುದ್ಧದಲ್ಲಿ ಪರಿಣತರಾಗಿದ್ದರು.[೨೮] ನ್ಯೂನಿಜ್ ತನ್ನ ಪ್ರವಾಸಿ ಕಥನದಲ್ಲಿ ಒಂಬತ್ತು ದಿನಗಳ ಕಾಲದಲ್ಲಿ ರಾಜನಿಗೆ ಸಂತೋಷ ನೀಡುವ ಎಲ್ಲ ಕುಸ್ತಿಪಟುಗಳ ಬಗ್ಗೆ ಉಲ್ಲೇಖಿಸಿದ್ದಾನೆ. ಇವನು ಹೇಳುವಂತೆ ಈ ಉತ್ಸವಗಳಿಗಾಗಿ ರಾಜ ಒಂದು ಸಾವಿರ ಕುಸ್ತಿಯಾಳುಗಳನ್ನು ಹೊಂದಿರುವನು. ಅವರು ರಾಜನ ಮುಂದೆ ಕುಸ್ತಿ ಆಡುತ್ತಾರೆ. ಆದರೆ ನಮ್ಮ ಶೈಲಿಯಲ್ಲಲ್ಲ. ಏಕೆಂದರೆ ಅವರು ಹೊಡೆಯಲೋಸುಗ ತಮ್ಮ ಕೈಯಲ್ಲಿ ಧರಿಸಿರುವ ಚೂಪು ತುದಿಯುಳ್ಳ ಚಿಕ್ಕ ಚಕ್ರಗಳಿಂದ ಒಬ್ಬರನೊಬ್ಬರನ್ನು ಹೊಡೆಯುತ್ತಾರೆ ಮತ್ತು ಘಾಸಿಗೊಳಿಸುತ್ತಾರೆ. ಎಲ್ಲಕ್ಕೂ ಹೆಚ್ಚು ಘಾಸಿಗೊಂಡವನು ರಾಜನ ಬಳಿಗೆ ಹೋಗಿ ಕುಸ್ತಿಯಾಳುಗಳಿಗೆ ಕೊಡುವಂತಹ ರೇಷ್ಮೆ ಬಟ್ಟೆಯ ರೂಪದಲ್ಲಿನ ಬಹುಮಾನವನ್ನು ಪಡೆಯುತ್ತಾನೆ. ಅವರ ಮೇಲೊಬ್ಬ ದಳವಾಯಿ ಇರುವನು. ಅವರು ರಾಜ್ಯದಲ್ಲಿ ಬೇರೆ ಯಾವ ಸೇವೆಯನ್ನು ಮಾಡುವುದಿಲ್ಲ.[೨೯] ನವರಾತ್ರಿ ಉತ್ಸವದಲ್ಲಿ ಈ ಮುಸ್ಲಿಂ ಕುಸ್ತಿಪಟುಗಳು

ಸಹ ಭಾಗವಹಿಸುತ್ತಿರಬಹುದು ಎನ್ನಬಹುದು. ಮಹಾನವಮಿ ದಿಬ್ಬ ಹಾಗೂ ಅದರ ಎದುರಿನ ಬುನಾದಿ ಕಟ್ಟಡದ ಸುತ್ತಲೂ ವೀಕ್ಷಿಸಿದಾಗ ಕೆಲವು ಮುಸ್ಲಿಂ ಯೋಧರು ಮತ್ತು ಮನರಂಜನಪ್ರಿಯರು ಮಹಾನವಮಿ ಉತ್ಸವದಲ್ಲಿ ಭಾಗವಹಿಸಿದ್ದ ಶಿಲ್ಪಗಳು ಕಂಡುಬರುತ್ತವೆ.

ಒಟ್ಟಾರೆಯಾಗಿ ವಿಜಯನಗರ ಕಾಲದಲ್ಲಿ ಎಲ್ಲಾ ಮತ-ಪಂಥೀಯರು ಕ್ರೀಡೆ ಹಾಗೂ ಮನರಂಜನೆಗಳಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಹಂಪಿ ಪರಿಸರದಲ್ಲಿ ದೊರೆತಿರುವ ಶಾಸನಗಳಲ್ಲಿ ಹತ್ತು ಶಾಸನಗಳು ಮುಸ್ಲಿಮರು ವಿಜಯನಗರದಲ್ಲಿ ಸಮೃದ್ಧ ಬದುಕು ಸಾಗಿಸಿದರೆಂಬುದನ್ನು ಉಲ್ಲೇಖಿಸುತ್ತವೆ. ವಿಜಯನಗರದ ಆಡಳಿತಕ್ಕೆ ಸಂಬಂಧಿಸಿದ ಕೆಲವು ಸೇವೆಗಳಲ್ಲಿ ಸಾಮಾಜಿಕ ಜೀವನದ ವಿವಿಧ ಕ್ಷೇತ್ರಗಳಲ್ಲಿ ಅವರು ಎಲ್ಲರಂತೆ ತೊಡಗಿಸಿಕೊಂಡಿದ್ದರು. ಮುಸ್ಲಿಂ ಸಮುದಾಯದ ಎಲ್ಲ ವರ್ಗದ ಜನರು ಮನೋರಂಜನಪ್ರಿಯರಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸಿದ್ದರು.

೫.೬. ಶಿಕ್ಷಣ ಮತ್ತು ಭಾಷೆ

ವಿಜಯನಗರ ಕಾಲದ ಮುಸ್ಲಿಂ ಸಮುದಾಯಗಳು ಅರಬ್ಬಿ, ಉರ್ದು, ತಮಿಳು, ಮಲೆಯಾಳಂ ಭಾಷೆಯನ್ನು ಆಡುವುದರ ಮೂಲಕ ಭಾಷಿಕ ನೆಲೆಯಲ್ಲಿ ಶಿಕ್ಷಣವನ್ನು ಸಹ ಪಡೆಯುತ್ತಿದ್ದರು. ಕರಾವಳಿ ಪ್ರಾಂತ್ಯಗಳಲ್ಲಿ ಅರಬ್ಬಿ ಭಾಷೆಯನ್ನು ಪ್ರಧಾನವಾಗಿಟ್ಟುಕೊಂಡು ಅರಬ್ಬಿ-ತಮಿಳು, ಅರಬ್ಬಿ-ಮಲೆಯಾಳಂ, ಅರಬ್ಬಿ-ಕನ್ನಡ ಭಾಷೆಗಳು ಬೆಳವಣಿಗೆಯಾದವು. ಹಾಗೆಯೆ ದಖ್ಖನ್ ಪ್ರಾಂತ್ಯದಲ್ಲಿ ದಖ್ಖನಿ ಭಾಷೆಯು ಪ್ರಗತಿಯನ್ನು ಸಾಧಿಸಿತು.

ಮಖದಮ್ ವರ್ಗಕ್ಕೆ ಸೇರಿದ ಸಮಕಾಲೀನ ವಿದ್ವಾಂಸನಾದ ಝೈಕತ್‌ನು ಮಲಬಾರ್ ಪ್ರಾಂತ್ಯದಲ್ಲಿ ಅರೇಬಿಕ್ ಶಿಕ್ಷಣದಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದನು. ಶೇಖ್ ಝೈನುದ್ದೀನ್‌ನು ಕ್ರಿ.ಶ. ೧೬ನೇ ಶತಮಾನದಲ್ಲಿ ಉತ್ತರ ಮಲಬಾರಿನ ಮಾಹೆ ಸಮೀಪವಿರುವ ಚೆಂಬಾರಿ ಎಂಬ ಹಳ್ಳಿಯೊಂದರ ಶೇಖ್ ಕುಟುಂಬದಲ್ಲಿ ಜನಿಸಿದನು. ಇಸ್ಲಾಂ ಧರ್ಮಶಾಸ್ತ್ರ ಪಾಂಡಿತ್ಯಕ್ಕೆ ಹೆಸರಾದ ಮನೆತನ ಆದಾಗಿತ್ತು. ಕಾಲಾಂತರದಲ್ಲಿ ಶೇಖ್ ಕುಟುಂಬವು ಕೇರಳದ ಪೊನ್ನಾನಿ ಪಟ್ಟಣಕ್ಕೆ ಬಂದು ನೆಲೆಸಿತು. ಕೇರಳದ ಮೆಕ್ಕಾ ಎಂದು ಹೆಸರಾಗಿದ್ದ ಪೊನ್ನಾನಿಗೆ ಪ್ರಾಚೀನ ಕಾಲದಿಂದಲೂ ಅರಬ್‌ರೊಂದಿಗೆ ಸಂಬಂಧವಿತ್ತು.[೫೦]

ಇನ್-ನೆ-ಬತುತಾ ತನ್ನ ಪ್ರವಾಸಿ ಕಥನದಲ್ಲಿ ಉಲ್ಲೇಖಿಸುವಂತೆ 'ಬದ್ರುದ್ದೀನುಲ್ ಮಲಬಾರೀ ಎಂಬ ಖಾಜಿ ಹಾಗೂ ಪೊನ್ನಾನಿನ ಮಕದೂಮ್ ಜೈನುದ್ದೀನುಲ್ ಮಾಬರೀ ಎಂಬ ವಿದ್ವಾಂಸರು ಪೂರ್ವ ಕರಾವಳಿಯ ಕೋರಮಂಡಲದಲ್ಲಿ ನೆಲೆಸಿದ್ದರು. ಈ ಮಿಷನರಿಗಳು ಹಲವು ಶತಮಾನ ಗಳವರೆಗೆ ಮಂಗಳೂರು, ಮಲಬಾರಿನ ಪ್ರಾಂತ್ಯಗಳಲ್ಲೆ ಸಂಚರಿಸುತ್ತಿದ್ದರು. ಈ ವಿದ್ವಾಂಸರು ಮಲಬಾರ್ ಪ್ರಾಂತ್ಯ ಹಾಗೂ ಮಂಗಳೂರುಗಳಲ್ಲಿ ಇಸ್ಲಾಂ ಶಿಕ್ಷಣವನ್ನು ಪ್ರಚಾರ ಮಾಡುವ ಕಾರ್ಯ ಮಾಡಿದರು. ಇವ್ರುಗಳಿಂದ ಇಲ್ಲಿ ಇಸ್ಲಾಂ ಬೋಧನೆ ಅಭಿವೃದ್ಧಿಯನ್ನು ಹೊಂದಿತು. ಈ

ಜನರು ಮೂಲತಃ ತಮಿಳು ಮಾತನಾಡುವವರಾಗಿದ್ದರು. ಇವರೊಂದಿಗೆ ಇದೇ ಸಮಯಕ್ಕೆ ತುಳು ಭಾಷೆಯನ್ನು ಆಡುವ ಮುಸ್ಲಿಂ ವರ್ಗ ಹಾಗೂ ಮಲೆಯಾಳಂ ಮಾತನಾಡುವ ಮುಸ್ಲಿಂ ವರ್ಗಗಳು ಇದ್ದವು. ಆ ಸಂದರ್ಭದಲ್ಲಿ ತಮಿಳು ಮುಸ್ಲಿಂ ವಿದ್ವಾಂಸರು ತಮ್ಮ ಭಾಷೆಯ ಹಲವು ಶಬ್ದಗಳನ್ನು ಮಲಬಾರಿನ ಪ್ರದೇಶಗಳಲ್ಲಿಯೂ ಬಳಸಲು ಆರಂಭಿಸಿದರು. ತಮಿಳು, ಮಲೆಯಾಳಂ, ಕನ್ನಡ, ತುಳು, ಅರಬ್ಬಿ–ಈ ಎಲ್ಲಾ ಭಾಷಿಕರು ಒಟ್ಟಿಗೆ ಸೇರಿದ 'ಮಂಗಳೂರು ಮಲೆಯಾಳ' ಎಂಬ ಹೊಸ ಭಾಷೆ ಈ ಸಂದರ್ಭದಲ್ಲಿ ರೂಪುಗೊಂಡಿತು. ಈ ಭಾಷೆಯಲ್ಲಿ ತಮಿಳು, ತುಳು ಹಾಗೂ ಅರಬ್ಬಿ ಶಬ್ದಗಳೇ ಅಧಿಕವಾಗಿವೆ. ಆದರೆ ಇದಕ್ಕೆ ಲಿಪಿ ಇಲ್ಲ. ಹಾಗಾಗಿ ಅದು ತನ್ನ ಅಸ್ತಿತ್ವವನ್ನು ಕಂಡುಕೊಂಡಿಲ್ಲ.[೩೧] ಮಧ್ಯಕಾಲೀನ ಅವಧಿಯ ಹಲವು ವಿದ್ವಾಂಸರು ಅಭಿಪ್ರಾಯ ಪಡುವಂತೆ ಮಲೆಯಾಳಂ ಮತ್ತು ತಮಿಳಿಗೆ ಹೋಲಿಕೆ ಹೊಂದಿದ್ದ ಒಂದು ಲಿಪಿ ಉಗಮವಾಯಿತೆಂದು, ಅದಕ್ಕೆ 'ಬಿಟ್ಟಿ ಬರಹ'ವೆಂದು ಕರೆಯಲಾಗುತ್ತಿತ್ತು ಎಂದಿದ್ದಾರೆ. ಈ ಲಿಪಿಯಲ್ಲಿ ಬರೆಯಲಾದ ಅನೇಕ ಗ್ರಂಥಗಳು ಅರಕ್ಕಲ್ ಸುಲ್ತಾನ್ ಅಲೀರಾಜನ ಅರಮನೆಯಲ್ಲಿ ಇಂದಿಗೂ ಇದೆ ಎಂದು ಪಿ.ಎ.ಸೈಯದ್ ಮಹಮ್ಮದ್ ತಿಳಿಸಿದ್ದಾರೆ. ತುಳು ಭಾಷೆಯನ್ನು ಈ ತರ ಮಲೆಯಾಳಕ್ಕೆ ಹೋಲುವ ಲಿಪಿಯಲ್ಲಿ ಬರೆಯುತ್ತಿದ್ದರು.[೩೨] ಹೀಗೆ ಮಂಗಳೂರಿನ ಪ್ರಾಂತ್ಯದಲ್ಲಿ ಮುಸ್ಲಿಂ ಭಾಷೆಯ ಬೆಳವಣಿಗೆ ಹಂತಹಂತವಾಗಿ ಆಯಿತು. ಇನ್ನು ಸೂಫಿ ಮಿಷನರಿಗಳ ಪ್ರಭಾವದಿಂದಲೂ ಸಹ ಇಸ್ಲಾಂ ಕೇರಳದಲ್ಲಿ ಪ್ರಚಾರವಾಗುವ ಜೊತೆಗೆ ಸಾಹಿತ್ಯ ರಚನೆಯು ಕಂಡುಬಂದಿತು. ಕ್ರಿ.ಶ. ೧೬ನೇ ಶತಮಾನದಲ್ಲಿ ರೆಹಲಾ(Rehla) ಸಾಹಿತ್ಯವು ಪ್ರಚಲಿತಕ್ಕೆ ಬಂದಿತು. ೧೬೦೭ರ ಮಹಿ–ಉದ್–ದ್ದೀನ್–ಮಾಲ ಎಂಬ ಸಾಹಿತ್ಯದ ರಚನೆಯು ಪ್ರಮುಖವಾದುದು.[೩೩] ಈ ಸಾಹಿತ್ಯವು ಅರೇಬಿಕ್, ಮಲೆಯಾಳಂ ಹಾಗೂ ತಮಿಳು ಭಾಷೆಯ ಮಿಶ್ರಣವಾಗಿ ರಚಿತವಾಗಿತ್ತು. ಇವುಗಳಲ್ಲಿ ೪೩% ಪದಗಳು ಅರೇಬಿಕ್ ಭಾಷೆಯವುಗಳಾಗಿವೆ. ಇನ್ನು ೨೫ರಿಂದ ೩೦% ಪದಗಳು ತಮಿಳು ಪದಗಳಾಗಿವೆ. ಷೇಕ್ ಮೋಹಿನುದ್ದೀನ್ ಅಬ್ದುಲ್ ಖಾದರ್ ಜಿನಾನಿಯ(೧೧ನೇ ಶತಮಾನ) ಬಗೆಗಿನ ಸಾಹಿತ್ಯ ಪ್ರತಿಗಳನ್ನು ೧೦೦ಕ್ಕಿಂತ ಅಧಿಕವಾಗಿ ಮುದ್ರಣ ಮಾಡಲಾಯಿತು. ಈ ಸಾಹಿತ್ಯವು ವಿಜಯನಗರ ಸ್ಥಾಪನೆ ಪೂರ್ವದಿಂದಲೇ ತನ್ನ ಆರಂಭಿಕ ಹಂತದಲ್ಲಿದ್ದು, ೧೫ನೇ ಶತಮಾನದ ವೇಳೆಗಾಗಲೇ ಅದು ಬೆಳವಣಿಗೆಯನ್ನು ಕಂಡಿತ್ತು. ವಿಜಯನಗರೋತ್ತರ ಅವಧಿಯಲ್ಲಿ ಮಲಬಾರಿನಲ್ಲಿ ಶೇಕ್ ಪ್ರಾಮುಖ್ಯತೆ ನಂತರ ಬಾದಿರಿಯಾ ತಾರಿಬ್‌ಯು ಬೆಳವಣಿಗೆ ಕಂಡಿತ್ತು.

ದಖ್ಖನ್ ಭಾಷಾ ಧೋರಣೆ

೧೩೪೭ರಲ್ಲಿ ಸುಲ್ತಾನ್ ಮಹಮ್ಮದ್–ಬಿನ್–ತುಘಲಕ್‌ನ ವಿರುದ್ಧ ದಕ್ಷಿಣದ ಅನೇಕ ಅಮೀರರು ಬಂಡಾಯವೆದ್ದು ಅವನಿಂದ ಬೇರೆಯಾದರು. ಅವರ ನಾಯಕರಾದ ಅಲ್ಲಾವುದ್ದೀನ್ ಹಸನ್ ಶಹ ಅಲ್–ಬಹಮನಿ ಕರ್ನಾಟಕದ ಕಲಬುರ್ಗಿಯಲ್ಲಿ ಉತ್ತರ ಭಾರತದ ಹಿಡಿತದಿಂದ ಪೂರ್ಣವಾಗಿ ಸ್ವತಂತ್ರವಾದ ರಾಜ್ಯ ಸ್ಥಾಪಿಸಿದ ನಂತರ ಹೊಸ ಪ್ರದೇಶದಲ್ಲಿ ಸ್ಥಳೀಯ ಭಾಷೆಯನ್ನು ತಮ್ಮ ಆಡಳಿತದಲ್ಲಿ ಆಳವಡಿಸಿಕೊಂಡರು.

ಬಹಮನಿ ಸಾಮ್ರಾಜ್ಯ ಸ್ಥಾಪಿಸಿ, ಆಡಳಿತ ನಡೆಸಲು ಆರಂಭಿಸಿದ ಸುಲ್ತಾನರು ಹಾಗೂ ಅವರೊಂದಿಗೆ ಬಂದ ಮುಸ್ಲಿಮರು ಬೇರೆ ಬೇರೆ ಭಾಷೆ, ಉಪಭಾಷೆಗಳನ್ನಾಡುವವರಾಗಿದ್ದರು. ಅವರು ಮಧ್ಯಪೂರ್ವ ಏಷ್ಯಾದಲ್ಲಿ ಅಂತಾರಾಷ್ಟ್ರೀಯ ಮಹತ್ವವನ್ನು ಗಳಿಸಿದ್ದ, ಸಾಕಷ್ಟು ಸಾಹಿತ್ಯವನ್ನು ಹೊಂದಿದ್ದ ಇರಾನಿನ ಭಾಷೆ ಫಾರಸಿಯನ್ನು ತಮ್ಮೊಡನೆ ತಂದು, ಅದನ್ನು ಉತ್ತರ ಭಾರತದಲ್ಲಿ ತಮ್ಮ ರಾಜಭಾಷೆಯನ್ನಾಗಿ ಮಾಡಿ ದೇಶೀಯರು ಅದನ್ನು ಕಲಿಯಲು ಬಾಧ್ಯರನ್ನಾಗಿ ಮಾಡಿದರು. ಹೀಗೆ ಉತ್ತರದಲ್ಲಿ ರಾಜಭಾಷೆಯಾಗಿ ವಿರಾಜಮಾನವಾಗಿ ಪ್ರತಿಷ್ಠೆಯನ್ನು ಪಡೆದಿದ್ದ ತಮಗೆ ಚಿರಪರಿಚಿತ ಫಾರಸಿಯನ್ನು ಬಹಮನಿಗಳು ದಕ್ಷಿಣದಲ್ಲೂ ತಮ್ಮ ಅಧಿಕೃತ ಭಾಷೆಯನ್ನಾಗಿ ಮಾಡಿದರು. ಮಧ್ಯ ಪೂರ್ವದ ವಿವಿಧ ವಿದೇಶಗಳಿಂದ ಪಶ್ಚಿಮ ಕರಾವಳಿಯ ಮೂಲಕ ನೇರವಾಗಿ ಬಹಮನಿ ರಾಜ್ಯಕ್ಕೆ ಬರುತ್ತಿದ್ದ ಸಾಹಸಿಗಳನ್ನು ಸ್ವಾಗತಿಸಿ ಅವರಿಗೆ ಅಧಿಕಾರ ಸ್ಥಾನ ಕೊಡಲಾಗುತ್ತಿತ್ತು. ಖಲೀಫ್ ಹಸನ್ ಅರಬ್ಬೀ, ದಿಲಾವರ್ ಖಾನ್ ಅಫಘಾನಿ, ಮಹಮೂದ್ ಗವಾನ್‌ಗಿಲಾನಿ, ಕಾಸಿಮ್ ಬರೀದ್ ಶುರ್ಕ ಮುಂತಾದವರು ಇಲ್ಲಿ ಪ್ರಧಾನಮಂತ್ರಿಗಳೇ ಆದರು. ದಖ್ಖನ್ನಿನ ಸುಲ್ತಾನರ ದರ್ಬಾರಿನಲ್ಲಿ ಕ್ರಮೇಣ ಅಫಾಖಿಗಳ ಅಂದರೆ ವಿದೇಶಿಯರ, ದಖ್ಖನಿಗಳ ಮತ್ತು ಆಫ್ರಿಕದಿಂದ ತಂದು ಹೇರಿದ ಹಬಶಿಗಳ ಗುಂಪುಗಳಿದ್ದರು. ಸಾಧಾರಣವಾಗಿ ಇಲ್ಲಿ ವಿದೇಶಿಗಳದ್ದೇ ಹೆಚ್ಚಿನ ಪ್ರಾಬಲ್ಯವಿತ್ತು. ಇವರೆಲ್ಲರಿಗೂ ಸಾಮಾನ್ಯವಾಗಿ ಭಾಷೆ ಫಾರಸಿ, ಇಸ್ಲಾಮಿನ ಧಾರ್ಮಿಕ ಸಾಹಿತ್ಯವನ್ನು ಒಳಗೊಂಡು ಕುರಾನ್ ಅರಬ್ಬಿಯಿಂದಲೂ ಪ್ರಭಾವಿತವಾಗಿತ್ತು. ಭಾರತದ ವಿವಿಧ ರಾಜ್ಯಗಳ ನಡುವೆ, ರಾಯಭಾರ ವ್ಯವಹಾರಗಳಿಗೂ ಫಾರಸಿಯ ಬಳಕೆಯಾಗುತ್ತ, ಅದಕ್ಕೆ ಅಂತರ್‌ಪ್ರಾಂತೀಯ ಮಹತ್ವವೂ ಬಂದಿತ್ತು. ಈ ಎಲ್ಲಾ ಕಾರಣಗಳಿಂದ, ಮೂರು ಪ್ರೌಢ ಪ್ರಾದೇಶಿಕ ಭಾಷೆಗಳನ್ನು ಒಳಗೊಂಡ ಬಹಮನಿ ರಾಜ್ಯದಲ್ಲಿ ಮತ್ತು ಅದು ಒಡೆದು ಆದಿಲ್‌ಶಾಹಿ, ಬರೀದ್‌ಶಾಹಿ, ನಿಜಾಮ್‌ಶಾಹಿ, ಇಮದ್‌ಶಾಹಿ ಮತ್ತು ಕುತುಬ್‌ಶಾಹಿಗಳಿಗೆ ಸೇರಿದಂತೆ ಐದು ತುಂಡುಗಳಾದ ಮೇಲೂ, ಬಳಿಕ ೧೭ನೆಯ ಶತಮಾನದ ಕೊನೆಯ ಭಾಗದಲ್ಲಿ ಅದೆಲ್ಲ ಮೊಗಲ್ ಸಾಮ್ರಾಜ್ಯದ ಭಾಗಗಳಾದ ತರುವಾಯವೂ ಫಾರಸಿ ಭಾಷೆ ಅವಿಚ್ಛಿನ್ನವಾಗಿ ರಾಜಭಾಷೆಯ ಪಟ್ಟದಲ್ಲಿ ಮುಂದುವರಿಯಿತು. ಆದರೆ ಈ ವಿದೇಶಿ ಭಾಷೆಯನ್ನು ಭಾರತದ ನೆಲದಲ್ಲಿ ಸಾರ್ವತ್ರಿಕವಾಗಿ ಎಲ್ಲ ಮಟ್ಟಗಳಲ್ಲಿಯೂ ಉಪಯೋಗಿಸಿ ಹರಡುವುದು ಸಾಧ್ಯವಿರಲಿಲ್ಲ.

ಮಿಶ್ರ ದಖ್ಖನಿ ಭಾಷೆ ಉದಯಿಸಿದ ಬಳಿಕ ಉತ್ತರ ಭಾರತದಿಂದ ವಿವಿಧ ಭಾಷೆ ಮತ್ತು ಕುಲಗಳ ಹಿನ್ನೆಲೆಯಲ್ಲಿ ಸೈನಿಕರು, ಇತರ ಸಿಬ್ಬಂದಿಯವರು, ಅವರನ್ನು ಅವಲಂಬಿಸಿದವರು ತಂಡ ತಂಡವಾಗಿ ಬಂದು ದಖ್ಖನ್ ಪ್ರದೇಶದಲ್ಲಿ ನೆಲೆಸಿದರು. ಈ ಮುಂಚೆಯೇ ಮುಸ್ಲಿಂ ರಾಜಕೀಯ ಶಕ್ತಿ ದಕ್ಷಿಣದಲ್ಲಿ ಪ್ರವೇಶವಾದ ದಿನಗಳಿಂದಲೂ ಇಂತಹ ವಲಸೆ ಬರುವುದು ವಾಡಿಕೆಯಾಗಿತ್ತು. ಇವರಲ್ಲಿ ಹೆಚ್ಚಾಗಿ ಬಂದವರು ದಿಲ್ಲಿ ಮತ್ತು ಅದರ ಅಕ್ಕಪಕ್ಕದ ನಾಡಿನವರಾಗಿದ್ದರು. ಆ ಪ್ರದೇಶದಲ್ಲಿ ಪ್ರಚಲಿತವಿದ್ದ ದೇಶೀಯ ಭಾಷೆಯನ್ನು ಅರಿತು ಉಪಯೋಗಿಸುತ್ತಿದ್ದರು. ವಿದೇಶಿ

ವಂಶಸ್ಥರೂ ಅವರಲ್ಲಿದ್ದರು. ಇವರು ತಂದ ಭಾಷೆಯನ್ನು ಫಾರಸಿಯಿಂದ ಪ್ರತ್ಯೇಕವಾಗಿ ಗುರುತಿಸಲು ಹಿಂದೆಯೇ ಹಿಂದಿ ಎಂದು ಕರೆಯಲಾಗುತ್ತಿತ್ತು. ಅದನ್ನು ತಮ್ಮ ತಮ್ಮೊಳಗಲ್ಲದೆ, ಫಾರಸಿಯನ್ನು ಬಳಸುತ್ತಿದ್ದ ಉಚ್ಚ ಅಧಿಕಾರಿ ವರ್ಗದೊಡನೆಯೂ ಉಪಯೋಗಿಸುತ್ತಿದ್ದರು. ಅದನ್ನು ಸ್ಥಳೀಯರೊಡನೆ ಸಂಪರ್ಕಕ್ಕಾಗಿ ಉಪಯೋಗಿಸಲು ಆರಂಭಿಸಿದರು. ಪಂಜಾಬ್, ಬ್ರಜ್ ಭಾಷೆಗಳಿಂದಲೂ ಪ್ರಭಾವಿತ ವಾಗಿದ್ದ ಈ ಭಾಷೆ ದಖ್ಖನ್ ಪ್ರದೇಶದಲ್ಲಿ ಒಳನಾಡಿನ ಬಳಿಕ ಸ್ವಲ್ಪ ಬೇರೆಯಾದ ರೂಪ ಮತ್ತು ಉಚ್ಚಾರಣೆಯನ್ನು ಪಡೆದಿದ್ದರಿಂದ ಇದನ್ನು ದಖ್ಖನೀ ಎಂದು ಕರೆಯಲಾಯಿತು. ಇದು ಮೂಲತಃ ದೆಹಲಿ ಮತ್ತು ಸುತ್ತಲಿನ ಪ್ರದೇಶದ ಭಾಷೆ. ಫಿರೋಜದ 'ಪೀರತ್‌ನಾಮ', ಖುರೇಶಿಯ 'ಭೋಗಪಾಲ್' ಮುಂತಾದ ಕಾವ್ಯಕೃತಿಗಳು ಬರೆಯಲ್ಪಟ್ಟವು.[೩೪] ಸರಳ, ಪರಿಣಾಮಕಾರಿಯಾದ ದಖ್ಖನಿ ಶೈಲಿ ಅವರದು. ಸುಖ, ದುಃಖ, ಆಕಾಸ್, ಧರತೀ, ಧರಮ್ ಮುಂತಾದ ತತ್ಸಮ, ತದ್ಭವ ಶಬ್ದಗಳನ್ನು ಅವರು ಬಳಸುತ್ತಿದ್ದರು. ಭಾರತೀಯ ಪರಂಪರೆಯ ಅಭಿವ್ಯಕ್ತಿ ಅವರಿಗೆ ತ್ಯಾಜ್ಯವಾಗಿರಲಿಲ್ಲ. ಅವರು ಫಾರಸೀ, ಅರಬ್ಬೀ ಶಬ್ದಗಳ ವಿಪರೀತ ಉಪಯೋಗ ಮಾಡುತ್ತಿರಲಿಲ್ಲ. ಆದಿಲ್‌ಶಾಹಿ ಮತ್ತು ಕುತುಬ್‌ಶಾಹಿ ಸುಲ್ತಾನರು ದಖ್ಖನಿ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಿದರು.[೩೫]

ಸ್ಥಳೀಯ ಭಾಷೆಯಾಗಿ ದಖ್ಖನಿ

ದಖ್ಖನಿ ಭಾಷೆಯನ್ನು ದಖ್ಖನಿ ಹಿಂದಿ, ದಖ್ಖನಿ ಉರ್ದುವೆಂದು ಯಥಾರ್ಥವಾಗಿ ಕರೆಯಲಾಗಿದೆ. ಉರ್ದು, ಹಿಂದೂಸ್ತಾನಿ ಹಾಗೂ ಆಧುನಿಕ ಸಿಂದೀ-ಇವುಗಳ ಮೂಲಾಧಾರವಾದ 'ಖಡೀ ಬೋಲಿ' ದಖ್ಖನಿ ರೂಪಕ್ಕೆ ಜನಪ್ರಿಯಗೊಂಡಿರುವುದು, ಶಾಸನಬದ್ಧಗೊಂಡಿರುವುದು ಮತ್ತು ಸಾಹಿತ್ಯಿಕ ಪ್ರತಿಷ್ಠೆ ಇವೆಲ್ಲವೂ ಮೊದಲು ಗುಲ್ಬರ್ಗಾ ಮತ್ತು ಬಿಜಾಪುರ ಆದಿಲ್‌ಶಾಹಿಗಳಿಂದ ಬಂದಿತ್ತು.[೩೬] ಈ ಭಾಷೆಯು ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಮಾತ್ರ ಹೆಚ್ಚಾಗಿ ಕಂಡುಬಂದಿತು. ತಮಿಳುನಾಡು, ಕೇರಳ ಭಾಗದಲ್ಲಿನ ಮುಸ್ಲಿಮರು ಸ್ಥಳೀಯ ಭಾಷೆಗಳನ್ನು ಮಾತ್ರ ಬಳಸಿಕೊಂಡರು. ದಕ್ಷಿಣದ ಈ ಮೂರು ಪ್ರದೇಶಗಳಲ್ಲಿ ಮಾತ್ರವೇ(ದಖ್ಖನಿ ತರುವಾಯ ಉರ್ದು) ಬಹುತೇಕವಾಗಿ ಮುಸ್ಲಿಮರ ಭಾಷೆಯಾಗಿ ಸ್ವೀಕರಿಸಲಾಯಿತು. ಹೀಗೆ ಬಹಮನಿ, ಬಿಜಾಪುರ ರಾಜ್ಯಗಳ ಪ್ರಭುತ್ವದ ಸಂದರ್ಭದಲ್ಲಿ ವಿಜಯನಗರದ ರಾಜಧಾನಿ ಪಟ್ಟಣದ ಸುತ್ತಲಿನ ಪ್ರದೇಶದಾದ್ಯಂತ ಈ ಭಾಷೆಯು ಬಳಕೆಯಲ್ಲಿತ್ತು. ಇದಕ್ಕೆ ಪ್ರಮುಖ ಆಕರವೆಂದರೆ ಹಂಪಿ ಪ್ರದೇಶದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳ ಸಮಾಧಿಗಳು. ಈ ಸಮಾಧಿ ಕಲ್ಲಿನ ಮೇಲೆ ದಖ್ಖನಿ ಭಾಷೆಯ ಅಕ್ಷರಗಳ ಕೆತ್ತನೆಯು ಕಂಡುಬರುತ್ತದೆ. ಈ ಕೆತ್ತನೆ ಬೇರೆ ಎಲ್ಲಿಯೂ ಕಂಡುಬರುವುದಿಲ್ಲ. ಅಲ್ಲದೆ ಹಲವಾರು ಸಮಾಧಿಗಳು ನಾಶವಾಗಿವೆ. ಅವುಗಳಲ್ಲಿ ಹಲವು ಸಮಾಧಿಗಳ ಮೇಲೆ ಉರ್ದು ಅಕ್ಷರಗಳು ತೆಳುವಾಗಿ ಕಂಡುಬರುತ್ತವೆ. ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಕಂಡುಬಂದ ಹಲವು ಮುಸ್ಲಿಂ ಸಮಾಧಿ ಕಲ್ಲು ಕಟ್ಟಡಗಳ ಮೇಲೆ ಕೆತ್ತಲಾದ ಉರ್ದು ಭಾಷೆಯ ಆಧಾರದ ಮೇಲೆ ವಿಜಯನಗರ ಸಾಮ್ರಾಜ್ಯದ ಮೇಲೆ ದಖ್ಖನ್ ಭಾಷೆಯ ಪ್ರಭಾವವಿತ್ತೆಂದು ಗುರುತಿಸಲಾಗಿದೆ.

ದಕ್ಷಿಣ ಭಾರತದಲ್ಲಿ ಕರಾವಳಿ ತೀರದ ಮುಸ್ಲಿಂ ಸಮುದಾಯಗಳು ಭಾಷಿಕವಾಗಿ ದಖ್ಖನಿಗಳಿಗಿಂತ ಭಿನ್ನವಾಗಿದ್ದವು. ಮುಸ್ಲಿಮರಲ್ಲಿ ವಿಶಿಷ್ಟವಾದ ಬಹುಭಾಷಿಕವಾದ ಅರಬ್ಬಿ–ಮಲೆಯಾಳಂ ಭಾಷೆಯು ಬೆಳವಣಿಗೆಯಾಯಿತು. ಮಾಪಿಳ್ಳೆಯವರ ಮಾತೃಭಾಷೆ ಮಲೆಯಾಳವಾಗಿತ್ತು. ಇದು ಇಸ್ಲಾಮೇತರ ಭಾಷೆಯಾಗಿತ್ತು. ಹಾಗಾಗಿ ಕರಾವಳಿ ಭಾಗದಲ್ಲಿ ಸ್ಥಳೀಯ ಭಾಷೆಯಲ್ಲಿ ಇಸ್ಲಾಂ ಬೋಧನೆಯನ್ನು ಮಾಡಲಾಗುತ್ತಿತ್ತು. ಮುಸ್ಲಿಮರು ಆರ್ಯನ್ ಬರಹದ ಮಲೆಯಾಳಂ ಬರಹಗಳನ್ನು ಪರಿಗಣಿಸಿದ್ದರು. ತಮಿಳುನಾಡಿನ ಮುಸ್ಲಿಂ ಸಮುದಾಯಗಳಿಂದ ರಚಿತವಾದ ಭಾಷಿಕ ಸ್ವರೂಪವು ಬಹುಮುಖಿಯಾಗಿತ್ತು. ಅದು ಮುಸ್ಲಿಂ ಸಮುದಾಯದ ಮೂಲತಃ ತಮಿಳು, ಕನ್ನಡ, ಬಂಗಾಳಿ ಭಾಷೆಗಳ ಜೊತೆ ಅರೇಬಿಕ್ ಭಾಷೆಯ ಮಿಶ್ರಣವಾಗಿತ್ತು. ನಂತರದಲ್ಲಿ ಅದು ಅರೇಬಿಕ್ ತಮಿಳು, ಅರೇಬಿಕ್ ಕನ್ನಡ, ಅರೇಬಿಕ್ ಬಂಗಾಳಿ ಹೀಗೆ ಸ್ಥಳೀಯ ಭಾಷಿಕವಾರು ಅಥವಾ ಪ್ರಾದೇಶಿಕವಾಗಿ ಪ್ರಚಲಿತದಲ್ಲಿರುವ ಭಾಷೆಯಾಗಿ ರೂಢಿಗೆ ಬಂದಿತು. ಕೇರಳದ ಮಲೆಯಾಳಂ ಭಾಷೆಯು ಅರೇಬಿಕ್ ಭಾಷೆಯನ್ನು ಸ್ಥಳೀಯ ಭಾಷಿಕ ರೂಪವಾಗಿ ರೂಪಿಸಿಕೊಂಡಿತು. ಮಲೆಯಾಳಂ ಬರಹವು ಇಸ್ಲಾಂ ಧರ್ಮ ಪ್ರಚಾರದ ಹೊಸ ಸಂವಹನ ದಾರಿಯಾಗಿ ರೂಪಿತಗೊಂಡಿತು. ಮಲೆಯಾಳಂ ಭಾಷೆಯು ಅವರ ಮಾತೃಭಾಷೆಯಾಗಿದ್ದಲ್ಲದೇ ಶಿಕ್ಷಣ ಅರೇಬಿಕ್ ಮಲೆಯಾಳಂನಲ್ಲಿ ನಡೆಯಿತು. ಕ್ರಿ.ಶ. ೧೧ನೇ ಶತಮಾನದಲ್ಲಿ ಬಾಗ್ದಾದ್‌ನಲ್ಲಿದ್ದ ಷೇಕ್ ಮೊಹಿಮದ್ದೀನ್ ೬೦೦ಕ್ಕಿಂತ ಅಧಿಕ ಸಾಹಿತ್ಯವನ್ನು ಮುದ್ರಣ ಮಾಡಿದನು. ಮಲಬಾರ್‌ನಲ್ಲಿ ಅರೇಬಿಕ್ ಮಲೆಯಾಳಂ ಸಾಹಿತ್ಯವು ಬೆಳವಣಿಗೆಯಾಗುತ್ತಾ ಹೋಯಿತು. ಅರೇಬಿಕ್ ಮಲೆಯಾಳಂ ಮತ್ತು ತಮಿಳು ಭಾಷೆಯ ಮಿಶ್ರಣವು ೧೬೦೭ರಲ್ಲಿ ಮೊಹಿನುದ್ದೀನ್ ಮೂಲಕ ರಚನೆಗೊಂಡಿತು. ಇದರ ಮೂಲವು ಕ್ಯಾಲಿಕಟ್‌ನ ಬಾಜಿ ಮಹಮ್ಮದಿಸ್ ಇಬನ್ ಅಬ್ದುಲ್ ಅಜೀಜ್ ಪೂರ್ವದ ಅರಬ್ಬೀ–ಮಲೆಯಾಳಂ ಎಂಬುದಾಗಿ ಪರಿಗಣಿಸಲಾಗುತ್ತದೆ.[೩೭] ಹಾಗೆಯೇ ಷೇಕ್ ಮೋಹಿನುದ್ದೀನ್ ಅಬ್ದುಲ್ ಖಾದರ್ ಜಿನಾನಿಯಿಂದ ಈ ಸಾಹಿತ್ಯ ಪ್ರಗತಿಯಾಯಿತು. ನಂತರದಲ್ಲಿ ವಿಜಯನಗರೋತ್ತರ ಕಾಲದಲ್ಲೂ ಅದು ಖಾದಿರಿಯಾ ತಾರಿಖಾನ್ ಸ್ವರೂಪದಲ್ಲಿ ಬೆಳವಣಿಗೆ ಹೊಂದಿತು.[೩೮]

೫.೭. ಸಂಸ್ಕಾರಗಳು

ವಿಜಯನಗರದಲ್ಲಿ ಮುಸ್ಲಿಮರು ವಾಸವಾಗಿದ್ದರೆಂದು ದೃಢಪಡಿಸುವ ಆಧಾರವೆಂದರೆ ಅವರ ಅಸಂಖ್ಯಾತ ಸಮಾಧಿಗಳು. ಮುಸ್ಲಿಮರು ನೆಲೆಸಿದ ಸ್ಥಳಗಳಲ್ಲಿ ಬಹುಸಂಖ್ಯೆಯಲ್ಲಿ ಸಮಾಧಿಗಳು ಕಂಡುಬರುತ್ತವೆ. ಕಡ್ಡಿರಾಂಪುರ, ಕಮಲಾಪುರ, ಹಂಪಿ, ವೆಂಕಟಾಪುರ ಹಾಗೂ ಇತರ ಸುತ್ತಮುತ್ತಲ ಪ್ರದೇಶಗಳಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಸಮಾಧಿಗಳು ದೊರೆತಿವೆ. ಮುಸ್ಲಿಮರ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ಇವು ಸಹ ಸಹಾಯಕವಾಗಿವೆ. ಇವರು ಉತ್ತರ ದಕ್ಷಿಣಾಭಿ ಮುಖವಾಗಿ ಸಮಾಧಿಯನ್ನು ಮಾಡುತ್ತಿದ್ದರು. ಈ ಸಮಾಧಿಗಳ ಮೇಲೆ ಗೋರಿಗಳನ್ನು ನಿರ್ಮಿಸುತ್ತಿದ್ದರು. ಇಲ್ಲಿ 'ಗೋರಿ' ಎಂದರೆ ಮುಸ್ಲಿಮರು ತಮ್ಮ ಸ್ವಪ್ರತಿಷ್ಠೆಗಾಗಿ ಸಮಾಧಿಯ ಮೇಲೆ ಕಲ್ಲನ್ನು

ಪ್ರತಿಷ್ಠಾಪಿಸುತ್ತಿದ್ದರು. ವಿಜಯನಗರ ಕಾಲಕ್ಕೆ ಸಂಬಂಧಿಸಿದ ಸಮಾಧಿಗಳಿಗೆ ಗ್ರ್ಯಾನೈಟ್ ಕಲ್ಲನ್ನು ಬಳಸುತ್ತಿದ್ದರು. ಮುಸ್ಲಿಮರ ಎಲ್ಲ ನೆಲೆಯಲ್ಲಿ ಕಂಡುಬಂದಂತೆ ಸಮಾಧಿ ಮಾಡಿದ ನಂತರ ಎರಡು ಬದಿಯಲ್ಲಿ ಕಲ್ಲನ್ನು ನೆಡುತ್ತಿದ್ದರು. ಇನ್ನು ಹಲವು ಸಮಾಧಿ ಮೇಲೆ ಗೋರಿಗಳ ನಿರ್ಮಾಣ ಕಂಡುಬಂದರೆ, ಆ ಗೋರಿಗಳ ಮೇಲೆ ಸ್ಮರಣಾರ್ಥಕವಾಗಿ ಬೃಹತ್ ಗುಮ್ಮಟಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಅಂದರೆ ಇಲ್ಲಿ ಮೂರು ರೀತಿಯ ವರ್ಗಗಳನ್ನು ಗುರುತಿಸಬಹುದು. ಸಾಮಾನ್ಯರ ಸಮಾಧಿಗಳು, ಮಧ್ಯಮವರ್ಗದವರ ಸಮಾಧಿಗಳು ಮತ್ತು ಶ್ರೀಮಂತರ ಸಮಾಧಿಗಳು. ಮುಸ್ಲಿಂ ಸಮಾಜ ಮೂರು ವರ್ಗಗಳಿಂದ ಕೂಡಿತ್ತು ಎಂದು ಈ ಸಮಾಧಿಗಳಿಂದ ತಿಳಿಯಬಹುದು. ಬಹುಶಃ ಗೋರಿ ಕಟ್ಟಡದ ಸಮಾಧಿಗಳು ಉನ್ನತ ಅಧಿಕಾರ ವರ್ಗದವರದ್ದಾಗಿರಬೇಕು. ಮಧ್ಯಮ ವರ್ಗದವರ ಸಮಾಧಿಗಳು ಸೇವಕರ ಸಮಾಧಿಗಳಾಗಿರಬಹುದು. ಸಾಮಾನ್ಯರ ಸಮಾಧಿಗಳು ಜನಸಾಮಾನ್ಯರ ಅಂದರೆ ಕಸುಬುದಾರರ, ವರ್ತಕರದ್ದಾಗಿರಬೇಕು ಎಂದು ಊಹಿಸಬಹುದು. ಇವುಗಳಲ್ಲಿ ಪುರುಷರ ಸಮಾಧಿಗಳು ಮತ್ತು ಮಹಿಳಾ ಸಮಾಧಿಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಪುರುಷರ ಗೋರಿಗಳು ಗುಮ್ಮಟಾಕಾರವಿದ್ದರೆ, ಮಹಿಳಾ ಸಮಾಧಿಗಳು ಆಯತಾಕಾರದಲ್ಲಿವೆ.

ವಿಜಯನಗರ ಸಾಮ್ರಾಜ್ಯದ ಮುಸ್ಲಿಮರ ಆಚರಣೆಯಲ್ಲಿ ಬರುವ ಇನ್ನೊಂದು ನಂಬಿಕೆ ಎಂದರೆ ದರ್ಗಾಗಳು. ಈ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ದರ್ಗಾಗಳನ್ನು ಈಗಲೂ ಅಲ್ಲಿ ಕಾಣಬಹುದು. ಮುಸ್ಲಿಮರ ವಸತಿ ಪ್ರದೇಶದ ಬೆಟ್ಟದ ಮೇಲೆ 'ಪಹಾಡ್‌ವಲಿ ದರ್ಗಾ'ವಿದೆ. ಇದು ಅಹಮ್ಮದ್ ಖಾನ್ ಅವರ ಧರ್ಮಶಾಲೆಯ ಹಿಂಭಾಗದ ನೈರುತ್ಯ ದಿಕ್ಕಿನ ಕಡೆ ಕಂಡುಬರುತ್ತದೆ. ಹಜರತ್ ಸೇಲ್ ಷಾ ಕರಾಮತ್ ಅಲ್ಲಾಹ ಷಾ, ಖಾದ್‌ರಿ ಎಂಬ ಮುಸ್ಲಿಂ ಸಂತ ಇಲ್ಲಿ ವಾಸಿಸುತ್ತಿದ್ದನು. ಈತನ ಮರಣದ ನಂತರ ಸಮಾಧಿಯನ್ನು ಅಲ್ಲಿಯೇ ಮಾಡಲಾಯಿತು. 'ದಾವುರ್‌ವಲಿ' ಎಂಬ ಇನ್ನೊಂದು ಗೋರಿ ಸಹ ಕಂಡುಬರುತ್ತದೆ. ಇದು ಅಹಮ್ಮದ್ ಖಾನ್ ಧರ್ಮಶಾಲೆಯ ಈಶಾನ್ಯ ದಿಕ್ಕಿನ ಕಡೆ ಕಂಡುಬರುತ್ತದೆ.

ಅದೇ ರೀತಿ ತುಂಗಭದ್ರ ನದಿಯ ಬಲದಂಡೆಯ ಮೇಲೆ ವಿಜಯವಿಠಲ ಗುಡಿಯ ಹಿಂಭಾಗ ದಲ್ಲಿ ಹೊಳೆ ಹೊನ್ನೂರು ಸ್ವಾಮಿ ದರ್ಗಾ ಕಂಡುಬರುತ್ತದೆ. ಈ ರೀತಿ ಹಲವು ದರ್ಗಾಗಳು ವಿಜಯನಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದವು. ಸೂಫಿ ಸಂತರಾದ ಇವರು ಇಸ್ಲಾಂ ಧರ್ಮ ಪ್ರಚಾರ ಮಾಡುತ್ತಾ ಭಾರತಕ್ಕೆ ಬಂದವರು. ಇವರು ರಾಜಕೀಯದಿಂದ ಹೊರತಾಗಿದ್ದರು. ಈ ಸಂತರು ಹಿಂದೂ-ಮುಸ್ಲಿಂ ಎಂಬ ಭೇದವಿಲ್ಲದೆ ಜನಸಾಮಾನ್ಯರ ನಡುವೆ ಇರುತ್ತಿದ್ದರು. ಅಲ್ಲಾಹನ ಭಕ್ತಿಯಲ್ಲಿ ಭಾವಪರವಶರಾಗಿ ಅನೇಕ ಶಕ್ತಿಗಳನ್ನು ತಮ್ಮದಾಗಿಸಿಕೊಂಡು ಪವಾಡಗಳನ್ನು ತೋರಿಸುತ್ತಿದ್ದರು. ಹಿಂದೂ-ಮುಸ್ಲಿಮರು ತಮ್ಮ ಕಷ್ಟಗಳಿಗೆ ಇವರ ಹತ್ತಿರ ಪರಿಹಾರ ಪಡೆಯುತ್ತಿದ್ದರು. ಈ ಸಂತರನ್ನು 'ವಲೀ' ಎಂದು ಕರೆಯುತ್ತಾರೆ. ವಲೀ ಎಂದರೆ 'ದೇವರ ಪ್ರತಿನಿಧಿ' ಎಂದರ್ಥ. ಈ ವಲಿಗಳು ವಿಜಯನಗರ ಪಟ್ಟಣಗಳಲ್ಲಿ ಬಂದು ನೆಲೆಸಿ ಹಿಂದೂ-ಮುಸ್ಲಿಮರ ಪ್ರಗತಿಗಾಗಿ

ಶ್ರಮಿಸಿದ್ದರು. ಈ ದರ್ಗಾಗಳಿಗೆ ಎಲ್ಲ ವರ್ಗಗಳ ಜನರು ಇತ್ತೀಚಿನವರೆಗೂ ನಡೆದುಕೊಳ್ಳುತ್ತಿರುವುದು ವಿಶಿಷ್ಟವೆನಿಸಿದೆ. ಈ ಸಂತರ ಸ್ಮರಣಾರ್ಥ ಅವರ ಸಮಾಧಿಗಳಿಗೆ ಉರುಸ್(ಉತ್ಸವ) ಆಚರಿಸುತ್ತಾರೆ. ವಲೀಗಳು ಹುಟ್ಟಿದ ಅಥವಾ ದೈವಾಧೀನರಾದ ದಿನದಂದು ಆಯಾ ಊರಿನ ಪ್ರಮುಖರೆಲ್ಲರೂ ಸೇರಿ ವಲೀಗಳ ಹೆಸರಿನಲ್ಲಿ ಹಣ ಸಂಗ್ರಹಿಸಿ 'ಉರುಸ್' ಆಚರಣೆಯನ್ನು ವರ್ಷಕ್ಕೊಮ್ಮೆ ನಡೆಸುತ್ತಾರೆ. ಈ ರೀತಿಯ ಉತ್ಸವವನ್ನು ಇತ್ತೀಚಿನವರೆಗೂ ಹಂಪಿಯಲ್ಲಿ ಆಚರಿಸುತ್ತಿದ್ದರು. ಆದರೆ ಪ್ರಸ್ತುತ ದಿನಗಳಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಒತ್ತಾಯಪೂರ್ವಕವಾಗಿ ಈ ಆಚರಣೆಗಳನ್ನು ಸ್ಥಗಿತಗೊಳಿಸಲು ಸಂಚನ್ನು ರೂಪಿಸುತ್ತಿದ್ದಾರೆ. ಮೊಹರಂ ಹಬ್ಬದಲ್ಲಿ ಹಿಂದೂ-ಮುಸ್ಲಿಮರು ಐಕ್ಯದಿಂದ ಹಬ್ಬ ಆಚರಿಸುತ್ತಾ ದರ್ಗಾಗಳಿಗೆ ನಡೆದುಕೊಳ್ಳುತ್ತಾ ಉರುಸ್‌ಗಳನ್ನು ಆಚರಿಸುವ ಈ ಪರಂಪರೆಯು ವಿಜಯನಗರ ಸಾಮ್ರಾಜ್ಯದ ಸಾಮಾಜಿಕ ಬದುಕನ್ನು ಹಾಗೂ ಸಂಮಿಶ್ರ ನೆಲೆಯ ಆರಾಧನಾ ಸಂಪ್ರದಾಯವನ್ನು ಸೂಚಿಸುತ್ತದೆ. ಇದು ಸಹ ಧರ್ಮಸಮನ್ವಯತೆಯ ಅಂಶಕ್ಕೆ ಪ್ರಮುಖ ನಿದರ್ಶನವಾಗಿದೆ.

ಮುಸ್ಲಿಂ ಸಮಾಧಿಗಳನ್ನು ಮೂರು ರೀತಿಯಾಗಿ ಮರ್ಗೀಕರಿಸಲಾಗಿದೆ. ಅವುಗಳೆಂದರೆ ನೆಲಸಮಾಧಿಗಳು, ಸಮಾಧಿ ಕಲ್ಲುಗಳು ಹಾಗೂ ಗೋರಿಕಟ್ಟಡದ ಸಮಾಧಿಗಳು.

೧. **ನೆಲಸಮಾಧಿಗಳು:** ಶವವನ್ನು ಮಣ್ಣಿನಲ್ಲಿ ಉತ್ತರ-ದಕ್ಷಿಣವಾಗಿ ಹೂತು, ಆ ಸಮಾಧಿಯ ಎರಡು ಬದಿಯಲ್ಲಿ ಸಮಾಧಿಯ ಗುರುತಿಗೆ ಚಿಕ್ಕ ಎರಡು ಕಲ್ಲನ್ನು ನೆಟ್ಟಿರುವುದನ್ನು ನೆಲಸಮಾಧಿ ಗಳೆನ್ನುತ್ತೇವೆ.

೨. **ಸಮಾಧಿ ಕಲ್ಲುಗಳು:** ನೆಲ ಸಮಾಧಿಗಳ ಮೇಲೆ ವಿವಿಧ ಶೈಲಿಯಲ್ಲಿ ಕೆತ್ತಲಾದ ಸಮಾಧಿ ಕಲ್ಲುಗಳನ್ನು(ಮಜಾರ್) ತಯಾರಿಸಿ, ನೆಲ ಸಮಾಧಿಯ ಮೇಲೆ ಕಟ್ಟಲಾದ ಸಮಾಧಿ ಕಲ್ಲುಗಳು. ಏಕೆಂದರೆ ಪುರುಷರ ಸಮಾಧಿಗಳಲ್ಲಿ ಕಂಡುಬರುವ ಮಜಾರ್‌ಗಳ ಶಲಿಯ ತುದಿ ಅಥವಾ ಕೊನೆಯ ಭಾಗವು ವಿವಿಧ ಆಕಾರಗಳಲ್ಲಿ ಕೊನೆಗೊಳ್ಳುತ್ತದೆ. ಆದರೆ ಮಹಿಳೆಯರ ಮಜಾರ್‌ಗಳು ಸಮಾಂತರವಾಗಿರುತ್ತವೆ. ಇನ್ನು ಚಿಕ್ಕ ಮಕ್ಕಳ ಸಮಾಧಿಗಳು ಚಿಕ್ಕ ಚಿಕ್ಕ ಮಜಾರ್‌ಗಳನ್ನು ಹೊಂದಿವೆ. ಈ ಸಮಾಧಿ ಕಲ್ಲುಗಳ ಮಾದರಿಗಳಿಂದ ಹಿರಿಯರ, ಪುರುಷರ, ಮಹಿಳೆಯರ ಹಾಗೂ ಮಕ್ಕಳ ಸಮಾಧಿಗಳನ್ನು ಸುಲಭವಾಗಿ ಗುರುತಿಸಬಹುದು.

೩. **ಗೋರಿಕಟ್ಟಡದ ಸಮಾಧಿಗಳು:** ಕಲ್ಲುಸಮಾಧಿಗಳ ಮೇಲೆ ಕಟ್ಟಡವನ್ನು ನಿರ್ಮಾಣ ಮಾಡುವುದು ಗೋರಿ ಕಟ್ಟಡದ ಸಮಾಧಿಗಳಾಗಿವೆ. ಈ ಕಟ್ಟಡದ ಮೇಲ್ಛಾವಣಿಯು ಗೋಳಾಕಾರ ವಾಗಿರುತ್ತದೆ. ಇಂತಹ ಸಮಾಧಿಗಳನ್ನು ಗೋರಿಕಟ್ಟಡದ ಸಮಾಧಿಗಳೆನ್ನುವರು.

ಈ ರೀತಿಯ ಸಮಾಧಿಗಳಿಂದ ಮುಸ್ಲಿಂ ಸಮುದಾಯದ ಸಂಸ್ಕಾರಗಳನ್ನಲ್ಲದೆ ಸಾಮಾಜಿಕ ಹಾಗೂ ಆರ್ಥಿಕ ಜೀವನದ ಸ್ಥಿತಿಗಳನ್ನೂ ಅರಿಯಬಹುದು. ಈ ಸಮಾಧಿಗಳು ಜನಸಾಮಾನ್ಯರ

ವರ್ಗ, ಅಧಿಕಾರಿಗಳ ವರ್ಗ, ಸೂಫಿಸಂತರ ಸಮಾಧಿಗಳಾಗಿದ್ದವೆಂದು ಹಾಗೂ ಸಾಮಾಜಿಕವಾಗಿ ಇವು ಶ್ರೀಮಂತವರ್ಗ, ಮಧ್ಯಮವರ್ಗ, ಸಾಮಾನ್ಯವರ್ಗವಾಗಿತ್ತೆಂದು ಈ ಸಮಾಧಿಗಳ ಅಧ್ಯಯನದಿಂದ ತಿಳಿಯಬಹುದಾಗಿದೆ. ವಿಜಯನಗರ ಪಟ್ಟಣದಲ್ಲಿ ಸಿಕ್ಕಿರುವ ಶಾಸನಗಳು, ಸ್ಮಾರಕಾವಶೇಷಗಳು ಮುಸ್ಲಿಂ ಸಮುದಾಯದ ಸಂಸ್ಕೃತಿಯನ್ನು ತಿಳಿಯಲು ಸಹಾಯಕವಾಗುತ್ತವೆ. ತಳವಾರಘಟ್ಟ ರಸ್ತೆಯ ಬಲಭಾಗದಲ್ಲಿ ವಿಜಯನಗರ ಆಳ್ವಿಕೆಯಲ್ಲಿ ನಿರ್ಮಿಸಿದ್ದ ಒಂದು ಧರ್ಮಶಾಲೆ ಕಂಡುಬಂದಿದ್ದು, ಇದು ಮುಸ್ಲಿಮರ ಪ್ರಾರ್ಥನಾಮಂದಿರವಾಗಿದ್ದು, ದಿನಕ್ಕೆ ಐದು ಬಾರಿ ನಮಾಜ್(ದೇವರ ಆರಾಧನೆ) ಮಾಡುವ ಮಸೀದಿಯಾಗಿತ್ತು. ಈ ಧರ್ಮಶಾಲೆಯೊಂದನ್ನು ಮತ್ತು ಬಾವಿಯನ್ನು ಅಹಮ್ಮದ್‌ಖಾನ್ ಎಂಬುವವನು ರಾಯನಿಗೆ ಧರ್ಮವಾಗಬೇಕೆಂದು ಕಟ್ಟಿಸಿ, ಅದನ್ನು ದಾನ ಮಾಡಿದನೆಂದು ಕ್ರಿ.ಶ. ೧೪೩೯ರ ಹಂಪಿ ಶಾಸನ ವಿವರ ನೀಡುತ್ತದೆ.[೩೯] ಎರಡನೇ ದೇವರಾಯನ ಆಳ್ವಿಕೆಯಲ್ಲಿ ಅಹಮ್ಮದ್‌ಖಾನ್ ಒಬ್ಬ ಕಾವಲುಗಾರನಾಗಿದ್ದು, ತನ್ನ ಅರಸನ ಹೆಸರಿನಲ್ಲಿ ಕಟ್ಟಿಸಿದ್ದ ಈ ಧರ್ಮಶಾಲೆಯು ಅರಸನ ಮೇಲಿನ ನಿಷ್ಠೆ ಮತ್ತು ರಾಜ್ಯದ ಮೇಲಿನ ಅಭಿಮಾನವನ್ನು ಪ್ರತಿನಿಧಿಸುತ್ತಿರುವುದನ್ನು ಈ ದಾನಶಾಸನದಿಂದ ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ಇಂತಹ ಇನ್ನು ಅನೇಕ ನಿಷ್ಠಾವಂತ ಮುಸ್ಲಿಂ ಅಧಿಕಾರಿಗಳು ವಿಜಯನಗರ ಅರಸರ ಅಧೀನದಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು ಎನ್ನಬಹುದು.

೫.೮. ಸೂಫಿಗಳು

ವಿಜಯನಗರ ಸಾಮ್ರಾಜ್ಯದಲ್ಲಿ ಸೂಫಿ ವರ್ಗವು ತನ್ನದೇ ಆದಂತಹ ಸಾಮಾಜಿಕ ಕಾರ್ಯವನ್ನು ಕೈಗೊಂಡಿತ್ತು. ಸೂಫಿ ವರ್ಗವು ದಕ್ಷಿಣದ ಕರಾವಳಿ ತೀರ ಪ್ರದೇಶದಲ್ಲಿ ಕ್ರಿ.ಶ. ೭ನೇ ಶತಮಾನದಿಂದಲೂ ನೆಲೆ ನಿಂತಿತ್ತು. ಕ್ರಿ.ಶ. ೧೧ನೇ ಶತಮಾನದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬಂದಂತಹ ಇನ್ನೊಂದು ಸೂಫಿ ವರ್ಗವು ಸಹ ಇಲ್ಲಿನ ಪ್ರಭುತ್ವಗಳ ಆಸರೆಯೊಂದಿಗೆ ಭಿನ್ನವಾಗಿ ಪ್ರವೇಶಿಸಿತು. ಈ ಸೂಫಿ ವರ್ಗವು ವಿಜಯನಗರ ಕಾಲದಲ್ಲಿ ಹಿಂದೂ-ಮುಸ್ಲಿಂ ಸಮುದಾಯಗಳ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿತು. ಸೂಫಿಗಳು ಸಾಮಾಜಿಕವಾಗಿ, ರಾಜಕೀಯವಾಗಿ ವಿಭಿನ್ನ ನೆಲೆಗಟ್ಟಿನಲ್ಲಿ ಗುರುತಿಸಿಕೊಂಡರು. ಈ ಸೂಫಿಗಳ ಅರ್ಥ, ಅವರ ಬೆಳವಣಿಗೆ ಮುಸ್ಲಿಂ ಸಮುದಾಯ ಹಾಗೂ ಹಿಂದೂ ಸಮುದಾಯಗಳ ಮೇಲೆ ಬೀರಿದ ಪ್ರಭಾವ ಕುರಿತು ಈ ಮುಂದಿನಂತೆ ಚರ್ಚಿಸಲಾಗಿದೆ.

ಸೂಫಿ ಪದದ ಅರ್ಥ

ಸೂಫಿ ಪದದ ಉಗಮದಲ್ಲಿ ಎರಡು ನಿಲುವುಗಳಿವೆ. ಸೂಫಿ ಎಂಬ ಪದವು ಅರೇಬಿಕ್ ಪದವಾದ ಸಫಾ ಪದದಿಂದ ಉಗಮವಾಗಿದೆ. ಸಫ ಎಂದರೆ ಉಣ್ಣೆ, ಪರಿಶುದ್ಧತೆ ಎಂದರ್ಥ. ಇವರು ಉಣ್ಣೆಯ ಬಟ್ಟೆಗಳನ್ನು ಧರಿಸುತ್ತಿದ್ದರಿಂದ ಇವರಿಗೆ ಸಫ ಎಂದು ಕರೆಯಲಾಯಿತು.[೪೦] ಇನ್ನು ಹಲವು ವಿದ್ವಾಂಸರ ಪ್ರಕಾರ ಗ್ರೀಕಿನ ಸೋಫಿಯಾ ಅಂದರೆ ಜ್ಞಾನ ಪದದಿಂದ ಸೂಫಿ ಪದ ಹುಟ್ಟಿಕೊಂಡಿತೆನ್ನಲಾಗಿದೆ. ಸಫಾ ಎಂದರೆ ಪರಿಶುದ್ಧತೆ, ಅಂದರೆ ಯಾರಿಗೆ ಹೃದಯ

ಹಾಗೂ ಆತ್ಮಗಳ ಪರಿಶುದ್ಧತೆ ಇದೆಯೋ ಅವರು ಸೂಫಿಗಳು. ಈ ಬಗ್ಗೆ ಸೂಫೀ ಅಲ್ ರುದಾಬರಿಯವರು ಹೀಗೆ ಹೇಳಿದ್ದಾರೆ. ಪರಿಶುದ್ಧ ಹೃದಯದ ಮೇಲೆ ಎಣ್ಣೆಯ ಮೇಲು ಹೊದಿಕೆಯನ್ನು ಬಳಸುವವರು ಸೂಫಿ.

ಕ್ರಿ.ಶ. ೭ನೇ ಶತಮಾನದಲ್ಲಿ ಸೂಫಿ ಪದಕ್ಕೆ ಅರಬ್-ಅಲ್-ಸಫಿ ಅಂದರೆ ಅಂಗಳದ ಸಂಗಾತಿಗಳು ಅಥವಾ ಅದರ್-ಅಲ್-ಸುಫಾ ಅಂದರೆ ಅಂಗಳದ ಜನ ಎಂಬ ಅರ್ಥವನ್ನು ಹಲವು ವಿದ್ವಾಂಸರು ನೀಡಿದರು. ಈ ಪದದ ಅರ್ಥ ಪರಿಶುದ್ಧವಾದ ಜನರು ಪ್ರವಾದಿ ಮಹಮ್ಮದರ ಸಂಗಾತಿಗಳಾಗಿದ್ದರು ಎನ್ನುವುದು. ಈ ಜನರೇ ಮೊದಲ ಸೂಫಿಗಳು. ಇವರು ಸೂಫಿ ತತ್ವ ಸಿದ್ಧಾಂತಗಳನ್ನು ವಿಶ್ವದಾದ್ಯಂತ ಹರಡಿಸಿದರು. ಅದು ಏಷ್ಯಾ, ಇರಾನ್, ಚೀನಾ ಯುರೋಪ್ ರಾಷ್ಟ್ರಗಳಿಗೆಲ್ಲಾ ವಿಸ್ತರಿಸಿಕೊಂಡು, ದೇಶದಿಂದ ದೇಶಕ್ಕೆ ಸಮಾಜ, ಸಂಪ್ರದಾಯ ಪ್ರಗತಿಗಳಿಗೆ ಅನುಸಾರವಾಗಿ ವಿಸ್ತಾರಗೊಂಡವು.[೪೧]

ಜಾಗತಿಕ ಚರಿತ್ರೆಯಲ್ಲಿ ಇಸ್ಲಾಂ ಸೂಫಿಗಳ ಚರಿತ್ರೆಯು ಕ್ರಿ.ಶ. ೮ರಿಂದ ೧೫ನೇ ಶತಮಾನದವರೆಗೆ ಅವರ ಬೆಳವಣಿಗೆಯ ವಿವಿಧ ಹಂತಗಳಲ್ಲಿ ಕಂಡುಬರುತ್ತದೆ. ಸೂಫಿ ಚರಿತ್ರೆಯು ಪೈಗಂಬರ್ ಅವರ ಕಾಲಾವಧಿಯಿಂದ ಅಬ್ಬಾಸಿಯರ ಏಳಿಗೆಯವರೆಗೆ ಪೈಗಂಬರ್‌ನ ಅನುಯಾಯಿಗಳಿಂದ ಆರಂಭವಾಯಿತು. ಇದರ ಜೊತೆಗೆ ಈ ಸಾಧುಗಳು ಹುಟ್ಟಿನಿಂದ ಬಡವರಾಗಿದ್ದರು. ಹಾಗಾಗಿ ಪೈಗಂಬರ್ ಅವರು ಕಟ್ಟಿಸಿದ ಮಸೀದಿಗಳಲ್ಲಿ ವಾಸವಾಗತೊಡಗಿದರು. ಇವರನ್ನು 'ಸೂಫ' ಎಂದು ಕರೆದರು. ಸೂಫ ಎಂದರೆ ಮಾಳಿಗೆ ಎಂದರ್ಥ. ಇವರು ಮಾಳಿಗೆಯ ಮೇಲೆ ಮಲಗುತ್ತಿದ್ದರಿಂದ ಈ ಹೆಸರು ಬಂದಿತು. ಕುರಾನ್ ಓದುವುದು, ಧರ್ಮ ಪ್ರಸಾರ ಮಾಡುವುದು ಇವೇ ಮೊದಲಾದವುಗಳು ಇವರ ಮುಖ್ಯ ಕೆಲಸವಾಗಿತ್ತು. ಸೂಫಿಗಳು ಪೈಗಂಬರ್ ನಂತರ ಅಲಿಯನ್ನು ತಮ್ಮ ಗುರುಗಳಾಗಿ ಸ್ವೀಕರಿಸಿದರು. ಅರಬ್‌ನಿಂದ ಈಜಿಪ್ಟಿಗೆ ಸೂಫಿ ಪಂಥ ಹೀಗೆ ಹರಡಿತು. ನಂತರದಲ್ಲಿ ಇರಾನ್‌ನ ಮೂಲಕ ಭಾರತಕ್ಕೆ ಆಗಮಿಸಿತು.[೪೨]

ಸೂಫಿ ಪಂಥವು ಇಸ್ಲಾಮಿನ ಒಂದು ಅನುಭಾವಿ ಪಂಥವಾಗಿ ಗುರುತಿಸಿಕೊಂಡಿತ್ತು. ಸಂಪ್ರದಾಯ ವಾದಿಗಳ ವಿರೋಧವನ್ನು ಇವರು ಕಟ್ಟಿಕೊಂಡಿದ್ದರು. ಸೂಫಿ ಪಂಥವು ಮಧ್ಯ ಏಷ್ಯಾದ ಇಸ್ಲಾಂ ಜಗತ್ತಿನಲ್ಲಿ ಹುಟ್ಟಿದ ಒಂದು ದರ್ಶನವಾಗಿದೆ. ಸೂಫಿಗಳು ಸಾಂಪ್ರದಾಯಿಕ ಧರ್ಮಶಾಸ್ತ್ರದ ಪರಿಕಲ್ಪನೆಗೆ ಪರ್ಯಾಯವಾಗಿ ಚಿಂತಿಸುತ್ತಾ ಆ ಅನುಭಾವದಲ್ಲಿ ತಮ್ಮ ಬದುಕನ್ನು ನಡೆಸುತ್ತಿದ್ದರು. ಹಾಗಾಗಿ ಧಾರ್ಮಿಕ ಮೂಲಭೂತವಾದಿಗಳು ಇವರನ್ನು ಧರ್ಮವಿರೋಧಿಗಳೆಂದು ಆರೋಪಿಸುತ್ತಾ ಶಿಕ್ಷಿಸುತ್ತಾ ಬಂದರು. ಅನುಭಾವಿ ಸೂಫಿಗಳಿಗೆ 'ತಸವ್ವುಫ್' ಎಂದು ಕರೆಯುತ್ತಾರೆ. ಸೂಫಿ ಚರಿತ್ರೆ ಯಲ್ಲಿ ತಸವ್ವುಫ್ ಅನ್ನು ಅನುಸರಿಸುವ ಸೂಫಿಗಳು ಸಾಂಪ್ರದಾಯಿಕ ಅಥವಾ ಸಾಂಸ್ಥಿಕ ಧರ್ಮ ಹೇಳುವ ಕಂದಾಚಾರಿಗಳಿಗೆ ಭಿನ್ನವಾಗಿ ಬದುಕಿದರು.[೪೪] ಈ ಹಿನ್ನೆಲೆಯಲ್ಲಿ ಇವರು ಇಸ್ಲಾಂ ಸಂಪ್ರದಾಯವಾದಿಗಳು ವಿರೋಧಿಸುವಂತಹ ಸಂಗೀತ, ಚಿತ್ರಕಲೆ, ಚಿಂತನೆ, ಕಾವ್ಯ, ತತ್ವಶಾಸ್ತ್ರಗಳ ಸೃಜನಶೀಲತೆಯನ್ನು ಜನರ ಮಧ್ಯೆ ಬೆಳೆಸಿದರು.

ಕ್ರಿ.ಶ. ೧೧ನೇ ಶತಮಾನದ ವೇಳೆಗಾಗಲೇ ಸೂಫಿಗಳು ತರ್ಕ ವೈಚಾರಿಕತೆಗಳ ಹೊಸ ಬೌದ್ಧಿಕ ವ್ಯವಸ್ಥೆಯ ಕಡೆ ಚಲಿಸಿದರು. ಅನುಭಾವ ತತ್ವವು ಪಂಥಗಳಾಗಿ, ಸಾಂಸ್ಥೀಕರಣ ಪಡೆಯಿತು. ಪ್ರತಿಭಾವಂತ ಸೂಫಿ ದಾರ್ಶನಿಕರು ತಮ್ಮ ತಮ್ಮ ಅನುಭಾವಿ ಸಿದ್ಧಾಂತಗಳನ್ನು ನಿರ್ಮಿಸುತ್ತಾ ಹೋದರು. ಇವರನ್ನು ನಂಬುವ ವ್ಯಾಖ್ಯಾನಿಸುವ ಹರಡುವ ಅನುಯಾಯಿಗಳು ಆಯಾ ಸೂಫಿಗಳ ಹೆಸರಿನಲ್ಲಿ ಹುಟ್ಟಿಕೊಂಡರು. ಇದನ್ನು ಸಿಲ್‌ಸಿಲಾ(ಪಂಥ) ಎನ್ನಲಾಗುತ್ತದೆ. ಚಿಸ್ತಿಯಾ, ಖಾದ್ರಿಯಾ, ನಕ್ಷ್ ಬಂದಿಯಾ, ಸುಹವರ್ದಿಯಾ, ಬಂದರಿಯಾ, ಸತ್ತಾರಿಯಾ, ರಫಾಯಿಯಾ ಎಂಬ ಪ್ರಸಿದ್ಧ ಸಿಲ್‌ಸಿಲಾಗಳಾಗಿ ಬೆಳೆದವು.[೪೪]

ಚಿಸ್ತಿಯಾ ಪಂಥವು ಅಫಘಾನಿಸ್ತಾನದ ಚಿಸ್ತ್ ಎಂಬ ಹಳ್ಳಿಯಲ್ಲಿ ಅಬೂ ಅಬ್ದುಲ್ಲಾ ಚಿಸ್ತಿ (ಕ್ರಿ.ಶ. ೯೬೬) ಅವರಿಂದ ಆರಂಭಗೊಂಡಿತು. ಈ ಪಂಥವು ಪ್ರಸಿದ್ಧಿಗೆ ಬಂದಿದ್ದು ಶೇಖ್ ಖ್ವಾಜಾ ಮೊಯಿನುದ್ದೀನ್ ಚಿಸ್ತಿ(೧೨೩೬) ಕಾಲದಲ್ಲಿ. ಮೂಲತಃ ಇರಾನಿನವರಾದ ಇವರು ಮಧ್ಯ ಏಶಿಯಾ, ಇರಾಕ್, ಅರೇಬಿಯಾ ಮತ್ತು ಭಾರತದಲ್ಲಿ ಸಂಚರಿಸಿದರು.[೪೫]

ಖಾದಿರಿ ಅಥವಾ ಖಾದ್ರಿಯ ಪಂಥ(ಕ್ರಿ.ಶ.೧೧೬೬) ಅಬ್ದುಲ್ ಖಾದಿರ್ ಜಿಲಾನಿನಿಂದ ಸ್ಥಾಪಿಸಲ್ಪಟ್ಟಿತು. ಕ್ರಿ.ಶ. ೧೨೫೮ರಲ್ಲಿ ಬಾಗ್ದಾದ್ ಮೇಲೆ ಆದ ಭಯಂಕರ ದಾಳಿಯಲ್ಲಿ ಸುನ್ನಿ ವರ್ಗದ ಬದುಕನ್ನು ಉಳಿಸಿದಷ್ಟೇ ಅಲ್ಲದೆ ಅದು ಶೀಘ್ರವಾಗಿ ಬೆಳೆಯಿತು. ಕ್ರಿ.ಶ. ೧೫ನೇ ಶತಮಾನದ ಹೊತ್ತಿಗೆ ಅದು ಮೊರೊಕ್ಕೋ, ಸ್ಪೇನ್, ಟರ್ಕಿ, ಭಾರತ, ಇಥಿಯೋಪಿಯಾ ಹಾಗೂ ಸೋಮಾಲಿಯಾಗಳಲ್ಲಿ ಹಬ್ಬಿಕೊಂಡಿತು.[೪೬]

ಸುಹಾವರ್ದಿ ಪಂಥವು ದಿಯಾ–ಅಲ್–ದಿನ್ ಅಬು–ನಾಜಿಬ್–ಅಸ್–ಸುಹಾವದ್ರಿ(೧೦೯೭–೧೧೬೮) ಅವರಿಂದ ಸ್ಥಾಪಿಸಲ್ಪಟ್ಟಿತು. ಇದು ಸುನ್ನಿ ಪಂಥದ ವರ್ಗ. ಅನೇಕ ವರ್ಗಗಳಂತೆ ಅಥವಾ ಪಂಥಗಳಂತೆ ಈ ವರ್ಗದ ಗುರುಗಳ ಪರಂಪರೆ–ಸಿಲ್‌ಸಿಲಾ–ಜುನ್ಯೆಯದ್ ಬಗದಾದಿ ಹಾಗೂ ಅಲ್–ಘಜಲಿಯವರ ಮೂಲಕ ಹಜರತ್ ಅಲಿ ಇಬ್ನ–ಅಬಿ ತಾರಿಬ್‌ರನ್ನೇ ಸೇರುತ್ತದೆ.[೪೭]

ನಕ್ಷ್‌ಬಂದಿ ಪಂಥದ ಖ್ವಾಜಾ ಬಹಾವುದ್ದೀನ್ ನಕ್ಷ್‌ಬಂದ್ ಜುಬಾರಿ(೧೩೮೯) ಅಂದಿನ ಅತ್ಯಂತ ಪ್ರಮುಖ ಸೂಫಿ ಶೇಖರಾಗಿದ್ದರು. ಬದಲಾಗುತ್ತಿರುವ ಕಾಲದೊಂದಿಗೆ ಸೂಫಿ ತತ್ವಗಳನ್ನು ಸತತವಾಗಿ ಸಮನ್ವಯಗೊಳಿಸುವ ಕಾರ್ಯದಲ್ಲಿ ಸಫಲರಾಗಿದ್ದವರು ನಕ್ಷ್‌ಬಂದ್ ಜುಬಾರಿಯವರು. ಅವರು ಖಲೀಫರಾಗಿ ಮೌನಧ್ಯಾನದ ಕಲ್ಪನೆಯನ್ನು ಶಿಷ್ಯರಿಗೆ ನೀಡಿದವರು. ನಕ್ಷ್‌ಬಂದಿ ತಾರೀಖ್‌ದ ವಿಶೇಷತೆಯೆಂದರೆ ಇದರ ಗುರುಪರಂಪರೆಯನ್ನು ಸಿಲ್‌ಸಿಲಾವನ್ನು ಮೊದಲನೇ ಖಲೀಫರಾದ ಅಬೂಬಕರ ಮೂಲಕ ಪ್ರವಾದಿ ಮಹಮ್ಮದವರೆಗೆ ಗುರುತಿಸಲಾಗುತ್ತದೆ.[೪೮]

ಭಾರತದಲ್ಲಿ ಸೂಫಿಗಳ ಪ್ರವೇಶವು ಕ್ರಿ.ಶ. ೭ನೇ ಶತಮಾನದಲ್ಲಿ ಆದರೂ ಸಹ ಕ್ರಿ.ಶ. ೧೨೦೦ರಿಂದ ೧೫೦೦ರವರೆಗೆ ಸೂಫಿಸಂ ಸಮೃದ್ಧವಾಗಿ ಬೆಳೆಯಿತು. ಈ ಸೂಫಿಗಳು ಶಿಯಾ

ಪಂಗಡದ ಪ್ರಾಬಲ್ಯವುಳ್ಳ ಬಾಗ್ದಾದ್‌ದಿಂದ ಹೊರಟು ಪರ್ಶಿಯಾ, ಪಾಕಿಸ್ತಾನ, ಭಾರತ, ಉತ್ತರ ಆಫ್ರಿಕಾ ಮತ್ತು ಸ್ಪೇನ್ ದೇಶಗಳಿಗೆ ಪ್ರವೇಶಿಸಿದರು. ಹೀಗೆ ಸೂಫಿ ಚಿಂತನೆಗಳನ್ನು ವಿಸ್ತಾರ ಮಾಡುವಾಗ ಸ್ವಾಭಾವಿಕವಾಗಿ ಅಲ್ಲಿನ ಸ್ಥಳೀಯ ಚಿಂತನೆಗಳೊಂದಿಗೆ ಬೆರೆತು ಹಲವು ವಿಭಾಗಗಳಾಗಿ ಪರಿವರ್ತನೆಗೊಂಡಿತು. ಮಧ್ಯ ಏಷ್ಯಾದಲ್ಲಿ ನಜಮುದ್ದೀನ್ ಕುಬ್ರಾ ಹೆಸರಿನಲ್ಲಿ 'ಕುಬ್ರಾವಿಯಾ' ಪಂಗಡ ಬಂದಿತು. ಇದಕ್ಕೆ ಹೆಚ್ಚಿನ ಮನ್ನಣೆ ದೊರೆಯಿತು. ಇದರ ಬಹಳಷ್ಟು ಜನ ಶಿಷ್ಯರು ಮುಂದೆ ಶೇಖ್‌ಗಳಾಗಿ ಸಹಸ್ರಾರು ಮುರೀದ್‌ಗಳಿಗೆ ಮಾರ್ಗದರ್ಶಕರಾದರು.[೪೯] ಹೀಗೆ ಸೂಫಿಸಂ ಮೂಲತಃವಾಗಿ ವಿವಿಧ ಮಾರ್ಗಗಳಲ್ಲಿ ತನ್ನದೇ ಆದ ತತ್ವ ಸಿದ್ಧಾಂತಗಳನ್ನು ಪಾಲಿಸತೊಡಗಿತು. ಈ ಸೂಫಿಗಳು ಭಾರತಕ್ಕೆ ಆಗಮಿಸಿದ ಬಗೆಯನ್ನು ನಾಲ್ಕು ವಿಧವಾಗಿ ಪ್ರಸ್ತಾಪಿಸಬಹುದು.

೧. ಕರಾವಳಿ ತೀರದ ವ್ಯಾಪಾರಿ ಸಮುದಾಯಗಳ ಜೊತೆಯಲ್ಲಿ ಮಿಷನರಿಗಳ ರೂಪದಲ್ಲಿ ಆಗಮನ.

೨. ಸೈನಿಕ ದಂಡಯಾತ್ರೆಗಳ ಜತೆಗೆ ಧರ್ಮಯೋಧರ ರೂಪದಲ್ಲಿ ಆಗಮನ.

೩. ರಾಜಕೀಯ ಆಹ್ವಾನ ಅಥವಾ ಒತ್ತಡದಿಂದ ರಾಜಗುರುಗಳ ರೂಪದಲ್ಲಿ ಆಗಮನ.

೪. ಜ್ಞಾನವನ್ನು ಅಥವಾ ಗುರುವನ್ನೋ ಹುಡುಕಿಕೊಂಡು ತತ್ವಾರ್ಥಿಗಳಾಗಿ ಆಗಮನ.[೫೦]

ಕರಾವಳಿ ತೀರ ಪ್ರದೇಶಗಳಲ್ಲಿ ಅರಬ್ ವ್ಯಾಪಾರಿಗಳ ಜೊತೆಯಲ್ಲಿ ಮಿಷನರಿಗಳಾಗಿ ಸೂಫಿಗಳು ಇಸ್ಲಾಂ ಧರ್ಮಪ್ರಚಾರವನ್ನು ಮಾಡಲಾರಂಭಿಸಿದರು. ದಕ್ಷಿಣಕ್ಕೆ ಸಮುದ್ರಮಾರ್ಗದ ಮೂಲಕ ಭಾರತದ ಪ್ರದೇಶಗಳಿಗೆ ಆಗಮಿಸಿದ ಮೊದಲ ಮುಸ್ಲಿಂನಾದ ಒಟ್ಟೋಮನ್ ಥಾಖಿಪಿಯು ಬಹರೈನ್ ದೇಶದ ರಾಜ್ಯಪಾಲನಾಗಿದ್ದನು. ಈತನು ಮಲಬಾರಿನ ಚೇರುಮನ್ ಪೆರುಮಾಳ ಆಸ್ಥಾನಕ್ಕೆ ಕ್ರಿ.ಶ. ೬೩೬ರಲ್ಲಿ ಬಂದಿದ್ದನು. ಈತ ಮೂಲತಃ ವ್ಯಾಪಾರಿ ಸಮುದಾಯಕ್ಕೆ ಸೇರಿದವನು. ಅರಬ್ಬರು ಕಡಲ ತೀರ ಪ್ರದೇಶದ ಹಲವು ಬಂದರು ಪಟ್ಟಣಗಳಲ್ಲಿ ಹರಡಿಕೊಂಡಿದ್ದರು. ಪ್ರಮುಖವಾಗಿ ಮಂಗಳೂರು, ಕಲ್ಲಿಕೋಟೆ, ಕರಾಚಿ, ಭರೂಚ್, ಥಾಣೆ, ತಿರುವಾಂಕೂರು ಮುಂತಾದ ನಗರ ಅಥವಾ ಬಂದರು ಪಟ್ಟಣಗಳಲ್ಲಿ ಸೂಫಿಗಳು ತಮ್ಮ ಸಂಪರ್ಕವನ್ನು ಪಡೆದರು. ಮಲಬಾರ್ ತೀರ ಪ್ರದೇಶದಲ್ಲಿ ಅರಬ್ ಮಿಷನರಿಗಳು ಅತಿ ಹೆಚ್ಚು ಪ್ರಭಾವವನ್ನು ಹೊಂದಿದ್ದರು. ಕೇರಳದ ಮುಸ್ಲಿಮರು ಈ ಮಿಷನರಿಗಳ ಅಥವಾ ಸೂಫಿಗಳ ತತ್ವಬೋಧನೆಯಿಂದ ಪ್ರೇರಣೆ ಪಡೆದು ಇಸ್ಲಾಂ ಧರ್ಮವನ್ನು ಅನುಸರಿಸತೊಡಗಿದರು. ಹೀಗೆ ಈ ಮಿಷನರಿಗಳು ತಾವು ಹೋದ ಕಡೆಗೆಲ್ಲಾ ಮಸೀದಿಗಳ ನಿರ್ಮಾಣವನ್ನು ಮಾಡಿದರು. ಆ ಹಿನ್ನೆಲೆಯಲ್ಲಿ ಕರ್ನಾಟಕದ ಬಾರಕೂರು, ಮಂಗಳೂರು ಪ್ರದೇಶಗಳಲ್ಲಿ ಪ್ರಾಚೀನ ಕಾಲದ ಮುಸ್ಲಿಂ ಮಸೀದಿಗಳು ಕಂಡುಬರುತ್ತವೆ. ಕ್ರಿ.ಶ. ೧೧೫ರಲ್ಲಿ ಕೊಡಂಗಲ್ಲಿನ ದೊರೆ ಇಸ್ಲಾಂ ಧರ್ಮಕ್ಕೆ ಪ್ರೇರಣೆ ಹೊಂದಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದನು. ಈ ಮಿಷನರಿಗಳ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸಿದ ಸಾಂಪ್ರದಾಯಿಕ ಸೂಫಿ ಎಂದರೆ ಮಲ್ಲಿಕ್-ಬಿನ್-ದಿನಾರ್. ಈತನು ತನ್ನ ಅನುಯಾಯಿಗಳೊಂದಿಗೆ ಕರಾವಳಿ

ಪ್ರದೇಶದ ಉದ್ದಕ್ಕೂ ಮತ ಪ್ರಚಾರ ಮಾಡಿದನು. ಇದರೊಂದಿಗೆ ಒಂದನೇ ಜಾಮೋರಿನ್ ದೊರೆ ತನ್ನ ರಾಜ್ಯದಲ್ಲಿ ಇಸ್ಲಾಮಿನ ಪ್ರಸಾರಕ್ಕೆ ಉತ್ತೇಜನ ನೀಡಿದನು. ಹೀಗೆ ಪ್ರಭುತ್ವಗಳ ಬೆಂಬಲ ದೊರೆತ ಈ ಮಿಷನರಿಗಳಿಗೆ ಇಸ್ಲಾಂ ಧರ್ಮ ವಿಸ್ತರಿಸಲು ಯಾವುದೇ ನಿರ್ಬಂಧನೆಗಳು ಇರಲಿಲ್ಲ. ಹಾಗಾಗಿ ಈ ಪ್ರಾಂತ್ಯದಲ್ಲಿ ಇಸ್ಲಾಂ ಧರ್ಮ ಹರಡಲು ಪ್ರಮುಖ ಅಂಶಗಳೆಂದರೆ ವ್ಯಾಪಾರಿಗಳ/ ವ್ಯಾಪಾರಸ್ಥರ ಹಾಗೂ ರಾಜಪ್ರಭುತ್ವಗಳ ಬೆಂಬಲ ಎನ್ನಬಹುದು. ಹಾಗೆಯೇ ಸೂಫಿ ಪಂಥದ ವಿಸ್ತರಣೆಯಲ್ಲಿ ಇವು ಪ್ರಮುಖ ಪಾತ್ರವನ್ನು ವಹಿಸಿದ್ದವು. ಹೀಗೆ ಕರಾವಳಿ ಪ್ರದೇಶದ ಸೂಫಿಗಳು ಸಾಂಪ್ರದಾಯಿಕವಾದಂತಹ ಸೂಫಿಗಳಾಗಿ ಗುರುತಿಸಿಕೊಂಡರು. ಈ ಸೂಫಿಗಳ ಮಾರ್ಗದಲ್ಲಿ ಶಿಷ್ಯ ಪರಂಪರೆ ಇರಲಿಲ್ಲ. ಕಾಸರಗೋಡಿನ ಮಲ್ಲಿಕ್-ಬಿನ್-ದಿನಾರ್, ಉಳ್ಳಾಲದ ಸೈಯದ್ ಮದನಿ, ಮಂಜನಾಡಿಯ ಅಸಯ್ಯದ್ ಇಸ್ಲಾಯಿಲ್ ವಲಿಯುಲ್ಲಾ, ಹಮೀದ್ ವಲಿಯುಲ್ಲಾ ಹೀಗೆ ಈ ಸೂಫಿಗಳು ಅರಬ್‌ಸ್ತಾನದ ಧಾರ್ಮಿಕ ಸೂಫಿಗಳಾದರು.[೩೧] ಹೀಗೆ ಕರಾವಳಿ ನಾಡಿನ ಉದ್ದಕ್ಕೂ ಸೂಫಿಗಳು ತಮ್ಮ ತತ್ವ ಸಿದ್ಧಾಂತವನ್ನು ಅನುಸರಿಸಿದರು.

ಸೈನಿಕರ ಜೊತೆಗೆ ಪ್ರವೇಶ ಪಡೆದ ಸೂಫಿಗಳ ಮತ್ತೊಂದು ಗುಂಪು ಇಲ್ಲಿ ಕಂಡುಬರುತ್ತದೆ. ಈ ಸೂಫಿಗಳು ಸೈನಿಕರ ಸೇವೆಯನ್ನು 'ಜಿಹಾದ್'(ಧರ್ಮಯುದ್ಧ) ಎಂದು ಭಾವಿಸುತ್ತಿದ್ದರು. ಈ ಸೂಫಿಗಳ ಪ್ರಕಾರ ಮುಸ್ಲಿಂ ಅರಸರ ಸಾಮ್ರಾಜ್ಯ ವಿಸ್ತರಣೆಯೂ ಇಸ್ಲಾಮಿನ ವಿಸ್ತರಣೆಯಾಗಿತ್ತು. ಇವರ ಕದನದ ಕಥೆಯನ್ನು ಈಟನ್ ತಜಕಿರಾಗಳ ಆಧಾರದಲ್ಲಿ ನೀಡುತ್ತಾನೆ. ಈ ಧರ್ಮಯುದ್ಧ ಮಾಡಿದ ಸೂಫಿಗಳು ಕರ್ನಾಟಕದಲ್ಲಿಯೂ ಕಂಡುಬರುತ್ತಾರೆ. ಇವರು ಪ್ರಮುಖವಾಗಿ ೧೩ನೇ ಶತಮಾನದಲ್ಲಿ ಉತ್ತರದಿಂದ ದಕ್ಷಿಣದ ಮೇಲೆ ದಂಡಯಾತ್ರೆ ಕೈಗೊಂಡ ಅಲ್ಲಾವುದ್ದೀನ್ ಖಿಲ್ಜಿಯ ಅವಧಿಯಲ್ಲಿ ಕರ್ನಾಟಕ ಪ್ರಾಂತ್ಯಕ್ಕೆ ಪ್ರವೇಶ ಪಡೆದರು. ಇವರು ಬಹಮನಿ-ಬಿಜಾಪುರ ಕಾಲದ ಪ್ರಭುತ್ವ ಸ್ಥಾಪನೆಯ ಪೂರ್ವದಲ್ಲೇ ಬಂದಿದ್ದರು. ಇಂತಹ ಸೂಫಿಗಳು ತೀವ್ರಗಾಮಿ ಸೂಫಿಗಳಾಗಿದ್ದರು. ಉದಾ: ಪೀರ್‌ಜುಮ್ನ ಸೈಯದ್ ಅಧಿ ಶಹೀದ್(೧೩೦೫), ಪೀರ್‌ಮಿತ್ ಹಿ(೧೩೩೧), ತಾಜುದ್ದೀನ್ ಮುನಾವರ್(೧೩೩೧), ಬಿಜಾಪುರದಲ್ಲಿ ಬಂದು ನೆಲೆಸಿದ ತೀವ್ರಗಾಮಿ ಸೂಫಿಗಳಾಗಿದ್ದರು.[೩೨]

ಕುಮಾರರಾಮನ ಸಾಂಗತ್ಯದಲ್ಲಿಯೂ ಸಹ ಈ ತೀವ್ರಗಾಮಿ ಸೂಫಿಗಳ ಬಗ್ಗೆ ವಿವರಣೆಗಳು ಕಂಡುಬರುತ್ತದೆ. ದೆಹಲಿ ಹಾಗೂ ಕಂಪಿಲ ನಡುವೆ ಆದಂತಹ ರಾಜಕೀಯ ಸಂಘರ್ಷದಲ್ಲಿ ಸೂಫಿಗಳ ಪಾತ್ರವನ್ನು ಚಿತ್ರಿಸಲಾಗಿದೆ. ದೆಹಲಿಯ ಪರವಾಗಿ ಸೂಫಿ ಸರ್ವಸ್ತನೂ ಹಾಗೂ ಕಂಪಲಿಯ ಪರವಾಗಿ ಕುಮಾರರಾಮನು ಯುದ್ಧ ಮಾಡುತ್ತಾರೆ. ಆಗ ಕುಮಾರರಾಮನನ್ನು ಸೂಫಿ ಸರ್ವಸ್ತನ ಮಗಳಾದ ಮಾತಂಗಿಯ ರೂಪದಲ್ಲಿ ಬಂದು ಕೊಲ್ಲುತ್ತಾನೆ ಎಂಬ ಐತಿಹ್ಯವಿದೆ. ಈ ಸೂಫಿಗಳು ದೆಹಲಿ ಸುಲ್ತಾನರ ರಾಜಾಶ್ರಯ ಪಡೆದ ಸೂಫಿಗಳಾಗಿದ್ದರು. ಅಲ್ಲದೇ ಸುಲ್ತಾನರ ಆಂತರಿಕ ರಾಜಕೀಯದಲ್ಲಿ ಭಾಗಿಯಾದವರಾಗಿದ್ದರು. ಈ ಹಿನ್ನೆಲೆಯಲ್ಲಿ ಪ್ರಭುತ್ವ ಮಟ್ಟದಲ್ಲಿ ಒಂದು ರಾಜಪ್ರಭುತ್ವದ ಪರವಾಗಿದ್ದು, ಇನ್ನೊಂದು ರಾಜಪ್ರಭುತ್ವಕ್ಕೆ ವಿರೋಧಿಯಾಗಿತ್ತು.

ರಾಜಕಾರಣದ ಆಗ್ರಹ ಅಥವಾ ಆಹ್ವಾನದಲ್ಲಿ ಭಾರತಕ್ಕೆ ಬಂದ ಸೂಫಿಗಳ ಗುಂಪು ಸಹ ಒಂದಾಗಿದೆ. ಅಜ್ಮೀರಿನ ಪ್ರಸಿದ್ಧ ಸಂತ ಮೊಯಿನುದ್ದೀನ್ ಚಿಸ್ತಿಯು ಶಿಖಾಬುದೀನ್ ಘೋರಿಯ ಆಹ್ವಾನದ ಮೇರೆಗೆ ಕ್ರಿ.ಶ. ೧೨೦೬ರಲ್ಲಿ ದೆಹಲಿಗೆ ಬಂದನು. ದೆಹಲಿ ಸುಲ್ತಾನರು ತಮ್ಮ ರಾಜಕೀಯ ಹಿತಾಸಕ್ತಿಗಳ ಅನುಕೂಲಕ್ಕೆ ಉತ್ತಮ ಧಾರ್ಮಿಕ ವಾತಾವರಣವನ್ನು ನಿರ್ಮಿಸಲು ಮಿಷನರಿ ಸೂಫಿಗಳನ್ನು ಕರೆಯಿಸಿಕೊಳ್ಳುತ್ತಿದ್ದರು. ಅಲ್ಲದೇ ಹಲವು ಸೂಫಿಗಳು ಸ್ವಪ್ರೇರಿತವಾಗಿ ದೆಹಲಿ ಸುಲ್ತಾನರ ಆಸ್ಥಾನದಲ್ಲಿ ಬಂದು ಆಶ್ರಯವನ್ನು ಪಡೆಯುತ್ತಿದ್ದರು. ಇಂತಹ ಸೂಫಿ ವರ್ಗವು ದಕ್ಷಿಣಕ್ಕೆ ಬಂದಿದ್ದು ಮಹಮ್ಮದ್ ಬಿನ್ ತುಘಲಕ್‌ನ ಕಾಲಾವಧಿಯಲ್ಲಿ ಎಂದು ಗುರುತಿಸ ಬಹುದು. ಮಹಮ್ಮದ್ ಬಿನ್ ತುಘಲಕ್ ದೇವಗಿರಿಗೆ ರಾಜಧಾನಿ ಬದಲಾವಣೆ ಮಾಡಿದ ನಂತರದಲ್ಲಿ ಖ್ವಾಜಬಂದೇ ನವಾಜ್ ಸೂಫಿಯು ಪ್ರಮುಖವಾಗಿ ಕಂಡುಬರುವನು. ಹೀಗೆ ಭಾರತಕ್ಕೆ ಆಗಮಿಸಿದ ಸೂಫಿಗಳು ವಿವಿಧ ಸ್ವರೂಪದಲ್ಲಿ ವಿಸ್ತರಿಸಿಕೊಳ್ಳುತ್ತಾ ಹೋದರು. ಹಲವರು ರಾಜಾಶ್ರಯ ಪಡೆದು ಪ್ರಭುತ್ವ ಚೌಕಟ್ಟಿನೊಳಗೆ ಸೀಮಿತಗೊಂಡರು. ಇನ್ನು ಹಲವು ಸೂಫಿ ಪಂಥವು ಸ್ವತಂತ್ರವಾಗಿ ಭಾರತದ ವಿವಿಧ ಪ್ರದೇಶದಲ್ಲಿ ಇಸ್ಲಾಂ ತತ್ವಗಳನ್ನು ತಮ್ಮ ಅನುಭಾವ ಪಂಥದಲ್ಲಿ ತಿಳಿಸುತ್ತಾ ಹೋದರು. ಇಂತಹ ಸೂಫಿಗಳ ಬೋಧನೆಗೆ ಹಿಂದೂ-ಮುಸ್ಲಿಂ ಎರಡೂ ಸಮುದಾಯದವರು ಆಕರ್ಷಿತರಾಗಿದ್ದರು.[೫೩]

ಕರ್ನಾಟಕದಲ್ಲಿ ಸೂಫಿ ಸಂತರ ಪ್ರವೇಶವನ್ನು ಗಮನಿಸಿದಾಗ ಕ್ರಿ.ಶ. ೭೦ರಲ್ಲಿ ಪ್ರವಾದಿ ಮಹಮ್ಮದ್ ಅವರ ಅನುಯಾಯಿಗಳಲ್ಲಿ ಒಂದು ಗುಂಪಾದ 'ಅಸಹಾಬ್-ಸುಪ್ಪಾ'ದವರು ಮೊದಲಿಗ ರಾಗಿ ಬಂದವರು. ಇವರು ಮೂಲತಃ ಮೆಕ್ಕಾದ ಒಂದು ಕಲ್ಲಿನ ಚೌಕಟ್ಟಿನಲ್ಲಿ ಇರುತ್ತಿದ್ದರು. ಇವರು ಐದು ಬಾರಿ ನಮಾಜ್(ಪ್ರಾರ್ಥನೆ) ಸಲ್ಲಿಸಿದ ನಂತರ ಭಗವಂತನ ಚಿಂತನೆ ಮಾಡುತ್ತಾ ಪ್ರಾರ್ಥನಾಲಯ ವಾದ ಮಸೀದಿಗಳಲ್ಲೇ ಕುಳಿತುಕೊಳ್ಳುತ್ತಿದ್ದರು. ತಪಸ್ಸು ಮತ್ತು ಪ್ರಾರ್ಥನೆಯಲ್ಲೇ ಇವರು ಹೆಚ್ಚು ಸಮಯವನ್ನು ಕಳೆಯುತ್ತಿದ್ದರು. ಮಹಮ್ಮದ್ ಪೈಗಂಬರ್ ಅವರ ಅನುಯಾಯಿಗಳಾದ ಇವರು ಜಗತ್ತಿನ ಬೇರೆ ಬೇರೆ ಭೂಭಾಗಗಳಿಗೆ ಶಾಂತಿಯ ಸಂದೇಶದೊಡನೆ ಪ್ರಚಾರ ಕಾರ್ಯ ವನ್ನು ಕೈಗೊಂಡರು. 'ಅಸಹಾಬ್-ಸುಪ್ಪಾ' ಎನ್ನುವ ಗುಂಪು ಭಾರತದ ಸೂಫಿಗಳಲ್ಲಿ ವಿಶಿಷ್ಟವಾದುದು. ಈ ಗುಂಪಿನ ಶಿಷ್ಯರಲ್ಲಿ ಹಜರತ್ ಶೇಖ್ ಅಬ್ದುಲ್ ಅಜೀಜ್ ಮೆಕ್ತಿ ಎಂಬುವರು ಅವರು ಭಾರತಕ್ಕೆ ಬಂದು ನೆಲೆಸಿದರು. ಮೆಕ್ಕಾದಲ್ಲಿ ಇವರನ್ನು 'ಹಯಾತ್-ಉಲ್-ಬನ್ರ್'(ಸಮುದ್ರದಷ್ಟೆ ಆಯಸ್ಸು ನಿಮ್ಮದಾಗಲಿ) ಎಂಬ ಆಶೀರ್ವಾದದೊಂದಿಗೆ ಖಲಂದರ್ ಎಂಬ ಬಿರುದು ನೀಡಲಾಯಿತು. ಇದರೊಂದಿಗೆ ಗೌರವದಿಂದ ಶಾಂತಿಯ ಸಂದೇಶದೊಂದಿಗೆ ಭಾರತಕ್ಕೆ ಇವರನ್ನು ಕಳುಹಿಸಲಾಯಿತು. 'ಖಲಂದರ್' ಎಂದರೆ ಅಧ್ಯಾತ್ಮ-ಚಕ್ರವರ್ತಿ ಎಂದರ್ಥ.[೫೪]

ಹಜರತ್ ಶೇಖ್ ಅಬ್ದುಲ್ ಅಜೀಜ್ ಮೆಕ್ತಿ ಅವರು ಸಮುದ್ರಯಾನದ ಮೂಲಕವಾಗಿ ಕ್ರಿ.ಶ.೭ನೇ ಶತಮಾನದಲ್ಲಿ ದಕ್ಷಿಣ ಭಾರತಕ್ಕೆ ಬಂದರು. ಅಲ್ಲಿಂದ ಪಾದಯಾತ್ರೆ ಮಾಡುತ್ತಾ

ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಬಾಬಾಬುಡನ್‌ಗಿರಿಗೆ ಬಂದು ಅಲ್ಲಿ ಒಂದು ಗುಹೆಯಲ್ಲಿ ನೆಲೆಸಿದರು. ಇವರ ಧಾರ್ಮಿಕ ಭೋಧನೆಯ ಪ್ರಭಾವದಿಂದ ಸಾವಿರಾರು ಜನರು ಅಲ್ಲಿ ಅವರ ದರ್ಶನಕ್ಕಾಗಿ ಬರತೊಡಗಿದರು. ಭಾರತದ ಮೂಲೆ ಮೂಲೆಗಳಲ್ಲಿದ್ದ ಎಷ್ಟೋ ಪ್ರಸಿದ್ಧ ಸಂತರು, ಅಲ್ಲಿಗೆ ಬರುತ್ತಿದ್ದರು. ಹಜರತ್ ಶೇಖ್ ಫರೀದ್ ಗಂಜ್, ಹಜರತ್ ಶಿಹಾಬುದ್ದೀನ್ ರೂಮಿ, ಹಜರತ್ ಸೈಯದ್ ಖಿಜರ್ ರೂಮಿ, ಹಜರತ್ ನಪತ್ತರ್ ಹಜರತ್ ಮುಖ್ದುಮ್, ಜಾನ್ ಜಹಾನ್‌ಗಡ್, ಶಾಖ್ ಲತೀಫ್ ಬರ್‍ರೀ, ಹಜರತ್ ಸೈಯಿದ್ ಮೀರಾನ್, ಮಖಿಮೂದ್, ಹಜರತ್ ಶೇಖ್ ಪಾಯ್ ದೋಜ್, ಹಜರತ್ ಬಾಬಾ ತಾಜುದ್ದೀನ್ ಮುಂತಾದ ಸಂತರು ದಾದಾ ಹಯಾತ್ ಖಲಂದರ್ ಅವರ ಆಸ್ಥಾನದಲ್ಲಿದ್ದು ಉಪದೇಶ ಸ್ವೀಕರಿಸಿ ಮತ್ತೆ ತಮ್ಮ ತಮ್ಮ ಆಸ್ಥಾನಗಳಿಗೆ ತೆರಳುತ್ತಿದ್ದರು. ಅವರೆಲ್ಲರೂ ಈಗ ಪ್ರಸಿದ್ಧ ಜಾಲಿಯಾಗಳಾಗಿ ಜನರ ಮಧ್ಯೆ ಉಳಿದಿದ್ದಾರೆ. ಹೀಗೆ ಈ ಬಾಬಾಬುಡನ್‌ಗಿರಿ ಗುಹೆಯು ಪ್ರಾಚೀನ ಕಾಲದ ಅತ್ಯಂತ ಮಹತ್ವದ ಆಧ್ಯಾತ್ಮಿಕ ಕೇಂದ್ರವಾಗಿ ಇಂದಿಗೂ ಮುಂದುವರಿಯುತ್ತಿದೆ. ಹೀಗೆ ಕರ್ನಾಟಕ ಚರಿತ್ರೆಯಲ್ಲಿ ಬಾಬಾಬುಡನ್‌ಗಿರಿಯಿಂದ ಸೂಫಿಗಳ ಪ್ರವೇಶವು ಕಂಡುಬಂದಿತು. ಈ ಸೂಫಿ ತತ್ವಗಳ ವೈಶಿಷ್ಟ್ಯತೆಗಳು, ಸರಳ ಸಿದ್ಧಾಂತಗಳು ಹಾಗೂ ಇದನ್ನು ಕಂಡ ಸಂತರ ವಿಶ್ವಕಲ್ಯಾಣ ಮನೋಭಾವ, ತ್ಯಾಗಮಯ ಜೀವನ ಮತ್ತು ಮಾನವ ಜನಾಂಗದ ಉದ್ಧಾರದ ಏಕಮಾತ್ರ ಗುರಿಯನ್ನು ಹೊಂದಿದ್ದರು.[೫೫]

ಈ ಮೇಲಿನ ಸೂಫಿಗಳ ಬೆಳವಣಿಗೆಯ ಹಂತಗಳನ್ನು ಗಮನಿಸಿದಾಗ, ಈ ಸೂಫಿ ಪಂಥವು ವಿವಿಧ ಸ್ವರೂಪದಲ್ಲಿ ದಕ್ಷಿಣ ಭಾರತಕ್ಕೆ ಪ್ರವೇಶ ಪಡೆದರೂ ಅವರ ಪ್ರಮುಖ ಉದ್ದೇಶವು ಇಸ್ಲಾಂ ಧರ್ಮದ ಸಂದೇಶವನ್ನು ಪ್ರಚಾರ ಮಾಡುವುದಾಗಿತ್ತು.[೫೬] ಸೂಫಿಗಳ ಪ್ರಮುಖ ಉದ್ದೇಶ ಇಸ್ಲಾಂ ಧರ್ಮದ ತತ್ವಗಳನ್ನು ಪ್ರಚಾರ ಮಾಡುವುದಾಗಿತ್ತು. ಆದರೆ ಸೂಫಿಯ ವಿವಿಧ ವರ್ಗಗಳು ಈ ತತ್ವಗಳನ್ನು ತಮ್ಮದೇ ಅನುಭಾವ ತತ್ವ ಸಿದ್ಧಾಂತಗಳಲ್ಲಿ ಪ್ರಚಾರವನ್ನು ಮಾಡಿದರು.

ಈ ಮೇಲಿನ ವಿವರಣೆಯನ್ನು ಗಮನಿಸಿದಾಗ ವಿಜಯನಗರ ಕಾಲದಲ್ಲಿ ಕಂಡುಬರುವ ಸೂಫಿಗಳು ವಿಜಯನಗರ ಸ್ಥಾಪನೆ ಪೂರ್ವದಲ್ಲೇ ವಿಭಿನ್ನ ಹಂತಗಳಲ್ಲಿ ತಮ್ಮ ಅಸ್ಮಿತೆಯನ್ನು ಇಲ್ಲಿ ಪಡೆದುಕೊಂಡಿದ್ದರು. ಕರಾವಳಿ ತೀರ ಪ್ರದೇಶದಲ್ಲಿ ಸೂಫಿಗಳು ಸ್ಥಳೀಯ ಸಮುದಾಯಗಳ ಜೊತೆಗೆ ಸ್ವತಂತ್ರವಾಗಿ ಜೀವಿಸುತ್ತಿದ್ದರು. ಉಳಿದಂತೆ ದಖ್ಖನ್ ಕಡೆ ಗಮನಿಸಿದಾಗ ರಾಜಕೀಯ ಹಿತಾಸಕ್ತಿಗಳ ಹಿನ್ನೆಲೆಯಲ್ಲಿ ಪ್ರವೇಶ ಪಡೆದು ಚೆದುರಿಹೋದರು. ಬಹಮನಿ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಈ ಸೂಫಿ ವರ್ಗವು ಅತಿ ತೀವ್ರವಾಗಿ ಬೆಳವಣಿಗೆಯಾಯಿತು. ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಸಮಾಜದ ಚರಿತ್ರೆಯನ್ನು ಅಧ್ಯಯನ ಮಾಡಬೇಕಾದರೆ ಬಹಮನಿ ಸಾಮ್ರಾಜ್ಯದ ಸಾಮಾಜಿಕ ಸ್ಥಿತಿಯನ್ನು ಮುಖ್ಯವಾಗಿ ಅರ್ಥ ಮಾಡಿಕೊಳ್ಳಬೇಕು. ಬಹಮನಿ ರಾಜ್ಯದಲ್ಲಿನ ಮುಸ್ಲಿಂ ಸಮುದಾಯಗಳೇ ವಿಜಯನಗರದಲ್ಲಿಯೂ ಕಂಡುಬರುತ್ತವೆ. ಈ ಎರಡು ರಾಜ್ಯಗಳಲ್ಲಿ ಕಂಡುಬರುವ ಸಾಮಾಜಿಕ ಚಲನೆಯನ್ನು ನಾವು ಮುಖ್ಯವಾಗಿ ಗುರುತಿಸಬೇಕು.

ಹಾಗಾಗಿ ಬಹಮನಿ ಪ್ರದೇಶದಲ್ಲಿ ಕಂಡುಬರುವ ಮುಸ್ಲಿಮರು ಸಹ ವಿಜಯನಗರದಲ್ಲಿಯೂ ಕಂಡುಬರುತ್ತಿದ್ದರು. ಆ ಹಿನ್ನೆಲೆಯಲ್ಲಿ ವಿಜಯನಗರ ರಾಜಧಾನಿಯಲ್ಲಿ ಕಂಡುಬರುವ ಸೂಫಿ ಗೋರಿಗಳ ಅವಶೇಷಗಳ ಅಧ್ಯಯನದಿಂದ ಸೂಫಿ ವರ್ಗವನ್ನು ಇಲ್ಲಿ ಗುರುತಿಸಬಹುದು. ವಿಜಯನಗರದಲ್ಲಿ ಕಂಡುಬರುವ ಸೂಫಿಗಳು ಉತ್ತರ ಭಾರತದ ಸೂಫಿಗಳ ಮೂಲವನ್ನು ಹೊಂದಿದ್ದರು. ವಿಜಯನಗರ ಪಟ್ಟಣದಲ್ಲಿ ಸೂಫಿ ದರ್ಗಾಗಳು, ಸ್ಮಾರಕಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇವೆಲ್ಲವು ಉತ್ತರದ ಮೂಲವನ್ನು ಪಡೆದಂತವಾಗಿವೆ. ಹಾಗಾಗಿ ವಿಜಯನಗರ ಸಾಮ್ರಾಜ್ಯದ ಈ ಸೂಫಿಗಳು ನೇರವಾಗಿ ಬಹಮನಿ ಸೂಫಿಗಳ ಪ್ರಭಾವಕ್ಕೆ ಒಳಗಾಗಿದ್ದರು ಎಂದು ಹೇಳಬಹುದು. ಬಹಮನಿಯಲ್ಲಿ ಕಂಡುಬರುವ ಸೂಫಿ ವರ್ಗವೇ ವಿಜಯನಗರ ಪಟ್ಟಣದ ಪ್ರದೇಶದಲ್ಲಿಯೂ ಸಮಕಾಲೀನವಾಗಿ ಕಂಡುಬರುತ್ತವೆ. ಅವುಗಳಲ್ಲಿ ಇಲ್ಲಿ ಮುಖ್ಯವಾಗಿ ಚಿಸ್ತಿ, ಖಾದ್ರಿಯಾ ಪಂಥಗಳು ದಕ್ಷಿಣ ಭಾರತದಾದ್ಯಂತ ಹರಡಿಕೊಂಡವು.[೩೭] ವಿಜಯನಗರ ಸಾಮ್ರಾಜ್ಯದ ವಿವಿಧ ಪ್ರದೇಶಗಳಲ್ಲಿ ಈ ಸೂಫಿ ಪಂಥಗಳೇ ತಮ್ಮ ತತ್ವಸಿದ್ಧಾಂತಗಳನ್ನು ಪ್ರಚಾರ ಪಡಿಸಿದರು. ವಿಜಯನಗರ ಕಾಲಾವಧಿಯಲ್ಲಿ ಕಂಡುಬರುವ ಸೂಫಿಗಳ ವಿವರಣೆಯನ್ನು ಈ ಮುಂದಿನಂತೆ ವಿವರಿಸಲಾಗಿದೆ.

ವಿಜಯನಗರದಲ್ಲಿನ ಸೂಫಿ ವರ್ಗ

ಬಹಮನಿ ಸಾಮ್ರಾಜ್ಯ ಸ್ಥಾಪನೆ ಪೂರ್ವ ಹಾಗೂ ನಂತರದ ಅವಧಿಯಲ್ಲಿ ಸೂಫಿ ವರ್ಗವು ವಿಜಯನಗರ ರಾಜಧಾನಿ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶದಾದ್ಯಂತ ತನ್ನ ಪ್ರಭಾವವನ್ನು ಬೀರಿತ್ತು. ಈ ಸೂಫಿ ಸಂತರ ಬಗೆಗೆ ಪ್ರವಾಸಿ ಕಥನಗಳಿಂದ ಅಲ್ಪ ಮಾಹಿತಿ ಕಂಡುಬಂದರೂ, ಅವರ ಇರುವಿಕೆ ಬಗೆಗೆ ವಿಜಯನಗರ ಸಾಮ್ರಾಜ್ಯದ ಹಂಪಿ ಪ್ರದೇಶದಲ್ಲಿ ಕಂಡುಬರುವ ಸ್ಮಾರಕಾವಶೇಷಗಳು ಇವುಗಳಿಗೆ ಸಾಕ್ಷಿಯಾಗಿವೆ. ಇಲ್ಲಿ ಸಿಗುವ ಗೋರಿ ಕಟ್ಟಡಗಳು, ಸೂಫಿ ಸಂತರ ದರ್ಗಾಗಳು ಪ್ರಮುಖವಾದಂತಹ ಆಧಾರವಾಗಿದ್ದು, ವಿಜಯನಗರ ಸಾಮಾಜಿಕ ವ್ಯವಸ್ಥೆಯ ಮೇಲೆ ಇವರ ಪ್ರಭಾವವನ್ನು ಗುರುತಿಸಬಹುದು. ಡೋಮಿಂಗೋ ಪಾಯಸ್ ಉಲ್ಲೇಖಿಸುವಂತೆ ಪಟ್ಟಣದ ಕೊನೆಯಲ್ಲಿ ಮೂರರ(ಮುಸ್ಲಿಂ) ವಾಸಸ್ಥಾನವಿದೆ ಎಂದು ಉಲ್ಲೇಖಿಸಿದ್ದಾನೆ.[೩೮] ಹಾಗಾಗಿ ಈ ಪ್ರದೇಶದಲ್ಲಿ ಸೂಫಿಗಳ ಗೋರಿ ಕಟ್ಟಡಗಳು ಇವೆ. ಅವುಗಳಲ್ಲಿ ಪ್ರಮುಖವಾಗಿ ಕಂಡುಬರುವ ಗೋರಿ ಕಟ್ಟಡವೆಂದರೆ ಅದು ಹಜರತ್ ಸೇರ್ ಷಾ ಖಾದರಿ ಎಂಬ ಮುಸ್ಲಿಂ ಸಂತನ ಸಮಾಧಿಯಾಗಿದೆ. ಇದು ಅಹಮದ್ ಖಾನ್ ಧರ್ಮ ಶಾಲೆಯ ಹಿಂಭಾಗದ ನೈರುತ್ಯ ದಿಕ್ಕಿನ ಕಡೆ ಕಂಡುಬರುತ್ತದೆ. ಇದರ ಹಿನ್ನೆಲೆಯಲ್ಲಿ ಈ ಸಂತ ಇಲ್ಲಿರುವ ಗುಹೆಯಲ್ಲಿ ವಾಸವಾಗಿದ್ದನೆಂದು ಗುರುತಿಸಬಹುದು. ಹಾಗೆಯೇ ಅಹಮದ್‌ಖಾನ್ ಧರ್ಮಶಾಲೆಯ ಈಶಾನ್ಯ ದಿಕ್ಕಿನ ಕಡೆ ಇನ್ನೊಂದು ಸೂಫಿ ಸಂತನ ಸಮಾಧಿಯಾದ 'ದಾವುರ್‌ನಲಿ' ದರ್ಗಾವು ಕಂಡುಬರುತ್ತದೆ. ಇನ್ನೂ ಈ ಸೂಫಿಗಳ ಸಮಾಧಿ ಕಟ್ಟಡಗಳು ರಾಜಧಾನಿಯ ಹಲವು ಪ್ರಮುಖ ಭಾಗಗಳಲ್ಲಿಯೂ ಸಹ ಕಂಡುಬರುತ್ತದೆ. ತುಂಗಭದ್ರಾ ನದಿಯ ಬಲದಂಡೆಯ ಮೇಲೆ ವಿಜಯವಿಠ್ಠಲನ ಗುಡಿಯ ಹಿಂಭಾಗದಲ್ಲಿ ಹೊಳೆ ಹೊನ್ನೂರು ಸ್ವಾಮಿ ದರ್ಗಾ ಕಂಡುಬರುತ್ತದೆ.

ವಿಜಯನಗರ ಸಾಮ್ರಾಜ್ಯದ ಹಂಪಿ ಪರಿಸರದಲ್ಲಿನ ಕಮಲಾಪುರದಿಂದ ಹೊಸಪೇಟೆ ನಗರಕ್ಕೆ ಹೋಗುವಾಗ ಅನಂತಶಯನ ಗುಡಿಯ ಹಿಂಬದಿಯಲ್ಲಿಯೂ ಎರಡು ಪ್ರಮುಖ ಗೋರಿ ಕಟ್ಟಡಗಳಿವೆ. ಆದರೆ ಈ ಗೋರಿಗಳು ಯಾರದೆಂಬುದು ತಿಳಿಯಲು ಸಾಧ್ಯವಾಗಿಲ್ಲ. ವಿಠಲಪುರದಿಂದ ಮಾಲ್ಯವಂತನ ಗುಡಿಗೆ ಹೋಗುವ ಹಾದಿಯಲ್ಲಿ ನಡುವೆ ಹರಿಶಂಕರನ ಬಾಗಿಲದ ಮುಂದೆ ಅಥವಾ ಶೃಂಗಾರದ ಹೆಬ್ಬಾಗಿಲಿನ ಮುಂದೆ ಈಶಾನ್ಯ ಗುಡ್ಡದ ಮೇಲೆ ಹಲವು ಮುಸ್ಲಿಂ ಗೋರಿಗಳಿವೆ. ಇಲ್ಲಿನ ಗೋರಿಯನ್ನು ಜನಸಾಮಾನ್ಯರು ಬೇಬಿ ಫಾತೀಮಾ ಗೋರಿ ಎಂದು ಕರೆಯುತ್ತಾರೆ. ಈ ಪ್ರದೇಶಕ್ಕೆ ಗೋರಿ ಕೆಳಗಣ ಗ್ರಾಮವೆಂದು ಸಹ ಕರೆಯುತ್ತಾರೆ. ಗೋರಿಗಳ ಪಕ್ಕದಲ್ಲಿ ಹೆಬ್ಬಂಡೆಗಳ ದೊಡ್ಡ ಗುಡ್ಡವಿದೆ. ಈ ಬಂಡೆಗಳನ್ನು ಏರಲು ಅನುಕೂಲವಾಗುವಂತೆ ಸಾಧಾರಣ ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಇವುಗಳನ್ನು ಏರಿಕೊಂಡು ಮೇಲೆ ಹೋದರೆ ವಿಶಾಲವಾದ ಒಂದು ಹೆಬ್ಬಂಡೆ ಇದೆ. ಇದರ ತುದಿಯಲ್ಲಿ ಕಲ್ಲಿನ ಮಂಟಪವಿದೆ. ಈ ಬಂಡೆಯ ಮೇಲೆ ಪೂರ್ವ ಪಶ್ಚಿಮವಾಗಿರುವಂತೆ ಸುಮಾರು ೮ ಅಡಿ ಉದ್ದ, ೩ ಅಡಿ ಅಗಲ ಅಳತೆಯ ಬಲಗಾಲಿನ ಪಾದದ ಗುರುತನ್ನು ತಗ್ಗಾಗಿ ಕೆತ್ತಲಾಗಿದೆ. ಇದಕ್ಕೆ ಮುಸ್ಲಿಂ ಬಾಂಧವರು 'ಅದಮ್ ಕದಮ್' ಎಂದು ಕರೆಯುತ್ತಾರೆ. ಪಾದದ ನಡುವೆ ಹೂವಿನ ರೇಖಾಚಿತ್ರವನ್ನು ಕೊರೆಯಲಾಗಿದೆ. ಈ ಹೆಜ್ಜೆಗುರುತು ಸಹ ಸಮೂಹವೊಂದರ ಮೂಲವನ್ನು ಹೇಳುವಂತಹದ್ದೇ ಆಗಿದೆ. ಆದಮ್ ಎಂದರೆ ಆದಿ, ಮೂಲ, ಮೊದಲು, ಆರಂಭ ಎಂಬುದಾಗಿಯೂ 'ಕದಮ್' ಎಂಬುದು ಹೆಜ್ಜೆ, ಪಾದ, ಎಂಬುದಾಗಿಯೂ ತಿಳಿಸುತ್ತದೆ. ಹೀಗಾಗಿ ಅದಮ್ ಕದಮ್ ಎಂದರೆ ಜನಸಾಮಾನ್ಯರ ಪ್ರಕಾರ ಮುಸ್ಲಿಮರ ಲಕ್ಷದ ಎಂಬತ್ತು ಸಾವಿರ ಶರಣರಲ್ಲಿ ಮೊದಲು ಶರಣರ ಹೆಜ್ಜೆಗುರುತು ಎಂದು ಹೇಳುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಜನಪದ ಹೇಳಿಕೆಯೊಂದು ಹೀಗಿದೆ. ಅಲ್ಲಾ ಮೊದಲು ಒಂದು ಮಣ್ಣಿನ ಗೊಂಬೆ ಮಾಡಿ ಅದರ ಕಿವಿಯಲ್ಲಿ ಊದಿದ. ಆಗ ಆ ಗೊಂಬೆಗೆ ಜೀವ ಬಂದು ಸೀನು ಬಂತು. ನಂತರ 'ಅಲ್ಲಾವುದಿಲಲ್ಲಾ' ಎಂದು ದೇವರನ್ನು ನೆನೆಯಿತು. ಇವರೇ ಮುಸ್ಲಿಂ ಧರ್ಮದ ಮೊದಲ ಗುರುಗಳು ಹಾಗೂ ಶರಣರು. ಅವರ ಹೆಜ್ಜೆಗುರುತೇ 'ಅದಮ್ ಕದಮ್' ಎಂಬ ಐತಿಹ್ಯಗಳಿವೆ.[೫೯]

ಕರಾವಳಿ ಪ್ರದೇಶದಲ್ಲಿನ ಸೂಫಿ ವರ್ಗ

ಕರಾವಳಿ ಪ್ರದೇಶಗಳಾದ ಮಲಬಾರ್, ಕೋರಮಂಡಲ ತೀರಪ್ರದೇಶದಾದ್ಯಂತ ಸೂಫಿಗಳ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಕ್ರಿ.ಶ. ೭೮೮ರಲ್ಲೇ ಗೋರಿ ಕಟ್ಟಡಗಳು ನಿರ್ಮಾಣವಾದವು. ಈ ಸೂಫಿಗಳ ಆರಾಧನೆಯು ವಿಜಯನಗರ ಹಾಗೂ ನಂತರದ ಕಾಲಘಟ್ಟದಲ್ಲಿಯೂ ಕಂಡುಬರುತ್ತದೆ. ಅವುಗಳಲ್ಲಿ ಕಾಸರಗೋಡಿನ ಮಲ್ಲಿಕ್-ದಿನಾರ್ ಗೋರಿ ಕಟ್ಟಡ ಪ್ರಮುಖವಾದುದು. ಕ್ರಿ.ಶ. ೭೪೯ರಲ್ಲಿ ಇಲ್ಲಿಗೆ ಬಂದಿದ್ದ ಈ ಸೂಫಿಯಾ ಸುಹಾವರ್ದಿ ಮಿಷನರಿಯಾಗಿ ಧಾರ್ಮಿಕ ಪ್ರಚಾರ ಕಾರ್ಯದಲ್ಲಿ ತೊಡಗಿದ್ದನು.[೬೦] ಮಂಗಳೂರಿನ ಉಳ್ಳಾಲದಲ್ಲಿ ಸಯ್ಯದ್ ಶರೀಫುಲ್ ಮದನೀಯ ಗೋರಿಯು ಸಹ ಕಂಡುಬರುತ್ತದೆ.[೬೧] ಈ ಸೂಫಿ ಅನುಭಾವ ಪಂಥದ ಅನುಯಾಯಿಗಳು ವಿಜಯನಗರ ಕಾಲಾವಧಿಯಲ್ಲಿಯೂ ಮುಂದುವರಿದರು. ಈ ಗೋರಿ ಕಟ್ಟಡಗಳು ದರ್ಗಾಗಳಾಗಿ ಸ್ಥಳೀಯ

ಜನರ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರಿದವು. ಇದೇ ಸಂದರ್ಭದಲ್ಲಿ ಈ ಸೂಫಿಗಳು ಹಾಗೂ ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ತಿಳಿಸುವ ಪ್ರವಾಸಿಗರ ಉಲ್ಲೇಖಗಳು ಸಹ ಸ್ಪಷ್ಟ ಮಾಹಿತಿಯನ್ನು ನೀಡುತ್ತವೆ. ಇಬ್–ನೆ–ಬತೂತ ಕ್ರಿ.ಶ. ೧೩೪೨ರಲ್ಲಿ ದಕ್ಷಿಣ ಕನ್ನಡಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಂಗಳೂರಿನ ಮುಸ್ಲಿಂ ಜನಜೀವನದ ಬಗ್ಗೆ ಮಾಹಿತಿ ನೀಡುತ್ತಾನೆ. 'ಮೂರು ದಿನಗಳ ಕಾಲ ನಾವು ಮಂಗಳೂರಿನಲ್ಲಿ ತಂಗಿದ್ದವು. ಅದು ದೊಡ್ಡ ಪಟ್ಟಣ. ಅದು ಮಲಬಾರ್ ದೇಶದ ಅತಿ ದೊಡ್ಡ 'ದುಂಬ ಅಳಿವೆ' ಎಂದು ಹೆಸರಾದ ಅಳಿವೆಯ ಮೇಲೆ ನೆಲೆಸಿದೆ. ಈ ಪಟ್ಟಣದಲ್ಲಿ ಫಾರಸ್ ಮತ್ತು ಯಮನಿನ ದೊಡ್ಡ ವ್ಯಾಪಾರಿಗಳು ಇಳಿಯುತ್ತಾರೆ. ಇಲ್ಲಿ ನಾಲ್ಕು ಸಾವಿರ ಮುಸ್ಲಿಮರು ಇದ್ದಾರೆ. ಅವರು ಪಟ್ಟಣದ ಕಿನಾರೆಯಲ್ಲಿ ಸುಖದಿಂದ ನೆಲೆಸಿರುವರು. ಅವರ ಮತ್ತು ಊರವರ ಮಧ್ಯೆ ಜಗಳವುಂಟಾದಾಗಲೆಲ್ಲಾ ರಾಜನು ಅವರೊಳಗೆ ರಾಜಿ ಮಾಡಿಸುತ್ತಿದ್ದನು. ಇದಕ್ಕೆ ಮುಖ್ಯ ಕಾರಣ, ಆತನಿಗೆ ವ್ಯಾಪಾರಿಗಳ ಅವಶ್ಯಕತೆಯಿತ್ತು. ಆ ಪಟ್ಟಣದಲ್ಲಿ ಯೋಗ್ಯವಂತರಾದ ಶಾಫಿ ಮದ್‌ಹಬಿನ(ಪಂಥ) ಖಾಜಿಯು ಇದ್ದರು. ಅವರ ಹೆಸರು ಬದ್ರುದ್ದೀನರು–ವು–ಅಬರೀ' ಎಂದಾಗಿತ್ತು. ಅವರು ಹಿರಿಯ ವಿದ್ವಾಂಸರಾಗಿದ್ದರು. ಅವರು ನಮ್ಮ ಬಳಿಗೆ ಹಡಗಿನಲ್ಲಿ ಬಂದು ಅವರ ಪಟ್ಟಣದಲ್ಲಿ ಇಳಿಯಲು ನಮ್ಮನ್ನು ಪ್ರೇರೇಪಿಸಿದರು. ರಾಜನು ತನ್ನ ಮಗನನ್ನು ನಮ್ಮ ಹಡಗಿನಲ್ಲಿ(ಜಾಮಿನಾಗಿ) ನಿಲ್ಲಲು ಕಳುಹಿಸುವ ತನಕ ನಾವು ಬರಲಾರೆವು. ಬಾರಕೂರಿನ ರಾಜನು ತನ್ನ ಮಗನನ್ನು ನಮ್ಮಲ್ಲಿಗೆ ಕಳುಹಿಸಿದನು. ಅದನ್ನನುಸರಿಸಿ ನಾವು ಹಡಗಿನಿಂದ ಇಳಿದೆವು. ನಮಗೆ ತುಂಬಾ ಅತಿಥಿ ಸತ್ಕಾರ ಮಾಡಿದರು. ಅವರ ಬಳಿ ನಾವು ಮೂರು ದಿನ ಉಳಿದುಕೊಂಡು 'ಹೇಲಿ' ಪಟ್ಟಣಕ್ಕೆ ಪ್ರಯಾಣ ಬೆಳೆಸಿದೆವು"[೬೨] ಎಂದು ಉಲ್ಲೇಖಿಸಿದ್ದಾನೆ. ಈ ವಿವರಣೆಯಿಂದ ವಿಜಯನಗರ ಅವಧಿಯಲ್ಲಿ ಸೂಫಿಗಳ ಪ್ರಭಾವವು ಕಂಡುಬರುತ್ತದೆ.

ಅಬ್ದುಲ್ ರಜಾಕ್‌ನ ಪ್ರವಾಸಿ ಕಥನಗಳು ಸಹ ಕರಾವಳಿ ಕರ್ನಾಟಕದಲ್ಲಿನ ಮುಸ್ಲಿಂ ಸೂಫಿಗಳ ಬಗೆಗೆ ಮಾಹಿತಿ ನೀಡುತ್ತವೆ. ೧೪೪೩ರಲ್ಲಿ ವಿಜಯನಗರದಿಂದ ಹಿಂದಿರುಗುವ ಸಂದರ್ಭದಲ್ಲಿ ಮಂಗಳೂರಿನಲ್ಲಿ ಇದ್ದಂತಹ ಸೂಫಿ ಸಂತನ ಇರುವಿಕೆ ಬಗೆಗೆ ಮಾಹಿತಿ ನೀಡಿದ್ದಾನೆ. ಕ್ರಿ.ಶ. ೧೪೪೩ರಲ್ಲಿ ರಜಾಕ್ ಮಂಗಳೂರಿನಲ್ಲಿ ನೆಲೆಸಿದ್ದ ಸೂಫಿ ಸಂತನಾದ ಷರೀಫ್ ಎಮಿರ್‌ಸೈಯದ್ ಅಲ್ಲಾವುದ್ದೀನ್ ಮಸ್ಸಡಿ' ಎಂಬ ಯೋಗಿಯನ್ನು ಭೇಟಿ ಮಾಡಿದ್ದನು. ಈ ಸಂತನಿಗೆ ಹಿಂದೂ–ಮುಸ್ಲಿಂ ಸಮುದಾಯಗಳು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಪ್ರಸ್ತಾಪಿಸಿದ್ದಾನೆ.[೬೩]

ಅಬ್ದುಲ್ ರಜಾಕನು ರಾಯಭಾರಿಯಾಗಿ ವಿಜಯನಗರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಇಲ್ಲಿ ತಾನು ಕಂಡ ಹಾಗೂ ಅನುಭವಿಸಿದ ವಿವರಗಳ ದಾಖಲೆ ನೀಡಿದ್ದಾನೆ. ಆದರೆ ಅಬ್ದುಲ್ ರಜಾಕ್‌ನ ಕಥನವನ್ನು ಅವಲೋಕಿಸಿದಾಗ ರಜಾಕ್ ಒಬ್ಬ ಪ್ರವಾಸಿಗ, ರಾಯಭಾರಿ ಅಲ್ಲದೇ ಒಬ್ಬ ಸೂಫಿಯು ಆಗಿದ್ದನು. ಅವನ ಅನುಭವಗಳ ಮೂಲಕ ಅಂದಿನ ಧಾರ್ಮಿಕ, ಸಾಮಾಜಿಕ, ರಾಜಕೀಯ ಹಾಗೂ ಸೌಹಾರ್ದತೆಯ ವಿವರಗಳನ್ನು ಸೂಕ್ಷ್ಮವಾಗಿ ಅವಲೋಕಿಸಬಹುದು. ರಜಾಕನು ತನ್ನ ರಾಯಭಾರತ್ವವನ್ನು ಪೂರ್ಣಗೊಳಿಸಿ ವಾಪಸ್ಸು ಪರ್ಶಿಯಾಗೆ ತಿರುಗಿದ ನಂತರ ಮಿರ್ಜ್ಸ್ ಷಾ

ರುಖ್‌ವೆಂಬ ಮುಸಲ್ಮಾನನು ೧೪೬೨ರಲ್ಲಿ ಇವರನ್ನು ಮುಸ್ಲಿಂ ಮಠ(ಸಮೂಹ)ದ ಷೇಕನಾಗಿ ಚುನಾಯಿಸಿದನು. ಇದನ್ನು ನಾವು ವಿಮರ್ಶಿಸಿದಾಗ, ವಿಜಯನಗರವನ್ನು ಪ್ರವಾಸಿಗನಾಗಿ, ರಾಯಭಾರಿಯಾಗಿ ಹಾಗೂ ಸೂಫಿ ಸಂತನಾಗಿ ಸಂಚರಿಸಿ, ಅಂದಿನ ಸಾಮಾಜಿಕ ವ್ಯವಸ್ಥೆ ಬಗೆಗೆ ದಾಖಲಿದ ರಜಾಕ್‌ನ ವ್ಯಕ್ತಿತ್ವ ಹಾಗೂ ಆಲೋಚನೆಗಳು ಬಹಳ ಭಿನ್ನವಾಗಿ ಹಾಗೂ ಅಷ್ಟೇ ಮಹತ್ವದ್ದಾಗಿ ಕಂಡುಬರುತ್ತವೆ.

ಹೀಗೆ ಮುಸ್ಲಿಂ ಸಮಾಜವು ವಿಜಯನಗರದ ಆಳ್ವಿಕೆಯ ಅವಧಿಯಲ್ಲಿ ತನ್ನದಲ್ಲದ ಸಾಮಾಜಿಕ ವ್ಯವಸ್ಥೆಯೊಳಗೆ ಪ್ರವೇಶವನ್ನು ಪಡೆದುಕೊಂಡು ಸ್ಥಳೀಯವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂತು. ಈ ಎಲ್ಲಾ ಹಿನ್ನೆಲೆಯಿಂದಲೇ ಭಾರತವು ಬಹುಸಾಂಸ್ಕೃತಿಕ ನಾಡಾಗಿ ಗುರುತಿಸಿಕೊಳ್ಳಲು ಸಾಧ್ಯವಾಯಿತು.

ವಿಜಯನಗರ ಸಾಮ್ರಾಜ್ಯದಲ್ಲಿ ವಾಸವಾಗಿದ್ದ ವಿವಿಧ ಧರ್ಮಗಳ ನಡುವಿನ ಸಂಬಂಧವನ್ನು ತಿಳಿಸುವ ಹಲವು ಶಾಸನಗಳು ಲಭ್ಯವಾಗಿವೆ. ಅದರಲ್ಲಿ ಹಿಂದೂ ಮತ್ತು ಮುಸ್ಲಿಮರ ನಡುವೆ ಸೌಹಾರ್ದ ಸಂಬಂಧವನ್ನು ತಿಳಿಸುವ ಕ್ರಿ.ಶ. ೧೪೨೦ರಿಂದ ೧೫೦೫ರ ನಡುವೆ ದೊರೆತ ಶಾಸನಗಳು ಹಂಪಿ ಪರಿಸರದಲ್ಲಿ ಲಭ್ಯವಾಗಿವೆ.

ಕ್ರಿ.ಶ. ೧೪೨೦ರ ಶಾಸನವು "ಮೀಯಾರಾಹುತನಿಗೆ ಪುಣ್ಯವಾಗಬೇಕೆಂದು 'ಬಸವ' ಎಂಬ ನಾಯಕನು 'ಗೋರಿ' ಮತ್ತು ಮಸೀದಿಯನ್ನು ಕಟ್ಟಿಸಿದ"ನೆಂದು ಶಾಸನದಲ್ಲಿ ಉಲ್ಲೇಖವಿದೆ.[೬೪] ವಿಜಯನಗರ ಆಳ್ವಿಕೆಯ ಸಂದರ್ಭದಲ್ಲಿ, ಅಲ್ಲಿ ನೆಲೆಸಿದಂತಹ ಹಿಂದೂ-ಮುಸ್ಲಿಮರ ನಡುವೆ ಉತ್ತಮ ಸಂಬಂಧವಿತ್ತೆಂದು ಮತ್ತು ಧಾರ್ಮಿಕ ತಾರತಮ್ಯವಿರಲಿಲ್ಲವೆಂದು ಈ ಶಾಸನದಿಂದ ತಿಳಿಯಬಹುದು. ವಿಜಯನಗರದ ಸ್ಥಾಪನೆಗೆ ಕಾರಣರಾದ ಸಂಗಮದ ಅರಸರು ಧಾರ್ಮಿಕ ಸಂಘರ್ಷಗಳಿಗೆ ಪ್ರೋತ್ಸಾಹಿಸಲಿಲ್ಲ. ಇದಕ್ಕೆ ಉದಾಹರಣೆ ಶ್ರವಣಬೆಳಗೊಳ ಶಾಸನ. ಈ ಶಾಸನದಲ್ಲಿನ ಉಲ್ಲೇಖದಂತೆ ಜೈನರು ಮತ್ತು ವೈಷ್ಣವರ ನಡುವೆ ಭಿನ್ನಾಭಿಪ್ರಾಯ ಉದ್ಭವಿಸಿತ್ತು. ಆಗ ಬುಕ್ಕರಾಯ ಇವರ ಸಮಸ್ಯೆಯನ್ನು ಯಾರ ಪರ ವಹಿಸದೆ ಇಬ್ಬರಿಗೂ ಅನುಕೂಲವಾಗುವಂತೆ ಪರಿಹಾರವನ್ನು ನೀಡಿದನು. ಸಂಗಮದ ಅರಸರಿಗೆ ಸಾಮ್ರಾಜ್ಯದ ಬಲಿಷ್ಠತೆಗೆ ಸಮಾಜದ ಎಲ್ಲಾ ವರ್ಗಗಳ, ಪಂಥಗಳ ಜನರ ಸಹಕಾರ ಅಗತ್ಯವಾಗಿತ್ತು ಮತ್ತು ಅವಶ್ಯಕವಾಗಿತ್ತು.[೬೫] ಏಕೆಂದರೆ ಇವರ ಮುಖ್ಯ ಉದ್ದೇಶ ಆಂತರಿಕವಾಗಿ ರಾಜ್ಯದ ರಾಜಕೀಯ ಏಕತೆಗೆ ಮತ್ತು ಭದ್ರತೆಗೆ ಸಮಾಜದಲ್ಲಿ ಸಹಬಾಳ್ವೆ ಮತ್ತು ಶಾಂತಿಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದರು. ಹಾಗಾಗಿ ಇವರು ರಾಜ್ಯದಲ್ಲಿನ ಎಲ್ಲಾ ವರ್ಗದ ಜನರ ಬೆಂಬಲ ಮತ್ತು ಸ್ಥಿತಿಸ್ಥಾಪಕತ್ವವನ್ನು ಕಾಪಾಡುತ್ತಿದ್ದರು. ವಿಜಯನಗರದ ಅರಸರು ಸಾಮ್ರಾಜ್ಯದ ಭದ್ರತೆಗೆ ಅಗತ್ಯ ಕ್ರಮ ಕೈಗೊಂಡರು. ವಿಜಯನಗರ ಸೈನಿಕರ ಸಾಮರ್ಥ್ಯ ರಾಜ್ಯದ ಭದ್ರತೆಯನ್ನು ಅವಲಂಬಿಸಿತ್ತು. ಎರಡನೆಯ ದೇವರಾಯನ ಆಳ್ವಿಕೆಯ ಕಾಲದಲ್ಲಿ, ಉತ್ತರ ಭಾರತದ ಸುಲ್ತಾನರ ದಾಳಿಗಳಿಂದ ಎರಡನೆಯ ದೇವರಾಯ ಪದೇ ಪದೇ ಸೋಲನ್ನು

ಅನುಭವಿಸುತ್ತಿದ್ದನು. ಸುಲ್ತಾನರ ಸೈನಿಕರ ಸಾಮರ್ಥ್ಯಕ್ಕೆ ಎದುರಿಸುವ ಸರಿಸಮಾನವಾದ, ಬಲಿಷ್ಠವಾದ ಸೈನಿಕರ ಅಗತ್ಯತೆ ಇತ್ತು. ಮುಸ್ಲಿಂ ಸೈನಿಕರು ಬಿಲ್ಲುವಿದ್ಯೆಯಲ್ಲಿ ನಿಪುಣರಾಗಿದ್ದರು. ಹಾಗಾಗಿ ಸುಮಾರು ೨೦೦೦ ಸಾವಿರ ಮುಸ್ಲಿಂ ಸೈನಿಕರನ್ನು ತನ್ನ ಸೈನ್ಯಕ್ಕೆ ನೇಮಿಸಿಕೊಂಡನು. ವಿಜಯನಗರದ ಅರಸರು ರಾಜ್ಯದಲ್ಲಿ ಧರ್ಮಕ್ಕೆ ಮಹತ್ವ ನೀಡದೇ ಸಾಮ್ರಾಜ್ಯದ ಭದ್ರತೆ ಮತ್ತು ವಿಸ್ತರಣೆಗೆ ಮಹತ್ವ ನೀಡಿದ್ದರು. ರಾಜ್ಯದ ಹಿತದೃಷ್ಟಿಯಿಂದ ದೇವರಾಯ ಮುಸ್ಲಿಂ ಸೈನಿಕರನ್ನು ನೇಮಿಸಿಕೊಂಡನು. ಇವರಿಗೆ ವಾಸಿಸಲು ಪ್ರತ್ಯೇಕ ನೆಲೆಯನ್ನು ಕೊಟ್ಟನು. ಇವರಿಗೆ ರಾಜ್ಯದಲ್ಲಿ ಎಲ್ಲಾ ಸಮಾನ ಅವಕಾಶವನ್ನು, ಸ್ವತಂತ್ರ ಜೀವನವನ್ನು ನಡೆಸುವ ಅವಕಾಶವನ್ನು ನೀಡಿದ್ದನು. ಹಿಂದೂ ಸಂಸ್ಕೃತಿ ಪ್ರಾಮುಖ್ಯತೆ ಪಡೆದಷ್ಟು ಈ ಕಾಲದಲ್ಲಿ ಮುಸ್ಲಿಂ ಸಂಸ್ಕೃತಿಯೂ ಕೂಡ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಮುಸ್ಲಿಂ ಸಂಸ್ಕೃತಿಗೆ ಸಂಬಂಧಿಸಿದಂತೆ ಹಂಪಿ ಪರಿಸರದಲ್ಲಿ ದೊರೆಕಿದ ಶಾಸನಗಳು ಹಿಂದೂ ಪಂಚಾಂಗದ ಮಾದರಿಯಲ್ಲೇ ರಚಿತವಾಗಿವೆ. ಹಿಂದೂ ಶಾಸನದಲ್ಲಿ ಕಂಡುಬರುವಂತೆ ಶಪಿಸಿರುವ ಉಲ್ಲೇಖಗಳು ಇವರ ಶಾಸನದಲ್ಲಿ ಗಮನಾರ್ಹವಾಗಿವೆ.

ಕ್ರಿ.ಶ. ೧೪೭೨ರ ಹಂಪಿ ಶಾಸನದಲ್ಲಿ 'ಸಖಲಾದಿರಾಹುತನು ಗುಮ್ಮಟ ಕಟ್ಟಿಸಿದ್ದು, ಅದರ ಒಳಕ್ಕೆ ಹೂಳು ತಂದರೆ ಮಕ್ಕಾ ತೀರ್ಥದಲ್ಲಿ ತಾಯಿಯನ್ನು ಕೊಂದ ಪಾಪ ಬರುವುದು ಎಂದು ಹೇಳಿ ಕಲಾಬಿನ('ಕಲ್ಮ' ಇದು ಮುಸ್ಲಿಮರ ಪವಿತ್ರ ಶ್ಲೋಕ) ಮೇಲೆ ಆಣೆ ಇಟ್ಟಿರುತ್ತಾನೆ' ಎಂಬ ಉಲ್ಲೇಖವಿದೆ.[೬೬] ಈ ಉಲ್ಲೇಖವು ಮುಸ್ಲಿಂ ಜನರ ಧಾರ್ಮಿಕ ನಂಬಿಕೆಗಳು, ಮೆಕ್ಕಾ ಎಂಬ ಧಾರ್ಮಿಕ ಪವಿತ್ರ ಯಾತ್ರಾ ಸ್ಥಳ, ಇವರ ಸಮಾಜದಲ್ಲಿ ತಾಯಿಗೆ ಇದ್ದ ಉನ್ನತಸ್ಥಾನ, ಧರ್ಮದಲ್ಲಿ ಇದ್ದ ಭಯ–ಭಕ್ತಿಯನ್ನು ಈ ಶಾಸನದಿಂದ ತಿಳಿದುಬರುತ್ತದೆ. ಮುಸ್ಲಿಂ ಸಮಾಜದಲ್ಲಿನ ಕಟ್ಟುಪಾಡುಗಳ ಬಗ್ಗೆ ಇದು ಬೆಳಕು ಚೆಲ್ಲುತ್ತದೆ. ಇಲ್ಲಿ ಮುಖ್ಯವಾದುದು ಹಿಂದೂ ಮತ್ತು ಮುಸ್ಲಿಮರ ನಡುವೆ ಮತಭೇದವಿರಲಿಲ್ಲ ಎಂಬುದು ಗಮನಿಸಬೇಕು. ಏಕೆಂದರೆ ಹಿಂದೂ ಶಾಸನ ಕೆತ್ತನೆಯ ನಿಯಮವನ್ನು ಮುಸ್ಲಿಮರು ಪಾಲಿಸುತ್ತಿದ್ದರು ಎಂಬುದನ್ನು ಇಲ್ಲಿ ಅವಲೋಕಿಸಬೇಕು.

ವಿಜಯನಗರ ಪಟ್ಟಣದ ಪ್ರದೇಶದಲ್ಲಿ ಕಂಡುಬರುವ ಸ್ಮಾರಕಾವಶೇಷಗಳು ಸಹ ಮುಸ್ಲಿಂ ಸಮಾಜವನ್ನು ತಿಳಿಯಲು ಸಹಾಯಕವಾಗಿವೆ. ಹಿಂದೂ ಮತ್ತು ಮುಸ್ಲಿಮರ ನಡುವೆ ಯಾವುದೇ ಮತಭೇದವಿರಲಿಲ್ಲ ಎಂಬುದಕ್ಕೆ ಉದಾಹರಣೆ ಅಹಮ್ಮದ್‌ಖಾನ್ ಕಟ್ಟಿಸಿದ ಮಸೀದಿ. ಈ ಮಸೀದಿಯ ವಾಸ್ತುಶೈಲಿಯು ಹಿಂದೂ ದೇವಾಲಯದ ರಚನೆಯನ್ನು ಹೋಲುತ್ತದೆ. ಇದು ಇಸ್ಲಾಮೇತರ ಶೈಲಿಯಲ್ಲಿ ನಿರ್ಮಾಣವಾಗಿದೆ. ಅಲ್ಲದೆ ಇಂಡೊ–ಇಸ್ಲಾಮಿಕ್ ವಾಸ್ತುಶೈಲಿಯ ಅನೇಕ ಕಟ್ಟಡಗಳು ವಿಜಯನಗರ ಪಟ್ಟಣದಲ್ಲಿ ಕಂಡುಬರುತ್ತವೆ. ಕಮಲ್‌ಮಹಲ್, ಆನೆಲಾಯ, ದಾದಾಪೀರ್ ಛತ್ರ, ದಣ್ಣಾಯಕನ ಕೋಟೆ, ರಾಣಿಸ್ನಾನಗೃಹ ಹೀಗೆ ಹಲವು ಕಡೆ ಮುಸ್ಲಿಂ ಶೈಲಿಯುಳ್ಳ ವಾಸ್ತುಕಲೆಯ ಮಿಶ್ರಣವನ್ನು ಕಟ್ಟಡಗಳಲ್ಲಿ ಕಂಡುಬರುತ್ತವೆ. ಈ ಕಟ್ಟಡಗಳು ಪರೋಕ್ಷವಾಗಿ ಬಹುಸಂಸ್ಕೃತಿಯಿಂದ ಕೂಡಿದ ಸಾಮ್ರಾಜ್ಯವಿತ್ತೆಂದು ಎತ್ತಿತೋರಿಸುತ್ತವೆ. ಈ ಕಟ್ಟಡಗಳ ನಿರ್ಮಾಣದಲ್ಲಿ ಮುಸ್ಲಿಂ ಸಮುದಾಯಗಳ

ಪಾತ್ರವು ಸಹವಿತ್ತೆಂದು ಗುರುತಿಸಬೇಕಾಗಿದೆ. ಆ ಮೂಲಕ ಇಲ್ಲಿ ಮುಸ್ಲಿಂ ಶಿಲ್ಪಿಗಳು ನೆಲೆಸಿದ್ದರು ಎಂಬುದನ್ನು ಸಹ ತಿಳಿಯಬೇಕಾಗಿದೆ. ಹಾಗಾಗಿ ವಿಜಯನಗರ ರಾಜ್ಯದಲ್ಲಿ ನಿರ್ಮಿಸಲಾಗಿದ್ದ ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯ ಕಟ್ಟಡಗಳ ನಿರ್ಮಾಪಕರ ಹಿಂದೆ ಮುಸ್ಲಿಂ ಶಿಲ್ಪಿಗಳ ಪಾತ್ರವನ್ನು ಗುರುತಿಸಬೇಕಾಗಿದ್ದು, ಮುಸ್ಲಿಂ ಕರಕುಶಲ ಸಮುದಾಯದ ಬಗೆಗೆ ಇನ್ನೂ ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ನಡೆಯುತ್ತಿದ್ದ ಉತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಸಹ ಮುಸ್ಲಿಮರು ಭಾಗವಹಿಸುತ್ತಿದ್ದರು. ಅರಸರು ನಡೆಸುತ್ತಿದ್ದ ಧಾರ್ಮಿಕ ಹಿನ್ನೆಲೆಯ ಉತ್ಸವಗಳಲ್ಲಿ ಹಲವಾರು ಕಾರ್ಯಕ್ರಮಗಳಲ್ಲಿ ಮುಸ್ಲಿಮರ ಪಾತ್ರ ಕಾಣಬಹುದು. ಅದರಲ್ಲಿ ಸೇನಾವೀಕ್ಷಣೆಯ ಕಾರ್ಯಕ್ರಮವೂ ಒಂದಾಗಿದೆ. ಇದರಲ್ಲಿ ಮುಸ್ಲಿಂ ಸೈನಿಕರು ಸಹ ಭಾಗವಹಿಸುತ್ತಿದ್ದರು. ಮುಸ್ಲಿಂ ದಂಡನಾಯಕರು ಈಟಿ, ಬಿಲ್ಲು, ಬಾಣ, ಭಲ್ಲೆ, ಆಕಾಶಬಾಣ ಬಳಸಿ ನವರಾತ್ರಿ ಉತ್ಸವದಲ್ಲಿ ತಮ್ಮ ಪ್ರದರ್ಶನ ಮಾಡುತ್ತಿದ್ದರು. ದಿಲಾವರಾಖಾನ್, ಅಂಬುರ್‌ಖಾನ್ ಮತ್ತು ಬಿಜಲಿಖಾನ್‌ರಂತಹ ಮುಸ್ಲಿಮ್ ವ್ಯಕ್ತಿಗಳು ಉನ್ನತ ಹುದ್ದೆಗಳನ್ನು ಪಡೆದಿದ್ದರು. ಮುಸ್ಲಿಂ ಕುಸ್ತಿಪಟುಗಳು ಸಹ ಇದ್ದರು ಎಂಬುದಕ್ಕೆ ಕ್ರಿ.ಶ. ೧೪೪೭ರ ಶಾಸನ ತಿಳಿಸುತ್ತದೆ.[೬]

ಹೀಗೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಮುಸ್ಲಿಂ ಜನರ ಪಾತ್ರ ಬಹುಮುಖ್ಯವಾದುದಾಗಿದೆ. ಸಮಕಾಲೀನ ಬಹಮನಿ ಸುಲ್ತಾನರ ದಾಳಿಗಳಿಂದ ವಿಜಯನಗರ ಸಾಮ್ರಾಜ್ಯ ನಾಶವಾಯಿತು ಎನ್ನುವ ವಾದಗಳನ್ನು ಮಂಡಿಸುವ ಇತಿಹಾಸಕಾರರು ಇಲ್ಲಿ ವಾಸವಾಗಿದ್ದ ಮುಸ್ಲಿಮರು ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಯಲ್ಲಿ ಬಹುಮುಖ್ಯವಾದ ಪಾತ್ರ ವಹಿಸಿದ್ದರು ಎಂಬ ಕಡೆಗೆ ಹೊರಳಿ ನೋಡಿಲ್ಲ. ವಿಜಯನಗರ ಕಾಲದಲ್ಲಿ ಮುಸ್ಲಿಂ ಸಮಾಜವು ತಮ್ಮ ಬದುಕನ್ನು ಕಟ್ಟಿಕೊಂಡಿತ್ತು. ಸ್ಥಳೀಯರಲ್ಲಿ ಸೌಹಾರ್ದತಾ ಸಂಬಂಧವನ್ನು ಹೊಂದಿತ್ತು. ಸ್ಥಳೀಯ ಆಚರಣೆಗಳಲ್ಲಿ ಹಿಂದೂ–ಮುಸ್ಲಿಂ ಭಾವೈಕ್ಯತೆಗೆ ಸಂಬಂಧಿಸಿದ ಹಬ್ಬಗಳನ್ನು ಆಚರಿಸುತ್ತಿದ್ದರು.

ಕೊನೆಟಿಪ್ಪಣಿಗಳು

೧. ಸಯ್ಯದ್ ಅಬುಲ್ ಆಲಾ ಮೌದೂದಿ, ಇಸ್ಲಾಂ ಸಮೀಕ್ಷೆ, ಐಡಿಯಲ್ ಇಸ್ಲಾಮಿಕ್ ಟ್ರಸ್ಟ್, ಮಂಗಳೂರು, ೧೯೮೮, ಪು. ೮೫.

೨. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂಪುಟ–೨, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೬, ಪು.೮೮–೮೯.

೩. ಅದೇ. ಪು. ೮೯–೯೦.

೪. ಮಹದೇವ ಸಿ., ಸುಬ್ಬಣ್ಣ ರೈ, ಮಾಧವ ಪೆರಾಜೆ, ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು. ೧೮೨.

೫. ನಾಗರಾಜ್ ಹೆಚ್., ವಿಜಯನಗರ ಇಮ್ಮಡಿ ದೇವರಾಯ, ಶಿವರಾಮಪೇಟೆ, ಮೈಸೂರು, ೧೯೯೯, ಪು. ೧೭೪.

೬. ಅದೇ, ಪು. ೨೨೪.

೭. ಅದೇ, ಪು. ೧೮೮.

೮. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಸಂ–೩ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು. ೨೨೮.

೯. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು. ೮೮.

೧೦. ಸಾಲೆತ್ತೋರ್ ಬಿ.ಎ., ಸೋಷಿಯಲ್ ಆ್ಯಂಡ್ ಪೊಲಿಟಿಕಲ್ ಲೈಫ್ ಇನ್ ದ ವಿಜಯನಗರ, ವ್ಯಾ–೨, ಪು.೩೦೫–೩೦೬.

೧೧. ಅದೇ, ಪು.ಸ. ೩೦೫–೩೦೬.

೧೨. ನಾಗರಾಜ ಎಚ್., ಪೂರ್ವೋಕ್ತ, ಪು. ೨೧೧.

೧೩. ಅದೇ, ೨೦೭–೨೦೮.

೧೪. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು. ೨೨೪.

೧೫. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು. ೮೮.

೧೬. ಅದೇ, ಪು. ೮೮.

೧೭. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು. ೨೨೪.

೧೮. ವಿವೇಕ ರೈ ಬಿ.ಎ.(ಪ್ರಸಂ), ಪ್ರವಾಸಿ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು. ೨೬–೨೭.

೧೯. ಪುರುಷೋತ್ತಮ ಬಿಳಿಮಲೆ, ಚಲುವರಾಜು, ಹಂಪಿ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬, ಪು. ೭೮.

೨೦. ಮಾಧವ್ ಪಿ.ಪಿ. ಕೋರ್ಟ್ ಲೈಫ್ ಅಂಡರ್ ದಿ ವಿಜಯನಗರ, ಪು. ೧೮೪.

೨೧. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಶಾಸನ ಸಂಖ್ಯೆ. ೩೧೫.

೨೦. ಪುರುಷೋತ್ತಮ ಬಿಳಿಮಲೆ, ಪೂರ್ವೋಕ್ತ, ಪು. ೧೦೫.

೨೩. ಮಾರುತಿ ಕಂಬಲ್, 'ಸೂಫಿ ಸೆಂಟ್ಸ್ ಇನ್ ಕರ್ನಾಟಕ', ಇಂಟರ್‌ನ್ಯಾಷನಲ್ ಆಫ್ ಸೋಷಿಯಲ್ ಸೈನ್ಸ್ ಆ್ಯಂಡ್ ಹ್ಯೂಮಾನಿಟಿ ಸ್ಟಡೀಸ್, ಸಂ.೩, ನಂಬರ್-೧, ೨೦೧೧ ಪು.ಸಂ. ೨೩೮.

೨೪. ಅಬ್ದುಲ್ ಎಂ. ನಿಸಾರ್, ಷಾದಿಲಿ ಸೂಫಿ ಆರ್ಡರ್ ಇಸ್ಲಾಂ ಆ್ಯಂಡ್ ಪಾಪುಲರ್ ಕಲ್ಚರ್ ಇನ್ ಕೇರಳ, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ೩೪ನೇ ಸಮ್ಮೇಳನ, ತಂಜಾವೂರು, ೨೦೧೪, ಪು. ೫೮೪-೮೫೭.

೨೫. ದೀಕ್ಷಿತ್ ಜಿ.ಎಸ್., ರಾಮಸ್ವಾಮಿ, ಭಾರ್ಗವಿ ಶಿವಯ್ಯ, ಶ್ರೀಕೃಷ್ಣದೇವರಾಯನ ಜೀವನ ಮತ್ತು ಸಾಧನೆಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೭, ಪು. ೮೩-೮೪.

೨೬. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು. ೧೭೮.

೨೭. ಅದೇ, ಪು.೧೭೮.

೨೮. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು. ೧೭೯.

೨೯. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಪು. ೧೭೭-೧೮೦.

೩೦. ಕುಲಕರ್ಣಿ ಆರ್.ಕೆ., ಆದಿಲ್‌ಶಾಹಿ ಸಂಪುಟ-೧೭, ಬಿಎಲ್‌ಡಿಇ ಸಂಸ್ಥೆ, ವಿಜಯಪುರ, ೨೦೧೭, ಪು.XXII.

೩೧. ಅಬೂರೆಹಾನ್ ಅಹಮ್ಮದ್ ನೂರಿ 'ಮೈಕಾಲ: ಮಂಗಳೂರ ಮುಸಲ್ಮಾನರ ಚರಿತ್ರೆ' ಮೈಕಾಲ ಪ್ರಕಾಶನ, ಮಂಗಳೂರು, ಪು.೨೦.

೩೨. ಅದೇ, ಪು.೨೦.

೩೩. ಸಲೀನ ಎಂ. 'ಸೂಫಿ ಕಲ್ಟ್ ಇನ್ ಮಲಬಾರ್: ಎ ಸ್ಟಡೀ ಆಫ್ ಮಾಲಪುಟ್ಟು, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ೩೫ನೇ ಸಮ್ಮೇಳನ, ೨೦೧೫, ಪು. ೪೬೫.

೩೪. ಅಭಿಶಂಕರ್ ಕೆ., ಮಧ್ಯಕಾಲೀನ ದಖ್ಖನ್ ಪ್ರದೇಶದಲ್ಲಿ ಭಾಷಾ ಧೋರಣೆ ಮತ್ತು ಪರಿಣಾಮ, ಇತಿಹಾಸ ದರ್ಶನ ಸಂ. ೩, ಸಂಚಿಕೆ-೧ ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೮೮, ಪು. ೨೦೫-೨೦೮.

೩೫. ಅದೇ, ಪು. ೨೦೫-೨೦೮.

೩೬. ಅದೇ, ಪು. ೪೯.

೩೭. ಸಲೀನ ಎಂ, ಪೂರ್ವೋಕ್ತ, ೪೬೫-೪೬೬

೩೮. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು. ೮೮-೯೦.

೩೯. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಶಾಸನ ಸಂಖ್ಯೆ ೩೧೧, ಪು ೨೨೪.

೪೦. ಗುರುರಾಜ ಕರಜಗಿ, 'ಸೂಫಿ-ವಿಶ್ವಪ್ರೇಮದ ಮೂಲಕ ಭಗವತ್ ಸಾಕ್ಷಾತ್ಕಾರ, ವ್ಯಾಸ ಪ್ರಕಾಶನ, ಬೆಂಗಳೂರು ೨೦೧೭, ಪು.೦೬.

೪೧. ಮಹಮ್ಮದ್ ಅಬ್ಬಾಸ್ ಶೂಸ್ತ್ರಿ 'ಇಸ್ಲಾಂ ಸಂಸ್ಕೃತಿ' ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೦, ಪು.೨೪೩.

೪೨. ಅದೇ, ಪು. ೨೪೩.

೪೩. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಅಭಿನವ, ಬೆಂಗಳೂರು, ೨೦೧೧, ಪು.೨೬.

೪೪. ಅದೇ, ಪು. ೨೪೩

೪೫. ಅದೇ, ಪು. ೨೪೮

೪೬. ಅದೇ, ಪು. ೨೫೦

೪೭. ಗುರುರಾಜ ಕರಜಗಿ, ಪೂರ್ವೋಕ್ತ ಪು.೧೪-೧೫.

೪೮. ಅದೇ, ಪು. ೧೩-೧೪.

೪೯. ಅದೇ, ಪು. ೧೫.

೫೦. ರಹಮತ್ ತರೀಕೆರೆ, ಪೂರ್ವೋಕ್ತ, ಪು.೩೮.

೫೧. ಅದೇ, ಪು. ೩೯.

೫೨. ಅದೇ, ಪು.೩೯-೪೦.

೫೩. ಅದೇ, ಪು. ೪೨

೫೪. ಎಚ್ಚೆಸ್ಕೆ(ಸಂ.) 'ಅವಲೋಕನ', ಎಜಾಸುದ್ದೀನ್ ಫೈರೋಜ್(ಲೇ) 'ಕರ್ನಾಟಕದಲ್ಲಿ ಇಸ್ಲಾಂ' ವಿಶ್ವಕನ್ನಡ ಸಮ್ಮೇಳನ ಬೆಂಗಳೂರು, ೧೯೮೫, ಪು. ೧೯೧-೧೯೩.

೫೫. ಅದೇ, ಪು. ೧೯೨.

೫೬. ಅದೇ, ಪು. ೧೯೧-೧೯೩.

೫೭. ಶಬೀನಾಬಾನು 'ಗುಲ್ಬರ್ಗಾ ಹಜರತ್ ಶೇಖ್ ಮೊಹಮ್ಮದ್ ರುಕ್ಕ-ಅಲ್-ದೀನ್ ೧೨೭೧-೧೩೮೦' ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್-೩೪, ತಂಜಾವೂರ್, ೨೦೧೪.

೫೮. ವಿವೇಕ ರೈ ಬಿ.ಎ., ಪೂರ್ವೋಕ್ತ, ಪು. ೬೯.

೫೯. ಪರಮೇಶ್ವರಪ್ಪ. ಟಿ.(ಸಂ.), 'ಹಂಪಿ ಪರಂಪರೆ', ಶ್ರೀವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ಹೊಸಪೇಟೆ, ೧೯೯೬, ಪು.೪೭-೪೮.

ಚಲುವರಾಜು 'ಹಂಪಿಯ ಸ್ಮಾರಕಗಳಲ್ಲಿ ಕಾಣಬರುವ ಜಾನಪದೀಯ ಅಂಶಗಳು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ಅಬೂರೆಹಾನ್ ಅಹಮ್ಮದ್ ನೂರಿ, ಪೂರ್ವೋಕ್ತ, ಪು. ೦೭.

೬೧. ಅದೇ, ಪು. ೧೨.

೬೨. ಅದೇ, ಪು. ೧೮.

೬೩. ನಾಗೇಗೌಡ ಎಚ್.ಎಲ್., 'ಪ್ರವಾಸಿ ಕಂಡ ಇಂಡಿಯಾ, ಐಬಿಎಚ್ ಪ್ರಕಾಶನ, ಬೆಂಗಳೂರು. ೨೦೦೮, ಪು. ೧೫೬.

೬೪. ಅದೇ, ಪು. ಸಂಖ್ಯೆ ೩೧೧, ಪು ೨೨೪.

೬೫. ದೀಕ್ಷಿತ್ ಜಿ.ಎಸ್., ಸಂಗಮ ಕಾಲದ ವಿಜಯನಗರ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೭, ಪು-೪೩.

೬೬. ದೇವರಕೊಂಡಾರೆಡ್ಡಿ, ಪೂರ್ವೋಕ್ತ, ಶಾಸನ ಸಂಖ್ಯೆ-೩೧೫.

೬೭. ಅದೇ, ಪೋರ್ವೋಕ್ತ, ಶಾ.ಸಂಖ್ಯೆ- ೩೧೫.

ಅಧ್ಯಾಯ ಆರು

ಮುಸ್ಲಿಂ ಆರ್ಥಿಕತೆ

೬.೧. ಕೃಷಿವ್ಯವಸ್ಥೆ

೬.೨. ವ್ಯಾಪಾರ ಮತ್ತು ವಾಣಿಜ್ಯ

೬.೩. ವರ್ತಕ ಸಂಘಗಳು

೬.೪. ಉದ್ದಿಮೆಗಳು

ಅಧ್ಯಾಯ ಆರು

ಮುಸ್ಲಿಂ ಆರ್ಥಿಕತೆ

ಒಂದು ದೇಶದ ಅಥವಾ ಸಾಮ್ರಾಜ್ಯದ ಪ್ರಾಬಲ್ಯವು ಮುಖ್ಯವಾಗಿ ಆರ್ಥಿಕ ಚಟುವಟಿಕೆಗಳ ಮೇಲೆ ನಿರ್ಧರಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆರ್ಥಿಕ ಚಟುವಟಿಕೆಗಳು ಅಥವಾ ಆರ್ಥಿಕ ಹಿನ್ನಡೆಗಳು ಸಾಮ್ರಾಜ್ಯದ ಬೆಳವಣಿಗೆ, ವಿಸ್ತರಣೆ ಹಾಗೂ ಅವನತಿಯ ಮೇಲೆ ಪರಿಣಾಮ ಉಂಟುಮಾಡುತ್ತವೆ. ಹಾಗಾಗಿ ಪ್ರತಿ ಪ್ರಭುತ್ವಗಳು ತಮ್ಮ ಸಾಮ್ರಾಜ್ಯದ ಭದ್ರತೆಗಾಗಿ ಆರ್ಥಿಕ ಚಟುವಟಿಕೆಗಳ ಮೇಲೆ ಗಮನವನ್ನು ಹರಿಸುತ್ತಿದ್ದವು. ಇದರಿಂದಾಗಿ ವ್ಯಾಪಾರಿ ಶಕ್ತಿಗಳು ಆರ್ಥಿಕ ಚಟುವಟಿಕೆಯಲ್ಲಿ ಪ್ರಾಬಲ್ಯವನ್ನು ಹೊಂದಿರುವಂತಹ ಪ್ರದೇಶಗಳ ಅಥವಾ ಬಂದರು ಪಟ್ಟಣಗಳಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಲು ಪೈಪೋಟಿಯನ್ನು ನಡೆಸುತ್ತಿದ್ದವು. ಅಂತಹ ಪ್ರದೇಶಗಳನ್ನು ಮೊದಲಿಗೆ ವಶಪಡಿಸಿಕೊಂಡು ವ್ಯಾಪಾರದ ಮೇಲೆ ತಮ್ಮ ಏಕಸ್ವಾಮ್ಯವನ್ನು ಸ್ಥಾಪಿಸುತ್ತಿದ್ದವು. ಈ ರೀತಿಯ ಪೈಪೋಟಿಯು ರಾಜ್ಯ ಅಥವಾ ರಾಷ್ಟ್ರಕ್ಕೆ ಸೀಮಿತವಾಗದೇ ಜಾಗತಿಕ ಮಟ್ಟದಲ್ಲಿಯೂ ಇತ್ತು. ಈ ಪ್ರಕ್ರಿಯೆಯಲ್ಲಿ ಸಮುದ್ರದ ವ್ಯಾಪಾರದ ಮೇಲೆ ಏಕಸ್ವಾಮ್ಯಕ್ಕಾಗಿ ಪೈಪೋಟಿಗಳು ನಡೆಯುತ್ತಿದ್ದವು. ಅದರಲ್ಲಿ ಏಷ್ಯಾ ಮತ್ತು ಯುರೋಪ್ ರಾಷ್ಟ್ರಗಳು ವ್ಯಾಪಾರಕ್ಕೆ ನಡೆಸಿದ ಪೈಪೋಟಿಗಳು ಹೆಚ್ಚು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಭಾರತದೊಂದಿಗೆ ಪ್ರಾಚೀನ ಕಾಲದಿಂದ ಹಿಡಿದು ಮಧ್ಯಯುಗೀನ ಕಾಲದವರೆಗೂ ರಾಷ್ಟ್ರಗಳು ವ್ಯಾಪಾರ ಸಂಪರ್ಕವನ್ನು ಹೊಂದಿದ್ದ ಅಧ್ಯಯನಗಳನ್ನು ಗಮನಿಸುವುದು ಮುಖ್ಯವೆನಿಸುತ್ತದೆ.

ವಿಜಯನಗರದ ಆರ್ಥಿಕತೆಯಲ್ಲಿ ಇಲ್ಲಿನ ಸಮುದಾಯಗಳ ಪ್ರಾತಿನಿಧ್ಯತೆ ಬಹಳ ಮುಖ್ಯವಾದುದು. ಈ ಅವಧಿಯು ಪ್ರಭುತ್ವದ ಮಟ್ಟದಲ್ಲಿ ವೈರುಧ್ಯಗಳನ್ನು ಹೊಂದಿತ್ತು. ಅದರ ಜೊತೆ ಜೊತೆಯಲ್ಲಿಯೇ ಸಾಮಾಜಿಕ ಸಂಕೀರ್ಣತೆಯನ್ನು ಒಳಗೊಂಡಿತ್ತು. ಈ ಅವಧಿಯ ಕೃಷಿವಲಯವು ಸಾಮಾನ್ಯರನ್ನು ಆಕರ್ಷಿಸಿದರೆ, ವ್ಯಾಪಾರಿವಲಯವನ್ನು ಪ್ರಭುತ್ವ ತನ್ನತ ಸೆಳೆದುಕೊಳ್ಳಲು ಅನೇಕ ತಂತ್ರಗಳನ್ನು ಹೆಣೆಯುವುದರ ಮೂಲಕ ಇಡೀ ವ್ಯವಸ್ಥೆಯನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿತ್ತು. ಇವರ ಆಳ್ವಿಕೆಯಲ್ಲಿ ಕೃಷಿ ಉತ್ಪನ್ನಗಳನ್ನು ಸ್ಥಳೀಯರು ಉತ್ಪಾದಿಸುತ್ತಿದ್ದರು. ಆ ವಸ್ತುಗಳನ್ನು ವ್ಯಾಪಾರಿಗಳಾದ ಮುಸ್ಲಿಂ ಸಮುದಾಯಗಳು ಕೊಂಡುಕೊಳ್ಳುತ್ತಿದ್ದರು. ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಕೃಷಿ ವ್ಯವಸ್ಥೆಯ ಜೊತೆ ಜೊತೆಗೆ ಆರ್ಥಿಕ ವ್ಯವಸ್ಥೆಯು ದೊಡ್ಡ ಪ್ರಮಾಣದಲ್ಲಿ ಬೆಳವಣಿಗೆಯನ್ನು

ಹೊಂದಿತು. ಇದು ಈ ಹಿಂದಿನ ಊಳಿಗಮಾನ್ಯ ಪದ್ಧತಿಯು ಕುಸಿದು ಕೃಷಿಯಲ್ಲಿ ಹೆಚ್ಚುವರಿ ಉತ್ಪಾದನೆಗೆ ದಾರಿ ಮಾಡಿಕೊಟ್ಟಿತು. ಈ ಬೆಳವಣಿಗೆಯನ್ನು ವಿಜಯನಗರ ಸಾಮ್ರಾಜ್ಯಕ್ಕಿಂತ ಪೂರ್ವದಿಂದಲೂ ಕಾಣಬಹುದಾಗಿದೆ. ವ್ಯಾಪಾರಿವರ್ಗಗಳಲ್ಲಿ ಗುರುತಿಸಿಕೊಂಡಿದ್ದ ಮುಸ್ಲಿಂ ಸಮುದಾಯಗಳು ಕೃಷಿವಲಯಕ್ಕೂ ತಮ್ಮ ಪಾದಾರ್ಪಣೆ ಮಾಡಿದರು. ಅದಕ್ಕೆ ಉತ್ತಮ ಉದಾಹರಣೆಯಾಗಿ ಇಂದಿಗೂ ಆ ಸಮುದಾಯಗಳು ಮಲಬಾರ್‌ನ ಕೆಲವು ಭಾಗಗಳಲ್ಲಿ ಕೃಷಿ ಕಾಯಕದಲ್ಲಿಯೇ ಮುಂದುವರಿದಿವೆ.

೬.೧. ಕೃಷಿವ್ಯವಸ್ಥೆ

ವಿಜಯನಗರ ಸಾಮ್ರಾಜ್ಯದಲ್ಲಿ ಕೃಷಿಯು ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿತ್ತು. ಕೃಷಿ ಬೆಳೆಗಳು ಸಾಮ್ರಾಜ್ಯದ ಅರ್ಥವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತಿದ್ದವು. ರೈತನು ಸಾಮ್ರಾಜ್ಯದ ತಳಹದಿಯಾಗಿದ್ದನು. ರೈತರು ಸಾಮಾನ್ಯವಾಗಿ ಒಂದೇ ರೀತಿಯ ಬೆಳೆಯನ್ನು ಪ್ರತಿವರ್ಷವೂ ಬೆಳೆಯುತ್ತಿದ್ದರು.[೧] ಕೃಷಿಕರು ಆರ್ಥಿಕ ಹಿನ್ನೆಲೆಯ ಕೃಷಿ ಉತ್ಪನ್ನಗಳನ್ನು ಬೆಳೆಯುತ್ತಿದ್ದರು. ಪ್ರಮುಖವಾಗಿ ಸಾಂಬಾರು ಪದಾರ್ಥಗಳು, ಕರಿಮೆಣಸು, ಕಬ್ಬು ಹಾಗೂ ಹತ್ತಿ ಬೆಳೆಗಳು ಸಾಮ್ರಾಜ್ಯಕ್ಕೆ ಆದಾಯ ತರುವಂತಹ ಪ್ರಮುಖ ಬೆಳೆಗಳಾಗಿದ್ದವು. ಈ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ ಇತ್ತು. ಈ ಉತ್ಪನ್ನಗಳು ಸ್ಥಳೀಯ ಹಾಗೂ ವಿದೇಶಿ ಮಾರುಕಟ್ಟೆಯಲ್ಲಿ ರೈತನ ಹಾಗೂ ವರ್ತಕನ ನಡುವಿನ ಆರ್ಥಿಕ ಚಟುವಟಿಕೆಯನ್ನು ಪ್ರತಿನಿಧಿಸುತ್ತಿದ್ದವು.[೨] ಹಾಗಾಗಿ ಈ ಕೃಷಿಕರು ವ್ಯಾಪಾರಿಗಳ ಮೂಲಕ ಜೊತೆ ರಾಜಕೀಯ ಸಂಪರ್ಕವನ್ನು ಹೊಂದಿದ್ದರು. ಕೃಷಿಯಲ್ಲಿ ಉತ್ಪಾದನೆಯಾದ ವಸ್ತುಗಳು ಸ್ಥಳೀಯ ವರ್ತಕರ ಮತ್ತು ವ್ಯಾಪಾರಿಗಳ ಕೈಗೆ ಸೇರುತ್ತಿತ್ತು. ಅಲ್ಲಿಂದ ಬಂದರು ಪ್ರದೇಶಗಳಿಗೆ ರವಾನೆಯಾಗುತ್ತಿತ್ತು.[೩] ಹೀಗೆ ಕೃಷಿವ್ಯವಸ್ಥೆಯು ವಿಜಯನಗರದ ಆರ್ಥಿಕ ಚಟುವಟಿಕೆಯ ಮೂಲವಾಗಿತ್ತು. ವಿಜಯನಗರದಲ್ಲಿ ಕಂಡುಬರುವ ವ್ಯವಸ್ಥೆ ಕುರಿತು ಕಾಲಕಾಲದಲ್ಲಿ ಬೆಳೆಯುತ್ತಿದ್ದ ಪ್ರಮುಖ ಅಂಶಗಳನ್ನು ತಿಳಿಯಬಹುದು.

ವಿಜಯನಗರಕ್ಕೆ ಭೇಟಿ ನೀಡಿದ ಪ್ರವಾಸಿಗರಾದ ಬಾರ್ಬೊಸಾ, ಪಾಯಸ್, ನ್ಯೂನಿಜ್ ಅವರು ವಿಜಯನಗರ ಸಾಮ್ರಾಜ್ಯದಲ್ಲಿ ಸಂಚರಿಸಿ ವಿವಿಧ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಬೆಳೆಗಳು, ಕೃಷಿ ಭೂಮಿ, ಭೂಮಿಯ ಫಲವತ್ತತೆ, ಪಶುಪಾಲನೆ ಬಗೆಗೆ ತಮ್ಮ ಪ್ರವಾಸಿ ಕಥನಗಳಲ್ಲಿ ಉಲ್ಲೇಖಿಸಿದ್ದಾರೆ. ಈ ಪ್ರವಾಸಿಗರು ತಿಳಿಸುವಂತೆ ಪಶ್ಚಿಮದ ಕಡೆಯಿಂದ ಕರಾವಳಿ ಪ್ರದೇಶವನ್ನು ಅತ್ಯಂತ ಫಲವತ್ತಾದ ಭೂಮಿ ಎಂಬುದಾಗಿ ಪರಿಗಣಿಸಿ ಅಲ್ಲಿ ಉತ್ತಮವಾದ ಭತ್ತವನ್ನು ಬೆಳೆದು, ಅಕ್ಕಿಯನ್ನು ಮಲಬಾರ್ ಮತ್ತು ಆರ್ಮುಜ್‌ಗೆ ರಫ್ತು ಮಾಡುತ್ತಿದ್ದರೆಂದು ಹೇಳಿದ್ದಾರೆ. ಪಾಯಸ್‌ನು ಭಟ್ಕಳದಿಂದ ವಿಜಯನಗರದವರೆಗಿನ ಮಾರ್ಗವನ್ನು ಹಾಗೂ ಮಧ್ಯ ಕರ್ನಾಟಕದ ಕೃಷಿ ಭೂಮಿಯನ್ನು ವರ್ಣಿಸಿ, ಅದರ ಉದ್ದಕ್ಕೂ ಫಲವತ್ತಾದ ಕೃಷಿ ಭೂಮಿಯನ್ನು ಹೊಂದಿತ್ತೆಂದು ಹೇಳುತ್ತಾನೆ. ಹತ್ತಿ, ಗೋಧಿ, ಭತ್ತಗಳನ್ನು ಹೆಚ್ಚಾಗಿ ಈ ಪ್ರದೇಶದಲ್ಲಿ ಬೆಳೆಯುತ್ತಿದ್ದರೆಂದು ತಿಳಿಸುತ್ತಾನೆ. ಈಗಿನ

ಧಾರವಾಡ ಜಿಲ್ಲೆಯಲ್ಲಿರುವ ಬಂಕಾಪುರ ಮತ್ತು ಸುತ್ತಮುತ್ತಲಿನ ಪ್ರದೇಶವು ವಿಜಯನಗರದ ಕಾಲದಲ್ಲಿ ಕೃಷಿಯು ಬೀಜೋತ್ಪಾದನಾ ಹಾಗೂ ಪಶುಸಂಗೋಪನ ಕ್ಷೇತ್ರಗಳಿಂದ ಸಮೃದ್ಧಿ ಆಗಿತ್ತೆಂದು ನ್ಯೂನಿಜ್ ಹೇಳುತ್ತಾನೆ.

ವಿಜಯನಗರದ ಕಾಲದ ರೈತರು ಕಾಲಕಾಲಕ್ಕೆ ಬದಲಾಗುವ ಋತು ಆಧಾರಿತ ವ್ಯವಸಾಯದ ವಿಭಜನೆಯನ್ನು ಉತ್ತಮ ರೀತಿಯಲ್ಲಿಯೇ ಅನುಸರಿಸಿಕೊಂಡಿದ್ದರು. ಆ ಕಾಲದ ಶಾಸನಗಳು ಕಾರ್ತಿಕ ಮತ್ತು ವೈಶಾಖದ ಬೆಳೆಗಳನ್ನು ಉಲ್ಲೇಖಿಸುತ್ತವೆ.[೪] ಕಾರ್ತಿಕ ಬೆಳೆಯು ಸಾಮಾನ್ಯವಾಗಿ ನವೆಂಬರ್‌ನಿಂದ ಜನವರಿ ಅವಧಿಯದಾಗಿರುತ್ತಿತ್ತು. ವೈಶಾಖದ ಬೆಳೆಯು ಏಪ್ರಿಲ್, ಮೇ ತಿಂಗಳಲ್ಲಿ ಕೊಯಲಿಗೆ ಬರುತ್ತಿತ್ತು. ಗ್ರಾಮೀಣ ಪ್ರದೇಶದ ಜನರು ಇವುಗಳನ್ನು ಕಾರ್‌ಪಸಲು ಹಾಗೂ ಹೈನ್‌ಫಲಸು ಎಂಬ ಪದಗಳಿಂದ ಕರೆಯುತ್ತಿದ್ದದ್ದು ಕಂಡುಬರುತ್ತದೆ. ಮೇಲಿನ ರೀತಿಯಲ್ಲಿ ಅಂದಿನ ಕೃಷಿಯು ೧. ಜೂನ್‌ನಿಂದ ಅಕ್ಟೋಬರ್‌ವರೆಗೆ ನೈರುತ್ಯ ಮುಂಗಾರು ಮಳೆಗೆ ಹೊಂದಿಕೊಳ್ಳುವ ಅವಧಿ ೨. ಜನವರಿ ಫೆಬ್ರವರಿ ತಿಂಗಳ ಚಳಿ ಹವೆಯ ಫಸಲೆಂದು ವಿಭಾಗಿಸಿಕೊಂಡು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು.[೫]

ಕಣಿವೆಯ ಕೆಳಭಾಗದಲ್ಲಿದ್ದ ನದಿಗಳು ಹಾಗೂ ಕಾಲುವೆಗಳ ಮೂಲಕ ನೀರನ್ನು ಪಡೆಯುತ್ತಿದ್ದ ಜಮೀನುಗಳಿಗೆ ಬಯಲುಭೂಮಿ ಅಥವಾ ಗದ್ದೆ ಸೀಮೆ ಎಂದೂ ಸಂಪೂರ್ಣ ಮಳೆಯನ್ನು ಅವಲಂಬಿಸಿರುವ ಭೂಮಿಯನ್ನು ಹೊಲಗಾಡು ಅಥವಾ ಮಳೆಗಾಡು ಎಂದು ಕರೆಯುತ್ತಿದ್ದರು. ಅಂದಿನ ರಾಜರು ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಕೃಷಿಯ ಅಭಿವೃದ್ಧಿಗೆ ನೀರಾವರಿ ಸೌಕರ್ಯವು ಅತಿ ಮುಖ್ಯವಾದದು. ಇದರಿಂದ ಭೂಮಿಯ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಹೆಚ್ಚಿನ ಅವಕಾಶವಾಗುವುದಲ್ಲದೆ ವ್ಯವಸಾಯಕ್ಕೆ ಅರ್ಹವಾದ ಬಂಜರುಭೂಮಿಯನ್ನು ಕೃಷಿ ಮಾಡಿ ಉತ್ತಮ ಬೆಳೆಯನ್ನು ಬೆಳೆಯಬಹುದೆಂದು ವಿಜಯನಗರದ ಅರಸರು ನೀರಾವರಿಗೆ ಹಾಗೂ ಅದರ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಿ ನಾಡಿದಾದ್ಯಂತ ಕೆರೆ, ಕಟ್ಟೆ, ಬಾವಿಗಳನ್ನು ನಿರ್ಮಿಸಿ ಜನರು ಸ್ವಾವಲಂಬಿಗಳಾಗಲು ಶ್ರಮಿಸಿದರು.

ನೀರಾವರಿ ಪದ್ಧತಿಯಲ್ಲಿ ವ್ಯವಸಾಯ ಮಾಡುತ್ತಿದ್ದ ಭೂಮಿಯಲ್ಲಿ ಭತ್ತ, ಕಬ್ಬು, ಗೋಧಿ, ಜೋಳ, ಹೊಗೆಸೊಪ್ಪು, ಹತ್ತಿ, ದ್ವಿದಳ ಕಾಳುಗಳು, ಮುಂತಾದವನ್ನು ಬೆಳೆಯುತ್ತಿದ್ದರೆ, ಮಳೆಯೊಡನೆ ಜೂಜಾಟವಾಡುತ್ತಿದ್ದ ಹೊಲದಲ್ಲಿ ಹುಣಿಸೆಹಣ್ಣು, ಬೇಳೆಕಾಳು(ತೊಗರಿ), ತೆಂಗು, ಖರ್ಜೂರ, ಜೀರಿಗೆ, ಈರುಳ್ಳಿ, ಬೆಳ್ಳುಳ್ಳಿ, ಅರಿಶಿನ, ಅಡಿಕೆ, ಮೆಣಸು, ಹಣ್ಣಿನ ಗಿಡಗಳು, ಮುಸುಕಿನ ಜೋಳ ಮುಂತಾದವನ್ನು ಬೆಳೆಯುತ್ತಿದ್ದರು. ನೀರಾವರಿಗೆ ಹೆಚ್ಚಾಗಿ ಕೆರೆಗಳೇ ಆಶ್ರಯವಾಗಿದ್ದವು. ತೋಟಗಾರಿಕೆ ಬೆಳೆಯು ಸಹ ಹೆಚ್ಚಿನ ರೀತಿಯಲ್ಲಿ ಕಂಡುಬರುತ್ತದೆ. ತೆಂಗು, ಅಡಿಕೆ, ಗೋಡಂಬಿ, ಮೆಣಸು, ಬಾಳೆ ಹಾಗೂ ಎಲ್ಲಾ ರೀತಿಯ ಹಣ್ಣುಗಳನ್ನು ಸಹ ತೋಟಗಾರಿಕೆಯಲ್ಲಿ ಬೆಳೆಯಲಾಗುತ್ತಿತ್ತು. ಮಳೆ ಆಶ್ರಿತ ಪ್ರದೇಶದಲ್ಲಿಯೇ ಮಳೆಯ ಕಾಲದಲ್ಲಿ ಬಿತ್ತನೆ ಮಾಡಿ ದ್ವಿದಳ ಧಾನ್ಯಗಳನ್ನು

ಬೆಳೆಯುತ್ತಿದ್ದರು. ಹೆಸರುಕಾಳು, ಅಲಸಂದೆ, ಹುರುಳಿಕಾಳು, ಕಡಲೆಕಾಳು, ಅವರೆಕಾಳು ಮುಂತಾದ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ಕೆರೆಗಳು ಮತ್ತು ಕಾಲುವೆಗಳ ಕೆಳಗೆ ತೋಟದ ಬೆಳೆಗಳನ್ನು ಬೆಳೆಯುತ್ತಿದ್ದರು. ಏಕೆಂದರೆ ನೀರು ಸುಲಭವಾಗಿ ಸಿಗುವುದರಿಂದ ಇಲ್ಲಿ ೩೦೦೦ದಿಂದ ೪೦೦೦ದಷ್ಟು ಉತ್ತಮ ಜಾತಿಯ ಮರ, ಗಿಡ ಫಸಲನ್ನು ಬೆಳೆಯುತ್ತಿದ್ದರೆಂದು ಶಾಸನ ತಿಳಿಸುತ್ತದೆ.[೬]

ವಿಜಯನಗರ ಕಾಲದ ಬೆಳೆಗಳನ್ನು ಒಂದು ಶಾಸನವು[೭] ಈ ಕೆಳಗಿನ ರೀತಿಯಲ್ಲಿ ವಿವರಿಸುತ್ತದೆ. ವಿಜಯನಗರ ಕಾಲದಲ್ಲಿ ಪ್ರಮುಖವಾಗಿ ದ್ವಿದಳ ಧಾನ್ಯಗಳು, ಸಾಂಬಾರ್ ವಸ್ತುಗಳು, ತೋಟದ ಬೆಳೆಗಳು, ನೀರಾವರಿ ಬೆಳೆಗಳನ್ನು ಉತ್ಪಾದಿಸುತ್ತಿದ್ದರು. ದ್ವಿದಳ ಧಾನ್ಯಗಳಲ್ಲಿ ಅವರೆ, ಉದ್ದು, ಗೋಧಿ, ಹೆಸರು, ಹುರುಳಿ, ಕಡಲೆಕಾಳು, ಅಲಸಂದೆಗಳನ್ನು ಬೆಳೆಸಲಾಗುತ್ತಿತ್ತು.[೮] ಸಾಂಬಾರ ಪದಾರ್ಥಗಳಲ್ಲಿ ಮೆಣಸು, ಅಡಕೆ, ಸಾಸಿವೆ, ಮೆಂತ್ಯ, ಜೀರಿಗೆ, ಸಬ್ಬಸಿಗೆ, ಧನಿಯ ಮತ್ತು ಅರಿಸಿನವನ್ನು ಬೆಳೆದರೆ, ತೋಟದ ಬೆಳೆಗಳಲ್ಲಿ ಪ್ರಮುಖವಾಗಿ ತೆಂಗು, ಹಣ್ಣುಹಂಪಲಗಳು, ತರಕಾರಿಗಳನ್ನು ಹಾಗೂ ನೀರಾವರಿ ಬೆಳೆಗಳಾದ ಭತ್ತ, ರಾಗಿ, ಜೋಳ, ಗೋಧಿ, ನವಣೆ, ಮುಸುಕಿನ ಜೋಳ, ಹತ್ತಿ, ಸೆಣಬು ಬೆಳಸಲಾಗುತ್ತಿತ್ತೆಂದು ಸಂಕ್ಷಿಪ್ತವಾಗಿ ವಿವರಿಸಿರುವುದು ಕಂಡುಬರುತ್ತದೆ.[೯] ಕಬ್ಬಿನ ಉತ್ಪನ್ನಗಳಾದ ಸಕ್ಕರೆ ಮತ್ತು ಬೆಲ್ಲ ಹೇರಳವಾಗಿ ಉತ್ಪಾದನೆಯಾಗುತ್ತಿದ್ದು, ಸಾಮ್ರಾಜ್ಯವು ಈ ವಸ್ತುಗಳ ಉತ್ಪಾದನೆಯಲ್ಲಿ ಸ್ವಯಂಪೂರ್ಣವಾಗಿತ್ತೆಂದು ಫಾಹಿಯಾನ್ ಹೇಳುತ್ತಾನೆ. ಬರ್ಬೋಸನು ಸಾಮ್ರಾಜ್ಯದಲ್ಲಿ ತಯಾರಾಗುತ್ತಿದ್ದ ಸಕ್ಕರೆಯು ಹುಡಿಯಾಗಿರುತ್ತಿತ್ತೆಂದು ಹೇಳಿದ್ದಾನೆ. ಮತ್ತೊಬ್ಬ ಪ್ರವಾಸಿಯಾದ ವರ್ತೆಮಾ ಭಟ್ಕಳದಲ್ಲಿ ಸಕ್ಕರೆಯು ಹೇರಳವಾಗಿದ್ದುದ್ದನ್ನು ನೋಡಿದನು ಮತ್ತು ನಮ್ಮಲ್ಲಿ ಅದನ್ನು ಗಟ್ಟಿಗೊಳಿಸಲಾಗುತ್ತು ಎಂದು ಹೇಳಿದ್ದಾನೆ. ಕಬ್ಬನ್ನು ಗದ್ದೆಯಲ್ಲಿಯೂ ಅಥವಾ ಹೆಚ್ಚಾಗಿ ನೀರು ಲಭ್ಯವಿರುವ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಗಾಣಗಳಿಂದ ಕಬ್ಬಿಣ ರಸ ತೆಗೆಯಲಾಗುತ್ತಿತ್ತು. ತೆಂಗಿನಕಾಯಿ ಹಾಗೂ ಅದರ ಉತ್ಪನ್ನಗಳಾದ ಎಣ್ಣೆ, ಎಳೆನೀರು, ನಾರುಗಳ ವರ್ಣನೆಯು ಶಾಸನಗಳಿಂದ ತಿಳಿದುಬರುತ್ತದೆ. ತೆಂಗಿನ ಎಣ್ಣೆಯನ್ನು ಸಹ ಗಾಣಗಳಿಂದ ತೆಗೆಯಲಾಗುತ್ತಿತ್ತು. ಗಾಣಗಳನ್ನು ಮರದಿಂದ ಅಥವಾ ಕಲ್ಲಿನಿಂದ ಮಾಡಿ ಜೋಡಿ ಎತ್ತುಗಳ ಸಹಾಯದಿಂದ ಅದನ್ನು ತಿರುಗಿಸಿ ಅರೆದು ಉತ್ಪಾದಿಸುತ್ತಿದ್ದರು.[೧೦]

ಹೀಗೆ ಬೆಳೆಯಲಾದ ಕೃಷಿ ಉತ್ಪನ್ನಗಳಿಗೆ ವ್ಯಾಪಕವಾದ ಮಾರುಕಟ್ಟೆಯಿತ್ತು. ಕೃಷಿ ಉತ್ಪನ್ನಗಳ ವ್ಯಾಪಾರ ವಹಿವಾಟು ಒಂದು ಮುಖ್ಯವಾದ ಪರಿವರ್ತನೆಯನ್ನು ಕಂಡಿತು. ಈ ಬದಲಾವಣೆಗೆ ಕಾರಣ ಹಣದ ಪ್ರಸರಣವು ಹೆಚ್ಚಾದುದು. ಸಾಂಬಾರು ಪದಾರ್ಥಗಳು, ಅದರಲ್ಲೂ ಮುಖ್ಯವಾಗಿ ಮೆಣಸು, ಕಬ್ಬು ಮತ್ತು ಹತ್ತಿ ಮೊದಲಾದ ವಾಣಿಜ್ಯ ಬೆಳೆಗಳ ಉತ್ಪಾದನೆ ಅಧಿಕಗೊಂಡಿದ್ದು ಮತ್ತು ಕರಾವಳಿ ಪ್ರದೇಶಗಳಿಗೆ ವಿದೇಶಿ ವರ್ತಕರು ಆಗಮಿಸಿರುವುದು ವಿಶಾಲ ಮಾರುಕಟ್ಟೆಗಳ ಬೆಳವಣಿಗೆಗೆ ಕಾರಣವಾಯಿತು. ಇದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳೀಯ ಮಾರುಕಟ್ಟೆಗಳಿದ್ದುದನ್ನು ಶಾಸನಗಳು ಮತ್ತು ಸಾಹಿತ್ಯಿಕ ಮೂಲಗಳು ಸ್ಥಿರಪಡಿಸುತ್ತವೆ. ಈ ಸ್ಥಳೀಯ ಮಾರುಕಟ್ಟೆಗಳಿಂದ

ರೈತರ ಹಾಗೂ ವರ್ತಕರ ನಡುವೆ ಕೃಷಿ ಉತ್ಪನ್ನಗಳು ವಿನಿಮಯಗೊಳ್ಳಲು ಅವಕಾಶವಾಯಿತು. ಸಕ್ರಿಯವಾಗಿದ್ದ ಈ ವ್ಯಾಪಾರದಿಂದಾಗಿ, ಹಳ್ಳಿಗಳಿಗೆ ನಗದು ಹಣವು ಹರಿದುಬಂದಿತು. ರೈತರಿಗೆ ಸರಕಾರಕ್ಕೆ ಕಂದಾಯವನ್ನು, ಜಮೀನುದಾರರಿಗೆ ಬಾಡಿಗೆಯನ್ನು ನಗದಾಗಿ ಪಾವತಿ ಮಾಡಲು ಸಾಧ್ಯವಾಯಿತು. ತಾವು ಹಳ್ಳಿಗಳಲ್ಲಿ ಉತ್ಪಾದಿಸಲು ಸಾಧ್ಯವಿರದಿದ್ದ ಉಪ್ಪು, ಬಟ್ಟೆಗಳು, ಮತ್ತು ಸಾಂಪ್ರದಾಯಿಕ ಚಿನ್ನಾಭರಣಗಳು ಇತ್ಯಾದಿಗಳನ್ನು ಅವರು ನಗದು ಹಣ ಕೊಟ್ಟು ಕೊಂಡುಕೊಳ್ಳುವ ಹಾಗಾದರು. ಎಲ್ಲಕ್ಕಿಂತ ಮಿಗಿಲಾಗಿ, ಅನ್ಯತಾ ರಾಜಕೀಯ ಅನೈಕ್ಯದ ಚಿತ್ರಣವನ್ನು ಕೊಡುತ್ತಿದ್ದ ವಿಜಯನಗರ ಸಾಮ್ರಾಜ್ಯದ ಬೇರೆ ಬೇರೆ ಪ್ರದೇಶಗಳ ನಡುವೆ ಈ ವ್ಯಾಪಾರ ವಹಿವಾಟು ಒಂದು ಪರಿಣಾಮಕಾರಿಯಾದ ಕೊಂಡಿಯಂತೆ ವರ್ತಿಸಿತು. ಹೀಗೆ ಈ ಕಾಲದ ಕೃಷಿ ಆರ್ಥಿಕತೆಯಲ್ಲಿ ಉತ್ಪನ್ನಗಳಿಗಿದ್ದ ಮಾರುಕಟ್ಟೆಯ ವ್ಯವಸ್ಥೆಯಲ್ಲಿ ಆಂತರಿಕ ವ್ಯಾಪಾರ ಹಾಗೂ ವಿದೇಶ ವ್ಯಾಪಾರವು ಪರಿಣಾಮವನ್ನು ಉಂಟುಮಾಡಿತ್ತು. ಕೃಷಿ ಉತ್ಪನ್ನಗಳ ದೇಶೀಯ ವ್ಯಾಪಾರದಲ್ಲಿ ಸಂತೆಗಳು ಪ್ರಮುಖ ಪಾತ್ರ ವಹಿಸುತಿದ್ದವು. ರೈತರು ಅಲ್ಲಿ ತಮ್ಮ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು. ಈ ಆಂತರಿಕ ವ್ಯಾಪಾರವು ಹೆಚ್ಚಿದುದರಿಂದ ಸಂತೆಗಳು ಬಹುಮುಖ್ಯವಾಗಿ ಬೆಳೆದವು. ಇದರಿಂದ ವಿಜಯನಗರದ ಕಾಲಾವಧಿಯಲ್ಲಿ ನಗರಗಳ ಬೆಳವಣಿಗೆ ಹೆಚ್ಚಾಯಿತು. ಈ ಸಂತೆಗಳು ಒಳನಾಡು ವ್ಯಾಪಾರದ ಮುಖ್ಯ ಮಾರ್ಗಗಳಾಗಿದ್ದುವು. ಮಾರುವವರು ಹಾಗೂ ಕೊಳ್ಳುವವರು ನಿರ್ದಿಷ್ಟ ಸ್ಥಳದಲ್ಲಿ ನಿರ್ದಿಷ್ಟ ಸಮಯದಲ್ಲಿ ಸೇರುವುದೇ ಸಂತೆ. ಆದ್ದರಿಂದ ಅದು ಮುಖ್ಯವಾದ ವ್ಯವಹಾರ ಕೇಂದ್ರವಾಗಿತ್ತು. ಸಂತೆಗಳು ನಡೆಯುತ್ತಿದ್ದ ನಗರಗಳು ವರ್ತಕರಿಗೆ ಮತ್ತು ರೈತರಿಗೆ ಕೆಲವು ಅನುಕೂಲಗಳನ್ನು ಮಾಡಿಕೊಡುತ್ತಿದ್ದವು. ಒಳ್ಳೆಯ ರಸ್ತೆ, ಸಮೃದ್ಧವಾಗಿ ನೀರು, ಇತ್ಯಾದಿ. ಸಂತೆಗೆ ಸಂಬಂಧಪಟ್ಟ ವೆಚ್ಚಗಳನ್ನು ನಿರ್ವಹಿಸಲು ಸುಂಕವನ್ನು ಸಂಗ್ರಹಿಸಲಾಗುತ್ತಿತ್ತು. ಕೆಲವು ವೇಳೆ ವಸ್ತುಗಳು ಊರಿಗೆ ಪ್ರವೇಶ ಮಾಡುವಾಗ ವಸ್ತು ರೂಪದಲ್ಲೇ ನಗದಾಗಿಯೇ ಪಡೆದುಕೊಳ್ಳಲಾಗುತ್ತಿತ್ತು. ಇನ್ನು ಕೆಲವು ಸಂದರ್ಭಗಳಲ್ಲಿ ಮಾರಿದ ಮತ್ತು ಕೊಂಡ ವಸ್ತುಗಳ ಮೇಲೆ ಸುಂಕವನ್ನು ವಿಧಿಸಲಾಗುತ್ತಿತ್ತು. ವರ್ತಕರು ಈ ಸುಂಕವನ್ನು ಪಾವತಿ ಮಾಡುತ್ತಿದ್ದರು. ಹೀಗೆ ಸಂತೆಯನ್ನು ಏರ್ಪಡಿಸುವ ವ್ಯಕ್ತಿಗಳಿಗೆ ರೈತರು ಮತ್ತು ವರ್ತಕರು ಸೇರಿ ಭೂಮಿಯನ್ನು ಬಿಟ್ಟುಕೊಡುತ್ತಿದ್ದರು. ಅಥವಾ ಕೆಲವು ರಿಯಾಯಿತಿಗಳನ್ನು ಘೋಷಿಸುತ್ತಿದ್ದರು. ಕೆಲವೊಮ್ಮೆ ವರ್ತಕ ಸಂಘದ ಮುಖ್ಯಸ್ಥನಿಗೆ ಸಂತೆಯನ್ನು ಏರ್ಪಡಿಸುವಂತೆ ಕೋರಿ ಒಂದು ತುಂಡು ಜಮೀನನ್ನು ನೀಡುತ್ತಿದ್ದುದುಂಟು. ಮಾರುಕಟ್ಟೆಯನ್ನು ಪೇಟೆ, ಸಂತೆ ಅಥವಾ ಸಂತೆಪೇಟೆ ಎಂದು ಕರೆಯುತ್ತಿದ್ದರು. ಇವುಗಳನ್ನು ನಾಡಗೌಡರು ಆರಂಭಿಸುತ್ತಿದ್ದರು ಅಥವಾ ನಿಂತುಹೋಗಿದ್ದರೆ ಮತ್ತೆ ಚಾಲನೆಗೊಳಿಸುತ್ತಿದ್ದರು. ಪ್ರಾಂತೀಯ ಗವರ್ನರ್‌ನ ಅಥವಾ ಮಂತ್ರಿಯ ಆದೇಶದಂತೆ ಗೌಡನು ತಾನೇ ಹಳೆಯ ಸಂತೆಯನ್ನು ಚಾಲ್ತಿಗೆ ತರುತ್ತಿದ್ದುದೂ ಉಂಟು.

ಒಂದು ಮುಖ್ಯ ವರ್ತಕ ಸಮುದಾಯವಾದ ಸಾಲುಮೂಲೆ ಬಣಜಿಗ ವರ್ತಕರು ಕೃಷಿ ಉತ್ಪನ್ನಗಳ ವಹಿವಾಟನ್ನೇ ಮುಖ್ಯವಾಗಿ ನಿರ್ವಹಿಸುತ್ತಿದ್ದರು. ಇವರು ವಿಜಯನಗರ ಸಾಮ್ರಾಜ್ಯದ

೨೬ ನಗರಗಳಲ್ಲಿ ಸಂತೆಗಳನ್ನು ಸ್ಥಾಪಿಸಿದ್ದರು. ಅವು. ೧. ವಿಜಯನಗರಿ, ೨. ಹಸ್ತಿನಾವತಿ, ೩. ದೋರಸಮುದ್ರ, ೪. ಗುತ್ತಿ, ೫. ಪೆನುಕೊಂಡ, ೬. ಆದವಾನಿ, ೭. ಉದಯಗಿರಿ, ೮.ಚಂದ್ರಗಿರಿ, ೯. ಮುಳುವಾಯಿ ಅಥವಾ ಮುಳಬಾಗಿಲು ೧೦. ಕಂಚಿ, ೧೧. ಪಡೆವೀಡು, ೧೨. ಚದುರಂಗಪಟ್ಟಣಮ ೧೩. ಮಂಗಳೂರು, ೧೪. ಬಾರಕೂರು, ೧೫. ಹೊನ್ನಾವರ, ೧೬. ಚಂದಾವರ, ೧೭. ಚಂದ್ರಗುತ್ತಿ, ೧೮. ಅಣ್ಣಿಗೇರಿ, ೧೯. ಹುಲಿಗೆರೆ, ೨೦. ನಿಡುಗಲ್ಲು, ೨೧. ಚಿಮತನಕಲ್ಲು, ೨೨. ತರಿಯಕಲ್ಲು, ೨೩. ಆನೆವಿಡ್ಡ, ೨೪. ಸರಿಕಲ್ಡೆಯ, ೨೫. ತೆಲಕಲಾಂಬಿ ಅಥವಾ ತೆರಕಣಾಂಬಿ ಮತ್ತು ೨೬. ಸಿಂಗಪಟ್ಟಣ,[೧೧] ಈ ಪಟ್ಟಿಯಿಂದ ನಾವು ಬಳ್ಳಾರಿ, ಹಾಸನ, ಕೋಲಾರ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ, ಧಾರವಾಡ, ತುಮಕೂರು, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳು ವಿಜಯನಗರ ಕಾಲದಲ್ಲಿ ಬಹುಮುಖ್ಯ ವ್ಯಾಪಾರ ಕೇಂದ್ರಗಳಾಗಿದ್ದುವು ಎಂದು ಹೇಳಬಹುದು. ಕರ್ನಾಟಕವಲ್ಲದೆ, ಸಾಲುಮೂಲೆ ಬಣಜಿಗರು ತಮಿಳುನಾಡು ಮತ್ತು ಆಂಧ್ರಗಳೊಂದಿಗೂ ಸಂಪರ್ಕವಿರಿಸಿಕೊಂಡಿದ್ದರು.

ಈ ಇಪ್ಪತ್ತಾರು ನಗರಗಳ ಸಂತೆಗಳು ಭತ್ತ, ಜೋಳ, ರಾಗಿ, ಬಾರ್ಲಿ, ಬರಗು, ಸಾವೆ, ಗೋಧಿ, ಕಡಲೆ, ಎಳ್ಳು, ಅಗಸೆ, ಕುಸುಬೆ, ಹೆಸರು, ಉದ್ದು, ತೊಗರಿ, ಹುರುವಳ್ಳಿ, ಅಕ್ಕಿ, ಸಕ್ಕರೆ, ಎಣ್ಣೆ, ತುಪ್ಪ, ಉಪ್ಪು, ಬೆಲ್ಲ, ಅಡಕೆ, ವೀಳ್ಯದೆಲೆ, ಮೆಣಸು, ಅರಿಶಿನ, ಈರುಳ್ಳಿ, ಜೀರಿಗೆ, ಮೆಂತ್ಯ, ಸಬ್ಬಸಿಗೆ, ಸಾಸಿವೆ ಮತ್ತು ಕಬ್ಬು[೧೨] ಮೊದಲಾದ ಕೃಷಿ ಉತ್ಪನ್ನಗಳ ಹಂಚಿಕೆ, ಸಂಗ್ರಹಣೆಗಳ ಹಾಗೂ ಮಾರಾಟದ ಕೇಂದ್ರವಾಗಿದ್ದವು. ಈ ಸಂತೆಗಳಲ್ಲಿ ವಸ್ತುಗಳು ಭಾರಿ ಪ್ರಮಾಣದಲ್ಲಿ ವಿನಿಮಯ ವಾಗುತ್ತಿದ್ದವು. ಸುತ್ತಮುತ್ತಲ ಗ್ರಾಮಾಂತರ ಪ್ರದೇಶಗಳಿಂದ ಬಂದ ರೈತಾಪಿ ಜನರು ದೂರದೂರದ ಸ್ಥಳಗಳಿಂದ ಬಂದು, ವಿಧವಿಧವಾದ ಉಡುಗೆಗಳಿಂದ ಆಕರ್ಷಕರಾಗಿದ್ದ ಮಾರಾಟಗಾರರನ್ನು ನೋಡುತ್ತಿದ್ದರು. ಅವರು ಮಾರುತ್ತಿದ್ದ ಬಟ್ಟೆಗಳು, ಧಾನ್ಯಗಳು, ಸಾಂಬಾರು ವಸ್ತುಗಳು ಮತ್ತು ಸುಗಂಧ ದ್ರವ್ಯಗಳು ಅವರ ಮನ ಸೆಳೆಯುತ್ತಿದ್ದವು.[೧೩] ಹಳ್ಳಿಯಿಂದ ಎಷ್ಟೋ ಮೈಲಿಗಳಾಚೆ ನಡೆಯುತ್ತಿದ್ದ ಘಟನೆಗಳ ಬಗೆಗೆ ಅಲ್ಲಿ ಅವರಿಗೆ ತಿಳಿಯುತ್ತಿತ್ತು. ತಮ್ಮಲ್ಲೂ ನೆರೆಹೊರೆಯಲ್ಲೂ ದೊರಕದ ವಸ್ತುಗಳನ್ನು ಕೊಳ್ಳಲು ಈ ಸಂತೆಗಳು ಅವರಿಗೆ ಏಕೈಕ ಅವಕಾಶವಾಗಿದ್ದುವು. ಅದಕ್ಕಿಂತ ಮುಖ್ಯವಾಗಿ, ರೈತರು ಹಳ್ಳಿಗಳಲ್ಲಿ ನಡೆಸುತ್ತಿದ್ದ ತಮ್ಮ ಜೀವನಕ್ಕಿಂತ ಹೊರಗಿನ ವ್ಯವಹಾರಗಳ ಬಗೆಗೆ ತಿಳುವಳಿಕೆ ಪಡೆಯುತ್ತಿದ್ದರು.

ಕೃಷಿ ಉತ್ಪನ್ನಗಳ ಮಾರಾಟದ ಪ್ರಮಾಣ ಎಷ್ಟಿತ್ತೆಂದರೆ, ಅದು ವರ್ತಕ ಸಂಘಗಳ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಿತ್ತು. ಇಂತಹ ಸಂಘಗಳ ಅಸ್ತಿತ್ವವನ್ನು ಅಬ್ದುಲ್ ರಜಾಕ್ ಮತ್ತು ಡೋಮಿಂಗೊ ಉಲ್ಲೇಖಿಸಿದ್ದಾರೆ. ಅವರಿಗೆ ಬೇರೆ ಬೇರೆ ಹೆಸರುಗಳಿದ್ದುವು. ಬಣಜಿಗರು, ನಾನಾದೇಶಿಗಳು ಉಭಯ-ನಾನಾದೇಶಿಗರು, ನಖರರು, ವೈಶ್ಯರು, ಸೆಟ್ಟಿಗಳು, ಸೆಟ್ಟಿಗುಟ್ಟರು, ವೀರಬಣಜಿಗರು ಇತ್ಯಾದಿ. ಈ ಸಂಘಗಳ ಮುಖ್ಯಸ್ಥರು ವಾಣಿಜ್ಯ ಕೇಂದ್ರಗಳ ಮುಖ್ಯಸ್ಥರೂ ಆಗಿರುತ್ತಿದ್ದು, ಬೇರೆ ಬೇರೆ

ಹೆಸರುಗಳಿಂದ ಕರೆಯಲ್ಪಡುತ್ತಿದ್ದರು. ಉಭಯ ನಾನಾದೇಶಿ, ಪಟ್ಟಣಸ್ವಾಮಿ, ಮಹಾ ವಡ್ಡವ್ಯವಹಾರಿ, ವಡ್ಡವ್ಯವಹಾರಿ, ಪಟ್ಟ ವ್ಯಾಪಾರಿ, ಸೆಟ್ಟಿ, ಸ್ವಾಮಿ, ಪೃಥ್ವೀಸೆಟ್ಟಿ, ಸೆಟ್ಟಿ ಪಟ್ಟಣಸ್ವಾಮಿ, ಸೆಟ್ಟಿತನ, ಪುರಪತಿ, ನಗರೇಶ್ವರ, ಪಟ್ಟಣಾಧೀಶ್ವರ ಹಾಗೂ ಮಹಾಪ್ರಭು. ಈ ವರ್ತಕ ಸಮುದಾಯಗಳಲ್ಲಿ, ಸಾಲುಮೂಲೆ ಬಣಜಿಗರು ಮುಖ್ಯರಾಗಿದ್ದರು. ಅವರಲ್ಲಿ ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದಂತೆ ಹಂಜಮಾನ್ ಹಾಗೂ ನಖರ ಹಂಜುಮಾನ ಸಹ ದೇಶೀಯ ಹಾಗೂ ವಿದೇಶಿ ವ್ಯಾಪಾರದಲ್ಲಿ ಮಧ್ಯವರ್ತಿಗಳಾಗಿ ಪಾತ್ರ ವಹಿಸುತ್ತಿದ್ದರು. ಹೀಗೆ ಕೃಷಿ ಉತ್ಪನ್ನಗಳನ್ನು ಅರಬ್ ವ್ಯಾಪಾರಿಗಳು ಸ್ಥಳೀಯ ವರ್ತಕ ಸಮುದಾಯದವರಿಂದ ಕೊಂಡುಕೊಳ್ಳುತ್ತಿದ್ದರು. ಕರಾವಳಿ ಪ್ರದೇಶದಲ್ಲಿ ಸ್ಥಳೀಯರಾಗಿ ಗುರುತಿಸಿಕೊಂಡಿದ್ದ ಮುಸ್ಲಿಂ ವರ್ತಕ ಸಮುದಾಯಗಳು ಆಂತರಿಕ ಹಾಗೂ ವಿದೇಶಿ ವ್ಯಾಪಾರದ ಚಟುವಟಿಕೆಗಳಲ್ಲಿ ಕಂಡುಬರುತ್ತಿದ್ದರು. ಕರ್ನಾಟಕ, ತಮಿಳುನಾಡು, ಆಂಧ್ರ, ಕೇರಳ, ಸಿಲೋನ್‌ವರೆಗೂ ಇವರು ವ್ಯಾಪಾರದ ಏಕಸ್ವಾಮ್ಯತೆಯನ್ನು ಪಡೆದುಕೊಂಡಿದ್ದರು. ಕ್ರಿ.ಶ. ೧೫ನೇ ಶತಮಾನದವರೆಗೂ ಇಡೀ ದಕ್ಷಿಣ ಭಾರತದ ವಿದೇಶಿ ವ್ಯಾಪಾರದ ಸಂಪರ್ಕವು ಈ ಸ್ಥಳೀಯ ಮುಸ್ಲಿಂ ಸಮುದಾಯಗಳ ಕೈಯಲ್ಲಿ ಇತ್ತು.

೬.೨. ವ್ಯಾಪಾರ–ವಾಣಿಜ್ಯ

ಮಧ್ಯಕಾಲೀನ ಸಂದರ್ಭದ ಆರ್ಥಿಕತೆಯ ಕುರಿತು ದಕ್ಷಿಣ ಭಾರತದ ಕರಾವಳಿ ಪ್ರದೇಶಗಳಿಗೆ ಭೇಟಿ ನೀಡಿದ ವಿದೇಶಿ ಪ್ರವಾಸಿಗರ ದಾಖಲೆಗಳು, ಶಾಸನಗಳು, ನಾಣ್ಯಗಳು ಮತ್ತು ಮೌಖಿಕ ಸಂಸ್ಕೃತಿ ಮಾಹಿತಿ ನೀಡುತ್ತವೆ. 'ಸಂಘಂ' ಸಾಹಿತ್ಯವು ವಿವಿಧ ಪ್ರಕಾರದ ವರ್ತಕರು ಮತ್ತು ವ್ಯಾಪಾರಿಗಳು ದಕ್ಷಿಣದಲ್ಲಿ ನೆಲೆಸಿದ್ದರು ಎಂಬುದನ್ನು ತಿಳಿಸುತ್ತದೆ. ಅವುಗಳಲ್ಲಿ ಬಟ್ಟೆ ವ್ಯಾಪಾರಿಗಳು, ಹೂ ಮಾರುವ ಮತ್ತು ಗಂಧ ಮತ್ತು ಹತ್ತಿ ಉತ್ಪಾದನೆ ಮಾಡುವವರು, ಅಕ್ಕಿ ಉತ್ಪಾದನೆ ಮಾಡುವವರು, ಮೀನು ಮಾರುವವರು ಹಾಗೂ ವ್ಯಾಪಾರಿ ವರ್ಗದ ಬಗ್ಗೆ ಮಾಹಿತಿ ಕಂಡುಬರುತ್ತದೆ.

ವಿಜಯನಗರ ಕಾಲಾವಧಿಯಲ್ಲಿ ವಿದೇಶಿ ವ್ಯಾಪಾರವು ಬಹುಮುಖ್ಯವಾದ ಮಹತ್ವವನ್ನು ಪಡೆದಿತ್ತು. ಅರೇಬಿಯಾ ಮತ್ತು ಮಲಬಾರ್ ತೀರಪ್ರದೇಶದ ನಡುವೆ ಅರಬ್ಬರು ಮಧ್ಯವರ್ತಿಗಳಾಗಿದ್ದರು. ಭಾರತದ ನೈರುತ್ಯ ಕರಾವಳಿ ಪ್ರದೇಶದಲ್ಲಿ ಇವರ ಅಸ್ತಿತ್ವದ ಬಗೆಗೆ ಪೊಟಾಮಂಗಳಂ ಗ್ರಾಮದಲ್ಲಿ ಸಿಕ್ಕಿರುವ ಬಂಗಾರದ ನಾಣ್ಯಗಳು ಮಾಹಿತಿ ನೀಡುತ್ತವೆ.[೧೪] ಈ ನಾಣ್ಯವನ್ನು ಉಮ್ಮಾಯಿದ್ ಖಲೀಫ್(ಕ್ರಿ.ಶ. ೬೬೧–೭೫೦) ಹೊರಡಿಸಿದ ಇಸ್ಲಾಂ ಪ್ರಾರಂಭ ಆದ ಮೇಲೆ ಕ್ರಿ.ಶ. ೭ನೇ ಶತಮಾನದಲ್ಲಿ ದಕ್ಷಿಣ ಭಾರತ ಮತ್ತು ಸಿಲೋನ್ ಪ್ರದೇಶಗಳಲ್ಲಿ ಧರ್ಮ ಪ್ರಚಾರವಾಯಿತು. ಹಾಗಾಗಿ ಮಲಬಾರ್ ಪ್ರದೇಶದ ವ್ಯಾಪ್ತಿಯಲ್ಲಿ ಮುಸ್ಲಿಂ ವರ್ತಕ ಸಮುದಾಯವು ಹಂತ ಹಂತವಾಗಿ ಬೆಳೆವಣಿಗೆಯನ್ನು ಕಂಡಿತು.

ಅರಬ್ ವರ್ತಕರ ಹಡಗುಗಳಲ್ಲಿ ಸಾಗಿಸುತ್ತಿದ್ದ ಮಸಾಲೆ ಪದಾರ್ಥಗಳಲ್ಲಿ ಸುಗಂಧದ್ರವ್ಯ, ದಂತ, ಗಂಧ, ಉತ್ತಮ ಗುಣಮಟ್ಟದ ಹತ್ತಿ ಹಾಗೂ ರೇಷ್ಮೆ ಮುಖ್ಯವಾಗಿದ್ದವು. ಈ ವಸ್ತುಗಳಿಗೆ

ಪಶ್ಚಿಮದ ರಾಷ್ಟ್ರಗಳಲ್ಲಿ ಬೇಡಿಕೆ ಇತ್ತು. ಇದಕ್ಕಾಗಿ ಅರಬ್ಬರು ಪಾಚೀನ ಕಾಲದಿಂದ ೧೫ನೆಯ ಶತಮಾನದವರೆಗೆ ಪೂರ್ವ ಮತ್ತು ಪಶ್ಚಿಮದ ಸಮುದ್ರ ವ್ಯಾಪಾರದ ಮೇಲೆ ಹಿಡಿತವನ್ನು ಸಾಧಿಸಿದ್ದರು. ಸಹಜವಾಗಿ ಇವರು ವ್ಯಾಪಾರದ ಚಟುವಟಿಕೆಗಳಲ್ಲಿ ತೊಡಗಿದ್ದ ಪ್ರದೇಶದಲ್ಲಿ ತಮ್ಮ ನೆಲೆಗಳನ್ನು ಕಂಡುಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಭಾರತದ ಪಶ್ಚಿಮ ಕರಾವಳಿಯ ಅರಬ್ ವರ್ತಕರ ನೆಲೆಗಳಲ್ಲಿ ಇಸ್ಲಾಂ ಪ್ರಸರಣಕ್ಕೆ ನೇರವಾದ ಸಂಬಂಧವನ್ನು ಕಾಣಬಹುದು. ಹಾಗಾಗಿ ಲಾಭದ ದೃಷ್ಟಿಯಿಂದ ಸ್ಥಳೀಯ ಅರಸರು ವ್ಯಾಪಾರಕ್ಕೆ ಪ್ರೋತ್ಸಾಹ ನೀಡುತ್ತಿದ್ದರು. ಅದರೊಂದಿಗೆ ಇಲ್ಲಿನ ಸ್ಥಳೀಯ ಮುಖ್ಯಾಧಿಕಾರಿಗಳು ಇವರಿಗೆ ನೆಲೆಸಲು ಬೆಂಬಲ ನೀಡಿದ್ದರು. ಇವರಿಗೆ ಆರಂಭದಲ್ಲಿ ದಕ್ಷಿಣ ಭಾರತದ ಅಪಿಲವಾರ, ಕ್ಯಾಂಬೆ, ಕ್ಯಾಲಿಕಟ್ ಹಾಗೂ ಕ್ಯಾನ್‌ಲೋನ್ ಪ್ರದೇಶಗಳಲ್ಲಿ ನೆಲೆಸಲು ಅವಕಾಶವನ್ನು ನೀಡಲಾಯಿತು. ಈ ರೀತಿಯಾಗಿ ಮುಸ್ಲಿಂ ವರ್ತಕರು ಅಂದಿನ ಅರಸರ ಬೆಂಬಲದಿಂದ ಉತ್ತಮ ಅನುಕೂಲತೆಗಳನ್ನು ಪಡೆದುಕೊಂಡಿದ್ದರು.

ಮಲಬಾರ್‌ನ ಮುಸ್ಲಿಂ ಸಮುದಾಯಗಳಲ್ಲಿ ಮಾಪಿಳ್ಳೆ ಸಮುದಾಯವು ಮುಖ್ಯವಾಗಿ ಕಂಡುಬರುತ್ತದೆ. ಈ ಸಮುದಾಯ ವ್ಯಾಪಾರಸ್ಥ ಸಮುದಾಯವಾಗಿದ್ದು, ಸಂವಹನ ಮತ್ತು ಆರ್ಥಿಕತೆಯಲ್ಲಿ ಅರೇಬಿಯಾ ಮತ್ತು ಕೇರಳದ ನಡುವೆ ಉತ್ತಮ ಸಂಬಂಧವನ್ನು ಹೊಂದಿತ್ತು. ಹಾಗಾಗಿಯೆ ಅರಬ್ ಮತ್ತು ಪರ್ಶಿಯನ್ ನಾವಿಕರು ನಿರಂತರವಾದ ವ್ಯಾಪಾರವನ್ನು ಕರಾವಳಿ ಬಂದರಿನಲ್ಲಿ ಕೈಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಅರಬ್ ವರ್ತಕರ ಸಂಪರ್ಕದಿಂದ ಮಲಬಾರಿನಲ್ಲಿ ಮಾಪಿಳ್ಳೆ ಸಮುದಾಯವು ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದಿತು. ಕೇರಳದ ಉತ್ತರ ಭಾಗದ ಮಲಬಾರಿನ ಪ್ರದೇಶಗಳಲ್ಲಿ ವ್ಯಾಪಾರವು ಪ್ರಮುಖವಾಗಿತ್ತು. ಇಲ್ಲಿನ ನಾರಾ, ತಿಂಡಿಸ್, ಮುಸಿರಿಸ್, ನೆಲಕಿಂದ ಮುಂತಾದ ಬಂದರುಗಳಲ್ಲಿ ವ್ಯಾಪಾರವು ಕಂಡುಬರುತ್ತದೆ. ಮೆಣಸು, ಗಂಧ, ತೆಂಗಿನಕಾಯಿ, ಇನ್ನೂ ಹಲವಾರು ಸರಕುಗಳು ಪ್ರಮುಖವಾಗಿದ್ದವು. ಮಲಬಾರಿನ ದೀರ್ಘ ಹಾಗೂ ಚಿಕ್ಕ ಪ್ರಮಾಣದ ವ್ಯಾಪಾರ ಮಾರ್ಗದಲ್ಲಿ ಪ್ರಮುಖವಾಗಿ ಕಂಡುಬರುವ ಪ್ರದೇಶಗಳೆಂದರೆ ಮತ್ತಾಯಿ, ಧರ್ಮತಂ, ಪಂತಲಯಾನಿ ಕೊಲ್ಲಂ, ಕಲ್ಲಿಕೋಟೆ, ಪೊನ್ನಾನಿ ಪ್ರಾಂತಗಳಾಗಿದ್ದವು.

ಕೋರಮಂಡಲ ಪ್ರದೇಶದಲ್ಲಿ ವ್ಯಾಪಾರ

ಕೋರಮಂಡಲ ಪ್ರದೇಶದಲ್ಲಿ ವ್ಯಾಪಾರವು ಬಹುಮುಖ್ಯವಾದ ವಿಸ್ತಾರವನ್ನು ಹೊಂದಿತ್ತು. ಈ ಪ್ರದೇಶದಲ್ಲಿ ಹಲವು ಮುಸ್ಲಿಂ ಸಮುದಾಯಗಳು ವ್ಯಾಪಾರದಲ್ಲಿ ನಿರತವಾಗಿದ್ದವು. ಸೋನಾಕರ್ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದ ಮುಸ್ಲಿಂ ವ್ಯಾಪರಸ್ಥರು ಇಲ್ಲಿನ ವ್ಯಾಪಾರದಲ್ಲಿ ನಿರತರಾಗಿದ್ದರು. ತುಳುಕ್ಕರ್, ಮರಕ್ಕಯಾರ್, ಲಬ್ಬೆಗಳು, ರಾಥೋರ್ ಸಮುದಾಯಗಳು ಇವರೊಂದಿಗೆ ಅಷ್ಟೇ ಪ್ರಾಮುಖ್ಯತೆ ಪಡೆದುಕೊಂಡಿದ್ದವು. ಸ್ಥಳೀಯ ಹಾಗೂ ವಿದೇಶಿ ವ್ಯಾಪಾರದಲ್ಲಿ ಇವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಆಗ್ನೇಯ ಏಷ್ಯಾದ ರಾಷ್ಟ್ರಗಳಲ್ಲಿ ಇವರು ಚುಲಿಯಾಸ್ ಎಂದು ಸಹ ಗುರುತಿಸಿಕೊಂಡಿದ್ದರು.[೧೫] ಕೋರಮಂಡಲದಲ್ಲಿನ ಪ್ರಮುಖ ವ್ಯಾಪಾರ ಕೇಂದ್ರಗಳೆಂದರೆ ಪುಲಿಕಾಟ್,

ಪೋರ್ಟೊನೊವೊ, ನಾಗಪಟ್ಟಣಂ, ತೊಂಪಿ, ದೇವಿಪಟ್ಟಣಂ. ಕೀಳಕರೈ, ಕಾಯಲ್ಪಟ್ಟಣಂ, ಕೊಚ್ಚಲ್‌ಗಳಾಗಿವೆ. ಈ ಬಂದರು ಪ್ರದೇಶಗಳಲ್ಲಿ ಮುಸ್ಲಿಂ ವರ್ತಕರು ಸ್ಥಳೀಯ ಹಾಗೂ ವಿದೇಶಿ ವಸ್ತುಗಳ ವ್ಯಾಪಾರ-ವಹಿವಾಟಿಗೆ ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿದ್ದರು.

ಅರಬ್ಬರು ಈ ಪ್ರದೇಶದಲ್ಲಿ ಮುಖ್ಯವಾಗಿ ಮುತ್ತುಗಳ ವ್ಯಾಪಾರವನ್ನು ಮಾಡುತ್ತಿದ್ದರು. ಈ ಪ್ರದೇಶದಲ್ಲಿನ ವ್ಯಾಪಾರಿ ಸಮುದಾಯದವರು ಶ್ರೀಮಂತ ವರ್ಗಕ್ಕೆ ಸೇರಿದವರಾಗಿದ್ದರು. ಪೋರ್ಚುಗೀಸರು ಈ ಪ್ರದೇಶಕ್ಕೆ ಪ್ರವೇಶ ಪಡೆಯುವವರೆಗೂ ಇವರು ವ್ಯಾಪಾರದಲ್ಲಿ ಏಕಸ್ವಾಮ್ಯತೆಯನ್ನು ಪಡೆದುಕೊಂಡಿದ್ದರು.

ಕೋರಮಂಡಲ ಪ್ರದೇಶದ ಕೇದ ಮತ್ತು ಪೆನಾಗ್ ಪ್ರಾಂತ್ಯಗಳು ಬಂದರು ಪಟ್ಟಣಗಳಾಗಿದ್ದವು. ಕೇದವು ಜವಳಿ ಉದ್ಯಮಕ್ಕೆ ಪ್ರಸಿದ್ಧವಾಗಿತ್ತು. ಕೇದದಲ್ಲಿ ಹಡಗುಗಳ ನಿರ್ಮಾಣವಾಗುತ್ತಿತ್ತು. ಇವುಗಳನ್ನು ಅಂದಿನ ಸ್ಥಳೀಯ ವ್ಯಾಪಾರಿಗಳು ಹಾಗೂ ವಿದೇಶಿ ವ್ಯಾಪಾರಿಗಳು ಕೊಂಡುಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ಕೇದಾದ ಸುಲ್ತಾನರು ಕೋರಮಂಡಲದ ಬಂದರುಗಳಿಗೆ ಇವರ ಹಡಗುಗಳನ್ನು ಮಾರಾಟಕ್ಕಾಗಿ ಕಳುಹಿಸುತ್ತಿದ್ದರು. ಈ ಹಡಗುಗಳ ಮಧ್ಯವರ್ತಿಗಳಾಗಿ ಚುಲಿಯಾ ಮುಸ್ಲಿಮರು ವ್ಯಾಪಾರ ಚಟುವಟಿಕೆಯಲ್ಲಿ ತೊಡಗಿದ್ದರು. ಇವರು ಆನೆಗಳನ್ನು ಸಹ ರಫ್ತು ಮಾಡುತ್ತಿದ್ದರು. ಮಲಯಾ ದ್ವೀಪ ಸಮೂಹದಿಂದ ಬೃಹತ್ ಸಂಖ್ಯೆಯಲ್ಲಿ ಆನೆಗಳನ್ನು ಕಡಿಮೆ ಬೆಲೆಗೆ ಕೊಂಡುಕೊಂಡು ಕೋರಮಂಡಲದಲ್ಲಿ ಮಾರಿ ಅಧಿಕ ಲಾಭವನ್ನು ಪಡೆಯುತ್ತಿದ್ದರು. ಕೇದಾ ಪ್ರಾಂತ್ಯದ ಬಂದರು ಪಟ್ಟಣಗಳಾದ ನಾಗಪಟ್ಟಣಂ, ಪೋರ್ಟೊನೋವೋ ಹಾಗೂ ಪುಲಿಕಾಟ್‌ಗಳಲ್ಲಿಯೂ ಮುಸ್ಲಿಮರು ನೆಲೆಸಿದ್ದರು. ಈ ಸಂಬಂಧವಾಗಿ ಕ್ರಿ.ಶ. ೨ನೇ ಶತಮಾನದಲ್ಲಿನ ತಮಿಳು ಸಾಹಿತ್ಯದಲ್ಲಿ ಕೇದದ ವ್ಯಾಪಾರದ ಬಗೆಗೆ ಕೆಲವು ತಮಿಳು ಸಾಹಿತ್ಯ ಕೃತಿಗಳು ಮಾಹಿತಿ ಚೆಲ್ಲುತ್ತವೆ.[೧೬]

ಉತ್ತರ ಮಲಬಾರ್

ಕೇರಳದ ಉತ್ತರಭಾಗದ ಉತ್ತರ ಮಲಬಾರಿನಲ್ಲಿ ವ್ಯಾಪಾರವು ಪೂರ್ವ ಕಾಲಾವಧಿಯಿಂದಲೂ ತನ್ನ ಅಸ್ತಿತ್ವವನ್ನು ಪಡೆದುಕೊಂಡಿತ್ತು. ಈ ಪ್ರಾಂತ್ಯದಲ್ಲಿ ಪ್ರಾಚೀನದಿಂದ ವಿಜಯನಗರದ ಕಾಲದವರೆಗೂ ವ್ಯಾಪಾರಕ್ಕೆ ಪ್ರಸಿದ್ಧತೆಯನ್ನು ಪಡೆದುಕೊಂಡ ಪ್ರದೇಶಗಳೆಂದರೆ ಸೌರ, ತೊಂಡಿ, ಮುಸಿರಿಸ್, ನೆಲ್ಕಿಂದ, ಬಂದರು ಪಟ್ಟಣಗಳು ಪ್ರಮುಖವಾಗಿವೆ. ಇಲ್ಲಿ ಮುಖ್ಯವಾಗಿ ಮೆಣಸು, ಗಂಧ, ತೆಂಗಿನಕಾಯಿ, ಮರದ ಅಡಿಕೆ ಹೀಗೆ ವಿವಿಧ ಸರಕುಗಳ ಉತ್ಪಾದನೆಗೆ ಪ್ರಸಿದ್ಧವಾಗಿತ್ತು. ಈ ಬಂದರು ಪಟ್ಟಣಗಳಿಂದ ಮತಾಯಿ, ಧರ್ಮತಂ, ಪಂತಲಮನಿ, ಕೊಲ್ಲಂ, ಕಲ್ಲಿಕೋಟೆ, ಪೊನ್ನಾನಿ ಮುಂತಾದ ಚಿಕ್ಕ ಗ್ರಾಮಗಳ ಮಾರ್ಗಗಳ ಮೂಲಕ ಸರಕುಗಳನ್ನು ಕೊಂಡೊಯ್ಯಲಾಗುತ್ತಿತ್ತು. ಮತಾಯಿ ಪ್ರಾಂತ್ಯವು ಪ್ರಾಚೀನ ಉಲ್ಲೇಖಗಳಲ್ಲಿ ಮರಾಹಿ ಪಟ್ಟಣವಾಗಿತ್ತು. ನಂತರದಲ್ಲಿ ಈ ಬಂದರು ಪ್ರದೇಶವು 'ಮತಾಯಿ'ಯಾಗಿ ಗುರುತಿಸಿಕೊಂಡಿತು. ಈ ಪ್ರಾಂತ್ಯವು ಹಡಗುಗಳ ವ್ಯಾಪಾರಕ್ಕೆ ಪ್ರಸಿದ್ಧಿಯನ್ನು ಪಡೆದುಕೊಂಡಿತ್ತು. ಈ ಪ್ರಾಂತ್ಯವು ಥಾಲಿಪರಂಭ ಹಾಗೂ ಕಾವ್ಯೆ ನದಿಗಳ ಮಧ್ಯದ

ವ್ಯಾಪಾರ ಕೇಂದ್ರವಾಗಿತ್ತು. ಹಾಗಾಗಿ ಇಲ್ಲಿನ ವ್ಯಾಪಾರಸ್ಥರು ಶ್ರೀಮಂತರಾಗಿದ್ದರು. ಸಾಂಬಾರು ಪದಾರ್ಥಗಳು ಹಾಗೂ ಹಡಗುಗಳನ್ನು ಇಲ್ಲಿ ಆಮದು ಮತ್ತು ರಫ್ತು ಮಾಡಲಾಗುತ್ತಿತ್ತು.

ವಿಜಯನಗರ ಕಾಲದಲ್ಲಿ ವ್ಯಾಪಾರಿ ಚಟುವಟಿಕೆಯಲ್ಲಿ ಮತಾಯಿ ಪ್ರಾಂತ್ಯ ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತಿತ್ತು. ಮತಾಯಿ ಪ್ರದೇಶವು ಎಲಿಮಾಲ ಎಂಬ ಸಾಮ್ರಾಜ್ಯದಲ್ಲಿ ಕಂಡುಬರುವ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಮಶಿಕವಂಶದಲ್ಲಿನ ಮರಾಹಿಪಟ್ಟಣಂ ಬಂದರು ಪ್ರದೇಶವು 'ಮತಾಯಿ'ಯಾಗಿ ಗುರುತಿಸಿಕೊಂಡಿದೆ.[೧೭] ಈ ಮತಾಯಿ ಪ್ರಾಂತ್ಯವು ತಲಿಪರಂ ಪ್ರಾಂತ್ಯದಲ್ಲಿ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಮುಸ್ಲಿಂ ವ್ಯಾಪಾರಸ್ಥರು ತಮ್ಮ ವ್ಯಾಪಾರ ವಹಿವಾಟನ್ನು ನಡೆಸುತ್ತಿದ್ದರು. ಮತಾಯಿ ಪ್ರಾಂತ್ಯವು ಶ್ರೀಮಂತ ಪ್ರದೇಶವಾಗಿ ಗುರುತಿಸಿಕೊಂಡಿತ್ತು. ಈಗಾಗಿ ಕೆಲವು ವರ್ತಕ ಸಂಘಗಳು ಇಲ್ಲಿ ಬಂದು ನೆಲೆಸಿದರು. ಮನಿಗ್ರಾಮಮ್ ಸಂಘದ ವರ್ತಕರ ಪಾತ್ರ ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ಕ್ರಿ.ಶ. ೧೨ನೇ ಶತಮಾನದ ಪೂರ್ವದಿಂದಲೇ ಮತಾಯಿ ಕೇಂದ್ರವು ಮುಸ್ಲಿಮರ ವಾಣಿಜ್ಯ ಚಟುವಟಿಕೆಗಳಿಂದಾಗಿ ಮಹತ್ವವನ್ನು ಪಡೆದುಕೊಂಡಿತ್ತು. ಕ್ರಿ.ಶ. ೧೧೨೪ರಲ್ಲಿ ಇಲ್ಲಿ ದೊರೆತಿರುವ ಶಾಸನವು ಇಲ್ಲೊಂದು ಮಸೀದಿ ಇದ್ದುದರ ಬಗ್ಗೆ ತಿಳಿಸುತ್ತದೆ. ಈ ಮಸೀದಿಯು ಅಮೃತ ಶಿಲೆಯಿಂದ ನಿರ್ಮಾಣಗೊಂಡಿತ್ತು. ಇದನ್ನು ಮಲಿಕ್-ದಿನಾರ್ ಎಂಬುವವರು ಕಟ್ಟಿಸಿದ್ದರು. ಈ ಪ್ರದೇಶಕ್ಕೆ ಪಶ್ಚಿಮ ರಾಷ್ಟ್ರದ ಸರಕಗಳು ಸಹ ಬರುತ್ತಿದ್ದವು. ಇದರಿಂದಾಗಿ ಈ ಬಂದರುಪಟ್ಟಣ ಮಲಬಾರ್‌ನ ವ್ಯಾಪಾರಿ ಕೇಂದ್ರಗಳಲ್ಲಿ ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತಿತ್ತು. ಪ್ರಾಚೀನ ಕಾಲದಿಂದ ೧೨ನೇ ಶತಮಾನದವರೆಗೂ ವಾಣಿಜ್ಯಿಕ ವ್ಯವಹಾರಗಳಲ್ಲಿ ಪ್ರಾಮುಖ್ಯತೆ ಪಡೆದಿದ್ದರಿಂದಾಗಿ ಈ ಪ್ರದೇಶಕ್ಕೆ ಮುಸ್ಲಿಂ ವ್ಯಾಪಾರಿಗಳು ದೊಡ್ಡ ಪ್ರಮಾಣದಲ್ಲಿ ವಲಸೆ ಬರಲು ಆರಂಭಿಸಿದ್ದರು. ವಿಜಯನಗರ ಅಧಿಯಲ್ಲಿಯೂ ಈ ಪ್ರದೇಶವು ವ್ಯಾಪಾರದಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿತ್ತು. ಇದರ ಆಧಾರವಾಗಿ ಈಗಲೂ ಕಂಡುಬರುವ ಈ ಮಸೀದಿಯ ಅಸ್ತಿತ್ವವು ಅವರ ಇರುವಿಕೆಯನ್ನು ಸೂಚಿಸುತ್ತದೆ. ಪರ್ಶಿಯನ್ ಕೊಲ್ಲಿನಿಂದ ಎಲಿಮಾಲಾ ಬಂದರಿಗೆ ಗಲ್ಫ್‌ನಿಂದ ಹಡಗುಗಳು ಬರುತ್ತಿದ್ದವು. ಕೊಲ್ಲಂನಿಂದಲೂ ಇಲ್ಲಿಗೆ ಹಡಗುಗಳು ಬಂದು ನಿಲ್ಲುತಿದ್ದವು. ಎಲಿಮಾಲಾಗೆ ಸಂಬಂಧಿಸಿದಂತೆ ಕ್ರಿ.ಶ. ೯೨೮ರ ಶಾಸನವು ಪ್ರಾಚೀನ ದಾಖಲೆಯಾಗಿದೆ.[೧೮]

ಕೇರಳದ ವರ್ತಕರು ಚೋಳ ರಾಜ್ಯದಲ್ಲಿ, ಬರ್ಮಾ, ಸುಮಾತ್ರ ಮತ್ತು ಇತರ ದಕ್ಷಿಣ-ಈಶಾನ್ಯ ರಾಷ್ಟ್ರಗಳಲ್ಲಿ ಹೆಚ್ಚಾಗಿ ವ್ಯಾಪಾರ ಮಾಡುತ್ತಿದ್ದರು. ಕೇರಳದಲ್ಲಿ ಕಂಡುಬರುವ ಕುಳಮುಕ್ಕು ಎಂಬ ಪ್ರದೇಶವು ಇಂದಿನ ಕೊಳಮುಖ ಗ್ರಾಮವಾಗಿದ್ದು, ಇದು ತುತಾ ಮತ್ತು ಪೆರಾರ್ ನದಿಗಳ ಸಂಗಮದಲ್ಲಿದ್ದು, ಇದರ ಒಂದು ನದಿಯ ಬಂದರು ಪಟ್ಟಣವಾದ ಪೊನ್ನಾನಿಯು ಪಾಲ್ಘಾಟ್ ಕಣಿವೆಗೆ ಸಂಪರ್ಕ ಹೊಂದಿದೆ. ಪೊನ್ನಾನಿಯು ಮಲಬಾರ್ ತೀರ ಪ್ರದೇಶದ ಒಂದು ಪ್ರಮುಖ ಬಂದರಾಗಿದ್ದು ಪಶ್ಚಿಮ ಏಷ್ಯಾದ ರಾಷ್ಟ್ರಗಳೊಡನೆ ಹೆಚ್ಚು ವ್ಯಾಪಾರ ಸಂಪರ್ಕ ಹೊಂದಿತ್ತು ಮತ್ತು

ಪಾಲ್ಘಾಟ್ ಕಣಿವೆಯ ಮುಖಾಂತರ ತಮಿಳುನಾಡು ಮತ್ತು ಕರ್ನಾಟಕಕ್ಕೆ ಹೋಗುವ ಮುಖ್ಯ ವ್ಯಾಪಾರ ಮಾರ್ಗಕ್ಕೆ ಸಂಪರ್ಕ ಹೊಂದಿತ್ತು.[೧೯]

ಮಲಬಾರ್ ಪ್ರದೇಶದಲ್ಲಿದ್ದ ಗುಜರಾತ್ ಮತ್ತು ಮಲೆಯಾಳಿ ವರ್ತಕರ ಬಗ್ಗೆ ಉಲ್ಲೇಖಗಳು ಸಿಗುತ್ತವೆ.[೨೦] ಕೆಲವು ಶಾಸನಗಳು ಉಲ್ಲೇಖಿಸುವಂತೆ ಮಲಯಾಳಿ ವರ್ತಕರು ಮೂಲತಃ ಕೇರಳದ ಕೊಳಮುಖ ಪಟ್ಟಣದವರೆಂದು ತಿಳಿಸುತ್ತದೆ.[೨೧] ಗುರುರಾಜಾಚಾರ್ ಅವರು ಉತ್ತರ ಭಾರತದಿಂದ ಮತ್ತು ಕೇರಳದಿಂದ ಬರುತ್ತಿದ್ದ ಕುದುರೆಗಳ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ.[೨೨] ಜಿ.ಆರ್. ಕುಪ್ಪುಸ್ವಾಮಿಯವರು ಮಲಯಾಳಿ ವರ್ತಕರು ಕರ್ನಾಟಕದ ಆರ್ಥಿಕ ಅಭಿವೃದ್ಧಿಯಲ್ಲಿ ಹೆಚ್ಚು ಕಾಣಿಕೆಯನ್ನು ನೀಡಿದ್ದರು ಎಂದಿದ್ದಾರೆ.[೨೩] ಕೆ.ಜಿ.ವಸಂತ ಮಾಧವ ಅವರು ಮಲಯಾಳಿ ವರ್ತಕರು ಕೊಳಮುಕ್ಕ ಗ್ರಾಮದಲ್ಲಿ ವ್ಯಾಪಾರಿ ಚಟುವಟಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು ಎನ್ನುವ ಮಾಹಿತಿ ನೀಡಿದ್ದಾರೆ.[೨೪] ಮಲೆಯಾಳಿ ವರ್ತಕರು ಕುದುರೆ ವ್ಯಾಪಾರದಲ್ಲಿ ನಿರತರಾಗಿದ್ದರು.[೨೫]

ಕ್ರಿ.ಶ. ೧೨ ಮತ್ತು ೧೪ನೇ ಶತಮಾನದ ಶಾಸನಗಳು ಕೇರಳದ ಮಲಬಾರ್ ಪ್ರಾಂತ್ಯದ ಮಲಯಾಳಿ ವರ್ತಕರ ಮೇಲೆ ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ. ಈ ಅವಧಿಯಲ್ಲಿ ಹೊಯ್ಸಳರು ತಮ್ಮ ಅಧಿಕಾರವನ್ನು ಅಭಿವೃದ್ಧಿಪಡಿಸಿಕೊಳ್ಳುವುದರ ಜೊತೆಗೆ, ಕೃಷಿಕ್ಷೇತ್ರದಲ್ಲಿ ಅಧಿಕ ಉತ್ಪಾದನೆ, ಕೃಷಿ ಆಧಾರಿತ ಕೈಗಾರಿಕೆಗಳು, ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲೂ ಕೂಡ ಅಭಿವೃದ್ಧಿಗೊಂಡರು. ಇದಲ್ಲದೆ ರಾಜ್ಯದ ಅವಶ್ಯಕ ವಸ್ತುಗಳಾದ ಯುದ್ಧಾಸ್ತ್ರಗಳು, ಕುದುರೆಗಳು ಆಂತರಿಕ ಮತ್ತು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಅಧಿಕ ಪ್ರಮಾಣದಲ್ಲಿ ಉತ್ತೇಜನ ನೀಡಿದರು. ಇದರೊಂದಿಗೆ ಮಲಯಾಳಿ ವರ್ತಕರಿಗೆ ಕರ್ನಾಟಕದಲ್ಲಿ ವ್ಯಾಪಾರ ಮಾಡಲು ಸದವಕಾಶ ದೊರಕಿದಂತಾಯಿತು. ಅಶ್ವದಳವು ಸೈನ್ಯದ ಒಂದು ಪ್ರಮುಖ ಅಂಗವಾಗಿದ್ದುದರಿಂದ, ಕುದುರೆಗಳನ್ನು ಹೊರನಾಡಿನಿಂದ ಅಥವಾ ಪರದೇಶಗಳಿಂದ ಪಡೆಯುವುದು ಅತ್ಯಾವಶ್ಯಕವಾಗಿತ್ತು. ಈ ಕಾಲದಲ್ಲಿ ಕುದುರೆಗಳ ಬಳಕೆಯನ್ನು ದೇವಾಲಯದ ವಾಸ್ತುಶಿಲ್ಪಗಳು, ವೀರಗಲ್ಲುಗಳು ಹೆಚ್ಚು ಹೆಚ್ಚಾಗಿ ಪ್ರತಿಬಿಂಬಿಸಿವೆ. ಕುದುರೆ ವ್ಯಾಪಾರದ ಬಗ್ಗೆ ವಿದೇಶಿ ಪ್ರಯಾಣಿಕರು ಸಾಕಷ್ಟು ಪುರಾವೆಗಳನ್ನು ಒದಗಿಸಿಕೊಟ್ಟಿದ್ದಾರೆ. ಅವುಗಳಲ್ಲಿ ಪ್ರಮುಖರೆಂದರೆ ಮಾರ್ಕೊ ಪೋಲೋ ಮತ್ತು ಅಬ್ದುಲ್ ವಸ್ಸಫ್ ಇವರೀರ್ವರು ಕ್ರಿ.ಶ. ೧೩ ಮತ್ತು ೧೪ನೇ ಶತಮಾನದಲ್ಲಿ ಮಲಬಾರ್ ತೀರಪ್ರದೇಶ ಮತ್ತು ಮಧ್ಯ ಏಷ್ಯಾ ನಡುವೆ ಇದ್ದ ಕುದುರೆ ವ್ಯಾಪಾರದ ಬಗ್ಗೆ ಹೆಚ್ಚು ಬೆಳಕು ನೀಡಿದ್ದಾರೆ. ಅಬ್ದುಲ್ ವಸ್ಸಫ್ ತನ್ನ ಕೃತಿ ತಾರೀಖ್–ಇ–ವಸ್ಸಫ್‌ನಲ್ಲಿ "ಪ್ರತಿ ವರ್ಷಕ್ಕೆ ಮಲಬಾರ್ ಕಡಲಿಗೆ ವರ್ತಕರು ಪರ್ಷಿಯಾದಿಂದ ೧೪೦೦೦ ಕುದುರೆಗಳನ್ನು ರಫ್ತು ಮಾಡುತ್ತಿದ್ದರು. ಪ್ರತಿ ಕುದುರೆಯ ಬೆಲೆಯನ್ನು ೨೨೦ ದಿನಾರ್‌ಗೆ ನಿಗದಿಪಡಿಸಲಾಗಿತ್ತು... ಅತಾಬಿಕ್ ಅಬುಬಕರ್‌ನ ಕಾಲದಲ್ಲಿ ಪ್ರತಿ ವರ್ಷವೂ ಹತ್ತು ಸಾವಿರ ಕುದುರೆಗಳನ್ನು ಪರ್ಷಿಯಾದಿಂದ ಮಲಬಾರ್, ಕಂಬಾಯತ್(ಕ್ಯಾಂಬೆ) ಮತ್ತಿತರ ಭಾರತದ

ಬಂದರುಗಳಿಗೆ ರಫ್ತು ಮಾಡಲಾಗುತ್ತಿದ್ದು ಇದರಿಂದ ಬರುತ್ತಿದ್ದ ವಾರ್ಷಿಕ ಆದಾಯವು ೨೨೦೦,೦೦೦ ದಿನಾರ್ ಆಗಿತ್ತು... ಹೀಗೆ ಆಮದು ಮಾಡಿಕೊಂಡ ಕುದುರೆಗಳಿಗೆ ಸರಿಯಾದ ಆಹಾರ ಮತ್ತು ಉಪಚಾರ ಇಲ್ಲದೇ, ಕೆಲವೇ ದಿನಗಳಲ್ಲಿ ನಿಶ್ಶಕ್ತಿಗೊಂಡು ಪ್ರಯೋಜನಕ್ಕೆ ಬಾರದಂಥ ಪ್ರಾಣಿಗಳಾಗುತ್ತಿದ್ದವು. ಇದರಿಂದಾಗಿ ಕುದುರೆಗಳಿಗೆ ಬೇಡಿಕೆ ದಿನೇ ದಿನೇ ಹೆಚ್ಚಾಗುತ್ತಿತ್ತು" ಎಂದು ಅಭಿಪ್ರಾಯಪಟ್ಟಿದ್ದಾನೆ. ಮಾರ್ಕೊ ಪೋಲೋ ಸಹ ಹೆಚ್ಚು ಕಡಿಮೆ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.[೨೬]

ಇದಲ್ಲದೆ ಈ ಶಾಸನಗಳು ಕೇರಳದ ಆರ್ಥಿಕ ಇತಿಹಾಸದ ಮೇಲೆ ಪರೋಕ್ಷವಾಗಿ ಬೆಳಕನ್ನು ಚೆಲ್ಲುತ್ತವೆ. ಮಧ್ಯಯುಗೀನ ಕಾಲದಲ್ಲಿ ಕೇರಳದ ಕಡಲ ತೀರವು ಸಮುದ್ರ ವ್ಯಾಪಾರಕ್ಕೆ ಹೆಸರುವಾಸಿಯಾಗಿತ್ತು. ಮಲಬಾರ್ ತೀರ ಪ್ರದೇಶವು ಮುಖ್ಯ ವ್ಯಾಪಾರ ಕೇಂದ್ರವಾಗಿದ್ದು, ಮೆಡಿಟರೇನಿಯನ್ ಮತ್ತು ದಕ್ಷಿಣ ಈಶಾನ್ಯ ರಾಷ್ಟ್ರಗಳೊಡನೆ ನಿಕಟ ವ್ಯಾಪಾರ ಸಂಪರ್ಕ ಹೊಂದಿತ್ತು. ಮಲಬಾರಿನ ವರ್ತಕರು ಹೆಚ್ಚು ಹೆಚ್ಚಾಗಿ ಈ ವ್ಯಾಪಾರದಲ್ಲಿ ನಿರತರಾಗಿ ಅಧಿಕ ಸಂಪತ್ತನ್ನು ಗಳಿಸಲಾರಂಭಿಸಿದರು. ಅಂತಹ ಬಂದರುಗಳಲ್ಲಿ ಪೆರಾರ್ ನದಿಯ ದಡದಲ್ಲಿರುವ ಪೊನ್ನಾನಿಯು ಬಹಳ ಮುಖ್ಯವಾದುದು. ಈ ನದಿಯ ಸಂಗಮದಲ್ಲಿ ಕೊಳಮುಕ್ಕು ಪಟ್ಟಣವನ್ನು ಗುರುತಿಸಿರುವುದು ಅತ್ಯಂತ ಮುಖ್ಯವಾದುದು. ಕರ್ನಾಟಕದ ಎಲ್ಲಾ ಮಲಯಾಳಿ ವರ್ತಕರು ಕೊಳಮುಕ್ಕು ಪಟ್ಟಣಕ್ಕೆ ಸೇರಿರುವರೆಂಬುದು ಇನ್ನೂ ಪ್ರಮುಖವಾದುದು. ಈ ಪಟ್ಟಣವು ಒಂದು ಕಡೆ ಪ್ರಮುಖ ವ್ಯಾಪಾರ ಮಾರ್ಗಕ್ಕೂ ಹಾಗೂ ಮತ್ತೊಂದೆಡೆ ಬಂದರು ಪಟ್ಟಣವಾದ ಪೊನ್ನಾನಿಗೂ ಸಂಬಂಧ ಹೊಂದಿದ್ದು, ಇದರ ಉನ್ನತಿಗೆ ಅತ್ಯಂತ ಪ್ರಮುಖ ಕಾರಣವಾಗಿದೆ. ಪಾಲ್ಘಾಟ್ ಮಾರ್ಗವು ಮಲಯಾಳಿ ವರ್ತಕರಿಗೆ ಇಡೀ ದಕ್ಷಿಣ ಭಾರತ ಮತ್ತು ಪೂರ್ವ ಕರಾವಳಿಯಲ್ಲಿ ವ್ಯಾಪಾರ ಮಾಡಲು ತುಂಬಾ ಸಹಕಾರಿಯಾಗಿತು.

ಕರ್ನಾಟಕ

ಮಲಬಾರಿನ ಬಾರಕೂರ ಪ್ರಾಂತ್ಯವು ದೊಡ್ಡ ಬಂದರು ಪಟ್ಟಣವಾಗಿತ್ತು. ಇಬ್–ನೆ–ಬತುತಾ ಉಲ್ಲೇಖಿಸುವಂತೆ, "ಈ ದೇಶದಲ್ಲಿ ಎಲ್ಲಿಯೂ ದೊರೆಯದಂತಹ ಉತ್ಕೃಷ್ಟವಾದ ಕಬ್ಬು ಇಲ್ಲಿ ಹೇರಳವಾಗಿ ದೊರೆಯುತ್ತದೆ. ಫಾಕನೂರಿನ(ಬಾರಕೂರು) ಸುಲ್ತಾನ ಬಾಸದಾವ್(ವಾಸುದೇವ) ಎಂಬ ಹೆಸರಿನ ಹಿಂದೂ ಲೂಲಾ ಎಂಬ ಮುಸ್ಲಾಮನ ಅಧಿಕಾರಿಯ ನೇತೃತ್ವದಲ್ಲಿ ಮೂವತ್ತು ಹಡಗುಗಳನ್ನು ಇಟ್ಟಿದ್ದಾನೆ."[೨೭] ಮಂಗಳೂರಿನಲ್ಲಿ ಕಂಡುಬರುತ್ತಿದ್ದ ಮುಸ್ಲಿಂ ವರ್ತಕರ ಬಗ್ಗೆ ಇಬ್–ನೆ–ಬತುತಾ ತಿಳಿಸುತ್ತಾ 'ಮಂಗಳೂರು ಮಲಬಾರಿನಲ್ಲೆ ಅತ್ಯಂತ ದೊಡ್ಡದಾದ ಬಂದರು. ಫಾರ್ಸ್ ಮತ್ತು ಎಮೆನ್ ಈ ಕಡೆಗಳಿಂದ ಬಂದ ವರ್ತಕರ ಹಡಗುಗಳು ಇಲ್ಲಿ ತಂಗುತ್ತವೆ. ಮೆಣಸು, ಶುಂಠಿ ಹೇರಳವಾಗಿದೆ. ಮಂಗಳೂರಿನಲ್ಲಿ ನಾಲ್ಕು ಸಾವಿರ ಮುಸಲ್ಮಾನರಿದ್ದಾರೆ. ಇವರಿಗೂ ನಗರವಾಸಿಗಳಿಗೂ ಆಗಾಗ್ಯೆ ಕಾದಾಟ ಕಚ್ಚಾಟಗಳಿದ್ದೇ ಇರುತ್ತವೆ. ರಾಜನು ಇವರನ್ನು ಸಮಾಧಾನ

ಮಾಡುತ್ತಾನೆ. ಏಕೆಂದರೆ ಅವನಿಗೆ ವರ್ತಕರು ಬೇಕು."[೨೮] ವಿಜಯನಗರದ ಆರ್ಥಿಕತೆಯಲ್ಲಿ ಅರಸರಿಂದ ಬೆಂಬಲವನ್ನು ಮುಸ್ಲಿಂ ವರ್ತಕ ಸಮುದಾಯಗಳು ಪಡೆಯುತ್ತಿದ್ದವು ಎಂಬುದಕ್ಕೆ ಪ್ರವಾಸಿ ಕಥನಗಳು ಸಾಕ್ಷಿಯಾಗಿವೆ.

ಗೋವಾ ಬಿಜಾಪುರದ ಸುಲ್ತಾನರ ಅಧೀನದಲ್ಲಿದ್ದ ಪ್ರಮುಖ ಬಂದರು ಪಟ್ಟಣ. ಇದು ಬಿಜಾಪುರದ ಆದಿಲ್‌ಶಾಹಿಗಳ ಬಳಿಯಲ್ಲಿದ್ದರೆ ಅರಬ್ಬರು ಮತ್ತು ಪೋರ್ಚುಗೀಸರು ತರುತ್ತಿದ್ದ ಅಶ್ವಗಳನ್ನು ಅವರೇ ಕೊಳ್ಳುತ್ತಿದ್ದರು. ವಿಜಯನಗರ ಸಾಮ್ರಾಜ್ಯದಲ್ಲಿ ಹೊನ್ನಾವರ ಹಾಗೂ ಭಟ್ಕಳ ಬಂದರುಗಳು ಗೋವಾದ ಎದುರು ದಿನೇ ದಿನೇ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದ್ದವು. ಇದೇ ವೇಳೆಗೆ ವ್ಯಾಪಾರಿ ಕ್ಷೇತ್ರದಲ್ಲಿ ಪೋರ್ಚುಗೀಸರ ಪ್ರವೇಶವಾಯಿತು. ಅವರ ಗವರ್ನರ್ ಆದ ಆಲ್ಬುಕರ್ಕ್‌ನು ಪಶ್ಚಿಮ ಕರಾವಳಿಯ ಸಮುದ್ರದ ಮೇಲಿನ ಅರಬ್ಬರ ಹಿಡಿತವನ್ನು ತಪ್ಪಿಸಲು ಹವಣಿಸುತ್ತಿದ್ದನು. ಒಂದು ವೇಳೆ ಗೋವಾವನ್ನು ಪೋರ್ಚುಗೀಸರು ಗೆದ್ದುಕೊಂಡರೆ ಅವರು ತಂದ ಎಲ್ಲಾ ಅಶ್ವಗಳನ್ನು ಕೃಷ್ಣದೇವರಾಯ ಕೊಂಡುಕೊಳ್ಳಬಹುದು ಎಂದು ಲೆಕ್ಕಾಚಾರ ಹಾಕಿದ್ದನು. ಇದರಿಂದ ಹಿಂದೆ ರಾಯನು ತನ್ನ ಸೈನ್ಯವನ್ನು ಬಲಗೊಳಿಸುವ ಉದ್ದೇಶವನ್ನು ಹೊಂದಿದ್ದು, ಸಹಾಯವನ್ನು ನೀಡಿದ್ದನು. ಹಾಗಾಗಿ ಪೋರ್ಚುಗೀಸರು ಗೋವಾವನ್ನು ಗೆಲ್ಲುವ ಮೂಲಕ ವ್ಯಾಪಾರವನ್ನು ಅದರಲ್ಲಿಯೂ ಕುದುರೆ ವ್ಯಾಪಾರದಲ್ಲಿ ಏಕಸ್ವಾಮ್ಯತೆಯನ್ನು ಪಡೆದರು. ನಂತರ ಮಾಡಿಕೊಂಡ ಒಪ್ಪಂದದಂತೆ ತಾವು ತಂದ ಎಲ್ಲಾ ಅಶ್ವಗಳನ್ನು ವಿಜಯನಗರದ ಅರಸರಿಗೆ ಮಾರತೊಡಗಿದರು.[೨೯]

ವಿಜಯನಗರದ ಅರಸರು ಅರಬ್ಬರು ಮತ್ತು ಪೋರ್ಚುಗೀಸರ ಜೊತೆಗೆ ಸ್ನೇಹಯುತವಾದ ಸಂಬಂಧ ಗಳಿಸಿದ್ದು, ತಮ್ಮ ಸೈನ್ಯಕ್ಕೆ ಅಗತ್ಯವಾದ ಕೆಲವು ಅಶ್ವಗಳನ್ನು ವಿದೇಶಗಳಿಂದ ತರಿಸಿ ಕೊಳ್ಳುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯ. ಇದರಿಂದಾಗಿ ವಿದೇಶಿಯರು ವಿಜಯನಗರಕ್ಕೆ ಬರುತ್ತಿದ್ದರು. ಈ ಹಿನ್ನೆಲೆಯಲ್ಲಿ ಅಂದಿನ ವಾಸ್ತುಶಿಲ್ಪಗಳಲ್ಲಿ ವಿದೇಶಿ ವರ್ತಕರ ಮೂರ್ತಿಗಳ ಕೆತ್ತನೆಗಳನ್ನು ಕಾಣಬಹುದು. ಅವುಗಳಲ್ಲಿ ಇವರು ರಾಜನನ್ನು ಭೇಟಿ ಮಾಡುತ್ತಿರುವಂತೆ, ತಮ್ಮ ಅಶ್ವಗಳ ಜೊತೆಯಲ್ಲಿ ನಿಂತಿರುವಂತೆ, ಮುಖ್ಯವಾಗಿ ಅವರ ಅಶ್ವಗಳನ್ನು ಇಲ್ಲಿನ ಸೈನಿಕರು ಪರೀಕ್ಷೆ ಮಾಡುತ್ತಿರುವಂತೆ ಶಿಲ್ಪಗಳನ್ನು ಕೆತ್ತಲಾಗಿದೆ.[೩೦]

ವಿಜಯನಗರ ಪಟ್ಟಣ ರಾಜಧಾನಿಯಾಗಿದ್ದುದಲ್ಲದೆ, ವಿಜಯನಗರ ಪಟ್ಟಣವು ದೊಡ್ಡ ವ್ಯಾಪಾರ ಕೇಂದ್ರವೂ, ಕರ್ನಾಟಕದ ವಾಣಿಜ್ಯ ಚಟುವಟಿಕೆಗಳಿಗೆ ಕೇಂದ್ರಸ್ಥಾನವೂ ಆಗಿತ್ತು. ಇದನ್ನು ರಷ್ಯಾ, ಪರ್ಷಿಯಾ, ಇಟಲಿ ಮತ್ತು ಪೋರ್ಚುಗಲ್ಲುಗಳಿಂದ ೧೫ ಮತ್ತು ೧೬ನೆಯ ಶತಮಾನಗಳಲ್ಲಿ ಬಂದ ಪ್ರವಾಸಿಗರು ಸ್ಥಿರಪಡಿಸಿದ್ದಾರೆ.[೩೧] ಪಾಯಸ್‌ನ ಪ್ರಕಾರ, "ಈ ನಗರದಲ್ಲಿ ಜಗತ್ತಿನ ಪ್ರತಿಯೊಂದು ರಾಷ್ಟ್ರದಿಂದ ಬಂದ ವಿವಿಧ ಜನರನ್ನು ನೋಡಬಹುದು. ಅದಕ್ಕೆ ಕಾರಣ ಅಲ್ಲಿ ನಡೆಯುವ ಭಾರೀ ಪ್ರಮಾಣದ ವ್ಯಾಪಾರ-ವಹಿವಾಟು". ಬೇರೊಂದು ಕಡೆ ಅವನೇ ಹೇಳುತ್ತಾನೆ,[೩೨] ವಿಜಯನಗರದಲ್ಲಿ

೧೦೦,೦೦೦ ಮನೆಗಳಿದ್ದುವು. ಸರಾಸರಿ ಒಂದು ಮನೆಗೆ ಐದು ಜನರಂತೆ ಲೆಕ್ಕ ಹಾಕಿದರೆ, ೧೬ನೆಯ ಶತಮಾನದ ಪ್ರಾರಂಭದಲ್ಲಿ ಈ ವ್ಯಾಪಾರಿ ಕೇಂದ್ರದ ಜನಸಂಖ್ಯೆ ೫೦೦,೦೦೦ ಆಗುತ್ತಿತ್ತು. ಕೃಷಿ ಉತ್ಪನ್ನಗಳ ವ್ಯಾಪಾರವನ್ನು ಮುಖ್ಯವಾಗಿ ನಿರ್ವಹಿಸುತ್ತಿದ್ದ ಸಾಲುಮೂಲೆ ಬಣಜಿಗರ ಸಭೆಯ ಬಗೆಗೆ ಹೇಳುವ ಶಾಸನವು ವಿಜಯನಗರ ಪಟ್ಟಣವು ಒಂದು ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು ಎನ್ನುವುದನ್ನು ದಾಖಲಿಸುತ್ತದೆ.[೩೩]

ನಗರದಲ್ಲಿ ಬೇರೆ ಬೇರೆ ಬಡಾವಣೆಗಳಿದ್ದವು. ಪ್ರತಿ ಬಡಾವಣೆಯೂ ಸ್ವಯಂಪೂರ್ಣವಾದ ಘಟಕವಾಗಿತ್ತು. ಮುಖ್ಯವಾದೊಂದು ದೇವಾಲಯ, ಸಂತೆ ಬೀದಿ, ಅದರದೇ ನೀರು ಸರಬರಾಜು ವ್ಯವಸ್ಥೆ ಇತ್ಯಾದಿಗಳಿದ್ದವು. ವಿರೂಪಾಕ್ಷ ದೇವಾಲಯದ ಎದುರಿಗೆ ಒಂದು ಸಂತೆಪೇಟೆಯಿತ್ತು. ಅನೇಕ ಸಂದರ್ಭಗಳಲ್ಲಿ ದೇವಾಲಯವು ಕರ್ನಾಟಕದ ವಿವಿಧ ಭಾಗಗಳಿಂದ ಬಂದ ವರ್ತಕರು ಸಂಧಿಸುವ ಸ್ಥಳವಾಗುತ್ತಿತ್ತು.[೩೪] ವಿಜಯನಗರ ಪಟ್ಟಣದ ಒಂದು ಪೇಟೆಬೀದಿಗೆ ಅಚ್ಯುತರಾಯನ ಹೆಸರಿನ ಮೇಲೆ ಅಚ್ಯುತರಾಯಪೇಟೆ ಎಂದೇ ಹೆಸರಿತ್ತು.[೩೫] ಇನ್ನೊಂದು ಪೇಟೆಯು ಕೃಷ್ಣದೇವರಾಯನ ಹೆಸರಿನ ಮೇಲಿದ್ದು, ಅಲ್ಲಿ ಧಾನ್ಯಗಳ ಅಂಗಡಿಗಳಿದ್ದುವೆಂದು ಶಾಸನವು ಹೇಳುತ್ತದೆ.[೩೬] ಇದೆಲ್ಲ ಕೃಷಿ ಉತ್ಪನ್ನಗಳ ಮಾರಾಟದ ವಿಷಯದಲ್ಲಿ ವಿಜಯನಗರದ ಅರಸರು ಹೊಂದಿದ್ದ ತೀವ್ರವಾದ ಆಸಕ್ತಿಯನ್ನು ತೋರಿಸುತ್ತದೆ. ನಗರಪ್ರದೇಶಗಳ ಪೇಟೆಬೀದಿಗಳು ಗ್ರಾಮಪ್ರದೇಶಗಳ ಸಂತೆಗಳಿಗೆ ಸಂವಾದಿಯಾಗಿದ್ದವು ಎಂದು ಹೇಳಬಹುದು.

೧೬ನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಭೇಟಿ ನೀಡಿದ ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್ ಈ ಮಾರುಕಟ್ಟೆಗಳಲ್ಲಿ ಸದಾಕಾಲವೂ ಸಮೃದ್ಧವಾಗಿ ಹಣ್ಣುಹಂಪಲುಗಳು ತುಂಬಿದ್ದುದನ್ನು ಗಮನಿಸಿದನು. ದ್ರಾಕ್ಷಿ, ಕಿತ್ತಳೆ, ನಿಂಬೆ, ದಾಳಿಂಬೆ, ಹಲಸು ಮತ್ತು ಮಾವಿನ ಹಣ್ಣುಗಳು ಸಮೃದ್ಧವಾಗಿದ್ದವು ಮತ್ತು ಈ ಹಣ್ಣುಗಳು ತುಂಬಾ ಅಗ್ಗವೂ ಆಗಿದ್ದವು.[೩೭] ವಿಜಯನಗರ ಪಟ್ಟಣದಲ್ಲಿ ಪ್ರತಿ ಸಂಜೆಯೂ ಸಂತೆ ನಡೆಯುತ್ತಿತ್ತು, ಈ ಎಲ್ಲಾ ವಸ್ತುಗಳು ಅಲ್ಲಿ ದೊರಕುತ್ತಿದ್ದವು.[೩೮] ವಸ್ತುಗಳ ಪ್ರಮಾಣ ನ್ಯೂನಿಜ್‌ನನ್ನು ಬೆರಗಾಗಿಸಿತು. ಪ್ರತಿದಿನವೂ ಮಾರುಕಟ್ಟೆಯಲ್ಲಿ ದೊರಕುತ್ತಿದ್ದ ಬೆಣ್ಣೆ, ಹಾಲು ಮತ್ತು ಎಣ್ಣೆಗಳ ಉತ್ತಮ ಗುಣಮಟ್ಟವನ್ನು ವಿಶೇಷವಾಗಿ ಉಲ್ಲೇಖಿಸದೆ ಇರಲು ಅವನಿಗೆ ಸಾಧ್ಯವಾಗಲಿಲ್ಲ.[೩೯]

ಕೃಷಿ ಉತ್ಪನ್ನಗಳ ಮೇಲೆ ವಿಧಿಸುತ್ತಿದ್ದ ಸಾರಿಗೆ ಸುಂಕವು ಕರ್ನಾಟಕದಲ್ಲಿ ರಾಜ್ಯ ವರಮಾನದ ಮುಖ್ಯವಾದೊಂದು ಮೂಲವಾಗಿತ್ತು. ಎತ್ತುಗಳ ಮೇಲೆ ಹೇರಿಕೊಂಡು ಮೆಣಸು, ಅಡಕೆ, ರೇಷ್ಮೆ, ಮರಮುಟ್ಟು, ಅಕ್ಕಿ, ಭತ್ತ, ರಾಗಿ, ಉಪ್ಪು, ಧಾನ್ಯ, ಎಣ್ಣೆ, ತುಪ್ಪ, ಬೇಳೆಕಾಳುಗಳು, ಬೆಲ್ಲ, ಹಣ್ಣುಗಳು, ತೆಂಗಿನ ತಿರುಳು, ಹತ್ತಿ ಬಟ್ಟೆ, ಹೊಗೆಸೊಪ್ಪು, ಜೀರಿಗೆ, ಸಾಸಿವೆ, ಈರುಳ್ಳಿ, ಬೆಳ್ಳುಳ್ಳಿ, ಅರಿಶಿನ, ಶುಂಠಿ ಮತ್ತಿತರ ವಸ್ತುಗಳನ್ನು ಸಾಗಿಸುತ್ತಿದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ.[೪೦]

ಎಲ್ಲಾ ಬಗೆಯ ಕೃಷಿ ಉತ್ಪನ್ನಗಳ ಮೇಲೂ ಈ ಸಾಗಣೆ ಸುಂಕವನ್ನು ವಿಧಿಸಿದ್ದರು. ಒಂದು ಶಾಸನವು ವಿಜಯನಗರ ಸಾಮ್ರಾಜ್ಯದ ವ್ಯಾಪಾರ ಕೇಂದ್ರಗಳಲ್ಲಿ ಹೀಗೆ ಕೊಡಬೇಕಾದ ಸುಂಕಗಳ

ದರವನ್ನು, ವಸ್ತುಗಳ ಪಟ್ಟಿಯನ್ನು ಕೊಡುತ್ತದೆ.[೯೧] ಹೀಗೆ ಕರ್ನಾಟಕದಲ್ಲಿ ಕೃಷಿ ಉತ್ಪನ್ನಗಳ ಅನೇಕ ವ್ಯಾಪಾರ ಕೇಂದ್ರಗಳು ಬೆಳೆದುದು ಒಳನಾಡಿನ ವ್ಯಾಪಾರಕ್ಕೆ ತುಂಬಾ ಅನುಕೂಲಕರವಾಗಿ ಪರಿಣಮಿಸಿತು. ಆ ಕೇಂದ್ರಗಳಲ್ಲಿ ರೈತರು ತಂದ ವಸ್ತುಗಳು ಮಾರಾಟವಾಗುತ್ತಿದ್ದವು, ಕೆಲವೊಮ್ಮೆ ವಿನಿಮಯಗೊಳ್ಳುತ್ತಿದ್ದವು. ಆದರೆ ಹೆಚ್ಚುವರಿ ಉತ್ಪಾದನೆಯ ಬಹುಪಾಲನ್ನು ನಗರಗಳಲ್ಲಿದ್ದ ವರ್ತಕರಿಗೆ ಒದಗಿಸಲಾಗುತ್ತಿತ್ತು. ಅಲ್ಲಿಂದ ಕರ್ನಾಟಕದ ಇತರ ವ್ಯಾಪಾರ ಕೇಂದ್ರಗಳಿಗೆ ರವಾನೆಯಾಗುತ್ತಿದ್ದಿತು, ಇಲ್ಲವೆ ಬೇರೆ ದೇಶಗಳಿಗೆ ರಫ್ತಾಗುತ್ತಿದ್ದಿತು.

ಕೃಷಿ ಉತ್ಪಾದನೆಗಳ ವಿದೇಶಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಕರ್ನಾಟಕದ ಭಟ್ಕಳ, ಮಂಗಳೂರು, ಹೊನ್ನಾವರ ಬಂದರುಗಳಿಂದ ರಫ್ತಾಗುತ್ತಿದ್ದ ಅತ್ಯಂತ ಮುಖ್ಯವಾದ ವಸ್ತು ಕರಿಮೆಣಸು. ಅದಕ್ಕೆ ಭಾರತದಲ್ಲೂ ಹೊರದೇಶದಲ್ಲೂ ಒಳ್ಳೆಯ ಮಾರುಕಟ್ಟೆಯಿದ್ದಿತು.

ಒಳನಾಡ ವ್ಯಾಪಾರದಲ್ಲೂ ಹಾಗೂ ಪಶ್ಚಿಮ ದೇಶಗಳೊಂದಿಗೆ ಸಾಗರೋತ್ತರ ವಾಣಿಜ್ಯದಲ್ಲೂ ಕರ್ನಾಟಕವು ವಿಶಿಷ್ಟ ಪಾತ್ರವನ್ನು ನಿರ್ವಹಿಸುತ್ತಿತ್ತು. ಹೀಗೆ ವ್ಯಾಪಾರವಾಗುತ್ತಿದ್ದ ಕೃಷಿ ಉತ್ಪನ್ನಗಳಲ್ಲಿ ಬಹುಪಾಲು ಮೆಣಸು ಮತ್ತು ಇತರ ಸಾಂಬಾರ ವಸ್ತುಗಳು ಸೇರಿದ್ದವು. ಪರ್ಯಾಯ ದ್ವೀಪದ ಪಶ್ಚಿಮದಲ್ಲಿ ಸೊಗಸಾದ ಉದ್ದನೆಯ ಕರಾವಳಿಯಿದ್ದು ಕರ್ನಾಟಕವು ಪಶ್ಚಿಮ ದೇಶಗಳೊಂದಿಗೆ ಸಂಪರ್ಕ ಕಲ್ಪಿಸುವ ಸಮುದ್ರ ಮಾರ್ಗಗಳ ಮೇಲೆ ಹಿಡಿತವನ್ನಿಟ್ಟುಕೊಂಡಿತ್ತು. ಅಬ್ದುಲ್ ರಜಾಕನ ಪ್ರಕಾರ, ವಿಜಯನಗರ ಸಾಮ್ರಾಜ್ಯದಲ್ಲಿ ೩೦೦ ಬಂದರುಗಳಿದ್ದವು. ಹಿಂದೂಮಹಾಸಾಗರದ ದ್ವೀಪಗಳು, ಮಲಯ, ಬರ್ಮಾ, ಚೈನಾ, ಅರೇಬಿಯ, ಪರ್ಷಿಯ, ದಕ್ಷಿಣ ಆಫ್ರಿಕಾ, ಅಬಿಸೀನಿಯ ಮತ್ತು ಪೋರ್ಚುಗಲ್‌ಗಳೊಂದಿಗೆ ವ್ಯಾಪಾರ ಸಂಬಂಧಗಳನ್ನು ಬೆಳೆಸಿಕೊಂಡಿದ್ದಿತು.[೯೨] ಒಳಭಾಗಗಳಿಂದ ಪಶ್ಚಿಮ ಕರಾವಳಿಯ ಅಂಕೋಲ, ಮಿರ್ಜಾನ್, ಹೊನ್ನಾವರ, ಭಟ್ಕಳ, ಬೈಂದೂರು, ಬಾರಕೂರು, ಬಸ್ರೂರು, ಮಂಗಳೂರು ಮತ್ತು ಕುಂಬ್ಳೆ ಮೊದಲಾದ ಪಟ್ಟಣಗಳಿಗೆ ಕೃಷಿ ಉತ್ಪನ್ನಗಳು ಕಾವಡಿಗಳ ಮೂಲಕ ಸಾಗುತ್ತಿದ್ದವು. ಒಂದು ಉದ್ದನೆಯ ಕೋಲಿಗೆ ಎರಡೂ ತುದಿಗಳಲ್ಲಿ ಹಗ್ಗದಿಂದ ಸರಕನ್ನು ನೇತುಹಾಕಿ, ಹೆಗಲ ಮೇಲೆ ಹೊತ್ತು ಒಯ್ಯುವುದೇ ಕಾವಡಿ. ತಲೆ ಹೊರೆಗಳು, ಕುದುರೆ ಹೇರುಗಳು, ಎತ್ತಿನ ಹೇರುಗಳು, ಬಂಡಿಗಳು ಮತ್ತು ಹೇರು ಕತ್ತೆಗಳೂ ಉಪಯೋಗವಾಗುತ್ತಿದ್ದವು.[೯೩] ಕರ್ನಾಟಕದ ಈ ಬಂದರುಗಳಲ್ಲಿ ಪೋರ್ಚುಗೀಸ್ ವರ್ತಕರು ಅಕ್ಕಿ, ಸಕ್ಕರೆ, ಸಾಂಬಾರು ವಸ್ತುಗಳು, ಹತ್ತಿಯ ಬಟ್ಟೆ ಮೊದಲಾದವನ್ನು ಕೊಂಡು ವಿದೇಶಗಳಿಗೆ ಹಡಗುಗಳ ಮೂಲಕ ರವಾನಿಸುತ್ತಿದ್ದರು.[೯೪] ಬಸ್ರೂರು, ಬಾರಕೂರು ಮತ್ತು ಮಂಗಳೂರು ಬಂದರುಗಳಿಂದ ಮಾಲ್ಡೀವ್ ದ್ವೀಪಗಳು, ಏಡನ್ ಮತ್ತು ಆರ್ಮುಜ್‌ಗಳಿಗೆ ಅಕ್ಕಿಯು ರಫ್ತಾಗುತ್ತಿತ್ತು.[೯೫] ಕೃಷ್ಣದೇವರಾಯನ ಸಮಕಾಲೀನರಾದ ಕನಕದಾಸರು ತಮ್ಮ ಮೋಹನತರಂಗಿಣಿಯಲ್ಲಿ, ಕೃಷಿ ಉತ್ಪನ್ನಗಳನ್ನು ವಿದೇಶಗಳಿಗೆ ಕಳುಹಿಸಿ ವ್ಯಾಪಾರ ಮಾಡುತ್ತಿದ್ದವರ ಸಂಪತ್ತು ಎಷ್ಟಿರುತ್ತಿದ್ದಿತೆಂದರೆ, ಅವರು ಕುಬೇರನಿಗೂ ಸಾಲ ಕೊಡಬಲ್ಲವರಾಗಿದ್ದರು, ತಮ್ಮ ಅಂಗಡಿ ಮಳಿಗೆಗಳಲ್ಲಿ ಚಿನ್ನದ ಮತ್ತು ಹಣದ ರಾಶಿಯ ಮೇಲೆ ಕುಳಿತಿರುತ್ತಿದ್ದರು ಎಂದು ಹೇಳುತ್ತಾರೆ.[೯೬]

ಕ್ರಿ.ಶ. ೧೫ನೇ ಶತಮಾನದಲ್ಲಿ ಕ್ಯಾಲಿಕಟ್‌ನಲ್ಲಿ ಮುಸ್ಲಿಂ ಸಮುದಾಯಗಳ ಸಂಖ್ಯೆ ಅತಿ ಹೆಚ್ಚಾಗಿತ್ತು. ಪಶ್ಚಿಮ ಕರಾವಳಿಯಲ್ಲಿ ಮುಸ್ಲಿಂ ವರ್ತಕರು ಸಾಂಬಾರು ಪದಾರ್ಥ, ಅಕ್ಕಿ, ಗೋಧಿ ಮತ್ತು ರಾಗಿಗಳನ್ನು ಪಶ್ಚಿಮ ಏಷ್ಯಾದ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದರು. ವರ್ತಿಮಾ ಪ್ರಕಾರ ಕ್ಯಾಲಿಕಟ್‌ನ ಮುಸ್ಲಿಂ ವರ್ತಕರು ತಮ್ಮ ಕಾರ್ಯಕರ್ತರನ್ನು ಮಂಗಳೂರು ಮತ್ತು ಬಸ್ರೂರುಗಳಲ್ಲಿ ಕಂಡುಬರುತ್ತಿದ್ದರು. ಬಾರ್ಬೊಸ್ ತಿಳಿಸುವಂತೆ ಕ್ಯಾಲಿಕಟ್‌ನಿಂದ ದೊಡ್ಡ ಮಟ್ಟದಲ್ಲಿ ಏಡೆನ್‌ಗೆ ಅಕ್ಕಿಯನ್ನು ರಫ್ತು ಮಾಡಲಾಗುತ್ತಿತ್ತು. ಅರೇಬಿಯಾದಲ್ಲಿ ಅಕ್ಕಿಗೆ ಬಹಳ ಬೇಡಿಕೆ ಇತ್ತು. ಹಾಗಾಗಿ ಅಕ್ಕಿಯು ಗೋವಾದಿಂದ ಆರ್ಮೋಸ್‌ಗೆ ರವಾನೆಯಾಗುತ್ತಿತ್ತು. ಇದನ್ನು ಮಲಬಾರ್ ವರ್ತಕರು ರಫ್ತು ಮಾಡುತ್ತಿದ್ದರು. ಈ ವರ್ತಕರು ಮಂಗಳೂರಿನಿಂದ ಅಕ್ಕಿಯನ್ನು ಆಮದು ಮಾಡಿಕೊಂಡು ಗೋವಾ, ಸಿಲೋನ್‌ಗೆ ಕಳುಹಿಸುತ್ತಿದ್ದರು. ಹೀಗೆ ಕರ್ನಾಟಕದ ಕರಾವಳಿಯಲ್ಲಿ ಉತ್ಪಾದನೆಯಾದ ಅಕ್ಕಿಯು ಕ್ಯಾಲಿಕಟ್ ಮೂಲಕ ವಿದೇಶಕ್ಕೆ ರಫ್ತಾಗುತ್ತಿತ್ತು. ಕ್ಯಾಲಿಕಟ್‌ನ ಮುಸ್ಲಿಂ ವರ್ತಕರು ತಮ್ಮ ಕಾಯಕದಲ್ಲಿ ಮಂಗಳೂರಿನಲ್ಲಿದ್ದರು. ಬೇಲೂರು ಶಾಸನದ ಉಲ್ಲೇಖದಲ್ಲಿ ಬಣಿಜ ವರ್ತಕರು ತಮ್ಮ ವ್ಯಾಪಾರದಲ್ಲಿ ಅಕ್ಕಿಯನ್ನು ಸಹ ಮಾರುತ್ತಿದ್ದರು. ಮಂಗಳೂರಿನಲ್ಲಿದ್ದ ಮುಸ್ಲಿಂ ವರ್ತಕರು ಸಾಲು–ಮೂಲೆ ಬಣಜಿಗರೊಂದಿಗೆ ವ್ಯಾಪಾರ–ವಹಿವಾಟನ್ನು ನಡೆಸುತ್ತಿದ್ದರು. ಅಕ್ಕಿ, ಗೋಧಿ ಮತ್ತು ರಾಗಿಯನ್ನು ಕೊಂಡುಕೊಳ್ಳುತ್ತಿದ್ದರು. ಬಣಜಿಗರು, ಮುರುಕೆರೆ ಹಾಗು ಚೌಳಿಕೆರೆ ವರ್ತಕ ಸಮುದಾಯಗಳು ದಕ್ಷಿಣ ಕೆನರಾದಲ್ಲಿ ಬೆಳೆಯುತ್ತಿದ್ದ ಅಕ್ಕಿಯನ್ನು ವಿದೇಶಿ ವರ್ತಕರಿಗೆ ಮಾರುತ್ತಿದ್ದರು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಮಲಬಾರ್ ವ್ಯಾಪಾರಿಗಳು ಅತ್ಯಧಿಕವಾಗಿ ಅಕ್ಕಿಯನ್ನು ಕರ್ನಾಟಕದ ವಿವಿಧ ಭಾಗಗಳಿಂದ ಕೊಂಡುಕೊಳ್ಳುತ್ತಿದ್ದರು. ಅವುಗಳಲ್ಲಿ ಮುಖ್ಯವಾಗಿ ದಕ್ಷಿಣ ಕೆನರಾದಲ್ಲಿ ಬಾರಕೂರು ಮತ್ತು ಬಸ್ರೂರು ಪ್ರದೇಶಗಳು ಅಕ್ಕಿ ಬೆಳೆ ಉತ್ಪಾದನೆಯಲ್ಲಿ ಪ್ರಸಿದ್ಧಿಯಾಗಿದ್ದವು.[೪೭]

ಸಾಂಬಾರು ಪದಾರ್ಥಗಳೇ ಪ್ರಮುಖವಾಗಿದ್ದ ವಿದೇಶ ವ್ಯಾಪಾರ ವಹಿವಾಟು ಹೆಚ್ಚು ಕಡಿಮೆ ಪೂರ್ತಿಯಾಗಿ, ವಿಜಯನಗರದ ಕಾಲದಲ್ಲಿ(೧೩೩೬–೧೫೬೫) ಅರಬ್ಬರು ಮತ್ತು ಪೋರ್ಚುಗೀಸರ ಹಿಡಿತದಲ್ಲಿತ್ತು. ಭಾರತೀಯ ಮಾರುಕಟ್ಟೆಗಳಿಂದ ಪೋರ್ಚುಗೀಸರು ಅರಬ್ಬರನ್ನು ಯಶಸ್ವಿಯಾಗಿ ಓಡಿಸಿದರು. ಪೋರ್ಚುಗೀಸರಿಗೆ ಮಂಗಳೂರು, ಬಸ್ರೂರು ಮತ್ತು ಹೊನ್ನಾವರಗಳಲ್ಲಿ ಗೋದಾಮುಗಳಿದ್ದವು. ಪಾಯಸ್ ತನ್ನ ವರದಿಯಲ್ಲಿ ಹೀಗೆ ಬರೆಯುತ್ತಾನೆ. "ಈ ರಾಜ್ಯಕ್ಕೆ ಭಾರತದ ಕರಾವಳಿಯಲ್ಲಿ ಹಲವು ಬಂದರುಗಳಿವೆ. ನಾವು ಶಾಂತಿಯಿಂದಿರುವ ಕೆಲವು ಬಂದರುಗಳಿವೆ, ಇನ್ನು ಕೆಲವುಗಳಲ್ಲಿ ನಮ್ಮ ವ್ಯಾಪಾರಿ ಕೋಠಿಗಳಿವೆ. ಅಂಕೋಲ, ಮಿರ್ಜಾನ್, ಹೊನ್ನಾವರ, ಭಟ್ಕಳ, ಮಂಗಳೂರು, ಬಸ್ರೂರು ಮತ್ತು ಬಾರ್ಕೂರು ಇತ್ಯಾದಿ."[೪೮]

೧೫೦೩ರಲ್ಲಿ ವಾಸ್ಕೋಡಿಗಾಮನು ಅನೇಕ ಮುಸ್ಲಿಂ ವರ್ತಕರ ಹಡಗುಗಳು ಭಟ್ಕಳ ಬಂದರಿನಲ್ಲಿ ಲಂಗರು ಹಾಕಿ ನಿಂತಿರುವುದನ್ನು ಗಮನಿಸಿದನು. ಅದು ಭಾರತದ ಎಲ್ಲಾ ಕಡೆಗೂ ಅಕ್ಕಿ ಮತ್ತು

ಸಕ್ಕರೆಯನ್ನು ರಫ್ತು ಮಾಡುವ ಸ್ಥಳ. ವಾಸ್ಕೋಡಗಾಮ ಮುಸ್ಲಿಮರನ್ನು ಓಡಿಸಿ, ಭಟ್ಕಳದಲ್ಲಿ ಅಗಾಧ ಪ್ರಮಾಣದ ಅಕ್ಕಿಯನ್ನೂ ಹಾಗೂ ಸಕ್ಕರೆಯನ್ನೂ ಪಡೆದನು. ಭಟ್ಕಳದ ನಾಯಕನ ಪ್ರತಿನಿಧಿಗೆ ಅವನು ವಿಧಿಸಿದ ನಾಲ್ಕು ಷರತ್ತುಗಳು ಹೀಗಿದ್ದುವು: ೧. ಅವನು ಪೋರ್ಚುಗೀಸರಿಗೆ ಕಪ್ಪವನ್ನು ಕೊಡಬೇಕು, ೨. ಅವನು ಬೇರೆ ಯಾರೊಂದಿಗೂ ಮೆಣಸನ್ನು ವ್ಯಾಪಾರ ಮಾಡಕೂಡದು. ೩. ನಾಯಕನು ಟರ್ಕರನ್ನು ಕರೆತರಬಾರದು, ೪. ಅವನು ಕಲ್ಲಿಕೋಟೆಯೊಂದಿಗೆ ಯಾವುದೇ ಸಂಪರ್ಕ ಇರಿಸಿಕೊಳ್ಳಕೂಡದು.[೪೯] ವಾಸ್ಕೋಡಗಾಮ ವಿಧಿಸಿದ ಎರಡನೇ ಷರತ್ತು ಸ್ವಾರಸ್ಯಕರವಾಗಿದೆ. ಏಕೆಂದರೆ ಅತ್ಯಂತ ಅಮೂಲ್ಯವಾಗಿದ್ದು ಅಪಾರ ಲಾಭವನ್ನು ತರುತ್ತಿದ್ದ ಕರಿಮೆಣಸನ್ನು ಸಂಗ್ರಹಿಸಿಕೊಳ್ಳಲು ಹೇಗೆ ಪೋರ್ಚುಗೀಸರು ಮೊದಲಿಂದಲೂ ಕಾತರರಾಗಿದ್ದರು ಎಂಬುದನ್ನು ಅದು ಸೂಚಿಸುತ್ತದೆ. ಆದ್ದರಿಂದ ಭಾರತದ ಪಶ್ಚಿಮ ಕರಾವಳಿಯಲ್ಲಿ ಕರಿಮೆಣಸಿನ ವ್ಯಾಪಾರ ಏಕಸ್ವಾಮ್ಯವನ್ನು ಸ್ಥಾಪಿಸುವುದೇ ಪೋರ್ಚುಗೀಸರ ನೀತಿಯಾಗಿತ್ತು. ಆದರೆ ಅವರೇ ಪ್ರಧಾನ ಶಕ್ತಿಗಳಾಗಿರುವವರೆಗೆ ಅದು ನಡೆಯಿತು. ಡಚ್ ಮತ್ತು ಇಂಗ್ಲಿಶರೂ ಕರಿಮೆಣಸನ್ನು ಸಂಗ್ರಹಿಸಲು ಕರ್ನಾಟಕದ ಕರಾವಳಿಗೆ ಭೇಟಿ ಕೊಡಲು ತೊಡಗಿದಾಗ ಸ್ಪರ್ಧೆ ಅನಿವಾರ್ಯವಾಯಿತು. ಅನೇಕ ವೇಳೆ ಈ ಸ್ಪರ್ಧೆಗೆ ಕರ್ನಾಟಕದ ರಾಜಕಾರಣವೂ ಸೇರಿಕೊಂಡಿತು. ವರ್ತೆಮನೂ ೧೫೦೫ರಲ್ಲಿ ಅಕ್ಕಿ ಮತ್ತು ಸಕ್ಕರೆ ಭಟ್ಕಳದಿಂದ ರಫ್ತಾಗುತ್ತಿದ್ದುದನ್ನು ಗಮನಿಸಿದ್ದನು.[೫೦]

ಹದಿನಾರನೆಯ ಶತಮಾನದ ಪ್ರಾರಂಭದಲ್ಲಿ ಪೋರ್ಚುಗೀಸರು ಅಕ್ಕಿ ಮತ್ತು ಲವಂಗಗಳನ್ನು ಹೇರಳವಾಗಿ ಉತ್ಪಾದಿಸುವ ಭಟ್ಕಳದೊಂದಿಗೆ ನಿಕಟವಾದ ಸಂಪರ್ಕವನ್ನು ಹೊಂದಿದ್ದರು. ಅವರ ಹಡಗುಗಳು ಈ ವಸ್ತುಗಳನ್ನು ಭಟ್ಕಳದಿಂದ ಹೊರಕ್ಕೆ ಸಾಗಿಸುತ್ತಿದ್ದವು. ಅಲ್ಲಿ ಅವರ ಕೋಠಿಗಳಿದ್ದುವು.[೫೧] ಬಾರ್ಬೋಸನ ಪ್ರಕಾರ, ಭಟ್ಕಳದಲ್ಲಿ ಹಲವು ಬಗೆಯ ವಸ್ತುಗಳು ಮಾರಾಟವಾಗುತ್ತಿದ್ದವು; ಮೂರರು ಮತ್ತು "ಸ್ಥಳೀಯರು" ವ್ಯಾಪಾರದಲ್ಲಿ ನಿರತರಾಗಿದ್ದರು.[೫೨] ಪ್ರತಿವರ್ಷವೂ ಕರ್ನಾಟಕದ ಅತ್ಯಂತ ಪ್ರಸಿದ್ಧವಾದ ಈ ಬಂದರಿನಿಂದ ಕರಿಮೆಣಸು, ಸಾಂಬಾರ ವಸ್ತುಗಳು, ಹುಡಿ ಮಾಡಿದ ಸಕ್ಕರೆ ಮತ್ತು ಬಿಳಿ ಅಕ್ಕಿಗಳನ್ನು ಕೊಂಡೊಯ್ಯಲು ಆರ್ಮಸ್‌ನಿಂದ ಹಡಗುಗಳು ಬರುತ್ತಿದ್ದವು. ಬಂದರಿನಲ್ಲಿ ಈ ವಸ್ತುಗಳು ಭಾರಿ ಪ್ರಮಾಣದಲ್ಲಿ ದಾಸ್ತಾನಿರುತ್ತಿದ್ದವು.[೫೩] ಮೈರೋಬಲಮ್ ಅವನ್ನು ಭಟ್ಕಳದ ವರ್ತಕರು ವಿಶೇಷವಾಗಿ ಕೂಡಿಡುತ್ತಿದ್ದರು. ಏಕೆಂದರೆ ಅದಕ್ಕೆ ಅರೇಬಿಯ ಮತ್ತು ಪರ್ಷಿಯಗಳಲ್ಲಿ ಒಳ್ಳೆಯ ಮಾರುಕಟ್ಟೆಯಿದ್ದಿತು. ಮುಸ್ಲಿಂ ವ್ಯಾಪಾರಸ್ಥರು ಈ ವ್ಯಾಪಾರಕ್ಕೆ ದಲ್ಲಾಳಿಗಳಾಗಿದ್ದರು. ಪೋರ್ಚುಗೀಸರು ಬರುವುದಕ್ಕೆ ಮುಂಚೆ ಕರ್ನಾಟಕದ ವರ್ತಕರಿಗೂ ವಿದೇಶಿ ಗ್ರಾಹಕರಿಗೂ ನಡುವೆ ಅವರು ಮಧ್ಯವರ್ತಿಗಳಾಗಿದ್ದರು.[೫೪] ೧೫೩೦ರಲ್ಲಿ ಕೊಚ್ಚಿಯ ಕ್ಯಾಪ್ಟನ್ ಆಗಿದ್ದ ಅಫಾನ್ಸೋ ಮೆಕ್ಸಿಯಾ ಬರೆದ ವರದಿಯ ಒಂದು ಭಾಗವನ್ನು ಉದ್ಧರಿಸುವುದು ಸೂಕ್ತವಾಗುತ್ತದೆ. ಅವನು ೧೫೩೦ ಜನವರಿ ೧೫ರಂದು ಪೋರ್ಚುಗಲ್ಲಿನ ರಾಜನಿಗೆ ಬರೆದನು: "ಬೆಟಿಕಾಲಿಯ ಮತ್ತು ಗೋವಾ ನಡುವೆ ಓನೋರ್(ಹೊನ್ನಾವರ), ಮೆರ್ಜೆನ್(ಮಿರ್ಜಾನ್) ಮತ್ತು ಅಂಕೋಲಾ ಎಂಬ

ಹೆಸರಿನ ಸ್ಥಳಗಳಿವೆ. ಇಲ್ಲಿಂದ ಪ್ರತಿವರ್ಷವೂ ೫೦೦೦ ಕ್ರುಸೆಡೋ ಬೆಲೆಯ ಮೆಣಸು ದಿಯೂ, ಆರ್ಮೆಜ್ ಮತ್ತು ಜೆಡ್ಡಾಗಳಿಗೆ ಹಡಗಿನಲ್ಲಿ ಹೋಗುತ್ತದೆ. ಮೂರರ ಹಡಗುಗಳು ಅದನ್ನು ಒಯ್ಯುತ್ತವೆ. ಈ ಸ್ಥಳಗಳು ಗೇರುಸೊಪ್ಪೆಯ ರಾಣಿಯ ಅಧಿಕಾರಕ್ಕೆ ಒಳಪಟ್ಟಿವೆ. ಅವಳು ನರಸಿಂಗರಾಜನ (ವಿಜಯನಗರ) ಅಧೀನಳಾಗಿದ್ದಾಳೆ. ಈ ಮೆಣಸು ಕೊಚ್ಚಿನ್‌ನಲ್ಲಿ ದೊರಕುವುದಕ್ಕಿಂತಲೂ ದೊಡ್ಡದು, ಆದರೆ ಅದರಷ್ಟು ಖಾರವಿಲ್ಲ. ನಾವು ಇದನ್ನು ಸಂಗ್ರಹಿಸಬೇಕೆಂದು ತೋರುತ್ತದೆ. ರಾಣಿಯೊಂದಿಗೆ ಒಂದು ಒಪ್ಪಂದ ಮಾಡಿಕೊಂಡು ಅದನ್ನು ಮಾಡಬಹುದು."[೫೫] ಹೀಗೆ ಪೋರ್ಚುಗೀಸರು ಮೊದಲಿಂದಲೂ ಕರ್ನಾಟಕದ ರಾಜಕೀಯ ಶಕ್ತಿಗಳೊಂದಿಗೆ ಸಂಪರ್ಕವಿರಿಸಿಕೊಂಡಿದ್ದರು. ಅವರ ಉದ್ದೇಶ ಮೆಣಸು ವ್ಯಾಪಾರದ ಸ್ವಾಮ್ಯವನ್ನು ಸಾಧಿಸಿಕೊಳ್ಳುವುದು. ಕರ್ನಾಟಕದ ವರ್ತಕರಿಂದ ಅತ್ಯಂತ ಕಡಿಮೆ ಬೆಲೆಗೆ ಮೆಣಸನ್ನು ಕೊಂಡು ಭಾರತದ ಇತರ ಭಾಗಗಳಲ್ಲೂ ಪರ್ಷಿಯಾದಲ್ಲೂ ಅದನ್ನು ಅತಿ ಹೆಚ್ಚು ಬೆಲೆಗೆ ಮಾರುತ್ತಿದ್ದರು.[೫೬]

ಸಾಮಾನ್ಯವಾಗಿ ಕರ್ನಾಟಕದ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮೆಣಸು, ಏಲಕ್ಕಿ ಮತ್ತಿತರ ಸಾಂಬಾರು ಪದಾರ್ಥಗಳ ಉತ್ಪಾದನೆಗೆ ಪ್ರಸಿದ್ಧವಾಗಿದ್ದವು. ಈ ಸ್ಥಳಗಳ ವಾತಾವರಣವು ಮೆಣಸಿನ ಬೆಳೆಗೆ ಅನುಕೂಲಕರವಾಗಿದ್ದಿತು. ಹಾಗಾಗಿ ಈ ಪ್ರದೇಶಗಳಿಂದ ಮುಖ್ಯವಾಗಿ ಈ ವಸ್ತುಗಳು ರಫ್ತಾಗುತ್ತಿದ್ದವು. ಉತ್ತರ ಕನ್ನಡ ಜಿಲ್ಲೆಯ ಸೋಂದಾ ಹದಿನೇಳನೆಯ ಶತಮಾನದ ಇಂಗ್ಲಿಶರ ಕೋಠಿಯ ವರದಿಗಳಲ್ಲಿ ಮೆಣಸು ಬೆಳೆಯುವ ಪ್ರಸಿದ್ಧ ಕೇಂದ್ರವಾಗಿ ಕಾಣಿಸಿಕೊಳ್ಳುತ್ತದೆ. ಕೆನರಾದಂತಲ್ಲದೆ ಇಲ್ಲಿ ಮೆಣಸು ಸೋಂದಾ ರಾಜರ ಸ್ವಾಮ್ಯವಾಗಿರಲಿಲ್ಲ. ತಮಗೆ ಇಚ್ಛೆ ಬಂದ ಕಡೆಗೆ ಅದನ್ನು ಸಾಗಿಸಲು ವರ್ತಕರಿಗೆ ಮುಕ್ತ ಅವಕಾಶವಿದ್ದಿತು. ಅದರ ಮೇಲೆ ಸುಂಕವನ್ನು ಕೊಟ್ಟರೆ ತೀರಿತು ಅಷ್ಟೆ. ಹಾಗೆಯೇ ಮೆಣಸಿನ ಉತ್ಪಾದನೆಗೂ, ಯಾವುದೇ ಮಿತಿಯನ್ನು ವಿಧಿಸಿರಲಿಲ್ಲ.[೫೭] ಮೆಣಸು ಬೆಳೆಯಿಂದ ಉತ್ತರ ಕನ್ನಡದ ಸೋಂದಾ ನಾಯಕನಿಗೆ ಪ್ರತಿವರ್ಷವೂ ೧,೦೦,೦೦೦ ಡಾಲರು(೩೦ ಲಕ್ಷ ಪಗೋಡಗಳು) ವರಮಾನ ಬರುತ್ತಿದ್ದಿತು. ಇದನ್ನು ಗಮನಿಸಿದ್ದ ಅಂದಿನ ವಿದೇಶಿ ಪ್ರವಾಸಿಗನಾದ ಫ್ರೈಯರ್ ಹೀಗೆ ಹೇಳುತ್ತಾನೆ.: "ಜಗತ್ತಿನಲ್ಲಿ ಅತ್ಯುತ್ತಮವಾದ ಮೆಣಸು ಸೋಂದಾದಲ್ಲಿ ಬೆಳೆಯುವಂಥದು." ಮೆಣಸಿನ ರಫ್ತು ಒಂದರಿಂದಲೇ ಸೋಂದಾದ ರಾಜನಿಗೆ ಅಗಾಧವಾದ ಲಾಭವನ್ನು ತಂದುಕೊಟ್ಟಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ.[೫೮]

ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿದ್ದ ಇನ್ನೊಂದು ಮುಖ್ಯವಾದ ಬಂದರು ಕಾರವಾರ. ಮೆಣಸಿನ ವ್ಯಾಪಾರದಲ್ಲಿ ಇದು ಅತ್ಯಂತ ಪ್ರಸಿದ್ಧವಾದ ಬಂದರಾಗಿತ್ತು. ಯುರೋಪಿನ ದೇಶಗಳಲ್ಲಿ, ಅದರಲ್ಲೂ ಇಂಗ್ಲೆಂಡಿನಲ್ಲಿ ಕಾರವಾರದ ಕರಿಮೆಣಸು ಎಷ್ಟು ಪ್ರಸಿದ್ಧವಾಗಿತ್ತೆಂದರೆ, "ಕಾರವಾರ್ ಪೆಪ್ಪರ್" ಎಂದೇ ಜನಪ್ರಿಯವಾಗಿತ್ತು.[೫೯] ತುಂಬಾ ಬೆಲೆ ಸಿಕ್ಕಿರುವುದರಿಂದ ಸೋಂದಾದ ರಾಜನು ತನ್ನ ಬಳಿ ದಾಸ್ತಾನಿದ್ದ ಮೆಣಸೆಲ್ಲವನ್ನೂ ಮಾರಿಬಿಟ್ಟನು. ಅದರಿಂದ ಯುರೋಪಿನಲ್ಲಿ ಅದರ ಅಭಾವ ಉಂಟಾಯಿತು.[೬೦] ೧೬೯೦ರಲ್ಲಿ ಮುಂಬಯಿ ಮತ್ತು ಸೂರತ್‌ಗಳಲ್ಲಿ ಉಂಟಾದ

ಮಹಾಕುಸಿತದಿಂದಾಗಿ ಕಾರವಾರವು ಸಂಪದ್ಭರಿತವಾದಂತೆ ತೋರುತ್ತದೆ. ಮೊದಲನೆಯ ಬಾರಿಗೆ ಅದು ಇಂಗ್ಲೆಂಡಿನೊಂದಿಗೆ ವ್ಯಾಪಾರವನ್ನು ನಿರ್ವಹಿಸಿತು.[೬೧] ಈಸ್ಟ್ ಇಂಡಿಯಾ ಕಂಪೆನಿಯ ದಾಖಲೆಗಳಲ್ಲಿ ಕಾರವಾರವು ಮೆಣಸು ವ್ಯಾಪಾರದ ಪ್ರಸಿದ್ಧ ಕೇಂದ್ರವಾಗಿ ಕಂಡುಬರುತ್ತದೆ. ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿ ಇಂಗ್ಲಿಶರು ಕಾರವಾರದೊಂದಿಗೆ ವ್ಯಾಪಾರ ಸಂಬಂಧಗಳನ್ನು ಹೊಂದಿದ್ದರು.[೬೨]

ಹದಿನೇಳನೆಯ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಪ್ರವಾಸಿ ಟ್ರಾವರ್ನಿಯರ್ ಚಿಕ್ಕದು ಮತ್ತು ದಪ್ಪನೆಯದು ಎಂದು ಎರಡು ಬಗೆಯಾಗಿ ಮೆಣಸು ಇದ್ದಿತೆಂದು ಹೇಳುತ್ತಾನೆ. ಮುಖ್ಯವಾಗಿ ಅದನ್ನು ಪಶ್ಚಿಮ ಕರಾವಳಿಯಿಂದಲೂ(ಕರ್ನಾಟಕದ ಬಂದರುಗಳೂ ಸೇರಿದಂತೆ), ಬಿಜಾಪುರ ರಾಜ್ಯದಿಂದಲೂ ಸಂಗ್ರಹಿಸಲಾಗುತ್ತಿತ್ತು. ಅದು ರಾಜಾಪುರದಲ್ಲಿ(ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆ) ಮಾರಾಟವಾಗುತ್ತಿತ್ತು. ಅದು ದಪ್ಪಮೆಣಸು, ಗುಣಮಟ್ಟ ಬಹಳ ಉತ್ತಮವಾಗಿದ್ದ ಅದನ್ನು ಯುರೋಪಿಗೆ ರಫ್ತು ಮಾಡಲಾಗುತ್ತಿತ್ತು. ಡಚ್ಚರು ನೇರವಾಗಿ ಮಲಬಾರಿಗಳಿಂದ ಕೊಂಡುಕೊಳ್ಳುತ್ತಿದ್ದರು. ಅವರು ಬಹುಶಃ ಕರ್ನಾಟಕದ ಬಂದರುಗಳಿಂದ ಕೊಂಡೊಯ್ದು ಡಚ್ಚರಿಗೆ ಮಾರುತ್ತಿದ್ದಂತೆ ತೋರುತ್ತದೆ.[೬೩] ಮೆಣಸು ಎಷ್ಟು ಅಮೂಲ್ಯವಾದ ವಸ್ತುವಾಗಿತ್ತೆಂದರೆ ಅದಕ್ಕಾಗಿ ಪೋರ್ಚುಗೀಸರು, ಇಂಗ್ಲಿಶರು, ಡಚ್ಚರು, ಕೊನೆಗೆ ಫ್ರೆಂಚರು ಕೂಡ ಕರ್ನಾಟಕದ ದೇಶೀಯ ಅರಸರೊಂದಿಗೆ ಸ್ನೇಹಯುತ ವ್ಯಾಪಾರ ಸಂಬಂಧಗಳನ್ನು ಹೊಂದಿರಲು ಉತ್ಸುಕರಾಗಿದ್ದರು. ಈ ನೀತಿಯೇ ಮುಂದುವರಿದು ಒಬ್ಬರ ವಿರುದ್ಧವಾಗಿ ಇನ್ನೊಬ್ಬರಿಗೆ ಸಶಸ್ತ್ರ, ಸೇನಾ ಸಹಾಯ ಕೊಡುವುದರವರೆಗೂ ಹೋಗುತ್ತಿತ್ತು.

ಹದಿನೇಳನೆಯ ಶತಮಾನದ ಮೊದಲ ಪಾದದಲ್ಲಿ ಪೋರ್ಚುಗೀಸರು ಇನ್ನಿಬ್ಬರು ಪಾಶ್ಚಿಮಾತ್ಯ ಶಕ್ತಿಗಳನ್ನು, ಅಂದರೆ ಇಂಗ್ಲಿಶರು ಮತ್ತು ಡಚ್ಚರನ್ನು ಮೀರಿಸಿ ಮೆಣಸಿನ ವ್ಯಾಪಾರದ ಸ್ವಾಮ್ಯವನ್ನು ಪಡೆಯಲು ಕಾತರರಾಗಿದ್ದರು. ಇಕ್ಕೇರಿಯ ನಾಯಕನಿಂದ ಆ ಸ್ವಾಮ್ಯವನ್ನು ಅವರು ಪಡೆಯಬೇಕಾಗಿತ್ತು. ಈ ಉದ್ದೇಶದಿಂದ ಪೋರ್ಚುಗೀಸ್ ವೈಸರಾಯಿಯು ೧೬೨೩ರಲ್ಲಿ ವೆಂಕಟಪ್ಪನಾಯಕನ ಬಳಿಗೆ ಒಂದು ರಾಯಭಾರವನ್ನು ಕಳುಹಿಸಿದನು.[೬೪] ವಾಸ್ತವವಾಗಿ ಪೋರ್ಚುಗೀಸರು "ಕರಿಮೆಣಸಿನ ರಾಣಿ" ಎಂದು ಕರೆಯುತ್ತಿದ್ದ ಗೇರುಸೊಪ್ಪೆಯ ರಾಣಿಯ ಮೇಲೆ ವೆಂಕಟಪ್ಪನಾಯಕನು ಆಕ್ರಮಣ ಮಾಡಿದ ಉದ್ದೇಶವೇ ಅವಳ ಅಧೀನದಲ್ಲಿದ್ದು ಒಳ್ಳೆಯ ಮೆಣಸನ್ನು ಕೊಡುತ್ತಿದ್ದ ಫಲವತ್ತಾದ ಭೂಪ್ರದೇಶವನ್ನು ತನ್ನ ಅಧೀನಪಡಿಸಿಕೊಳ್ಳುವುದು. ಗೇರುಸೊಪ್ಪೆಯ ಈ ರಾಣಿ ಚೆನ್ನಭೈರಾದೇವಿಯು ಬಿಜಾಪುರ ರಾಜ್ಯದ ಸಾಮಂತ ರಾಣಿಯಾಗಿದ್ದಳು.[೬೫] ಇಕ್ಕೇರಿಯ ವೆಂಕಟಪ್ಪನಾಯಕನು ಒಬ್ಬರ ಮೇಲೆ ಇನ್ನೊಬ್ಬರನ್ನು ಬಿಟ್ಟು ಆಟವಾಡುತ್ತಿದ್ದನು. ಮೆಣಸಿನ ವ್ಯಾಪಾರದ ಏಕಸ್ವಾಮ್ಯವನ್ನು ಪೋರ್ಚುಗೀಸರಿಗೆ ಕೊಡಲು ಇಚ್ಛೆ ತೋರಿಸುತ್ತಿದ್ದರೂ ರಹಸ್ಯವಾಗಿ ಇಂಗ್ಲಿಶರೊಂದಿಗೆ ಅದೇ ವಿಷಯವಾಗಿ ವ್ಯವಹಾರ ನಡೆಸಿದ್ದನು. ವಿಲಿಯಂ ಹೋರ್ ಎನ್ನುವವನು ಕಂಪೆನಿಗೆ ಬರೆದ ಮೇ ೧೬೨೦ರ ಒಂದು ಪತ್ರದಿಂದ ಇದು ವ್ಯಕ್ತಪಡುತ್ತದೆ.[೬೬]

೬.೩. ವರ್ತಕ ಸಂಘಗಳು

ಮಧ್ಯಕಾಲೀನ ಆರ್ಥಿಕ ಚಟುವಟಿಕೆಗಳಲ್ಲಿ ಮುಸ್ಲಿಂ ವರ್ತಕ ಸಂಘಗಳು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತಿದ್ದವು. ಇವುಗಳನ್ನು ಶ್ರೇಣಿಗಳು ಅಥವಾ ವ್ಯಾಪಾರಸ್ಥರ ಸಂಘಗಳು ಎನ್ನುವ ಹೆಸರಿನಿಂದಲೂ ಕರೆಯಲಾಗಿದೆ. ವರ್ತಕರನ್ನು ಒಳಗೊಂಡ ಈ ಸಂಘದಲ್ಲಿ ವಿವಿಧ ವೃತ್ತಿಯವರು ಸೇರಿಕೊಂಡಿರುತ್ತಿದ್ದರು. ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡಿರುವ ವರ್ತಕರು ರಚಿಸಿಕೊಂಡ ಸಂಘಗಳನ್ನು ವರ್ತಕ ಸಂಘ, ವೃತ್ತಿ ಸಂಘ, ವಿನಿಮಯ ಸಂಘ ಎಂಬ ಹೆಸರಿನಿಂದಲೂ ಕರೆಯಲಾಗಿದೆ.

ಸಮಾನ ವೃತ್ತಿಯವರು ತಮ್ಮ ಸಮಾಜದ ಅಥವಾ ಸಮುದಾಯದ ಜನರೊಂದಿಗೆ ಸೇರಿಕೊಂಡು ಕಟ್ಟಿದ ಶ್ರೇಣಿಗಳಿಗೆ ಸಂಘಗಳು ರೂಪಗೊಂಡವು.[೬೭] ಈ ಸಂಘಗಳ ರಚನಾ ಸ್ವರೂಪ, ಕಾರ್ಯ ನಿರ್ವಹಣೆ, ವಾಣಿಜ್ಯ ಲಾಭ, ಸಾಮಾಜಿಕ ಗೌರವ, ಪ್ರಭಾವ ಇತ್ಯಾದಿ ಅಂಶಗಳು ನಗರ ಕೇಂದ್ರಗಳ ಅಳಿವು–ಉಳಿವುಗಳಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದ್ದವು. ಈ ಸಂಘಗಳು ರೂಪಗೊಳ್ಳುವುದಕ್ಕೆ ಆರಂಭಿಕ ಹಂತದಲ್ಲಿ ಸಮುದಾಯ ಜೀವನ ಮತ್ತು ಸಹಕಾರ ತತ್ವಗಳು ಸಮಾಜ ವ್ಯವಸ್ಥೆಯಲ್ಲಿ ರಚನೆಗೊಂಡಿದ್ದವು. ಈ ಸಂಘಗಳು ವಿಸ್ತಾರಗೊಂಡಂತೆ ವೈವಿಧ್ಯಮಯವಾಗಿ ಬೆಳೆಯುತ್ತಾ ಹೋದವು. ಇವು ಮುಖ್ಯವಾಗಿ ಸಮುದಾಯಗಳ ರಕ್ಷಣೆ, ವೃತ್ತಿ ಸೌಕರ್ಯ, ಸಾಮಾಜಿಕ ಸ್ಥಾನಮಾನ ಮುಂತಾದವು ಸಂಘಗಳ ವ್ಯವಸ್ಥಿತ ರಚನೆಯನ್ನು ಕಾಪಾಡಿಕೊಳ್ಳುವ ಧ್ಯೇಯವನ್ನು ಹೊಂದಿದ್ದವು.

ಮುಸ್ಲಿಂ ವರ್ತಕ ಸಂಘಗಳು ಸಮಾಜದಲ್ಲಿ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ವೃತ್ತಿಗನುಗುಣವಾಗಿ ರಚನೆಗೊಂಡಿದ್ದವು. ಇವು ವ್ಯಾಪಾರ ಮತ್ತು ವಹಿವಾಟುಗಳ ಬೆಳವಣಿಗೆಯಲ್ಲಿ ತೊಡಗಿಸಿಕೊಳ್ಳುವುದರ ಜೊತೆಗೆ ಅಂದಿನ ಸಾರ್ವಜನಿಕ ಕೆಲಸಕಾರ್ಯಗಳಲ್ಲಿ ಭಾಗವಹಿಸಿ ಸಮಾಜದ ಮತ್ತು ರಾಜ್ಯದ ಗಮನವನ್ನು ಸೆಳೆಯುವಲ್ಲಿ ಸಫಲವಾಗಿದ್ದವು. ಪೂರ್ವ ಮಧ್ಯಯುಗೀನ ಕಾಲದಲ್ಲಿ ನೀರಾವರಿ ಆಧಾರಿತ ಕೃಷಿಯ ಬೆಳವಣಿಗೆಯಿಂದಾಗಿ ಕೃಷಿ ಉತ್ಪನ್ನದಲ್ಲಿ ಗಣನೀಯ ಬದಲಾವಣೆಗಳುಂಟಾದವು. ಅವುಗಳಲ್ಲಿ ಪ್ರಮುಖವಾದದ್ದೆಂದರೆ ವಾಣಿಜ್ಯ ಬೆಳೆಗಳಾದ ಹತ್ತಿ, ಎಣ್ಣೆಬೀಜಗಳು, ಭತ್ತ, ಕಬ್ಬು ಇತ್ಯಾದಿಗಳ ಅಧಿಕ ಉತ್ಪಾದನೆಯುಂಟಾಗಿ ಅವುಗಳ ವಿಲೇವಾರಿಗೆ ಸಮಾಜದಲ್ಲಿ ವರ್ತಕ ಸಮಾಜ ಕ್ರಮೇಣವಾಗಿ ಅಸ್ತಿತ್ವಕ್ಕೆ ಬಂದಿತು. ಸಂಘಗಳ ಮುಖ್ಯ ಉದ್ದೇಶವು ಸಾಮಾನ್ಯವಾಗಿ ಒಂದು ಸ್ಥಳದ ಆರ್ಥಿಕತೆಯನ್ನು ನಿರ್ವಹಿಸುವುದರ ಜೊತೆಗೆ ಸಂಘದ ಪ್ರತಿಯೊಬ್ಬ ಸದಸ್ಯರ ಹಿತಾಸಕ್ತಿಯನ್ನು ಕಾಪಾಡುವುದಾಗಿತ್ತು.

ದಕ್ಷಿಣದ ಕರಾವಳಿ ಪ್ರಾಂತ್ಯದಲ್ಲಿ ಮುಸ್ಲಿಂ ವರ್ತಕರು ತಮ್ಮ ಹಿತರಕ್ಷಣೆಗೆ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ಪ್ರಾಚೀನ ಕಾಲದ ಶಿಲಪ್ಪದಿಕಾರಂ ಸಾಹಿತ್ಯದಲ್ಲಿ ವರ್ತಕ ಸಂಘಗಳ ವಿವರಗಳಿವೆ. ಇದು ಮಾಸತುವನ್ ಪದದಡಿ ಬಂದಿದೆ. 'ಮಾ' ಎನ್ನುವ ತಮಿಳು ಪದದಿಂದ ಬಂದಿದ್ದು, ಇದರ

ಅರ್ಥ ದೊಡ್ಡದು. ಸತು ಎನ್ನುವುದು ವರ್ತಕರ ಗುಂಪನ್ನು ಸೂಚಿಸುತ್ತದೆ. ಅದರ ಉಲ್ಲೇಖದಲ್ಲಿ ತಿಳಿಸುವಂತೆ ಇದು "ವನಿಗಸ್ತು"(ಸಂಘ) ಎನ್ನುವ ಘಟಕದಿಂದ ಉದಯವಾಯಿತು. ಪೂರ್ವದ ವರ್ತಕ ಸಂಸ್ಥೆಗಳು ತಮಿಳು ರಾಜ್ಯದಲ್ಲಿ ಕಂಡುಬರುತ್ತಿದ್ದವು. ವಿವಿಧ ಪ್ರದೇಶದ ವರ್ತಕರು ಸಂಘದಲ್ಲಿ ಸದಸ್ಯರಾಗಿದ್ದರು. ಇವರು ಪಟ್ಟಿನಂ ಮತ್ತು ಸಾಗರಂ ಪ್ರದೇಶಗಳಲ್ಲಿ ಒಂದು ಕಡೆ ಸೇರಿ ಚರ್ಚೆ ಮಾಡುತ್ತಿದ್ದರು. ಅವುಗಳಲ್ಲಿ ಐನೂರ್ವರು, ಇಳೆನ್ನೂರ್ವರ್ ಹಾಗೂ ಐರಥೈನೂರ್ವರ್, ಮಣಿಗ್ರಾಮಮ್, ಅಂಜುವನ್, ನಾನಾದೇಶಿ ಹಾಗೂ ವಾಲಿಂದರ್ ಪ್ರಮುಖವಾಗಿದ್ದವು.[೧೮]

ಅವರವರ ಸಮುದಾಯಗಳ ಹಿನ್ನೆಲೆಯಲ್ಲಿ ವರ್ತಕ ಸಂಘಗಳು ರಚನೆಯಾಗುತ್ತಿದ್ದರೂ. ವರ್ತಕರು ಯಾವುದೇ ವಸ್ತುವನ್ನು ಮಾರಾಟ ಮಾಡುವಲ್ಲಿ ನಿರತರಾಗಿದ್ದರೆ ಅವರು ತಮ್ಮದೇ ಸಂಘವನ್ನು ಕಟ್ಟಿಕೊಳ್ಳುತ್ತಿದ್ದರು.[೧೯] ಅಪ್ಪಾದೊರೈ ವಿವರಿಸುವಂತೆ ವರ್ತಕರನ್ನು ಒಂದು ಕಡೆ ಸೇರಿಸಲು ಆ ಸಂಘ ಮಾಡಿದಂತಹ ಅಂಶಗಳೆಂದರೆ ಸ್ಥಳೀಯತೆ, ಒಂದೇ ರೀತಿಯಲ್ಲಿ ಸರಕಿನಲ್ಲಿ ವ್ಯಾಪಾರ ಮತ್ತು ನಾಯಕತ್ವ ಹಾಗೂ ಒಂದೇ ಧರ್ಮ, ಪಂಥಕ್ಕೆ ಸೇರಿರುವುದು ಹಾಗೂ ಸರಕುಗಳನ್ನು ಕಾಪಾಡಲು ಅವರದೇ ಆದ ಸೈನ್ಯವನ್ನು ಹೊಂದುವುದು.[೨೦] ಬಳ್ಳಿಗಾವೆಯ ವರ್ತಕ ಸಂಘವು ಸುಮಾರು ೫೦೦ ಶಾಸನಗಳನ್ನು(ಕಾನೂನು) ಹೊಂದಿತ್ತು.[೨೧] ಮಧ್ಯಯುಗೀನ ಕಾಲದ ವರ್ತಕ ಸಂಘಗಳಲ್ಲಿ ಬಹಳ ಪ್ರಮುಖವಾದವುಗಳೆಂದರೆ ಅಯ್ಯವೊಳೆ ಐನೂರ್ವರು, ಗವರೆಗಳು, ಸೆಟ್ಟಿ–ಗುತ್ತರು, ಅಂಕಕಾರರು, ಮಣಿಗಾರರು ಮತ್ತು ತೆಲ್ಲಿಗರು. ಮಧ್ಯಯುಗೀನ ಕಾಲದ ಪ್ರಮುಖ ವರ್ತಕ ಶ್ರೇಣಿಗಳೆಂದರೆ ಅಯ್ಯವೊಳೆ ಐನೂರ್ವರು, ದೇಶಿ, ನಾನಾದೇಶಿ, ಉಭಯ ನಾನಾದೇಶಿ, ನಖರ, ಉಗುರು ಮುನ್ನೂರ್ವರು, ಶೆಟ್ಟಿ, ಗವರೆ, ಗತ್ರಿಗ, ಶೆಟ್ಟಿಗುತ್ತ, ಮುಮ್ಮಡಿದಂಡ ಮತ್ತು ಅಂಜುವನ್ನೇರಿ ಅಥವಾ ಹಂಜಮಾನ. ಇವುಗಳಲ್ಲಿ ಮುಸ್ಲಿಂ ಸಮುದಾಯಗಳಿಗೆ ಸಂಬಂಧಿಸಿದ ಪ್ರಮುಖ ವರ್ತಕ ಸಂಘವೆಂದರೆ ಹಂಜಮಾನ. ಹಂಜಮಾನ್ ಸಂಘವು ವಿಜಯನಗರ ಪೂರ್ವದಲ್ಲೇ ಅತ್ಯಂತ ಪ್ರಾಬಲ್ಯ ಪಡೆದಂತಹ ಸಂಘವಾಗಿತ್ತು. ಇದು ಕರಾವಳಿ ಭಾಗದಲ್ಲಿ ಸ್ಥಾಪನೆಯಾದದ್ದು. ವೃತ್ತಿಯಾಧಾರಿತ ವರ್ತಕ ಸಮುದಾಯಗಳಾದ ಮಾಪಿಳ್ಳೆ, ಬ್ಯಾರಿ, ನವಾಯತರು ವ್ಯಾಪಾರ ವಹಿವಾಟಿನಲ್ಲಿ ತೊಡಗಿಸಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ವಿಜಯನಗರಪೂರ್ವದಲ್ಲೇ ಕಂಡುಬರುವ ಈ ಸಮುದಾಯಗಳ ಹಿತರಕ್ಷಣೆಗೆ ಹಂಜಮಾನ್ ಸಂಘವು ಸ್ಥಾಪನೆಗೊಂಡಿತು. ಈ ಸಂಘಗಳು ತಮ್ಮದೇ ಆದ ಕಾರ್ಯವ್ಯಾಪ್ತಿಯನ್ನು ಹೊಂದಿದ್ದವು. ಅವುಗಳ ವಿವರ ಈ ಕೆಳಗಿನಂತಿದೆ.

ವ್ಯಾಪಾರಸ್ಥರು ಹಂತಹಂತವಾಗಿ ವಿವಿಧ ಜನ ಸಮೂಹಗಳಾಗಿ ರೂಪಗೊಂಡರು. ಸ್ಥಳೀಯ ಹಾಗೂ ವಿದೇಶಿ ವರ್ತಕ ಸಂಘಗಳು ಸ್ಥಾಪನೆಗೊಂಡವು. ಇವರು ತಮ್ಮ ವ್ಯಾಪಾರ ರಕ್ಷಣೆಗೆ ಹಾಗೂ ಸಮಸ್ಯೆಗಳ ಪರಿಹಾರಕ್ಕೆ ವಿವಿಧ ವರ್ತಕ ಸಂಘಗಳನ್ನು ವಿವಿಧ ಪ್ರಾಂತ್ಯಗಳಲ್ಲಿ ಸ್ಥಾಪಿಸಿದರು. ಅವುಗಳಲ್ಲಿ ಮನಿಗ್ರಾಮಂ, ಅಂಜುವನ್ನಂ, ನಾನಾದೇಶಿ ಹಾಗೂ ವಾಲಿಂಜಿಯಾರ್ ನಗರಂ ವರ್ತಕ ಸಂಘಗಳು ಸ್ಥಳೀಯವಾಗಿ ರೂಪುಗೊಂಡವು. ಇವರು ಗ್ರಾಮಗಳಲ್ಲಿ ಸಭೆಯನ್ನು ಸೇರುತ್ತಿದ್ದರು.

ಶಾಸನಗಳಲ್ಲಿ ಕಂಡುಬರುವಂತೆ ತಮಿಳು ಹಾಗೂ ಕರ್ನಾಟಕ ಪ್ರಾಂತ್ಯಗಳಲ್ಲಿ ಪ್ರಮುಖವಾಗಿ ಕಂಡುಬರುತ್ತಿದ್ದರು.[೨]

ದೇಶಿ ಸಂಘ

ಇದು ಪ್ರವಾಸಿ ವರ್ತಕರ ಒಂದು ಸಂಘಟನೆಯಾಗಿತ್ತು. ಇದು ಶ್ರೇಣಿ ಅಥವಾ ದಲ್ಲಾಳಿಗಳ ಸಂಘವಾಗಿ ರೂಪಿತವಾಗಿತ್ತು. ವಿ.ಕೆ.ಜೈನ್ ಪ್ರಕಾರ ದೇಶಿ ಎಂಬ ಪದವು ಒಟ್ಟೊಟ್ಟಿಗೆ ಪ್ರವಾಸ ಮಾಡುವ ವರ್ತಕರ ಸಮೂಹ. ಇವರು ಹೊರಪ್ರದೇಶದಿಂದ ಬಂದಂತಹ ವರ್ತಕರಾಗಿದ್ದುದರಿಂದ ಅಂತರರಾಜ್ಯ ಅಥವಾ ಅಂತಾರಾಷ್ಟ್ರೀಯ ವರ್ತಕ ಸಂಘವಾಗಿತ್ತು. ಮೇದತಿಥಿ ಪ್ರಕಾರ 'ಒಂದೇ ವ್ಯಾಪಾರ ಧರ್ಮ ಅಥವಾ ಮಾರ್ಗವನ್ನು ಅನುಸರಿಸುತ್ತಿದ್ದ ವಿವಿಧ ದೇಶಗಳ ಹಾಗೂ ವಿವಿಧ ಜಾತಿಗಳಿಗೆ ಸೇರಿದ ವರ್ತಕ ಸಮೂಹವಾಗಿತ್ತು. ಅದೇ ರೀತಿ ಈ ದೇಶಿ ಸಂಘಗಳಲ್ಲಿ ಸ್ಥಳೀಯ ವರ್ತಕ ಸಂಘಗಳು ಇದ್ದವೆಂದು ಹೇಳಬಹುದು. ಹೊಯ್ಸಳರ ಕಾಲದ ಶಾಸನಗಳು ಸ್ಥಳೀಯ ವರ್ತಕ ಸಂಘಗಳ ಬಗೆಗೆ ಮಾಹಿತಿ ನೀಡುತ್ತದೆ. ಇವರು ತಮ್ಮ ವ್ಯಾಪಾರ ಸರಕುಗಳನ್ನು ಎತ್ತಿನಗಾಡಿ, ಕತ್ತೆಗಳು, ಎತ್ತುಗಳು ಮತ್ತು ತಲೆಯ ಮೇಲೆ ಹೊತ್ತು ಮಾರಿ ಅದರಿಂದ ಬಂದಂತಹ ಲಾಭದ ಅಲ್ಪಭಾಗವನ್ನು ಮಾಣಿಕೇಶ್ವರ ದೇವರಿಗೆ ದಾನ ಮಾಡುತ್ತಿದ್ದರು. ಇದಲ್ಲದೇ ಸ್ಥಳೀಯ ಪ್ರಮುಖ ವಹಿವಾಟುಗಳನ್ನು ದೇಶಿಗಳ ಸಮಕ್ಷಮದಲ್ಲಿ ಮಾಡಲಾಗುತ್ತಿತ್ತು.[೩]

ಮುಸ್ಲಿಂ ಸ್ಥಳೀಯ ವರ್ತಕ ಸಂಘದ ಬಗ್ಗೆ ಮೀರಾ ಅಬ್ರಹಾಂ ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಅದರಲ್ಲಿ ಪೂರ್ವ ಮಧ್ಯಯುಗೀನ ಕಾಲದಲ್ಲಿ ಮನಿಗ್ರಾಮವು ಸ್ಥಳೀಯ ವ್ಯಾಪಾರದಲ್ಲಿ ತೊಡಗಿ ಧಾನ್ಯ ಮತ್ತಿತರ ಸರಕುಗಳನ್ನು ಕೊಳ್ಳುತ್ತಿತ್ತು. ಆದರೆ ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಅದು ಆಯಾತ ಮತ್ತು ನಿರ್ಯಾತ ವ್ಯಾಪಾರದಲ್ಲಿ ನಿರತವಾಗಿತ್ತು.[೪]

ಮನಿಗ್ರಾಮಮ್

ಮನಿಗ್ರಾಮಮ್ ಸಂಘವು ಅತ್ಯಂತ ಪ್ರಾಚೀನ ಹಾಗೂ ಪ್ರಮುಖ ಸಂಘವಾಗಿತ್ತು. ಇಲ್ಲಿನ ವ್ಯಾಪಾರಿಗಳು ವಜ್ರ ಹಾಗೂ ಇತರ ಸರಕುಗಳನ್ನು ಸಾಗಿಸುತ್ತಿದ್ದರು. ರಾಜ್ಯದ ಪ್ರಮುಖ ಪಟ್ಟಣ ಹಾಗೂ ಕರಾವಳಿ ಪ್ರದೇಶಗಳಲ್ಲಿ ತಮ್ಮ ವ್ಯಾಪಾರದ ಮಾರುಕಟ್ಟೆಯ ಪ್ರಾತಿನಿಧ್ಯತೆ ಹೊಂದಿದ್ದರು. ಮನಿಗ್ರಾಮಮ್ ಸಂಘವು ಧಾರ್ಮಿಕ ಪಂಥಕ್ಕೆ ಸೇರದ ಪಂಥ ಎಂದು ಭಾವಿಸಲಾಗಿದೆ. ಗುಂಡರತ್ ಪ್ರಕಾರ ಮನಿಗ್ರಾಮಮ್ ಎನ್ನುವುದು ವಿದೇಶಿ ವ್ಯಾಪಾರಿ ಸಮುದಾಯವೆಂದಿದ್ದಾರೆ. ಲೀಗನ್ ಅಭಿಪ್ರಾಯ ಪಡುವಂತೆ ಇದು ಕ್ರಿಶ್ಚಿಯನ್‌ನ ತತ್ವವಾಗಿದೆ. ಸಾಹಿತ್ಯ ಆಧಾರದ ಪ್ರಕಾರ ಮನಿಗ್ರಾಮಮ್ ಅರೆ ಸ್ವಾತಂತ್ರ್ಯದ ವ್ಯಾಪಾರ ಸಂಸ್ಥೆಯಾಗಿದೆ.[೫] ಸುಬ್ಬರಾಯಲು ವೈ, 'ಟ್ರೇಡ್ ಗಿಲ್ಡ್‌ಟ್ರೇ ಆಫ್ ಸೌತ್ ಇಂಡಿಯಾ', ಸ್ಟಡೀಸ್ ಇನ್ ಪೀಡರ್ಸ್ ಹಿಸ್ಟರಿ. ಸಂ. ೨೦೧೫. ಇದು ಬಹುಶಃ ವೆನಿಕಗ್ರಾಮಮ್ ವ್ಯಾಪಾರ ಸಹಕಾರ ಸಂಘದಿಂದ ಹುಟ್ಟಿಕೊಂಡಿರಬೇಕು. ಆದರೆ ಪ್ರಮುಖವಾಗಿ ಪೂರ್ವದ ಶತಮಾನ/ಪ್ರಾಚೀನ ಕಾಲಾವಧಿಯಲ್ಲಿ ಕಾವೇರಿಪಟ್ಟಣಂ ವ್ಯಾಪಾರದ ಪ್ರಾಮುಖ್ಯತೆಯನ್ನು

ಪಡೆದಿತ್ತು. ಮನಿಗ್ರಾಮಮ್ ಸಂಘವು ಇಡೀ ದಕ್ಷಿಣ ಭಾರತದಾದ್ಯಂತ ಪ್ರಸರಿಸಿತ್ತು. ಕೇರಳ ಮತ್ತು ಆಂಧ್ರದ ರಾಜ್ಯಗಳಲ್ಲಿಯೂ ಹಬ್ಬಿತ್ತು.[೭೫] ಸಮುದ್ರದಾಚೆಗಿನ ರಾಷ್ಟ್ರಗಳವರೆಗೂ ತನ್ನ ಕಾರ್ಯವ್ಯಾಪ್ತಿ ಪ್ರಸರಿಸಿತ್ತು. ಥೈಲ್ಯಾಂಡ್‌ನ ಶಾಸನವು ಈ ಸಂಘವು ತಕುವವರೆಗೂ ಇತ್ತೆಂದು ತಿಳಿಸುತ್ತದೆ.[೭೬]

ಕರಾವಳಿಯ ತೀರ ಪ್ರದೇಶಗಳಲ್ಲಿ ಮಲಬಾರ್ ಪ್ರದೇಶದ ಪ್ರಮುಖ ಬಂದರು ಪಟ್ಟಣಗಳಲ್ಲಿ ಈ ಸಂಘಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದವು. ಎಲಿದೂಲ ನಾರಾಯನನ್ ಕುಮುರ್ ಶಾಸನವು ಇಲಿಮಾಲ ವರ್ತಕ ಸಂಘದ ಉಲ್ಲೇಖವನ್ನು ನೀಡುತ್ತದೆ. ಮನಿಗ್ರಾಮಮ್ ವರ್ತಕ ಸಂಘವು ಉತ್ತರ ಮಲಬಾರಿನಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಈ ಸಂಘವು ಪಯ್ಯನ್ನೂರ್, ಕುನ್ನಿಮಂಗಲಂ ಮಲಾಯಿ ಹಾಗೂ ಪಲಯನೆಗುಡಿ ಪ್ರಾಂತ್ಯಗಳಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಮಾಡುತ್ತಿತ್ತು. ಕ್ರಿ.ಶ. ೧೨ನೇ ಶತಮಾನದಿಂದ ಮುಸ್ಲಿಂ ವರ್ತಕ ಸಂಘವು ಬೆಳೆಯುತ್ತಾ ಹೋಯಿತು.[೭೭]

ಹಂಜಮಾನ ಅಥವಾ ಅಂಜುವಣ್ಣಮ್

ಹಂಜಮಾನ ಎಂಬುದು 'ಅಂಜಮಾನ್' ಎಂಬ ಪರ್ಷಿಯನ್ ಪದದಿಂದ ಬಂದಿದೆ. ಅಂಜುಮನ್ ಅಥವಾ ಹಂಜಮಾನ ಎಂದರೆ ಸಂಘ ಅಥವಾ ಕೂಟವೆಂದರ್ಥ. ಡಿ.ಸಿ.ಸರ್ಕಾರ್ ಅವರು ಸಂಸ್ಕೃತ 'ಪಂಚವರ್ಣ' ಶಬ್ದದಿಂದ 'ಹಂಜಮಾನ' ಬಂದಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.[೭೮] ಇದರ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ವ್ಯಾಪಾರ ವೃತ್ತಿಯಿಂದ ಭಾರತದ ಕರಾವಳಿ ಭಾಗಕ್ಕೆ ಬಂದಿದ್ದರು. ಇವರು ಕರಾವಳಿ ಭಾಗದ ಉದ್ದಕ್ಕೂ ಪಸರಿಸಿದ್ದರು. ಪರ್ಶಿಯಾ ದೇಶದ ವರ್ತಕರ ವಾಸಸ್ಥಳವನ್ನು 'ಹಂಜಮಾನ್' ಶಬ್ದ ಸೂಚಿಸುತ್ತಿದೆಯೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.[೮೦] ಕೊಟ್ಟಾಯಂ ಪಟದ ಸ್ಥಾನುರವಿ (ಕ್ರಿ.ಶ. ೮೪೮ ಮ. ೮೪೮) ಶಾಸನದ ಉಲ್ಲೇಖದಲ್ಲಿ ಹಂಜಮಾನ್ ಬಗ್ಗೆ ವಿವರವಿದೆ.[೮೧] ಕ್ರಿ.ಶ. ೮–೯ನೇ ಶತಮಾನದ ತಮಿಳು ನಾಡಿನಲ್ಲಿ ಪ್ರಾಮುಖ್ಯತೆ ಪಡೆದ ವರ್ತಕ ಸಂಘವಾಗಿ ಗುರುತಿಸಿಕೊಂಡಿತು. ಕ್ರಿ.ಶ. ೧೦೦೦ರಲ್ಲಿನ ಕೊಚ್ಚಿನ್‌ನ ತಾಮ್ರ ಪದದ ಶಾಸನವಾದ ಭಾಸ್ಕರ್ ರವಿ ಶಾಸನದಲ್ಲಿಯು ಅಂಜುವನ್ನಂ ಸಂಘದ ಕಾರ್ಯ ಚಟುವಟಿಕೆಗಳ ಬಗೆಗೆ ಮಾಹಿತಿ ಇದೆ.[೮೨] ಕ್ರಿ.ಶ. ೧೧೮೦ರ ವಿಶಾಖಪಟ್ಟಣಂ(ಪೂರ್ವ ಕರಾವಳಿ) ದಾಖಲೆಗಳಲ್ಲಿ ತಮಿಳು ರಾಜ್ಯದಲ್ಲಿ ವಿದೇಶಿ ವರ್ತಕರು ಸ್ಥಳೀಯ ವರ್ತಕರೊಂದಿಗೆ ವ್ಯಾಪಾರ ಚಟುವಟಿಕೆ ನಡೆಸುತ್ತಿದ್ದ ಕುರಿತು ಮಾಹಿತಿ ಇದೆ.[೮೩] ಈ ವರ್ತಕ ಸಂಘ ಮುಖ್ಯವಾಗಿ ಅರೇಬಿಯಾದಿಂದ ಕುದುರೆಗಳನ್ನು ಆಮದು ಮಾಡಿಕೊಂಡು, ಸಾಂಬಾರು ಪದಾರ್ಥಗಳನ್ನು ರಫ್ತು ಮಾಡುವ ಕಾರ್ಯವನ್ನು ಮಾಡುತ್ತಿತ್ತು. ಇವರು ಸ್ಥಳೀಯ ಹಾಗೂ ವಿದೇಶಿ ವರ್ತಕರಿಗೆ ಮಧ್ಯವರ್ತಿಗಳಾಗಿದ್ದರು. ತಿಟ್ಟಂಡಣಪುರಂ ಶಾಸನ ಉಲ್ಲೇಖಿಸುವಂತೆ ಅಂಜುವನ್ ವರ್ತಕ ಸಂಘವು ಆಂತರಿಕ ಹಾಗೂ ವಿದೇಶಿ ವ್ಯಾಪಾರದಲ್ಲಿ ಇತರ ವರ್ತಕರೊಂದಿಗೆ ಸಂಬಂಧವನ್ನು ಹೊಂದಿತ್ತು.[೮೪]

ಇದು ಕ್ರಿ.ಶ. ೧೪ನೇ ಶತಮಾನದಲ್ಲಿ ವ್ಯಾಪಾರಕ್ಕೆ ಕರಾವಳಿಗೆ ಬಂದು ನೆಲೆಸಿದ ಪರ್ಷಿಯನ್ ವರ್ತಕ ಸಂಘ. ಹಂಜಮಾನ ಸದಸ್ಯರ ಹೆಸರು ಹಂಜಮಾನದವರಾಗಿ ಗುರುತಿಸಿಕೊಂಡರು. ಕರಾವಳಿ ಕರ್ನಾಟಕದಲ್ಲಿ ಬಸರೂರು ಹಂಜಮಾನ,[೮೬] ಹೊನ್ನಾವರ ಹಂಜಮಾನ, ಬಾರಕೂರು ಹಂಜಮಾನ, ಮಂಗಳೂರು ಹಂಜಮಾನಗಳು ಕಂಡುಬಂದವು.[೮೭]

ಕರಾವಳಿ ಕರ್ನಾಟಕದಲ್ಲಿ ಕಂಡುಬರುವ ಶಾಸನಗಳಲ್ಲಿ ಬಾರಕೂರು, ಮಂಗಳೂರು, ಬಸರೂರು, ಹೊನ್ನಾವರ ಪ್ರದೇಶಗಳಲ್ಲಿ ಮುಸ್ಲಿಂ ವರ್ತಕ ಸಂಘಗಳು ಇದ್ದವು ಎನ್ನುವ ಮಾಹಿತಿ ಸಿಗುತ್ತದೆ. ಇಲ್ಲಿ ಪ್ರಾದೇಶಿಕವಾರು ಹಂಜುಮಾನ್ ಸಂಘವು ಗುರುತಿಸಿಕೊಂಡಿತು. ಕರಾವಳಿ ಕರ್ನಾಟಕದಲ್ಲಿ ಈ ಸಂಘಗಳು ಕ್ರಿ.ಶ. ೧೫ನೇ ಶತಮಾನದಲ್ಲಿ ಸಾಕಷ್ಟು ಕಂಡುಬಂದವು. ಇದಕ್ಕೆ ಶಾಸನಾಧಾರಗಳಿವೆ.[೮೮] ಇದು ಮುಖ್ಯವಾಗಿ ಕರಾವಳಿ ಕರ್ನಾಟಕದಲ್ಲಿ ಹಂಜುಮಾನ್ ಸಂಘವು ಪ್ರಬಲವಾಗಿತ್ತು. ಎನ್ನುವುದಕ್ಕೆ ಉದಾಹರಣೆಯಾಗಿದೆ. ಈ ಹಿನ್ನೆಲೆಯಲ್ಲಿ ವರ್ತಕ ಸಂಘವು ವಿಜಯನಗರ ಕಾಲಾವಧಿಯಲ್ಲಿ ಶ್ರೀಮಂತಿಕೆಯಿಂದ ಕೂಡಿತ್ತು. ಈ ವರ್ತಕ ಸಂಘದ ವ್ಯಾಪಾರಸ್ಥರು ಆರ್ಥಿಕವಾಗಿ ಪ್ರಾಬಲ್ಯವನ್ನು ಹೊಂದಿದ್ದರು. ಇವರು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ಸಂಘವನ್ನು ವ್ಯವಸ್ಥಿತವಾಗಿ ರಚಿಸಿಕೊಂಡಿದ್ದರು.[೮೯]

ವಿಜಯನಗರದ ಅರಸರಿಗೆ ಇವರು ತೆರಿಗೆಯನ್ನು ಸಲ್ಲಿಸಬೇಕಿತ್ತು. ತೆರಿಗೆಯನ್ನು ನಗದು ರೂಪದಲ್ಲಿ ನೀಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ದವಸ-ಧಾನ್ಯ ರೂಪದಲ್ಲಿ ಅಧಿಕಾರಿಗಳಿಗೆ ಒಪ್ಪಿಸಿದ ಸಂಗತಿ ಬಸರೂರು ಶಾಸನದಲ್ಲಿ ಕಂಡುಬರುತ್ತದೆ.[೯೦] ಇವರು ಸ್ವಂತ ಭೂಮಿಯನ್ನು ಹೊಂದಿ, ಒಕ್ಕಲುತನವನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಹೊನ್ನಾವರ ರಾಜಧಾನಿಯಿಂದ ತುಳು, ಹೈವೆ, ಕೊಂಕಣ ರಾಜ್ಯಗಳನ್ನು ಆಳುತ್ತಿದ್ದ ತಿಮ್ಮಣ್ಣ ಒಡೆಯನೊಂದಿಗೆ ಹೊನ್ನಾವರ ಹಂಜಮಾನದ ಮುಖ್ಯಸ್ಥ ಉಮರ ಮರಕಾಲನು ವಿರೋಧ ಕಟ್ಟಿಕೊಂಡು ತೊಂದರೆಗೀಡಾದ ಸಂಗತಿಯನ್ನು ಕಾಯ್ಕಿಣಿ ಶಾಸನ ವಿವರಿಸುತ್ತದೆ.[೯೧] ಹೀಗೆ ಹಂಜುಮನ್‌ಗೆ ಸಂಬಂಧಿಸಿದ ಶಾಸನಗಳು ಸ್ಥಳೀಯ ವರ್ತಕರೊಂದಿಗೆ ಹಾಗೂ ಅರಸರೊಂದಿಗೆ ಹಂಜಮಾನ್ ವರ್ತಕರು ಹೊಂದಿದ್ದ ಸಂಬಂಧಗಳ ಸ್ವರೂಪವನ್ನು ತಿಳಿಸುತ್ತದೆ.

ಕ್ರಿ.ಶ. ೧೪ ಮತ್ತು ೧೫ನೇ ಶತಮಾನದಲ್ಲಿ ಇವರು ತುಳುನಾಡಿನಲ್ಲಿ ಕೃಷಿ ಮಾಡುವುದರ ಜೊತೆಗೆ ವ್ಯಾಪಾರದಲ್ಲಿಯೂ ಭಾಗವಹಿಸಿದ್ದರು.[೯೨] ಇವರು ಪ್ರಾರಂಭದಲ್ಲಿ ಅಂದರೆ ಸುಮಾರು ೯ನೇ ಶತಮಾನದಲ್ಲಿ ಕೇರಳದ ತೀರ ಪ್ರದೇಶದಲ್ಲಿ ತಮ್ಮ ವ್ಯಾಪಾರ ಚಟುವಟಿಕೆಗಳನ್ನು ಆರಂಭಿಸಿ ೧೧ನೇ ಶತಮಾನದ ಹೊತ್ತಿಗೆ ದಕ್ಷಿಣ ಭಾರತದ ತೀರ ಪ್ರದೇಶಗಳಲ್ಲಿದ್ದ ಸ್ಥಳೀಯ ವರ್ತಕರು ಮತ್ತು ಐನೂರ್ವರು ನಡುವೆ ಉತ್ತಮ ಸಂಪರ್ಕ ಬೆಳೆಸಿದ್ದರು.[೯೩] ಗುಂಡರ್ಟ್ ಅವರು ಅಂಜುವಣ್ಣಮ್‌ನನ್ನು ಹೊರದೇಶದ ವರ್ತಕ ಸಮೂಹವೆಂದು ಗುರುತಿಸಿದ್ದಾರೆ.[೯೪] ಇವರು ಬರ್ನಲ್ ಒಡಗೂಡಿ ಅಂಜುವಣ್ಣಮ್‌ನನ್ನು ಯಹೂದಿಗಳ ಕಾಲೋನಿಯೆಂದು ಅಭಿಪ್ರಾಯ ಪಟ್ಟಿದ್ದಾರೆ.[೯೫] ಟಿ.ಎ. ಗೋಪಿನಾಥ ಅವರು ಇವರನ್ನು ವಿದೇಶಿ ವರ್ತಕರ ಶ್ರೇಣಿಯೆಂದು ಒಪ್ಪಿಕೊಂಡಿದ್ದಾರೆ.[೯೬]

ಈ ಮೇಲಿನ ಪ್ರಮುಖ ವರ್ತಕ ಶ್ರೇಣಿಗಳಲ್ಲದೇ ಮಧ್ಯಯುಗೀನ ಕಾಲದಲ್ಲಿ ಇನ್ನೂ ಕೆಲವು ವರ್ತಕ ಸಂಘಗಳನ್ನು ಸಂಖ್ಯೆಗಳ ರೂಪದಲ್ಲಿ, ಅಂದರೆ ೩೦೦, ೨೦, ೧೬, ೧೨ ಮತ್ತು ೭ ಇತ್ಯಾದಿ ಗುರುತಿಸಲಾಗಿದೆ. ಈ ಸಂಖ್ಯೆಗಳು ಬಹುಶಃ ವರ್ತಕರ ಶ್ರೇಣಿಯ ಸದಸ್ಯರ ಸಂಖ್ಯೆಯನ್ನು ಸೂಚಿಸುತ್ತವೆ.[೭] ಈ ಸಂಖ್ಯೆಗಳು ಬಹುಶಃ ವರ್ತಕರ ಶ್ರೇಣಿಯ ಸದಸ್ಯರ ಸಂಖ್ಯೆಯನ್ನು ಸೂಚಿಸುವುದಾಗಿತ್ತು. ಶಾಸನಗಳಲ್ಲಿ ಹೆಚ್ಚಿನ ವಿವರಗಳು ಇವರ ಬಗ್ಗೆ ಇಲ್ಲದಿರುವ ಕಾರಣ ಇವರ ವ್ಯಾಪಾರ ವಸ್ತುಗಳು ಮತ್ತು ಕಾರ್ಯವೈಖರಿಯ ಸ್ವರೂಪವನ್ನು ತಿಳಿಯುವುದು ಕಷ್ಟವಾಗುತ್ತಿದೆ.

೬.೪. ಉದ್ದಿಮೆಗಳು

ವಿಜಯನಗರದ ಆರ್ಥಿಕ ಪ್ರಾಬಲ್ಯವು ಉದ್ದಿಮೆ ಮತ್ತು ವ್ಯಾಪಾರದ ಮೇಲೆ ನಿರ್ಧಾರಿತವಾಗಿತ್ತು. ಉದ್ದಿಮೆಗಳು ವ್ಯಾಪಾರದ ಮೇಲೆ ಹಾಗೂ ವ್ಯಾಪಾರವು ಉದ್ದಿಮೆಯ ಮೇಲೆ ಅವಲಂಬಿತವಾದುದು. ವಿಜಯನಗರ ಕಾಲಾವಧಿಯಲ್ಲಿ ಕೃಷಿ ಹಾಗೂ ದೈನಂದಿನ ಬಳಕೆಗೆ ಸಂಬಂಧಿಸಿದ ಹಲವು ಉದ್ದಿಮೆಗಳಿದ್ದವು. ಜವಳಿ, ಲೋಹ ತಯಾರಿಕೆ, ಮುತ್ತು-ರತ್ನಗಳ ಕೈಗಾರಿಕೆ ಹಾಗೂ ಕೃಷಿ ಉತ್ಪನ್ನ ಸಂಬಂಧಿಸಿದ ವಸ್ತುಗಳಾದ ಹತ್ತಿ, ತೈಲಬೀಜಗಳು, ಕಬ್ಬು, ತೆಂಗು, ಲೋಹವಾದ ಬಂಗಾರ ಮತ್ತು ಹಲವು ಬಗೆಯ ರತ್ನಗಳು ಬಿದಿರು ಮುಂತಾದವು ಪ್ರಮುಖವಾಗಿದ್ದವು. ಶಾಸನಗಳು ಮತ್ತು ಸಾಹಿತ್ಯಿಕ ಆಕರಗಳು ಮತ್ತು ವಿದೇಶಿ ಪ್ರವಾಸಿಗರ ಕಥನಗಳು ವಿಜಯನಗರದಲ್ಲಿ ಉತ್ಪಾದನೆ ಹಾಗೂ ಮಾರಾಟಗಳ ಬಗೆಗಿನ ಉಲ್ಲೇಖಗಳ ಮಾಹಿತಿಯನ್ನು ನೀಡುತ್ತವೆ. ಈ ಪ್ರಕ್ರಿಯೆಯಲ್ಲಿ ಮುಸ್ಲಿಂ ವರ್ತಕ ಸಮುದಾಯಗಳ ಪಾತ್ರವು ಪ್ರಮುಖವಾಗಿ ಕಂಡುಬರುತ್ತದೆ.

ವಿಜಯನಗರ ಪೂರ್ವ ಮತ್ತು ವಿಜಯನಗರ ಕಾಲಾವಧಿಯಲ್ಲಿ ಹಲವು ಉದ್ದಿಮೆಗಳು ಅಸ್ತಿತ್ವದಲ್ಲಿದ್ದವು. ಜವಳಿ ಉದ್ದಿಮೆಯು ಕರ್ನಾಟಕದ ಪ್ರಮುಖ ಉದ್ದಿಮೆಯಾಗಿ ವಿಜಯನಗರ ಪೂರ್ವದ ಅವಧಿಯಲ್ಲಿ ಕಂಡುಬರುತ್ತದೆ.[೮] ನೇಕಾರರ ಸಂಘಗಳು ಇಲ್ಲಿ ಇದ್ದವು ಎಂಬುದನ್ನು ಶಾಸನಗಳು ತಿಳಿಸುತ್ತವೆ(ಧಾರವಾಡ ಮತ್ತು ಬೆಳಗಾವಿ ಜಿಲ್ಲೆ). ಉದ್ದಿಮೆದಾರರಿಗೆ ಆಡಳಿತಗಾರರ ಮತ್ತು ಅಧಿಕಾರಿಗಳ ಪ್ರೋತ್ಸಾಹ ಇತ್ತು. ಮಾರ್ಕೊ ಪೋಲೊ ತಿಳಿಸುವಂತೆ ದಕ್ಷಿಣ ಪ್ರಾಂತ್ಯವು ಉತ್ತಮಗುಣಮಟ್ಟದ ಜವಳಿ ಉತ್ಪಾದನೆಯಲ್ಲಿ ಹೆಸರಾಗಿತ್ತು. ಅದೇ ರೀತಿ ಅರಬ್ ಭೂಗೋಳ ತಜ್ಞ ಅಬ್ದುಲ್ ಫಿದಾ ಉತ್ಪಾದನೆಯ ಉದ್ದಿಮೆಗಳ ಅಸ್ತಿತ್ವದ ಬಗೆಗೆ ತಿಳಿಸಿರುತ್ತಾನೆ. ರೇಷ್ಮೆ ಉದ್ಯಮವು ಸಮೃದ್ಧಿಯಾಗಿತ್ತು. ಚೀನಾ ರಾಷ್ಟ್ರದಿಂದಲೂ ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ಕಂಡುಬರುವ ಪ್ರಮುಖ ಉದ್ದಿಮೆಗಳ ವಿವರ ಈ ಕೆಳಗಿನಂತಿದೆ.

ವಿಜಯನಗರ ಕಾಲಾವಧಿಯಲ್ಲಿನ ಪ್ರಮುಖ ಉದ್ದಿಮೆಗಳು

೧. ಜವಳಿ ಉದ್ದಿಮೆ

ಹತ್ತಿ ಬಟ್ಟೆಗೆ ಕರ್ನಾಟಕದಲ್ಲಿ ಬೇಡಿಕೆ ಇತ್ತು. ರಜಾಕ್ ತಿಳಿಸುವಂತೆ ಹತ್ತಿ ಬಟ್ಟೆಗಳ ಬಳಕೆಯಲ್ಲಿ ಸಾಮಾನ್ಯ ಜನರು ತೃಪ್ತರಾಗಿದ್ದರು. ಸಾಗುವಳಿ ಹಿಸ್ಸೆ ಬಳಕೆ ಅತ್ಯಲ್ಪ ಪ್ರಮಾಣದಲ್ಲಿತ್ತು.

ಅಲ್ಲದೆ ಹತ್ತಿ ಬಟ್ಟೆಗಳಿಗೆ ವಿದೇಶಗಳಲ್ಲಿ ಬೇಡಿಕೆಯಿದ್ದು, ಹೊರ ರಾಷ್ಟ್ರಗಳಿಂದ ಬಂದ ಹತ್ತಿ ಬಟ್ಟೆಯು ಭಾರತದ ಸಮುದ್ರ ಭಾಗದಲ್ಲಿ ಬಂದು ಇಳಿಯುತ್ತಿತ್ತು. ವಿಜಯನಗರ ಕಾಲದಲ್ಲಿ ಉತ್ಪಾದಿಸಲಾಗುತ್ತಿದ್ದ ಪ್ರಮುಖ ಜವಳಿ ಬಟ್ಟೆಗಳೆಂದರೆ ಧಾರ್ಮಿಕ ಕಾರ್ಯಗಳಿಗೆ, ಮದುವೆ ಸಮಾರಂಭಗಳಿಗೆ, ಬಿಳಿ ಬಟ್ಟೆ, ಎಂಟು ಗಜ ಬಟ್ಟೆ, ಹತ್ತಿ ಬಟ್ಟೆ, ಹತ್ತಿ ದಾರದಿಂದ ತಯಾರಾದ ಬಟ್ಟೆ, ಉಣ್ಣೆ, ರೇಷ್ಮೆ ದಾರ ಬಟ್ಟೆ, ತಾಳೆಗರಿ ಬಟ್ಟೆ. ಈ ಮೇಲಿನ ಜವಳಿ ಉದ್ದಿಮೆಯು ಪ್ರಮುಖ ವ್ಯಾಪಾರ ವರ್ತಕ ಸಮುದಾಯಗಳ ಕೈಯಲ್ಲಿತ್ತು.[೯೯] ಸ್ಥಳೀಯವಾಗಿ ಪ್ರಾಬಲ್ಯ ಹೊಂದಿದ್ದ ಬಣಜಿಗರ ಕೈಯಲ್ಲಿ ಇತ್ತು. ಈ ಉದ್ದಿಮೆಗಳಲ್ಲಿ ತಯಾರಾದ ವಸ್ತುಗಳನ್ನು ವಿದೇಶ ಮಾರುಕಟ್ಟೆಗಳಿಗೆ ಮುಸ್ಲಿಂ ವರ್ತಕ ಸಮುದಾಯಗಳು ಪರಿಚಯಿಸಿದವು.[೧೦೦] ಬಟ್ಟೆಗಳ ಕೈಗಾರಿಕೆಯು ಚೌಲ್, ತೆಲಂಗಾಣ, ಕ್ಯಾಲಿಕಟ್ ಹಾಗೂ ಮೈಸೂರು ಪ್ರಾಂತ್ಯಗಳಲ್ಲಿ ಇತ್ತು. ವರ್ತೆಯಾ ತಿಳಿಸುವಂತೆ ಹತ್ತಿ ವಸ್ತುಗಳನ್ನು ಹೇರಳವಾಗಿ ಚೌಲ್ ಪ್ರದೇಶದಲ್ಲಿ ಉತ್ಪಾದಿಸಲಾಗುತ್ತಿತ್ತು.[೧೦೧]

ಜವಳಿ ಉದ್ಯಮದ ಕೇಂದ್ರಗಳು

ಹತ್ತಿಯನ್ನು ಗೋವಾ ಸುತ್ತಲಿನ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿತ್ತು. ಅವುಗಳಿಂದ ಅತ್ಯಂತ ಉತ್ತಮ ಗುಣಮಟ್ಟದ ಬಟ್ಟೆಗಳನ್ನು ಉತ್ಪಾದಿಸಲಾಗುತ್ತಿತ್ತು. ನ್ಯೂನಿಜ್ ಉಲ್ಲೇಖಿಸುವಂತೆ ಪೂರ್ವದ ಭಾಗದಲ್ಲಿನ ಪ್ರಮುಖ ಜವಳಿ ಉದ್ಯಮ ಕೇಂದ್ರವಾಗಿತ್ತು. ಬಾರ್ಬೋಸ್ ತಿಳಿಸುವಂತೆ ಹೇರಳವಾದ ಮುದ್ರಿತ ಹತ್ತಿ ಬಟ್ಟೆ ತಯಾರಿಕೆಯಲ್ಲಿ 'ಪುಲಿಕಾಟ್' ಪ್ರಮುಖವಾಗಿ ಕಂಡುಬರುತ್ತದೆ ಎಂದಿದ್ದಾನೆ. ಮಲಕ್ಕಾ, ಪೆಗು, ಸುಮಾತ್ರ ಮತ್ತು ಗುಜರಾತ್ ಪ್ರಮುಖ ಹತ್ತಿ ಬಟ್ಟೆಯ ಕೇಂದ್ರಗಳಾಗಿದ್ದವು. ಪಶ್ಚಿಮ ಕರಾವಳಿಯಲ್ಲಿ ಉತ್ಪಾದನೆಯಾಗುತ್ತಿದ್ದ ಜವಳಿ ಉದ್ಯಮಗಳೆಂದರೆ ರೇಷ್ಮೆ ಬಟ್ಟೆ, ಬಣ್ಣದ ವೆಲ್ವೆಟ್, ಸ್ಯಾಟಿನ್ ಟ್ಯಾಫ್ಲೆಟ್ಸ್ ಮತ್ತು ಥಿಕ್ ಕಾರ್ಪೆಟ್ಸ್ ಬಾರ್ಬೋಸ್ ತಿಳಿಸಿರುವ ಈ ಮಾಹಿತಿಗಳು ನ್ಯೂನಿಜ್‌ನ ಉಲ್ಲೇಖದಲ್ಲಿಯೂ ಕಂಡುಬರುತ್ತವೆ. ಮೈಸೂರು ಪ್ರಾಂತ್ಯವು ಮಹಿಳೆರ ಬಟ್ಟೆಗಳ ಉತ್ಪಾದನಾ ಕೇಂದ್ರವಾಗಿತ್ತು. ಬೂದಿಹಾಳ್(ಚಿತ್ರದುರ್ಗ ಜಿಲ್ಲೆ) ಲೆನಿನ್ ಬಟ್ಟೆಗೆ ಪ್ರಖ್ಯಾತಿಯಾಗಿತ್ತು. ಗುಂಟೂರ್ ಹತ್ತಿ ದಾರಕ್ಕೆ ಪ್ರಖ್ಯಾತವಾಗಿತ್ತು. ಕ್ಯಾಲಿಕಟ್ ಪ್ರದೇಶದಲ್ಲಿ ಸಹ ಜವಳಿ ಉತ್ಪಾದನೆ ಪ್ರಮುಖವಾಗಿತ್ತು, ಹತ್ತಿ ಬಟ್ಟೆಯನ್ನು ಉತ್ಪಾದಿಸಲಾಗುತ್ತಿತ್ತು.

೨. ಲೋಹದ ಮಾಧ್ಯಮ

ಲೋಹದ ಉದ್ಯಮದಲ್ಲಿ ವಿವಿಧ ರೀತಿಯ ಲೋಹಗಳು ಲಭ್ಯವಿದ್ದವು. ಅವುಗಳಲ್ಲಿ ಚಿನ್ನ, ಬೆಳ್ಳಿ, ಕಬ್ಬಿಣ, ತಾಮ್ರ ಮತ್ತು ಹಿತ್ತಾಳೆ ಲೋಹದ ಉದ್ಯಮಗಳಾಗಿದ್ದವು. ಕಬ್ಬಿಣವು ಬಳ್ಳಾರಿ, ಹೊಸಪೇಟೆ, ರಾಮಗಿರಿ, ಕೆಮ್ಮಣ್ಣುಗುಂಡಿ, ಯಲ್ಲಾಪುರ, ಹೊನ್ನಾವರ ಹಾಗೂ ಸ್ವಲ್ಪ ಪ್ರಮಾಣದಲ್ಲಿ ಧಾರವಾಡ, ಬೆಳಗಾವಿ, ಶಿವಮೊಗ್ಗ, ವಿಜಾಪುರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಲಭ್ಯವಾಗಿತ್ತು. ಕೋಲಾರ ಜಿಲ್ಲೆಯಲ್ಲಿ ಹೇರಳವಾದ ಕಬ್ಬಿಣ ಲಭ್ಯವಾಗಿತ್ತು. ಹಿತ್ತಾಳೆಯು ಚಿತ್ರದುರ್ಗ ಜಿಲ್ಲೆಯಲ್ಲಿ ಹಾಗೂ ಮೈಸೂರಿನಲ್ಲಿ ಲಭ್ಯವಿತ್ತು. ಕೋಲಾರ ಮತ್ತು ರಾಯಚೂರಿನಲ್ಲಿ ಚಿನ್ನದ ನಿಕ್ಷೇಪಗಳಿದ್ದವು.

ಆದರೆ ಸ್ಥಳೀಯವಾಗಿ ದೊರಕುವ ಲೋಹವು ಸಾಕಾಗುತ್ತಿರಲಿಲ್ಲ ಅದರ ಬೇಡಿಕೆ ಹೆಚ್ಚಾಗಿದ್ದರಿಂದ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು. ಮಾರ್ಕೊ ಪೋಲೊ ೧೩ನೇ ಶತಮಾನದಲ್ಲಿ ತಾಮ್ರ, ಬೆಳ್ಳಿ ಮತ್ತು ಚಿನ್ನಜೆಡ್ಡಾದಿಂದ ಹಾಗೂ ಪೂರ್ವದಿಂದ ಆಮದಾಗುತ್ತಿದ್ದು ಮೆಕ್ಕ ಮತ್ತು ಏಡನ್ ಮೂಲಕ ದಕ್ಷಿಣ ಭಾರತಕ್ಕೆ ಬರುತ್ತಿತ್ತು ಎನ್ನುವ ಮಾಹಿತಿ ನೀಡುತ್ತಾನೆ.

ಲೋಹ ಉದ್ಯಮದ ಬೆಳವಣಿಗೆ

ಹಲವು ಅಂಶಗಳು ಲೋಹದ ಕಾರ್ಖಾನೆಯ ಆರ್ಥಿಕತೆಯಲ್ಲಿ ಅವಲಂಬಿಸಿದೆ. ಪ್ರಾಚೀನ ಕಾಲದಿಂದಲೂ ಭಾರತೀಯರಿಗೆ ಚಿನ್ನ ಮತ್ತು ಬೆಳ್ಳಿ ಪ್ರಿಯವಾದುದು. ಧಾರ್ಮಿಕ ಕಾರ್ಯ, ಉಡುಗೊರೆ, ಹೀಗೆ ವಿವಿಧ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿತ್ತು. ಇದು ಚಿನ್ನವನ್ನು ಮತ್ತು ಬೆಳ್ಳಿಯನ್ನು ತಯಾರು ಮಾಡುವ ಅಕ್ಕಸಾಲಿಗರ ಬೆಳವಣಿಗೆಗೆ ಕಾರಣವಾಯಿತು. ಅಲ್ಲದೆ ಸಾಮಾನ್ಯ ವರ್ಗದಲ್ಲಿ ಕಂಡುಬರುವ ಮುಸ್ಲಿಂ ಅಕ್ಕಸಾಲಿಗರನ್ನು ಸೋನಾರ್ ಎಂದು ಕರೆಯಲಾಗುತ್ತಿತ್ತು. ವಿವಿಧ ಲೋಹದ ಉದ್ಯಮವನ್ನು ಹೊಂದಿರುವ ವರ್ಗಗಳಿಗೆ ವಿಜಯನಗರದ ಅರಸರು ತೆರಿಗೆಯನ್ನು ವಿಧಿಸುತ್ತಿದ್ದರು. ಲೋಹದ ಕೆಲಸವನ್ನು ಮಾಡುವ ಪಾಂಚಾಳರು ಮತ್ತು ವೀರ ಪಾಂಚಾಳರು ವಿವಿಧ ರೀತಿಯ ಲೋಹದ ಉದ್ದಿಮೆಯಲ್ಲಿ ಪರಿಣತಿ ಪಡೆದಿದ್ದರು. ದಕ್ಷಿಣ ಕೆನರಾದಲ್ಲಿ ಲೋಹದ ಕೆಲಸವನ್ನು ಮಾಡುವವರಿಗೆ 'ಹಂಜಮಾನ' ಎಂದು ಕರೆಯುತ್ತಿದ್ದರು.[೧೦೩] ಹಂಜಮಾನ್ ಸಂಘದಲ್ಲಿ ಕಂಡುಬರುವ ಮುಸ್ಲಿಂ ಕುಶಲಕರ್ಮಿಗಳು ವಿಜಯನಗರದ ಅವಧಿಯಲ್ಲಿ ಲೋಹದ ವ್ಯಾಪಾರಸ್ಥರಾಗಿ ಕಂಡುಬರುತ್ತಿತ್ತು. ಅಲ್ಲದೇ ಈ ಸಮುದಾಯವು ಶ್ರೀಮಂತ ವರ್ಗವಾಗಿತ್ತು ಎಂದು ಗುರುತಿಸಬಹುದು.

೩. ಬಿದರಿ ಕೆಲಸ

ಲೋಹಗಳಿಂದ ತಯಾರಿಸಿದ ವಸ್ತುಗಳ ಮೇಲೆ ಸೊಗಸಾದ ವಿನ್ಯಾಸಗಳನ್ನು ಬೆಳ್ಳಿ ಮತ್ತು ಕೆಲವೊಮ್ಮೆ ಬಂಗಾರದ ಬಳಕೆಯಿಂದ ಕೆತ್ತಲಾದ ವಸ್ತುವಿಗೆ ಬಿದರಿ ಕಲೆ ಎನ್ನುತ್ತಾರೆ. ಬೀದರ್ ಪ್ರಾಂತ್ಯ ಇದಕ್ಕೆ ಪ್ರಸಿದ್ಧಿಯಾಗಿದೆ. ಹಾಗಾಗಿ ಈ ಕಲೆಯಲ್ಲಿ ಮುಸ್ಲಿಂ ಕುಶಲಕರ್ಮಿ ಸಮುದಾಯವು ಅತ್ಯಂತ ಪ್ರಮುಖವಾಗಿ ಕಂಡುಬರುತ್ತದೆ. ಅಲ್ಲದೆ ಬುಟ್ಟಿ ತಯಾರಿಕಾ ಕುಶಲಕರ್ಮಿಗೆ ಗಾವಾರಿಸ್ ಎನ್ನಲಾಗುತ್ತದೆ. ಇವರೆಲ್ಲರೂ ಸ್ಥಳೀಯವಾಗಿ ಸಣ್ಣ ಕೈಗಾರಿಕೆಗಳಲ್ಲಿ ತಮ್ಮ ವೃತ್ತಿಯನ್ನು ಮಾಡುತ್ತಿದ್ದರು. ಹಾಗಾಗಿ ಪ್ರಮುಖ ವ್ಯಾಪಾರಿ ಅಥವಾ ಶ್ರಿಮಂತ ವ್ಯಾಪಾರಿಗಳಿಗೆ ಅವಲಂಬಿತವಾದ ವರ್ಗವಾಗಿತ್ತು ಎಂದು ಗುರುತಿಸಬಹುದು.[೧೦೪]

೪. ಚರ್ಮದ ಕಾರ್ಖಾನೆ

ಸೈನಿಕರ ಉಪಕರಣಗಳಿಗೆ ಅಂದರೆ ಕಾಲುಚಪ್ಪಲಿ, ಚೀಲಗಳು, ಕುದುರೆ ಅಲಂಕಾರ ಕೆಲಸಗಳಿಗೆ ಚರ್ಮದಿಂದ ತಯಾರಿಸಿದ ವಸ್ತುಗಳು ಬೇಕಾಗುತ್ತಿದ್ದವು. ವಿಜಯನಗರದಲ್ಲಿ ಈ ಉದ್ದಿಮೆಗಳ ಪ್ರಭಾವವು ದೆಹಲಿ ಸುಲ್ತಾನರು ಹಾಗೂ ಮೊಘಲ್ ರಾಜ್ಯದಿಂದ ಆಗಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಸೈನಿಕ ವಸ್ತ್ರಗಳನ್ನು ತಯಾರಿಸುವ ಉದ್ದಿಮೆ ಸುಲ್ತಾನರ ಅವಧಿಯಲ್ಲಿ ಕಂಡುಬಂದಿದ್ದರಿಂದ

ಸಹಜವಾಗಿ ಮುಸ್ಲಿಂ ಕುಶಲಕರ್ಮಿ ವರ್ಗದ ಪ್ರಭಾವ ವಿಜಯನಗರದ ಉದ್ದಿಮೆಯಲ್ಲಿ ಕಂಡುಬರುತ್ತಿತ್ತು ಎಂದು ಹೇಳಬಹುದು.

೫. ರತ್ನದ ಕಾರ್ಖಾನೆ

ರತ್ನವನ್ನು ವಿಜಯನಗರದ ಅರಸರು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದರು. ಸಿಲೋನ್‌ನಿಂದ ಅತಿ ಹೆಚ್ಚಾಗಿ ಆಮದು ಮಾಡಿಕೊಳ್ಳಲಾಗುತ್ತಿತ್ತು. ಬೆಲೆ ಬಾಳುವ ರತ್ನಗಳನ್ನು ೨ನೇ ದೇವರಾಯನು ಬರ್ಮದಿಂದ ಖರೀದಿಸುತ್ತಿದ್ದನು. ಪೆಗು ಬರ್ಮದ ಪ್ರಮುಖ ರತ್ನದ ಪ್ರಾಂತ್ಯವಾಗಿದ್ದು, ವಿವಿಧ ತರಹದ ಬೆಲೆ ಬಾಳುವ ರತ್ನಗಳನ್ನು ಮತ್ತು ವರ್ತಕರನ್ನು ಅಲ್ಲಿಗೆ ಕಳುಹಿಸಲಾಗುತ್ತಿತ್ತು. ಬ್ಯಾಬಿಲೋನಿಯಾದಿಂದಲೂ ರತ್ನದ ಹರಳುಗಳು ಆಮದಾಗುತ್ತಿದ್ದವು. ಬಾರ್ಬೋಸ್ ಹೇಳುವಂತೆ ಮಲಬಾರ್ ಪ್ರಾಂತ್ಯದಿಂದ ಬೆಲೆ ಬಾಳುವ ರತ್ನದ ಹರಳನ್ನು ವಿಜಯನಗರಕ್ಕೆ ಸಾಗಿಸಲಾಗುತ್ತಿತ್ತು.[೧೦೫] ಆದರೆ ಕರ್ನಾಟಕದಲ್ಲಿ ವಜ್ರದ ಗಣಿಗಳಿರಲಿಲ್ಲ. ಆಂಧ್ರದ ಗುತ್ತಿ ಪ್ರದೇಶದಲ್ಲಿ ೨೦ ಮೈಲಿ ದೂರದಲ್ಲಿರುವ ವಜ್ರಹೊರ್‌ನಿಂದ ವಿಜಯನಗರದ ಅರಸರು ವಜ್ರಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಈ ಪ್ರಾಂತ್ಯವು ವಜ್ರದ ಉದ್ಯಮಿಗಳಿಗೆ ಹೆಸರುವಾಸಿಯಾಗಿತ್ತು. ವಿಜಯನಗರದ ಅರಸರು ವಜ್ರದ ವ್ಯಾಪಾರದಲ್ಲಿ ಏಕಸ್ವಾಮ್ಯ ಹೊಂದಿದ್ದರು.

೬. ತೆಂಗು ಅವಲಂಬಿತ ಉದ್ದಿಮೆ

ಕೃಷಿ ಉತ್ಪನ್ನದಲ್ಲಿ ತೆಂಗು ಬಹಳ ಪ್ರಾಮುಖ್ಯತೆ ಪಡೆದಿತ್ತು. ದಕ್ಷಿಣ ಭಾರತ ತೆಂಗು ಬೆಳೆಗೆ ಪ್ರಸಿದ್ಧವಾಗಿತ್ತು. ಹಲವಾರು ತೆಂಗು ತೋಟಗಳು ವಿಜಯನಗರದ ಅವಧಿಯಲ್ಲಿ ಕಂಡುಬರುತ್ತದೆ. ಹಾಗೆಯೇ ಈ ಅವಧಿಗೆ ಇದು ನಗದು ಬೆಳೆಯಾಗಿತ್ತು. ಏಕೆಂದರೆ ಆಂತರಿಕವಾಗಿಯೂ ಹಾಗೂ ಬಾಹ್ಯವಾಗಿಯೂ ಇದಕ್ಕೆ ಬೇಡಿಕೆ ಇತ್ತು. ಇದನ್ನು ಏಡೆನ್ ಮತ್ತು ಆರ್ಮಜ್ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿತ್ತು. ಕಲ್ಪವೃಕ್ಷ ಎಂದು ಕರೆಯುವ ತೆಂಗಿನ ಮರಗಳು ದಕ್ಷಿಣ ಭಾರತದ ಕರಾವಳಿ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ತೆಂಗು ಮರಗಳು ಕಚ್ಚಾ ಸಾಮಗ್ರಿಗಳನ್ನು ಉದ್ಯಮಕ್ಕೆ ಒದಗಿಸುತ್ತಿದ್ದವು. ಎಣ್ಣೆ, ಕೊಬ್ಬರಿ, ನಾರು ಅನೇಕ ಉದ್ಯಮಗಳಿಗೆ ಉಪಯೋಗ ಮಾಡುತ್ತಿದ್ದರು. ಇದಲ್ಲದೆ ಹೆಂಡ ಹಾಗೂ ಮನೆಬಳಕೆಯ ವಸ್ತುಗಳನ್ನು ಇದರಿಂದ ಮಾಡಲಾಗುತ್ತಿತ್ತು.

೭. ಎಣ್ಣೆ ಉತ್ಪಾದನೆ

ಎಣ್ಣೆ ಉತ್ಪಾದಕನಿಗೆ ತೆಲ್ಲಿಗ ಎನ್ನಲಾಗುತ್ತಿತ್ತು. ಮೂರು ರೀತಿಯ ವಿಧಾನ ಎಣ್ಣೆ ಉತ್ಪಾದನಾ ಅವುಗಳೆಂದರೆ ಚಾಲ್ತಿಯಲ್ಲಿತ್ತು. ಕೈಗಳಿಂದ, ಎತ್ತುಗಳಿಂದ ಹಾಗೂ ಎಣ್ಣೆ ತೆಗೆಯುವ ಯಂತ್ರಗಳಿಂದ ಎಳ್ಳು ಮತ್ತು ತೆಂಗಿನಿಂದ ಎಣ್ಣೆ ತಯಾರಿಕೆ ಮಾಡುತ್ತಿದ್ದರು.[೧೦೬]

೮. ರಂಗು/ಬಣ್ಣ

ಇದು ಬಟ್ಟೆಗಳಿಗೆ ಬಣ್ಣ ಹಚ್ಚುವ ಉದ್ದಿಮೆಯಾಗಿತ್ತು. ಇದು ಜವಳಿ ಉದ್ದಿಮೆಗೆ ಪೂರಕವಾದದು. ದಕ್ಷಿಣ ಭಾರತದಲ್ಲಿ ವಿವಿಧ ತರಹದ ಬಳ್ಳಿಗಳಿಂದ ಬಣ್ಣಗಳನ್ನು ಮಾಡಲಾಗುತ್ತಿತ್ತು. ಭಟ್ಕಳ ಮತ್ತು

ಮಲಬಾರ್ ಬಂದರುಗಳಲ್ಲಿ ಉತ್ತಮ ಗುಣಮಟ್ಟದ ಮೈರೋಬಾಮ್ ಸಿಗುತ್ತಿತ್ತು. ಬಾರ್ಬೋಸ್‌ನು ಚಾಲ್‌ನಲ್ಲಿಯೇ ಸಿಗುತ್ತಿತ್ತು ಎಂದಿದ್ದಾನೆ.

೯. ಮೀನುಗಾರಿಕೆ

ವಿಜಯನಗರಕ್ಕೆ ಮೀನುಗಳನ್ನು ವಿವಿಧ ಬಂದರು ಪ್ರದೇಶಗಳಿಂದ ಕಳುಹಿಸಲಾಗುತ್ತಿತ್ತು. ಮಲಬಾರ್ ಸೇರಿದಂತೆ ಮಂಗಳೂರು, ಭಟ್ಕಳ ಮತ್ತು ಕಾರವಾರ ಪ್ರಾಂತ್ಯಗಳು ಮೀನುಗಾರಿಕೆ ಉದ್ಯಮಕ್ಕೆ ಹೆಸರುವಾಸಿಯಾಗಿದ್ದವು. ಮೀನುಗಾರರು ನಾಲ್ಕು ಶೇಕಡ ಕಂದಾಯವನ್ನು ಕಟ್ಟಬೇಕಿತ್ತು. ಕೊಲಾಸಿನ್ ಪ್ರಾಂತ್ಯವು ಪ್ರಸಿದ್ಧ ಮೀನುಗಾರಿಕೆ ಪ್ರದೇಶವಾಗಿತ್ತು. ವಿವಿಧ ತರಹದ ಮೀನುಗಾರಿಕೆ ಇತ್ತು. ಇದರಿಂದ ವ್ಯಾಪಾರಿಗಳಿಂದಲೂ ಅನೇಕ ನಿಧಿಗಳನ್ನು ಸಂಗ್ರಹಿಸಲಾಗುತ್ತಿತ್ತು. ಮೀನುಗಾರಿಕೆ ಪ್ರಮುಖ ಉದ್ಯಮವಾಗಿ ಕರಾವಳಿ ಪ್ರಾಂತ್ಯಗಳಲ್ಲಿ ನಡೆಸುತ್ತಿತ್ತು.[೧೦೭]

ರಫ್ತು ವ್ಯಾಪಾರ

ಚಾಲುಕ್ಯ, ರಾಷ್ಟ್ರಕೂಟ ಮತ್ತು ಹೊಯ್ಸಳರ ಕಾಲದಲ್ಲಿ ವಿದೇಶಿ ವ್ಯಾಪಾರ ಪ್ರಾಮುಖ್ಯತೆ ಪಡೆದಿತ್ತು. ವ್ಯಾಪಾರಿ ಸಂಘಗಳು ವಿಜಯನಗರ ಪೂರ್ವ ಅವಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದವು. ಅರಬ್ ಮತ್ತು ಅರಬ್ಬೇತರರ ಮತ್ತು ವಿದೇಶಿ ಪ್ರವಾಸಿಗರು ಈ ಕುರಿತು ಬೆಳಕು ಚೆಲ್ಲಿದ್ದಾರೆ. ವಿಜಯನಗರ ಪೂರ್ವದ ಕಾಲದಲ್ಲಿ ಕರ್ನಾಟಕದ ಸಮಾಜದಲ್ಲಿ ವ್ಯಾಪಾರವು ಆರ್ಥಿಕ ಚಟುವಟಿಕೆಯಾಗಿ ಕಂಡುಬರುತ್ತಿತ್ತು. ವಿದೇಶಿ ವ್ಯಾಪಾರದಲ್ಲಿ ಅರಬ್ಬರು ಪ್ರಮುಖವಾಗಿ ಕಾಣಿಸಿಕೊಂಡರು. ಕರ್ನಾಟಕದಲ್ಲಿ ಪ್ರಮುಖವಾಗಿ ಲೋಹಗಳು, ಬೆಲೆ ಬಾಳುವ ಹರಳುಗಳು, ಐಶಾರಾಮಿ ವಸ್ತುಗಳೊಂದಿಗೆ ವಿದೇಶಿ ವ್ಯಾಪಾರ ಇದ್ದಿತು. ಹಾಗಾಗಿ ವರ್ತಕರು ಹೇರಳವಾದ ಲಾಭವನ್ನು ಪಡೆಯುತ್ತಿದ್ದರು. ಸಾಮ್ರಾಜ್ಯದ ಅರಸರು ವಸ್ತುಗಳ ಆಮದು ಮತ್ತು ರಫ್ತುಗಳ ಮೇಲೆ ಕಂದಾಯ ವಿಧಿಸಿ ಲಾಭ ಪಡೆಯುತ್ತಿದ್ದರು.

ಕರ್ನಾಟಕವು ವಿವಿಧ ದೇಶಗಳೊಂದಿಗೆ ಸಮುದ್ರ ಮಾರ್ಗದ ಮೂಲಕ ವ್ಯಾಪಾರ ಸಂಪರ್ಕ ಹೊಂದಿತ್ತು. ಮಂಗಳೂರು, ಭಟ್ಕಳ, ಹೊನ್ನಾವರ, ಮುಂತಾದ ಪಶ್ಚಿಮ ಕರಾವಳಿಯ ಬಂದರು ಪ್ರದೇಶಗಳಲ್ಲಿ ವಿದೇಶಿ ವ್ಯಾಪಾರ ಬಿರುಸಿನಿಂದ ನಡೆಯುತ್ತಿದ್ದ ವಿವರಗಳನ್ನು ಇದ್ರಿಸಿ, ಯಾಕುತ್, ಅಬ್ದುಲ್ ಫಿದಾ, ಮಾರ್ಕೊ ಪೋಲೊ ಮುಂತಾದವರ ಬರವಣಿಗೆಗಳಿಂದ ತಿಳಿಯಬಹುದಾಗಿದೆ.

ಶಿಕಾರಿಪುರದ ದಾಖಲೆಯೊಂದು(೧೦೫೪) ತಿಳಿಸುವಂತೆ ವ್ಯಾಪಾರಿಗಳು ಭೂಮಾರ್ಗ ಮತ್ತು ಸಮುದ್ರಮಾರ್ಗ ಹೊಂದಿದ್ದರು. ಬೆಲೆ ಬಾಳುವ ಹವಳಗಳು, ರತ್ನಗಳು ಅತ್ಯುತ್ತಮ ತಳಿ ಮತ್ತು ಜಾತಿ ಕುದುರೆಗಳು ಮತ್ತು ಆನೆಗಳನ್ನು ತರಿಸಿಕೊಳ್ಳುತ್ತಿದ್ದರು. ಬಿ.ಎ. ಸಾಲೆತ್ತೂರ್ ಅವರು ಕ್ರಿ.ಶ. ೭ನೇ ಶತಮಾನದಿಂದ ೧೭ನೇ ಶತಮಾನದವರೆಗೆ ಪೂರ್ವ ಕರ್ನಾಟಕದ ಕರಾವಳಿ ತೀರಪ್ರದೇಶಗಳು ಮಲಯಾ ಹಾಗೂ ಚೀನಾ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದವು. ಎನ್ನುವ ಮಾಹಿತಿಯನ್ನು ನೀಡಿದ್ದಾರೆ. ಪೂರ್ವದ ಮಲಯ ಮತ್ತು ಚೀನಾದ ಹಡಗುಗಳು ಮತ್ತು

ಫಾರ್ಮೋಸಾ ಹಡಗುಗಳು ಮೊದಲು ಕ್ಯಾಲಿಕಟ್‌ವರೆಗೆ ಬಂದು ಇಡೀ ಕ್ಯಾಂಬೆ ಬಂದರುಗಳ ಮೂಲಕ ಕರ್ನಾಟಕದ ಕರಾವಳಿ ಗಡಿಯವರೆಗೆ ತಮ್ಮ ವ್ಯಾಪಾರಿ ಸಂಬಂಧವನ್ನು ಹೊಂದಿದ್ದವು. ಜೊತೆಗೆ ಮಂಗಳೂರು ಮತ್ತು ಹೊನ್ನಾವರ ಚೀನಾದ ಜೊತೆ ಕ್ರಿ.ಶ. ೧೫ನೇ ಶತಮಾನದವರೆಗೆ ತಮ್ಮ ಸಂಪರ್ಕ ಹೊಂದಿತ್ತು.

ವಿಜಯನಗರ ಸಾಮ್ರಾಜ್ಯವು ಸಿಲೋನ್, ಚೀನಾ, ಆಗ್ನೇಯ ಏಷ್ಯಾ, ಮಧ್ಯ ಪ್ರಾಚ್ಯ ಹಾಗೂ ಯುರೋಪಿನ ರಾಷ್ಟ್ರಗಳೊಂದಿಗೆ ಸಂಬಂಧವನ್ನು ಹೊಂದಿತ್ತು. ೧೪೯೮ರಲ್ಲಿ ಪೋರ್ಚುಗೀಸರ ಆಗಮನದ ನಂತರ ಅರಬ್ಬರು ವ್ಯಾಪಾರದ ಏಕಸ್ವಾಮ್ಯ ಕಳೆದುಕೊಂಡರು. ಇವರೊಂದಿಗೆ ಚೀನಾದವರು ತಮ್ಮ ವ್ಯಾಪಾರದ ಹಿಡಿತ ಕಳೆದುಕೊಂಡರು. ಪಶ್ಚಿಮ ಕರಾವಳಿಯಲ್ಲಿ ಪೋರ್ಚುಗೀಸರ ಕಾಲಘಟ್ಟದಲ್ಲಿ ವ್ಯಾಪಾರವು ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಪ್ರಧಾನವಾಗುತ್ತಾ ಹೋಯಿತು.

ರಫ್ತು

ವಿಜಯನಗರ ಅವಧಿಯಲ್ಲಿ ವಿದೇಶಿ ವ್ಯಾಪಾರವು ಮಹತ್ವವನ್ನು ಪಡೆದುಕೊಂಡಿತ್ತು. ಪರ್ಶಿಯಾ, ಅರೇಬಿಯಾ ಮತ್ತು ಆಫ್ರಿಕಾದ ಕರಾವಳಿ ಪ್ರಾಂತ್ಯ, ಯುರೋಪ್, ಚೀನಾ ಮತ್ತು ಸಿಲೋನ್ ಜೊತೆ ಕರ್ನಾಟಕ ವ್ಯಾಪಾರ ಸಂಬಂಧವನ್ನು ಹೊಂದಿತ್ತು. ಕರಾವಳಿ ಪ್ರಾಂತ್ಯದ ಮೇಲೆ ವಿಜಯನಗರದ ಅರಸರು ತಮ್ಮ ಹತೋಟಿಯನ್ನು ಹೊಂದಿದ್ದರು. ಜೊತೆಗೆ ಉತ್ತರ ಭಾರತದ ಬಂದರು ಪ್ರದೇಶದೊಂದಿಗೂ ತಮ್ಮ ವ್ಯಾಪಾರ ಸಂಪರ್ಕ ಹೊಂದಿದ್ದರು.

ವಿಜಯನಗರ ಕಾಲದಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಮೆಣಸು ರಫ್ತು ಆಗುತ್ತಿತ್ತು. ಕಾರವಾರ ಮೆಣಸು ವಿಶ್ವದಲ್ಲೇ ಪ್ರಖ್ಯಾತಿಯನ್ನು ಪಡೆದಿತ್ತು. ಬಾರ್ಬೋಸನ ಪ್ರಕಾರ ಎರಡು ತರಹದ ಮೆಣಸು ಕಂಡುಬರುತ್ತಿದ್ದವು. ೧. ಕರಿ ಮೆಣಸು ೨. ಬಿಳಿ ಮೆಣಸು. ಕರಿ ಮೆಣಸು ತುಂಬಾ ಜನಪ್ರಿಯವಾಗಿತ್ತು. ಇದನ್ನು ಮಧ್ಯ ಏಷ್ಯಾ ಮತ್ತು ಯುರೋಪ್ ರಾಷ್ಟ್ರಗಳಿಗೆ ಕಳುಹಿಸಲಾಗುತ್ತಿತ್ತು. ಬಾರ್ಬೋಸ್‌ನು ಮೆಣಸನ್ನು ಯಾವ ಅಡಿಗೆಗೆ ಹೇಗೆ ಬಳಸಲಾಗುತ್ತಿತ್ತು ಎಂಬುದನ್ನು ತನ್ನ ಕಥನದಲ್ಲಿ ತಿಳಿಸಿದ್ದಾನೆ. ಕ್ಯಾಲಿಕಟ್‌ನ ಜಾಮೋರಿನ್ ದೊರೆ ಮಲಬಾರ್ ಪ್ರಾಂತ್ಯಕ್ಕೆ ಸರಬರಾಜಾಗುವ ವಿಲಾಸಿನ್ ಮೇಲೆ ತನ್ನ ಹಿಡಿತವನ್ನು ಸ್ಥಾಪಿಸಿದ್ದನು. ವಿಜಯನಗರದ ಅರಸರು ಮೆಣಸನ್ನು ಹೆಚ್ಚು ಉಪಯೋಗಿಸುತ್ತಿದ್ದರು, ಧಾರ್ಮಿಕ ಕಾರ್ಯಗಳಿಗೆ ಸಾಂಬಾರು ಪದಾರ್ಥ ಹೆಚ್ಚು ಬಳಸಲಾಗುತ್ತಿದ್ದು, ಸಾಂಬಾರು ಪದಾರ್ಥ ಕೊರತೆ ಆಗುವುದರಿಂದ ಹೊರಗಡೆಯಿಂದ ಆಮದು ಮಾಡಿಕೊಳ್ಳಲಾಗುತಿತ್ತು ಎಂಬುದಾಗಿ ಬಾರ್ಬೋಸ್ ತಿಳಿಸಿದ್ದಾನೆ.

ಕೇರಳದಲ್ಲಿ ಉತ್ಪಾದಿಸುವ ಮೆಣಸು ಉತ್ತಮವಾಗಿತ್ತು. ವಿದೇಶಿ ಪ್ರವಾಸಿಗರು ವಿವಿಧ ರೀತಿಯ ಮೆಣಸು ಮಲಬಾರ್‌ನಲ್ಲಿತ್ತು ಎಂದಿದ್ದಾರೆ. ಬಾರ್ಬೋಸ್ ಮಲಬಾರ್ ಮೆಣಸು ಇಂಡೋನೇಷಿಯಾ ರಾಷ್ಟ್ರಕ್ಕಿಂತ ಉತ್ತಮವಾದದ್ದಾಗಿದೆ ಎಂದ್ದಿದಾನೆ. ವಿದೇಶಿ ಪ್ರವಾಸಿಗರ ದಾಖಲೆಗಳಲ್ಲಿ ಕಣ್ಣಾನೂರು ಮೆಣಸು ಹೆಚ್ಚು ಜನಪ್ರಿಯವಾಗಿತ್ತು. ಗೋವಾ, ಕಣ್ಣಾನೂರು, ಮಂಗಳೂರು, ಹೊನ್ನಾವರ, ಭಟ್ಕಳ

ಮತ್ತು ಕಾರವಾರ ಬಂದರು ಪ್ರದೇಶ ಮೆಣಸನ್ನು ವಿದೇಶಕ್ಕೆ ರಫ್ತು ಮಾಡುವಲ್ಲಿ ಹೆಸರುವಾಸಿಯಾಗಿದ್ದವು. ಈ ವ್ಯಾಪಾರದ ಇದರ ಮಧ್ಯವರ್ತಿಗಳಾಗಿ ಮುಸ್ಲಿಂ ವರ್ತಕ ಸಮುದಾಯ ಕ್ಯಾಲಿಕಟ್ ಪ್ರದೇಶದಲ್ಲಿ ತಮ್ಮ ಮಹತ್ವವನ್ನು ಪಡೆದುಕೊಂಡಿತ್ತು.

ದಾಲ್ಚಿನ್ನಿ

ಮಲಬಾರ್‌ನ ಕರಾವಳಿ ಪ್ರದೇಶವು ಈ ಪದಾರ್ಥವನ್ನು ಹೆಚ್ಚಾಗಿ ಬೆಳೆಸುವ ಪ್ರದೇಶವಾಗಿತ್ತು. ೧೫ನೇ ದಶಕದಲ್ಲಿಯೇ ವಾಸ್ಕೋಡಗಾಮ ಈ ದಾಲ್ಚಿನ್ನಿ ಪದಾರ್ಥ ಅತಿ ಹೆಚ್ಚಾಗಿ ಕ್ಯಾಲಿಕಟ್‌ಗೆ ರಫ್ತಾಗುತಿದ್ದುದನ್ನು ಗಮನಿಸಿದ್ದನು. ಜೊತೆಗೆ ಸಿಲೋನ್‌ನಲ್ಲಿ ಉತ್ಪಾದಿಸಿದ ದಾಲ್ಚಿನಿಯನ್ನು ಕೂಡ ವಿದೇಶಕ್ಕೆ ಕಳುಹಿಸಲಾಗುತ್ತಿತ್ತು. ಹಾಗಾಗಿ ದಾಲ್ಚಿನ್ನಿ ರಫ್ತಿಗೆ ಮಲಬಾರ್ ಮತ್ತು ಸಿಲೋನ್ ನಡುವೆ ಪೈಪೋಟಿ ಇತ್ತು. ಸಿಲೋನ್‌ನಲ್ಲಿ ಸಿಗುವ ದಾಲ್ಚಿನ್ನಿ ಉತ್ತಮ ಗುಣಮಟ್ಟದ್ದಾಗಿತ್ತು. ಮಲಬಾರ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ದಾಲ್ಚಿನ್ನಿಯನ್ನು ಬೆಳೆಸಲಾಗುತ್ತಿತ್ತು.

ಲವಂಗ

ಐಲ್ಯಾಂಡ್ ಮತ್ತು ಮೊಲ್ಯುಕಸ್(moluccess)ನಿಂದ ವಿಜಯನಗರಕ್ಕೆ ಲವಂಗವನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಮಲಬಾರ್ ಬಂದರು ಪ್ರದೇಶವು ಆಮದು-ರಫ್ತಿನ ಕಾರ್ಯ ಮಾಡುತ್ತಿತ್ತು. ವಿಜಯನಗರ ರಾಜ್ಯದಲ್ಲಿ ಉತ್ಪಾದಿಸಲಾದ ಹತ್ತಿ ಬಟ್ಟೆಯನ್ನು ಆ ರಾಷ್ಟ್ರಗಳಿಗೆ ಕಳುಹಿಸಿ ಇವುಗಳ ಬದಲಿಗೆ ಅಲ್ಲಿಂದ ಲವಂಗವನ್ನು ತರಿಸಿಕೊಳ್ಳಲಾಗುತ್ತಿತ್ತು.

ಶುಂಠಿ

ಮಧ್ಯಕಾಲೀನ ದಾಖಲೆಗಳಲ್ಲಿ ಮೂರು ವಿಧವಾದ ಶುಂಠಿಯನ್ನು ಉಪಯೋಗಿಸುತ್ತಿದ್ದುದರ ಮಾಹಿತಿ ಲಭ್ಯವಾಗುತ್ತದೆ. ಅವುಗಳೆಂದರೆ,

೧. ಬೆಳೆದಿ ೨. ಕೊಲೆಂಬಿನೋ ೩. ಮೆಕಿನೊ

ಇದನ್ನು ಮೆಕ್ಕಾ ಪ್ರಾಂತ್ಯದ ಸುತ್ತಲೂ ಬೆಳೆಯುತ್ತಿದ್ದರು. ಅದೇ ರೀತಿ ಭಾರತದ ಪಶ್ಚಿಮ ಕರಾವಳಿಯಲ್ಲೂ ಬೆಳೆಯುತ್ತಿದ್ದರು. ಮಲಬಾರ್‌ನಲ್ಲಿ ಬೆಳೆಯುವ ಶುಂಠಿಯನ್ನು ಪಶ್ಚಿಮ ರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿತ್ತು. ಮಲಬಾರಿನ ಬಂದರು ಪ್ರದೇಶಗಳಾದ ಕ್ಯಾಲಿಕಟ್, ಕಣ್ಣಾನೂರು ಮತ್ತು ಮಂಗಳೂರುಗಳಿಂದ ರಫ್ತಾಗುತ್ತಿತ್ತು. ಈ ಪ್ರದೇಶದ ವರ್ತಕರು ಪರ್ಶಿಯಾ ವರ್ತಕರೊಂದಿಗೆ ವ್ಯಾಪಾರ ಮಾಡುತ್ತಿದ್ದರೆಂದು ಬಾರ್ಬೋಸ್ ತಿಳಿಸಿದ್ದಾನೆ. ಏಲಕ್ಕಿ, ಜಾಯಿಕಾಯಿ ಮತ್ತು ಬಾಯಿವತೆಯನ್ನು ಅರಬ್ ವರ್ತಕರು ಕೊಂಡುಕೊಳ್ಳುತ್ತಿದ್ದರು. ಅರಬ್ ಮತ್ತು ಪೋರ್ಚುಗೀಸ್ ವರ್ತಕರು ಏಲಕ್ಕಿಯನ್ನು ಕೊಂಡು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ರಫ್ತು ಮಾಡುತ್ತಿದ್ದರು. ಮಲಬಾರ್‌ನ ವರ್ತಕರು ಇದನ್ನು ಸೂರತ್‌ಗೆ ಸಾಗಿಸಿ, ಅಲ್ಲಿಂದ ವಿದೇಶಗಳಿಗೆ ರಫ್ತು ಮಾಡುತ್ತಿದ್ದರು. ಈ ಸಾಂಬಾರ್ ಪದಾರ್ಥಗಳಿಗೆ ಯುರೋಪ್‌ನಲ್ಲಿ ಅತ್ಯಂತ ಹೆಚ್ಚಿನ ಬೇಡಿಕೆ ಇದ್ದಿದ್ದರಿಂದ ಅರಬ್ಬರು

ಯೂರೋಪ್ ಮತ್ತು ದಕ್ಷಿಣ ಭಾರತದ ಮಧ್ಯವರ್ತಿಯಾಗಿ ವ್ಯಾಪಾರ ನಡೆಸುತ್ತಿದ್ದರು. ಆದರೆ ನಂತರದಲ್ಲಿ ಪೋರ್ಚುಗೀಸರು ದಕ್ಷಿಣ ಭಾರತಕ್ಕೆ ಆಗಮಿಸಿ ಇವುಗಳನ್ನು ಕೊಂಡು ಬಹಳ ಲಾಭ ಪಡೆದರು.

ಸಕ್ಕರೆ: ದಕ್ಷಿಣದ ಕೆನರಾದ ಜಿಲ್ಲೆಗಳಲ್ಲಿ ಉತ್ಪಾದಿಸಲಾಗುತ್ತಿದ್ದ ಸಕ್ಕರೆ ಭಾರತದ ವಿವಿಧ ರಾಜ್ಯಗಳ ಜೊತೆಗೆ ಸಿಲೋನ್, ಅರೇಬಿಯಾ ಮತ್ತು ಪರ್ಷಿಯಾ ದೇಶಗಳಿಗೆ ರಫ್ತಾಗುತ್ತಿತ್ತು.[೧೦೮]

ತೆಂಗು: ತೆಂಗನ್ನು ಕರಾವಳಿ ಪ್ರಾಂತ್ಯಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿದ್ದರು. ಮಂಗಳೂರು, ಬಸ್ರೂರು, ಭಟ್ಕಳ ಮತ್ತು ಕ್ಯಾಲಿಕಟ್‌ನಿಂದ ರಫ್ತು ಮಾಡಲಾಗುತ್ತಿತ್ತು. ಅರಬ್ಬರು ಭಾರತದ ತೆಂಗಿಗೆ ಪರಿಚಿತರಾಗಿದ್ದರು. ತೆಂಗು ಅರಬ್ ದೇಶಗಳಿಗೆ ರಫ್ತಾಗುತ್ತಿತ್ತು.[೧೦೯]

ಲೋಹಗಳು: ವಿಜಯನಗರದಿಂದ ಆರ್ಮುಜ್‌ಗೆ ಕಬ್ಬಿಣ ರವಾನೆಯಾಗುತ್ತಿತ್ತು. ಭಟ್ಕಳದಿಂದ ಇದನ್ನು ಸಾಗಿಸುತ್ತಿದ್ದರು. ಅತ್ಯಮೂಲ್ಯವಾದ ಹರಳುಗಳಿಗೆ ಅರೇಬಿಯಾದಲ್ಲಿ ಅಧಿಕ ಬೇಡಿಕೆ ಇತ್ತು.

ವಿದೇಶಕ್ಕೆ ಕಳುಹಿಸುತ್ತಿದ್ದ ಹರಳುಗಳೆಂದರೆ: ೧. ಮಂದಗೆಂಪಿನ ೨. ಕಂಟಸ್ಯೆ ೩. ಪಾರದರ್ಶಕ, ಪದ್ಮರಾಗ, ೪. ಮುತ್ತುಗಳು, ೫. ಮಾಣಿಕ್ಯಗಳು, ೬. ನೀಲಿ, ೭. ಜಿಗ್ಯಾನಿಜಿಸ್, ೮. ಅನುಲ್ಚೆಸ್ಟ್, ೯. ತುಪ್ಯಾಜಿಸ್, ೧೦. ಕ್ರಿಸೊಲೈಟ್ಸ್, ೧೧. ಹೈಸೆನ್ಸ್ ಹಾಗೂ ೧೨. ಸಿದ್ಧ ವಸ್ತುಗಳು

ಹತ್ತಿ ಬಟ್ಟೆಗಳು: ಸ್ಥಳೀಯವಾಗಿ ತಯಾರಾದ ಹತ್ತಿ ಬಟ್ಟೆಗಳು ವಿವಿಧ ರಾಷ್ಟ್ರಗಳಿಗೆ ರಫ್ತಾಗುತ್ತಿದ್ದವು. ಅಲ್ಲಿ ಪಿಂಗಾಣಿ ವಸ್ತು ಹಾಗೂ ಹತ್ತಿಬಟ್ಟೆ ಪ್ರಮುಖವಾಗಿ ಉತ್ಪಾದಿಸಲಾಗುತ್ತಿತ್ತು. ಅರಬ್ ಮತ್ತು ಮುಸ್ಲಿಂ ವರ್ತಕರು ಉತ್ಪಾದಿಸಿದ ಈ ವಸ್ತುಗಳ ಮೇಲೆ ವ್ಯಾಪಾರ ಏಕಸ್ವಾಮ್ಯತೆಯನ್ನು ಸಾಧಿಸಲಾಗಿತ್ತು. ಆದರೆ ಪೋರ್ಚುಗೀಸ್‌ರು ಕರಾವಳಿ ಪ್ರಾಂತ್ಯಕ್ಕೆ ಪ್ರವೇಶಿಸಿದ ನಂತರ ಪಶ್ಚಿಮ ಕರಾವಳಿ ಪ್ರದೇಶದ ವ್ಯಾಪಾರ ಹಿಡಿತ ಅವರ ಕೈಯಿಂದ ತಪ್ಪಿತು. ಪೋರ್ಚುಗೀಸರು ಸಿದ್ಧವಾದ ವಸ್ತು/ಬಟ್ಟೆಗಳನ್ನು ಉತ್ತರ ಕೆನರಾದ ಜಿಲ್ಲೆಗಳಾದ ಅಂಕೋಲ ಮತ್ತು ಹೊನ್ನಾವರದಿಂದ ಆಮದು ಮಾಡಿಕೊಳ್ಳಲಾರಂಭಿಸಿದರು. ಈ ಪ್ರಾಂತ್ಯಗಳು ದೇಶೀಯ ಹಾಗೂ ವಿದೇಶಿ ವರ್ತಕರು ಸಭೆ ಸೇರಲು ಉತ್ತಮ ಸ್ಥಳವಾಗಿದ್ದವು. ದೇಶೀಯ ವರ್ತಕರು ವಿಜಯನಗರ ರಾಜ್ಯದ ವಿವಿಧ ಭಾಗಗಳಿಂದ ಹತ್ತಿ ಬಟ್ಟೆಗಳನ್ನು ಕೊಂಡುಕೊಂಡು ವಿದೇಶಗಳಿಗೆ ಅದರಲ್ಲೂ ಮುಖ್ಯವಾಗಿ ಅರಬ್ ರಾಷ್ಟ್ರಗಳಿಗೆ ಮಾರುತ್ತಿದ್ದರು.

ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ಆರ್ಥಿಕತೆಯು ವಿವಿಧ ಸ್ವರೂಪದ ಸ್ಥಿತ್ಯಂತರಗಳಿಗೆ ಒಳಗಾಗುತ್ತಲೇ ಇತ್ತು. ಇದಕ್ಕೆ ಬಹಳ ಮುಖ್ಯವಾದ ಕಾರಣವೆಂದರೆ ಅರೇಬಿಯನ್ ಮತ್ತು ಪರ್ಷಿಯನ್ ವ್ಯಾಪಾರಸ್ಥರ ಹಾಗೂ ಪೋರ್ಚುಗೀಸ್ ವ್ಯಾಪಾರಸ್ಥರ ನಡುವೆ ವ್ಯಾಪಾರದ ಮೇಲಿನ ಏಕಸ್ವಾಮ್ಯಕ್ಕಾಗಿ ನಿರಂತರವಾಗಿ ನಡೆಯುತ್ತಿದ್ದ ವ್ಯಾಪಾರಿ ಪೈಪೋಟಿಗಳು. ಸ್ಥಳೀಯವಾಗಿಯೂ ಹಲವಾರು ಹೊಸ ವ್ಯಾಪಾರಿ ಸಮುದಾಯಗಳು ಹುಟ್ಟಿಕೊಂಡು ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವ

ಪ್ರಯತ್ನವನ್ನು ನಡೆಸುತ್ತಿದ್ದವು. ವಿಜಯನಗರ ಪೂರ್ವದ ಪ್ರಸಿದ್ಧ ವರ್ತಕ ಸಂಘಗಳು ಈ ಅವಧಿಯಲ್ಲಿ ಮಂಕಾಗಿ ಕಾಣಿಸಿಕೊಳ್ಳಲಾರಂಭಿಸಿದವು. ವಿಜಯನಗರದಲ್ಲಿ ಕಾಣಿಸಿಕೊಂಡ ಕೃಷಿಯೇತರ ಚಟುವಟಿಕೆಗಳ ಹೆಚ್ಚಳ ಹಾಗೂ ವ್ಯಾಪಾರಿ ಬಡವಾಳದ ಹುಟ್ಟು ಹೊಸ ಬಗೆಯ ಆರ್ಥಿಕ ವಾತಾವರಣವನ್ನು ಹುಟ್ಟುಹಾಕಿತು. ಈ ಹಿನ್ನೆಲೆಯಲ್ಲಿಯೇ ಭಾರತದಾದ್ಯಂತ ಗುರುತಿಸಿಕೊಂಡಿದ್ದ ಮುಸ್ಲಿಂ ವರ್ತಕರು ಪೋರ್ಚುಗೀಸರ ಆಗಮನದ ಬಳಿಕ ತಮ್ಮ ಹಿಂದಿನ ವರ್ಚಸ್ಸನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಬೆಳವಣಿಗೆಯನ್ನು ವಿಜಯನಗರದ ಆಳ್ವಿಕೆಯ ಅವಧಿಯಲ್ಲಿ ವ್ಯಾಪಾರ ಕ್ಷೇತ್ರದಲ್ಲಾದ ದೊಡ್ಡ ತಿರುವು ಎಂಬುದಾಗಿಯೇ ಪರಿಗಣಿಸಲಾಗಿದೆ. ವಿಜಯನಗರ ಪೂರ್ವ ಹಾಗೂ ವಿಜಯನಗರದ ಆರಂಭಿಕ ಹಂತದಲ್ಲಿ ವ್ಯಾಪಾರದಲ್ಲಿ ಪ್ರಧಾನವಾಗಿ ಗುರುತಿಸಿಕೊಂಡಿದ್ದ ಮುಸ್ಲಿಂ ವರ್ತಕ ಸಮುದಾಯಗಳು ನಂತರದ ಅವಧಿಯಲ್ಲಿ ತಮ್ಮ ಹಿಂದಿನ ಪ್ರಾಧಾನ್ಯತೆಯನ್ನು ಕಳೆದುಕೊಂಡು ಕೆಲವು ಪ್ರದೇಶಗಳಿಗಷ್ಟೇ ಸೀಮಿತಗೊಂಡಂತೆ ವ್ಯಾಪಾರದಲ್ಲಿ ಗುರುತಿಸಿಕೊಳ್ಳಬೇಕಾಯಿತು. ಅದೇ ರೀತಿ ಇತರೆ ವೃತ್ತಿಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಗಿ ಬಂತು.

ಕೊನೆಟಿಪ್ಪಣಿಗಳು

೧. ಚೆನ್ನಸ್ವಾಮಿ ಸೋಸಲೆ. ಎನ್. ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು. ೧೧೦.

೨. ಶಿವಣ್ಣ ಕೆ.ಎಸ್., ಅಗ್ರೇರಿಯನ್ ಸಿಸ್ಟಮ್ ಆಫ್ ಕರ್ನಾಟಕ ಮೈಸೂರು, ೧೯೮೩, ಪು. ೯೬.

೩. ನಾಗರಾಜ. ಬಿ.ಎಸ್., ಅರ್ಬನ್ ಸೆಂಟರ್ಸ್ ಆ್ಯಂಡ್ ಅರ್ಬನಾಜೈಷನ್ ಅಂಡರ್ ದಿ ವಿಜಯನಗರ ಎಂಪೈರ್, ಅನ್‌ಪಬ್ಲಿಷ್ಡ್ ಥೀಸಿಸ್, ಯೂನಿವರ್ಸಿಟಿ ಆಫ್ ಮೈಸೂರು, ಮೈಸೂರು, ೧೯೮೫, ಪು. ೫೩.

೪. ಎಪಿಗ್ರಾಫಿಕಾ ಕರ್ನಾಟಕ–೯, ಎಚ್.ಕೆ. ೧೦೫, ಪು. ೨೨೨.

೫. ಚೆನ್ನಸ್ವಾಮಿ ಸೋಸಲೆ. ಎನ್. ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು. ೧೧೨.

೬. ಅದೇ, ಪು. ೧೧೨.

೭. ಎಪಿಗ್ರಾಫಿಯಾ ಆಫ್ ಕರ್ನಾಟಿಕ ಸಂ. ೧೨, ಎಂ.ಎಲ್. ೨೦.

೮. ಅದೇ, ಪು. ಎಂ.ಎಲ್. ೨೦.

೯. ಆ್ಯನುವಲ್ ರಿಪೋರ್ಟ್ ಆಫ್ ದಿ ಮೈಸೂರ್ ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್, ೧೯೨೩, ಪು. ೧೨೨.

೧೦. ಚಿನ್ನಸ್ವಾಮಿ ಸೋಸಲೆ. ಎನ್., ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪, ಪು. ೧೧೩.

೧೧. ಷೇಕ್ ಅಲಿ ಬಿ.(ಪ್ರ.ಸಂ.), ಕರ್ನಾಟಕ ಚರಿತ್ರೆ ಸಂ. ೩, ಕವಿವಿ ಹಂಪಿ, ೧೯೯೭, ಪು. ೨೩೩–೩೪.

೧೨. ಅದೇ, ಪು. ೨೩೪.

೧೩. ಅದೇ, ಪು. ೨೩೫.

೧೪. ಮಹಮದ್ ಕೋಯ ಎಸ್.ಬಿ, ದಿ ಅರಬ್ ಟ್ರೇಡರ್ಸ್ ಸೆಟ್ಲ್‌ಮೆಂಟ್ ಇನ್ ಮಲ್ನಾಡ್: ದೇರ್ ಸಿಗ್ನಿಫಿಕೆನ್ಸ್, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ವಾಲ್ಯೂಮ್–೨೬, ೨೦೦೬.

೧೫. ರಾಜ ಮಹಮದ್ ಜೆ., ಕೋರಮಂಡಲ್ ಮುಸ್ಲಿಮ್ಸ್ ಮ್ಯಾರಿಟೈಮ್ ಟ್ರೇಡ್ ವಿಥ್ ಕೆಳದಿ ಆ್ಯಂಡ್ ಪೆನಾಗ್, ಪು.೬೧೧.

೧೬. ರಾಜ ಮಹಮದ್ ಜೆ., ಪೂರ್ವೋಕ್ತ, ಪು.೬೧೩.

೧೭. ಹೈದರಾಲಿ ಎ., ಮಿಡಿವೆಲ್ ಟ್ರೇಡ್ ಮಾರ್ಟ್ ಆಫ್ ನಾರ್ತ್ ಮಲಬಾರಿ ಮತಾಯಿ, ಪು. ೪೮೫.

೧೮. ಹೈದರಾಲಿ, ಪೂರ್ವೋಕ್ತ, ಪುಟ.ಸಂ. ೪೮೬.

೧೯. ಗ್ರೀಷ್ಮಲತಾ ಎ.ಪಿ., 'ಟ್ರೇಡ್ ಆ್ಯಂಡ್ ಮಾರ್ಕೆಟ್ ಇನ್ ಕೇರಳ ಆಸ್ ರೆಫ್ಲಿಕ್ಟೆಡ್ ಇನ್ ಮಲಯಾಳಂ ಲಿಟರೇಚರ್', ಕ್ಯಾಲಿಕೆಟ್ ವಿಶ್ವವಿದ್ಯಾಲಯ, ೧೯೯೦–೯೧.

೨೦. ದೀಕ್ಷಿತ್ ಜಿ.ಎಸ್., ಲೋಕಲ್ ಸೆಲ್ಫ್ ಗೌರ್ನಮೆಂಟ್ ಇನ್ ಮೆಡಿವಲ್ ಕರ್ನಾಟಕ, ಧಾರವಾಡ, ೧೯೬೮, ಪು. ೫೬.

೨೧. ಬಿ.ಆರ್. ಹಿರೇಮಠ, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ, ೧೯೬೮, ಪು. ೫೬.

೨೨. ಎಸ್. ಗುರುರಾಜಾಚಾರ್, ಸಮ್ ಆ್ಯಸ್ಪೆಕ್ಟ್ಸ್ ಆ್ಯಂಡ್ ಸೋಶಿಯಲ್ ಲೈಫ್ ಇನ್ ಕರ್ನಾಟಕ, ಮೈಸೂರು, ೧೯೭೪, ಪು. ೧೦೫.

೨೩. ಕುಪ್ಪಸ್ವಾಮಿ ಜಿ.ಆರ್., 'ಎ ಸ್ಟಡಿ ಆಫ್ ಎಫಿಗ್ರಫ್ಸ್ ಇನ್ ರಿಲೇಷನ್ ಟು ಕರ್ನಾಟಕ–ಕೇರಳ ರಿಲೇಷನ್ಸ್, ೯೮.

೨೪. ವಸಂತ ಮಾಧವ ಕೆ.ಜಿ., 'ಎ ಸ್ಟಡಿ ಆಫ್ ಎಫಿಗ್ರಾಫ್ಸ್ ಇನ್ ರಿಲೇಷನ್ ಟು ಕರ್ನಾಟಕ–ಕೇರಳ ರಿಲೇಷನ್ಸ್, ಕಲ್ಕತ್ತ ೧೯೯೭, ೯೪೧–೪೨.

೨೫. ಗ್ರೀಷ್ಮಲತಾ, ಪೂರ್ವೋಕ್ತ, ೪೫–೪೬.

೨೬. ಜಾನ್ ಡೌಸನ್(ಸಂ), ದಿ ಹಿಸ್ಟರಿ ಆಫ್ ಇಂಡಿಯಾ ಆಸ್ ಟೋಲ್ಡ್ ಬೈ ಇಟ್ಸ್ ಹಿಸ್ಟರಿಯನ್ಸ್ ದಿ ಮಹಮ್ಮದನ್ ಪೀರಿಯಡ್, ಸಂ.೩, ಪು. ೩೩-೩೪.

೨೭. ನಾಗೇಗೌಡ ಹೆಚ್.ಎಲ್., ಪೂರ್ವೋಕ್ತ, ಪು. ೯೦-೯೧.

೨೮. ಅದೇ, ಪು. ೯೧.

೨೯. ನಾಗರಾಜ್, ಶ್ರೀಕೃಷ್ಣದೇವರಾಯ ಮತ್ತು ಪೋರ್ಚುಗೀಸ್ ಗೌವರ್ನರ್ ಅಲ್ಬುಕರ್ಕರ ನಡುವಣ ರಾಜತಾಂತ್ರಿಕ ಸಂಬಂಧಗಳು; ವಿಜಯನಗರ ಅಧ್ಯಯನ, ಸಂ. ೧೫, ೨೦೧೦, ಪು. ೧೧೮-೨೩., ೨.

೩೦. ನಾಗರಾಜಪ್ಪ ಎಸ್., ಹಂಪಿ ಪರಿಸರದ ಲೌಕಿಕ ಶಿಲ್ಪಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬, ಪು. ೮೫.

೩೧. ರಾಬರ್ಟ್ ಸಿವೆಲ್, ಎ. ಫರಗಾಟನ್ ಎಂಪೈರ್, ನವದೆಹಲಿ, ೧೯೭೦, ಪು. ೧೨೫.

೩೨. ಅದೇ, ಪು.

೩೩. ಎಫಿಗ್ರಾಫಿಯಾ ಕರ್ನಾಟಿಕ, ಸಂ.೫, ಬೇಲೂರು ೭೫.

೩೪. ಅದೇ, ಪು.

೩೫. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ೮-೯, ೫೬೪.

೩೬. ಅದೇ, ೪, ೨೬೨.

೩೭. ಷೇಕ್ ಅಲಿ(ಪ್ರ.ಸಂ.), ಶಿವಣ್ಣ(ಸಂ.) ಕರ್ನಾಟಕ ಚರಿತ್ರೆ, ಸಂ.೩ ೨೨೯.

೩೮. ಅದೇ, ೨೨೮-೨೩೨.

೩೯. ಅದೇ, ೨೨೮-೨೩೨.

೪೦. ಎಫಿಗ್ರಾಫಿಯಾ ಕರ್ನಾಟಿಕ, ೮ ಡಿ.ಎಲ್. ೪೨.

೪೧. ಎಫಿಗ್ರಾಫಿಯಾ ಕರ್ನಾಟಿಕ, ೫, ಬೇಲೂರು, ೭೫.

೪೨. ಸಿವೆಲ್, ಪೂರ್ವೋಕ್ತ, ಪು. ೮೬.

೪೩. ಅದೇ, ಪು. ೧೮೨-೧೯೭.

೪೪. ಹೆರಾಸ್ ಎಚ್., ದಿ ಅರವೀಡು ಡೈನಾಸ್ಟಿ, ಪು. ೬೨-೬೩.

೪೫. ಷೇಕ್ ಅಲಿ, ಪೂರ್ವೋಕ್ತ, ಪು. ೨೨೯.

೪೬. ಅದೇ, ಪು. ೨೨೯-೨೩೦.

೪೭. ನಂಜುಂಡಪ್ಪ, ಪೂರ್ವೋಕ್ತ, ಪು.ಸಂ. ೧೫೪-೧೫೬.

೪೮. ಸಿವೆಲ್, ಪೂರ್ವೋಕ್ತ, ಪು. ೨೨೯.

೪೯. ಷೇಕ್ ಅಲಿ, ಪೂರ್ವೋಕ್ತ, ಪು. ೨೨೯-೨೩೦.

೫೦. ಅದೇ, ೨೨೯-೩೦.

೫೧. ಅದೇ, ೨೨೯-೩೦.

೫೨. ಅದೇ, ೨೩೦.

೫೩. ಅದೇ, ೨೩೦-೩೧.

೫೪. ಅದೇ, ೨೩೦-೩೧.

೫೫. ಅದೇ, ೨೩೦.

೫೬. ಅದೇ, ೨೩೧.

೫೭. ಅದೇ, ೨೩೧.

೫೮. ಷೇಕ್ ಅಲಿ ಬಿ.(ಪ್ರ.ಸಂ.), ಕರ್ನಾಟಕ ಚರಿತ್ರೆ ಸಂಪುಟ ೩, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೭, ಪು. ೨೩೧.

೫೯. ಅದೇ, ೨೩೨.

೬೦. ಅದೇ, ೨೩೩.

೬೧. ಅದೇ, ೨೩೩-೩೪.

೬೨. ಅದೇ, ೨೩೩-೩೪.

೬೩. ಅದೇ, ೨೩೩-೩೪.

೬೪. ಅದೇ, ೨೩೩-೩೪

೬೫. ಅದೇ, ೨೩೩-೩೪.

೬೬. ಅದೇ, ೨೩೩-೩೪.

೬೭. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ.(ಸಂ), ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಮತ್ತು ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ೨೦೧೬, ಪು. ೩೩.

೬೮. ಚಂದ್ರಬಾಬು ಬಿ.ಎಸ್.(ಸಂ), ಕುನಶೇಖರ್, ರೋಲ್ ಆಫ್ ಮರ್ಚೆಂಟ್ ಗಿಲ್ಡ್ಸ್ ಇನ್ ತಮಿಳುನಾಡು, ಸೌತ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಬೆಂಗಳೂರು, ೨೦೦೬, ಪು. ೩೧೦.

೬೯. ಅಪ್ಪಾದೊರೈ, ಎಕನಾಮಿಕ್ ಕಂಡೀಷನ್ಸ್ ಇನ್ ಸದರ್ನ್ ಇಂಡಿಯಾ, ಸಂ.–೧, ೧೯೩೬, ಪು. ೩೮೩.

೭೦. ಆಲ್ತೇಕರ್ ಎ.ಎಸ್., ರಾಷ್ಟ್ರಕೂಟಸ್ ಆ್ಯಂಡ್ ದೇರ್ ಟೈಮ್ಸ್, ೧೯೩೪, ಪು. ೩೭೧.

೭೧. ಅದೇ, ಅದೇ ಪು. ೩೬೯.

೭೨. ರಾಮಸ್ವಾಮಿ ಟಿ., ಮರ್ಚೆಂಟ್ ಕ್ಲಾಸ್ ಸೌತ್ ಇಂಡಿಯಾ–೧೩೩೬–೧೬೬೫, ಮಧುರೈ, ೧೯೯೭, ಪು. ೩೯೩.

೭೩. ಸುಬ್ಬರಾಯಲು ವೈ., ಟ್ರೇಡ್ ಗಿಲ್ಡ್ಸ್ ಆಫ್ ಸೌತ್ ಇಂಡಿಯಾ, ಸ್ಟಡೀಸ್ ಇನ್ ಪೀಡಲ್ಸ್ ಹಿಸ್ಟರಿ, ಸಂ–೩, ೨೦೧೫, ಪು. ೩೦.

೭೪. ಅದೇ. ಪು. ೬೨.

೭೫. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ(ಸಂ)., ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ೨೦೧೬, ಪು.೫೮.

೭೬. ಕುನಶೇಖರ್ ಎಸ್., ರೋಲ್ ಆಫ್ ಮರ್ಚೆಂಟ್ಸ್ ಗಿಲ್ಡ್ಸ್ ಇನ್ ತಮಿಳುನಾಡು, ಪು. ೩೧೧–೩೧೨.

೭೭. ಅದೇ, ಪು. ೩೧೧–೧೨.

೭೮. ಅದೇ, ಪು. ೧೨.

೭೯. ೮೪. ಎಪಿಗ್ರಾಫಿಯಾ ಇಂಡಿಕಾ XXXV, ಪು.೨೯೨.

೮೦. ಜ್ಞಾನಪ್ರಕಾಶ್ ಬಿ.ಕೆ., ಪ್ರಾಚೀನ ಕರ್ನಾಟಕದಲ್ಲಿ ವ್ಯಾಪಾರ ಮತ್ತು ವಾಣಿಜ್ಯ(ಹೊಯ್ಸಳ ಕಾಲದವರೆಗೆ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೨೦೦೫, ಪು.ಸಂ. ೧೯೭.

೮೧. ಕುನಶೇಖರ್ ಎಸ್., ಪೂರ್ವೋಕ್ತ, ಪು.ಸಂ. ೩೧೦–೩೧೨.

೮೨. ಚಂಪಕ ಲಕ್ಷ್ಮೀ ಆರ್., ಟ್ರೆಡ್ ಐಡಿಯಾಲಜಿ ಆ್ಯಂಡ್ ಅರ್ಬನೈಜೇಷನ್ ಸೌತ್ ಇಂಡಿಯಾ ೩೦೦ ಬಿ.ಸಿ. ಟು ೧೩೦೦ ಎ.ಡಿ., ಮದ್ರಾಸ್, ೧೯೯೬, ಪು. ೩೧೩.

೮೩. ಅದೇ, ಪು. ೩೧೦–೩೧೨.

೮೪. ಸೌತ್ ಇಂಡಿಯಾ ಇನ್‌ಸ್ಕ್ರಿಪ್ಷನ್ ಸಂ. XXVI, ನಂ. ೧೦೩.

೮೫. ಎಫಿಗ್ರಾಫಿಯ ಇಂಡಿಕ ಸಂ.೩, ಪು. ೬೮.

೮೬. ಸೌ.ಇ.ಇ. IX-೧೧, ಬಸರೂರು, ೪೫, ಪು. ೧೧೨-೧೧೩.

೮೭. ಸೌ.ಇ.ಇ. VII ಶಾಸನ ಸಂ. ೩೪೯.

೮೮. ಜ್ಞಾನಪ್ರಕಾಶ್ ಬಿ.ಕೆ., ಪೂರ್ವೋಕ್ತ, ಪು. ೧೯೮.

೮೯. ಬಾರಿ ಎಸ್.ಎ., ದಿ ಎಕನಾಮಿಕ್ ಆಫ್ ಟ್ಯಾಕ್ಸೇಶೆನ್ ಇನ್ ಎ ಮೆಡಿವೆಲ್ ಸ್ಟೇಟ್ ಎಂ.ಎಸ್. ಗ್ರಾಫಿಕ್ಸ್, ಬೆಂಗಳೂರು.

೯೦. ಸೌ.ಇ.ಇ. IX-II, ಶಾ.ಸ. ೪೫.

೯೧. ಎಪಿಗ್ರಾಫಿಯ ಇಂಡಿಕ, I ಪು. ೧೧೨-೧೧೩.

೯೨. ಹಿರೇಮಠ ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ, ೧೯೮೬, ಪು. ೧೦೨-೦೩.

೯೩. ಮೀರಾ ಅಬ್ರಾಹಾಂ, ಟು ಮೆಡೀವಲ್ ಮರ್ಚೆಂಟ್ಸ್ ಗಿಲ್ಡ್ಸ್ ಆಫ್ ಸೌತ್ ಇಂಡಿಯಾ, ೧೯೮೮, ಪು. ೨೫.

೯೪. ಚಂದ್ರಶೇಖರ್ ಎಸ್., ಸುರೇಂದ್ರರಾವ್ ಬಿ., 'ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು. ೬೦.

೯೫. ಅದೇ. ಪು. ೬೦.

೯೬. ಅದೇ, ಪು. ೬೦.

೯೭. ಅದೇ, ಪು. ೬.

೯೮. ನಂಜುಂಡಪ್ಪ ಕೆ.ಎಸ್., ಇಂಡಸ್ಟ್ರೀಸ್ ಆ್ಯಂಡ್ ಕಾಮರ್ಸ್ ಇನ್ ಕರ್ನಾಟಕ- ಡ್ಯೂರಿಂಗ್ ದಿ ವಿಜಯನಗರ ಪೀರಿಯಡ್, ೧೩೩೬-೧೫೬೫, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೨. ಪು. ೧೨.

೯೯. ಅದೇ, ಪು. ೧೬.

೧೦೦. ಅದೇ, ಪು. ೧೬.

೧೦೧. ಅದೇ, ಪು. ೧೭.

೧೦೨. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು. ೪೫.

೧೦೩. ನಂಜುಂಡಪ್ಪ, ಪು. ೪೫.

೧೦೪. ಅದೇ, ಪು. ೬೦-೬೪.

೧೦೫. ನ್ಯೂನಿಜ್, ಎ ಫಾರ್ಗನ್ ಎಂಪೈರ್, ಪು. ೩೮೮-೮೯.

೧೦೬. ಅದೇ, ಪು. ೧೩.

೧೦೭. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು. ೧೫೨.

೧೦೮. ಅದೇ, ಪು. ೧೫೬-೧೫೭.

೧೦೯. ಅದೇ, ಪು. ೧೫೮.

ಅಧ್ಯಾಯ ಏಳು

ವಿಜಯನಗರ ರಾಜ್ಯಾಡಳಿತದಲ್ಲಿ ಮುಸ್ಲಿಮರು

ಅಧ್ಯಾಯ ಏಳು

ವಿಜಯನಗರ ರಾಜ್ಯಾಡಳಿತದಲ್ಲಿ ಮುಸ್ಲಿಮರು

ವಿಜಯನಗರದ ರಾಜ್ಯಾಡಳಿತವು ಅಂದಿನ ಸಂದರ್ಭದ ಅವಶ್ಯಕತೆಗಳಿಗೆ ಅನುಗುಣವಾಗಿ ವಿನ್ಯಾಸಗೊಂಡಿತ್ತು. ಬದಲಾಗುತ್ತಿದ್ದ ರಾಜಕಾರಣ ಹಾಗೂ ಆರ್ಥಿಕತೆ ರಾಜ್ಯಾಡಳಿತದಲ್ಲೂ ಕೆಲವೊಂದು ಬದಲಾವಣೆಗಳನ್ನು ನಿರೀಕ್ಷಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ವಿಜಯನಗರ ಪ್ರಭುತ್ವವು ಆಡಳಿತದ ಕ್ಷೇತ್ರದಲ್ಲಿ ಹಲವು ಸುಧಾರಣಾಕ್ರಮಗಳನ್ನು ಕೈಗೊಂಡಿತು. ವಿಜಯನಗರ ಸಾಮ್ರಾಜ್ಯವು ಇಡೀ ದಕ್ಷಿಣ ಭಾರತದಾದ್ಯಂತ ತನ್ನ ವ್ಯಾಪ್ತಿಯನ್ನು ಒಳಗೊಂಡಿತ್ತು. ಈ ಸಾಮ್ರಾಜ್ಯದಲ್ಲಿನ ಅರಸರು ತಮ್ಮ ಆಡಳಿತವನ್ನು ನಿರ್ವಹಿಸಲು ಸಾಮ್ರಾಜ್ಯವನ್ನು ವಿಕೇಂದ್ರೀಕರಣ ಆಡಳಿತ ಪದ್ಧತಿಗೆ ಒಳಪಡಿಸಿದ್ದರು. ಇವರ ಆಡಳಿತ ವ್ಯವಸ್ಥೆಯು ಕೇಂದ್ರ, ನಾಡು ಹಾಗೂ ಪ್ರಾಂತ್ಯ ಮಟ್ಟದಲ್ಲಿ ವಿಭಜಿಸಲ್ಪಟ್ಟಿತ್ತು. ಇವರ ಆಡಳಿತದ ವಿಭಜನೆಗಳು ಕೇಂದ್ರದ ಆಡಳಿತ ವ್ಯವಸ್ಥೆಗೆ ಕೊಂಡಿಯಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಕೇಂದ್ರಾಡಳಿತದಲ್ಲಿ ಸಾರ್ವಭೌಮರಾದ ಚಕ್ರವರ್ತಿಗಳು ಪ್ರಮುಖ ಸ್ಥಾನದಲ್ಲಿ ಕಂಡುಬಂದರೆ, ಅವರ ಅಧೀನದಲ್ಲಿ ಮುಸ್ಲಿಮರು ತಮ್ಮ ಸ್ಥಾನವನ್ನು ಪಡೆದುಕೊಂಡಿದ್ದರು. ನಾಡಿನ ಅಧಿಕಾರಿಗಳ ಅಧೀನದಲ್ಲಿ ಪ್ರಾಂತ್ಯಾಡಳಿತವು ಕಂಡುಬರುತ್ತಿತ್ತು. ಇದರ ನಿರ್ವಹಣೆಯನ್ನು ವರ್ತಕ ಶ್ರೇಣಿಗಳು ಹಾಗೂ ಅಗ್ರಹಾರಗಳು ನಡೆಸುತ್ತಿದ್ದವು. ಹೀಗೆ ಕೇಂದ್ರದಿಂದ ನೇಮಕಗೊಂಡ ಇವರು ಸ್ಥಳೀಯ ಆಡಳಿತದಲ್ಲಿ ಸ್ವತಂತ್ರ ಅಧಿಕಾರವನ್ನು ಪಡೆದುಕೊಂಡಿದ್ದರು. ಕೇಂದ್ರದ ಅಧೀನರಾಗಿದ್ದರೂ ಸಹ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ ಹಲವು ಸ್ವತಂತ್ರ ಅಧಿಕಾರವನ್ನು ಪಡೆದುಕೊಂಡಿದ್ದ ಇವರು ಸ್ಥಳೀಯ ಅರಸರಾಗಿ ಗುರುತಿಸಿಕೊಂಡಿದ್ದರು. ಹೀಗೆ ಪ್ರಾಂತೀಯ ಮಟ್ಟದ ರಾಜಕೀಯ, ಆರ್ಥಿಕ, ಸಾಮಾಜಿಕ ವ್ಯವಸ್ಥೆಗಳು ಕೇಂದ್ರದಿಂದ ಭಿನ್ನ ಸ್ವರೂಪದಲ್ಲಿ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದವು. ಈ ಸ್ಥಳೀಯ ಆಡಳಿತ ವ್ಯವಸ್ಥೆಯು ಕೇಂದ್ರಕ್ಕೆ ಜೋಡಿ ಆಡಳಿತ ವ್ಯವಸ್ಥೆಯಾಗಿ ತನ್ನ ಅಸ್ತಿತ್ವವನ್ನು ಪಡೆದುಕೊಂಡಿತ್ತು.[೧]

ವಿಜಯನಗರ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಡಿಯಲ್ಲಿ ಮುಸ್ಲಿಂ ಸಮುದಾಯಗಳ ಪಾತ್ರವನ್ನು ಎರಡು ರೀತಿಯಾಗಿ ಗುರುತಿಸಬಹುದು. ಕೇಂದ್ರದಲ್ಲಿನ ರಾಜಪ್ರಭುತ್ವದ ಮಟ್ಟದಲ್ಲಿ ಹಾಗೂ ಸ್ಥಳೀಯ ಅರಸರ ಆಡಳಿತದಲ್ಲಿ ಮುಸ್ಲಿಂ ಸಮುದಾಯಗಳು ಹೇಗೆ ವಿಭಿನ್ನವಾಗಿ ಕಾರ್ಯ ನಿರ್ವಹಿಸಿದವು ಎನ್ನುವ ಅಂಶಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ವಿಜಯನಗರ

ಸಾಮ್ರಾಜ್ಯ ವ್ಯಾಪ್ತಿಯಲ್ಲಿ ಮುಸ್ಲಿಂ ಸಮುದಾಯಗಳು ಆಡಳಿತ, ವ್ಯಾಪಾರ, ಸೈನಿಕ ವರ್ಗಗಳಲ್ಲಿ ಕೇಂದ್ರ ಮತ್ತು ಸ್ಥಳೀಯ ಅರಸರ ಆಳ್ವಿಕೆಯಲ್ಲಿ ಕಂಡುಬರುತ್ತಿದ್ದರು. ಇವರಲ್ಲಿ ವಿಜಯನಗರದ ರಾಜಧಾನಿಯಲ್ಲಿ ದಖ್ಖನಿ ಮುಸ್ಲಿಂ ಸಮುದಾಯಗಳು ಪ್ರಭುತ್ವದ ರಾಜ್ಯಾಡಳಿತದಲ್ಲಿ ಅಧಿಕಾರಿಗಳಾಗಿ ತಮ್ಮ ಪಾತ್ರವನ್ನು ನಿರ್ವಹಿಸಿದರು. ಹಾಗೆಯೇ ವ್ಯಾಪಾರದ ವರ್ಗಗಳು ಕರಾವಳಿ ಭಾಗದ ಆಡಳಿತದಲ್ಲಿ ನಿರ್ವಹಿಸಿದ ಪಾತ್ರವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ವಿಜಯನಗರದ ಆಡಳಿತಕ್ಕೆ ಮುಸ್ಲಿಂ ಸಮುದಾಯದ ಕೊಡುಗೆಗಳೇನು ಎಂಬುದನ್ನು ಲಭ್ಯವಾದ ಆಕರಗಳಿಂದ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಮತ್ತು ರಾಜಧಾನಿಯಲ್ಲಿ ಮುಸ್ಲಿಂ ಸಮುದಾಯವು ರಾಜಕೀಯವಾಗಿ ಹಾಗೂ ಆಡಳಿತವಾಗಿ ತಮ್ಮದೇ ಆದ ಪಾತ್ರವನ್ನು ವಹಿಸಿವೆ. ಇವರು ವಿಜಯನಗರ ಪಟ್ಟಣದಲ್ಲಿ ಅಧಿಕಾರಿಗಳಾಗಿ ಹಾಗೂ ಸೈನಿಕರಾಗಿಯೂ ನೆಲೆಸಿ ವಿಜಯನಗರ ಪ್ರಭುತ್ವದ ಪ್ರಾಬಲ್ಯಕ್ಕೆ ಹಾಗೂ ವಿಸ್ತರಣೆಗೆ ಕಾರಣರಾದರು. ಇವರು ವಿಜಯನಗರ ರಾಜಧಾನಿ ಕೇಂದ್ರ ಪ್ರದೇಶದಲ್ಲಿ ಸೈನಿಕರಾಗಿ ಸೇವೆ ಸಲ್ಲಿಸಿದರು. ಕರಾವಳಿ ತೀರ ಪ್ರಾಂತ್ಯಗಳಲ್ಲಿಯೂ ಸಹ ಸ್ಥಳೀಯ ಆಡಳಿತದಲ್ಲಿ ಇವರು ಕಂಡುಬಂದರು. ಸ್ಥಳೀಯವಾಗಿ ನೆಲೆ ನಿಂತ ಸಮುದಾಯಗಳು ವರ್ತಕರಾಗಿದ್ದು, ಇವರು ಸ್ಥಳೀಯವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದರು. ಧಾರ್ಮಿಕ ತಾರತಮ್ಯವಿಲ್ಲದೆ ಹಿಂದೂ-ಮುಸ್ಲಿಮರು ಉತ್ತಮ ಬಾಂಧವ್ಯದಿಂದ ಪರಸ್ಪರ ಗೌರವದೊಂದಿಗೆ ಜೀವನ ನಡೆಸುತ್ತಿದ್ದರು. ವಿಜಯನಗರ ಸಾಮ್ರಾಜ್ಯದಲ್ಲಿ ಹಿಂದೂ-ಮುಸ್ಲಿಮರು ಸಮಾನವಾಗಿ ನೆಲೆಸಿದ್ದರು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ೧೦ ವರ್ಷಗಳ ನಂತರದಲ್ಲಿ ಬಹಮನಿ ಸಾಮ್ರಾಜ್ಯ ಸ್ಥಾಪನೆಯಾಯಿತು. ಈ ಸಂದರ್ಭದಲ್ಲಿ ಬಹಮನಿಯ ರಾಜಕೀಯ ಪ್ರಭಾವ ವಿಜಯನಗರದ ಮೇಲೆ ಬೀರಿತು. ವಿಜಯನಗರ ಹಾಗೂ ಬಹಮನಿ ನಡುವೆ ರಾಜತಾಂತ್ರಿಕವಾದಂತಹ ಮೈತ್ರಿಯುತ ಹಾಗೂ ರಾಜಕೀಯ ಸಂಬಂಧಗಳು ಇದ್ದವು. ಸಮುದಾಯಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಬಹಮನಿ ರಾಜ್ಯದ ಸೈನಿಕರು ವಿಜಯನಗರ ಅರಸರ ಆಶ್ರಯವನ್ನು ಪಡೆದುಕೊಂಡಿದ್ದರು. ಸಂಗಮ ವಂಶದ ಆರಂಭಿಕ ಕಾಲದ ಆಡಳಿತದಲ್ಲಿ ವಿಜಯನಗರದ ಅರಸರು ಬಹಮನಿ ಸುಲ್ತಾನರಿಂದ ಪದೇ ಪದೇ ಸೋಲನ್ನು ಅನುಭವಿಸುತ್ತಿದ್ದರು. ಇದರ ಕಾರಣವನ್ನು ತಿಳಿದಾಗ ಹಳೆಯ ಯುದ್ಧ ತಂತ್ರಗಳನ್ನು ವಿಜಯನಗರದ ಅರಸರು ಬಳಸುತ್ತಿದ್ದರು. ಹಾಗಾಗಿ ಬಹಮನಿ ತಮ್ಮ ಹೊಸ ರಾಜ್ಯ ಸ್ಥಾಪನೆಯ ನಂತರದಲ್ಲಿ ತಮ್ಮ ಬಿಲ್ವಿದ್ಯೆಯ ಯುದ್ಧ ತಂತ್ರಗಳಿಂದ ರಾಜ್ಯ ವಿಸ್ತರಣೆಯಲ್ಲಿ ತೊಡಗಿದ್ದರು. ಈ ಹೊಸ ಮಾದರಿಯ ಪ್ರಯೋಗದ ಹಿನ್ನೆಲೆಯಲ್ಲಿ ವಿಜಯನಗರದ ಅರಸರು ಸೋಲನ್ನು ಅನುಭವಿಸಬೇಕಾಯಿತು. ಫೆರಿಸ್ತಾನು ಉಲ್ಲೇಖಿಸುವಂತೆ ದೇವರಾಯನು ಒಂದು ಸಭೆಯನ್ನು ಕರೆಯುತ್ತಾನೆ. ಈ ಸಭೆಯಲ್ಲಿ ತಮ್ಮ ಅಪಜಯಕ್ಕೆ ಎರಡು ಕಾರಣಗಳನ್ನು ಮುಂದಿಡುವನು.[೨] ಮುಸ್ಲಿಂ ಪ್ರಭುತ್ವಗಳ ಪ್ರಾಬಲ್ಯವು ಉತ್ತಮ ಜಾತಿಯ ಕುದುರೆಗಳು ಹಾಗೂ ಬಿಲ್ಗಾರರು ಬಹಮನಿ

ಸುಲ್ತಾನರ ಜೊತೆ ಯಾವಾಗಲೂ ಇರುತ್ತಿದ್ದರೆಂದು ಚರ್ಚಿಸಲಾಯಿತು. ತಮ್ಮ ಸೈನಿಕರಲ್ಲಿ ಇರುವಂತಹ ಕೊರತೆಯನ್ನು ನೀಗಿಸಲು ಎರಡನೇ ದೇವರಾಯನು ಆಡಳಿತದ ಕಾಲದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದನು. ತಮ್ಮ ಸಾಮ್ರಾಜ್ಯದ ರಕ್ಷಣೆ ಮತ್ತು ಉನ್ನತಿಗೆ ಸರಿ ಎನಿಸಿದ ಕ್ರಮಗಳನ್ನು ಜಾರಿಗೆ ತರಲಾಯಿತು. ದಕ್ಷಿಣ ಭಾರತದಲ್ಲಿ ತಮ್ಮ ರಾಜ್ಯ ರಕ್ಷಣೆಯ ಪಣವನ್ನು ಹೊತ್ತುಕೊಂಡು ಆ ಮೂಲಕ ಶತ್ರುಗಳನ್ನು ಎದುರಿಸಿ ಭದ್ರವಾದ ರಾಜ್ಯವನ್ನು ಕಟ್ಟಿದರು. ಇವರು ಅಫಕೀಯರನ್ನು ತಮ್ಮ ಸೈನಿಕರಾಗಿ ನೇಮಿಸಿಕೊಂಡರು.[೩] ವಿಜಯನಗರ ಸಾಮ್ರಾಜ್ಯವು ಸರ್ವಧರ್ಮ ಸಮನ್ವಯತೆಯಿಂದ ಕೂಡಿದ ರಾಜ್ಯವಾಗಿತ್ತು. ಇಲ್ಲಿ ಎಲ್ಲಾ ಧರ್ಮೀಯರು ವಾಸಿಸುತ್ತಿದ್ದರು. ಹಿಂದೂ, ಮುಸ್ಲಿಂ, ಜೈನ, ಬೌದ್ಧ, ಕ್ರಿಶ್ಚಿಯನ್ ಹೀಗೆ ಹಲವಾರು ಧರ್ಮಗಳಿಗೆ ಸಮಾನ ಆಶ್ರಯ ನೀಡಲಾಗಿತ್ತು. ಮುಸ್ಲಿಮರು ವಿಜಯನಗರ ಪಟ್ಟಣಕ್ಕೆ ಬಂದು ನೆಲೆಸಿದ್ದರಿಂದ, ಇಲ್ಲಿ ಅವರಿಗೆ ಯಾವ ರೀತಿಯಲ್ಲಿ ಸ್ಥಾನಮಾನಗಳು ಲಭಿಸಿದ್ದವು ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎರಡನೇ ದೇವರಾಯನ ಕಾಲದಲ್ಲಿ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ನೆಲೆಸಿದ್ದು ಸಮಾನ ನಾಗರಿಕತೆ ಅನುಸಾರ ಅವರು ರಾಜ್ಯದ ಎಲ್ಲಾ ಸೌಲಭ್ಯವನ್ನು ಪಡೆದಿದ್ದರು. ಎರಡನೇ ದೇವರಾಯನು ಮುಸ್ಲಿಮರನ್ನು ಸೈನ್ಯದಲ್ಲಿ ಭರ್ತಿ ಮಾಡಿಕೊಂಡಿದ್ದನು. ಅನೇಕ ಮುಸ್ಲಿಮರನ್ನು ಅಧಿಕಾರಿಗಳಾಗಿ ನೇಮಿಸಿದ್ದನು.[೪] ಅದೇ ರೀತಿ ಅವರಿಗೆ ಜಾಗೀರುಗಳನ್ನು ಸಹ ನೀಡಲಾಗಿತ್ತು.[೫]

೭.೧. ಮುಸ್ಲಿಂ ಅಧಿಕಾರಿಗಳು

ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ವಿಜಯನಗರದ ಪ್ರಭುತ್ವವು ವಿಸ್ತಾರವಾದಂತಹ ಸಾಮ್ರಾಜ್ಯವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡಿತ್ತು. ಹಾಗಾಗಿ ಸಾಮಂತ ರಾಜರು ವಿಜಯನಗರದ ಚಕ್ರವರ್ತಿಗೆ ಅಧೀನರಾಗಿದ್ದರು. ರಾಜನು ಸಾಮ್ರಾಜ್ಯದ ಅಖಂಡತೆಯ ಸಂಕೇತವಾಗಿದ್ದನು. ಅವನು ಸರ್ವಾಧಿಕಾರಿಯಾದ ನಿರಂಕುಶ ಆಡಳಿತಗಾರನಾಗಿರಲಿಲ್ಲ. ವಿಜಯನಗರದ ಆಡಳಿತ ವ್ಯವಸ್ಥೆಯು ಈ ಹಿನ್ನೆಲೆಯಲ್ಲಿ ಉತ್ತಮವಾಗಿತ್ತು. ಹಾಗಾಗಿ ಈ ಅವಧಿಯಲ್ಲಿ ಸೈನಿಕರನ್ನು ಹಲವು ವಿಧಾನಗಳಿಂದ ಭರ್ತಿ ಮಾಡಿಕೊಳ್ಳಲಾಗುತ್ತಿತ್ತು. ನ್ಯಾಯಾಡಳಿತವು ಜನರಿಗೆ ಅನುಕೂಲಕರವಾಗಿತ್ತು. ದೇವಾಲಯಗಳು ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವಾಗಿದ್ದವು. ಚರಿತ್ರೆಕಾರರಾದ ಟಿ.ಮಹಾಲಿಂಗಂ ಅವರ ಪ್ರಕಾರ ವಿಜಯನಗರದ ರಾಜ್ಯಾಡಳಿತ ಸ್ವರೂಪವು ಆ ಕಾಲದ ಅಗತ್ಯಗಳಿಗೆ ಅನುಗುಣವಾಗಿತ್ತು. ಶ್ರೀಕೃಷ್ಣದೇವರಾಯನು ರಾಜ್ಯಾಡಳಿತ ತತ್ವಗಳನ್ನು ತನ್ನ 'ಅಮುಕ್ತ ಮಾಲ್ಯದ' ಕೃತಿಯಲ್ಲಿ ವಿವರವಾಗಿ ಹೇಳಿದ್ದಾನೆ. ಆದರ್ಶರಾಜ ಮತ್ತು ಉತ್ತಮ ಆಡಳಿತದ ಕುರಿತು ವಿವರಣೆ ನೀಡಿದ್ದಾನೆ. ರಾಜನು ಯಾವಾಗಲೂ ಧರ್ಮದ ಮೇಲೆ ದೃಷ್ಟಿಯನ್ನಿರಿಸಿಕೊಂಡೇ ಆಳಬೇಕು ಎಂದು 'ಅಮುಕ್ತ ಮಾಲ್ಯ'ದಲ್ಲಿ ಹೇಳಲಾಗಿದೆ.[೬] ವಿಜಯನಗರ ಸಾಮ್ರಾಜ್ಯ ಹರಿಹರ ಬುಕ್ಕನಿಂದ ಸ್ಥಾಪನೆಯಾಗಿ ಬೆಳವಣಿಗೆ ಹೊಂದಿತು. ನಂತರ ಇಮ್ಮಡಿ ದೇವರಾಯ, ಸಾಳುವ ನರಸಿಂಹ ಮತ್ತು ಶ್ರೀಕೃಷ್ಣದೇವರಾಯರು ಆಡಳಿತವನ್ನು ಸುಭದ್ರಗೊಳಿಸಿದರು. ವಿಜಯನಗರ

ಆಡಳಿತ ವ್ಯವಸ್ಥೆಯಲ್ಲಿ ರಾಜ(ಸ್ವಾಲ), ಮಂತ್ರಿ(ಅಮಾತ್ಯ), ರಾಜ್ಯ(ದೇಶ), ಕೋಟೆ(ದುರ್ಗ), ಭಂಡಾರ(ಕೋಶ), ಸೈನ್ಯ(ದಂಡು) ಮತ್ತು ಸ್ನೇಹಿತ(ಮಿತ್ರ) ಎಂಬ ಏಳು ಪ್ರಕಾರದ ಆಡಳಿತ ವ್ಯವಸ್ಥೆಯಿತ್ತು.[೭]

ಪ್ರಧಾನಿಯು ಸಮಸ್ತ ಆಡಳಿತದ ಮೇಲ್ವಿಚಾರಕನಾಗಿದ್ದನು. ಪ್ರಧಾನಮಂತ್ರಿಗೆ ದಂಡನಾಯಕ ಅಥವಾ ದಣ್ಣಾಯಕ ಎಂದು ಹೆಸರಿತ್ತು.[೮] ಅಬ್ದುಲ್ ರಜಾಕ್ ಅವನನ್ನು 'ದನಾಯಿಕ್ ವಜೀರ್' ಎಂದು ಕರೆಯುತ್ತಾನೆ. ಇಲ್ಲಿ ಮಂತ್ರಿ ಪರಿಷತ್ ಇತ್ತು. ಮಂತ್ರಿ ಪರಿಷತ್ತಿನಲ್ಲಿ "ರಾಜನು ನೇಮಿಸಿದ ಮಂತ್ರಿಗಳು ಮತ್ತು ರಾಜ್ಯದ ಗಣ್ಯವ್ಯಕ್ತಿಗಳು ಇದ್ದರು. ರಾಜ್ಯದ ವ್ಯವಹಾರಗಳಲ್ಲಿ ಮತ್ತು ನೀತಿಯ ವಿಚಾರದಲ್ಲಿ ಅವರ ಸಲಹೆ ಸೂಚನೆಗಳನ್ನು ಕೇಳಲಾಗುತ್ತಿತ್ತು."[೯] ಇದರಿಂದಾಗಿ ರಾಜ್ಯದ ಸುಭಿಕ್ಷೆಗೆ ಅಡಿಪಾಯ ಹಾಕುವ ಕೆಲಸವನ್ನು ಮಾಡಲಾಗುತ್ತಿತ್ತು. "ಅರಮನೆಯ ಬಲಗಡೆ ದಿವಾನ್‌ಖಾನ ಅಥವಾ ಮಂತ್ರಿಯ ಕಛೇರಿ ಇತ್ತು"[೧೦] ಎಂದು ಅಬ್ದುಲ್ ರಜಾಕ್ ತಿಳಿಸಿದ್ದಾನೆ. "ರಾಜ್ಯದ ಆಡಳಿತಕ್ಕೆ ಮಂತ್ರಿ ಪರಿಷತ್ ಅರಸರಿಗೆ ಸಹಾಯ ಮಾಡುತ್ತಿದ್ದರು. ಅದೇ ರೀತಿ ವಿಜಯನಗರದ ಕೇಂದ್ರ, ಪ್ರಾಂತೀಯ ಮತ್ತು ಸ್ಥಳೀಯ ಆಡಳಿತಗಳನ್ನು ಗಮನಿಸಲು ಸಚಿವಾಲಯದ ಕಾರ್ಯಾಲಯವಿತ್ತು. ದಂಡನಾಯಕ ಅಥವಾ ದಣ್ಣಾನಾಯಕ ಬಿರುದು ಸೇನಾಧಿಕಾರಿಗೆ ಅಲ್ಲದೇ ಸರ್ಕಾರದ ಅನೇಕ ಅಧಿಕಾರಿಗಳು ಅದನ್ನು ಧರಿಸುತ್ತಿದ್ದರು."[೧೧] ದಂಡನಾಯಕ ಎಂಬ ಪದವು ಸೈನ್ಯ ಸಂಬಂಧವಾಗಿದ್ದರೂ ಅದನ್ನು ಯಾವುದೇ ಇಲಾಖೆಗೆ ಸೇರಿದ ಒಬ್ಬ ಆಡಳಿತಾಧಿಕಾರಿ ಯನ್ನು ಸೂಚಿಸಲು ಬಳಸಲಾಗುತ್ತಿದ್ದಿತು.

ಅಬ್ದುಲ್ ರಜಾಕ್ ದಣ್ಣಾಯಕರ ಬಗ್ಗೆ ಈ ರೀತಿ ವರ್ಣಿಸಿದ್ದಾನೆ. "ಕಂಬಗಳಿರುವ ಭವನದ ನಡುವೆ ಎತ್ತರವಾದ ವೇದಿಕೆಯ ಮೇಲೆ ದಾನಾಯಿಕ್ ಎಂಬ ನಪುಂಸಕನು ಕುಳಿತುಕೊಳ್ಳುತ್ತಾನೆ. ಆತನ ಆಡಳಿತದ ಅಧ್ಯಕ್ಷತೆ ವಹಿಸುತ್ತಾನೆ. ಆ ವೇದಿಕೆಯ ಕೆಳಗೆ ಎರಡು ಕಡೆಯೂ ಸಾಲಾಗಿ ದಂಡಾಧಿಕಾರಿಗಳು ನಿಲ್ಲುತ್ತಾರೆ. ಏನಾದರೂ ವ್ಯವಹಾರವನ್ನು ಹೇಳಬಯಸುವ ವ್ಯಕ್ತಿಯು ದಂಡಾಧಿಕಾರಿಗಳ ಸಾಲುಗಳ ನಡುವೆ ಮುಂದಕ್ಕೆ ಬಂದು ಕಾಣಿಕೆಯನ್ನು ಒಪ್ಪಿಸಿ, ನೆಲಮುಟ್ಟಿ ನಮಸ್ಕಾರ ಮಾಡಿ, ನಿಂತು ತನ್ನ ಅಹವಾಲನ್ನು ಹೇಳಿಕೊಳ್ಳುತ್ತಾನೆ. ಅದನ್ನು ಆಲಿಸಿ ದಾನಾಯಿಕನು, ದೇಶದಲ್ಲಿ ಪ್ರಚಲಿತವಾಗಿರುವ ನ್ಯಾಯ ನಿಬಂಧನೆಗಳ ಪ್ರಕಾರ ಆದೇಶವನ್ನು ನೀಡುತ್ತಾನೆ. ಅವನ ಮನೆಯು ರಾಜನ ಅರಮನೆಯ ಹಿಂಭಾಗದಲ್ಲೇ ಇರುತ್ತಿತ್ತು."[೧೨] ದಂಡನಾಯಕರ ಮನೆಯು ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಾಣವಾಗಿದೆ. ದನಾಯಿಕ್ ಕಾವಲು ಮನೆಯ ಎತ್ತರದ ಭಾಗದಲ್ಲಿ ಮುಸ್ಲಿಂ ಶೈಲಿಯ ಹಲವು ಕಟ್ಟಡಗಳಿವೆ. ಹಾಗೆಯೇ ಅದೇ ಭಾಗದಲ್ಲಿ ಒಂದು ಮಸೀದಿಯ ಆಕೃತಿಯನ್ನು ಹೋಲುವ ಛತ್ರವು ಸಹ ಕಂಡುಬರುತ್ತದೆ. ಈ ಕಟ್ಟಡದ ಒಳಭಾಗದಲ್ಲಿ ಮಿಹಿರಾಬ್‌ನ ಆಕಾರದಲ್ಲಿ ಗೋಡೆಯನ್ನು ನಿರ್ಮಿಸಲಾಗಿದೆ. ಇದು ನೋಡಲು ಮುಸ್ಲಿಮರ ಪ್ರಾರ್ಥನಾ ಮಂದಿರದಂತಿದೆ. ಹಾಗಾಗಿ ಈ ಸ್ಮಾರಕವು ಮುಸ್ಲಿಂ ಸಮುದಾಯಗಳಿಗೆ ಸಂಬಂಧಿಸಿ ದ್ದಾಗಿದೆ. ಈ ಕಟ್ಟಡದ ಶೈಲಿಯನ್ನು ಗಮನಿಸಿದಾಗ ಬಹುಶಃ ಇದು ಮುಸ್ಲಿಮರ ಪ್ರಾರ್ಥನೆಯನ್ನು

ಮಾಡುವ ಮಸೀದಿ ಅಥವಾ ಶೈಕ್ಷಣಿಕ ಸಂಸ್ಥೆಯಾಗಿರಬೇಕು. ಈ ಕಟ್ಟಡದ ಆಧಾರದ ಮೇಲೆ ರಾಜಪ್ರಾಂಗಣದ ಪ್ರದೇಶದಲ್ಲಿ ಪ್ರಮುಖ ಮುಸ್ಲಿಂ ಅಧಿಕಾರಿ ವರ್ಗವು ಇಲ್ಲಿ ನೆಲೆಸಿತ್ತೆಂಬುದನ್ನು ತಿಳಿಯಬಹುದಾಗಿದೆ.

ವಿಜಯನಗರ ಪಟ್ಟಣದಲ್ಲಿ ಹಜಾರರಾಮಸ್ವಾಮಿ ದೇವಾಲಯದ ಪಡುವಣ ದಿಕ್ಕಿನ ಕಡೆ ದಂಡ ನಾಯಕನ ಭವನವಿದೆ. 'ಫೆರಿಸ್ತಾ'ನ ಉಲ್ಲೇಖದಂತೆ "ಪ್ರೌಢದೇವರಾಯರು ಮುಸಲ್ಮಾನರಿಗಾಗಿ ವಿಜಯ ನಗರದಲ್ಲಿ ಮಸೀದಿಯೊಂದನ್ನು ನಿರ್ಮಿಸಿದನೆಂದು ದಾಖಲಿಸಿದ್ದಾನೆ."[೧೩] ಇದು ಮಸೀದಿ(ಪೂಜಾ ಮಂದಿರ)ಯಂತಿದೆ. ಈ ಮೇಲಿನ ಉಲ್ಲೇಖದಂತೆ ಇಲ್ಲಿ ಬಹುಶಃ ಮುಸ್ಲಿಂ ದಂಡನಾಯಕನು ಈ ಭವನದಲ್ಲಿ ಇದ್ದಿರಬಹುದು. ಆದರೆ ಈ ಅಧಿಕಾರಿಗಳ ಬಗ್ಗೆ ಶಾಸನಗಳಾಗಲಿ, ಯಾವುದೇ ಆಧಾರಗಳಾಗಲಿ ಕಂಡುಬರುವುದಿಲ್ಲ. ಅಲ್ಲದೆ ಈ ಆವರಣದ ವಾಯವ್ಯ ಮೂಲೆಯಲ್ಲೊಂದು ಬುರುಜು(ಗೋಪುರ) ಸಹ ಕಂಡುಬರುತ್ತದೆ. ಹೀಗೆ ವಿಜಯನಗರದ ರಾಜಧಾನಿ ಕೇಂದ್ರದಲ್ಲಿ ಅಧಿಕಾರಿ ವರ್ಗವು ಅರಸರಿಂದ ಪ್ರಾಧಾನ್ಯತೆಯನ್ನು ಪಡೆದುಕೊಂಡಿದ್ದವೆಂಬುದನ್ನು ಈ ಸ್ಮಾರಕ ಅಧ್ಯಯನಗಳಿಂದ ತಿಳಿಯಬಹುದಾಗಿದೆ.

ವಿಜಯನಗರ ಸಾಮ್ರಾಜ್ಯದಲ್ಲಿ ಅರಸರು ಮುಸ್ಲಿಂ ಅಧಿಕಾರಿ ವರ್ಗಗಳನ್ನು ನೇಮಿಸಿದ್ದರು. ವಿಜಯನಗರಕ್ಕೆ ಭೇಟಿ ನೀಡಿದ ಬರ್ಬೋಸಾ ತಿಳಿಸುವಂತೆ "ಶ್ರೀಕೃಷ್ಣದೇವರಾಯನ ಆಳ್ವಿಕೆಯಲ್ಲಿ ಹೆಚ್ಚು ಕಡಿಮೆ ಎಲ್ಲಾ ಗ್ರಾಮಗಳಲ್ಲಿ ಜೆಂಟೈಲರೇ ಇರುವರು. ಇವರಲ್ಲಿ ಕೆಲವು ಮೂರರಿದ್ದಾರೆ. ಈ ಮೂರರಲ್ಲಿ ಕೆಲವರು ಅಧಿಪತಿಗಳಾಗಿದ್ದಾರೆ. ನರಸಿಂಗರಾಜ ಅದನ್ನು ಅವರಿಗೆ ಕೊಟ್ಟಿದ್ದಾನೆ. ಉಳಿದ ಊರುಗಳು ಅವನಿಗೆ ಸೇರಿದವುಗಳು. ಅಲ್ಲಿ ತನ್ನ ಪರವಾಗಿ ರಾಜ್ಯಪಾಲರನ್ನು, ತೆರಿಗೆ ವಸೂಲಿಕಾರರನ್ನು ನೇಮಿಸಿದ್ದಾನೆ."[೧೪] ಈ ಉಲ್ಲೇಖ ತಿಳಿಸುವಂತೆ ಮುಸ್ಲಿಂ ಅಧಿಕಾರಿಗಳನ್ನು ವಿಜಯನಗರದ ಅರಸರು ನೇಮಕ ಮಾಡುತ್ತಿದ್ದರು. ಈ ಅಧಿಕಾರಿಗಳು ಪ್ರಾಂತ್ಯಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಅಲ್ಲದೇ ಇವರಿಗೆ ಜಹಗೀರುಗಳನ್ನು ಸಹ ಕೊಡಲಾಗುತ್ತಿತ್ತು. ಪ್ರೌಢದೇವರಾಯನ ಆಳ್ವಿಕೆಯಲ್ಲಿ ಪಾಣೆಯ ಪ್ರಾಂತ್ಯದ ಆಡಳಿತವನ್ನು 'ಸಾಬಾತ ಮುಲ್ಕ' ಎಂಬುವವನಿಗೆ ಜಹಗೀರು ಹಾಕಿಕೊಡಲಾಯಿತು. ಈ ಸಾಬಾತ ಮುಲ್ಕ ಮನೆತನದವರು ಈ ಜಹಗೀರನ್ನು ಒಂದು ನೂರು ವರ್ಷಗಳವರೆಗೆ ಆಳಿದರು. "ಆ ವಂಶಸ್ಥ ಮುಸ್ಲಿಂ ಅಧಿಕಾರಿಗಳೆಂದರೆ ಸಾಬಾತ ಮುಲ್ಕ್ ಕ್ರಿ.ಶ. ೧೩೧೫–೧೩೫೫ವರೆಗೆ ಆಳಿದನು. ಬಾನಾ ಬಾನವಡೆಯರ ಕ್ರಿ.ಶ. ೧೩೫೬–೧೩೬೬, ಸುಲ್ತಾನಿ ವಡೆಯರ ಕ್ರಿ.ಶ. ೧೩೬೭–೧೪೦೬ರವರೆಗೆ, ರಾಜಖಾನ ಕ್ರಿ.ಶ. ೧೪೦೬–೧೪೧೯ರವರೆಗೆ ಪಾಣೆಯ ಪ್ರಾಂತ್ಯದ ಆಳ್ವಿಕೆಯನ್ನು ನಿರ್ವಹಿಸಿದರು."[೧೫] ಈ ಪಾಣೆಯ ಪ್ರಾಂತ್ಯ ಪೆನುಗೊಂಡ ರಾಜ್ಯದ ಅಂಗವಾಗಿತ್ತು. ಹಂಪಿ ಶಾಸನಗಳಲ್ಲಿ ಉಲ್ಲೇಖವಾಗಿರುವ "ನಿಷ್ಠಾವಂತ ಮುಸ್ಲಿಂ ಸೇವಕರೆಂದರೆ ಅಹಮ್ಮದ್‌ಖಾನ್ ಮಿಯಾರಾಹುತ, ಸಖಲಾದಿರಾಯತ ಮುಂತಾದವರು ಇದ್ದರು.[೧೬] ಇಮ್ಮಡಿ ದೇವರಾಯನ ಆಸ್ಥಾನದಲ್ಲಿ ಸೇವೆ ಮಾಡುತ್ತಿದ್ದ ಮುಸ್ಲಿಂ ಅಧಿಕಾರಿ, ಕಟ್ಟಿಗೆ

ಅಹಮದ್‌ಖಾನ್ ನಿಷ್ಠಾವಂತ ಸೇವಕನಾಗಿದ್ದ ರಾಜನಿಗೆ ಧರ್ಮವಾಗಬೇಕೆಂದು ಈತ ವಿಜಯನಗರ ಪಟ್ಟಣದಲ್ಲಿ ಧರ್ಮಶಾಲೆ ಮತ್ತು ಬಾವಿಯನ್ನು ಕಟ್ಟಿಸಿ ಸಾರ್ವಜನಿಕರಿಗೆ ದಾನ ಮಾಡಿದನು ಎಂದು ಶಾಸನದಲ್ಲಿ ಉಲ್ಲೇಖವಿದೆ.”[೧೭] ಬಹುಶಃ ಒಬ್ಬ ಅಧಿಕಾರಿ ರಾಜರಿಗಾಗಿ ದಾನ ಮಾಡುವುದರ ಮೂಲಕ ಜನರಿಗೆ ಕೊಟ್ಟಿರುವುದು ಇದು ಮೊದಲು ಅನಿಸುತ್ತದೆ. ಇದರಿಂದ ತಿಳಿಯುವುದೇನೆಂದರೆ ಮುಸ್ಲಿಂ ಪ್ರಜೆಗಳು ರಾಜರಿಗೆ ವಿಧೇಯರಾಗಿರುತ್ತಿದ್ದರು ಎನ್ನುವುದು

ವಿಜಯನಗರ ಆಡಳಿತದಲ್ಲಿ ಮುಸ್ಲಿಂ ರಾವುತರ ಪಾತ್ರವು ಕಂಡುಬರುತ್ತದೆ. 'ರಾವುತರು' ಕುದುರೆ ಸವಾರಿಯಲ್ಲಿ ಪರಿಣತಿ ಹೊಂದಿದವರು ಮತ್ತು ಸವಾರಿಯೊಂದಿಗೆ ಆಯುಧಗಳನ್ನು ಪ್ರಯೋಗಿಸುವ ನಿಪುಣತೆ ಹೊಂದಿರುವ ಯೋಧರನ್ನು ರಾವುತರು ಎನ್ನುವರು. ವಿಜಯನಗರ ಸೈನ್ಯದಲ್ಲಿದ್ದ ಕೆಲವು ಪ್ರಮುಖ ರಾವುತರ ಹೆಸರುಗಳನ್ನು ಶಾಸನಗಳು ಉಲ್ಲೇಖಿಸಿವೆ. ಹಂಪಿ ಶಾಸನದಲ್ಲಿ ಕೆಲವು ಮುಸ್ಲಿಂ ರಾವುತರು ದಾನ ನೀಡಿದ ಬಗ್ಗೆ ವಿವರಣೆ ಇದೆ. ಅವರಲ್ಲಿ ಮಿಯಾರಾಹುತ, ಸಖಲಾದಿರಾಹುತ ಎಂಬ ಮುಸ್ಲಿಂ ಹೆಸರುಗಳು ಶಾಸನದಲ್ಲಿ ಉಲ್ಲೇಖವಾಗಿವೆ. ಮಿಯಾರಾಹುತನಿಗೆ ಪುಣ್ಯವಾಗಬೇಕೆಂದು ಬಸವ ಎಂಬ ನಾಯಕನು ಕ್ರಿ.ಶ. ೧೪೨೦ರಲ್ಲಿ ಗೋರಿ ಮತ್ತು ಮಸೀದಿಯನ್ನು ಕಟ್ಟಿಸಿದ ಉಲ್ಲೇಖವಿದೆ.[೧೮] ಸಕಲಜರಾವುತನು ಚಿಕ್ಕರಾಯರಿಗೆ ಪುಣ್ಯವಾಗ ಬೇಕೆಂದು ಗುಮ್ಮಟವನ್ನು ಕಟ್ಟಿಸಿದನೆಂದು ಶಾಸನದಲ್ಲಿ ಉಲ್ಲೇಖವಾಗಿದೆ. ಈ ಮುಸ್ಲಿಂ ರಾವುತರ ವಿವರಣೆಗಳು ವಿಜಯನಗರ ಆಡಳಿತದಲ್ಲಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದರು ಎಂಬುದನ್ನು ಗುರುತಿಸಬಹುದು. ಅಲ್ಲದೇ ಸ್ಥಳೀಯ ಹಿಂದೂ ಸೈನಿಕರ ಜೊತೆಗೆ ಉತ್ತಮ ಸಂಬಂಧವನ್ನು ಹೊಂದಿದ್ದರು ಎಂಬುದನ್ನು ಶಾಸನಗಳಿಂದ ತಿಳಿಯಬಹುದು. ಹೀಗೆ ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಸೇವಕರಿದ್ದು ಪ್ರಾಮಾಣಿಕರಾಗಿ ರಾಜ್ಯಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದರು.

೭.೨. ಪ್ರಾಂತಿಯ ಆಡಳಿತದಲ್ಲಿ ಮುಸ್ಲಿಂ ಅಧಿಕಾರಿಗಳು

ವಿಜಯನಗರ ಕಾಲಾವಧಿಯಲ್ಲಿ ಇಲ್ಲಿನ ಅನೇಕ ಸ್ಥಳೀಯ ಪ್ರಾಂತ್ಯಗಳಲ್ಲಿ ಮುಸ್ಲಿಂ ಸಮುದಾಯಗಳ ಅನೇಕ ಅಧಿಕಾರಿಗಳು, ರಾಜ್ಯಪಾಲರಾಗಿ, ಸೈನಿಕರಾಗಿ ಸೇವೆ ಸಲ್ಲಿಸಿದ್ದಾರೆ. ಈ ಸಮುದಾಯಗಳು ಸ್ಥಳೀಯವಾಗಿ ವಿಜಯನಗರ ಪೂರ್ವದಿಂದಲೂ ಶಾಶ್ವತವಾಗಿ ಇಲ್ಲಿಯೇ ನೆಲೆ ನಿಂತು ವಿಜಯನಗರದ ಆರ್ಥಿಕ ಚಟುವಟಿಕೆಯಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸುತ್ತಿದ್ದರು. ಇಲ್ಲಿನ ವ್ಯಾಪಾರಿ ವರ್ಗವು ತಮ್ಮ ಆರ್ಥಿಕ ಹಿಡಿತಗಳಿಂದಾಗಿ ವಿಜಯನಗರದ ಅರಸರೊಂದಿಗೆ ರಾಜಕೀಯ ಸಂಬಂಧಗಳನ್ನು ಸಹ ಹೊಂದಿದ್ದರು. ಇದು ಅಲ್ಲದೇ ಇವರು ತಮ್ಮದೇ ಆದ ಮುಸ್ಲಿಂ ವರ್ತಕ ಸಂಘಗಳನ್ನು ಸಹ ಸ್ಥಾಪಿಸಿಕೊಂಡಿದ್ದರು. ಈ ಸಂಘಗಳು ತಮ್ಮ ಹಕ್ಕು-ಬಾಧ್ಯತೆಗಳ ರಕ್ಷಣೆಗಾಗಿ ಸ್ಥಳೀಯ ಅರಸರ ಜೊತೆಗೆ ಆಡಳಿತಾತ್ಮಕ ಕಾರ್ಯಗಳಿಗೆ ಸಹಾಯಕರಾಗಿ ಕೆಲಸವನ್ನು ಮಾಡುತ್ತಿದ್ದರು. ಇದರ ಬಗೆಗೆ ಅನೇಕ ಶಾಸನಗಳು, ಪ್ರವಾಸಿ ಕಥನಗಳು, ಸಾಹಿತ್ಯಿಕ ಆಕರಗಳು ಬೆಳಕನ್ನು ಚೆಲ್ಲುತ್ತವೆ.

"ವಿಜಯನಗರ ಸಾಮ್ರಾಜ್ಯದ ಆಡಳಿತದ ಉನ್ನತ ಹುದ್ದೆಗಳಲ್ಲಿ ಮುಸ್ಲಿಮರು ಸಹ ನೇಮಕಗೊಂಡಿದ್ದರು. ಅವರಲ್ಲಿ ಪ್ರಮುಖವಾಗಿ ರಾಮರಾಯನು ಆಮುರ್‌ಖಾನ್‌ನನ್ನು ಪ್ರಾಂತ್ಯದ ಅಧಿಕಾರಿಯನ್ನಾಗಿ ನೇಮಕ ಮಾಡಿದನು."[೧೯] ಇನ್ನಿಬ್ಬರು ಪ್ರಮುಖ ಅಧಿಕಾರಿ ಎಂದರೆ ಐನ್-ಉಲ್-ಮುಲ್ಕ್ ಗಿಲಾನಿ ಮತ್ತು ದಿಲ್-ಉವರ್-ಖಾನ್.[೨೦]

ವಿಜಯನಗರದ ಅರಸರು ವಿದೇಶಕ್ಕೆ ತಮ್ಮ ಆಸ್ಥಾನದಿಂದ ಮುಸ್ಲಿಂ ರಾಯಭಾರಿಗಳನ್ನು ಕಳುಹಿಸುತ್ತಿದ್ದರು. ಪ್ರವಾಸಿ ಕಥನಗಳು ಉಲ್ಲೇಖಿಸುವಂತೆ ಖ್ವಾಜಾ-ಎ-ಮಸೂದ್ ಮತ್ತು ಖುರಾಸಾನದ(ಖುರಸ್ತಾನ) ಖಾಜಾ ಮಹಮ್ಮದ್ ಎಂಬುವರು ಪರ್ಶಿಯಾಕ್ಕೆ ವಿಜಯನಗರ ಸಾಮ್ರಾಜ್ಯದ ರಾಯಭಾರಿಗಳಾಗಿ ಕಳುಹಿಸಲಾಗಿತ್ತು.[೨೧]

ರುಸ್ತುಮಜಿ ಖಾನಾ ವಡೇರು ಸದಾಶಿವರಾಯನ ಆಳ್ವಿಕೆಯಲ್ಲಿ ಗುಂಡ್ಲಪೇಟೆಯ ಗವರ್ನರ್‌ನಾಗಿದ್ದನು. ದಿಲಾವರ್‌ಖಾನ್[೨೨] ವಡೆಯ ಎಂಬುವನು ಎಮ್ರೆನಾಡಿನ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಅಲ್ಲದೇ ಶ್ರೀತಾಪಕ ಮಲಿಕ್ ವಡೆಯನ ಸಹಾಯಕ್ಕೆ ಈ ಅಧಿಕಾರಿಯನ್ನು ನೇಮಕ ಮಾಡಲಾಗಿತ್ತು. ರಾಮರಾಯನಿಗೆ ಅತ್ಯಂತ ನಿಕಟ ಸಂಬಂಧವನ್ನು ದಿಲಾವರ್‌ಖಾನ್ ವಡೆಯ ಹೊಂದಿದ್ದನು. ಅಲ್ಲದೇ ಐನ್-ಉಲ್ಕ ಎಂಬ ಇನ್ನೊಬ್ಬ ಮುಸ್ಲಿಮನು ರಾಮರಾಯನಿಗೆ ಉತ್ತಮ ಅಧಿಕಾರಿಯಾಗಿದ್ದ. ಈತನ ಕಾರ್ಯಕ್ಕೆ ಮೆಚ್ಚಿ ಈತನನ್ನು ಸಹೋದರರೆಂದು ಸಂಬೋಧಿಸುತ್ತಿದ್ದನು. ಆದರೆ ಈತ ರಕ್ಕಸತಂಗಡಗಿ ಕದನದಲ್ಲಿ ಶತ್ರುಪಕ್ಷ ಸೇರಿ ದ್ರೋಹ ಬಗೆದನು.

"ಹುಸೇನ್ ನಿಜಾಂಶಹನು ಕಾಸಿಂಬೇಗ್ ಮತ್ತು ಮೌಲಾನಾ ಇನಾಯತುಲ್ಲಾ ಎಂಬ ರಾಯಭಾರಿಗಳನ್ನು ರಾಮರಾಯನ ಆಸ್ಥಾನಕ್ಕೆ ಕಳುಹಿಸಿದ್ದನು."[೨೩] ಈ ರಾಯಭಾರಿಗಳು ನಿಜಾಂಶಹನ ಮತ್ತು ವಿಜಯನಗರ ನಡುವೆ ನಡೆಯುವ ಯುದ್ಧವನ್ನು ತಡೆಯುವಲ್ಲಿ ಯಶಸ್ವಿಯಾದರು.

ಈ ರೀತಿ ಮುಸ್ಲಿಂ ಅಧಿಕಾರಿಗಳು ನಿಷ್ಠರಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಅಧಿಕಾರದಲ್ಲಿದ್ದರು. ಹಿಂದೂ ಮುಸ್ಲಿಂ ಎಂಬ ಭೇದವಿಲ್ಲದೆ ಅರಸರು ಎಲ್ಲರಿಗೂ ಸಮಾನರಾಗಿ ಕಾಣುತ್ತಿದ್ದರು.

ವಿಜಯನಗರದ ಅರಸರು ಕರಾವಳಿ ಬಂದರು ಪಟ್ಟಣಗಳ ಆರ್ಥಿಕ ಚಟುವಟಿಕೆಯ ಮೇಲೆ ತಮ್ಮ ಪ್ರಮುಖ ಗಮನವನ್ನು ಹರಿಸಿದ್ದರು. ಬಂದರು ಪಟ್ಟಣಗಳು ವಿಜಯನಗರದ ಕೇಂದ್ರದ ಬೊಕ್ಕಸವನ್ನು ತುಂಬಿಸುವ ಪ್ರಮುಖ ನೆಲೆಗಳಾಗಿದ್ದವು. ಹಾಗಾಗಿ ವಿಜಯನಗರದ ಅರಸರು ಸ್ಥಳೀಯವಾಗಿ ನೆಲೆ ನಿಂತ ಮುಸ್ಲಿಂ ಸಮುದಾಯಗಳ ಹಿತರಕ್ಷಣೆಯನ್ನು ನೋಡಿಕೊಳ್ಳುವುದರ ಜೊತೆಗೆ ಅನೇಕ ಸ್ಥಾನಮಾನಗಳನ್ನು, ಹಲವು ಸ್ವಾತಂತ್ರ್ಯವನ್ನು ಸಹ ಅವರಿಗೆ ನೀಡಿದ್ದರು. ದಕ್ಷಿಣ ಭಾರತದ ಕರಾವಳಿ ಬಂದರು ಪಟ್ಟಣಗಳಾದ ಬಾರಕೂರು, ಮಂಗಳೂರು, ಭಟ್ಕಳ, ಬಸರೂರು, ಕೊಚ್ಚಿನ್, ಕೊಲ್ಲಮ್, ತ್ರೀವೆಂಡ್ರಮ್, ಕಿಳಕಾರೈ, ಕೋಯಲ್, ಪುಲಿಕಾಟ್ ಹೀಗೆ ಮಲಬಾರ್,

ಕೋರಮಂಡಲದ ಕರಾವಳಿ ಪ್ರದೇಶದಾದ್ಯಂತ ಮುಸ್ಲಿಂ ಸಮುದಾಯಗಳು ಆರ್ಥಿಕ ಪ್ರಾಬಲ್ಯವನ್ನು ಪಡೆದುಕೊಂಡಿದ್ದವು. ಇದರೊಂದಿಗೆ ಮುಸ್ಲಿಂ ಸಮುದಾಯಗಳ ಆರ್ಥಿಕ ಚಟುವಟಿಕೆಗಳು ವಿಸ್ತರಣೆಗೊಂಡು, ಬಂದರು ಪಟ್ಟಣಗಳು ಪ್ರಾಂತ್ಯಗಳ ಸ್ಥಾನಗಳನ್ನು ಪಡೆದುಕೊಂಡವು. ಹಾಗಾಗಿ ಆರ್ಥಿಕ ಪ್ರಾಬಲ್ಯದ ಜೊತೆಗೆ ಈ ಸಮುದಾಯಗಳು ರಾಜಕೀಯ ಅಧಿಕಾರಗಳನ್ನು ಸುಲಭವಾಗಿ ಪಡೆದುಕೊಂಡವು. ವಿಜಯನಗರದ ಅರಸರು ಪ್ರಾಂತೀಯ ಮಟ್ಟದ ಆಡಳಿತವನ್ನು ಅಲ್ಲಿನ ಸ್ಥಳೀಯ ಸಮುದಾಯದ ಅಧಿಕಾರಗಳ ಮಧ್ಯೆಯೇ ಹಂಚಿದ್ದರು. ಈ ಹಿನ್ನೆಲೆಯಲ್ಲಿ ಪ್ರಾಂತೀಯ ಮಟ್ಟದಲ್ಲಿ ಆರ್ಥಿಕವಾಗಿ ಪ್ರಾಬಲ್ಯ ಪಡೆದ ವರ್ತಕರಿಗೆ ಅಧಿಕಾರವನ್ನು ನೀಡಲಾಯಿತು. ವಿಜಯನಗರದ ಅರಸರು ಪ್ರಾಂತ್ಯಗಳಲ್ಲಿನ ಆರ್ಥಿಕ ಚಟುವಟಿಕೆಗಳ ಮೇಲೆ ನಿಯಂತ್ರಣವನ್ನು ಸಾಧಿಸುವ ಉದ್ದೇಶಗಳಿಂದಾಗಿ ಇಲ್ಲಿನ ಅಧಿಕಾರಿಗಳನ್ನು, ಮಂತ್ರಿಗಳನ್ನು ಹಾಗೂ ವರ್ತಕ ಸಂಘಗಳ ನಾಯಕರನ್ನು ನೇಮಿಸುತ್ತಿದ್ದರು. ಇವರು ಸ್ಥಳೀಯ ಅರಸರ ಅಧೀನದಲ್ಲಿ ಆಡಳಿತವನ್ನು ನಿರ್ವಹಿಸುತ್ತಿದ್ದರು.[೨೪] ವಿಜಯನಗರದ ಪ್ರಾಂತೀಯ ಆಡಳಿತ ವ್ಯವಸ್ಥೆಯಲ್ಲಿ ಕರಾವಳಿಯ ಬಂದರು ಪ್ರದೇಶಗಳು ರಾಜ್ಯಕ್ಕೆ ಆದಾಯವನ್ನು ನೀಡುವ ಮೂಲಗಳಾಗಿದ್ದವು. ಹಾಗಾಗಿ ಇವರು ಸ್ಥಳೀಯ ಅರಸರಿಗೆ ಸ್ಥಳೀಯವಾಗಿ ಸ್ವತಂತ್ರ ಆಡಳಿತ ನಡೆಸಲು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದರು. ಈ ಸ್ಥಳೀಯ ಅರಸರು ವರ್ತಕ ಸಮುದಾಯಗಳೊಂದಿಗೆ ಹಲವು ಒಪ್ಪಂದಗಳನ್ನು ಮಾಡಿಕೊಳ್ಳುವುದರ ಮೂಲಕ ಅವರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ಈ ಹಿನ್ನೆಲೆಯಲ್ಲಿ ಪ್ರಾಂತೀಯ ಮಟ್ಟದ ಕರಾವಳಿ ಬಂದರು ಪ್ರದೇಶಗಳಲ್ಲಿ ಮುಸ್ಲಿಂ ಸಮುದಾಯಗಳು ಸೈನಿಕರಾಗಿ, ಅಧಿಕಾರಿಗಳಾಗಿ, ವಿಜಯನಗರದ ಆಡಳಿತದಲ್ಲಿ ಪರೋಕ್ಷವಾಗಿ ಪಾಲ್ಗೊಂಡಿದ್ದರು. ಅವರಲ್ಲಿ ಪ್ರಮುಖವಾಗಿ ನಖರರು, ಹಂಜಮಾನರು, ಸೆಟ್ಟಿಕರು, ನಾನಾದೇಸಿಗಳು ಮುಂತಾದ ವ್ಯಾಪಾರಿ ಶ್ರೇಣಿಗಳು ಆಡಳಿತದಲ್ಲಿ ಭಾಗಿಗಳಾಗಿದ್ದರು.[೨೫] ಇವುಗಳಲ್ಲಿ ಹಂಜಮಾನ್ ವರ್ತಕ ಸಂಘವು ಮುಸ್ಲಿಂ ವರ್ತಕ ಸಮುದಾಯಗಳ ಪ್ರತಿನಿಧಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿತ್ತು.

ವಿಜಯನಗರದ ಪ್ರಾಂತೀಯ ಆಡಳಿತದಲ್ಲಿ ರಾಜ್ಯಪಾಲರಾಗಿ, ಸೈನಿಕರಾಗಿ, ವರ್ತಕರಾಗಿ ತಮ್ಮ ಪಾತ್ರವನ್ನು ನಿರ್ವಹಿಸಿದ ಹಲವು ಮುಸ್ಲಿಂ ಸಮುದಾಯಗಳ ಪ್ರಮುಖ ದಾಖಲೆಗಳ ವಿವರಗಳು ಈ ಕೆಳಗಿನಂತಿವೆ.

ಕರ್ನಾಟಕದ ಬಾರಕೂರು ಪ್ರಾಂತ್ಯದಲ್ಲಿ ಒಬ್ಬ ಮುಸ್ಲಿಂ ಅಧಿಕಾರಿಯು ವಿಜಯನಗರದ ಆಳ್ವಿಕೆಯ ಸ್ಥಳೀಯ ಪ್ರತಿನಿಧಿಯಾಗಿ ಸೇವೆ ಸಲ್ಲಿಸುತ್ತಿದ್ದ ಎಂಬುದನ್ನು ಕ್ರಿ.ಶ. ೧೫೫೧ರಲ್ಲಿ ಹೊರಡಿಸಿದ ಶಾಸನವು ವಿವರ ನೀಡುತ್ತದೆ.[೨೬] ರಾಮರಾಯ ಹಾಗೂ ಅವನ ಸಹೋದರ ವೆಂಕಟಾದ್ರಿಯ ಅವಧಿಯಲ್ಲಿ ಎಕದಾಲ ಖಾನ್ ಎಂಬ ಮುಸ್ಲಿಂ ಅಧಿಕಾರಿಯನ್ನು ಬಾರಕೂರಿನ ರಾಜ್ಯಪಾಲನಾಗಿ ನೇಮಿಸಲಾಗಿತ್ತು. ಬಾರಕೂರು ರಾಜ್ಯದಲ್ಲಿ ಮುಸ್ಲಿಂ ಅಧಿಕಾರಿಯೊಬ್ಬನು ಉನ್ನತ ಅಧಿಕಾರಿಯಾಗಿ ನೇಮಕವಾಗಿದ್ದ ಅಂಶವನ್ನು ತಿಳಿಸುವ ವಿಜಯನಗರದ ಏಕೈಕ ಶಾಸನ ಇದಾಗಿದೆ.[೨೭]

ಹಾಗೆಯೇ ಈ ಅವಧಿಗೆ ಸಂಬಂಧಿಸಿದ ಪ್ರವಾಸಿ ಕಥನಗಳ ದಾಖಲೆಗಳನ್ನು ಗಮನಿಸಿದಾಗ ಇಬ್-ನೆ-ಬತೂತಾ ಕ್ರಿ.ಶ. ೧೩೪೨ರಲ್ಲಿ ಹೊನ್ನಾವರಕ್ಕೆ ಭೇಟಿ ನೀಡಿದ್ದನು. ಆ ಸಂದರ್ಭದಲ್ಲಿ ಹೊನ್ನಾವರವನ್ನು ಸುಲ್ತಾನ ಜಲಾಲುದ್ದೀನ್ ಎಂಬ ಸ್ಥಳೀಯ ಅರಸನು ಆಡಳಿತ ನಡೆಸುತ್ತಿದ್ದನು. ಇವನು ಒಂದನೇ ಹರಿಹರ ಎಂಬ ಹಿಂದೂ ರಾಜನಿಗೆ ಅಧೀನನಾಗಿದ್ದನು ಎಂದು ಉಲ್ಲೇಖಿಸಿದ್ದಾನೆ.[೨೮]

ವಿಜಯನಗರ ಆಡಳಿತದ ಸಂದರ್ಭದಲ್ಲಿ ವ್ಯಾಪಾರದ ವಲಯದಲ್ಲಿ ಕ್ರಿಯಾಶೀಲರಾಗಿದ್ದ ಹಂಜಮಾನ್ ವರ್ತಕ ಸಂಘದ ಪಾತ್ರವನ್ನು ತಿಳಿಸುವ ಶಾಸನಗಳು ಸಹ ನಮಗೆ ಲಭ್ಯವಾಗಿವೆ. ಕ್ರಿ.ಶ. ೧೪೦೪ರ ಶಾಸನವೊಂದು ಇಲ್ಲಿ ನೆಲೆಸಿದ್ದ ವರ್ತಕ ಸಂಘಗಳು ಹಾಗೂ ಇಲ್ಲಿನ ಸ್ಥಳೀಯ ರಾಜ್ಯಪಾಲರ ನಡುವೆ ಏರ್ಪಟ್ಟ ಸಂಘರ್ಷದ ಕುರಿತು ಉಲ್ಲೇಖಿಸುತ್ತದೆ. ಅದರ ವಿವರಗಳನ್ನು ಹೀಗೆ ಗಮನಿಸಬಹುದಾಗಿದೆ. ಕ್ರಿ.ಶ. ೧೪೦೪ರಲ್ಲಿ ಮಹಾಬಲದೇವ ಎಂಬ ರಾಜ್ಯಪಾಲನು 'ನಖರ-ಹಂಜಮಾನ್ ವ್ಯಾಪಾರಿ ಸಂಘಗಳ ಸೆಟ್ಟಿತನದ ಅನ್ಯಮಾನ್ಯ ಸಮಯ ಸಂಕೇತಗಳನ್ನು ರದ್ದುಗೊಳಿಸಿದ್ದನು. ಇದನ್ನು ಹತ್ತುಕೇರಿಯ ಹಲರು, ಸ್ಥಾನಪತಿ(ಪುರಸಭೆಯ ಅಧ್ಯಕ್ಷ) ಚಿಕ್ಕಣ್ಣನು ಪ್ರತಿಭಟಿಸಿ ವಿಜಯನಗರದ ಅರಸ ಇಮ್ಮಡಿ ಬುಕ್ಕನಿಗೆ ದೂರು ನೀಡಿದನು. ಈ ವಿಚಾರ ಕುರಿತು ಇಮ್ಮಡಿ ಬುಕ್ಕನು ತನಿಖೆ ನಡೆಸಿ ಮಹಾಬಲದೇವ ತಪ್ಪಿತಸ್ಥನೆಂದು ತೀರ್ಮಾನವಾದಾಗ ತೊಂದರೆಗೊಳಗಾದ ವರ್ತಕ ಸಂಘಕ್ಕೆ ಪರಿಹಾರ ನೀಡಲಾಯಿತು.[೨೯] ಈ ಮೇಲಿನ ಉಲ್ಲೇಖಗಳನ್ನು ಗಮನಿಸಿದಾಗ ಸ್ಥಳೀಯ ಮುಸ್ಲಿಂ ವರ್ತಕ ಸಂಘಗಳ ಹಕ್ಕು-ಬಾಧ್ಯತೆಗಳನ್ನು ವಿಜಯನಗರದ ಅರಸರು ರಕ್ಷಿಸುತ್ತಿದ್ದರು. ಇಷ್ಟಾದರೂ ಆಗಾಗ ಮುಸ್ಲಿಂ ವರ್ತಕರು ಹಾಗೂ ಸ್ಥಳೀಯ ರಾಜ್ಯಪಾಲ ರೊಂದಿಗೆ ಯುದ್ಧಗಳು ಸಹ ನಡೆಯುತ್ತಿದ್ದವು ಎಂಬ ಅಂಶವು ಆ ಕಾಲದ ಕೆಲವು ಶಾಸನಗಳ ಮೂಲಕ ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೪೧೮ರಲ್ಲಿ ಮಂಗಳೂರಿನಲ್ಲಿ ರಾಜ್ಯಪಾಲನಾಗಿದ್ದ ತಿಮ್ಮಣ್ಣ ಒಡೆಯ ತನ್ನ ಸೈನ್ಯವನ್ನು ಹಂಜಮಾನ ಮುಸ್ಲಿಂ ವ್ಯಾಪಾರಿ ಸಂಘದ ಮೇಲೆ ಹರಿಯಬಿಟ್ಟು ಅವರ ಪಳ್ಳಿಗಳನ್ನು(ಮಸೀದಿ) ಸುಟ್ಟು ಹಾಕಿದನು.[೩೦] ಸ್ಥಳೀಯ ರಾಜ್ಯಪಾಲನೊಂದಿಗೆ ಪೂರ್ವಮರ್ಯಾದೆಗನುಗುಣವಾಗಿ ಹಂಜಮಾನದವರು ನಡೆದುಕೊಂಡಿದ್ದರೂ ರಾಜ್ಯಪಾಲ ಮುಸ್ಲಿಂ ವರ್ತಕರ ಮೇಲೆ ದಬ್ಬಾಳಿಕೆಯನ್ನು ನಡೆಸಿದ್ದನು.[೩೧] ಇದರಿಂದ ಅಲ್ಲಿನ ಮುಸ್ಲಿಮರು ಊರು ಬಿಟ್ಟು ಹೋದರು. ಈ ವಿಚಾರವು ವಿಜಯನಗರ ಅರಸನಿಗೆ ತಿಳಿದಾಗ, ದಂಡನಾಯಕ ಬೈಚಪ್ಪನಿಗೆ ಸಮಸ್ಯೆಯನ್ನು ಬಗೆಹರಿಸುವಂತೆ ಆಜ್ಞೆ ನೀಡಿದನು. ಈ ಸಮಸ್ಯೆಯಲ್ಲಿ ರಾಜ್ಯಪಾಲ ತಿಮ್ಮಣ್ಣನ ತಪ್ಪು ಬಹಿರಂಗವಾಯಿತು. ಈ ತಪ್ಪಿಗೆ ತಿಮ್ಮಣ್ಣನೇ ಪರಿಹಾರವನ್ನು ನೀಡುವಂತೆ ಸೂಚಿಸಲಾಯಿತು. ತಿಮ್ಮಣ್ಣ ಒಡೆಯನು ಮಂಗಳೂರು ರಾಜ್ಯದ ಕಟ್ಟಾಳೆಯವರಾದ ಬಂಗ, ಚೌಟ, ಅಜಿಲ ಮುಂತಾದ ಸ್ಥಳೀಯ ಅರಸರೊಂದಿಗೆ ಚರ್ಚಿಸಿ ಮಂಗಳೂರಿನಲ್ಲಿ ಜಮಾ ಪಳ್ಳಿ(ಜುಮ್ಮಾ ಮಸೀದಿ)ಗೆ ಧರ್ಮ ಪರಿಹಾರ ನೀಡಿದನು.[೩೨] ಹೀಗೆ ಸ್ಥಳೀಯವಾಗಿ ಹಲವು ಬಾರಿ ಮುಸ್ಲಿಂ ಸಮುದಾಯಗಳಿಗೆ ರಾಜ್ಯಪಾಲರುಗಳಿಂದ ಸಮಸ್ಯೆ

ಅಥವಾ ತೊಂದರೆಗಳು ಸಂಭವಿಸುತ್ತಿದ್ದವು. ಆದರೆ ವಿಜಯನಗರದ ಅರಸರು ಸಾಮ್ರಾಜ್ಯದ ಆರ್ಥಿಕ ಪ್ರಗತಿ ದೃಷ್ಟಿಯಿಂದ ಬಾರಕೂರು ಹಾಗೂ ಮಂಗಳೂರಿನ ರಾಜ್ಯಗಳಲ್ಲಿ ನೆಲೆಸಿದ್ದ ಮುಸ್ಲಿಂ ವರ್ತಕ ಸಮುದಾಯಗಳಿಗೆ ರಕ್ಷಣೆಯನ್ನು ಒದಗಿಸುತ್ತಿದ್ದರು. ಒಟ್ಟಾರೆಯಾಗಿ ವಿಜಯನಗರ ಸಂದರ್ಭದ ಹಲವು ಶಾಸನಗಳು ಕರಾವಳಿ ಭಾಗದಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯಗಳ ಮಾಹಿತಿಯನ್ನು ಒದಗಿಸಿದರೆ, ಸಾಹಿತ್ಯಿಕ ಆಕರಗಳು, ಪ್ರವಾಸಿ ಕಥನಗಳು ವರ್ತಕ ಸಮುದಾಯಗಳ ಹಿತರಕ್ಷಣೆಗೆ ಸೈನ್ಯವ್ಯವಸ್ಥೆಯನ್ನು ಹೊಂದಿದ್ದರು ಎಂಬ ಅಂಶಗಳನ್ನು ತಿಳಿಸುತ್ತವೆ. ಕ್ರಿ.ಶ. ೬ನೇ ಶತಮಾನದಿಂದ ೧೬ನೇ ಶತಮಾನದವರೆಗೆ ಅಂದರೆ ಪೋರ್ಚುಗೀಸರು ಆಗಮಿಸುವವರೆಗೆ ಕರಾವಳಿಯ ಆಂತರಿಕ ಹಾಗೂ ವಿದೇಶಿ ವ್ಯಾಪಾರದ ಮೇಲೆ ತಮ್ಮ ಹಿಡಿತವನ್ನು ಅಥವಾ ವ್ಯಾಪಾರಿ ಏಕಸ್ವಾಮ್ಯವನ್ನು ಮುಸ್ಲಿಂ ಸಮುದಾಯಗಳು ಹೊಂದಿದ್ದವು. ವಿಜಯನಗರ ಕಾಲದಲ್ಲಿ ೧೪೯೮ರಲ್ಲಿ ವಾಸ್ಕೋಡಿಗಾಮನು ಭಾರತಕ್ಕೆ ಜಲಮಾರ್ಗವನ್ನು ಕಂಡುಹಿಡಿದನು. ಆ ನಂತರದಲ್ಲಿ ಮುಸ್ಲಿಂ ವರ್ತಕ ಸಮುದಾಯಗಳ ಹಾಗೂ ವ್ಯಾಪಾರಿ ಬಂದರು ಪ್ರದೇಶಗಳ ಮೇಲೆ ಪೋರ್ಚುಗೀಸರು ತಮ್ಮ ಹಿಡಿತವನ್ನು ಸ್ಥಾಪಿಸಲು ಆರಂಭಿಸಿದರು. ಈ ಅವಧಿಯಲ್ಲಿ ಮುಸ್ಲಿಂ ವರ್ತಕ ಸಮುದಾಯಗಳು ಹಾಗೂ ಪೋರ್ಚುಗೀಸರ ನಡುವೆ ಸಂಘರ್ಷಗಳು ಏರ್ಪಟ್ಟವು. ಅಲ್ಲಿಂದಾಚೆಗೆ ದಕ್ಷಿಣ ಭಾರತದ ಪ್ರಮುಖ ಬಂದರು ಪ್ರದೇಶಗಳಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯಗಳು ವ್ಯಾಪಾರದಲ್ಲಿನ ತಮ್ಮ ಪ್ರಾಬಲ್ಯವನ್ನು ಕಳೆದುಕೊಳ್ಳಲಾರಂಭಿಸಿದವು. ಕೋರಮಂಡಲ ಹಾಗೂ ಮಲಬಾರ್ ಪ್ರಾಂತ್ಯಗಳಲ್ಲಿ ಪೋರ್ಚುಗೀಸರು ಹಾಗೂ ಮುಸ್ಲಿಂ ವ್ಯಾಪಾರಿ ವರ್ಗಗಳ ನಡುವೆ ವ್ಯಾಪಾರ ಏಕಸ್ವಾಮ್ಯಕ್ಕಾಗಿ ಯುದ್ಧಗಳು ಸಂಭವಿಸುತ್ತಿದ್ದವು. ಕ್ರಿ.ಶ. ೧೬ನೇ ಶತಮಾನದಲ್ಲಿ ಮುಸ್ಲಿಂ ವರ್ತಕ ಸಮುದಾಯ ಹಾಗೂ ಯುರೋಪಿಯನ್ನರ ನಡುವೆ ವ್ಯಾಪಾರ ಸಂಘರ್ಷದ ಮಾಹಿತಿಯು ಈ ಕೆಳಗನಂತಿದೆ.

ಪೋರ್ಚುಗೀಸರು ಭಾರತಕ್ಕೆ ಪ್ರವೇಶ ಪಡೆದ ನಂತರ ಅವರು ವ್ಯಾಪಾರಿ ಕೋಠಿಗಳನ್ನು ಅಥವಾ ಪ್ರಮುಖ ಬಂದರು ಪ್ರದೇಶಗಳನ್ನು ವಶಪಡಿಸಿಕೊಂಡು ವ್ಯಾಪಾರದ ಏಕಸ್ವಾಮ್ಯವನ್ನು ಸ್ಥಾಪಿಸುವ ಕಾರ್ಯವನ್ನು ಆರಂಭಿಸಿದನು. ಕ್ರಿ.ಶ. ೧೫೧೦ರಲ್ಲಿ ಪೋರ್ಚುಗೀಸರು ಝಮೊರಿನ್ನನ ಅರಮನೆಯನ್ನು ವಶಪಡಿಸಿಕೊಳ್ಳುವ ಹಂಬಲದಲ್ಲಿದ್ದರೂ, ಅದನ್ನು ವಶಪಡಿಸಿಕೊಳ್ಳುವಲ್ಲಿ ವಿಫಲರಾದರು. ಆ ನಂತರ ಪೊನ್ನಾನಿಗೆ ಬಂದು ಕಡಲ ತೀರದಲ್ಲಿ ನಿಂತಿದ್ದ ಮುಸ್ಲಿಮರ ಮೀನು ಹಿಡಿಯುವ ಹಡಗುಗಳಿಗೆ ಬೆಂಕಿ ಇಟ್ಟರು. ಇವರೊಡನೆ ಸಂಘರ್ಷಣೆಗೆ ಇಳಿದ ಸುಮಾರು ಎಪ್ಪತ್ತು ಮುಸ್ಲಿಮರು ಮರಣವನ್ನು ಹೊಂದಿದ್ದರು.[೩೩] ಪೊನ್ನಾನಿನ ಪಟ್ಟಣದಲ್ಲಿ ಸಾಮಾನ್ಯ ವರ್ಗದಲ್ಲಿ ಕಂಡು ಬರುತ್ತಿದ್ದ ಮುಸ್ಲಿಂ ವರ್ತಕ ಸಮುದಾಯವು ತಮ್ಮ ಹಿತರಕ್ಷಣೆಗೆ ಸೈನಿಕರಾಗಿಯೂ ಕಾರ್ಯ ನಿರ್ವಹಿಸಿದ ಅಂಶವು ಈ ಮೇಲಿನ ಘಟನೆಯು ತಿಳಿಸುತ್ತದೆ. ಪೋರ್ಚುಗೀಸರು ಹಾಗೂ ಮುಸ್ಲಿಂ ವರ್ತಕರ ನಡುವೆ ವ್ಯಾಪಾರಿ ವಲಯದಲ್ಲಿ ಇದ್ದಂತಹ ವ್ಯಾಪಾರಿ ಪೈಪೋಟಿಗಳು ಕೋರಮಂಡಲದ ಅನೇಕ ಬಂದರು ಪಟ್ಟಣಗಳ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿದವು. ಪೋರ್ಚುಗೀಸರು ಸ್ಥಳೀಯ ಮುಸ್ಲಿಂ ಅಧಿಕಾರಿಗಳ ಮೇಲೆ ದಾಳಿಯನ್ನು ಸಹ ಮಾಡಿದರು. ಕ್ರಿ.ಶ. ೧೫೩೭ರಲ್ಲಿ ಪೋರ್ಚುಗೀಸರು

ಇಲ್ಲಿನ ಪರವಣ್ಣ ಪ್ರದೇಶದ ಸ್ಥಳೀಯ ಮುಸ್ಲಿಂ ಅಧಿಕಾರಿಯಾದ ಉಮರ್ ಅಲಿ ಇಬ್ರಾಹಿಮ್ ಮತ್ತು ಅವನ ಮಗ ಕುಟ್ಟಿ ಇಬ್ರಾಹಿಮ್ ಮರಕ್ಕರ್‌ನನ್ನು ಕೊಂದರು. ಇದಕ್ಕೆ ಅವರು ನೀಡಿದ ಕಾರಣ ಅವರು ಪೋರ್ಚುಗೀಸರಿಂದ ವ್ಯಾಪಾರಿ ಪರವಾನಿಗೆ ಪತ್ರವನ್ನು ಪಡೆದಿರಲಿಲ್ಲ ಎಂಬುದಾಗಿತ್ತು. ಈ ಘಟನೆಯು ದಕ್ಷಿಣ ಭಾರತದ ಕಡಲ ತೀರ ಪ್ರದೇಶಗಳಲ್ಲಿನ ವ್ಯಾಪಾರದ ಸಂಘರ್ಷವನ್ನು ವಿವರಿಸಿದರೂ ಇದೇ ಅವಧಿಯಲ್ಲಿ ಮುಸ್ಲಿಂ ಮರಕ್ಕರ್ ಸಮುದಾಯದ ಅಧಿಕಾರಿಯು ಈ ಪ್ರದೇಶವನ್ನು ಆಳ್ವಿಕೆ ನಡೆಸುತ್ತಿದ್ದನು ಎಂಬ ಅಂಶವು ಅಷ್ಟೇ ಮುಖ್ಯವಾಗುತ್ತದೆ.[೩೪]

ಕ್ರಿ.ಶ. ೧೫೪೫ರಲ್ಲಿ ಕಣ್ಣೂರಿನ ಅಬುಬಕರ್ ಅಲಿಯನ್ನು ಪೋರ್ಚುಗೀಸರು ಹತ್ಯೆ ಮಾಡಿದರು. ಇವನೊಂದಿಗೆ ಕುನ್ಹಿ ಸೊಪ್ಪಿ ಎನ್ನುವ ಅವನ ಸಂಬಂಧಿಯ ಕೊಲೆಯು ಆಯಿತು. ಇದರಿಂದ ಕಣ್ಣೂರಿನ ಸ್ಥಳೀಯ ಪ್ರಭುತ್ವ ಹಾಗೂ ಪೋರ್ಚುಗೀಸರ ಮಧ್ಯೆ ಹಲವು ವರ್ಷದವರೆಗೂ ವೈರತ್ವ ಏರ್ಪಟ್ಟಿತ್ತು. ಅನಂತರದಲ್ಲಿ ಇವರಿಬ್ಬರ ನಡುವೆ ಶಾಂತಿ ಒಪ್ಪಂದಗಳು ಏರ್ಪಟ್ಟವು.[೩೫] ಕ್ರಿ.ಶ. ೧೫೫೩ರಲ್ಲಿ ವಿಜಯನಗರವನ್ನು ತುಳುವ ವಂಶದ ರಾಜಪ್ರತಿನಿಧಿಯಾಗಿ ಆಳ್ವಿಕೆ ನಡೆಸುತ್ತಿದ್ದ ರಾಮರಾಯನ ಕಾಲದಲ್ಲಿ ಕೋರಮಂಡಲ ತೀರದ ಕೀಲಕ್ಕರೈ ಬಂದರು ಪಟ್ಟಣದ ಬಳಿ ಪೋರ್ಚುಗೀಸರಿಗೂ ಹಾಗೂ ಅಲ್ಲಿನ ಸ್ಥಳೀಯ ಮುಸ್ಲಿಂ ಸೈನಿಕನಾದ ಅಲಿ ಅಲ್–ರೋಮಿ ನಡುವೆ ಯುದ್ಧ ಸಂಭವಿಸಿ ಈ ಯುದ್ಧದಲ್ಲಿ ಆತನು ಹತನಾದನು. ಈ ಘಟನೆಯು ಕೋರಮಂಡಲದಲ್ಲಿ ವ್ಯಾಪಾರಿ ವರ್ಗಗಳು ತಮ್ಮ ಹಿತರಕ್ಷಣೆಗೆ ಸೈನ್ಯವನ್ನು ಹೊಂದಿದ್ದವು. ಅದರೊಂದಿಗೆ ಇಲ್ಲಿನ ಸ್ಥಳೀಯ ಆಡಳಿತವನ್ನು ಅವರು ವಹಿಸಿಕೊಂಡಿದ್ದರು ಎನ್ನಬಹುದು.[೩೬]

೭.೩. ಸೈನಿಕ ಆಡಳಿತದಲ್ಲಿ ಮುಸ್ಲಿಂ ಸೈನಿಕರು

ಮಧ್ಯಕಾಲೀನ ಸಂದರ್ಭದ ಸಾಮ್ರಾಜ್ಯಗಳಲ್ಲಿ ಅವುಗಳ ಉನ್ನತಿ ಹಾಗೂ ಅವನತಿ ಆ ರಾಜ್ಯದ ಸೈನಿಕ ವ್ಯವಸ್ಥೆ ಮೇಲೆ ನಿರ್ಧರಿಸಲ್ಪಡುತ್ತಿತ್ತು. ಇಲ್ಲಿ ಸೈನ್ಯದ ಮುಖ್ಯವಾದ ಕರ್ತವ್ಯವೆಂದರೆ ರಾಜ್ಯದ ರಕ್ಷಣೆ ಹಾಗೂ ಆ ಸಾಮ್ರಾಜ್ಯದ ವಿಸ್ತರಣೆ. ಹಾಗಾಗಿ ಈ ವೇಳೆಯಲ್ಲಿ ಅಂದಿನ ಅರಸರು ತಮ್ಮ ತಮ್ಮ ಸಾಮ್ರಾಜ್ಯಗಳಿಗೆ ಸದೃಢವಾದ ಸೈನ್ಯವನ್ನು ತಯಾರುಗೊಳಿಸುತ್ತಿದ್ದರು. ಆ ರಾಜ್ಯದ ರಾಜನೇ ಸೈನ್ಯದ ದಂಡನಾಯಕನಾಗಿದ್ದನು. ಹಾಗಾಗಿ ಆ ರಾಜ್ಯದ ಅಳಿವು ಉಳಿವಿಗಾಗಿ ಸೈನಿಕ ವ್ಯವಸ್ಥೆಗೆ ಈತನು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದ್ದನು. ಇದರ ಹಿನ್ನೆಲೆಯಲ್ಲಿ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಸೈನ್ಯದ ನಿರ್ವಹಣೆಗಾಗಿ ಹಲವು ಗ್ರಂಥಗಳು ಇಂದಿಗೂ ನಮಗೆ ಮಾರ್ಗದರ್ಶನವನ್ನು ನೀಡುತ್ತಿವೆ. ಅಂತಹ ಕೃತಿಗಳಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವು ಒಂದು. ಈ ಕೃತಿಯು ಸೈನ್ಯದ ಸಂಘಟನೆ ಕುರಿತು ವಿವರವನ್ನು ಒದಗಿಸುತ್ತದೆ. ಮಧ್ಯಕಾಲೀನ ಸಂದರ್ಭವು ಆಯಾ ರಾಜ್ಯಗಳ ಪ್ರತಿಷ್ಠೆ ಅಥವಾ ದುರ್ಬಲತೆ ಆ ರಾಜ್ಯಗಳು ಹೊಂದಿದ್ದ ಸೈನಿಕರ ಸಾಮರ್ಥ್ಯದ ಮೇಲೆ ನಿಂತಿರುತ್ತಿತ್ತು. ಹಾಗಾಗಿ ಪ್ರತಿ ಸಾಮ್ರಾಜ್ಯವು ಸೈನಿಕರನ್ನು ನೇಮಿಸಿಕೊಳ್ಳುವ ಸಂದರ್ಭದಲ್ಲಿ ಅರ್ಹತೆಯುಳ್ಳ ಸೈನಿಕರನ್ನು ನೇಮಿಸಿಕೊಳ್ಳುತ್ತಿದ್ದರು.

ವಿಜಯನಗರದ ಅರಸರು ಬಲಿಷ್ಠವಾದ ಸೈನಿಕ ವ್ಯವಸ್ಥೆಗೆ ಹಾಗೂ ಸೈನ್ಯ ಪ್ರಾಬಲ್ಯಕ್ಕೆ ಹೆಚ್ಚಿನ ಗಮನ ಹರಿಸಿದ್ದರು. ಏಕೆಂದರೆ ಮಧ್ಯಯುಗೀನ ಕಾಲದ ಯುದ್ಧ ಪರಿಕಲ್ಪನೆಗೆ ಅನುಗುಣವಾದ ಬೃಹತ್ತಾದ ಸುವ್ಯವಸ್ಥಿತವಾದ ವಿವಿಧ ವಿಭಾಗಗಳ ಸೈನ್ಯವನ್ನು ಕಟ್ಟಿ ಬೆಳೆಸಲೇಬೇಕಾಗಿತ್ತು. ದಕ್ಷಿಣ ಭಾರತದಲ್ಲಿ ಕ್ರಿ.ಶ. ೧೩೪೭ರಲ್ಲಿ ಸ್ಥಾಪನೆಯಾದ ಬಹಮನಿ ರಾಜ್ಯವು ಅತ್ಯಂತ ಬಲಾಢ್ಯವಾದ ಸೈನಿಕ ಶಕ್ತಿಯನ್ನು ಹೊಂದಿತ್ತು. ಬಹಮನಿ ರಾಜ್ಯದ ಸೈನ್ಯವ್ಯವಸ್ಥೆಯಲ್ಲಿ ಸಿಡಿಮದ್ದಿನ ಬಳಕೆಯನ್ನು ಮಾಡುತ್ತಿದ್ದರು. ಆದರೆ ವಿಜಯನಗರದ ಸೈನ್ಯವ್ಯವಸ್ಥೆ ನೋಡಿದಾಗ ಇಲ್ಲಿನ ಅರಸರು ತಮ್ಮ ಪೂರ್ವಜರು ಅನುಸರಿಸುತ್ತಿದ್ದ ಸೈನ್ಯದ ನೀತಿ ನಿಯಮಗಳನ್ನು ಅಳವಡಿಸಿಕೊಂಡಿದ್ದರು.

ಬಿ.ಎ. ಸಾಲೆತ್ತೊರೆಯವರು ವಿಜಯನಗರ ಕಾಲದಲ್ಲಿ ಆರು ಸೈನಿಕ ವಿಭಾಗಗಳಿದ್ದವೆಂದು ಹೇಳುತ್ತಾರೆ. "ಕಾಲ್ದಳ, ಅಶ್ವದಳ, ಗಜದಳ, ರಥ ಅಥವಾ ಬಂಡಿಗಳಿಂದ ಕೂಡಿದ ಯುದ್ಧಾಸ್ತ್ರಗಳು, ಒಂಟೆ ಮತ್ತು ಎತ್ತುಗಳನ್ನು ಬಳಸುತ್ತಿದ್ದರು. ನ್ಯೂನಿಜ್ ರಾಯಚೂರಿನ ದಂಡೆಯಾತ್ರೆಯಲ್ಲಿ ಅನೇಕ ಹೇಸರಗತ್ತೆಗಳು, ಕತ್ತೆಗಳು, ಗೂಳಿಗಳು, ಗುಡಾರ ಮತ್ತು ಇತರ ಸಾಮಾನುಗಳನ್ನು ಹೊತ್ತು ಸಾಗುತ್ತಿದ್ದವು" ಎಂದಿದ್ದಾನೆ.[೩೭] ಪ್ರಾಚೀನ ಕಾಲದ ಯುದ್ಧತಂತ್ರಗಳನ್ನು ವಿಜಯನಗರದ ಕಾಲದ ಅರಸರು ಅನುಸರಿಸುತ್ತಿದ್ದರು. ಮುಖಾಮುಖಿ ನಿಂತು ಹೋರಾಡುವ ಯುದ್ಧಪದ್ಧತಿ ಇತ್ತು. ಆದರೆ ಇದರ ಪ್ರತಿಯಾಗಿ ಕೆಲವಾರು ಫರ್ಲಾಂಗುಗಳಷ್ಟು ದೂರದಿಂದ ಶತ್ರು ಪಡೆಯನ್ನು ಧ್ವಂಸ ಮಾಡುವ ಶಕ್ತಿಯನ್ನು ಸಿಡಿಮದ್ದು ಹೊಂದಿತ್ತು. ಈ ಸಿಡಿಮದ್ದನ್ನು ಬಂದೂಕು ಅಥವಾ ಕೋವಿಗಳಿಂದ ಬಳಸಲಾಗುತ್ತಿತ್ತು. ಹಾಗಾಗಿ ಮಧ್ಯಯುಗದ ಚರಿತ್ರೆಯಲ್ಲಿ ವಿಜಯನಗರ ಕಾಲದ ಸೈನ್ಯವ್ಯವಸ್ಥೆಯಲ್ಲಿ ಅನಿವಾರ್ಯವಾಗಿ ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಯಿತು. ವಿಜಯನಗರ ಸೈನ್ಯದಲ್ಲಿ ಕಾಲ್ದಳ, ಅಶ್ವದಳ ಮತ್ತು ಗಜದಳಗಳಿಂದ ಕೂಡಿದ್ದು, ಇದರಲ್ಲಿ ಫಿರಂಗಿ ಪಡೆಯು ಸೇನೆಯ ಒಂದು ಭಾಗವಾಗಿ ಸೇರಿಕೊಂಡಿತ್ತು. ಹಾಗಾಗಿ ವಿಜಯನಗರ ಸೈನ್ಯವ್ಯವಸ್ಥೆಯಲ್ಲಿ ನಾಲ್ಕು ವಿಭಾಗಗಳಿಂದ ಕೂಡಿದ ಸೈನ್ಯವ್ಯವಸ್ಥೆ ಇತ್ತು. ಅದಕ್ಕೆ ಪೋಷಕ ಅಥವಾ ಸಹಾಯಕ ಸೈನ್ಯಕ್ಕೆ ಒಂಟೆ ಮತ್ತು ಎತ್ತುಗಳನ್ನು ಯುದ್ಧದಲ್ಲಿ ಬಳಸುತ್ತಿದ್ದರು.

ವಿಜಯನಗರದ ಸೈನಿಕ ಶಕ್ತಿಯ ಪ್ರಮಾಣವನ್ನು ಅರಿಯಲು ವಿಜಯನಗರ ಕಾಲದ ಫೆರಿಸ್ತಾನ ಹೇಳಿಕೆಗಳು ಸಹಾಯಕವಾಗಿವೆ. ವಿಜಯನಗರದ ಸೈನ್ಯವು ಬೃಹತ್ ಪ್ರಮಾಣದಲ್ಲಿತ್ತು. ಕ್ರಿ.ಶ. ೧೩೬೬-೬೮ರಲ್ಲಿ ನಡೆದ ಯುದ್ಧದ ವಿವರಣೆ ನೀಡುತ್ತಾ ಈ ಯುದ್ಧದಲ್ಲಿ ವಿಜಯನಗರ ಮತ್ತು ಬಹಮನಿಯ ಸೇನಾವ್ಯವಸ್ಥೆಯನ್ನು ತಿಳಿಸಿದ್ದಾನೆ. "ಮಹಮ್ಮದ ಶಹನ ಸೈನ್ಯದಲ್ಲಿ ೩೦,೦೦೦ ಅಶ್ವಗಳು, ೨,೦೦೦ ಆನೆಗಳು ಮತ್ತು ೧೦,೦೦,೦೦೦ ಕಾಲಾಳುಗಳಿದ್ದವು. ವಿಜಯನಗರದಲ್ಲಿ ೫೦,೦೦,೦೦೦ ಕಾಲಾಳುಗಳಿತ್ತು. ಹಾಗೆಯೇ ೪೦,೦೦೦ ಅಶ್ವಗಳನ್ನು ಹೊಂದಿತ್ತು ಎಂದು ಹೇಳುತ್ತಾನೆ".[೩೮] ವಿಜಯನಗರ ಸೈನ್ಯವು ಬಹಮನಿ ಸೈನ್ಯಕ್ಕಿಂತ ಅಧಿಕವಾಗಿತ್ತು ಎಂದು ಈ ಉಲ್ಲೇಖದಿಂದ ತಿಳಿಯುತ್ತದೆ.

ಪರ್ಷಿಯಾದ ಪ್ರವಾಸಿ ಅಬ್ದುಲ್ ರಜಾಕ್‌ನು ಎರಡನೇ ದೇವರಾಯನ ಕಾಲದ ಸೇನೆಯ ಪ್ರಮಾಣವನ್ನು ವಿವರಿಸುತ್ತಾ "ಸಾವಿರಕ್ಕಿಂತ ಅಧಿಕ ಆನೆಗಳು ಮತ್ತು ಹನ್ನೊಂದು ಲಕ್ಷ ಸೈನಿಕರಿದ್ದಾರೆ"[೩೯] ಎಂದಿದ್ದಾನೆ. ಇದರಿಂದ ವಿಜಯನಗರದ ಸೈನಿಕ ಬಲವು ಎಷ್ಟಿತ್ತೆಂದು ಗೊತ್ತಾಗುತ್ತದೆ.

ಕೃಷ್ಣದೇವರಾಯನ ಸೇನಾಬಲವನ್ನು ಡೋಮಿಂಗೊ ಪಾಯೆಸ್ ಈ ರೀತಿ ತಿಳಿಸುತ್ತಾನೆ– "ಯುದ್ಧಕ್ಕೆ ಸಿದ್ಧವಾದ ಒಟ್ಟು ದಶಲಕ್ಷ ಸೈನ್ಯವಿದೆ. ಅದರಲ್ಲಿ ೩೫,೦೦೦ ಶಸ್ತ್ರಸಜ್ಜಿತ ಅಶ್ವದಳವೂ ಸೇರಿದೆ. ಅವನು ಮುಂದುವರಿದು ಸಮುದ್ರ ದಡದ ಒಂದು ಸ್ಥಳಕ್ಕೆ ಸೈನ್ಯವನ್ನು ಕಳುಹಿಸಿದನು. ಆ ಸೈನ್ಯದಲ್ಲಿ ೫೦ ದಳವಾಯಿಗಳು, ಒಂದೂವರೆ ಲಕ್ಷ ಸಿಪಾಯಿಗಳು ಇದ್ದರು. ರಾಜನು ನೆರೆಹೊರೆಯ ಶತ್ರುಗಳಿಗೆ ತನ್ನ ಶಕ್ತಿ ಎಷ್ಟೆಂಬುದನ್ನು ತೋರಿಸಲು ಎರಡು ದಶಲಕ್ಷ ಸೈನ್ಯವನ್ನು ಯುದ್ಧರಂಗಕ್ಕೆ ಕಳುಹಿಸುತ್ತಾನೆ. ಈ ಕಾರಣ ಶತ್ರುಗಳು ಇವನಿಗೆ ಬಹಳ ಹೆದರುತ್ತಾರೆ"[೪೦] ಎಂದಿದ್ದಾನೆ. ಕೃಷ್ಣದೇವರಾಯನ ಸೈನ್ಯಬಲವನ್ನು ಸಹ ಇಲ್ಲಿಯೇ ಅರಿಯಬಹುದು.

'ಕೃಷ್ಣರಾಜ ವಿಜಯಮು' ಎನ್ನುವ ಸಾಹಿತ್ಯ ಕೃತಿಯು "ಕೃಷ್ಣದೇವರಾಯನ ಸೈನ್ಯದಲ್ಲಿ ೬,೦೦,೦೦೦ ಕಾಲ್ದಳ, ೬,೬೦೦ ಕುದುರೆಗಳು ಮತ್ತು ೩೦೦೦ ಆನೆಗಳು ಇದ್ದವು ಎಂಬುದನ್ನು ತಿಳಿಸುತ್ತದೆ."[೪೧]

ಫೆರಿಸ್ತಾನು ರಕ್ಕಸಗಿ ತಂಗಡಿಯ ಯುದ್ಧದಲ್ಲಿ ಭಾಗವಹಿಸಿದ ಸೇನಾವ್ಯವಸ್ಥೆಯ ಬಗ್ಗೆ ತಿಳಿಸುತ್ತಾ "ವಿಜಯನಗರದಲ್ಲಿ ೯,೦೦,೦೦೦ ಕಾಲ್ದಳ, ೪೫,೦೦೦ ಅಶ್ವದಳ, ೨೦೦೦ ಆನೆಗಳು ಮತ್ತು ೧೫,೦೦೦ ಪೋಷಕ ಸೈನಿಕರು ಇದ್ದರು ಎಂದು ಹೇಳಿದ್ದಾನೆ."[೪೨] ವಿಜಯನಗರ ಇಂತಹ ಬೃಹತ್ ಸೈನ್ಯವನ್ನು ಹೊಂದಿದ್ದನ್ನು ನೋಡಿದಾಗ ಶತ್ರುಗಳೊಂದಿಗೆ ಕಾದಾಡಲು ಎಷ್ಟರಮಟ್ಟಿಗೆ ಅದು ಅನಿವಾರ್ಯವಾಗಿತ್ತೆಂಬುದನ್ನು ತಿಳಿಯಬಹುದು.

ವಿಜಯನಗರದ ಅರಸರು ನೆರೆಯ ವೈರಿಗಳನ್ನು ಸಹ ಎದುರಿಸಬೇಕಾಗಿತ್ತು. ಬಹಮನಿಯರು ಪದೇ ಪದೇ ವಿಜಯನಗರದ ಮೇಲೆ ಆಕ್ರಮಣವನ್ನು ಮಾಡುತ್ತಿದ್ದರು. ಬಹಮನಿಯರು ಮೊದಲ ಬಾರಿಗೆ ವಿಜಯನಗರದ ಮೇಲೆ ಆಕ್ರಮಣ ಮಾಡಿದಾಗ ಸಿಡಿಮದ್ದನ್ನು ಬಳಸಿದರು. ಹಾಗಾಗಿ ವಿಜಯನಗರದ ಬೃಹತ್ ಪ್ರಮಾಣದ ಸೈನ್ಯಕ್ಕಿಂತ ಕಡಿಮೆ ಸೈನ್ಯ ಹೊಂದಿದ ಬಹಮನಿ ಸೇನೆ ವಿಜಯನಗರದ ಮೇಲೆ ವಿಜಯವನ್ನು ಸಾಧಿಸುತ್ತಿತ್ತು. ಈ ಕಾರಣದಿಂದ ವಿಜಯನಗರ ಅರಸರು ಪ್ರಾಚೀನ ಯುದ್ಧತಂತ್ರದ ಬದಲಿಗೆ ಹೊಸ ಯುದ್ಧತಂತ್ರಗಳನ್ನು ಕಲಿಯಲು ಬೇರೆ ರೀತಿಯ ಯೋಜನೆಗಳನ್ನು ಜಾರಿಗೆ ತಂದರು. ಮುಖ್ಯವಾಗಿ ಅವರು ಸೈನ್ಯವ್ಯವಸ್ಥೆಯಲ್ಲಿ ಮಾರ್ಪಾಡುಗಳನ್ನು ಮಾಡಿದರು. ಸೇನಾಬಲದ ವಿಂಗಡಣೆಯಲ್ಲಿ ಮುಖ್ಯ ನಾಲ್ಕು ಭಾಗಗಳಾದ ಕಾಲ್ದಳ, ಅಶ್ವದಳ, ಗಜದಳ ಮತ್ತು ಫಿರಂಗಿದಳದಲ್ಲಿ ಮಾರ್ಪಾಡುಗಳನ್ನು ತಂದು ವಿಜಯನಗರದ ಬಲಿಷ್ಠವಾದ ಸೇನೆಯನ್ನು ಸುಸಜ್ಜಿತಗೊಳಿಸಿದರು. ಈ ವ್ಯವಸ್ಥೆಯಲ್ಲಿ ಮುಖ್ಯವಾಗಿ ಮುಸ್ಲಿಮರು ಯುದ್ಧಕೌಶಲ್ಯವನ್ನು

ಹೊಂದಿದ್ದರು. ವಿಶೇಷ ಬಿಲ್ಲುಗಾರರನ್ನು ಮತ್ತು ಅಶ್ವದಳವನ್ನು ವಿಜಯನಗರದ ಅರಸರು ನೇಮಿಸಿಕೊಂಡರು. ವಿಜಯನಗರ ಸೈನ್ಯಕ್ಕೆ ಹೊಸ ಹೊಸ ಯುದ್ಧತಂತ್ರಗಳ ಬಗ್ಗೆ ತರಬೇತಿ ನೀಡಿ ಸುಸಜ್ಜಿತ ಸೈನ್ಯವನ್ನು ತಯಾರು ಮಾಡಿದರು. ಹೀಗಾಗಿ ವಿಜಯನಗರ ಸಾಮ್ರಾಜ್ಯದ ಬಲವನ್ನು ವೃದ್ಧಿಸುವಲ್ಲಿ ಮುಸ್ಲಿಂ ಸೈನಿಕರ ಪಾತ್ರ ಮಹತ್ವದ್ದಾಗಿದೆ.

ಕಾಲ್ದಳ

ವಿಜಯನಗರ ಕಾಲದಲ್ಲಿ ಬೃಹತ್ ಪ್ರಮಾಣದ ಕಾಲ್ದಳವಿತ್ತೆಂದು ಹೇಳಬಹುದು. ನೆಲದ ಮೇಲೆ ನಿಂತು ಹೋರಾಡುತ್ತಿದ್ದ ಯೋಧರ ಪಡೆಗೆ 'ಕಾಲಾಳು'ಗಳೆಂದು ಕರೆಯಲಾಗಿದೆ. ಅದರಂತೆ "ಆನೆ, ಕುದುರೆಗಳ ಮೇಲೆ ಕುಳಿತು ಹೋರಾಡುವ ಸೈನಿಕರನ್ನು 'ಮೇಲಾಳು'ಗಳೆಂದು ಶಾಸನಗಳು ಹೆಸರಿಸಿವೆ."[೪೩]

ಅದೇ ರೀತಿ ವಿಜಯನಗರದಲ್ಲಿ ಶೌರ್ಯ ಪರಾಕ್ರಮಗಳನ್ನು ಬಿಂಬಿಸುವ ವೀರಯೋಧರಿದ್ದುದನ್ನು ನಂಜುಂಡ ಕವಿಯ 'ರಾಮನಾಥ ಚರಿತ' ಕೃತಿಯು ತಿಳಿಸುತ್ತದೆ.

"ಭೀತಿಯೆಂಬುದು ಕರಿದೋ ಬಿಳಿದೋ ತಣ್ಪೋ
ಮಾತೇನುರಿಯೋ ಪೇಳೆಂದು
ಭೂತಳಾಧಿಪನನಂಜದೆ ಬೆಸಗೊಂಬ ನಿ
ರ್ಭೀಡ ಸುಭಟರಿರುತಿಹರು"[೪೪] ಎಂದು ಉಲ್ಲೇಖಿಸಿರುವುದು ಗಮನಾರ್ಹ.

ವಿಜಯನಗರದ ಎಲ್ಲಾ ಅರಸರು ಬೃಹತ್ ಪ್ರಮಾಣದ ಕಾಲ್ದಳವನ್ನು ಹೊಂದಿದ್ದರು. ಫೆರಿಸ್ತಾನು ಕಾಲ್ದಳದ ಕುರಿತು ಕ್ರಿ.ಶ. ೧೩೬೬-೬೮ರಲ್ಲಿ ಒಂದು ಲಕ್ಷವಿತ್ತೆಂದು ಹೇಳಿದ್ದಾನೆ. ೧೪೨೦ರಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ನಿಕೋಲೋ ಕೊಂಟಿಯು ೯೦,೦೦೦ವೆಂದು, ಅಬ್ದುಲ್ ರಜಾಕ್ ೧೧ ಲಕ್ಷವಿತ್ತೆಂದು ಹೇಳಿದ್ದಾನೆ.

೧೪೪೫ರಲ್ಲಿದ್ದ ಕಾಲ್ದಳವನ್ನು ಫೆರಿಸ್ತಾ ವಿವರಿಸುತ್ತಾ ೬೨,೦೦೦ ಬಿಲ್ಗಾರರಿದ್ದು, ಇವರಲ್ಲಿ ೨,೦೦೦ ಮುಸ್ಲಿಮರಿದ್ದಾರೆಂದು ಹೇಳುತ್ತಾ ಒಟ್ಟು ಎರಡು ಲಕ್ಷವಿತ್ತೆಂದು ತಿಳಿಸಿದ್ದಾನೆ. ಎರಡನೇ ದೇವರಾಯನು ಕ್ರಿ.ಶ. ೧೪೩೦ ರಲ್ಲಿ ೧೦,೦೦೦ ತುರ್ಕರನ್ನು ನೇಮಕ ಮಾಡಿದನು. ಈ ಸೈನಿಕರು ಇರಾನಿಯನ್ ಹಾಗೂ ತುರ್ಕ್ ಮೂಲದವರಾಗಿದ್ದರು. ಇವರೇ ಮುಂದೇ ದಖ್ಖನಿ ಮುಸ್ಲಿಂ ಸೈನಿಕರಾಗಿ ಗುರುತಿಸಿಕೊಂಡರು. ಈ ಸೈನಿಕರಲ್ಲಿ ಉನ್ನತ ಹುದ್ದೆಯನ್ನು ಪಡೆದ ೨೦೦೦ ಮುಸ್ಲಿಂ ಸೈನಿಕರಿಗೆ ಜಹಗೀರು ಪ್ರದೇಶಗಳನ್ನು ನೀಡಲಾಯಿತು. ಈ ಜಹಗೀರು ಪಡೆದ ಸೈನಿಕರು ವಿಜಯನಗರದ ಸುಮಾರು ೬೦,೦೦೦ ಹಿಂದೂ ಸೈನಿಕರಿಗೆ ಕುದುರೆ ಬಿಲ್ಗಾರರ ತರಬೇತಿಯನ್ನು ನೀಡುತ್ತಿದ್ದರು.

ಈ ವಿಜಯನಗರದ ಸೈನ್ಯವನ್ನು ನೇಮಕ ಮಾಡಿಕೊಳ್ಳುವಾಗ ಯಾವುದೇ ನಿರ್ಬಂಧನೆಗಳಿರಲಿಲ್ಲ. ಎಲ್ಲಾ ವರ್ಗದವರನ್ನು ಸೈನ್ಯದಲ್ಲಿ ಭರ್ತಿ ಮಾಡಲಾಗುತ್ತಿತ್ತು. ಹರಿಹರ, ಬುಕ್ಕನ ಕಾಲದಿಂದಲೂ ಸೈನ್ಯದಲ್ಲಿ ಜಾತಿವರ್ಗಗಳ ಭೇದ-ಭಾವವಿಲ್ಲದೆ ಯೋಗ್ಯ, ಸಮರ್ಥರಾದ ಯೋಧರನ್ನು ಆರಿಸಿ ಕೊಳ್ಳಲಾಗುತ್ತಿತ್ತು. ನಾನಾ ಕಡೆಗಳಿಂದ ವಿಜಯನಗರಕ್ಕೆ ಬಂದು ಸೈನ್ಯ ಸೇರಿದ ಸರದಾರರಿಗೆ ತಮ್ಮ ತಮ್ಮ ಮತಾನುಸಾರ ನಡೆದುಕೊಳ್ಳುವುದಕ್ಕೆ ಯಾವ ಅಡ್ಡಿ ಆತಂಕಗಳಿರಲಿಲ್ಲ ಎಂದು ತಿಳಿಸಿದ್ದಾನೆ. ಈ ಹೇಳಿಕೆಯನ್ನು ಬಾರ್ಬೋಸ್ ಗಮನಿಸಿದಾಗ ವಿಜಯನಗರ ಅರಸರು ರಾಜಕೀಯ ಉದ್ದೇಶ ಈಡೇರಿಕೆಗೆ ಧರ್ಮವನ್ನು ಅಡ್ಡಿ ತರುತ್ತಿರಲಿಲ್ಲ. ರಾಜ್ಯದ ಭದ್ರತೆ ಮತ್ತು ವಿಸ್ತರಣೆ ಯಾವುದೇ ಧರ್ಮದ ವ್ಯಕ್ತಿಯಾಗಿರಲಿ ಅರ್ಹ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು.[೪೫]

ಪಾಯೆಸ್ ಹೇಳುವಂತೆ "ವಿಜಯನಗರ ಪಟ್ಟಣದ ಬೀದಿಯ ಕೊನೆಯಲ್ಲಿ ಮೂರರು (ಮುಸ್ಲಿಮರು) ವಾಸ ಮಾಡುವ ಮನೆಗಳಿವೆ... ಇವರಲ್ಲಿ ಅನೇಕ ಜನ ರಾಜನ ರಕ್ಷಣಾ ಸೈನ್ಯದಲ್ಲಿದ್ದು, ಸಂಬಳ ಪಡೆಯುತ್ತಿದ್ದಾರೆ ಎಂದಿದ್ದಾನೆ. ಅಲ್ಲದೆ ಬಿಲ್ಲುಗಾರರ ಬಗೆಗೆ ಹೇಳುತ್ತಾ ಇವರಲ್ಲಿ ಮೂರರು ತಮ್ಮ ತಮ್ಮ ಆಯುಧಗಳೊಡನೆ ಇದ್ದರೆಂಬುದನ್ನು ಮರೆಯಬಾರದು ಎನ್ನುವ ಮಾತುಗಳು ಎಲ್ಲಾ ಜಾತಿ ವರ್ಗಗಳಿಗೆ ಸೈನ್ಯದಲ್ಲಿ ಪ್ರಾತಿನಿಧ್ಯ ನೀಡಿದ್ದನ್ನು ದೃಢಗೊಳಿಸುತ್ತವೆ. ಈ ಬೀದಿಯು 'ಪಾನ್‌ಸುಪಾರಿ ಬಜಾರ್' ಎಂದೇ ಪ್ರಸಿದ್ಧವಾಗಿದೆ. "ಈ ಬಜಾರದ ಕೊನೆಯಲ್ಲಿ ಶೃಂಗಾರದ ಹೆಬ್ಬಾಗಿಲಿದ್ದು, ಇದರಾಚೆಗೆ ಇದ್ದ ವಾಸಸ್ಥಳವನ್ನು 'ಗೋರಿಕೆಳಗಣ ಗ್ರಾಮ'ವೆಂದು ಶಾಸನಗಳು ಹೇಳಿವೆ. ಈ ಗ್ರಾಮವೇ ಮುಸ್ಲಿಮರ ತಾಣವಾಗಿತ್ತು." ಅದಕ್ಕೆ ಆಧಾರವೆಂದರೆ ಅಲ್ಲಿ ದೊರೆತಿರುವ ಗುಂಬಜ್, ಕಟ್ಟಿಗೆ ಅಹಮದ್‌ಖಾನ್ ಕಟ್ಟಿಸಿರುವ ಧರ್ಮಶಾಲೆ(ಮಸೀದಿ).[೪೬]

ಎರಡನೇ ದೇವರಾಯನ ಕಾಲಾವಧಿಯಲ್ಲಿ ವಿಜಯನಗರ ಹಾಗೂ ಬಹಮನಿ ಸುಲ್ತಾನರ ನಡುವೆ ಸಾಕಷ್ಟು ಘರ್ಷಣೆಗಳು ಸಂಭವಿಸುತ್ತಿದ್ದವು. ಕ್ರಿ.ಶ. ೧೪೩೬ರಲ್ಲಿ ಅಹಮ್ಮದ್ ಶಾಹ ತೀರಿಕೊಂಡ ನಂತರ ಅವನ ಮಗ ೨ನೇ ಅಲ್ಲಾವುದ್ದೀನ್ ರಾಜ್ಯದ ಸೂತ್ರಗಳನ್ನು ವಹಿಸಿಕೊಂಡನು. ೧೪೩೬ ಮತ್ತು ೧೪೪೩ರಲ್ಲಿ ಎರಡು ಸಾರಿ ಯುದ್ಧದಲ್ಲಿ ಅಲ್ಲಾವುದ್ದೀನನು ವಿಜಯನಗರ ಸೈನ್ಯವನ್ನು ಸೋಲಿಸಿ ಮುದಗಲ್ ಕೋಟೆ ವಶಪಡಿಸಿಕೊಂಡನು.[೪೭] ಮೂರನೆಯ ಬಾರಿಗೆ ಮತ್ತೆ ಅಲ್ಲಾವುದ್ದೀನನು ದೇವರಾಯನ ಮೇಲೆ ಯುದ್ಧಕ್ಕೆ ಬಂದನು. ಇಲ್ಲಿ ಎರಡನೇ ದೇವರಾಯ ಸೋಲನ್ನು ಅನುಭವಿಸಿದನು. ಈ ಸೋಲಿಗೆ ಕಾರಣವೇನು ಎಂದು ದೇವರಾಯ ಆಲೋಚನೆ ಮಾಡಿದಾಗ ತನ್ನ ಸೈನ್ಯದ ದುರ್ಬಲತೆಯು ತಿಳಿಯುತ್ತದೆ. ದುರ್ಬಲ ಅಶ್ವದಳ ಹಾಗೂ ಅವನ ಸೈನ್ಯದ ಬಿಲ್ಲುಗಾರರು ಈ ಸೋಲಿಗೆ ಕಾರಣವೆಂದು ತಿಳಿದ ಈತ ತನ್ನ ಸೈನ್ಯಕ್ಕೆ ತರಬೇತಿ ನೀಡಲು ಬಹಮನಿಯ ಬಿಲ್ಲುಗಾರರನ್ನು ಕರೆಯಿಸಿಕೊಂಡನು. ಅರಸ ತನ್ನ ಬಿಲ್ಲುಗಾರರಿಗೆ ಬಹಮನಿಯ ಬಿಲ್ಲುಗಾರರಿಂದಲೇ ಒಳ್ಳೆಯ ತರಬೇತಿ ದೊರಕುವಂತೆ ಮಾಡಿದನು. ೨೦೦೦ ಮುಸ್ಲಿಂ ಬಿಲ್ಲುಗಾರರು, ೬೦,೦೦೦ ಹಿಂದೂ ಬಿಲ್ಲುಗಾರರಿದ್ದರು. ೮,೦೦೦ ಅಶ್ವದಳ, ೩ ಲಕ್ಷ

ಪದಾತಿ ಪಡೆಗಳಿಂದ ಸುಸಜ್ಜಿತವಾಗಿ ಅಲ್ಲಾವುದ್ದೀನ್ ಮೇಲೆ ಯುದ್ಧಕ್ಕೆ ಹೋದನು ಎನ್ನಲಾಗುತ್ತಿದೆ ಯಾದರೂ ಈ ಮಾಹಿತಿ ಸುಳ್ಳೆಂದು ಹೇಳಲಾಗಿದೆ.

ಅಲ್ಲಾವುದ್ದೀನನು ಬಹಮನಿ ಸಿಂಹಾಸನಕ್ಕೆ ಬರುವುದಕ್ಕಿಂತ ಮೊದಲೇ ವಿಜಯನಗರ ಸೈನ್ಯದಲ್ಲಿ ೧೦,೦೦೦ ಟರ್ಕಿ ಯೋಧರಿದ್ದರು.[೪೮] ಒಟ್ಟಾರೆಯಾಗಿ ಮುಸ್ಲಿಂ ಸೈನ್ಯ ವಿಜಯನಗರ ಸಾಮ್ರಾಜ್ಯದ ಭದ್ರತೆಗೆ ಅವಶ್ಯಕತೆ ಇದ್ದುದ್ದರಿಂದ ಅವರನ್ನು ಸೈನ್ಯದಲ್ಲಿ ನೇಮಿಸಿಕೊಳ್ಳಲಾಯಿತು.

ನಂಜುಂಡ ಕವಿಯ ರಾಮನಾಥ ಚರಿತವು ವಿಜಯನಗರ ಸೈನ್ಯದಲ್ಲಿ ಬೇರೆ ಬೇರೆ ಜಾತಿಯ ಯೋಧರಿದ್ದರೆಂದು ಹೇಳುತ್ತದೆ. "ಅಲ್ಲಿ ಉಲ್ಲೇಖವಾದ ಹೊಲೆಯರ ಹುಳ್ಳ, ಮಾದಿಗರ ಹಂಪ, ಕಾಳಾಂಜಿಯ ಕಂಪ, ಅಕ್ಕಸಾಲಿಯ ಚಿಕ್ಕ, ಕೊಳ್ಳಿಯ ನಾಗ, ದೇವಿಸೆಟ್ಟಿಯ ಲಿಂಗ, ಭಂಡಾರಿ ಸಾವಣ, ಹಡಪದ ಬಲ್ಲುಗ, ಗಿಂಡಿಯ ಲಕ್ಕ ಮತ್ತು ಒಕ್ಕಲಿಗರ ಸಾಗಣ ಮೊದಲಾದ ಜಾತಿ-ವೃತ್ತಿಗಳವರು ಸೈನ್ಯದಲ್ಲಿದ್ದುದ್ದನ್ನು ಕಾಣಬಹುದು."[೪೯] ಈ ರೀತಿ ವಿಜಯನಗರದಲ್ಲಿ ಮುಖ್ಯವಾಗಿ ಧರ್ಮ, ಜಾತಿ ವರ್ಗಗಳಿಗೆ ಪ್ರಾಮುಖ್ಯತೆ ನೀಡದೆ ಅರ್ಹತೆಯನ್ನು ಪರಿಗಣಿಸಿ ನೇಮಿಸಿಕೊಳ್ಳುತ್ತಿದ್ದರು.

ಹೀಗೆ ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಯೋಧರು ಸಾಮ್ರಾಜ್ಯದ ಅಭ್ಯುದಯದಲ್ಲಿ ತಮ್ಮದೇ ಆದ ಪಾತ್ರವನ್ನು ವಹಿಸಿದ್ದರು. ಅಂತೆಯೇ ಎರಡನೇ ದೇವರಾಯನು ಅಷ್ಟೇ ಅವರಿಗೆ ಸಮಾನ ನಾಗರಿಕ ಸ್ವಾತಂತ್ರ್ಯವನ್ನು ನೀಡಿದ್ದನು.

ಅಶ್ವದಳ

ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಕುದುರೆಗಳ ಬಳಕೆಗೆ ಪ್ರಾಮುಖ್ಯತೆ ದೊರೆಯಿತು. ಇದಕ್ಕೆ ಕಾರಣ ಮುಸ್ಲಿಂ ಸುಲ್ತಾನರು. ಅಲ್ಲಾವುದ್ದೀನ್ ಖಿಲ್ಜಿ ಮತ್ತು ಮಹಮ್ಮದ್-ಬಿನ್ ತುಘಲಕ್‌ನು ದಕ್ಷಿಣ ಭಾರತದ ಮೇಲೆ ದಂಡೆಯಾತ್ರೆಯನ್ನು ಕೈಗೊಂಡಿದ್ದು ಇವೆಲ್ಲದಕ್ಕೂ ಕಾರಣವಾಗಿದೆ. ಕರ್ನಾಟಕದ ಸೈನ್ಯವ್ಯವಸ್ಥೆಯಲ್ಲಿ ಕುದುರೆಗಳ ಪರಿಚಯ ಮುಸ್ಲಿಮರಿಂದ ಆಯಿತೆನ್ನಬಹುದು. ಹಾಗಾಗಿ ಯುದ್ಧದಲ್ಲಿ ಕುದುರೆಗಳನ್ನು ಹೊಯ್ಸಳರು, ಯಾದವರು ಮತ್ತು ವಿಜಯನಗರ ಹಾಗೂ ಬಹಮನಿ ಸಾಮ್ರಾಜ್ಯದ ಅರಸರು ಬಳಸಿಕೊಂಡರು. ಈ ಸಂದರ್ಭದಲ್ಲಿ ಸಾಮ್ರಾಜ್ಯಗಳ ಅಳಿವು-ಉಳಿವಿನ ನಿರ್ಧಾರಗಳಿಗೆ ಕುದುರೆಗಳ ಬಳಕೆ ಅನಿವಾರ್ಯವಾಗಿತ್ತು. ಗಜದಳದ ಬದಲಿಗೆ ಅತಿ ಹೆಚ್ಚು ಪ್ರಭಾವ ಬೀರಿದ್ದು ಕುದುರೆಗಳು. ಆದರೆ ಮೌರ್ಯರ ಕಾಲದಿಂದಲೂ ಈ ಕುದುರೆಗಳ (ಅಶ್ವಬಲದ) ಉಪಯೋಗವನ್ನು ಕಾಣುತ್ತೇವೆ. ವಿಜಯನಗರ ಕಾಲದಲ್ಲಿ ಅಶ್ವಬಲದ ಬಳಕೆಗೆ ಹಿಂದೆಂದಿಗಿಂತಲೂ ಹೆಚ್ಚಿನ ಪ್ರಾಮುಖ್ಯತೆ ದೊರಕಿತ್ತು. ಏಕೆಂದರೆ ಸಮಕಾಲೀನ ಶತ್ರು ಸೈನ್ಯದ ಅಶ್ವಬಲವು ವಿಜಯನಗರ ಪೂರ್ವದ ಕುದುರೆಗಳಿಗಿಂತ ಉತ್ತಮ ಮಟ್ಟದ್ದಾಗಿತ್ತು. ವಿಜಯನಗರದ ಅರಸರು ಉತ್ತಮ ಕುದುರೆಗಳನ್ನು ಪರ್ಶಿಯಾ ಮತ್ತು ಅರಬ್ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತಿದ್ದರು. ಒಂದನೇ ಬುಕ್ಕರಾಯನ ಕಾಲದ ಅಶ್ವಪಡೆಯ ಬಗ್ಗೆ ಶಾಸನ ಉಲ್ಲೇಖಿಸುತ್ತಾ

"ಹೊನ್ನ ಕೊಟ್ಟು ಕುದುರೆಯ ಕೊಂಬ ಮಾಂಡಲಿಕರ ಗಂಡ"[೩೦]ನೆಂದು ಬಿರುದು ಇದೆ. ಅಂದರೆ ಹೊರದೇಶಗಳಿಂದ ಮಾಂಡಲಿಕರನ್ನು ಒಳಗೊಂಡಂತೆ ಕುದುರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು.

ವಿಜಯನಗರ ಕಾಲದಲ್ಲಿ ಅಶ್ವಸೈನ್ಯ ಬದಲಾವಣೆಗೆ ಅತಿಮುಖ್ಯ ಕಾರಣವೆಂದರೆ, ಮುಸ್ಲಿಮರ ರಾಜ್ಯದೊಂದಿಗೆ ಯುದ್ಧದಲ್ಲಿ ವಿಜಯನಗರದ ಅರಸರು ಸೋಲು ಅನುಭವಿಸುತ್ತಿದ್ದದ್ದು. ಫೆರಿಸ್ತಾನ ಉಲ್ಲೇಖದಂತೆ ಕ್ರಿ.ಶ. ೧೪೪೨ರಲ್ಲಿ ನಡೆದ ವಿಜಯನಗರ ಮತ್ತು ಬಹಮನಿ ಸುಲ್ತಾನರ ನಡುವಿನ ಹೋರಾಟದಲ್ಲಿ ವಿಜಯನಗರದ ಸೈನ್ಯವು ಸೋಲನ್ನು ಅನುಭವಿಸಿತ್ತು. ಎರಡನೇ ದೇವರಾಯನು ಯುದ್ಧದ ವಿಫಲತೆಗೆ ಕಾರಣವನ್ನು ತಿಳಿದುಕೊಳ್ಳಲು ಆಸ್ಥಾನದ ವರಿಷ್ಠ ಅಧಿಕಾರಿಗಳು ಹಾಗೂ ಪ್ರಮುಖ ಬ್ರಾಹ್ಮಣರ ಅಧಿವೇಶನ ಕರೆಯುತ್ತಾನೆ. ಇಲ್ಲಿ ಬಹಮನಿ ರಾಜ್ಯಕ್ಕಿಂತ ವಿಜಯನಗರ ಸಾಮ್ರಾಜ್ಯ ವಿಸ್ತಾರದಲ್ಲಿ, ಜನಸಂಖ್ಯೆ ಮತ್ತು ಆದಾಯದಲ್ಲಿ ಅತಿ ಹೆಚ್ಚು ಮೇಲಾಗಿದ್ದು, ಸೈನ್ಯವು ಸಹ ಬಹಮನಿ ಸೈನ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಚರ್ಚಿಸಲಾಯಿತು. ಆದರೂ ಮುಸ್ಲಿಂ ಸೈನ್ಯವು ವಿಜಯನಗರದ ಮೇಲೆ ಯಶಸ್ವಿಯಾಗಲು ಕಾರಣಗಳನ್ನು ಹುಡುಕಿದಾಗ, ಅರಸರಿಗೆ ಬಹಮನಿ ಸುಲ್ತಾನರ ಶ್ರೇಷ್ಠತೆ ಎರಡು ಸ್ಥಿತಿಗಳಿಂದ ಉಂಟಾಗಿದೆ. ಒಂದನೇ ಕಾರಣ, ಕುದುರೆಗಳೆಲ್ಲ ಬಲಿಷ್ಠ ವಾಗಿವೆ ಮತ್ತು ಕರ್ನಾಟಕದ ದುರ್ಬಲ, ತೆಳ್ಳಗಿನ ಕುದುರೆಗಳಿಗಿಂತ ಹೆಚ್ಚು ಶ್ರಮ ಸಹಿಸಬಲ್ಲವು. ಎರಡನೆಯ ಕಾರಣ, ಬಹಮನಿ ಮನೆತನದ ಸುಲ್ತಾನರು ಕುದುರೆಗಳನ್ನು ಯಾವಾಗಲು ತಗ್ಗದಂತೆ ನೋಡಿಕೊಳ್ಳುತ್ತಿದ್ದ ಮತ್ತು ರಾಯನ ಸೈನ್ಯದಲ್ಲಿರದ ಶ್ರೇಷ್ಠ ಬಿಲ್ಲುಗಾರರ ದೊಡ್ಡ ಪಡೆಗಳು. ಅವರ ಯಶಸ್ವಿಗೆ ಇದು ಕಾರಣ ಎಂಬುದಾಗಿ ಅಭಿಪ್ರಾಯ ಮೂಡುತ್ತದೆ.[೩೧]

ವಿಜಯನಗರದ ಸೈನ್ಯವ್ಯವಸ್ಥೆಯ ದೋಷಗಳನ್ನು ತಿಳಿದ ಎರಡನೇ ದೇವರಾಯನು ಅದನ್ನು ಸರಿಪಡಿಸುವ ಕಾರ್ಯದಲ್ಲಿ ನಿರತನಾದನು. ವಿಜಯನಗರದ ಶ್ರೇಷ್ಠತೆ ಮತ್ತು ಬಲವನ್ನು ವೃದ್ಧಿಸುವ ಉದ್ದೇಶವನ್ನು ಹೊಂದಿದ ದೇವರಾಯನು ಯಾವುದೇ ಧರ್ಮವನ್ನು ಪರಿಗಣಿಸಲಿಲ್ಲ. ಹಾಗಾಗಿ ತನ್ನ ಆಡಳಿತಾವಧಿಯಲ್ಲಿ ಅಶ್ವಸೈನ್ಯ ಹಾಗೂ ಬಿಲ್ಲುಗಾರರ ಪಡೆಯನ್ನು ಬಲಪಡಿಸುವಲ್ಲಿ ಸಾಕಷ್ಟು ಶ್ರಮಿಸಿದನು. ಈ ಸೈನ್ಯದ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಮುಸ್ಲಿಂ ಯೋಧರನ್ನು ಸೇನೆಗೆ ಸೇರಿಸಿಕೊಂಡನು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಹಿಂದೂ ಸಾಮ್ರಾಜ್ಯದ ರಕ್ಷಣೆಗಾಗಿ ಉದಯವಾದ ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಸೈನಿಕರ ಸೇರ್ಪಡೆಯಾದುದು. ಈ ವ್ಯವಸ್ಥೆಯು ವಿಜಯನಗರ ಸಾಮ್ರಾಜ್ಯದ ರಾಜಕೀಯದಲ್ಲಿ ಮಹತ್ವದ ಬದಲಾವಣೆಯನ್ನು ತಂದು ಕೊಟ್ಟಿದೆ. ಒಂದು ವೇಳೆ ಎರಡನೇ ದೇವರಾಯ ತನ್ನ ಸೈನ್ಯದಲ್ಲಿ ನಿಪುಣ ಮುಸ್ಲಿಂ ಬಿಲ್ಲುಗಾರರನ್ನು ಮತ್ತು ಅಶ್ವಬಲವನ್ನು ಸೇರಿಸದೇ ಹೋದ ಪಕ್ಷದಲ್ಲಿ ವಿಜಯನಗರ ಸಾಮ್ರಾಜ್ಯ ಎರಡನೇ ದೇವರಾಯನ ಆಳ್ವಿಕೆ ನಂತರ ಬಹುಶಃ ಅವನತಿ ದಾರಿ ಹಿಡಿಯುತ್ತಿತ್ತೇನೋ? ಹಾಗಾಗಿ ಮುಸ್ಲಿಂ ಯೋಧರು ವಿಜಯನಗರ ಸಾಮ್ರಾಜ್ಯ ಕಟ್ಟಿಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ.

ಫೆರಿಸ್ತಾನು ಎರಡನೇ ದೇವರಾಯನ ಕಾಲದಲ್ಲಿ "ಎರಡು ಸಾವಿರ ಬಿಲ್ಲುಗಾರರಿದ್ದ ರೆಂದು ತಿಳಿಸಿದರೆ, ಶಾಸನವೊಂದು ಹತ್ತು ಸಾವಿರ ತುರುಕ ರಾವುತರಿದ್ದುದನ್ನು ಸ್ಪಷ್ಟಪಡಿಸುತ್ತದೆ."[೫೨] ಎರಡನೇ ದೇವರಾಯ ಈ ಯೋಧರನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಂಡು ವಿಜಯನಗರದಲ್ಲಿ ನೆಲೆಸಲು ವ್ಯವಸ್ಥೆ ಮಾಡಿಕೊಟ್ಟನು. ಇವರು ಸಹ ವಿಜಯನಗರದ ಪ್ರಜೆಗಳಾಗಿ ತಮ್ಮ ಜೀವನವನ್ನು ನಡೆಸುತ್ತಿದ್ದರು. ಯಾವುದೇ ಭೇದಭಾವವಿಲ್ಲದೆ ವಿಜಯನಗರದ ಅರಸರು ಸಮಾನವಾಗಿ ಕಾಣುತ್ತಿದ್ದರು. ಇವರಿಗೆ ರಾಜಧಾನಿಯಲ್ಲಿ ಪ್ರತ್ಯೇಕ ಸ್ಥಳವನ್ನು ನೀಡಿದ್ದರು. ಎಲ್ಲಾ ಪ್ರಜೆಗಳನ್ನು ಸಮಾನವಾಗಿ ಕಾಣುವ ಉದ್ದೇಶದಿಂದ ತನ್ನ ಸಿಂಹಾಸನದ ಮುಂದಿನ ಪೀಠದ ಮೇಲೆ ಕುರಾನನ್ನು ಪಕ್ಕದಲ್ಲಿ ಇಟ್ಟು ಗೌರವಿಸಿದ್ದನು. ಎರಡನೇ ದೇವರಾಯನ ಸೈನ್ಯದಲ್ಲಿ ಬಿಲ್ಲುಗಾರಿಕೆಯಲ್ಲಿ ಪರಿಣತಿ ಹೊಂದಿದ ೨೦೦೦ ಮುಸ್ಲಿಂ ಯೋಧರಿದ್ದರು. ಈ ಪರಿಣತಿ ಹೊಂದಿದ ಬಿಲ್ಲುಗಾರರು ವಿಜಯನಗರ ಸೈನ್ಯಕ್ಕೆ ತರಬೇತಿಯನ್ನು ನೀಡಿ ಸುಸಜ್ಜಿತಗೊಳಿಸುವ ಕಾರ್ಯದಲ್ಲಿ ಮಗ್ನರಾದರು. ಈ ಮುಸ್ಲಿಂ ಅಧಿಕಾರಿಗಳು ವಿಜಯನಗರದ ಅರಸನಿಗೆ ನಿಷ್ಠಾವಂತರಾಗಿ ಸೇವೆ ಸಲ್ಲಿಸುತ್ತಿದ್ದರು.

"ಎರಡನೇ ದೇವರಾಯನು ಮುಸ್ಲಿಮರಿಗೆ ಸೈನ್ಯದಲ್ಲಿ ಅವಕಾಶ ಕಲ್ಪಿಸಿಕೊಡುವ ಮೂಲಕ ಬಹಮನಿ ಸೈನ್ಯದ ಸೇನಾರಹಸ್ಯಗಳನ್ನು ತಿಳಿಯಲು ಹಾಗೂ ತಮ್ಮ ಸೈನ್ಯದಲ್ಲಿ ಹೊಸ ಯುದ್ಧ ತಂತ್ರವನ್ನು ಅಳವಡಿಸಿ ಕಾರ್ಯದಕ್ಷತೆ ಹೆಚ್ಚಿಸಲು ಪ್ರಯತ್ನಿಸಿದನು."[೫೩] ಕ್ರಿ.ಶ.೧೪೩೦ರ ಶಾಸನದ ಪ್ರಕಾರ 'ಇಮ್ಮಡಿ ದೇವರಾಯನ ಸೇವೆಯಲ್ಲಿ ೧೦,೦೦೦ ಜನ ಮುಸ್ಲಿಂ ಅಶ್ವಾರೋಹಿಗಳಿದ್ದರು.' ರಾಬರ್ಟ್ ಸಿವೆಲ್ ಹೇಳುವಂತೆ "ಅವರು ಉತ್ತರದಿಂದ ಬಂದವರು. ಬಹಮನಿ ರಾಜ್ಯಕ್ಕೆ ಸೇರಿದ ಕೊಲೆಗಡುಕರೂ ಅವರಲ್ಲಿದ್ದರು."[೫೪] ಇಲ್ಲಿನ ಹೇಳಿಕೆ ನೋಡಿದಾಗ ಈ ಮುಸ್ಲಿಂ ಯೋಧರು ಬಹಮನಿ ರಾಜ್ಯದಿಂದ ಬಂದಿದ್ದು, ವಿಜಯನಗರ ಸೇನೆಯಲ್ಲಿ ಸೇರಿಕೊಂಡು ವಿಜಯನಗರದ ಅರಸರಿಗೆ ನಿಷ್ಠಾವಂತ ಅಧಿಕಾರಿಗಳಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದರು ಎನ್ನಬಹುದು. ಇದು ಸಹ ಧರ್ಮನಿಷ್ಠೆಯ ಬದಲಿಗೆ ರಾಜಕೀಯ ಹಿತಾಸಕ್ತಿಗಳ ಈಡೇರಿಕೆಯ ಅಂಶವೆಂದು ಅರಿಯಬಹುದು.

ಶ್ರೀಕೃಷ್ಣದೇವರಾಯನು ಸ್ವತಃ ಅಶ್ವಾರೋಹಿಯಾಗಿದ್ದು ಪಾಯೇಸ್‌ನ ಪ್ರಕಾರ ಶ್ರೀಕೃಷ್ಣದೇವರಾಯನ ಅಶ್ವದಳವು ೩೫,೦೦೦ ಸೈನಿಕರನ್ನು ಹೊಂದಿತ್ತು. ಬಾರ್ಬೋಸಾ ೨೦,೦೦೦ವೆಂದು, ನ್ಯೂನಿಜ್ ೩೨,೬೦೦ ಎಂದು ಹೇಳಿದ್ದಾರೆ. ಶ್ರೀಕೃಷ್ಣದೇವರಾಯನು ಅಶ್ವಪಡೆಗೆ ವಿಶೇಷ ಮಹತ್ವದ ಕೊಡುತ್ತಿದ್ದನು. ವಿಜಯನಗರದ ಅರಸರು ತಮ್ಮ ಆದಾಯದಲ್ಲಿ ಸೇನಾವ್ಯವಸ್ಥೆಗೆಂದೇ ಹೆಚ್ಚಿನ ಖರ್ಚು ಮಾಡುತ್ತಿದ್ದರು. ಹೀಗೆ ವಿಜಯನಗರದ ಅರಸರು ತಮ್ಮ ರಾಜ್ಯವನ್ನು ಉಳಿಸಿಕೊಳ್ಳುವಲ್ಲಿ ಸಫಲರಾಗಲು ಅಂದಿನ ರಾಜಕೀಯ ವಿದ್ಯಮಾನಗಳನ್ನು ಬಳಸಿಕೊಂಡರು. ಅದರಲ್ಲಿ ಮುಸ್ಲಿಂ ಸೈನಿಕರ ಪಾತ್ರ ಇತ್ತೆಂದರೆ ತಪ್ಪಾಗಲಾರದು.

ಫಿರಂಗಿದಳ

ಫೆರಿಸ್ತಾ ರಚಿಸಿದ 'ತಹಮುತ್-ಉಸ್-ಸಲಾತಿನ್' ಕೃತಿಯಲ್ಲಿ ವಿಜಯನಗರದ ಆರಂಭದ ಕಾಲದಲ್ಲಿ ಫಿರಂಗಿ ಪಡೆಯಿತ್ತೆಂದು ಉಲ್ಲೇಖವಿದೆ. "ಕ್ರಿ.ಶ. ೧೪ನೆಯ ಶತಮಾನದ ಪೂರ್ವದಲ್ಲಿ ಸಿಡಿಮದ್ದು ಬಳಕೆ ಇರಲಿಲ್ಲ."[೫೫] ಶಾಸನಗಳು ಮತ್ತು ಪ್ರವಾಸಿಗರ ವರದಿಗಳು ಸಿಡಿಮದ್ದಿನ ಬಳಕೆಯ ಬಗ್ಗೆ ಮಾಹಿತಿ ನೀಡುತ್ತವೆ. ಕ್ರಿ.ಶ. ೧೫ನೇ ಶತಮಾನದ ಪೂರ್ವ ವೀರಗಲ್ಲುಗಳಲ್ಲಿ ಸಾಮಾನ್ಯವಾಗಿ ಬಿಲ್ಲು-ಬಾಣ, ಕತ್ತಿ, ಗುರಾಣಿ, ಈಟಿ ಮತ್ತು ಭರ್ಜಿ ಮುಂತಾದ ಶಸ್ತ್ರಗಳನ್ನು ಬಳಸುತ್ತಿದ್ದರು. ವಿಜಯನಗರ ಮತ್ತು ನಂತರದ ಕಾಲದಲ್ಲಿ ವೀರಗಲ್ಲುಗಳಲ್ಲಿ ವೀರರು ತಮ್ಮ ಕೈಗಳಲ್ಲಿ ಕತ್ತಿಯ ಜೊತೆಗೆ ಬಂದೂಕುಗಳನ್ನು ಹಿಡಿದಿರುವುದು ಕಂಡುಬರುತ್ತದೆ. ಫೆರಿಸ್ತಾನ ಕೃತಿಯಲ್ಲಿ ಉಲ್ಲೇಖಿಸಿದಂತೆ ಕ್ರಿ.ಶ. ೧೩೬೬-೬೮ರ ಅವಧಿಯಲ್ಲಿ ಮಹಮ್ಮದ್ ಷಾಹನು ವಿಜಯನಗರದ ಬುಕ್ಕರಾಯನನ್ನು ಸೋಲಿಸಿ ೨೦೦೦ ಆನೆಗಳು, ೩೦೦ ಬಂದೂಕು ಮತ್ತು ಫಿರಂಗಿ ಗಾಡಿಗಳು, ೭೦೦ ಅರೇಬಿಯಾದ ಕುದುರೆಗಳು ಹಾಗೂ ಬೆಲೆ ಬಾಳುವ ಆಭರಣಗಳನ್ನು ಲೂಟಿ ಮಾಡಿದನೆಂದು ತಿಳಿಯುತ್ತದೆ. ಹಾಗಾಗಿ ವಿಜಯನಗರದ ಸ್ಥಾಪನೆಯ ಅವಧಿಯಲ್ಲಿ ಈ ಫಿರಂಗಿ ಸೈನ್ಯದಲ್ಲಿ ಸ್ಥಾನ ಪಡೆಯಿತ್ತು.

ಫಿರಂಗಿಗಳನ್ನು ಮೊದಲ ಬಾರಿಗೆ ಕ್ರಿ.ಶ. ೮೫ರ ಸುಮಾರಿಗೆ ಚೀನಾದವರು ಬಳಕೆಗೆ ತಂದರು ಎಂದು ಗಿಬ್ಬನ್ ಎಂಬ ವಿದ್ವಾಂಸನ ಅಭಿಪ್ರಾಯವಾಗಿದೆ. ಕೊಲ್‌ಫೇವ್ ಪ್ರಕಾರ 'ಅರಬ್ಬರು ಸಿಡಿಮದ್ದನ್ನು ಹಿಂದೆಯೇ ತಿಳಿದಿದ್ದರು' ಎಂದಿದ್ದಾನೆ. ಈ ತೋಪುಗಳ ಬಳಕೆ ಮಾಡುವಲ್ಲಿ ಟರ್ಕರು ಮತ್ತು ಯುರೋಪಿಯನ್ನರು ಪರಿಣತರಾಗಿದ್ದರು. ಇವರು ಮಹಮ್ಮದೀಯ ಸೈನ್ಯದಲ್ಲಿದ್ದರೆಂದು ಫೆರಿಸ್ತಾ ಹೇಳಿದ್ದಾನೆ. ಬಹಮನಿಯವರು ಮೊದಲ ಬಾರಿಗೆ ಸಿಡಿಮದ್ದನ್ನು ದಕ್ಷಿಣ ಭಾರತದಲ್ಲಿ ಬಳಕೆ ಮಾಡಿದರು. ಇಂತಹ ತೋಪುಗಳ ಬಳಕೆಯಿಂದ ಶತ್ರುರಾಷ್ಟ್ರಗಳ ಮೇಲೆ ವಿಜಯವನ್ನು ಇವರು ಸಾಧಿಸುತ್ತಿದ್ದರು. ವಿಜಯನಗರದ ಅರಸರು ಈ ಫಿರಂಗಿದಳವನ್ನು ಸೇರ್ಪಡೆ ಮಾಡಿಕೊಂಡರು. ೧೫-೧೬ನೇ ಶತಮಾನಗಳಲ್ಲಿ ಭಾರತಕ್ಕೆ ಬಂದಿದ್ದ ಪ್ರವಾಸಿಗಳಾದ ರಜಾಕ್, ಪಾಯೆಸ್, ಬಾರ್ಬೊಸಾ ಮತ್ತು ನ್ಯೂನಿಜ್‌ರು ರಥದ ಸ್ಥಾನದಲ್ಲಿ ಫಿರಂಗಿದಳ ಸೇರ್ಪಡೆಯಾಯಿತು ಎಂದಿದ್ದಾರೆ. ಈ ಕುರಿತು ವಿದ್ವಾಂಸರಾದ ಟಿ.ವಿ. ಮಹಾಲಿಂಗಂ, ಬಿ.ಎ.ಸಾಲೆತ್ತೊರ್, ಕೆ. ಶ್ರೀಕಂಠಯ್ಯನವರು ಸುದೀರ್ಘವಾಗಿ ಚರ್ಚಿಸಿದ್ದಾರೆ. ಫಿರಂಗಿದಳದ ಸೇರ್ಪಡೆ ಮಹಮ್ಮದೀಯರ ಪ್ರಭಾವದಿಂದ ಕರ್ನಾಟಕದಲ್ಲಿ ಬಳಕೆಗೆ ಬಂದಿತು ಎನ್ನಬಹುದು. ವಿಜಯನಗರ ಕಾಲದಲ್ಲಿ ಸೈನ್ಯವ್ಯವಸ್ಥೆಯಲ್ಲಿ ಮಾಡಲಾದ ಮಾರ್ಪಾಡುಗಳು ಮುಸ್ಲಿಮರ ಪ್ರಭಾವದಿಂದಲೇ ಆಯಿತು ಎನ್ನಬಹುದು. ಶ್ರೀಕೃಷ್ಣ ದೇವರಾಯನ ಕಾಲದಲ್ಲಿ ಫಿರಂಗಿಗಳನ್ನು ಸಮರ್ಥವಾಗಿ ಬಳಸಲಾಯಿತು. ಶ್ರೀಕೃಷ್ಣ ದೇವರಾಯನು ಕೈಗೊಂಡ ರಾಯಚೂರು ದಂಡೆಯಾತ್ರೆಯಲ್ಲಿ ತನ್ನ ಬೃಹತ್ ಪ್ರಮಾಣದ ಸೈನ್ಯದ ಜೊತೆಗೆ ಫಿರಂಗಿಗಳು ಇದ್ದವೆಂದು ತಿಳಿದಿದೆ. ನಂತರ "ಶ್ರೀಕೃಷ್ಣ ದೇವರಾಯನ ಕಾಲದಲ್ಲಿ ಇವರಿಗೆ ಫಿರಂಗಿ ಪಡೆಯ ಬಳಕೆ ಬದಲಾಗಿ ಪೋರ್ಚುಗೀಸರ ನವೀನ ಮಾದರಿಯ ಅಸ್ತ್ರಗಳ ಬಳಕೆ

ಮಾಡತೊಡಗಿದರು."[೫೬] ರಕ್ಕಸ ತಂಗಡಗಿ ಯುದ್ಧದಲ್ಲಿದ್ದ ಫಿರಂಗಿಗಳು, ಬಂದೂಕು ಕೋವಿಗಳ ಬಳಕೆ ಮಾಡಲಾಯಿತು. ಈ ಸಿಡಿಮದ್ದಿನ ಬಳಕೆ ಪ್ರಾಚೀನ ಕಾಲದ ಮುಖಾಮುಖಿ ಯುದ್ಧತಂತ್ರ ದೂರವಾಗಿ ದೂರದಿಂದಲೇ ಶತ್ರುಗಳ ಮೇಲೆ ಆಕ್ರಮಣ ಮಾಡುವ ಪ್ರಕ್ರಿಯೆ ಆರಂಭವಾಯಿತು. ಈ ರೀತಿ ವಿಜಯನಗರ ಕಾಲದಲ್ಲಿ ಮುಸ್ಲಿಮರ ಪ್ರಭಾವದಿಂದ ಸೈನ್ಯ ವ್ಯವಸ್ಥೆಯಲ್ಲಿ ಹಲವು ಮಾರ್ಪಾಡುಗಳನ್ನು ಕಾಣಬಹುದು. ಈ ಹೊಸ ಮಾರ್ಪಾಡುಗಳು ಮಧ್ಯಯುಗೀನ ಚರಿತ್ರೆಯಲ್ಲಿ ಮಹತ್ವದ ಬದಲಾವಣೆಯನ್ನು ತಂದಿವೆ. ವಿಜಯನಗರ ಸಾಮ್ರಾಜ್ಯದ ಉನ್ನತಿಗೆ, ವೈಭವದಿಂದ ಸಾಮ್ರಾಜ್ಯ ಮೆರೆಯುವಂತೆ ಮಾಡುವಲ್ಲಿ ಸೈನಿಕರ ಪಾತ್ರವೂ ಸಹ ಅಷ್ಟೆ ಮುಖ್ಯವಾಗಿದೆ.

ಮುಸ್ಲಿಂ ಸೈನಿಕರು ವಿಜಯನಗರ ಸಾಮ್ರಾಜ್ಯ ಸಂರಕ್ಷಣೆ, ವಿಸ್ತರಣೆ ಮಾಡುವಲ್ಲಿ ಪರೋಕ್ಷವಾಗಿ ಕಾರಣಕರ್ತರಾಗಿದ್ದಾರೆ. ಏಕೆಂದರೆ ಎರಡನೇ ದೇವರಾಯ ತನ್ನ ಮುಂದಾಲೋಚನೆಯಿಂದ ಮುಸ್ಲಿಂ ಯೋಧರನ್ನು ನೇಮಿಸಿಕೊಂಡ ನಂತರ ಈ ಯೋಧರು ವಿಜಯನಗರದ ಸೈನ್ಯಕ್ಕೆ ಸಮಕಾಲೀನ ಯುದ್ಧ ತಂತ್ರಗಳ ತರಬೇತಿಯನ್ನು ನೀಡಿದರು. ಮುಂದೆ ಸಂಭವಿಸುವ ಯುದ್ಧಗಳಲ್ಲಿ ವಿಜಯನಗರದ ಸೈನಿಕರು ಶತ್ರುಸೈನಿಕರ ವಿರುದ್ಧ ಯುದ್ಧತಂತ್ರಗಳನ್ನು ಬಳಸಿ ಯುದ್ಧದಲ್ಲಿ ಜಯವನ್ನು ಗಳಿಸುತ್ತಿದ್ದರು. ಮುಸ್ಲಿಂ ಬಿಲ್ಲುಗಾರರು, ಅಶ್ವಪಡೆ ಮತ್ತು ಫಿರಂಗಿಪಡೆಯ ಬಳಕೆ ವಿಜಯನಗರ ಕಾಲದಲ್ಲಿ ಮಹತ್ವದ ಅಂಶವಾಗಿತ್ತು. ಹಜಾರರಾಮ ದೇವಾಲಯ, ವಿಠ್ಠಲ ದೇವಾಲಯಗಳಲ್ಲಿ ಹಲವಾರು ಸೈನಿಕರ ಉಬ್ಬುಶಿಲ್ಪಗಳಿವೆ. ಇದರಲ್ಲಿ ಮುಸ್ಲಿಂ ಯೋಧರ ಶಿಲ್ಪಗಳು ಕಂಡುಬರುತ್ತವೆ. ಮುಸ್ಲಿಂ ಬಿಲ್ಲುಗಾರರು, ಸೈನಿಕರು ಶತ್ರುಸೈನ್ಯದೊಂದಿಗೆ ಹೋರಾಡುತ್ತಿರುವ ದೃಶ್ಯಗಳಿವೆ. ಇವು ಹಿಂದೂ ಸೈನ್ಯದಲ್ಲಿ ಸೇರ್ಪಡೆಯಾದ ಮುಸ್ಲಿಂ ಸೈನಿಕರು ವಿಜಯನಗರದ ಅರಸರಿಗೆ ನಿಷ್ಠಾವಂತ ಅಧಿಕಾರಿಗಳಾಗಿದ್ದರು. ಅಷ್ಟೇ ಅಚ್ಚುಕಟ್ಟಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಯಾವುದೇ ಮತಭೇದವಿಲ್ಲದೆ ಹಿಂದೂ-ಮುಸ್ಲಿಮರು ಪ್ರಜೆಗಳು ಐಕ್ಯತೆಯಿಂದ ವಿಜಯನಗರ ಸಾಮ್ರಾಜ್ಯದಲ್ಲಿ ವಾಸವಾಗಿದ್ದರು. ಇದಕ್ಕೆ ಈ ಶಿಲ್ಪಗಳು ಪ್ರತ್ಯಕ್ಷ ನಿದರ್ಶನವಾಗಿವೆ. ಅದೇ ರೀತಿ ವಿಠ್ಠಲ ದೇವಾಲಯ ಕಲ್ಯಾಣ ಮಂಟಪದಲ್ಲಿ ಅನೇಕ ಸೈನಿಕರ ಉಬ್ಬುಶಿಲ್ಪಗಳಿವೆ. ಈ ಕಲ್ಯಾಣ ಮಂಟಪದ ಕಂಬಗಳ ಮೇಲೆ ಸೈನಿಕರು ಕುದುರೆ ಮೇಲೆ ಸವಾರಿ ಮಾಡುತ್ತಿರುವ ದೃಶ್ಯವನ್ನು ಕೆತ್ತಲಾಗಿದೆ. ಇದರಲ್ಲಿನ ವಿಶೇಷತೆ ಎಂದರೆ ಹಿಂದೂ-ಮುಸ್ಲಿಂ ಸೈನಿಕರ ಶಿಲ್ಪಗಳು ಕಂಡುಬಂದಿವೆ. ಇದರಿಂದ ವಿಜಯನಗರ ಕಾಲದ ಅರಸರು ತಮ್ಮ ಸೈನ್ಯದಲ್ಲಿ ಹಿಂದೂ ಸೈನಿಕರ ಜೊತೆಗೆ ಮುಸ್ಲಿಂ ಸೈನಿಕರಿಗೆ ಪ್ರಾಮುಖ್ಯತೆ ನೀಡಿರುವುದನ್ನು ಗುರುತಿಸಬಹುದು.

ಹೀಗೆ ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಸೈನಿಕರು ಸ್ಥಳೀಯ ಸೈನಿಕರಿಗೆ ಯುದ್ಧ ತಂತ್ರಗಳನ್ನು ತರಬೇತಿ ನೀಡಿ ಸಜ್ಜುಗೊಳಿಸಿ ಸಾಮ್ರಾಜ್ಯದ ವಿಸ್ತರಣೆಗೆ ಕಾರಣರಾದರು. ಆದರೆ ಅವರಲ್ಲಿ ಕೆಲವು ಮುಸ್ಲಿಂ ಅಧಿಕಾರಿಗಳು ಹಾಗೂ ಸೈನಿಕರು ರಕ್ಕಸ ತಂಗಡಗಿ ಕದನದಲ್ಲಿ ಚಕ್ರವರ್ತಿಗೆ ದ್ರೋಹ ಬಗೆದು ವಿಜಯನಗರ ಅವನತಿಗೆ ಕೂಡ ಕಾರಣರಾದರು. ಇದಷ್ಟೆ ಅಲ್ಲದೆ ಮುಸ್ಲಿಂ

ಸೈನಿಕರು ಇಲ್ಲಿನ ಪ್ರಜೆಗಳಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಈ ರೀತಿಯಾಗಿ ಮುಸ್ಲಿಮರು ಆಡಳಿತದಲ್ಲಿ ಸೈನಿಕರಾಗಿ, ಅಧಿಕಾರಿಗಳಾಗಿ ಹಾಗೂ ಆರ್ಥಿಕ ಚಟುವಟಿಕೆಯಲ್ಲಿ ವರ್ತಕರಾಗಿ ವಿಜಯನಗರದಲ್ಲಿ ತಮ್ಮ ವಿಶಿಷ್ಟ ಪಾತ್ರವನ್ನು ವಹಿಸಿದ್ದರು.

ಕೊನೆಟಿಪ್ಪಣಿಗಳು

೧. ಬಾರ್ಕೂರು ಉದಯ, ಇತಿಹಾಸದ ಶೋಧ ಗತದ ಹುಡುಕಾಟ: ತುಳು ಸಂಸ್ಕೃತಿ ಚರಿತ್ರೆ ಕಥನ, ಆಕೃತಿ ಆಶಯ ಪಬ್ಲಿಕೇಷನ್, ಮಂಗಳೂರು, ೨೦೧೫, ಪು.೯೫-೯೬.

೨. ಶ್ರೀರಾಮ ಶರ್ಮ, ಎ ಹಿಸ್ಟರಿ ಆಫ್ ವಿಜಯನಗರ ಎಂಪೈರ್, ಪ್ರಭಾಕರ ಪಬ್ಲಿಕೇಶನ್ಸ್, ಹೈದರಾಬಾದ್, ೧೯೯೨, ಪು.೪೫.

೩. ಅದೇ, ಪು.೪೫.

೪. ಬ್ರಿಗ್ಸ್ ಜಾನ್ ಸಂ.೨, ಫೆರಿಸ್ತಾಸ್ ಹಿಸ್ಟರಿ ಆಫ್ ದಿ ರೈಸ್ ಆಫ್ ಮಹಮ್ಮದನ್ ಪವರ್ ಇನ್ ಇಂಡಿಯಾ ಟಿಲ್ ಇನ್ ದ ೧೬೧೨, ಕಲ್ಕತ್ತಾ, ಪು.೪೩೦-೪೩೧.

೫. ಶ್ರೀರಾಮ ಶರ್ಮ, ಪೂರ್ವೋಕ್ತ, ಪು.೪೫.

೬. ಸೋಮಶೇಖರ ಎಸ್.ವೈ., ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಸಂಚಿಕೆ ಪ್ರಕಾಶನ, ಚಿತ್ರದುರ್ಗ, ೨೦೦೯, ಪು.೧೦೧.

೭. ಅದೇ, ಪು.೧೦೨.

೮. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ ಸಂ-೨, ಐಬಿಎಚ್ ಪ್ರಕಾಶನ, ಬೆಂಗಳೂರು, ೨೦೦೬, ಪು.೧೪೩.

೯. ವೆಂಕಟರತ್ನಂ ಎ.ವಿ., ಲೋಕಲ್ ಗವರ್ನಮೆಂಟ್ ಇನ್ ದಿ ವಿಜಯನಗರ ಎಂಪೈರ್, ಪ್ರಸಾರಾಂಗ, ಯೂನಿವರ್ಸಿಟಿ ಆಫ್ ಮೈಸೂರ್, ೧೯೭೨, ಪು.೭.

೧೦. ಎಲಿಯಟ್, ಹಿಸ್ಟರಿ ಆಫ್ ಇಂಡಿಯ, ಸಂ,೧-೪, ಕೇಂಬ್ರಿಜ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, ೨೦೧೩, ಪು-೧೦೭.

೧೧. ನಾಗರಾಜು ಎಚ್.ಎಂ., ವಿಜಯನಗರದ ಇಮ್ಮಡಿ ದೇವರಾಯ, ಸಂವಹನ ಪ್ರಕಾಶನ, ಮೈಸೂರು, ೧೯೯೯, ಪು.೫೬.

೧೨. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು.೧೪೩-೧೪೪.

೧೩. ಕುಂದೂರಿ ಈಶ್ವರದತ್ತು(ಮೂ), ಟಿ ಗುರುಮೂರ್ತಿ ಪೆಂಡಕೂರು(ಅನು), ಭಗ್ನ ವಿಜಯನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨, ಪು. ೧೧೫.

೧೪. ವಿವೇಕ ರೈ ಬಿ.ಎ., ಪ್ರವಾಸಿ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು.-೩೭.

೧೫. ಕೋಡದ ಎಸ್.ಬಿ., ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ ಮುಸ್ಲಿಂ ಬಾಂಧವ್ಯ, ಎಸ್.ಬಿ. ಪಬ್ಲಿಷರ್ಸ್, ಧಾರವಾಡ, ೧೯೯೯, ಪು.೫೯-೬೦.

೧೬. ದೇವರಕೊಂಡಾರೆಡ್ಡಿ, ಹಂಪಿ ಶಾಸನಗಳು, ಸಂಪುಟ-೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬, ಪು.೨೨೪.

೧೭. ಅದೇ, ೩೧೧.

೧೮. ಮಹಾಲಿಂಗಂ ಟಿ.ವಿ., ಅಡ್ಮಿನಿಸ್ಟ್ರೇಷನ್ ಆ್ಯಂಡ್ ಸೋಶಿಯಲ್ ಲೈಫ್ ಅಂಡರ್ ವಿಜಯನಗರ, ಯೂನಿವರ್ಸಿಟಿ ಆಫ್ ಮದ್ರಾಸ್, ೧೯೭೫, ಪು.೨೧೨.

೧೯. ಅದೇ, ಪು.೨೧೧-೨೧೨.

೨೦. ಅದೇ, ಪು.೨೧೧-೨೧೨.

೨೧. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು.೧೫೬.

೨೨. ಮಹಾಲಿಂಗಂ ಟಿ.ವಿ., ಪೂರ್ವೋಕ್ತ, ಪು.೨೧೨.

೨೩. ಸೋಮಶೇಖರ ಎಸ್.ವೈ., ಪೂರ್ವೋಕ್ತ, ಪು.೧೦೧.

೨೪. ಸುರೇಶ್ ಎಂ. ತಾಂಡೇಲ, ಕರ್ನಾಟಕದ ಬಂದರುಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸ-ಆರಂಭ ಕಾಲದಿಂದ ಕ್ರಿ.ಶ. ೧೪೦೦ ರವರೆಗೆ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬, ಪು.೧೩೧.

೨೫. ಅದೇ, ಪು. ೧೩೮.

೨೬. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂ. ೯, ಭಾಗ-೨, ನಂ. ೬೨೦.

೨೭. ಕೆ.ವಿ. ರಮೇಶ್, ಎ ಹಿಸ್ಟರಿ ಆಫ್ ಸೌತ್ ಕೆನರಾ, ಕರ್ನಾಟಕ ಯೂನಿವರ್ಸಿಟಿ, ಧಾರವಾಡ, ೧೯೭೦, ಪು. ೨೨೬..

೨೮. ನಾಗೇಗೌಡ ಎಚ್.ಎಲ್, ಪೂರ್ವೋಕ್ತ, ಪು.೮೮.

೨೯. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್ ಸಂ. ೭, ನಂ. ೩೪೯.

೩೦. ಅದೇ, ನಂ. ೧೮೨.

೩೧. ಗುರುರಾಜ್‌ಭಟ್.ಪಿ., ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್, ಕಲ್ಲಿಯನಪುರ, ೧೯೭೫, ಪು.೧೯೪-೧೯೫.

೩೨. ರಮೇಶ್ ಕೆ.ವಿ., ಪೂರ್ವೋಕ್ತ, ಪು.೧೯೬.

೩೩. ಶೇಖ ಝೈನುದ್ದೀನ ಮುಖದುಮ್ (ಮೂ), ಕುಲಕರ್ಣಿ ಆರ್.ಕೆ.(ಅನು), ತುಹಫತುಲ್ ಮುಜಾಹಿದೀನ್, ಆದಿಲ್‌ಶಾಹಿ ಸಾಹಿತ್ಯ, ಸಂ.೧೭, ಪು.೫೫.

೩೪. ಅದೇ, ಪು.೭೩.

೩೫. ಅದೇ, ಪು.೭೭.

೩೬. ಅದೇ, ಪು.೭೯.

೩೭. ಸಾಲೆತ್ತೂರ್ ಬಿ.ಎ., ಸೋಶಿಯಲ್ ಆ್ಯಂಡ್ ಪೊಲಿಟಿಕಲ್ ಲೈಫ್ ಇನ್ ವಿಜಯನಗರ ಎಂಪೈರ್, ಸಂಪುಟ,೧, ಪು.೪೧೪.

೩೮. ಅದೇ, ಪು.೪೧೪–೧೫.

೩೯. ನಾಗೇಗೌಡ ಎಚ್.ಎಲ್., ಪೂರ್ವೋಕ್ತ, ಪು.೧೫೪.

೪೦. ಸೋಮಶೇಖರ ಎಸ್.ವೈ., ಪೂರ್ವೋಕ್ತ, ಪು.೨೯.

೪೧. ಅಯ್ಯಂಗಾರ್ ಕೃಷ್ಣಸ್ವಾಮಿ ಎಸ್.(ಸಂ)., 'ದಿ ಸೋರ್ಸಸ್ ಆಫ್ ವಿಜಯನಗರ ಹಿಸ್ಟರಿ, ಯೂನಿವರ್ಸಿಟಿ ಆಫ್ ಮದ್ರಾಸ್, ೧೯೧೯, ಪು.೧೩೧.

೪೨. ರಾಬರ್ಟ್ ಸಿವೆಲ್(ಮೂ), ಸದಾನಂದ ಕನವಳ್ಳಿ(ಅನು) ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪು. ೨೧೯.

೪೩. ಸೋಮಶೇಖರ ಎಸ್.ವೈ., ಪೂರ್ವೋಕ್ತ, ಪು.೩೦–೩೧.

೪೪. ಅದೇ, ಪು.೩೨.

೪೫. ಅದೇ, ಪು.೩೨–೩೩

೪೬. ಅದೇ, ಪು.–೩೩.

೪೭. ಷೇಕ್ ಅಲಿ ಬಿ.(ಪ್ರ.ಸಂ). ಶಿವಣ್ಣ ಕೆ.ಎಸ್.(ಪ್ರ.ಸಂ), ಕರ್ನಾಟಕ ಚರಿತ್ರೆ ಸಂಪುಟ ೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭, ಪು.೨೯–೩೦.

೪೮. ಅದೇ, ಪು.೩೦.

೪೯. ಸೋಮಶೇಖರ ಎಸ್.ವೈ., ಪೂರ್ವೋಕ್ತ, ಪು.೩೩.

೫೦. ಅದೇ, ಪು. ೪೩.

೫೧. ರಾಬರ್ಟ್ ಸಿವೆಲ್, ಪೂರ್ವೋಕ್ತ, ಪು–೭೭.

೫೨. ಎಪಿಗ್ರಾಫಿಯಾ ಕರ್ನಾಟಿಕ, ಇಸಿ ಸಂ. ೩, ಎಸ್.ಆರ್–೧೫.

೫೩. ಸೋಮಶೇಖರ ಎಸ್.ವೈ., ಪೂರ್ವೋಕ್ತ, ಪು. ೪೪.

೫೪. ನಾಗರಾಜು ಎಚ್.ಎಂ., ಪೂರ್ವೋಕ್ತ, ಪು. ೩೬.

೫೫. ಸೋಮಶೇಖರ ಎಸ್.ವೈ., ಪೂರ್ವೋಕ್ತ, ಪು–೫೯,೬೦.

೫೬. ಅದೇ ಪು. ೬೩.

ಅಧ್ಯಾಯ ಎಂಟು

ವಿಜಯನಗರ ವಾಸ್ತುಶೈಲಿ ಹಾಗೂ ಮುಸ್ಲಿಂ ಪ್ರಭಾವ

೮.೧. ವಿಜಯನಗರ ವಾಸ್ತುಶೈಲಿ

೮.೨. ಇಂಡೋ–ಇಸ್ಲಾಮಿಕ್ ವಾಸ್ತುಶೈಲಿ

೮.೩. ಪ್ರಭುತ್ವದ ಸ್ಮಾರಕಗಳು

೮.೪. ಮುಸ್ಲಿಂ ಸ್ಮಾರಕಗಳು

ಅಧ್ಯಾಯ ಎಂಟು

ವಿಜಯನಗರ ವಾಸ್ತುಶಿಲ್ಪ ಹಾಗೂ ಮುಸ್ಲಿಂ ಪ್ರಭಾವ

ವಿಜಯನಗರ ಚರಿತ್ರೆಯು ದಕ್ಷಿಣ ಭಾರತದಲ್ಲಿ ಹಲವು ಕಾರಣಗಳಿಗಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಈ ಕಾಲಾವಧಿಯನ್ನು ಅರಸಕೇಂದ್ರಿತ ಅಧ್ಯಯನಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಒಂದು ರಾಜ್ಯ ಮತ್ತೊಂದು ರಾಜ್ಯವನ್ನು ಅಧಿಕಾರದ ವಿಸ್ತರಣೆಯ ನೆಪದಲ್ಲಿ ಆಕ್ರಮಿಸಿಕೊಳ್ಳುವ ಹಂತದಲ್ಲಿದ್ದವು. ಹಾಗೆಯೇ ಜನಕೇಂದ್ರಿತ ಅಧ್ಯಯನಗಳ ಹಿನ್ನೆಲೆಯಲ್ಲಿ ಗಮನಿಸಿದಾಗ ಇಲ್ಲಿನ ಸಮುದಾಯಗಳು ಒಂದು ಇನ್ನೊಂದನ್ನು ಅಪ್ಪಿಕೊಳ್ಳುವ ಹಂತಕ್ಕೆ ಬಂದು ತಲುಪಿದ್ದವು. ಅವುಗಳಲ್ಲಿ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳು ಇಡೀ ಸಮಾಜವನ್ನು ಹೊಸ ಬಗೆಯ ಅನ್ವೇಷಣೆಗಳಿಗೆ ತೆರೆದುಕೊಂಡವು. ಆ ತೆರನಾದವುಗಳಲ್ಲಿ ವಾಸ್ತುಶೈಲಿಯು ಒಂದು. ವಿಜಯನಗರ ಪೂರ್ವದಲ್ಲಿ ಹಾಗೂ ಸ್ಥಾಪನೆಯ ನಂತರ ವಾಸ್ತುಶೈಲಿಗಳಲ್ಲಾದ ಬದಲಾವಣೆಗಳು ಹಾಗೂ ಮುಸ್ಲಿಂ ವಾಸ್ತುಶೈಲಿಯ ಪ್ರಭಾವವನ್ನು ಗುರುತಿಸುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

೮.೧ ವಿಜಯನಗರ ವಾಸ್ತುಶೈಲಿ

ಕ್ರಿ.ಶ. ೧೩–೧೪ನೇ ಶತಮಾನವು ವಿಜಯನಗರ ಕಾಲದ ವಾಸ್ತುಶೈಲಿಯ ವೈಶಿಷ್ಟ್ಯದ ಬದಲಾವಣೆಯ ಯುಗವಾಗಿ ಕಂಡುಬರುತ್ತವೆ. ಈ ಕಾಲದಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪದ ಹಿನ್ನೆಲೆಯ ಸ್ಮಾರಕಗಳ ರಚನೆಯನ್ನು ೪ ಆಯಾಮಗಳಲ್ಲಿ ಅಧ್ಯಯನವನ್ನು ನಡೆಸಲಾಗಿದೆ.

೧. ದೇವಾಲಯ ವಾಸ್ತುಶಿಲ್ಪ

೨. ಇಸ್ಲಾಮಿಕ್ ವಾಸ್ತುಶಿಲ್ಪ

೩. ಪೌರ ವಾಸ್ತುಶಿಲ್ಪ

೪. ಸೇವಾ ಸಂಬಂಧವಾದ ವಾಸ್ತುಶಿಲ್ಪ[೧]

ಜಗತ್ತಿನಲ್ಲಿ ವಿವಿಧ ಧರ್ಮಗಳ ಮಧ್ಯೆ ಕಂಡುಬರುವ ವಾಸ್ತುಶಿಲ್ಪವು ನಾಗರಿಕತೆಯನ್ನು ರೂಪಿಸುವ ಮಾತೃಕೆ ಎಂದು ಪರ್ಸಿ ಬ್ರೌನ್ ತಿಳಿಸಿದ್ದಾರೆ. ವಾಸ್ತುಶಿಲ್ಪವು ಆಯಾ ಕಾಲಘಟ್ಟದಲ್ಲಿ

ಜರುಗಿದ ಅಥವಾ ಸಂಭವಿಸಿದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕವಾಗಿ ಆದಂತಹ ಬದಲಾವಣೆಯನ್ನು ವಿವರಿಸುತ್ತದೆ. ಭಾರತದ ವಾಸ್ತುಶಿಲ್ಪವನ್ನು ಕುರಿತಂತೆ ಜೇಮ್ಸ್ ಫರ್ಗುಸನ್ ಅವರ ೧೮೭೬ರಲ್ಲಿ ರಚನೆಗೊಂಡ 'ಹಿಸ್ಟರಿ ಆಫ್ ಇಂಡಿಯನ್ ಅಂಡ್ ಇಂಡೋನೇಷಿಯನ್ ಆರ್ಕಿಟೆಕ್ಚರ್' ಕೃತಿಯು ಪ್ರಾಚೀನ ಭಾರತದ ಸಮಗ್ರ ನೋಟವನ್ನು ನೀಡುತ್ತದೆ. ಈ ಕೃತಿಯಿಂದ ದೇವಾಲಯಗಳ ಅಥವಾ ಭಾರತದ ವಾಸ್ತುಶೈಲಿಯ ಅಧ್ಯಯನಗಳು ಪ್ರಾರಂಭವಾದವು ಎನ್ನಬಹುದು. ಹೆನ್ರಿ ಕಜಿನ್ಸ್, ಜೇಮ್ಸ್ ಬರ್ಗೀಸ್, ಪರ್ಸಿ ಬ್ರೌನ್, ಬೆಂಜಮಿನ್ ರೋ ಲೆಂಡ್, ಜೆ.ಸಿ.ಹಾರ್ಲೆ ಮುಂತಾದ ಪ್ರಖ್ಯಾತ ವಿದ್ವಾಂಸರು ಈ ಬಗ್ಗೆ ಅಧ್ಯಯನಗಳನ್ನು ಮುಂದುವರೆಸಿದರು.

ಕರ್ನಾಟಕ ಚರಿತ್ರೆಯನ್ನು ಕಲೆ ಮತ್ತು ವಾಸ್ತುಶಿಲ್ಪದ ಹಿನ್ನೆಲೆಯಿಂದ ನೋಡಿದಾಗ ಇಲ್ಲಿ ಆಳ್ವಿಕೆ ನಡೆಸಿರುವ ಅರಸು ಮನೆತನಗಳು ಕಲೆ ಮತ್ತು ವಾಸ್ತುಶಿಲ್ಪಕ್ಕೆ ವಿಶೇಷ ಆದ್ಯತೆಯನ್ನು ನೀಡಿರುವುದು ಇಲ್ಲಿ ಲಭ್ಯವಿರುವ ಆಕರಗಳಿಂದ ತಿಳಿದು ಬರುತ್ತದೆ. ಇಲ್ಲಿನ ವಾಸ್ತುಶಿಲ್ಪದ ರಚನೆಗಳು ಒಂದು ಅರಸುಮನೆತನದಿಂದ ಇನ್ನೊಂದಕ್ಕೆ ಮುಂದುವರಿಯುತ್ತಿದ್ದವು ಹಾಗೂ ಅದೇ ಸಂದರ್ಭದಲ್ಲಿ ಪ್ರತಿಯೊಂದು ಅರಸುಮನೆತನವು ತನ್ನದೇ ಆದ ವೈಶಿಷ್ಟ್ಯ ಪೂರ್ಣ ವಾಸ್ತುಶಿಲ್ಪ ಶೈಲಿಯನ್ನು ಹೊಂದಿದ್ದವು. ಬಾದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರು ತದನಂತರ ಆಡಳಿತ ಕೈಗೊಂಡ ಹೊಯ್ಸಳರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಪ್ರೋತ್ಸಾಹಗಳು ಸಹ ವಿಶಿಷ್ಟವಾದುದು.

ಪ್ರಾಚೀನ ಕರ್ನಾಟಕದಿಂದ ಮಧ್ಯಕಾಲೀನ ಅವಧಿಯವರೆಗೂ ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ವಾಸ್ತುಗ್ರಂಥಗಳಲ್ಲಿ ನಾಗರ, ವೇಸರ, ದ್ರಾವಿಡ ಶೈಲಿಗಳ ವೈಶಿಷ್ಟ್ಯತೆಗಳನ್ನು ಗುರುತಿಸಲಾಗಿದೆ.[೨] ಈ ಹಿನ್ನೆಲೆಯಲ್ಲಿ ಕ್ರಿ.ಪೂ. ಮೂರನೇ ಶತಮಾನದಿಂದ ಹಿಡಿದು ವಿಜಯನಗರದ ಪತನದವರೆಗೂ ನಿರ್ಮಾಣಗೊಂಡ ವಿವಿಧ ಶೈಲಿಯ ದೇವಾಲಯಗಳು ತನ್ನದೇ ಆದ ಉಗಮ, ವಿಕಾಸ, ಶಿಲ್ಪಕಲೆ ಬೆಳವಣಿಗೆಯ ಹಂತದಲ್ಲಿ ವಿಭಿನ್ನವಾಗಿ ಬೆಳೆದವು. ಈ ಅವಧಿಯು ಸಾಮಾಜಿಕ ಸಂಕೀರ್ಣತೆಯನ್ನು ಒಳಗೊಂಡಿದ್ದರೂ ಇಲ್ಲಿಯ ಪ್ರತಿಯೊಂದು ಶೈಲಿಯೂ ಅದರದೇ ಆದ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿತು. ಅವುಗಳನ್ನು ಆಯಾ ಅರಸುಮನೆತನಗಳ ಹಿನ್ನೆಲೆಯಲ್ಲಿ ಹೀಗೆ ಗುರುತಿಸಬಹುದು.

ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಕೆಂಪು ಮಿಶ್ರಿತ ಪದರಗಲ್ಲು ಬಳಕೆಯಾಯಿತು[೩] ದೇವಾಲಯಗಳ ನಿರ್ಮಾಣ ಮತ್ತು ಬೆಳವಣಿಗೆಗಳನ್ನು ಗಮನಿಸಿದರೆ, ಕಲ್ಯಾಣ ಚಾಲುಕ್ಯರ ಶೈಲಿಯು ಬಾದಾಮಿ ಚಾಲುಕ್ಯರಿಂದ ವಿಜಯನಗರದವರೆಗೂ ಅಲ್ಪ ಬದಲಾವಣೆಗಳೊಂದಿಗೆ ಮುಂದುವರೆದಿದೆ ಎನ್ನಬಹುದು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕೋರಟಿಕ್ ಪಿಸ್ಟ್(ಹಸಿರು ಮಿಶ್ರಿತ ಕಪ್ಪು) ಕಲ್ಲನ್ನು ಬಳಸುತ್ತಿದ್ದರು.[೪] ಬಾದಾಮಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರು ಸಹ ಕಲ್ಲಿನಲ್ಲಿ ಕೊರೆದ ಗುಹಾಂತರ ದೇವಾಲಯಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಇವುಗಳಿಗೆ ಬಾದಾಮಿ, ಎಲ್ಲೋರ, ಎಲಿಫೆಂಟಾ, ಜೋಗೇಶ್ವರಿ ಉತ್ತಮ ಉದಾಹರಣೆಗಳಾಗಿವೆ.

ರಾಷ್ಟ್ರಕೂಟರ ಅವಧಿಯಲ್ಲಿ ನಿರ್ಮಾಣಗೊಂಡ ದೇವಾಲಯಗಳು, ಜೈನ ಬಸದಿಗಳು, ಬಾಹುಬಲಿ ಮೂರ್ತಿಗಳು ರಾಷ್ಟ್ರಕೂಟ ವಾಸ್ತುಶಿಲ್ಪ ಶೈಲಿಯ ವಿಶಿಷ್ಟಗಳಾಗಿ ಕಂಡುಬಂದವು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ಸ್ಮಾರಕಗಳು ಆರಂಭಿಕ ಹಂತದಲ್ಲಿ ರಾಷ್ಟ್ರಕೂಟ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳನ್ನು ಪಡೆದುಕೊಂಡವು. ನಂತರದ ಅವಧಿಯಲ್ಲಿ ಆಡಳಿತಕ್ಕೆ ಬಂದ ಚಾಲುಕ್ಯರು ತಮ್ಮದೇ ಆದ ಶೈಲಿಯನ್ನು ಅಭಿವೃದ್ಧಿ ಪಡಿಸಿದರು. ಚಾಲುಕ್ಯರ ವಾಸ್ತುಶಿಲ್ಪ ಶೈಲಿಯಲ್ಲಿ ವಿಶೇಷವಾಗಿ ದ್ರಾವಿಡ ಮತ್ತು ನಾಗರ ಶೈಲಿಗಳ ಮಿಶ್ರಣ ಇದೆಯೆಂದು, ಇದನ್ನೇ 'ವೇಸರ ಅಥವಾ ಭೂಮಿಜ' ಎಂಬುದಾಗಿ ಹೆಸರಿಸಲಾಗಿದೆಯೆಂದು ಕಲಾ ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ಈ ಅವಧಿಯಲ್ಲಿ ನಿರ್ಮಾಣಗೊಂಡ ದೇವಾಲಯಗಳು ತಮ್ಮದೇ ಆದ ಅಲಂಕಾರ, ಮೂರ್ತಿಶಿಲ್ಪದ ವೈಶಿಷ್ಟ್ಯತೆಗಳಿಗೆ ಹೆಸರುವಾಸಿಯಾಗಿದ್ದವು.[೫] ಹೊಯ್ಸಳರು ಕಲ್ಯಾಣ ಚಾಲುಕ್ಯರ ವಾಸ್ತುಶಿಲ್ಪ ಶೈಲಿಯನ್ನು ಮುಂದುವರಿಸಿಕೊಂಡು ಹೋಗಿ ಅವರ ವಿಕಾಸಕ್ಕೆ ಕಾರಣರಾದರು. ಹೊಯ್ಸಳರ ಕಾಲದಲ್ಲಿ ಬಳಪದ ಕಲ್ಲಿನ ಬಳಕೆ ಮುಂದುವರೆಯಿತು.[೬] ಬೇಲೂರಿನ ಚೆನ್ನಕೇಶವ, ಹಳೇಬೀಡಿನ ಹೊಯ್ಸಳೇಶ್ವರ ಮತ್ತು ಸೋಮನಾಥಪುರದ ಕೇಶವ ದೇವಾಲಯಗಳು ಹೊಯ್ಸಳರ ಆಳ್ವಿಕೆಯ ಸಂದರ್ಭದಲ್ಲಿ ನಿರ್ಮಾಣಗೊಂಡ ದೇವಾಲಯಗಳಲ್ಲಿ ಪ್ರಮುಖವಾದವು.

ವಿಜಯನಗರ ಆಳ್ವಿಕೆಯಲ್ಲಿ ಆರಂಭದಿಂದ ಅವನತಿಯವರೆಗಿನ ಸಂದರ್ಭದ ವಾಸ್ತುಶಿಲ್ಪ ರಚನೆಯಲ್ಲಿ ಬದಲಾವಣೆಗಳಾದವು. ವಿಜಯನಗರವನ್ನು ಆಳಿದ ನಾಲ್ಕು ವಂಶಗಳು ಹಾಗೂ ಅವರ ಸಾಮಂತ ಅರಸರ ಆಳ್ವಿಕೆ ಅವಧಿಯಲ್ಲಿನ ವಾಸ್ತುಶೈಲಿಗಳು ಭಿನ್ನವಾಗಿ ಕಂಡುಬಂದವು. ೧೫೬೫ರ ನಂತರದಲ್ಲಿ ಆಳ್ವಿಕೆ ನಡೆಸಿದ ಅರವೀಡು ಸಂತತಿಯವರ ಅವಧಿಯಲ್ಲಿ ವಾಸ್ತುಶಿಲ್ಪವನ್ನು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ತನ್ನದೇ ಆದ ಶೈಲಿಯನ್ನು ಮುಂದುವರೆಸಿದರು. ಈ ಹಿನ್ನೆಲೆಯಲ್ಲಿ ಕ್ರಿ.ಶ.೧೩೩೬ರಲ್ಲಿ ಆರಂಭವಾದ ಶೈಲಿಯ ರಚನೆಯಲ್ಲಿ, ಅದರ ಕೊನೆಯ ಅವಧಿಯ ವೇಳೆಗೆ ವ್ಯತ್ಯಾಸಗಳು ಕಂಡುಬಂದವು.

ವಿಜಯನಗರ ಕಾಲದ ಆರಂಭದ ಅರಸರು ದೇವಾಲಯದ ರಚನೆಯನ್ನು ದ್ರಾವಿಡ ಶೈಲಿಯಲ್ಲಿ ರಚಿಸಲು ಮುಂದಾದರು. ಸಂಗಮ ವಂಶಸ್ಥರಾದ ಒಂದನೇ ಹರಿಹರ ಮತ್ತು ಒಂದನೇ ಬುಕ್ಕನ ಕಾಲಾವಧಿಯಲ್ಲಿ ಹೊಯ್ಸಳರ ಶೈಲಿಗಿಂತ ಭಿನ್ನವಾದ ಶೈಲಿಯ ದೇವಾಲಯ ರಚನೆಗಳು ಕಂಡುಬಂದವು. ದಕ್ಷಿಣ ಭಾರತದ ತಮಿಳು ಪ್ರದೇಶದಲ್ಲಿ ಪ್ರಚಲಿತವಿದ್ದ ದೇವಾಲಯಗಳಲ್ಲಿನ ವಾಸ್ತುಶೈಲಿಯು ಇವರನ್ನು ಪ್ರಭಾವಿಸಿದವು. ಇದರಿಂದಾಗಿ ವಿಜಯನಗರದ ಅರಸರು ತಮಿಳು ಶೈಲಿಯನ್ನು ಅನುಕರಿಸುವ ಮೂಲಕ ದ್ರಾವಿಡ ಶೈಲಿಯ ಬೆಳವಣಿಗೆಗೆ ಕಾರಣರಾದರು.[೭] ಸಂಗಮರ ಅವಧಿಯಲ್ಲಿ ಬೆಣಚುಕಲ್ಲಿನ ಕಟ್ಟಡಗಳು ಹೇರಳವಾಗಿ ಸಿಗುತ್ತವೆ. ನಂತರದಲ್ಲಿ ಈ ದೇವಾಲಯಗಳಲ್ಲಿ ಕೆಲವು ಚಾಲುಕ್ಯರು ಹಾಗೂ ಹೊಯ್ಸಳರ ಕಾಲದ ವಾಸ್ತುಶೈಲಿಯ ಕೆತ್ತನೆಗಳನ್ನು ಒಳಗೊಂಡಿದೆ ಹಾಗೂ ದೇವಾಲಯಗಳ ರಚನೆಗೆ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ.[೮] ಹೀಗೆ ದ್ರಾವಿಡ

ಶೈಲಿಯಲ್ಲಿ ನಿರ್ಮಾಣವಾದ ಹಳೆಯ ದೇವಾಲಯ ರಚನೆಯನ್ನು ಸಣ್ಣ–ಪುಟ್ಟ ಬದಲಾವಣೆಯೊಂದಿಗೆ ಇವರು ತಮ್ಮ ವಾಸ್ತುಶೈಲಿಯಾಗಿ ಅಳವಡಿಸಿಕೊಂಡರು. ಅಲ್ಲದೇ ದೇವಾಲಯಗಳ ವಿಸ್ತೀರ್ಣತೆಯನ್ನು ಬಹಳಷ್ಟು ವಿಶಾಲಗೊಳಿಸಿದರು. ಚೋಳರು ಮತ್ತು ಪಾಂಡ್ಯರ ದೇವಾಲಯಗಳಲ್ಲಿ ಕಂಡುಬರುವಂತೆ, ಮಹಾದ್ವಾರಗಳ ಮೇಲೆ ಗೋಪುರಗಳು, ಬಲಿಪೀಠ ಅಥವಾ ಎರಡು ಅಧಿಷ್ಠಾನ, ಎತ್ತರವಾದ ಕಂಬಗಳಿಂದ ಕೂಡಿದ ವಿಶಾಲವಾದ ಮಂಟಪಗಳು, ದೇವಿಯ ವಿಗ್ರಹಕ್ಕಾಗಿ ಪ್ರತ್ಯೇಕ ಗರ್ಭಗೃಹ ಇವುಗಳನ್ನು ನೋಡಬಹುದು.[೯] ವಿಜಯನಗರ ಕಾಲದಲ್ಲಿ ನಿರ್ಮಿತವಾದ ವಾಸ್ತುಶೈಲಿ ರಚನೆಯನ್ನು ಮೂರು ಹಂತಗಳಲ್ಲಿ ವಿಭಾಗಿಸಿ ಅದರ ಬೆಳವಣಿಗೆಯನ್ನು ಕೆ.ಎಸ್.ಶಿವಣ್ಣ (ಸಂಪಾದಕರು) ಅವರು ತಮ್ಮ ಕರ್ನಾಟಕ ಚರಿತ್ರೆ ಸಂಪುಟ–೩ರಲ್ಲಿ ತಿಳಿಸಿದ್ದಾರೆ. ೧೩೩೬–೧೪೦೦ ಮೊದಲನೆಯ ಹಂತ, ೧೪೦೦–೧೫೦೦ ಎರಡನೆಯ ಹಂತದ ದೇವಾಲಯಗಳ ವಾಸ್ತುರಚನೆ ಹಾಗೂ ೧೫೦೦–೧೫೬೫ ಮೂರನೇ ಹಂತದಲ್ಲಾದ ವಾಸ್ತುಶೈಲಿ ರಚನೆಯು ಅದರ ವಿವಿಧ ಹಂತಗಳ ಬೆಳವಣಿಗೆಯನ್ನು ತಿಳಿಸಲಾಗಿದೆ.[೧೦] ಈ ಕಾಲಾವಧಿಯಲ್ಲಿ ಕಂಡುಬರುವ ವಿಜಯನಗರ ಶೈಲಿಯ ದೇವಾಲಯಗಳು ಹಂಪಿ ಪ್ರದೇಶದಲ್ಲಿ ಬೃಹತ್ ಸಂಖ್ಯೆಯಲ್ಲಿ ಲಭ್ಯವಾಗುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬಾಲಕೃಷ್ಣ (ಕೃಷ್ಣಸ್ವಾಮಿ), ವಿರೂಪಾಕ್ಷ, ವಿಠ್ಠಲ, ಹಜಾರರಾಮ, ಚಂದ್ರಶೇಖರ, ಅಚ್ಯುತರಾಮ, ಪಟ್ಟಾಭಿರಾಮ, ಮಾಲ್ಯವಂತ ರಘುನಾಥ, ಉದ್ದಾನ ವೀರಭದ್ರ, ಚಂಡಿಕೇಶ್ವರ, ಕಡಲೆಕಾಳು ಗಣಪತಿ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ಪ್ರಮುಖವಾದವು.

ಹೀಗೆ ಪ್ರಾಚೀನ ಅವಧಿಯಿಂದ ಹಿಡಿದು ವಿಜಯನಗರ ಅವಧಿಯವರೆಗೆ ದೇವಾಲಯಗಳ ನಿರ್ಮಾಣವನ್ನು ಗಮನಿಸಿದಾಗ ಅರಸರ ಮನೆತನಗಳಲ್ಲದೆ ಸಾಮಂತ ಅರಸರು, ಅಧಿಕಾರಿ ವರ್ಗದವರು ವಿಭಿನ್ನ ವಾಸ್ತುಶಿಲ್ಪದ ಶೈಲಿಗಳನ್ನು ಅಳವಡಿಸಿಕೊಂಡು ದೇವಾಲಯ, ಬಸದಿ ಹಾಗೂ ಅರಮನೆಗಳನ್ನು ನಿರ್ಮಿಸಿದರು. ಇವುಗಳೊಂದಿಗೆ ಸ್ಮಾರಕಗಳ ಅಧ್ಯಯನ ನಡೆಸುವಾಗ ಒಂದು ಸಾಮ್ರಾಜ್ಯದ ಕಾಲಘಟ್ಟದಲ್ಲಿ ನಿರ್ಮಾಣವಾದ ಕಲೆ ಮತ್ತು ವಾಸ್ತುಶಿಲ್ಪದ ಸ್ಮಾರಕಗಳಲ್ಲಿ ದೇವಾಲಯಗಳ ನಿರ್ಮಾಣವೇ ಪ್ರಮುಖವಾಗಿ ಕಂಡುಬರುತ್ತದೆ. ಈ ಸ್ಮಾರಕಗಳು ಧಾರ್ಮಿಕ ಹಿನ್ನೆಲೆಯಲ್ಲಿ ರೂಪು ಪಡೆದವು. ಅವುಗಳಲ್ಲಿ ಪ್ರಮುಖವಾಗಿ ಶೈವ, ಇವರಲ್ಲಿ ಕಂಡುಬರುವ ಅನೇಕ ಪಂಗಡಗಳಾದ ಪಾಶುಪತ, ಕಾಳಾಮುಖ ಮತ್ತು ವೀರಶೈವ, ವೈಷ್ಣವ ದೇವಾಲಯಗಳು ಸಹ ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣಗೊಂಡವು. ಬೌದ್ಧ, ಜೈನ ಧರ್ಮದ ಸ್ಮಾರಕಗಳು ಸಮಾನ ಅವಧಿಯಲ್ಲೇ ರಚಿಸಲ್ಪಟ್ಟವು. ಹೀಗೆ ವಾಸ್ತುಶಿಲ್ಪವು ಪ್ರಾಚೀನದಿಂದ ವಿಜಯನಗರದ ಅವಧಿಯವರೆಗೆ ಧರ್ಮದ ಮೂಲಕವೂ ಗುರುತಿಸಿಕೊಂಡಿರುವುದನ್ನು ಈ ಮೇಲಿನ ಬೆಳವಣಿಗೆಗಳು ಸೂಚಿಸುತ್ತವೆ.

ಕರ್ನಾಟಕವನ್ನು ಆಡಳಿತ ನಡೆಸಿದ ರಾಜಪ್ರಭುತ್ವಗಳು ಕೇವಲ ದೇವಾಲಯಗಳ ನಿರ್ಮಾಣಕ್ಕಷ್ಟೇ ಹೆಚ್ಚಿನ ಮಹತ್ವವನ್ನು ನೀಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಅವಧಿಯಲ್ಲಿ ರಾಜ್ಯವನ್ನು ಆಳುತ್ತಿದ್ದ ರಾಜಪ್ರಭುತ್ವ ಮತ್ತು ಸಮಾಜವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದ ಧಾರ್ಮಿಕ

ಪ್ರಭುತ್ವಗಳೆರಡೂ ಒಟ್ಟೊಟ್ಟಿಗೆ ಸಾಗಿ ಬಂದಿರುವುದನ್ನು ಆಕರಗಳು ಸ್ಪಷ್ಟಪಡಿಸುತ್ತವೆ. ಇಲ್ಲಿ ಒಂದು ಮತ್ತೊಂದನ್ನು ಅವಲಂಬಿಸಿಕೊಂಡಿರುವುದು, ಹೆಚ್ಚೆಚ್ಚು ದೇವಾಲಯಗಳು ನಿರ್ಮಾಣಗೊಂಡಿರುವುದಕ್ಕೆ ಕಾರಣವಾಯಿತು ಎಂದರೆ ತಪ್ಪಾಗುವುದಿಲ್ಲ ಎನಿಸುತ್ತದೆ. ಈ ಅವಧಿಯಲ್ಲಿ ವಾಸ್ತುಶಿಲ್ಪವೆಂದರೆ ಅದು ಕೇವಲ ದೇವಾಲಯಗಳ ನಿರ್ಮಾಣ ಎಂಬ ಅರ್ಥವನ್ನು ಸಹ ಪಡೆದುಕೊಂಡಿತು. ಇದರಿಂದಾಗಿ ವಾಸ್ತುಶಿಲ್ಪವು ಸಂಪೂರ್ಣವಾಗಿ ಧಾರ್ಮಿಕ ತಳಹದಿಯ ಮೇಲೆಯೇ ಬೆಳೆಯುವಂತಾಯಿತು. ಅಲ್ಲದೇ ಮೂರ್ತಿಶಿಲ್ಪವೂ ವಾಸ್ತುಶಿಲ್ಪಕ್ಕೆ ಪೂರಕವಾಗಿಯೇ ಬೆಳೆಯಿತು. ಹೀಗೆ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪವು ಆಯಾ ಸಂದರ್ಭದಲ್ಲಿ ಪ್ರಚಾರದಲ್ಲಿದ್ದ ಧರ್ಮಕ್ಕೆ ಅನುಗುಣವಾಗಿ ಬೆಳೆದವು.

ಹೀಗೆ ಪ್ರಾಚೀನ ಕಾಲದಿಂದ ಮಧ್ಯಯುಗೀನ ಸಂದರ್ಭದವರೆಗಿನ ಚರಿತ್ರೆಯು ಧಾರ್ಮಿಕ ಹಿನ್ನೆಲೆಯಲ್ಲಿ ರಚನೆಗೊಂಡು ವಾಸ್ತುಶೈಲಿಯ ಹಿನ್ನೆಲೆಯಲ್ಲಿ ದೇವಾಲಯಗಳು ಮಹತ್ವವನ್ನು ಪಡೆದುಕೊಂಡರೆ, ಅರಸಕೇಂದ್ರಿತ ಪ್ರಭುತ್ವದ ಹಿನ್ನೆಲೆಯಲ್ಲಿ ದೇವಾಲಯಗಳಲ್ಲದೆ, ಇನ್ನಿತರ ಸ್ಮಾರಕಗಳು ತಮ್ಮದೇ ಆದ ಮಹತ್ವವನ್ನು ಪಡೆದುಕೊಂಡವು. ದೇವಾಲಯಗಳಲ್ಲದೆ, ಅರಮನೆಗಳು, ಕೋಟೆ-ಕೊತ್ತಲು, ಕೆರೆ-ಬಾವಿ, ಸಾರ್ವಜನಿಕ ಕಟ್ಟಡಗಳು ರಚನೆಗೊಂಡವು. ಅದರಿಂದಾಗಿ ಈ ಸ್ಮಾರಕಗಳು ಸಹ ಆಯಾ ಸಾಮ್ರಾಜ್ಯದ ಅಸ್ಮಿತೆಗಳನ್ನು ಪ್ರತಿನಿಧಿಸುತ್ತಿದ್ದವು. ಹಾಗಾಗಿ ಆಯಾ ಕಾಲಘಟ್ಟದಲ್ಲಿ ಪ್ರಚಲಿತವಿದ್ದ ವಾಸ್ತುಶೈಲಿ ಲಕ್ಷಣಗಳನ್ನು ತಮ್ಮ ಸ್ಮಾರಕ ಕಟ್ಟಡಗಳಲ್ಲಿ ಅಳವಡಿಸಲಾಗುತ್ತಿತ್ತು.

ಈ ಹಿನ್ನೆಲೆಯಲ್ಲಿ ವಿಜಯನಗರ ಶೈಲಿಗೆ ಒಳಗಾದ ದೇವಾಲಯ ವಾಸ್ತುಶಿಲ್ಪದ ಸ್ಮಾರಕಗಳ ಜೊತೆಗೆ, ಧರ್ಮ ಆಧಾರಿತವಾದಂತಹ ಸ್ಮಾರಕಗಳು ಹಲವು ಕಡೆಗಳಲ್ಲಿ ಕಂಡುಬಂದವು. ಧಾರ್ಮಿಕ ಹಿನ್ನೆಲೆಯ ಸ್ಮಾರಕಗಳು ವಾಸ್ತುಶೈಲಿಯು ಕೆಲವು ಸಂದರ್ಭಗಳಲ್ಲಿ ಮೂರ್ತಿಶಿಲ್ಪಗಳನ್ನು ಅವಲಂಬಿಸಿದವು. ಇದನ್ನು ಹೊರತುಪಡಿಸಿದರೆ ಅರಸಕೇಂದ್ರಿತ ರಾಜಧಾನಿ ಪಟ್ಟಣದ ಪ್ರಮುಖ ವಾಸ್ತುಶೈಲಿಯ ಸ್ಮಾರಕಗಳ ಇಲ್ಲಿ ಮುಖ್ಯವಾಗಿ ನಮಗೆ ಗೋಚರಿಸುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕಮಲಮಹಲ್, ಜಿನಾಲಯ, ರಾಣಿಸ್ನಾನಗೃಹ, ಗಗನ್‌ಮಹಲ್, ದಂನಾಯಕನ ಕೋಟೆ, ಕಾವಲುಗೋಪುರಗಳು ಇವು ಅಂದಿನ ಅರಸರ ಅಭಿರುಚಿಗೆ ಅನುಗುಣವಾಗಿ ರಚನೆಯಾಗಿರುವ ಹೊಸ ಮಾದರಿಯ ಸ್ಮಾರಕಗಳಾಗಿ ಕಂಡುಬಂದಿವೆ. ವಿಜಯನಗರ ಸಮಕಾಲೀನ ಸಂದರ್ಭದ ಅಂದರೆ ೧೩೪೭ರಲ್ಲಿ ದಕ್ಷಿಣ ಭಾರತದಲ್ಲಿ ಸ್ಥಾಪನೆಯಾದ ಬಹಮನಿ ರಾಜ್ಯದ ವಾಸ್ತುಶೈಲಿಯ ಪ್ರಭಾವವು ವಿಜಯನಗರ ಸಾಮ್ರಾಜ್ಯದ ಮೇಲೆ ಕಂಡುಬಂದಿದೆ. ದಖ್ಖನ್‌ನಲ್ಲಿ ಪ್ರಚಲಿತವಾಗಿದ್ದ ದಖ್ಖನಿ ಶೈಲಿಯ ವಾಸ್ತುರಚನೆಯು ವಿಜಯನಗರದಲ್ಲಿಯೂ ಕಂಡುಬಂದಿತು. ಹೀಗೆ ವಿಜಯನಗರ ಸ್ಮಾರಕಗಳು ಈ ಹೊಸ ಶೈಲಿಯನ್ನು ತಮ್ಮ ಸ್ಥಳೀಯ ವಾಸ್ತುಶೈಲಿಯೊಂದಿಗೆ ಸಂಮಿಶ್ರಣಗೊಳಿಸಿಕೊಂಡು, ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯಾಗಿ ವಿಜಯನಗರ ಸಾಮ್ರಾಜ್ಯದಲ್ಲಿ ಬೆಳೆಯಲು ಕಾರಣವಾಯಿತು. ದಖ್ಖನ್ ಶೈಲಿ ಹಾಗೂ ಇಂಡೋ-ಇಸ್ಲಾಮಿಕ್ ಶೈಲಿ ಕುರಿತಾದ ವಿವರಗಳನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

೮.೨. ಇಂಡೋ-ಇಸ್ಲಾಮಿಕ್ ವಾಸ್ತುಶೈಲಿ

ದಕ್ಷಿಣ ಭಾರತದ ಚರಿತ್ರೆಯಲ್ಲಿ ಲಭ್ಯವಿರುವ ನಾಗರ, ವೇಸರ, ದ್ರಾವಿಡ ಶೈಲಿಯ ದೇವಾಲಯಗಳ ಬೆಳವಣಿಗೆಯು ಕದಂಬ, ಗಂಗ, ಚಾಲುಕ್ಯ, ಹೊಯ್ಸಳ ಶೈಲಿಗಳೆಂದು ಗುರುತಿಸಿಕೊಂಡವು.[೧೧] ಪಾಶ್ಚಿಮಾತ್ಯ ವಿದ್ವಾಂಸರು ಈ ದೇವಾಲಯಗಳನ್ನು ಇಂಡೋ-ಆರ್ಯನ್, ದ್ರಾವಿಡಿಯನ್, ಚಾಲುಕ್ಯನ್ ಎಂಬುದಾಗಿ ಗುರುತಿಸಿದರು.[೧೨] ನಾಗರ, ದ್ರಾವಿಡ, ವೇಸರ ಶೈಲಿಗಳು ಪ್ರಚಲಿತವಾಗಿ ದಾಕ್ಷಿಣಾತ್ಯ ಸಂಪ್ರದಾಯದ ವಾಸ್ತುಶಿಲ್ಪಗಳಾದವು. ಹೀಗೆ ದಕ್ಷಿಣ ಭಾರತದಲ್ಲಿನ ವಾಸ್ತುಶಿಲ್ಪದ ರಚನೆಯು ದಖ್ಖನ್ ದೇವಾಲಯ ಶೈಲಿಗಳಾಗಿ ಗುರುತಿಸಿಕೊಂಡವು. ವಿಜಯನಗರ ಕಾಲದಲ್ಲಿ ದಾಕ್ಷಿಣಾತ್ಯ ಶೈಲಿಯ ಬೆಳವಣಿಗೆ ಪಡೆಯಿತು. ಆದರೆ ಈ ಸಾಂಪ್ರದಾಯಿಕ ವಾಸ್ತುಶೈಲಿಯ ಜೊತೆಗೆ ಮಧ್ಯಯುಗದಲ್ಲಿ ಭಾರತಕ್ಕೆ ಪ್ರವೇಶ ಪಡೆದ ಮುಸ್ಲಿಂ ವಾಸ್ತುಶೈಲಿಯ ಪ್ರಭಾವವು ವಿಜಯನಗರ ವಾಸ್ತುಶಿಲ್ಪದಲ್ಲಿ ಕಂಡುಬಂದಿತು. ದೆಹಲಿ ಸುಲ್ತಾನರ ಆಳ್ವಿಕೆಯಲ್ಲಿ ಪ್ರವೇಶ ಪಡೆದ ಮುಸ್ಲಿಂ/ಇಸ್ಲಾಮಿಕ್ ವಾಸ್ತುಶೈಲಿಯು ದಖ್ಖನ್ ಪ್ರಾಂತ್ಯಕ್ಕೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ವಿಜಯನಗರದ ಅರಸರು ಮುಸ್ಲಿಂ/ಇಸ್ಲಾಮಿಕ್ ವಾಸ್ತುಶೈಲಿಯನ್ನು ತಮ್ಮ ಸ್ಥಳೀಯ ವಾಸ್ತುಶೈಲಿಯೊಂದಿಗೆ ಮಿಶ್ರಿತವಾಗಿ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿ ಕಟ್ಟಡಗಳು ನಿರ್ಮಾಣವಾದವು. ಮುಸ್ಲಿಂ ವಾಸ್ತುಶೈಲಿಯ ಪ್ರಭಾವವು ವಿಜಯನಗರ ಸ್ಮಾರಕಗಳ ಬೆಳವಣಿಗೆಯಲ್ಲಿ ಆದಂತಹ ಬದಲಾವಣೆಯನ್ನು ತಿಳಿಯುವ ಪೂರ್ವದಲ್ಲಿ ಮುಸ್ಲಿಂ ವಾಸ್ತುಶೈಲಿಯ ಸ್ವರೂಪ, ಹುಟ್ಟು, ವಿಸ್ತಾರವನ್ನು ಮೊದಲು ತಿಳಿದುಕೊಳ್ಳಬೇಕಾಗಿದೆ.

ಮುಸ್ಲಿಂ ವಾಸ್ತುಶಿಲ್ಪವು ಮೊದಲಿಗೆ ಅರೇಬಿಯಾದಲ್ಲಿ ಆರಂಭಗೊಂಡಿತು.[೧೩] ಕ್ರಿ.ಶ. ೭ನೇ ಶತಮಾನದಲ್ಲಿ ಮುಸ್ಲಿಂ ವಾಸ್ತುಶೈಲಿಯು ಹುಟ್ಟುವುದಕ್ಕೆ ಪೂರ್ವದಲ್ಲೇ ಸಿರಿಯ, ಮೆಸಪೊಟೋಮಿಯ ಮತ್ತು ಇನ್ನಿತರ ಪಾಶ್ಚಾತ್ಯ ದೇಶಗಳಲ್ಲಿ ವಾಸ್ತುಶಿಲ್ಪ, ಚಿತ್ರರಚನೆ ಮುಂತಾದ ಕಲೆಗಳು ಬೆಳೆದಿದ್ದವು.[೧೪] ಇಸ್ಲಾಂ ಧರ್ಮ ಪ್ರಾರಂಭದ ನಂತರ ಮುಸ್ಲಿಂ ವಾಸ್ತುಶಿಲ್ಪವು ಮಸೀದಿಗಳ ನಿರ್ಮಾಣದ ಮೂಲಕ ತನ್ನ ರಚನಾಶೈಲಿಗೆ ತಳಹದಿ ಹಾಕಿತು. ಮಹಮ್ಮದ್ ಪೈಗಂಬರ್ ಕ್ರಿ.ಶ. ೬೨೨ರಲ್ಲಿ ಮದೀನಕ್ಕೆ ಬಂದ ನಂತರ ಅಲ್ಲಿ ತಮ್ಮ ಅನುಯಾಯಿಗಳ ಸಹಾಯದಿಂದ ಒಂದು ಮಸೀದಿಯನ್ನು ಕಟ್ಟಿದರು. ಆ ಮಸೀದಿಯ ಕಟ್ಟಡವು ಬಹುಸಾಮಾನ್ಯವಾಗಿತ್ತು. ಅದು ಮಣ್ಣಿನಿಂದ ಕಟ್ಟಿದ ಗೋಡೆಗಳು, ಬೋಳು ಬೋಳಾಗಿರುವ ತಾಳೆಯ ಸೋಗೆ ಮತ್ತು ಮಣ್ಣಿನ ಛಾವಣಿಯನ್ನು ಹೊಂದಿದ ಒಂದು ಸಣ್ಣ ಗುಡಿಸಲಾಗಿತ್ತು. ಆ ಮಸೀದಿಯು ಪೈಗಂಬರ್ ಮಹಮ್ಮದ್ ಅವರು ವಾಸವಾಗಿದ್ದ ಗುಡಿಸಲುಗಳ ಸಮೀಪದಲ್ಲೇ ಇದ್ದಿತು.

ಇಸ್ಲಾಂ ಧರ್ಮದಲ್ಲಿ ಮಸೀದಿಯ ಪ್ರಾರ್ಥನಾಲಯ ಮಾತ್ರವಲ್ಲದೆ ವಿದ್ಯಾಶಾಲೆ, ಗ್ರಂಥಾಲಯ, ಛತ್ರ ಮೊದಲಾದವುಗಳಾಗಿಯೂ ಉಪಯೋಗಿಸಲ್ಪಡುವ ಮುಸ್ಲಿಮರ ಜೀವನಕ್ಕೆ ಕೇಂದ್ರವಾಯಿತು. ಈ ಕಾರಣದಿಂದ ಕ್ರಮೇಣ ಮುಸ್ಲಿಂ ವಾಸ್ತುಶಿಲ್ಪದ ವೈಭವದ ಶೈಲಿಯು ಪ್ರಥಮವಾಗಿ ಈ ಮಸೀದಿಗಳಲ್ಲಿ ಕಂಡುಬರಲು ಪ್ರಾರಂಭವಾಯಿತು.

ಮುಸ್ಲಿಂ ವಾಸ್ತುಶಿಲ್ಪದ ವೈಶಿಷ್ಟ್ಯಗಳೆಂದರೆ ಇವುಗಳಲ್ಲಿ ಯಾವ ವಿಧದ ಪ್ರತಿಮಾ ಚಿತ್ರಗಳಾಗಲಿ ವಿಗ್ರಹಗಳಾಗಲಿ ಇಲ್ಲದೆ ಇರುವುದು. ಸಾಮಾನ್ಯವಾಗಿ ಪ್ರಾರ್ಥನಾ ಮಂದಿರಗಳೂ, ವೇದಿಕೆಗಳೂ ಇದ್ದು ಕಮಾನುಗಳೂ, ಮೀನಾರುಗಳೂ(ಗುಮ್ಮಟಗಳು), ಲಿಪಿರೇಖಾ ಚಿತ್ರಗಳೂ ಕಂಡುಬರುವುದು (ಮಿನಾರ್ ಅಥವಾ ಮಿನಾರ್ ಎಂದರೆ–ಜ್ಯೋತಿರ್ ಮಂದಿರ ಅಥವಾ ಅಗ್ನಿಮಂದಿರ ಎಂದರ್ಥ). ಮಸೀದಿಗಳಲ್ಲಿಯ ಚಿತ್ರಗಳೆಲ್ಲವೂ ಮನುಷ್ಯ ಜೀವನಕ್ಕೆ ಸಂಬಂಧಪಡದೆ, ಸಾಂಕೇತಿಕ ಚಿತ್ರಗಳಾಗಿದ್ದುವು.[೧೫] ಹಾಗಾಗಿ ಮುಸ್ಲಿಮರ ಈ ತೆರನಾಗಿ ಕಟ್ಟಲ್ಪಟ್ಟಿದ್ದರಿಂದ ಅವರ ವಾಸ್ತುಶಿಲ್ಪ ಇತರ ಸಮುದಾಯಗಳಿಗಿಂತ ಭಿನ್ನವಾಗಿ ಬೆಳೆಯಿತು.

ಇಸ್ಲಾಂ ಧರ್ಮವು ವಿಗ್ರಹ ರಚನೆ, ಅದರ ಆರಾಧನೆ ಮತ್ತು ಚಿತ್ರಕಲೆಯಲ್ಲಿ ಮನುಷ್ಯ, ಪಶು, ಪಕ್ಷಿ ಮುಂತಾದ ಜೀವಿಗಳ ನಿರೂಪಣೆ ನಿಷಿದ್ಧವಾಗಿದೆ. ದೇವರ ವಿನಾ ಮತ್ತೊಬ್ಬರಿಗೆ ಆಕೃತಿಗಳನ್ನು ಸೃಷ್ಟಿಸುವ ಅಧಿಕಾರವಿಲ್ಲವೆಂದು ಅವರು ಭಾವಿಸಿದ್ದರು. ಹಾಗಾಗಿ ಹಂತದಲ್ಲಿ ಮುಸ್ಲಿಂ ವಾಸ್ತುಕಲೆಯಲ್ಲಿ ಮಾನವ, ಪಶು, ಪ್ರಾಣಿಗಳ ಆಕೃತಿಗಳು ಕಂಡುಬರುವುದಿಲ್ಲ. ಅಂದರೆ ಜೀವಂತವಾದ ಆಕೃತಿಗಳ ರಚನೆ ಘೋರ ಪಾಪವೆಂದು ಹನಫಿ ಪಂಥ(ಸುನ್ನಿ)ದವರು ಪಾಲಿಸಿದರು. ನಂತರದಲ್ಲಿ ಶಿಯಾ ಪಂಥದವರು ಈ ರೀತಿಯ ನಿಯಮಗಳನ್ನು ಪಾಲಿಸಲಿಲ್ಲ.[೧೬] ಹೀಗೆ ಮುಸ್ಲಿಂ ವಾಸ್ತುಶೈಲಿಯ ಎರಡು ಪಂಥಗಳಲ್ಲಿ ವಿಭಿನ್ನವಾಗಿ ಗುರುತಿಸಿಕೊಂಡಿತು. ಶಿಯಾ ಹಾಗೂ ಸುನ್ನಿಗಳ ನಡುವೆ ವಾಸ್ತುಶಿಲ್ಪಗಳು ಎರಡು ಆಯಾಮಗಳಾಗಿ ಬೆಳವಣಿಗೆ ಹೊಂದಿದವು. ಮುಸ್ಲಿಂ ಪ್ರಭುತ್ವ ಸ್ಥಾಪನೆ ನಂತರದಲ್ಲಿ ಮಧ್ಯ ಏಷ್ಯಾ, ಸ್ಪೇನ್, ಇರಾನ್‌ನಲ್ಲಿ ಪ್ರಾರಂಭಿಕ ಹಂತದ ವಾಸ್ತುಶೈಲಿ ರಚನೆಯಲ್ಲಿ ಮನುಷ್ಯ ಮತ್ತು ಪ್ರಾಣಿಗಳ ಚಿತ್ರಗಳು ಹೊಂದಿದ್ದವು. ಅಲ್ಲದೆ ಸುಂದರ ಲಿಪಿಯಲ್ಲಿ ಕೆತ್ತಿದ ಕುರಾನ್ ವಚನಗಳು, ಮರದಲ್ಲಿ ಅಥವಾ ಅಮೃತ ಶಿಲೆಯಲ್ಲಿ ಕೊರೆದ ರೇಖಾಚಿತ್ರಗಳೂ, ಸಸ್ಯಚಿತ್ರಗಳೂ, ಬಗೆಬಗೆಯ ಬಣ್ಣಗಳ ಕಟ್ಟಡವೂ, ನುಣ್ಣನೆಯ ಹೊಳಪು ಬಿಲ್ಲೆಗಳ ಹೊದಿಕೆಯೂ ಮುಸ್ಲಿಂ ಚಿತ್ರ ಪದ್ಧತಿಯಲ್ಲಿ ಮುಖ್ಯವಾದವು.[೧೭] ಈ ರೀತಿಯ ವಾಸ್ತು ರಚನೆಯು ಮಸೀದಿ ಹಾಗೂ ಪವಿತ್ರ ಸ್ಥಳಗಳಲ್ಲಿ ಕಂಡುಬರುವ ಲಕ್ಷಣಗಳಾದವು. ನಂತರ ಸೂಫಿಸಂತರ, ಸುಲ್ತಾನರ ಮತ್ತು ಇತರ ಪ್ರಸಿದ್ಧ ಪುರುಷರ ಗೋರಿಗಳು ಕಟ್ಟಡಗಳ ಮುಸ್ಲಿಂ ವಾಸ್ತುಶೈಲಿಯ ರಚನೆ ಪ್ರಭಾವಿಸಿತು. ನಂತರದಲ್ಲಿ ಅರಮನೆ, ಕೋಟೆ, ಸಾರ್ವಜನಿಕ ಕಟ್ಟಡಗಳಲ್ಲಿ ತನ್ನ ವಿಸ್ತಾರವನ್ನು ಪಡೆದುಕೊಂಡಿತು. ಹೀಗೆ ಅರಬ್‌ನಿಂದ ಪ್ರಾರಂಭವಾದ ವಾಸ್ತುಶೈಲಿಯ ರಚನೆಯು ನಂತರದಲ್ಲಿ ತನ್ನ ವ್ಯಾಪ್ತಿಯನ್ನು ಆಫ್ರಿಕಾ, ಯುರೋಪ್ ಮತ್ತು ಏಷ್ಯಾ ಖಂಡಗಳವರೆಗೂ ವಿಸ್ತರಿಸಿಕೊಂಡಿತು.[೧೮]

ಪರ್ಶಿಯಾದಲ್ಲಿ ಉದಯಿಸಿದ ಮುಸ್ಲಿಂ ಕಲೆಯನ್ನು ಎರಡು ಮುಖ್ಯ ಯುಗಗಳನ್ನಾಗಿ ಗುರುತಿಸಬಹುದು.

೧. ಉಮ್ಮಾಯಿದ್ ಸುಲ್ತಾನರ ಯುಗ (೬೬೧–೭೫೦)

೨. ಅಬ್ಬಾಸಿದ್ ಸುಲ್ತಾನರ ಯುಗ (೭೫೦–೧೨೫೦)

ಮೊದಲ ಯುಗದಲ್ಲಿ ಮಹಮ್ಮದ್ ಪೈಗಂಬರ್ ಪ್ರಚಾರ ಮಾಡಿದ ನಿರ್ಬಂಧಗಳನ್ನು ಕಲೆಯಲ್ಲಿ ಅನುಸರಿಸಲಾಯಿತು. ಆದ ಕಾರಣ ಕೇವಲ ಕಲ್ಪನಾರೂಪದ ಅಲಂಕಾರ ಶೈಲಿ ಮಾತ್ರ ಕಂಡುಬರುತ್ತದೆ. ಕೆಲವು ಕಾಲದ ನಂತರ ಮನುಷ್ಯ ಪಶು, ಪಕ್ಷಿ ರೂಪಗಳನ್ನು ಸೇರಿಸಲಾಯಿತು. ಅಬ್ಬಾಸಿದ್ ಕಾಲಾವಧಿಯಲ್ಲಿ ಶಿಯಾ ಪಂಗಡಕ್ಕೆ ಸೇರಿದ ರಾಜನಾಗಿದ್ದರಿಂದ ಚಿತ್ರಕಲೆ ಪ್ರಾಧಾನ್ಯತೆ ಪಡೆಯಿತು. ಈ ರೀತಿಯ ಶೈಲಿಯ ರಚನೆಯನ್ನು ಮೆಸೊಪೊಟೋಮಿಯ ಸಂಪ್ರದಾಯವೆಂದು ಕರೆಯುತ್ತಾರೆ.[೧೯] ಈ ಹಿನ್ನೆಲೆಯಲ್ಲಿ ಕ್ರಿ.ಶ. ೧೨ನೇ ಶತಮಾನವು ದೆಹಲಿಯಲ್ಲಿ ಪ್ರಭುತ್ವ ಸ್ಥಾಪಿಸಿದ ಸುಲ್ತಾನರು ಮುಸ್ಲಿಂ ಕಲೆ ಮತ್ತು ವಾಸ್ತುಶಿಲ್ಪವನ್ನು ಭಾರತಕ್ಕೆ ಪರಿಚಯಿಸಿದರು. ಭಾರತದ ಚರಿತ್ರೆಯಲ್ಲಿ ಮಧ್ಯಯುಗದಲ್ಲಿ ಮುಸ್ಲಿಂ ವಾಸ್ತುಶೈಲಿಯ ಹೊಸ ಯುಗವೇ ಪ್ರಾರಂಭಗೊಂಡಿತು. ದೆಹಲಿಯಲ್ಲಿ ಪ್ರಥಮ ಮುಸ್ಲಿಂ ಸಾಮ್ರಾಜ್ಯವನ್ನು ಸ್ಥಾಪಿಸಿದ ಗುಲಾಮ ಸಂತತಿಯ ಸುಲ್ತಾನರು ಮೂಲತಃ ಪರ್ಶಿಯಾದ ಖಲೀಫರ ಪ್ರಭಾವಕ್ಕೆ ಒಳಪಟ್ಟಿದ್ದರು. ಹಾಗಾಗಿ ಪರ್ಶಿಯಾದ ಪ್ರಭಾವವು ಭಾರತದ ರಾಜಕೀಯ, ಸಾಂಸ್ಕೃತಿಕ ಪ್ರಭುತ್ವದ ಮೇಲೆ ಬೀರಿತ್ತು.

ಉಮ್ಮಾಯಿದ್ ಹಾಗೂ ಅಬ್ಬಾಸಿದ್‌ರ ಪ್ರಭುತ್ವಗಳಲ್ಲಿ ಆದಂತಹ ಸಾಂಸ್ಕೃತಿಕ ಬೆಳವಣಿಗೆಗಳ ಪ್ರಭಾವವು ಭಾರತದ ಸುಲ್ತಾನರ ಸಾಂಸ್ಕೃತಿಕತೆಯ ಮೇಲೆಯೂ ಬೀರಿತು. ಅವುಗಳಲ್ಲಿ ಕಲೆ ಮತ್ತು ವಾಸ್ತುಶಿಲ್ಪವು ಒಂದಾಗಿದೆ. ಮುಸ್ಲಿಂ ವಾಸ್ತುಶೈಲಿಯು ಮಧ್ಯಏಷ್ಯಾ, ಇರಾನ್, ಅಫಘನ್, ಸಿರಿಯಾನ್, ಬೈಜಂಟಿನ್, ಈಜಿಪ್ಟ್ ರಾಷ್ಟ್ರಗಳಲ್ಲಿ ಬೆಳೆದ ನಂತರ, ಭಾರತದಲ್ಲಿಯೂ ಇದು ಪ್ರವೇಶ ಪಡೆಯಿತು. ಅದು ಭಾರತದಲ್ಲಿಯೂ ಕ್ರಿ.ಶ. ೧೨–೧೩ನೇ ಶತಮಾನದಲ್ಲಿ ಮುಸ್ಲಿಂ ವಾಸ್ತುಶೈಲಿಯ ರಚನೆಯನ್ನು ಪ್ರಾರಂಭಿಸಿತು.[೨೦] ಭಾರತದಲ್ಲಿ ಈ ಹೊಸ ವಾಸ್ತುಶೈಲಿಯು ಸುಲ್ತಾನರ ಪ್ರಾಬಲ್ಯ, ಅಸ್ಮಿತೆಯನ್ನು ಪ್ರತಿಬಿಂಬಿಸಿತು. ಪ್ರಾರಂಭಿಕ ಹಂತದಲ್ಲಿ ಅವರ ವಾಸ್ತುಶೈಲಿಯ ಕೇಂದ್ರ ಬಿಂದು ಮಸೀದಿ ಕಟ್ಟಡಗಳಾಗಿದ್ದವು. ಇಸ್ಲಾಂ ಧರ್ಮವನ್ನು ಪ್ರತಿಬಿಂಬಿಸುವ ಧಾರ್ಮಿಕತೆಯ ಅಸ್ಮಿತೆಯನ್ನು ಗುರುತಿಸುವ ಹಿನ್ನೆಲೆಯಲ್ಲಿ ಇಸ್ಲಾಂ ವಾಸ್ತುಶೈಲಿಯು ರೂಪುಗೊಂಡಿತು. ಇವರು ತಮ್ಮ ಸಂಸ್ಕೃತಿಯ ರಚನೆಯನ್ನು ಕಟ್ಟಡಗಳ ನಿರ್ಮಾಣದ ಮೂಲಕ ಗುರುತಿಸಿಕೊಂಡರು. ದೆಹಲಿ ಸುಲ್ತಾನರು ಅಧಿಕಾರ ಸ್ಥಾಪನೆ ಮಾಡಿದ ನಂತರ ಖಲೀಫರ ವಾಸ್ತುಶೈಲಿಯ ಕಟ್ಟಡಗಳನ್ನು ನಿರ್ಮಿಸಿದರು.

ಇಸ್ಲಾಂ ವಾಸ್ತುಶೈಲಿಯ ಪ್ರಮುಖ ಲಕ್ಷಣವೆಂದರೆ ಕಮಾನು, ಗುಮ್ಮಟ, ತೆರೆದ ವಿಶಾಲ ಅಂಗಳ, ಎತ್ತರದ ಗೋಪುರಗಳು (ಮಿನಾರ್). ಈ ವಾಸ್ತುಶೈಲಿ ರಚನೆಯನ್ನು ಪ್ರಥಮವಾಗಿ ಮಸೀದಿ ಕಟ್ಟಡಗಳಲ್ಲಿ ಪ್ರಯೋಗಿಸಿದರು. ಇಸ್ಲಾಮಿಕ್ ವಾಸ್ತುಶೈಲಿಯಲ್ಲಿ ಸೆಳೆಯುವ ಲಕ್ಷಣವೆಂದರೆ ಅದು ಕಮಾನುಗಳ ರಚನೆಯಾಗಿದೆ. ಇಸ್ಲಾಂ ವಾಸ್ತುಶೈಲಿಯಲ್ಲಿ ಬಳಸಲ್ಪಟ್ಟ ಕಮಾನುಗಳು ಮಹಮ್ಮದ್ ಪೂರ್ವದಲ್ಲಿ ರೋಮನ್ ಕಾಲಾವಧಿಯಲ್ಲಿ ಬಳಕೆಯಲ್ಲಿತ್ತು. ಈ ಹಿನ್ನೆಲೆಯಲ್ಲಿ ಭಾರತದ ವಾಸ್ತುಶೈಲಿ ರಚನೆಯಲ್ಲಿ ಹೊಸ ಸ್ವರೂಪದ ತಾಂತ್ರಿಕತೆಯನ್ನು ಬಳಸಲಾಯಿತು.[೨೧] ದೆಹಲಿ ಸುಲ್ತಾನರು ಮುಸ್ಲಿಂ ವಾಸ್ತುಶೈಲಿಯ ಲಕ್ಷಣಗಳನ್ನು ಬಳಸಿಕೊಂಡು ಬೃಹತ್ ಗಾತ್ರದ ಸ್ಮಾರಕಗಳನ್ನು ರಚಿಸಿದರು. ಈ

ಸ್ಮಾರಕಗಳನ್ನು ಕಟ್ಟುವ ಸಂದರ್ಭದಲ್ಲಿ ಇಲ್ಲಿ ಸ್ಥಳೀಯವಾಗಿ ಚಾಲ್ತಿಯಲ್ಲಿದ್ದ ಹಿಂದೂ ವಾಸ್ತುಶೈಲಿಯನ್ನು ಬಳಸಿಕೊಳ್ಳಲಾಯಿತು. ಹಾಗಾಗಿ ಭಾರತದಲ್ಲಿ ಹಿಂದೂ ವಾಸ್ತುಶೈಲಿಯ ಲಕ್ಷಣಗಳನ್ನು ಒಳಗೊಂಡ ಮುಸ್ಲಿಂ ವಾಸ್ತುಶೈಲಿಯ ಕಟ್ಟಡಗಳು ನಿರ್ಮಾಣಗೊಂಡವು. ಉದಾಹರಣೆಗೆ ಭಾರತದಲ್ಲಿ ಕುತುಬುದ್ದೀನ್ ಐಬಕ್‌ನ ಕಾಲಾವಧಿಯಲ್ಲಿ ಕಟ್ಟಲಾದ 'ಕುವ್ವತ್-ಉಲ್-ಇಸ್ಲಾಂ' ಮಸೀದಿಯು ಮುಸ್ಲಿಂ ವಾಸ್ತುಶೈಲಿಯ ಸ್ಮಾರಕವಾಗಿದೆ.[೨೨] ಈ ಮಸೀದಿಯ ರಚನೆಯಲ್ಲಿ ಮುಸ್ಲಿಂ ವಾಸ್ತುಶೈಲಿಯ ಲಕ್ಷಣಗಳಾದ ಕಂಬಗಳು(ಮಿನಾರ್), ಗೋಡೆ, ತೆರೆದ ಅಂಗಳ, ಮಿಖಾಬ್‌ಗಳನ್ನು ಕಟ್ಟಲಾಯಿತು. ಈ ಮಸೀದಿಯನ್ನು ನಿರ್ಮಿಸುವಾಗ ಸ್ಥಳೀಯ ಹಿಂದೂ ಕುಶಲಕರ್ಮಿ ವರ್ಗದವರನ್ನು ಬಳಸಿಕೊಳ್ಳಲಾಯಿತು. ಹಾಗಾಗಿ ಮುಸ್ಲಿಂ ವಾಸ್ತುಶೈಲಿಯ ಸಂಪೂರ್ಣ ಜ್ಞಾನ ಇಲ್ಲದ ವಾಸ್ತುಶಿಲ್ಪಿಗಳು ಕಟ್ಟಡವನ್ನು ನಿರ್ಮಿಸುವ ಸಂದರ್ಭದಲ್ಲಿ ಹಿಂದೂ ವಾಸ್ತುಶೈಲಿಯ ಲಕ್ಷಣಗಳನ್ನು ಬಳಸಿಕೊಂಡರು.[೨೩] ಈ ಹಿನ್ನೆಲೆಯಲ್ಲಿ ಭಾರತವು ಮಧ್ಯಯುಗದಲ್ಲಿ ವಾಸ್ತುಶಿಲ್ಪ ರಚನೆಯಲ್ಲಿ ವಿಶಿಷ್ಟವಾದ ಹಿಂದೂ-ಮುಸ್ಲಿಂ ವಾಸ್ತುಶೈಲಿಗಳನ್ನು ಒಳಗೊಂಡ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯ ಉಗಮಕ್ಕೆ ಕಾರಣವಾಯಿತು.

ದೆಹಲಿ ಸುಲ್ತಾನರು ಮುಸ್ಲಿಂ ಸ್ಮಾರಕಗಳನ್ನು ನಿರ್ಮಿಸುವಾಗ ಹಲವು ಹಿಂದೂ ವಾಸ್ತುಶೈಲಿಯನ್ನು ಹೊಂದಿದ ದೇವಾಲಯದ ಮೇಲೆ ಛಾವಣಿ ಹಾಗೂ ಬೃಹತ್ ಗೊಮ್ಮಟ ಹಾಗೂ ಮಿನಾರ್‌ಗಳನ್ನು ಸೇರಿಸಿ ದುರಸ್ತಿ ಮಾಡಲಾಯಿತು[೨೪] ಹೀಗೆ ಸುಲ್ತಾನರ ಆಳ್ವಿಕೆ ಸಂದರ್ಭದಲ್ಲಿ ಇಸ್ಲಾಮಿಕ್ ವಾಸ್ತುಶೈಲಿಯು ಸ್ಥಳೀಯ ಶೈಲಿಯಾಗಿ ರೂಪವನ್ನು ಪಡೆದುಕೊಂಡಿತು. ಆ ಮೂಲಕ ಹಿಂದೂ ಹಾಗೂ ಮುಸ್ಲಿಂ ಸ್ವರೂಪದ ವಾಸ್ತುಶೈಲಿ ರಚಿಸಲ್ಪಟ್ಟಿತು. ತದನಂತರದಲ್ಲಿ ಮುಸ್ಲಿಂ ಪ್ರಭುತ್ವವು ಉತ್ತರ ಭಾರತಾದ್ಯಂತ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಎಲ್ಲೆಲ್ಲಿ ತಮ್ಮ ರಾಜ್ಯ ಸ್ಥಾಪನೆ ಮಾಡಿದವು ಆ ಪ್ರದೇಶಗಳಲ್ಲೆಲ್ಲಾ ಇಂಡೋ-ಇಸ್ಲಾಮಿಕ್ ಮಾದರಿಯ ಕಟ್ಟಡಗಳು ತಲೆ ಎತ್ತತೊಡಗಿದವು. ಮುಸ್ಲಿಂ ಸಾಮ್ರಾಜ್ಯ ವಿಸ್ತಾರಗೊಳ್ಳುತ್ತಾ ಹೋದ ಹಾಗೆ ಮುಸ್ಲಿಂ ವಾಸ್ತುಶೈಲಿಯು ಪ್ರಾದೇಶಿಕವಾಗಿ ಸ್ಥಳೀಯರಲ್ಲಿ ಸಂಮಿಶ್ರಣಗೊಳ್ಳುತ್ತಾ ಹೋಯಿತು. ಹೀಗೆ ಮುಲ್ತಾನ್, ಗುಜರಾತ್, ಬಂಗಾಳ, ದಖ್ಖನ್ ಪ್ರಾಂತ್ಯಗಳಲ್ಲಿ ಮುಸ್ಲಿಂ ವಾಸ್ತುಶೈಲಿಯು ಸ್ಥಳೀಯ ಶೈಲಿಯಾಗಿ ಪ್ರಚಲಿತಗೊಂಡಿತು.[೨೫] ಮುಸ್ಲಿಂ ವಾಸ್ತುಶೈಲಿಯು ಪ್ರಾಂತೀಯ ರಾಜ್ಯಗಳಲ್ಲಿ ಆರಂಭವಾಗಿ ಅವು ಆಯಾ ಪ್ರಾಂತೀಯ ಶೈಲಿಯಾಗಿ ರೂಪವನ್ನು ಪಡೆದವು.[೨೬] ಹೀಗೆ ಹಿಂದೂ-ಮುಸ್ಲಿಂ ಶೈಲಿಯ ಪ್ರಭಾವಕ್ಕೆ ಒಳಗಾದ ಪ್ರದೇಶಗಳಲ್ಲಿ ದಕ್ಷಿಣ ಭಾರತವು ಒಂದಾಗಿತ್ತು.

ಮುಲ್ತಾನ್ ಶೈಲಿಯು ಕ್ರಿ.ಶ. ೯ನೇ ಶತಮಾನದಿಂದ ೧೬ನೇ ಶತಮಾನದವರೆಗೆ ಕಂಡುಬರುತ್ತದೆ. ದೆಹಲಿ ಸುಲ್ತಾನರು ಕಟ್ಟಿದ ವಾಸ್ತುಶೈಲಿಯನ್ನು ರಚಿಸಿದರು. ಇದನ್ನು ಪ್ರಾಂತೀಯ ಅರಸು ಸ್ಥಳೀಯ ಶೈಲಿಯ ಸಂಮಿಶ್ರಣವನ್ನು ಹೊಂದಿದ ಮುಲ್ತಾನ್ ಶೈಲಿ ಎಂದು ಪ್ರಚಲಿತಗೊಂಡಿತು. ಮುಲ್ತಾನ್ ಶೈಲಿ ಹಾಗೂ ಲಾಹೋರ್ ಶೈಲಿಗಳು ಪರ್ಶಿಯನ್ ಪ್ರಭಾವದಿಂದ ಇಲ್ಲಿ ಉದ್ಭವಗೊಂಡವು.[೨೭]

ಗುಜರಾತ್ ಶೈಲಿಯು ಅಲ್ಲಾವುದ್ದೀನ್ ಖಿಲ್ಜಿ (೧೨೯೮) ಆಳ್ವಿಕೆ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದಿತು. ಕ್ರಿ.ಶ. ೧೫ನೆಯ ಶತಮಾನದ ವೇಳೆಗಾಗಲೇ ಭವ್ಯ ಸ್ಮಾರಕಗಳು ನಿರ್ಮಾಣಗೊಂಡವು. ಇಲ್ಲಿ ಪ್ರಾಂತೀಯ ಕುಶಲಕರ್ಮಿಗಳನ್ನು ಬಳಸಿಕೊಂಡು ಕಟ್ಟಡಗಳನ್ನು ರಚಿಸಿದರು.[೨೮]

ಬಂಗಾಳ ಶೈಲಿಯು ಕ್ರಿ.ಶ.೧೩ನೇ ಶತಮಾನದಿಂದ ೧೬ನೇ ಶತಮಾನದವರೆಗೂ ತನ್ನ ಬೆಳವಣಿಗೆಯನ್ನು ಕಂಡಿತು. ಇವರ ಶೈಲಿಯಲ್ಲಿ ಹೊರಗಡೆಯಿಂದ ಕಟ್ಟಡಗಳನ್ನು ನೋಡಿದಾಗ ಗೋರಿಗಳಂತೆ ಕಂಡರೂ ಹಿಂದೂ ದೇವಾಲಯಗಳಂತೆ ಕಟ್ಟಿರುತ್ತಾರೆ. ಹೆಚ್ಚಾಗಿ ಇಟ್ಟಿಗೆಯ ಬಳಕೆಯು ಕಟ್ಟಡಗಳ ನಿರ್ಮಾಣದಲ್ಲಿ ಕಂಡುಬರುತ್ತದೆ. ಬಂಗಾಳ ಶೈಲಿಯ ವಿಶಿಷ್ಟವೆಂದರೆ ಚಿಕ್ಕ ಕಂಬಗಳ ಮೇಲೆ ಗೋಡೆಗಳ ಮೇಲ್ಭಾಗದಲ್ಲಿ ವಕ್ರರೇಖೆಯುಳ್ಳ ಕಮಾನುಗಳು ಸುಂದರವಾದ ಚಿತ್ರಕಲೆಯನ್ನು ನೋಡಬಹುದು.[೨೯] ಹೀಗೆ ಮುಸ್ಲಿಂ ವಾಸ್ತುಶೈಲಿಯು ಭಾರತದಾದ್ಯಂತ ಹಲವು ಪ್ರಮುಖ ಪ್ರದೇಶಗಳಲ್ಲಿ ತನ್ನ ವೈಶಿಷ್ಟ್ಯತೆಯನ್ನು ವಿಸ್ತರಿಸಿಕೊಂಡಿತು. ಜಾಗತಿಕ ಮಟ್ಟದಲ್ಲಿ ಮೂಲತಃ ಇಸ್ಲಾಮಿಕ್ ವಾಸ್ತುಶೈಲಿಯು ಭಾರತದಲ್ಲಿ ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಇಂಡೋ–ಇಸ್ಲಾಮಿಕ್ ಸ್ವರೂಪವನ್ನು ಪಡೆದು ಕೊಂಡಿತು. ದಖ್ಖನ್ ಶೈಲಿಯನ್ನು ವಿವರಿಸುವ ಪೂರ್ವದಲ್ಲಿ ಇಸ್ಲಾಮಿಕ್ ವಾಸ್ತುಶೈಲಿಯ ಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಇಸ್ಲಾಮಿಕ್ ಶೈಲಿಯ ಲಕ್ಷಣಗಳು

೧. **ಮಸೀದಿ :** ಮಸೀದಿಯು ಮುಸ್ಲಿಂ ಸಮುದಾಯಗಳು ಪ್ರಾರ್ಥನೆ ಮಾಡುವ ಸ್ಥಳ. ಮಸೀದಿಯು ಸಾಮಾನ್ಯವಾಗಿ ಛಾವಣಿಯಿಲ್ಲದೇ ಸಮಾಂತರ ಚತುರ್ಭುಜಾಕಾರದ ವಿಶಾಲಾಂಕಣದ ರೂಪ ದಲ್ಲಿರುತ್ತದೆ. ಅದರ ಮಧ್ಯದಲ್ಲಿ ಧ್ಯಾನಕ್ಕೆ ಬರುವ ಮುಂಚಿತವಾಗಿ ಕೈ ಕಾಲು ಮುಖಗಳನ್ನು ತೊಳೆದುಕೊಳ್ಳಲು ಒಂದು(ಹೌಜ್) ಕಾರಂಜಿಯಾಗಲಿ, ಕೊಳವಾಗಲಿ ಇರುತ್ತದೆ. ಅದರ ಸುತ್ತಲೂ ಕಂಬಗಳಿರುತ್ತವೆ. ಅಂಗಳದ ಅಕ್ಕಪಕ್ಕಗಳಲ್ಲಿ ಕೈಸಾಲೆ, ಧ್ಯಾನಾರ್ಥವಾಗಿ ದೊಡ್ಡದಾದ ಹಜಾರ ಇರುತ್ತದೆ.[೩೦]

೨. **ಮಿಹಿರಾಬ್:** ಪವಿತ್ರ ಸ್ಥಳವಾದ ಮಸೀದಿಯ ಹಜಾರದ ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಮೆಕ್ಕಾಭಿಮುಖವಾದ ಮಿಹಿರಾಬ್ ಇಸ್ಲಾಂ ಧರ್ಮ ತತ್ವದ ಸಂಕೇತ ಮಹಮ್ಮದೀಯ ವಸ್ತು ರೀತಿಯ ಪ್ರಧಾನ ವೈಶಿಷ್ಟ್ಯ. ಭಗವಂತನು ಒಬ್ಬನೇ, ಮಹಮ್ಮದನು ಪ್ರವಾದಿ ಎಂಬ ತತ್ವವನ್ನು ಈ ಮಿಹಿರಬ್ ಸಂಕೇತಿಸುವುದಾಗಿದೆ.[೩೧]

೩. **ಮಿಂಬರ್:** ಖಾಜಿಯ ಆಸೀನವಾಗುವುದಕ್ಕೆ ಮಿಂಬರ್ ಎಂಬ ಉಪದೇಶ ವೇದಿಕೆ. ಕಟ್ಟಡದ ಎರಡೂ ತುದಿಗಳಲ್ಲಿ ದುಂಡಾದ ಇಲ್ಲವೇ ಅಷ್ಟಕೋನಾಕಾರದ ಎತ್ತರದ ಬುರುಜು, ಇವು ಮಸೀದಿಯ ಮುಖ್ಯಭಾಗಗಳು.[೩೨]

೪. **ಮಿನಾರ್:** ಗೋಪುರ ದೀಪದ ಮನೆ, ಸ್ತಂಭ ಗೋಪುರ

೫. **ಗುಮ್ಮಟ ಅಥವಾ ಗುಂಬಜ್:** ಕಟ್ಟಡದ ಮೇಲ್ಭಾಗದಲ್ಲಿ ದುಂಡಾಕಾರ ಅಥವಾ ವೃತ್ತಾಕಾರದಲ್ಲಿರುವ ಸುಂದರವಾದ ರಚನೆ.[೩೩]

೬. **ಕಮಾನುಗಳು:** ಸರ್ವೇಸಾಮಾನ್ಯವಾಗಿ ಕಮಾನು ಬಿಲ್ಲಿನಂತೆ ಬಗ್ಗಿರುತ್ತವೆ. ಕೋನಾಕೃತಿಗಳಲ್ಲಿ ಸದಾ ಕಮಾನುಗಳಿವೆ.

೭. **ಚಜ್ಜ (ಕಾರ್ನಿಸ್):** ಚಜ್ಜ ಮತ್ತು ಅದಕ್ಕೆ ಆಧಾರವಾಗಿರುವ ಅಲಂಕೃತ ಚಿಕ್ಕ ಕಂಬಗಳು ಚಜ್ಜ ಎಂದರೆ ಗೋಡೆಗಳ ಮೇಲ್ಭಾಗದಲ್ಲಿ ಮುಂದಕ್ಕೆ ಚಾಚಿಕೊಂಡಿರುವ ಭಾಗಗಳು.

೮. **ಗೋರಿ:** ಗೋರಿಯನ್ನು ಮುಸ್ಲಿಮರು 'ರೂಜ' ಎನ್ನುತ್ತಾರೆ. ಸ್ವ ಪ್ರತಿಷ್ಠೆಗಾಗಿ ಈ ಸಮಾಧಿ ಅಥವಾ ಗೋರಿಗಳನ್ನು ನಿರ್ಮಿಸಿದ್ದಾರೆ.

೯. **ಜಕ್ಕಿ:** ಗುಮ್ಮಟಕ್ಕಾಗಿ ದುಂಡಾಕಾರದಲ್ಲಿರುವ ಸಮಾಧಿಯ ಸ್ಥಳ.

೧೦. **ದಿವಾನಿ ಆಮ್:** ಜನರ ಕುಂದುಕೊರತೆ ನಿವಾರಿಸುವ ಸ್ಥಳ.

೧೧. **ದಿವಾನಿ ಖಾಸ್:** ರಾಜನ ಆಪ್ತ ಕಾರ್ಯಗಳನ್ನು ನಡೆಸುವ ಕಾರ್ಯಾಲಯ.

೧೨. **ಬ್ಯಾಟಲ್‌ಮೆಂಟ್:** ಕೋಟೆಯ ಗೋಡೆಯ ಮೇಲ್ಭಾಗದಲ್ಲಿರುವ ಕಂಡಿಗಳಿರುವ ಕೈಪಿಡಿ ಗೋಡೆ.

೧೩. **ಬ್ರಾಕೆಟ್:** ಕಮಾನಿನ ಆಸರೆಗಾಗಿ ಗೋಡೆಯಿಂದ ಮುಂದಕ್ಕೆ ಚಾಚಿಕೊಂಡಿರುವ ಸಮತಲದ ಗೋಡೆ.

೧೪. **ಕಸ್ಪಡ್ ಆರ್ಚ್:** ಚಿಕ್ಕ ಚಿಕ್ಕ ರೀತಿಯಲ್ಲಿ ಬಾಗಿದ ಕಮಾನುಗಳು.

೧೫. **ಸ್ಕ್ವಿಂಚ್:** ಗುಮ್ಮಟದ ಕೆಳಭಾಗ ಒಳಭಾಗದಲ್ಲಿ ಮೂಲೆಯಲ್ಲಿರುವ ಕಮಾನು.

೧೬. **ಲೀವಾನ್:** ಮಧ್ಯಾಂಗಣದ ಸುತ್ತಲೂ ಮೇಲ್ಛಾವಣಿ ಇರುವ ಕಟ್ಟಡ.[೩೪]

೧೭. **ಮದರಸಾ:** ಶಾಲೆ, ಪ್ರಕೃತಿ, ತತ್ವಶಾಸ್ತ್ರ ಬೋಧಿಸುವ ಸ್ಥಳ.

೧೮. **ಸಿನ್ನ್ ಕೋರ್ಟ್:** ಗೋಡೆಗಳಿಂದ ಅಥವಾ ಕಟ್ಟಡಗಳಿಂದ ಸುತ್ತುವರಿದಿರುವ ಪ್ರದೇಶ.

೧೯. **ಹುಜ್ರ:** ಕೊಠಡಿಯಾಕಾರದಲ್ಲಿದ್ದು ಕಾಬ್ರಾ ಸ್ಥಾನವಾಗಿರುತ್ತದೆ.

೨೦. **ಕಮಲ:** ಗುಮ್ಮಟದ ಕಾಂಡ ಅಥವಾ ಬುಡ.

೨೧. **ಕಸ್ಪರ್ಟ್ ಆರ್ಚ್:** ಚಿಕ್ಕ ಚಿಕ್ಕ ರೀತಿಯಲ್ಲಿ ಬಾಗಿದ ಕಮಾನುಗಳು.

೨೨. **ಫಕೇಡ್:** ಕಟ್ಟಡದ ಮುಖಭಾಗ ಮತ್ತು ಮುಂಭಾಗ.

೨೩. ಲೀವಾನ್: ಮಧ್ಯಾಂಗಣದ ಸುತ್ತಲೂ ಮೇಲ್ಛಾವಣಿ ಇರುವ ಕಟ್ಟಡ.

೨೪. **ರೂರಾಕೋ:** ಇದು ಆಭರಣ ಅಲಂಕಾರಕ್ಕೆ ಸಂಬಂಧಿಸಿದಾಗಿರುತ್ತದೆ. ಇದರೊಂದು ಅಲಂಕಾರಿಕ ಶೈಲಿ

೨೫. **ಈದ್ಗಾ:** ಮುಸ್ಲಿಮರು ಹಬ್ಬ ಹರಿದಿನಗಳಲ್ಲಿ ಎಲ್ಲರೂ ಒಟ್ಟಾಗಿ ಸೇರಿ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸುವುದಕ್ಕೋಸ್ಕರ ಮಾಡಿಕೊಂಡ ಸ್ಥಳವೇ ಈದ್ಗಾ.[೩೫]

ಈ ಮೇಲಿನ ಅಂಶಗಳು ಮುಸ್ಲಿಂ ವಾಸ್ತುಶೈಲಿಯ ಲಕ್ಷಣಗಳಾಗಿದ್ದು ಮಸೀದಿ, ಸೂಫಿಗಳ, ಸುಲ್ತಾನರ ಹಾಗೂ ಪ್ರಮುಖ ವ್ಯಕ್ತಿಗಳ ಸಮಾಧಿ ಕಟ್ಟಡಗಳಾದ ಗೋರಿ ಕಟ್ಟಡಗಳಲ್ಲಿ ಇಸ್ಲಾಂ ವಾಸ್ತುಶೈಲಿಯ ಬಳಕೆ ಮಾಡಲಾಯಿತು. ಈ ಕಟ್ಟಡಗಳು ಇಸ್ಲಾಂ ಧರ್ಮವನ್ನು ಪ್ರತಿನಿಧಿಸುವ ಇಸ್ಲಾಂ/ಮುಸ್ಲಿಂ ವಾಸ್ತುಶೈಲಿಯ ಸ್ವರೂಪದಲ್ಲಿ ತನ್ನ ಹೆಜ್ಜೆಯನ್ನು ಇಟ್ಟು ಹಂತಹಂತವಾಗಿ ಈ ಶೈಲಿಯು ಬೆಳೆಯಿತು. ತದನಂತರದಲ್ಲಿ ಈ ವಾಸ್ತುಶೈಲಿಯು ಅರಮನೆ, ಕೋಟೆ–ಕೊತ್ತಲು, ಕಾವಲು ಗೋಪುರ ಸಾರ್ವಜನಿಕ ಸ್ಮಾರಕಗಳ ನಿರ್ಮಾಣದಲ್ಲಿ ಬಳಕೆಯಾಯಿತು. ಆ ಸಂದರ್ಭದಲ್ಲಿ ಆಯಾ ಪ್ರಾಂತೀಯ ಮಟ್ಟದಲ್ಲಿ ರಚಿಸಲ್ಪಟ್ಟ ಸ್ಮಾರಕಗಳಲ್ಲಿ ಮುಸ್ಲಿಂ ವಾಸ್ತುಶೈಲಿಯ ಜೊತೆಗೆ ಸ್ಥಳೀಯ ಶೈಲಿಯು ಬೆರೆತು ಇಂಡೋ–ಇಸ್ಲಾಮಿಕ್ ಶೈಲಿಯಾಗಿ ರೂಪುಗೊಂಡಿತು. ಈ ಹಿನ್ನೆಲೆಯಲ್ಲಿ ದಖ್ಖನ್ ಶೈಲಿಯ ಬೆಳವಣಿಗೆಯ ಸ್ವರೂಪವನ್ನು ಈ ಮುಂದಿನಂತೆ ಚರ್ಚಿಸಲಾಗಿದೆ.

ದೆಹಲಿ ಸುಲ್ತಾನರ ಪ್ರಖ್ಯಾತ ಅರಸನಾದ ಅಲ್ಲಾವುದ್ದೀನ್ ಖಿಲ್ಜಿಯು ದಖ್ಖನ್ ಮೇಲೆ ತನ್ನ ದಂಡಯಾತ್ರೆಯನ್ನು ಪ್ರಾರಂಭಿಸಿದ ನಂತರ ಮುಸ್ಲಿಂ ಸಂಸ್ಕೃತಿಯು ದಕ್ಷಿಣ ಭಾರತದಲ್ಲಿ ನೆಲೆಯೂರಲು ಕಾರಣವಾಯಿತು. ಅಲ್ಲಾವುದ್ದೀನ್ ತನ್ನ ದಂಡಯಾತ್ರೆಯ ಸಂದರ್ಭದಲ್ಲಿ ಹಲವು ಪ್ರದೇಶಗಳನ್ನು ಅವನ ನೇರ ಆಳ್ವಿಕೆಗೆ ಒಳಪಡಿಸಿಕೊಂಡನು. ಈ ಪ್ರದೇಶಗಳು ಅಲ್ಲಾವುದ್ದೀನ್‌ನ ನೇರ ಆಳ್ವಿಕೆಗೆ ಒಳಪಟ್ಟಿದ್ದರಿಂದ ತುರ್ಕರು, ಅಫಘನ್ನರು ಹಾಗೂ ಇರಾನಿಯನ್ನರು ಇಲ್ಲಿ ಬಂದು ನೆಲೆಸಿದರು.[೩೬] ನಂತರ ಕ್ರಿ.ಶ. ೧೩೨೭ರಲ್ಲಿ ಮಹಮದ್ ಬಿನ್ ತುಘಲಕ್‌ನು ತನ್ನ ರಾಜಧಾನಿಯನ್ನು ದೇವಗಿರಿಗೆ ಸ್ಥಳಾಂತರಿಸಿದನು. ದೆಹಲಿಯಿಂದ ದೌಲತಾಬಾದ್ ರಾಜಧಾನಿ ಪಟ್ಟಣವನ್ನು ಪಡೆದುಕೊಂಡ ಮೇಲೆ ದೆಹಲಿಯಲ್ಲಿದ್ದ ಬಹುತೇಕ ಆಡಳಿತ ವರ್ಗವು ಇಲ್ಲಿಗೆ ವಲಸೆ ಬಂದಿತು. ಈ ಸಂದರ್ಭದಲ್ಲಿ ಇವರ ಜೊತೆಗೆ ಅನೇಕ ಸೂಫಿ ಸಂತರು ಬಂದು ಇಲ್ಲಿ ನೆಲೆಸಿದರು. ನಂತರದ ದಿನಗಳಲ್ಲಿ ಸೂಫಿ ಸಂತರು ಜನಸಾಮಾನ್ಯರಿಗೆ ಹತ್ತಿರವಾಗತೊಡಗಿದರು. ಇದರೊಂದಿಗೆ ಸೂಫಿಗಳ ವಾಸಕ್ಕಾಗಿ ದಖ್ಖನ್‌ನಲ್ಲಿ ಹಲವಾರು ಸೂಫಿ ಕಟ್ಟಡಗಳು ರಚನೆಗೊಂಡವು.[೩೭] ಮಹಮ್ಮದ್–ಬಿನ್–ತುಘಲಕ್‌ನ ಆಳ್ವಿಕೆಯಲ್ಲಿ ಮುಸ್ಲಿಂ ವಾಸ್ತುಶೈಲಿಯ ಕಟ್ಟಡಗಳು ಕಟ್ಟಲ್ಪಟ್ಟವು. ನಂತರದಲ್ಲಿ ಮಹಮ್ಮದ್‌ನು ಹಾಗೂ ಅಮೀರನಾದ ಜಾಫರ್ ಖಾನ್ ನಡುವೆ ಆಂತರಿಕ ಕಲಹ ಏರ್ಪಟ್ಟಿತು. ಇದರಿಂದ ಬಹಮನಿ ರಾಜ್ಯವು ದಕ್ಷಿಣದಲ್ಲಿ ಸ್ಥಾಪನೆಯಾಯಿತು. ಇವನು ಮೊದಲಿಗೆ ದೆಹಲಿ ಸುಲ್ತಾನರ ಅಧೀನದಲ್ಲಿ ಅಧಿಕಾರಿಯಾಗಿದ್ದರಿಂದ ಉತ್ತರದ ವಾಸ್ತುಶೈಲಿಯು ದಕ್ಷಿಣದಲ್ಲಿ ಈ ಸಾಮ್ರಾಜ್ಯದ ಮೂಲಕ ಹರಡಿತು.

ದಕ್ಷಿಣ ಭಾರತದಲ್ಲಿ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯು ೪ ಹಂತಗಳಲ್ಲಿ ತನ್ನ ಬೆಳವಣಿಗೆಯನ್ನು ಕಂಡಿತು. ಬಹಮನಿ ರಾಜ್ಯ ಸ್ಥಾಪನೆಯು (೧೩೪೭) ಮೊದಲ ಹಂತವಾಗಿದೆ. ಈ ಹಂತದಲ್ಲಿ ಬಹಮನಿಯ ಮೊದಲ ರಾಜಧಾನಿ ಕಲಬುರ್ಗಿಯಲ್ಲಿ ಕೋಟೆ, ಜಾಮಿಯ ಮಸೀದಿ, ಅರಮನೆ, ಸಮಾಧಿ (ಗೋರಿ)ಗಳನ್ನು ನಿರ್ಮಾಣ ಮಾಡಲಾಯಿತು. ಒಂದನೇ ಅಹಮದ್ (೧೪೨೨-೩೬) ಕಾಲಾವಧಿಯಲ್ಲಿ ಬಹಮನಿ ರಾಜ್ಯದ ರಾಜಧಾನಿಯನ್ನು ಬೀದರ್‌ಗೆ ವರ್ಗಾಯಿಸಲಾಯಿತು. ಈ ಹಂತದಲ್ಲಿ ವಾಸ್ತುಶೈಲಿಯು ಇರಾನ್ ಮತ್ತು ಮಧ್ಯ ಏಷ್ಯಾದ ಪ್ರಭಾವವನ್ನು ಬೀದರ್‌ನಲ್ಲಿ ಕಂಡಿತು. ಇದರೊಂದಿಗೆ ಈ ಕಾಲಾವಧಿಯಲ್ಲಿ ಪರ್ಶಿಯನ್ ವಾಸ್ತುಶೈಲಿಯು ವೇಗವಾಗಿ ಬೆಳೆಯಿತು.[೩೮] ಮೂರನೆಯ ಹಂತದಲ್ಲಿ ೧೫೨೭ರಲ್ಲಿ ಬಹಮನಿ ರಾಜ್ಯ ಪತನಗೊಂಡ ನಂತರ ಐದು ಶಾಹಿ ರಾಜ್ಯಗಳು ದಖ್ಖನ್ ವಾಸ್ತುಶಿಲ್ಪಕ್ಕೆ ಆಶ್ರಯ ನೀಡಿದರು. ನಂತರದಲ್ಲಿ ಬಿಜಾಪುರ ಅವಧಿಯಲ್ಲಿ ಕೊನೆಯ ಹಂತದ ಬೆಳವಣಿಗೆಯನ್ನು ಕಂಡಿತು.

ಶೇರ್‌ವಾನಿ ತಿಳಿಸುವಂತೆ, 'ದಖ್ಖನ್ ವಾಸ್ತುಶೈಲಿಯ ರಚನೆಯು ತುಘಲಕ್‌ನ ವಾಸ್ತುಶೈಲಿಯ ಪ್ರಭಾವಕ್ಕೆ ಒಳಗಾಗಿದೆ. ನಂತರದಲ್ಲಿ ದಖ್ಖನ್‌ನಲ್ಲಿ ಬದಲಾಗಿ ಇರಾನಿಯನ್ನರು ಹಾಗೂ ಟಾನ್ಸೊಜಾನಿಯನ್‌ರ ವಾಸ್ತುಶಿಲ್ಪ ರಚನೆ ಅಥವಾ ಕಲೆಯನ್ನು ಬದಲಿಸಿದರು. ಇವರ ವಾಸ್ತುಶೈಲಿಯ ರಚನೆಯು ಉತ್ತರದಲ್ಲಿನ ವಾಸ್ತುಶೈಲಿ ರಚನೆಗೆ ಭಿನ್ನವಾಗಿದ್ದು ದಖ್ಖನಿ ಶೈಲಿಯಾಗಿ ರೂಪುಗೊಂಡಿತ್ತು' ಎಂದಿದ್ದಾರೆ.[೩೯]

ಅಹಮದ್ ಉಲ್ಲೇಖಿಸುವಂತೆ 'ಬಹಮನಿಯವರು ಇರಾನಿಯನ್ ವಾಸ್ತುಶಿಲ್ಪದ ಪ್ರಭಾವಕ್ಕೆ ಒಳಗಾಗಿದ್ದರು. ಅವರ ಶೈಲಿಯಲ್ಲಿನ ಸೃಜನಶೀಲತೆಯ ಕಲೆಯು ಭಿನ್ನ ಸ್ವರೂಪವನ್ನು ಪಡೆದಿತ್ತು' ಎಂದು ವ್ಯಾಖ್ಯಾನಿಸಿದ್ದಾರೆ.[೪೦]

ಇಂಡೋ-ಇಸ್ಲಾಮಿಕ್ ಕಟ್ಟಡಗಳ ನಿರ್ಮಾಪಕರು ಮೂಲತಃ ಪರ್ಶಿಯಾದ ಶಿಲ್ಪಿಗಳು. ಬಹಮನಿ ಸುಲ್ತಾನರು ತಮ್ಮ ಸ್ಮಾರಕ ನಿರ್ಮಾಣಕ್ಕೆ ಪರ್ಶಿಯಾದ ಕುಶಲಕರ್ಮಿಗಳನ್ನು ರಾಜ್ಯದಲ್ಲಿ ನೇಮಿಸಿಕೊಂಡಿದ್ದರು. ಉದಾ: ೧೪ನೇ ಶತಮಾನದಲ್ಲಿ (೧೩೬೭) ಗುಲ್ಬರ್ಗ ಕೋಟೆಯ ಜಾಮಿ ಮಸೀದಿಯನ್ನು ಪರ್ಶಿಯಾದ ಶಿಲ್ಪಿ ರಫಿ ಎಂಬಾತನು ನಿರ್ಮಿಸಿದ್ದನು.[೪೧] ಹಾಗಾಗಿ ಈ ಉಲ್ಲೇಖದ ಆಧಾರದ ಮೇಲೆ ವಿಜಯನಗರದಲ್ಲಿ ಪರ್ಶಿಯಾದ ಕುಶಲಕರ್ಮಿಗಳ ಪ್ರಭಾವವು ಸ್ಮಾರಕಗಳ ನಿರ್ಮಾಣದಲ್ಲಿ ಕಂಡುಬರುತ್ತಿತ್ತೆಂದು ಊಹಿಸಬಹುದು.

ಹೀಗೆ ಬಹಮನಿ ರಾಜ್ಯ ಸ್ಥಾಪನೆಯಿಂದಾಗಿ ದಖ್ಖನ್ ಪ್ರಾಂತ್ಯದಲ್ಲಿ ಇಂಡೋ-ಇಸ್ಲಾಮಿಕ್ ಶೈಲಿಯು ತೀವ್ರವಾಗಿ ವಿಸ್ತರಣೆಗೊಂಡಿತು. ಆ ಮೂಲಕ ಪರ್ಶಿಯಾದ ಕುಶಲಕರ್ಮಿ ಮುಸ್ಲಿಂ ಸಮುದಾಯವು ಸಹ ಇಲ್ಲಿ ಬಂದು ನೆಲೆಸಿದರು. ಹೀಗೆ ಬಹಮನಿಯಲ್ಲಿ ಪ್ರವೇಶ ಪಡೆದ ದಖ್ಖನ್ ಶೈಲಿಯನ್ನು ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯದ ಕಟ್ಟಡ ನಿರ್ಮಾಣದಲ್ಲಿ ಬಳಸಿಕೊಂಡರು.

ವಿಜಯನಗರ ರಾಜಧಾನಿ ಪಟ್ಟಣಗಳಾದ ಹಂಪಿ, ಪೆನುಗೊಂಡಗಳಲ್ಲಿ ಇಸ್ಲಾಂ ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಗೆ ಸಂಬಂಧಿಸಿದ ಸ್ಮಾರಕಗಳು ರಚನೆಯಾದವು. ಈ ವಾಸ್ತುಶೈಲಿಯು ಬಹಮನಿ ರಾಜ್ಯದಲ್ಲಿ ನಿರ್ಮಾಣಗೊಂಡ ವಾಸ್ತುಶೈಲಿಯ ಪ್ರಭಾವಕ್ಕೆ ಒಳಗಾಗಿತ್ತು. ವಿಜಯನಗರ ಸಾಮ್ರಾಜ್ಯದಲ್ಲಿ ನಿರ್ಮಾಣಗೊಂಡ ಸ್ಮಾರಕಗಳಿಗೆ ಬಹುತೇಕವಾಗಿ ಗುಲ್ಬರ್ಗಾ, ಫಿರೋಜಾಬಾದ್ ಮತ್ತು ಬೀದರ್‌ಗಳಲ್ಲಿ ಕಂಡುಬರುವ ವಾಸ್ತುಶೈಲಿಯ ರಚನೆಯನ್ನು ಅಳವಡಿಸಿಕೊಳ್ಳಲಾಯಿತು. ಇಂಡೋ–ಇಸ್ಲಾಮಿಕ್ ಸ್ಮಾರಕಗಳಲ್ಲಿ ಅರಸಕೇಂದ್ರಿತ ಹಾಗೂ ಸಮುದಾಯಕೇಂದ್ರಿತ ಸ್ಮಾರಕ ಕಟ್ಟಡಗಳು ಕಂಡುಬರುತ್ತವೆ. ಅರಸಕೇಂದ್ರ ಸ್ಮಾರಕಗಳಲ್ಲಿ ಅರಮನೆ, ಕೋಟೆ–ಕೊತ್ತಲು, ಕಾವಲು ಗೋಪುರಗಳು ರಾಜಪ್ರಭುತ್ವಗಳ ವಿಹಾರಗಳು ಹಾಗೂ ಹಲವು ಸಾರ್ವಜನಿಕ ಕಟ್ಟಡಗಳಲ್ಲಿ ಇಂಡೋ–ಇಸ್ಲಾಮಿಕ್ ಶೈಲಿಯ ಸ್ಮಾರಕಗಳು ರಚನೆಗೊಂಡವು.[೨೨] ಅದೇ ರೀತಿ ವಿಜಯನಗರ ರಾಜಧಾನಿ ಪಟ್ಟಣದಲ್ಲಿ ನೆಲೆನಿಂತಹ ಪ್ರಮುಖ ಅಧಿಕಾರಿವರ್ಗ, ಸೂಫಿ ಸಂತರ ಗೋರಿಗಳು ನಿರ್ಮಾಣಗೊಂಡವು. ಅಲ್ಲದೆ ಮುಸ್ಲಿಂ ಸಾಮಾಜಿಕ ಹಾಗೂ ಧಾರ್ಮಿಕ ಜೀವನವನ್ನು ಪ್ರತಿಬಿಂಬಿಸುವ ಮಸೀದಿಗಳು, ಈದ್ಗಾ ಮೈದಾನ, ದರ್ಗಾ(ಗೋರಿ) ಕಟ್ಟಡಗಳು ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯ ಸ್ಮಾರಕಗಳು ಕಂಡುಬರುತ್ತದೆ.

ಇಂಡೋ–ಇಸ್ಲಾಮಿಕ್ ಶೈಲಿಯ ಲಕ್ಷಣಗಳು

೧. ಹಿಂದೂ–ಮುಸ್ಲಿಂ ವಾಸ್ತು ಅಂಶಗಳ ಸಂಮಿಶ್ರಿತ ಶೈಲಿ

೨. ಕಮಾನು, ಗುಮ್ಮಟ, ಮೀನಾರ್‌ಗಳ ರಚನೆ

೩. ಕಟ್ಟಡ ಆಕಾರ ಗಾತ್ರಗಳಿಗಿಂತ ಅಲಂಕರಣಕ್ಕೆ ಪ್ರಾಧಾನ್ಯತೆ

೪. ಗೆಚ್ಚು–ಗಾರೆಗಳ ಬಳಕೆ, ಸಮವಾದ ಗಿಲಾಯಿ ಕೆಲಸ

ವಿಜಯನಗರ ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯು ಬಹಮನಿ ಶೈಲಿಯ ಮಾದರಿಯಾಗಿದೆ. ದಖ್ಖಿನ್ ಮುಸ್ಲಿಂ ಶಿಲ್ಪಕಲೆಯಲ್ಲಿ ಜ್ಯಾಮಿತಿಯ ರಚನೆ ಮುಖ್ಯವಾದುದು. ಒಂದು ಅಥವಾ ಹಲವಾರು ಗುಮ್ಮಟಗಳನ್ನು ಮತ್ತು ಗೂಡುಗಳನ್ನು ಹೊಂದಿರುವ ಕೋಣೆಗಳು ದಕ್ಷಿಣದ ಇಸ್ಲಾಂ ಶಿಲ್ಪಕಲೆಯ ಅತಿ ಮುಖ್ಯ ಅಂಶವಾಗಿದೆ. ಯೋಜನೆಗಳು ಬಹುತೇಕ ಸಮಮಿತಿಯಲ್ಲಿದ್ದು ವಿಭಾಗಗಳನ್ನು ಅಥವಾ ದೊಡ್ಡ ಕೋಣೆಯನ್ನು ಅಥವಾ ತೆರೆದ ಸ್ಥಳಗಳನ್ನು ಹೊಂದಿದೆ. ಮಸೀದಿ ಮತ್ತು ಗುಮ್ಮಟಗಳ ನಂತರ ಬಂದ ಚೌಕಾಕಾರದ ಮತ್ತು ಅಷ್ಟಭುಜಾಕೃತಿಯ ಯೋಜನೆಗಳು ಕೂಡ ಬಹು ವಿಭಾಗದ ವ್ಯವಸ್ಥೆಯನ್ನು ಹೋಲುತ್ತವೆ. ಇದಕ್ಕೆ ಉದಾಹರಣೆ ಎಂದರೆ ಆನೆಲಾಯದಲ್ಲಿ ಕಂಡುಬರುವ ರಚನಾ ಶೈಲಿ. ಈ ಸ್ಮಾರಕ ರಚನೆಯ ಮುಸ್ಲಿಂ ಗುಮ್ಮಟಗಳ ಮಸೀದಿ ಕೋಣೆಗಳ ರಚನೆಯನ್ನು ಇಲ್ಲಿ ಪುನರಾವರ್ತಿಸಿ ಹನ್ನೊಂದು ಒಂದೇ ತೆರನಾದ ರಚನೆಗಳು ಸಾಲದೆ ಇಂಥದೇ ಒಂದು ರಚನೆಯನ್ನು ಗುಲ್ಬರ್ಗಾದಲ್ಲಿ 'ಶಂಕಮಾಲ' ಮುಜರಾದ್ ದುರ್ಗದಲ್ಲಿ

ಕುದುರೆಗಳಿಗಳಾಗಿ ನಿರ್ಮಿಸಲಾಗಿದೆ. ಇದರಲ್ಲಿ ಹತ್ತು ವಿಭಾಗಗಳಿದ್ದು, ಇದನ್ನು ಹದಿನಾಲ್ಕನೇ ಶತಮಾನದಲ್ಲಿ ನಿರ್ಮಿಸಲಾಗಿದೆ. ವಿಜಯನಗರದಲ್ಲಿರುವ ಒಂಬತ್ತು ಗುಮ್ಮಟಗಳ ಮಂಟಪದ ರಚನೆಯನ್ನು ಗುಲ್ಬರ್ಗಾದ ಶಹಬಜಾರ್ ಮಸೀದಿಯಲ್ಲಿ(೧೪ನೇ ಶತಮಾನ) ಅಥವಾ ನಂತರದ ಜಾಮಿಯ ಮಸೀದಿಯಲ್ಲಿ ಕಾಣಬಹುದಾಗಿದೆ. ಈ ಮಸೀದಿಯಲ್ಲಿ ಚೌಕಾಕಾರದ ಮತ್ತು ಆಯತಾಕಾರದ ವಿಭಾಗಗಳು(boy), ಗುಮ್ಮಟವನ್ನು ಹೊಂದಿರುವ ಛತ್ತುಗಳು ಮತ್ತು ಗೂಡುಗಳನ್ನು ಕಾಣಬಹುದು. ವಿಜಯನಗರದಲ್ಲಿ ಕಂಡುಬರುವ ದ್ವಾರಬಾಗಿಲು(Gateway) ಹದಿನೈದನೆಯ ಶತಮಾನದ ಗುಲ್ಬರ್ಗಾದ ಶೇಖ್ ಸಿರಾಜ್ ಅಲ್ ಜುನೈದಿ ದರ್ಗಾದಲ್ಲಿ ಕಾಣಬಹುದು.[೪೩] ಎರಡು ಅಂತಸ್ತುಗಳುಳ್ಳ ಅಷ್ಟಭುಜದ ಮಂಟಪ ಮತ್ತು ಅಷ್ಟಭುಜಾಕೃತಿಯ ಸ್ನಾನಗೃಹ ಇಸ್ಲಾಂ ಶಿಲ್ಪಕಲೆಯನ್ನು ಹೊಂದಿವೆ. ಪೆನುಗೊಂಡದಲ್ಲಿರುವ ಅಷ್ಟಭುಜಾಕೃತಿಯ ಕಾವಲುಗೋಪುರದಲ್ಲಿಯೂ ಸಹ ಇದೇ ಮಾದರಿಯನ್ನು ಕಾಣಬಹುದಾಗಿದೆ.

ವಿಜಯನಗರದ ಎಲ್ಲಾ ಸ್ಮಾರಕಗಳನ್ನು ಸಂಪೂರ್ಣವಾಗಿ ಕಲ್ಲನ್ನು ಉಪಯೋಗಿಸಿ, ಅದರಲ್ಲಿ ದಪ್ಪವಾದ ಗಚ್ಚೆ ಗಾರೆನ್ನು ಸಣ್ಣ ಸಣ್ಣ ಕಲ್ಲುಗಳನ್ನು ಅದರಲ್ಲಿ ಜೋಡಿಸಿ ನಂತರ ಪ್ಲಾಸ್ಟರ್‌ನಿಂದ ನಿರ್ಮಿಸಲಾಗಿದೆ. ಆದ್ದರಿಂದ ಈ ಸ್ಮಾರಕಗಳು ಉಳಿದ ಎಲ್ಲಾ ಸ್ಮಾರಕಗಳಿಗಿಂತ ಹೆಚ್ಚು ಕಾಲ ಉಳಿದುಬಂದಿವೆ. ಗಟ್ಟಿಯಾದ ಗ್ರಾನೈಟ್‌ನಿಂದ ನಿರ್ಮಿಸಿದ ಕಟ್ಟಡಗಳು ದಖ್ಖನ್‌ನಲ್ಲಿ ಮುಸ್ಲಿಂ ವಾಸ್ತುಶೈಲಿಯಿಂದಲೇ ಪ್ರಾರಂಭಗೊಂಡಿತು. ಬಹಮನಿಯ ಪರಧಿಯಲ್ಲಿ ಬರುವ ಎಲ್ಲಾ ಸ್ಮಾರಕಗಳು ಇದೇ ತಂತ್ರವನ್ನು ಅಳವಡಿಸಿಕೊಂಡಿವೆ.

ವಿಜಯನಗರದ ಸ್ಮಾರಕಗಳಲ್ಲಿ ಗೋಡೆಗಳ ಮತ್ತು ಅವುಗಳಲ್ಲಿ ಸೇರುವ ಸ್ಥಳದಲ್ಲಿ ನಿಲ್ಲಿಸಲಾದ ಕಂಬಗಳ, ವಿಭಾಗಗಳ ಮತ್ತು ಗುಮ್ಮಟ ಅಥವಾ ಗೂಡುಗಳ ಉಪಯೋಗ ಮೇಲಿಂದ ಮೇಲೆ ಕಂಡುಬರುತ್ತವೆ. ಅಲ್ಲಲ್ಲಿ ಪ್ರಕ್ಷೇಪಗಳನ್ನು ಕಮಾನುಗಳ ಸಹಿತ ನಿರ್ಮಿಸಲಾಗಿದೆ. ಗೋಡೆಗಳಲ್ಲಿ ಪ್ರಾರ್ಥನಾ ಗೂಡುಗಳನ್ನು ಕಾಣಬಹುದು. ಎಲ್ಲಾ ಕಮಾನುಗಳು ಒಂದೇ ತೆರನಾಗಿವೆ.[೪೪]

ಈ ಸ್ತಂಭಗಳು ಮತ್ತು ಕಮಾನುಗಳು ಸಹ ಬಹಮನಿಯ ಶಿಲ್ಪಕಲೆಯೊಂದಿಗೆ ಬೆಸೆದುಕೊಂಡಿದೆ. ಗುಲ್ಬರ್ಗಾದ ಶಾಹಬಜಾರ್ ಮಸೀದಿಯಲ್ಲಿ ಇಂತದ್ದೇ ಸ್ತಂಭಗಳನ್ನು, ಕಮಾನುಗಳನ್ನು ಕಾಣಬಹುದಾಗಿದೆ. ಶಾಹಫಿರೋಜನ(೧೩೯೭–೧೪೨೨) ಕಾಲದಲ್ಲಿ ಮುಂಭಾಗವನ್ನು ಅಲಂಕಾರಗೊಳಿಸುವ ಶಿಲ್ಪಕಲಾಪದ್ಧತಿ ಆರಂಭಗೊಂಡಿತು. ಈ ಲಕ್ಷಣವನ್ನು ಗುಲ್ಬರ್ಗಾಧ ಹಜರತ್ ಗೇಸುದರ್ಗ ಮತ್ತು ಫಿರೋಜನ ಗೋರಿಯಲ್ಲಿ ಕಾಣಬಹುದಾಗಿದೆ. ಬೀದರ್ ಮತ್ತು ಗುಲ್ಬರ್ಗಾದ ಜಾಮೀಯ ಮಸೀದಿಯಲ್ಲಿ(೧೪ನೇ ಶತಮಾನ) ಒಳಾಂಗಣದ ರಚನೆಗಳಲ್ಲಿ ಕಮಾನು, ಗುಮ್ಮಟ ಮೊದಲಾದವುಗಳನ್ನು ಕಾಣಬಹುದು.[೪೫] ಶಾಹಫಿರೋಜ ಸುಲ್ತಾನನ ಸಮಾಧಿ ಗುಲ್ಬರ್ಗಾದ ಜಾಮೀಯ ಮಸೀದೀ ಲಂಗರ್–ಕಿ–ಮಸೀದಿ ಮೊದಲಾದವು ಈ ಲಕ್ಷಣವನ್ನು ಹೊಂದಿವೆ. ವೃತ್ತಾಕಾರದ ರಚನೆಗಳನ್ನು ಹೊಂದಿವೆ. ವಿಜಯನಗರದ ಸ್ಮಾರಕಗಳ ಗೋಡೆಗಳು ಮೇಲೆ ಹೋದಂತೆ

ಗೋಪುರಾಕೃತಿಯನ್ನು ಹೊಂದುತ್ತವೆ. ಇದೇ ಲಕ್ಷಣವು ಬಹಮನಿ ಸ್ಮಾರಕಗಳಲ್ಲಿಯೂ ಸಹ ಕಾಣಬಹುದು. ಆದರೆ ಬಹಮನಿ ಕಲಾಪದ್ಧತಿ ಬೆಳೆದುಬಂದಂತೆ ಈ ಲಕ್ಷಣ ಮಾಯವಾಗತೊಡಗಿತು. ಮುಂಭಾಗವನ್ನು ತೆರವುಗಳೊಂದಿಗೆ ಅಂದಗೊಳಿಸುವುದು, ಹಿಂಭಾಗದಲ್ಲಿಯೂ ಕಮಾನುಗಳನ್ನು ಇಡುವುದು ಮುಸ್ಲಿಂ ಶಿಲ್ಪಕಲೆಯಲ್ಲಿ ಬಹಳ ಹಿಂದಿನಿಂದಲೂ ನಡೆದುಬಂದಿದೆ.[೪೬]

ವಿಜಯನಗರದ ಸ್ಮಾರಕಗಳು ಎತ್ತರದ ಗೋಡೆಗಳನ್ನು ಮತ್ತು ಅವುಗಳ ಮೇಲೆ ಕೆತ್ತನೆಯ ಅಲಂಕಾರಗಳನ್ನು ಕಾಣಬಹುದು. ಕೆಲವು ಸರಳವಾಗಿ ಮತ್ತೆ ಕೆಲವು ಸಂಕೀರ್ಣವಾಗಿವೆ. ಅಲ್ಲಲ್ಲಿ ಅಲಂಕಾರದ ಪಟ್ಟಿಯನ್ನು ಸಹ ಮಾಡಲಾಗಿದೆ. ಇದು ಕೂಡ ವೃತ್ತಕಾರದ ಉಂಗುರದ ರಚನೆ ಬಹಮನಿ ಶಿಲ್ಪಕಲೆಯಲ್ಲಿ ಕಂಡುಬಂದಿದೆ. ಈ ವಿಶಿಷ್ಟ ರಚನೆಯು ಸಹ ಮೂಲತಃ ಬಹಮನಿಯದ್ದು. ಅರಸರ ಸಮಾಧಿಗಳಲ್ಲಿ ಶಹಬಜಾರ್ ಮಸೀದಿ (ಗುಲ್ಬರ್ಗಾ) ಮತ್ತು ಗುಲ್ಬರ್ಗಾದ ಲಂಗರ್-ಕಿ ಮಸೀದಿಯಲ್ಲಿ ಈ ರಚನೆಯನ್ನು ಕಾಣಬಹುದು ಈ ಗೋಡೆಗಳ ಮೇಲೆ ವಿವಿಧ ರೀತಿಯ ಅಲಂಕಾರಗಳಿವೆ.[೪೭]

ವಿಜಯನಗರ ಸ್ಮಾರಕಗಳಲ್ಲಿರುವ 'ಗುಮ್ಮಟಗಳು' ಕೂಡ ಬಹಮನಿ ವಾಸ್ತುಶೈಲಿಯ ಅನುಕರಣೆಯಾಗಿದೆ. ಹದಿನಾಲ್ಕು ಮತ್ತು ಹದಿನೈದನೆಯ ಶತಮಾನದಲ್ಲಿ ನಿರ್ಮಾಣಗೊಂಡ ಗುಲ್ಬರ್ಗಾ ಮತ್ತು ಗೋಲ್ಕಂಡಾದ ಸಮಾಧಿಗಳಲ್ಲಿ ಚಪ್ಪಟೆಕಾಯಾರದ ವಿವಿಧ ಗುಮ್ಮಟಗಳನ್ನು ಕಾಣಬಹುದು. ಆದರೆ ನಂತರ ಈ ಲಕ್ಷಣ ದಖ್ಖನ್ನಿನ ಇಸ್ಲಾಂ ಶಿಲ್ಪಕಲೆಯಲ್ಲಿ ಕಂಡುಬರದೆ ಹೆಚ್ಚು ವೃತ್ತಾಕಾರದ ಗುಮ್ಮಟಗಳು ಕಂಡುಬಂದವು. ಕೊಳವೆಯಾಕಾರದ ಗುಮ್ಮಟ ಬುಡದ ಮೇಲೆ ಗುಮ್ಮಟವನ್ನು ನಿರ್ಮಿಸುವುದು ಈ ಲಕ್ಷಣ. ಅರಸರ ಅರಮನೆ ಆವರಣದ ಈಶಾನ್ಯದ ಪ್ರವೇಶ ದ್ವಾರದಲ್ಲಿ ಮಾತ್ರ(ವಿಜಯನಗರ) ಕಂಡುಬಂದಿದೆ. ಇಂತಹ ಲಕ್ಷಣ ೧೪೭೨ರಲ್ಲಿ ನಿರ್ಮಾಣಗೊಂಡ ಬೀದರ್‌ನ ಮಹಮ್ಮದ್ ಗವಾನನ ಮದರಸಾದಲ್ಲಿ ಕಂಡುಬಂದಿದೆ.[೪೮] ಪೆನುಗೊಂಡ ಮತ್ತು ಚಂದ್ರಗಿರಿಯ ಸ್ಮಾರಕಗಳಲ್ಲಿ ಕಂಡುಬಂದ ಪರಸ್ಪರ ಛೇದವಾಗುವಂತೆ ನಿರ್ಮಿಸಿದ ಕಮಾನುಗಳು ತುಂಬಾ ವಿಶೇಷವಾಗಿದೆ. ಈ ಲಕ್ಷಣ ಮಾತ್ರ ಬಹಮನಿಯಲ್ಲಿ ಈ ಮೊದಲು ಕಂಡುಬಂದಿಲ್ಲ. ನಂತರ ಬಿಜಾಪುರ ಗೋಲಗುಂಬಜ್‌ನಲ್ಲಿ(೧೭ನೇ ಶತಮಾನದ) ಬಳಸಿಕೊಳ್ಳಲಾಯಿತು. ಈ ಲಕ್ಷಣ ಮಾತ್ರ ಬಿಜಾಪುರದ ಮೇಲೆ ನೇರ ಪ್ರಭಾವ ಬೀರಿದೆ.

ಗುಮ್ಮಟಗಳ ಅಲಂಕಾರ ಸಹ ಬಹಮನಿಯಿಂದ ಪಡೆದುಕೊಳ್ಳಲಾಗಿದೆ. ಸಣ್ಣ ಅಲಂಕಾರವಿದ್ದ ಕಮಲದ ಹೂಗಳು ಮೊದಲಾದವು. ಒಳಭಾಗವು ಕೂಡ ಈ ಪ್ರಭಾವಕ್ಕೆ ಒಳಗಾಗಿದೆ. ಸುಲ್ತಾನ ಫಿರೋಜನ ಸಮಾಧಿಯಲ್ಲಿನ ಎರಡು ಕೋಣೆಗಳಲ್ಲಿ ಈ ಲಕ್ಷಣಗಳಿವೆ. ಗುಮ್ಮಟ ಸಹಿತ ಗೂಡುಗಳು ಸಹ ಬಹಮನಿಯ ಲಕ್ಷಣವನ್ನು ಹೊಂದಿವೆ. ಗುಲ್ಬರ್ಗಾ ಮತ್ತು ಫಿರೋಜಾಬಾದ್‌ನಲ್ಲಿ ಹಲವಾರು ಶಿಥಿಲಗೊಂಡ ಸ್ಮಾರಕಗಳಲ್ಲಿ ಈ ಲಕ್ಷಣಗಳನ್ನು ಕಾಣಬಹುದು. ಪಿರಾಮಿಡ್ ಆಕಾರದ ಗೂಡುಗಳು ಕಾವಲು ದ್ವಾರದ ಮನೆಗಳಲ್ಲಿ ಕಂಡುಬರುತ್ತವೆ. ಪ್ಲಾಸ್ಟರ್ ನಿರ್ವಹಣೆ ಸಹ ದಖ್ಖನಿನ ಇಸ್ಲಾಮಿಕ್/

ಮುಸ್ಲಿಂ ಲಕ್ಷಣಗಳಲ್ಲಿ ಒಂದಾಗಿದೆ. ಲಂಗರ್ ಕಿ ಮಸೀದಿ ಶಹಕಮಲ ಮುಜರಾಬಾದ್‌ನ ದರ್ಗಾಗಳಲ್ಲಿ ಈ ಲಕ್ಷಣ ಕಂಡುಬರುತ್ತದೆ.[೪೯] ಹೀಗೆ ವಿಜಯನಗರ ವಾಸ್ತುಶೈಲಿಯು ಬಹಮನಿ ಮುಸ್ಲಿಂ ವಾಸ್ತುಶೈಲಿಯನ್ನು ಅಳವಡಿಸಿಕೊಂಡಿತ್ತು ಎಂದು ಸ್ಪಷ್ಟವಾಗುತ್ತದೆ. ವಿಜಯನಗರದಲ್ಲಿ ಕಂಡುಬರುವ ಅರಸಕೇಂದ್ರಿತ ಹಾಗೂ ಮುಸ್ಲಿಂ ಸಮುದಾಯಗಳ ಕುರಿತಂತೆ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯ ವಿವರಣೆಯನ್ನು ಈ ಮುಂದಿನಂತೆ ಪ್ರತ್ಯೇಕವಾಗಿ ವಿವರಿಸಲಾಗಿದೆ.

೮.೩. ಪ್ರಭುತ್ವದ ಸ್ಮಾರಕಗಳು

ವಿಜಯನಗರ ಸಾಮ್ರಾಜ್ಯದ ಬಹುತೇಕ ಪ್ರಭುತ್ವದ ಸ್ಮಾರಕಳು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಾಣಗೊಂಡವು. ಪ್ರಭುತ್ವದ ಸ್ಮಾರಕಳು ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯ ಪ್ರಮುಖ ಸ್ಥಳಗಳಲ್ಲಿ ನಿರ್ಮಾಣಗೊಂಡಿವೆ. ಅವುಗಳಲ್ಲಿ ಕಮಲಮಹಲ್, ರಾಣಿಸ್ನಾನಗೃಹ, ದ್ವಾರಬಾಗಿಲುಗಳು, ಕಾವಲುಗೋಪುರಗಳು, ದಣ್ಣನಾಯಕ, ಆನೆಲಾಯ, ಗಗನ್‌ಮಹಲ್ ಪ್ರಮುಖವಾಗಿ ಇಂಡೋ-ಇಸ್ಲಾಮಿಕ್ ವಾಸ್ತುಕಲೆಗೆ ಸಂಬಂಧಿಸಿದ ಸ್ಮಾರಕಗಳಾಗಿವೆ.[೫೦] ಅದೇ ರೀತಿ ವಿಜಯನಗರ ಸಾಮ್ರಾಜ್ಯದ ಪ್ರಮುಖ ಪಟ್ಟಣಗಳಲ್ಲಿ ನಿರ್ಮಾಣಗೊಂಡ ಸ್ಮಾರಕಗಳು ಕೂಡ ಇಂಡೋ-ಇಸ್ಲಾಮಿಕ್ ಶೈಲಿಯನ್ನು ಅಳವಡಿಸಿಕೊಂಡವು. ಈ ಸ್ಮಾರಕಗಳ ಶೈಲಿಯ ಕುರಿತು ಈ ಮುಂದಿನಂತೆ ಚರ್ಚಿಸಲಾಗಿದೆ.

ಹಂಪಿ ಪ್ರದೇಶದಲ್ಲಿನ ಸ್ಮಾರಕಗಳು

೧. ಕಮಲ ಮಹಲ್

ಹಂಪಿ ರಾಜಧಾನಿಯನ್ನು ಆಕರ್ಷಿಸುವ ಪ್ರಮುಖ ಸ್ಮಾರಕಗಳೆಂದರೆ ಲೋಟಸ್ ಮಹಲ್. ಇದು ಬಹಮನಿ ರಾಜ್ಯದ ವಾಸ್ತುಶೈಲಿಯ ತಾಂತ್ರಿಕತೆ ಹಾಗೂ ಶೈಲಿಯನ್ನು ಬಳಸಿಕೊಂಡು ರಚನೆ ಮಾಡಿದ ಕಟ್ಟಡವಾಗಿದೆ.[೫೧] ಕಮಲ ಮಹಲ್‌ನ್ನು 'ಚಿತ್ರಾಂಗಿ ಮಹಲ್' ಎಂದು ಸಹ ಕರೆಯಲಾಗಿದೆ.[೫೨] ಇದಕ್ಕೆ ಲೋಟಸ್ ಮಹಲ್, ಪದ್ಮಮಹಲ್, ಪಂಚಮಹಲ್ ಎಂತಲೂ ಕರೆಯುತ್ತಾರೆ. ಪರ್ಶಿಯನ್ ಭಾಷೆಯಲ್ಲಿ ಜನಾನಾ ಎನಕ್ಲೋಸರ್ ಎಂದು ಕರೆಯುತ್ತಾರೆ. ಇದನ್ನು ಕೇಂದ್ರದಲ್ಲಿ ಹದಿನಾರು ಕಂಬಗಳುಳ್ಳ ಮತ್ತು ಉಳಿದ ನಾಲ್ಕು ದಿಕ್ಕುಗಳಲ್ಲಿ ಎರಡೆರಡು ಕಂಬಗಳಂತೆ ಚೌಕಾಕಾರದ ಹಜಾರವನ್ನು ನಿರ್ಮಿಸಲಾಗಿದೆ. ಇನ್ನು ಸರಳವಾಗಿ ಹೇಳಬೇಕೆಂದರೆ ನಾಲ್ಕು ದಿಕ್ಕಿನಲ್ಲಿ ನವರಂಗವನ್ನು ಮತ್ತು ಕೇಂದ್ರದಲ್ಲಿ ಮತ್ತೊಂದು ರಂಗವನ್ನು ನಿರ್ಮಿಸಲಾಗಿದೆ. ಪಾರ್ಶ್ವದಲ್ಲಿ ಮುಂಚಾಚುಗಳು ಅದನ್ನು ಹದಿಮೂರು ಅಂಕಣಗಳನ್ನಾಗಿ ಮಾಡಿದೆ. ತಳಹದಿಯು ನಯವಾಗಿ ಕೆತ್ತಿದ ಕಲ್ಲಿನ ಅಚ್ಚುಗಳಿಂದ ಕೂಡಿದೆ. ಕೆಳಗಿನ ಮಹಡಿಯಲ್ಲಿ ೨೪ ಆಸರೆಗಳಿವೆ. ಎಲ್ಲಾ ಕಡೆಗಳಿಂದಲೂ ತೆರೆದ ಕಮಾನುಗಳಿವೆ. ಕಮಾನುಗಳಿಗೆ ಬಳ್ಳಿಗಳು, ಹೂವುಗಳು, ಹಂಸಗಳು, ರೇಖಾಗಣಿತ ವಿನ್ಯಾಸಗಳು ಮೊದಲಾದ ಗಾರೆ ಕೆಲಸದ ಅಲಂಕಾರವಿದೆ. ಮೇಲೆ ಕೋನಾಕೃತಿಯ ಸೂರು ಇದೆ. ಈಶಾನ್ಯ ಮೂಲೆಯಲ್ಲಿ ಮಹಡಿ ಮೆಟ್ಟಿಲುಗಳಿವೆ. ಮೇಲು ಮಾಳಿಗೆಗೆ ನಾಲ್ಕು ಮತ್ತು ಎಂಟು ಆಸರೆಗಳಿವೆ. ಮೇಲಿನ ಈ ಮಾಳಿಗೆಯ ಎಲ್ಲಾ ಕಡೆಯು ಮುಚ್ಚಿದ್ದು, ಕಮಾನುಗಳಿರುವ ಕಿಟಕಿಗಳಿವೆ. ಮೇಲು

ರಚನೆಯನ್ನೇ ಹೋಲುವ ಕೋನಾಕೃತಿಯ ಸೂರುಗಳು ಮತ್ತು ಚಾವಣಿಗಳಿವೆ. ಬೇಸಿಗೆಯ ಕಾಲವನ್ನು ರಾಣಿಯರು ಇಲ್ಲಿ ಕಳೆಯುತ್ತಿದ್ದರು.[೫೩] ಹಿಂದೂ-ಮುಸ್ಲಿಂ, ಜೈನ ಮಿಶ್ರಿತ ಶೈಲಿಯಿಂದ ಕ್ಟಟಿಸಿದ್ದ ಈ ಮಹಲ್‌ನ ಮೊದಲನೆಯ ತಲೆಭಾಗವು ಮುಸ್ಲಿಂ ಶೈಲಿಯ ಮಸೀದಿ ಆಕಾರದಿಂದ ಕೂಡಿದ್ದು, ಇದರ ಪ್ರತಿ ಮೂಲೆಯಲ್ಲಿಯು ಮುಸ್ಲಿಂ ಆಕಾರದ ಕಮಾನುಗಳಂತೆ ನಿರ್ಮಿಸಲ್ಪಟ್ಟಿದೆ.[೫೪] ಈ ಮಹಲಿನ ಮಧ್ಯಭಾಗವು ಜೈನ ಆಕಾರದ ಗೋಪುರಗಳಂತೆ ರಚಿಸಲ್ಪಟ್ಟಿರುತ್ತದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ಸಮಯದಲ್ಲಿ ವಿಜಯನಗರದಲ್ಲಿ ಇಸ್ಲಾಂ ವಾಸ್ತುಶಿಲ್ಪ ಸ್ವತಂತ್ರವಾಗಿ ಉಪಯೋಗಿಸಲ್ಪಟ್ಟಿತು ಎಂಬುದು ಸ್ಪಷ್ಟ.[೫೫]

೨. ರಾಣಿಯರ ಸ್ನಾನಗೃಹ

ರಾಣಿಯರ ಸ್ನಾನಗೃಹವು ರಾಜನ ಆವರಣದ ಬಳಿ ಇರುವ ಚೌಕಾಕಾರದ ನೀರಿನ ಅಂಗಳ. ಇದಕ್ಕೆ ನಾಲ್ಕು ಕಡೆ ಕಾಲುವೆ ನೀರು ಹರಿದಿದೆ. ಪೂರ್ವದಲ್ಲಿರುವ ಕಿಂಡಿಯ ಮೂಲಕ ಒಂದು ನಳಿಕೆಯು ಕಾಲುವೆಯಿಂದ ನೀರನ್ನು ಒಳಕ್ಕೆ ವಿಶಾಲವಾದ ಚೌಕಾಕಾರದ ಬೋಗುಣಿಯಂತಹ ಮಧ್ಯಭಾಗದಲ್ಲಿ ಹರಿಸುತ್ತಿತ್ತು. ಈ ಬೋಗಣಿಯ ಸುತ್ತಲೂ ಆಸರೆಗಳ ಮೇಲೆ ಕ್ಟಟಿದ ಕಮಾನು ಅಂಕಣಗಳಿವೆ. ಮೂರು ಪಕ್ಕಗಳ ಮಧ್ಯದ ಅಂಕಣಗಳು ತೆರೆದವು. ಆದರೆ ದಕ್ಷಿಣದಲ್ಲಿ, ಮೇಲೆ ಚಾಚಿಕೊಂಡ ಒಂದು ಉಪ್ಪರಿಗೆಯ ಮೊಗಸಾಲೆಗಳಲ್ಲಿ ಸಣ್ಣ ಕಮಾನುಗಳು ಕಿಟಕಿಗಳು ಮತ್ತು ಕೋನಾಕೃತಿಯ ಸೂರು ಇದೆ. ಬಾಲ್ಕನಿಗಳ ಹೊರಭಾಗ ತೆರೆದ ಮುಂಭಾಗಕ್ಕೆ ರೇಖಾ ಚಿತ್ರಗಳು ಮತ್ತು ಹೂ-ಎಲೆಗಳ ಅಲಂಕಾರ ಮಾಡಿದೆ. ನಡುವೆಯ ಮೇಲು ಚಾವಣಿಯಲ್ಲಿ ಬೇರೆ ಬೇರೆ ವಾಸ್ತುಶಿಲ್ಪ ಮತ್ತು ಕಲಾಶೈಲಿಗಳ ಮಿಶ್ರಣ ಕಂಡುಬರುತ್ತದೆ. ವಾಸ್ತು ಯೋಜನೆಯಲ್ಲಿ ಅಲಂಕಾರ ವಿವರಗಳಲ್ಲಿ ಒಂದು ಭಾವಣಿ ಇನ್ನೊಂದಕ್ಕಿಂತ ಬೇರೆಯಾಗಿರುತ್ತದೆ. ಗಾರೆಯ ತಾವರೆ ಮೊಗ್ಗುಗಳು, ಹಂಸಗಳು, ಯಾಳಿಗಳು, ಗಿಣಿಗಳು, ಹೂವಿನ ದಳಗಳು, ವಿಲಕ್ಷಣವಾದ ಹೂಬಳ್ಳಿಗಳು ಇವುಗಳ ಅಲಂಕಾರವಿದೆ. ಆಗ್ನೇಯ ಮೂಲೆಯಲ್ಲಿ ಕಟ್ಟಡದ ಮೇಲಕ್ಕೆ ಹತ್ತಿ ಹೋಗಲು ಮೆಟ್ಟಿಲುಗಳಿವೆ.[೫೬]

೩. ಆನೆಯ ಲಾಯ

ಅರಸರ ರಾಜಧಾನಿಯ ಪರಿಧಿಯಲ್ಲಿ ಬರುವ ಅತ್ಯಂತ ದೊಡ್ಡ ಮತ್ತು ಅತ್ಯಂತ ವ್ಯವಸ್ಥಿತವಾಗಿ ನಿರ್ಮಿಸಲ್ಪಟ್ಟ ಸ್ಮಾರಕ ಎಂದರೆ ಆನೆಯ ಲಾಯ. ಇದರ ಎದುರಿಗೆ ವಿಶಾಲವಾದ ಮೈದಾನವಿದೆ. ಈ ಕಟ್ಟಡವು ವಿವಿಧ ಗುಮ್ಮಟ ಮತ್ತು ಗೋಪುರಗಳನ್ನು ಹೊಂದಿದೆ. ೧೧ ಕೋಣೆಗಳಿವೆ. ಕೆಲವು ಕೋಣೆಗಳಿಗೆ ಬಾಗಿಲು ಚೌಕಟ್ಟನ್ನು ಕೂಡಿಸಲಾಗಿದೆ. ಈ ಸಂಪೂರ್ಣ ರಚನೆಯು ದಕ್ಷಿಣೋತ್ತರವಾಗಿದೆ. ಪಶ್ಚಿಮಾಭಿಮುಖವಾಗಿ ದೊಡ್ಡ ದೊಡ್ಡ ಬಾಗಿಲುಗಳಿವೆ. ಪೂರ್ವದಲ್ಲಿ ಸಣ್ಣ ಸಣ್ಣ ದ್ವಾರಗಳಿವೆ. ಈ ಕಟ್ಟಡದ ಮಧ್ಯದ ಎರಡು ಬದಿಗಳಲ್ಲಿ ಕಟ್ಟಡದ ಮೇಲೆ ಮಾಳಿಗೆಗೆ ಹೋಗಲು ಮೆಟ್ಟಿಲುಗಳಿವೆ. ಕಟ್ಟಡದ ಮೇಲ್ಭಾಗದ ಮಧ್ಯ ಭಾಗದಲ್ಲಿ ಮತ್ತೊಂದು ಕೋಣೆಯಿದೆ. ಈ ಆನೆಯ ರಾಳೆದ ಹೊರಭಾಗವನ್ನು ಅವಲೋಕಸಿದಾಗ ಪ್ರತಿಯೊಂದು ಕೋಣೆಯ ದ್ವಾರವು ಕಮಾನಿನ ಆಕಾರದ

ದ್ವಾರವನ್ನು ಹೊಂದಿದೆ. ಪ್ರತಿ ಕಮಾನಿನ ದ್ವಾರದ ಪಕ್ಕದಲ್ಲಿ ಮೂರು ಸಣ್ಣ ಕಮಾನುಗಳನ್ನು ಬಿಡಲಾಗಿದೆ. ಇಳಿಜಾರಿನ ಮಾಳಿಗೆಯ ಕುಸಿದಿದೆ. ಆದರೆ ಅದಕ್ಕೆ ಆಸರೆಯಾದ ಕಲ್ಲಿನ ಬೇರುಗಳು ಇನ್ನೂ ಇದೆ. ಮಧ್ಯದ ಕೋಣೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಕೋಣೆಗಳ ಮೇಲೆ ವಿವಿಧ ವಿನ್ಯಾಸಗಳನ್ನು ಒಳಗೊಂಡ ಗುಮ್ಮಟಗಳನ್ನು ನಿರ್ಮಿಸಲಾಗಿದೆ. ಕೇಂದ್ರದ ಗೋಪುರದ ಎರಡು ಬದಿಗಳಲ್ಲಿ ಸಮಮಿತಿ ಆಕೃತಿಯಲ್ಲಿ ಗುಮ್ಮಟಗಳನ್ನು ನಿರ್ಮಿಸಲಾದ ಗುಮ್ಮಟದ ಹೊರಭಾಗದಲ್ಲಿ ಹಲವಾರು ಸುರಳಿ ಆಕೃತಿಯ ಚಿತ್ರ ವಿನ್ಯಾಸಗಳನ್ನು ಮಾಡಲಾಗಿದೆ.[೫೭] ಈ ಕೋಣೆಗಳು ವಿಶಿಷ್ಟ ರೀತಿಯ ದ್ವಾದಶಾಕೃತಿಯಲ್ಲಿ ನಿರ್ಮಾಣಗೊಂಡಿದೆ. ಕೆಲವು ಗುಮ್ಮಟಗಳು ಮತ್ತು ಗೂಡುಗಳು ದೇವಾಲಯದ ರೀತಿಯ ಎತ್ತರ ಗೋಡೆಗಳನ್ನು ಇಟ್ಟಿಗೆಯ ರಚನೆಯನ್ನು ಹೊಂದಿವೆ. ಇನ್ನು ಕೆಲವು ಗುಮ್ಮಟಗಳ ಮೇಲೆ ಅಲಂಕಾರ ಪಟ್ಟಿಯನ್ನು ನಿರ್ಮಿಸಲಾಗಿದೆ. ಈ ಆನೆಯ ಲಾಳ ೧೧ ಕೊಠಡಿಗಳಲ್ಲಿ ಒಟ್ಟು ೧೦ ಪಟ್ಟದ ಆನೆಗಳನ್ನು ಕಟ್ಟುತ್ತಿದ್ದರು. ಈ ಹನ್ನೊಂದು ಕೊಠಡಿಯ ಮೇಲ್ಭಾಗದ ಗೋಪುರಗಳು ಗೋಲಾಕಾರದ 'ಡೂಮ್' ಶೈಲಿಯಲ್ಲಿರುತ್ತವೆ. ಎಡ ಮತ್ತು ಬಲಭಾಗದ ೧, ೩, ೫ನೆಯ ಡೂಮ್‌ಗಳು ಈಗಿನ ಬಿಜಾಪುರದ ಗೋಲಗುಮ್ಮಟದ ಡೂಮ್‌ನ ಶೈಲಿಯಂತೆ ಇವೆ. ಉಳಿದ ೨, ೪ ಡೂಮ್‌ಗಳು ಜೈನಧರ್ಮದ ಶೈಲಿಯಂತೆ ಹೋಲುತ್ತದೆ. ಉಳಿದ ಮಧ್ಯದ ಡೂಮ್ ಹಿಂದೂ ಧರ್ಮದ ಶೈಲಿಯಂತಿರುತ್ತದೆ.[೫೮]

೪. ದಣ್ಣಾಯಕ ಪ್ರಕಾರ (ದಂಡನಾಯಕ)

ಈ ಪ್ರಕಾರವು ಭೂಮಾಂತರ್ಗತ ದೇವಾಲಯದಿಂದ ಪೂರ್ವಕ್ಕೆ ಇದೆ. ಸುತ್ತಲೂ ಪ್ರಕಾರದ ಗೋಡೆಗಳಿಂದಾವೃತ್ತವಾದ ಈ ಕೋಟೆಯೊಳಗೆ ಹಲವಾರು ಸಣ್ಣ ಕಟ್ಟಡಗಳಿದ್ದು, ಈಗ ಕೆಲವು ಗೋಡೆ ಭಾಗಗಳು ಮಾತ್ರ ಅವಶೇಷವಾಗಿ ಉಳಿದಿವೆ. ಈಶಾನ್ಯದ ಮೂಲೆಯಲ್ಲಿ ಮೂರು ಸ್ತರಗಳು ಅಲಂಕೃತವಾದ ಸ್ಥಾನವನ್ನು ಕಾಣಬಹುದು. ಆಗ್ನೇಯ ಮೂಲೆಯಲ್ಲಿ ಮೂರು ಕಡೆಗಳಲ್ಲಿ ಮುಚ್ಚಿದ ಉತ್ತರದ ಕಂಬಗಳನ್ನುಳ್ಳ ಅಂಗಳವೊಂದಿದೆ. ಚೌಕಾಕಾರದ ಕಂಬಗಳಿಂದ ಕಮಾನುಗಳು ಹೊರಹೊಮ್ಮಿವೆ. ಛಾವಣಿಯಲ್ಲಿ, ತಲೆಕೆಳಗಾದ ಕಮಲದ ಒಂಭತ್ತು ಗುಮ್ಮಟಗಳಿವೆ. ಇಮ್ಮಡಿ ದೇವರಾಯನು ಸಮರ್ಥ ಅಶ್ವರೋಹಿಗಳಾದ ಮಹಮ್ಮದಿಯರನ್ನು ಸೈನ್ಯದಲ್ಲಿ ಸೇರಿಸಿಕೊಂಡು ಅವರಿಗಾಗಿ ಮಸೀದಿಗಳನ್ನು ಕಟ್ಟಿಸಿದನೆಂಬುದು ಫೆರಿಸ್ತಾನ ಹೇಳಿಕೆ. ಈ ಅಂಗಳದಂತಹ ಕಟ್ಟಡವೇ ಆ ಮಸೀದಿಯೊಂದು ಹಲವರ ಅಭಿಪ್ರಾಯ. ವಾಸ್ತವವಾಗಿ ಕಮಾನಿನ ಶೈಲಿಯನ್ನು ಹೊರತು ಪಡಿಸಿದರೆ ಮಸೀದಿಗಳಿರಬೇಕಾದ ಯಾವ ಲಕ್ಷಣವೂ ಇಲ್ಲ.

೫. ಜನಾನ ಪ್ರಕಾರ

ಹಜಾರ ರಾಮಸ್ವಾಮಿ ದೇವಾಲಯದ ಈಶಾನ್ಯಕ್ಕೆ ರಾಣಿವಾಸ ಅಥವಾ ಜನಾನ ಪ್ರಕಾರ ಎಂದು ಕರೆಯಲಾಗುವ ಎತ್ತರದ ಗೋಡೆಗಳ ಆವರಣದಲ್ಲಿ ಕೆಲವು ಪ್ರಮುಖ ಕಟ್ಟಡಗಳಿವೆ. ಇದಕ್ಕೆ ಪಶ್ಚಿಮ ದ್ವಾರದಿಂದ ಗೋಡೆಯ ಕೆಳಭಾಗ ಅಗಲವಾಗಿದ್ದು ಮೇಲೇರಿದಂತೆ ಕಿರಿದಾಗಿವೆ.

ಈ ಗೋಡೆಯ ಮೂರು ಮೂಲೆಯಲ್ಲಿ ಕಾವಲು ಗೋಪುರಗಳಿವೆ. ವಾಸ್ತವವಾಗಿ ಇದನ್ನು ರಾಣಿವಾಸವೆನ್ನಲು ಹೆಚ್ಚಿನ ಆಧಾರಗಳಿಲ್ಲ. ಅರಮನೆ ಎನ್ನಬಹುದಾದ ಎರಡು ಕಟ್ಟಡಗಳ ತಳಪಾಯ ಮಾತ್ರ ಉಳಿದಿದೆ. ಜೊತೆಗೆ ಒಂದು ಕೊಳವೂ ಇದೆ. ಒಂದು ಕಟ್ಟಡದ ಸಾಲುಗಳು ಬಹಳ ಹಿಂಜರಿದಂತೆ ಮತ್ತು ತೋರುವ ತಳಪದಿ ಮಾತ್ರ ಲಭ್ಯವಾಗಿದ್ದು ಇದು ಒಬ್ಬ ರಾಣಿಯ ನಿವಾಸ ವೆಂದು ಹೇಳಲಾಗಿದೆ.[೫೯] ವಿಜಯನಗರದಲ್ಲಿ ಕಾಣಿಸಿಕೊಂಡಿರುವ ಇಂತಹ ನಿವಾಸಗಳ ಅವಶೇಷಗಳೆಲ್ಲ ೧೫.೭ಮೀ., ೨೬.೬ಮೀ. ವಿಸ್ತಾರದ ಈ ತಳಪಾಯವೇ ಅತಿ ವಿಶಾಲವಾದುದು ಸಮೀಪದಲ್ಲಿಯೇ ಸ್ತ್ರೀ ಕಾವಲುಗಾರರ ಮನೆಯೆಂದು ಹೇಳಲಾದ ಕಟ್ಟಡವಿದ್ದು ಪೂರ್ವಾಭಿಮುಖವಾಗಿರುವ ಈ ಕಟ್ಟಡ ದ್ವಾರ ಹೊರತುಪಡಿಸಿದರೆ ಇತರ ಯಾವ ವಿಧವಾಗಿ ಬಾಗಿಲುಗಳಾಗಲಿ, ಕಿಟಕಿಗಳಾಗಲಿ ಇದಕ್ಕಿಲ್ಲ.

೬. ಕೃಷ್ಣದೇವಾಲಯದಲ್ಲಿನ ಕಟ್ಟಡ

ಕೃಷ್ಣ ಮಂದಿರದ ದಕ್ಷಿಣದಲ್ಲಿರುವ ಈ ಸ್ಮಾರಕವು ಚೆನ್ನಾಗಿ ಸಂರಕ್ಷಿಸಲ್ಪಟ್ಟಿದೆ. ಈ ಸ್ಮಾರಕ ಆಯತಾಕಾರದ ಈ ರಚನೆಯನ್ನು ದಪ್ಪಕಲ್ಲುಗಳ ಜಗುಲಿಯ ಮೇಲೆ ನಿರ್ಮಿಸಲಾಗಿದೆ. ಅಡಿಪಾಯದ ಮೇಲೆ ಕಾಂಕ್ರಿಟ್ ಮತ್ತು ಪ್ಲಾಸ್ಟರ್‌ನ ಕುರುಹುಗಳನ್ನು ಪೂರ್ವ ಮತ್ತು ಉತ್ತರದಲ್ಲಿ ಮಾತ್ರ ಕಾಣಬಹುದು ಇದರ ಪ್ರವೇಶಕ್ಕಾಗಿ ಪೂರ್ವದ ಮಧ್ಯದಲ್ಲಿ ಒಂದು ದ್ವಾರ ಬಾಗಿಲನ್ನು ಬಿಡಲಾಗಿದೆ. ಒಳಗೆ ಮೆಟ್ಟಿಲುಗಳು ನೆಲ ಮಾಳಿಗೆಗೆ ಇಳಿದು ಹೋಗುತ್ತವೆ. ಎರಡು ಚೌಕಾಕಾರದ ಎತ್ತರದ ಗೋಡೆಗಳು ಮತ್ತು ಇನ್ನು ನಾಲ್ಕು ಸಣ್ಣ ಗೋಡೆಗಳು ಒಳಭಾಗವನ್ನು ೩-೨ ವಿಭಾಗದಲ್ಲಿ ವಿಂಗಡಿಸಿದೆ. ಉತ್ತರ ಮತ್ತು ಪಶ್ಚಿಮದಲ್ಲಿ ಕಟ್ಟಡದ ಮೇಲೆ ಹೋಗಲು ಮೆಟ್ಟಿಲುಗಳಿವೆ.[೬೦]

೭. ರಾಜಧಾನಿ ಕೇಂದ್ರದಿಂದ ಆಗ್ನೇಯಕ್ಕಿರುವ ದ್ವಾರಬಾಗಿಲು

ಬಹಮನಿ ವಾಸ್ತುಶೈಲಿಯಲ್ಲಿ ಹೋಲುವ ಕಮಾನಿನ ಲಕ್ಷಣಗಳನ್ನು ಒಳಗೊಂಡಿದೆ.[೬೧] ಇದು ಬೃಹತ್ ಆಯತಾಕಾರದ ಆವರಣಗಳನ್ನು ಹೊಂದಿದೆ. ಒಂದು ಪ್ರವೇಶದ್ವಾರವು ಉತ್ತರಕ್ಕಿದೆ. ಆದರೆ ಅದು ಶಿಥಿಲಗೊಂಡಿದೆ. ಪೂರ್ವದಲ್ಲಿ ಇನ್ನೊಂದು ಪ್ರವೇಶದ್ವಾರವು ಇದೆ. ಅದಕ್ಕೆ ಗುಮ್ಮಟವಿದೆ. ಈ ಗುಮ್ಮಟವು ಬೃಹತ್ ಗೋಡೆಯ ಮೇಲೆ ನಿಂತಿದೆ. ಗುಮ್ಮಟವನ್ನು ಈಗ ಮತ್ತೆ ಗಿಲಾವು ಪ್ಲಾಸ್ಟರ್‌ನಿಂದ ಸರಿಪಡಿಸಲಾಗಿದೆ. ಅದಕ್ಕೆ ಆಸರೆಯಾಗಿ ಗೋಡೆಯನ್ನು ಕಟ್ಟಲಾಗಿದೆ. ಈ ನಿರ್ಮಾಣದಲ್ಲಿ ಸಣ್ಣ ಸಣ್ಣ ಕಲ್ಲುಗಳು ಗಾರೆ ಮತ್ತು ಪ್ಲಾಸ್ಟರನ್ನು ಉಪಯೋಗಿಸಲಾಗಿದೆ. ಅದು ಆವರಣ ಗೋಡೆಯ ನಿರ್ಮಾಣದೊಂದಿಗೆ ಸಂಬಂಧ ಹೊಂದಿಲ್ಲ. ಗುಮ್ಮಟವು ನಾಲ್ಕು ದೊಡ್ಡ ಕಮಾನುಗಳ ಮೇಲೆ ನಿರ್ಮಾಣಗೊಂಡಿದೆ.

೮. ರಾಜಧಾನಿ ಕೇಂದ್ರದಿಂದ ಪೂರ್ವದ ದ್ವಾರ

ಪೂರ್ವಕ್ಕೆ ಮುಖಮಾಡಿರುವ ಈ ದ್ವಾರವು ಈಗ ಪೂರ್ತಿ ಕುಸಿದು ಹೋಗಿದೆ. ಗೋಡೆಯ ಮೇಲೆ ಉತ್ತರದಲ್ಲಿ ಪೂರ್ವ-ಪಶ್ಚಿಮವಾಗಿ ಕಾಲು ದಾರಿ ಇದೆ. ಅದು ಕಟ್ಟಡ ಮುಂಭಾಗ. ಈ ದ್ವಾರಬಾಗಿಲು ಕಮಾನು ಹೊಂದಿದ್ದು ಎರಡು ಸಮತಲದೊಂದಿಗೆ ತೊಲೆಗಳ ಮೇಲೆ ಕಮಾನಿನ

ತೆರವುಗಳುಳ್ಳ ಒಂದು ಕೋಣೆಯಿದೆ. ಹಳೆಯ ಯಾವುದೇ ಅಲಂಕಾರ ಉಳಿದಿಲ್ಲ ಕೆಲವು ಮಾತ್ರ ಇವೆ.[೨]

೯. ಈಶಾನ್ಯದಲ್ಲಿರುವ ದ್ವಾರಬಾಗಿಲು

ಈ ದ್ವಾರಬಾಗಿಲು ಎರಡು ಬೃಹತ್ ಕೋಟೆಯ ಬುರುಜುಗಳ ಮಧ್ಯದಲ್ಲಿದೆ. ಇದು ಉತ್ತರ ದಕ್ಷಿಣ ದಾರಿಯನ್ನು ಹೊಂದಿದ್ದು ಅದರ ಮೇಲೆ ಕೋಣೆ ಇದೆ. ಕೆಳ ಅಂತಸ್ತಿನಲ್ಲಿ ಮೂರು ಕಮಾನುಗಳು ಆಯತಾಕಾರದ ಚೌಕಟ್ಟುಗಳಿವೆ. ಈ ಕಮಾನುಗಳು ಎರಡು ಸಮತಲದಲ್ಲಿವೆ. ಇವುಗಳ ಮೇಲೆ ತೆಳುವಾದ ಎಲೆಯ ಚಿತ್ರಗಳಿವೆ. ಮಧ್ಯದ ಕಮಾನಿನ ಗೋಡೆಯು ವಿಶಾಲವಾದ ತೆರವು ನಿರ್ಮಿಸಲಾಗಿದೆ. ಮೇಲ್ಭಾಗದ ಅಂತಸ್ತು ಕೆಳ ಅಂತಸ್ತಿನ ಚಿತ್ರಣವನ್ನು ಹೊಂದಿದೆ. ಆದರೆ ಗಾತ್ರದಲ್ಲಿ ಸಣ್ಣದಿದೆ. ಇಲ್ಲಿ ಮಧ್ಯದ ಕಮಾನಿನ ಎರಡು ಬದಿಗಳಲ್ಲಿ ಸಣ್ಣ ಗೋಡೆಗಳಿವೆ. ಬಲಭಾಗ ಹೊರತುಪಡಿಸಿ ಕಿಟಕಿಗಳಿವೆ.[೬]

೧೦. ಮಲಪನಗುಡಿಯ ನೈರುತ್ಯಕ್ಕಿರುವ ಬಾವಿ

ಹೊಸಪೇಟೆಯಿಂದ ಮಲಪನಗುಡಿ ಗ್ರಾಮದ ಪೂರ್ವದಲ್ಲಿ ಈ ಬಾವಿ ಇದೆ. ಕ್ರಿ.ಶ. ೧೪೧೨ರಲ್ಲಿ ಕೆತ್ತಲಾದ ಮಲ್ಲಿಕಾರ್ಜುನ ದೇವಾಲಯದ ಮುಂದೆ ದೊರೆತ ಶಿಲಾಶಾಸನದಲ್ಲಿ ಈ ಬಾವಿಯನ್ನು ಕುರಿತು ಉಲ್ಲೇಖಿಸಲಾಗಿದೆ. ವಾಯುವ್ಯದಲ್ಲಿನ ಮೆಟ್ಟಿಲುಗಳು ಅಷ್ಟಭುಜಾಕೃತಿಯ ಬಾವಿಯ ಕೆಳಭಾಗದ ಎರಡು ಬದಿಯಲ್ಲಿ ಮೆಟ್ಟಿಲು ಸಾಲುಗಳು ಬಾವಿಯ ಸುತ್ತಲೂ ಇವೆ. ಕಮಾನಿನ ತೆರವುಗಳಿವೆ. ನೀರಿನ ಹತ್ತಿರ ಬಾವಿಯು ಚೌಕಾಕಾರದಲ್ಲಿದೆ. ಬಾವಿಯ ಮೇಲ್ಭಾಗದಲ್ಲಿ ಪರಸ್ಪರ ಹೊಂದಿಕೊಂಡಿರುವ ಎಂಟು ಕಮಾನುಗಳಿವೆ. ಮೆಟ್ಟಿಲುಗಳ ಎದುರು ಭಾಗದಲ್ಲಿ ಕನ್ನಡದಲ್ಲಿ ಲಿಪಿಯನ್ನು ಬರೆಯಲಾಗಿದೆ. ಇನ್ನೊಂದು ಬದಿಯಲ್ಲಿ ಹನುಮಾನನ ವಿಗ್ರಹ ಇರುವ ಬಂಡೆಯಿದ್ದು ವಾಯುವ್ಯಕ್ಕೆ ತೆರೆದುಕೊಂಡಿದೆ ಮತ್ತು ಅದು ಅರ್ಧಭಾಗ ನೀರಿನಲ್ಲಿ ಮುಳುಗಿ ಹೋಗಿದೆ. ಇಲ್ಲಿ ಮೂರು ಗೋಡೆಗಳು ಸದಾ ಇವೆ. ಬಾವಿಯ ಸುತ್ತಲೂ ಇರುವ ಕಾಲುದಾರಿಯ ಮೇಲೆ ಛತ್ತು ಇದೆ. ಕೆಳಭಾಗದ ಯಾವುದೇ ಸಂರಚನೆ ಉಳಿದಿಲ್ಲ. ಕಾಂಕ್ರೀಟ್ ಪ್ಲಾಸ್ಟರ್ ಸುತ್ತಲೂ ಕಾಣುತ್ತದೆ. ಮೆಟ್ಟಿಲುಗಳು ಕಮಾನಿನ ಗೂಡನ್ನು ಹೊಂದಿದೆ. ಇದರಲ್ಲಿ ರಾಮನ ಚಿತ್ರವನ್ನು ಮತ್ತು ಕನ್ನಡ ಲಿಪಿಯನ್ನು ಕೆತ್ತಲಾಗಿದೆ.

೧೧. ಕಮಲಾಪುರ ಪೂರ್ವಕ್ಕೆ ಇರುವ ಕೆರೆ

ಕಮಲಾಪುರದಿಂದ ಸರಿಸುಮಾರು ನಾಲ್ಕು ಕಿ.ಮೀ. ಅಂತರದಲ್ಲಿ ಪೂರ್ವಕ್ಕೆ ಈ ಚೌಕಾಕಾರದ ಕೆರೆ ಇದೆ. ಕೆರೆಯ ಸುತ್ತಲೂ ಕಚ್ಚಾ ಕಲ್ಲುಗಳ ಅಂಚು ಇದ್ದು, ಅದು ಪುನರ್ ನಿರ್ಮಾಣಗೊಂಡಿದೆ. ಪಶ್ಚಿಮದಲ್ಲಿ ಒಂದು ಕಟ್ಟಡವಿದೆ. ಈ ಕಟ್ಟಡವು ಇಂದು ಸಂಪೂರ್ಣ ಶಿಥಿಲಗೊಂಡಿದೆ. ಆದರೆ ಎರಡು ಗೂಡುಗಳುಳ್ಳ ಭಾಗಗಳು ಈಗಲೂ ನಿಂತಿವೆ. ಉತ್ತರದ ಗೋಡೆಗಳು ಮತ್ತು ತೆರೆದ ಕಮಾನು ಪೂರ್ವ ಮತ್ತು ದಕ್ಷಿಣದಲ್ಲಿ ಇವೆ. ಪಶ್ಚಿಮದಲ್ಲಿ ಭಗ್ನಗೊಂಡಿದೆ.

೧೨. ಎರಡು ಅಂತಸ್ತುಗಳುಳ್ಳ ಆಯತಾಕಾರದ ಮಂಟಪ ಅಥವಾ ಕಾವಲು ಗೋಪುರ

ಮೊದಲನೆ ಅಂತಸ್ತಿನಲ್ಲಿ ಎಂಟು ಒಂದೇ ರೀತಿಯ ಕಂಬಗಳಿದ್ದು, ಅವುಗಳ ಕಮಾನುಗಳ ದ್ವಾರವನ್ನು ಹೊಂದಿದ್ದು, ಅದು ಮಧ್ಯದ ಆಯತಾಕಾರದ ಕೋಣೆಗೆ ತೆರೆದುಕೊಳ್ಳುತ್ತದೆ. ಇಲ್ಲಿ ಏಳು ದಿಕ್ಕಿನಲ್ಲಿ ಕಮಾನುಗಳುಳ್ಳ ಏಳು ಕಿಟಕಿಗಳನ್ನು ಇಡಲಾಗಿದೆ. ಎಂಟನೆಯದನ್ನು ಈಶಾನ್ಯದಲ್ಲಿ ಕಮಾನಿನ ತೆರವು ಇದ್ದು ಅದು ಎರಡನೆಯ ಅಂತಸ್ತಿಗೆ ಹೋಗಲು ಮಾರ್ಗವಾಗಿದೆ.

೧೩. ಒಂಭತ್ತು ಗುಮ್ಮಟಗಳುಳ್ಳ ಮಂಟಪ

ಈ ರಚನೆಯನ್ನು ಗಮನಿಸಿದಾಗ ಆಗಲೇ ಶಿಥಿಲಗೊಂಡ ಮತ್ತು ಅರ್ಧ ನಿರ್ಮಿಸಿದ ಬುನಾದಿಯ ಮೇಲೆ ಮತ್ತೊಮ್ಮೆ ನಿರ್ಮಿಸಿದಂತೆ ಕಂಡುಬರುತ್ತದೆ. ಈ ಕಟ್ಟಡವು ೩ x ೩ ರಂತೆ ಒಟ್ಟು ೯ ಗುಮ್ಮಟಗಳ ವಿಭಾಗವನ್ನು ಹೊಂದಿದೆ. ಪ್ರತಿ ವಿಭಾಗವು ಎರಡು ಸ್ತಂಭಗಳನ್ನು ಆಧರಿಸಿದ ಕಮಾನು ಹೊಂದಿದೆ. ಇವು ಉತ್ತರದಲ್ಲಿ ತೆರೆದುಕೊಂಡಿವೆ. ಕೇಂದ್ರದಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ನೆಲದಿಂದ ಸ್ವಲ್ಪ ಎತ್ತರದಲ್ಲಿ ಪೂರ್ವ ಪಶ್ಚಿಮವಾಗಿ ಮೂರು ಸಣ್ಣ ಆಯತಾಕಾರದ ಎರಡು ಗೋಡೆಗಳಲ್ಲಿ ಆಳವಾದ ಪ್ರಾರ್ಥನಾ ಗೂಡುಗಳನ್ನು ನಿರ್ಮಿಸಲಾಗಿದೆ. ಈ ಗೋಡೆಗಳು ಮತ್ತು ಮಧ್ಯದ ಪಡಸಾಲೆಯ ಉತ್ತರದ ದ್ವಾರವನ್ನು ಕೆಡವಲಾದ ಹಳೆಯ ಬುನಾದಿಯ ಕಲ್ಲುಗಳ ಮೇಲೆ ನಿರ್ಮಿಸಲಾಗಿದೆ. ಈ ಮಂಟಪವು ಬಹುಶಃ ಉತ್ತರಕ್ಕೆ ತೆರೆದುಕೊಂಡಂತೆ ವಿಶಾಲವಾದ ಆಸ್ಥಾನವನ್ನು ಹೊಂದಿವೆ.[೬೪]

೧೪. ಬಹುಗುಮ್ಮಟಗಳ ಕಾವಲು ಗೋಪುರ

ಆವರಣ ೭ರ ಈಶಾನ್ಯದ ಗೋಡೆಯ ಮೂಲೆಯಲ್ಲಿ ಗೋಡೆಗಳ ಮೇಲೆ ಈ ರಚನೆಯನ್ನು ನಿರ್ಮಿಸಲಾಗಿದೆ. ಇದರ ಮೂಲಕ ಪಶ್ಚಿಮ ಮತ್ತು ಉತ್ತರ ದಿಕ್ಕುಗಳ ಮೂಲಕ ರಾಜರ ಆಸ್ಥಾನದ ನಿಗಾ ವಹಿಸಬಹುದಾಗಿತ್ತು. ಗಚ್ಚಿನಿಂದ ಮಾಡಿದ ಗುಮ್ಮಟವು ಇನ್ನೊಂದು ದೊಡ್ಡ ಗೋಡೆಗೆ ಹೊಂದಿಕೊಂಡಿದ್ದು ಬಹುಶಃ ಇದನ್ನು ನಂತರ ನಿರ್ಮಿಸಿರಬಹುದು.

ಪೂರ್ವ ಗೋಡೆಯ ದಕ್ಷಿಣದ ಕೊನೆಯಲ್ಲಿರುವ ಮೆಟ್ಟಿಲುಗಳಿಂದ ತಲುಪಲು ಸಾಧ್ಯವಾಗುವಂತೆ ಅಲ್ಲಿ ಗುಮ್ಮಟದ ಕೋಣೆ ಇದೆ. ಪೂರ್ವದ ಗೋಡೆಯ ಉತ್ತರದ ತುದಿಯಲ್ಲಿ ಒಂದು ಗೂಡು (ಅಥವಾ ಕೋಣೆ ಇರಬಹುದು) ಇದೆ. ಆದರೆ ಅದನ್ನು ಪ್ರವೇಶಿಸಲು ಸಾಧ್ಯವಾಗದಂತೆ ಮುಚ್ಚಲಾಗಿದೆ. ಮೇಲ್ಭಾಗವು ೩x೨ ರ ವಿಭಾಗವನ್ನು ಹೊಂದಿದೆ. ಆಗ್ನೇಯದ ಮೂಲೆಯಲ್ಲಿ ಒಂದು ಸಣ್ಣ ಗೋಡೆಯನ್ನು ಸುತ್ತುವರಿದಂತೆ ಮೇಲ್‌ಅಂತಸ್ತು ಇದೆ. ಉತ್ತರದಲ್ಲಿ ಎರಡೂ ಸಣ್ಣ ಚೌಕಾಕಾರದ ಕೋಣೆಗಳಿವೆ. ಪೂರ್ವದ ಗೋಡೆಯಲ್ಲಿ ಎರಡು ಸಣ್ಣ ಕಿಟಕಿಗಳನ್ನು ಜೋಡಿಸಲಾಗಿದೆ. ಪಶ್ಚಿಮದಲ್ಲಿ ಮೂರು ಗುಮ್ಮಟಗಳನ್ನು, ಕೋಣೆಗಳನ್ನು ಎತ್ತರದಲ್ಲಿ ನಿರ್ಮಿಸಲಾಗಿದೆ. ವಾಯವ್ಯದ ಚೌಕಾಕಾರದ ಕೋಣೆಯು ಕಿಟಕಿಗಳನ್ನು ದ್ವಾರಗಳನ್ನು ಮತ್ತು ಸಣ್ಣ ಪ್ರಾರ್ಥನಾ ಗೂಡುಗಳನ್ನು ಹೊಂದಿದೆ.

ಮಧ್ಯದ ಕೋಣೆಯು ಪಶ್ಚಿಮಕ್ಕಿದ್ದು ಆಯತಾಕಾರದಲ್ಲಿದೆ. ದೊಡ್ಡ ಕಮಾನಿನ ಬಾಗಿಲು ಇದ್ದು ಅದು ಪೂರ್ವ ಮತ್ತು ಪಶ್ಚಿಮಕ್ಕಿದ್ದು ಆಯತಾಕಾರದಲ್ಲಿದೆ. ದೊಡ್ಡ ಕಮಾನಿನ ಬಾಗಿಲು ಇದ್ದು ಅದು ಪೂರ್ವ ಮತ್ತು ಪಶ್ಚಿಮದಲ್ಲಿ ತೆರೆದುಕೊಂಡಿದೆ. ಉತ್ತರ ಮತ್ತು ದಕ್ಷಿಣದ ಗೋಡೆಯಲ್ಲಿಯೂ ಗೂಡುಗಳಿದ್ದು ನಂತರ ಇದಕ್ಕೆ ಕಮಾನುಗಳನ್ನು ಜೋಡಿಸಲಾಗಿದೆ. ಪಶ್ಚಿಮದಲ್ಲಿ ಉತ್ತರದ ತೆರೆದ ಪ್ರದೇಶವು ಹೊರಗೆ ಚಾಚಿಕೊಂಡಿದ್ದು ಬಾಲ್ಕನಿಯಂತೆ ತೆರೆದುಕೊಂಡಿದೆ. ಕೆಳಗೆ ಇರುವ (ಗೋಡೆಯ ಕೆಳಭಾಗ) ಸಾದಾ ಇದೆ. ಮೆಟ್ಟಿಲುಗಳ ದ್ವಾರದಲ್ಲಿ ಮಾತ್ರ ಆಯತಾಕಾರದ ಚೌಕಟ್ಟಿನ ರಚನೆ ಇದೆ. ಇದೇ ತೆರನಾದ ಇನ್ನೊಂದು ರಚನೆಯನ್ನು ಎರಡನೆಯ ಅಂತಸ್ತಿನಲ್ಲಿ ಕಾಣಬಹುದು. ಉತ್ತರ ಮತ್ತು ಪಶ್ಚಿಮದ ಗೋಡೆಗಳು ಮೇಲೆ ಸಾಗಿದಂತೆ ಗೋಪುರಾಕೃತಿಯನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ. ಉತ್ತರಕ್ಕೆ ಚಾಚಿಕೊಂಡಿರುವ ಬಾಲ್ಕನಿಯ ಕೆಳಗೆ ೬ ಆಸರೆ ಕಲ್ಲುಗಳನ್ನು ಅವುಗಳಲ್ಲಿ ಮೂರು ಕಚ್ಚಾ ಕಲ್ಲುಗಳು ಹೊರ ಚಾಚಿವೆ. ಒಂದೊಮ್ಮೆ ಬಾಲ್ಕನಿಯನ್ನು ಇಟ್ಟಿಗಿ ಮತ್ತು ಪ್ಲಾಸ್ಟರ್‌ನಿಂದ ಮುಚ್ಚಲಾಗಿತ್ತು. ಪಶ್ಚಿಮದ ಬಾಲ್ಕನಿಯ ಕೆಳಗೆ ಹೊರ ಚಾಚಿಕೊಂಡಿರುವ ಕಲ್ಲುಗಳು ವಿವಿಧ ರೀತಿಯಲ್ಲಿದೆ. ಇಲ್ಲಿಯೂ ಆಸರೆ ಗೋಡೆಗಳಿವೆ. ಅವುಗಳ ಕೆಳಗೆ ಅನೇಕ ಅಲಂಕಾರಗಳನ್ನು ಮಾಡಲಾಗಿದೆ. ಈಶಾನ್ಯದ ಕೋಣೆಯ ಮೂರು ಕಮಾನಿನ ಕಿಟಕಿಗಳನ್ನು ಹೊಂದಿದೆ. ಮಧ್ಯದ ಕಿಟಕಿಯು ದೊಡ್ಡದಿದೆ. ಪಶ್ಚಿಮದ ಸಣ್ಣ ಕಿಟಕಿಗಳಲ್ಲಿ ಇಟ್ಟಿಗೆಯ ರಚನೆಗಳನ್ನು ಕಾಣಬಹುದು ಉತ್ತರದ ಕಿಟಕಿಯನ್ನು ಮುಚ್ಚಲಾಗಿದೆ. ಒಳಭಾಗದ ಕೋಣೆಗಳಲ್ಲಿ(ಮೇಲಂತಸ್ತಿನ ಕೋಣೆಗಳಲ್ಲಿ) ಸ್ತಂಭಗಳ ಮೇಲೆ ಅನೇಕ ಮೊನಚಾದ ಕಮಾನುಗಳುಳ್ಳ ದ್ವಾರ(ತೆರವುಗಳಿವೆ) ಪೂರ್ವದ ಮಧ್ಯದ ವಿಭಾಗದ ಮೇಲೆ ಅಷ್ಟಭುಜಾಕೃತಿಯ ಗುಮ್ಮಟವಿದೆ. ಅದು ಸ್ವಲ್ಪ ಶಿಥಿಲಗೊಂಡಿದೆ. ಈ ಗುಮ್ಮಟದ ಕೆಳಗೆ ಅನೇಕ ಕೋನಾಕೃತಿಯ ರಚನೆಗಳನ್ನು ಮಾಡಲಾಗಿದೆ. ಪಶ್ಚಿಮದ ಕೇಂದ್ರದ ಗುಮ್ಮಟವು ವೃತ್ತಾಕಾರದಲ್ಲಿದೆ. ಅದರ ತಳದಲ್ಲಿ ಉಂಗುರದಾಕಾರದ ರಚನೆಯನ್ನು ಸಣ್ಣ ತೆರವುಗಳೊಂದಿಗೆ ಮಾಡಲಾಗಿದೆ. ನೈರುತ್ಯ ಮತ್ತು ವಾಯವ್ಯದ ಕೋಣೆಯ ಮೇಲಿನ ಗುಮ್ಮಟಗಳು ಅಷ್ಟಭುಜಾಕೃತಿಯಾಗಿದೆ. ಪೂರ್ವದ ಗೋಡೆಯಲ್ಲಿ ಸಣ್ಣ ತೆರವುಗಳಿದ್ದು, ಅವುಗಳನ್ನು ರಕ್ಷಣಾ ಉದ್ದೇಶದಿಂದ ಬಳಸುತ್ತಿದ್ದರು. ಮೆಟ್ಟಿಲುಗಳ ಮೇಲೆ ಕಮಾನುಗಳುಳ್ಳ ಗೂಡುಗಳನ್ನು ಮಾಡಲಾಗಿದೆ.[೨೫]

೧೫. ಶಿಥಿಲಗೊಂಡ ರಚನೆ (ಕಟ್ಟಡ)

ಈ ಸ್ಮಾರಕವು ಅರಮನೆ ಮೈದಾನದ ಮಧ್ಯದಲ್ಲಿ ಕಂಡುಬರುತ್ತದೆ. ಈ ಸ್ಮಾರಕದಲ್ಲಿ ಕೇವಲ ಒಂದೇ ಒಂದು ಚೌಕಾಕಾರದ ಕೋಣೆಯಿದೆ. ಅದು ಬಹಳಷ್ಟು ಶಿಥಿಲಗೊಂಡಿದೆ. ನಾಲ್ಕು ದಿಕ್ಕಿನಲ್ಲಿ ಗೋಡೆಗಳಿದ್ದರೂ ಅವೆಲ್ಲ ಕುಸಿದು ಹೋಗಿವೆ. ನೆಲಹಾಸಾಗಲಿ ಅಥವಾ ಛತ್ತಾಗಲಿ ಉಳಿದಿಲ್ಲ ಅಥವಾ ಸರಿಯಾದ ತೆರವುಗಳಲ್ಲಿ ಅನೇಕ ಕಟ್ಟಡ ರಚನಾ ತಂತ್ರಗಳನ್ನು ಬಳಸಿ ಈ ಸ್ಮಾರಕವನ್ನು ನಿರ್ಮಿಸಿರುವ ಸಾಧ್ಯತೆಗಳಿವೆ. ಕೆಳಭಾಗದಲ್ಲಿ ತುಂಬಾ ಗಟ್ಟಿಯಾದ ಮತ್ತು ಕಚ್ಚಾ ಕಲ್ಲುಗಳನ್ನು ಬಳಸಲಾಗಿದೆ. ಅಲ್ಲಲ್ಲಿ ಬಿರುಕುಗಳಲ್ಲಿ ಸಣ್ಣ ಸಣ್ಣ ಕಲ್ಲು ಚೂರುಗಳನ್ನು ಬಳಸಲಾಗಿದೆ.

ನಂತರದ ಹಂತದಲ್ಲಿ ಚೆನ್ನಾಗಿ ಕೆತ್ತಲಾದ ಕಲ್ಲುಗಳನ್ನು ಕುಸುರಿಯಿಂದ ಜೋಡಿಸಿ ನಿರ್ಮಿಸಲಾಗಿದೆ. ಇದೇ ಲಕ್ಷಣವನ್ನು ಈ ಸ್ಮಾರಕದ ಸುತ್ತಲೂ ಕಾಣಬಹುದಾಗಿದೆ. ಮೂಲೆಗಳಲ್ಲಿ ಮೂರು ಭಾಗದ ವೃತ್ತಾಕಾರದಲ್ಲಿ ಅಡಿಪಾಯದ ಗೋಡೆಯನ್ನು ನಿರ್ಮಿಸಲಾಗಿದೆ. ಅದರ ಮೇಲೆ ವೃತ್ತಾಕಾರದಲ್ಲಿ ಗೋಡೆಯೊಳಗಿನ ಮೂಲೆಗಳ ಕಂಬಗಳನ್ನು ಕೂಡಿಸಲಾಗಿದೆ. ಒಂದೆರಡು ಹಂತಗಳವರೆಗೆ ಮಾತ್ರ ಸ್ತಂಭಗಳಿವೆ. ಅಲ್ಲಿಂದ ಮುಂದೆ ಪ್ರತ್ಯೇಕವಾದ ಕಲ್ಲುಗಳನ್ನು ಉಪಯೋಗಿಸಲಾಗಿದೆ. ಇವುಗಳ ಶಿಥಿಲಗೊಂಡ ಭಾಗಗಳು ಹತ್ತಿರದಲ್ಲಿ ಬಿದ್ದಿವೆ. ಅದರ ಈ ಸ್ತಂಭಗಳ ರಚನೆ ಆಗ್ನೇಯದ ಮೂಲೆಯಲ್ಲಿ ಕಂಡುಬರುವುದಿಲ್ಲ. ಮೇಲ್ಭಾಗದ ಗೋಡೆಯನ್ನು ಗಟ್ಟಿಯಾದ ಆದರೆ ನಯವಾಗಿ ಮಾಡಿದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಅದನ್ನು ಬಹುಶಃ ಪುನರ್ ನಿರ್ಮಿಸಿರಬಹುದು. ಪಶ್ಚಿಮ ದಿಕ್ಕಿನ ಮಧ್ಯದ ಅಡಿಪಾಯದ ತೆರವುಗಳು ಎರಡೂ ಕಡೆ ತೆರೆದುಕೊಳ್ಳಲು ಅನುಕೂಲವಾಗುವಂತೆ ನಿರ್ಮಿತಗೊಂಡಿವೆ. ಇನ್ನು ಅನೇಕ ಕಲ್ಲುಬಂಡೆಗಳು ಕಂಡುಬಂದರೂ ಅವು ಬಿದ್ದು ಹೋಗಿವೆ ಅಥವಾ ಒಡೆದು ಹೋಗಿವೆ. ಕೋಣೆಯ ಒಳಗೆ ಒಂದು ಕುಸಿತ(ತಗ್ಗು) ಇದೆ. ಆದರೆ ಅದನ್ನು ಮುಚ್ಚಿಲ್ಲ. ತಳಹಾಸು ಇಲ್ಲ. ಅಲ್ಲಲ್ಲಿ ಬಿದ್ದು ಹೋಗಿರುವ ಗೂಡುಗಳಲ್ಲಿ ನೋಡಬಹುದು.

ಈ ಸ್ಮಾರಕದ ದಕ್ಷಿಣದಲ್ಲಿ ಒಂದು ಕಲ್ಲಿನ ಗೋಡೆಯಿದ್ದು ಅದು ಸಣ್ಣ ಕಾಲುದಾರಿಯನ್ನು ಉಂಟು ಮಾಡಿದೆ. ಇದರ ಉತ್ತರದಲ್ಲಿ ಒಂದು ಮಣ್ಣು ಮತ್ತು ಕಚ್ಚಾ ಕಲ್ಲುಗಳಿಂದ ನಿರ್ಮಿಸಿದ ಗೋಡೆಯಿದೆ. ಈ ಸ್ಮಾರಕದ ಸುತ್ತಲೂ ಬಹಳಷ್ಟು ಕಲ್ಲು ಬಂಡೆಗಳು ಹಾಗೂ ಗುಂಡುಗಳು ಕಚ್ಚಾ ಕಲ್ಲುಗಳು ಬಿದ್ದಿವೆ.

೧೬. ದ್ವಾರದ ಮನೆ

ಅದೇ ಆವರಣದ ದಕ್ಷಿಣಕ್ಕೆ ಈ ಮಹಾದ್ವಾರದ ಮನೆಯು ಇದೆ. ಇದು ಸಣ್ಣ ಮತ್ತು ಚೌಕಕಾರದಲ್ಲಿದೆ. ಇದು ಬೇರೆ ಯಾವುದೇ ಕಟ್ಟಡಗಳೊಂದಿಗೆ ಜೋಡಣೆಗೊಂಡಿಲ್ಲ. ಪೂರ್ವ ಮತ್ತು ಪಶ್ಚಿಮದ ದ್ವಾರಗಳು ಕಮಾನಿನ ಆಕಾರದಲ್ಲಿವೆ. ಅವುಗಳ ಮೇಲೆ ಇಟ್ಟಿಗೆಯ ಗೂಡು ಇದೆ. ಈ ಗೂಡಿನ ಮೇಲ್ಭಾಗವು ಪಿರಾಮಿಡ್‌ನ ಆಕಾರದಲ್ಲಿದೆ. ಈ ಕಟ್ಟಡದ ಒಳಗೆ ಉತ್ತರ ಮತ್ತು ದಕ್ಷಿಣದಲ್ಲಿ ಪ್ರಾರ್ಥನಾ ಗೂಡುಗಳಿವೆ. ಈ ಸ್ಮಾರಕದ ಮೇಲ್ಭಾಗದ ಪ್ಲಾಸ್ಟರ್ ಉಳಿದಿಲ್ಲ.

೧೭. ಶಿಥಿಲಗೊಂಡ ಸ್ಮಾರಕ

ಅದೇ ಆವರಣದ ಈಶಾನ್ಯಕ್ಕೆ ಈ ಕಟ್ಟಡವನ್ನು ನಿರ್ಮಿಸಲಾಗಿದೆ. ಎತ್ತರದ ಮೇಲ್ಪಾವಣಿಯ ಮೇಲೆ ದಕ್ಷಿಣ ಮತ್ತು ಪೂರ್ವದ ಮಧ್ಯದಲ್ಲಿ ಆಯತಾಕಾರದ ಬಾಲ್ಕನಿಗಳಿವೆ. ಕಟ್ಟಡಗಳ ಮೂಲೆಯಲ್ಲಿ ಕಲ್ಲುಗಳಿಂದ ನಿರ್ಮಿಸಿದ ಗೋಡೆಯಲ್ಲಿರುವ ಕಂಬಗಳಿವೆ. ಆಗ್ನೇಯದಲ್ಲಿ ನಿರ್ಮಿಸಿದ ಮೆಟ್ಟಿಲುಗಳ ಸಹಾಯದಿಂದ ಮೇಲೆ ಹೋಗಲು ದಾರಿಯಿದೆ. ಅಡಿಪಾಯದ ಗೋಡೆಗಳು ಸಾದಾ ಇವೆ. ಅಲ್ಲಿ ಅಡ್ಡಲಾಗಿರುವ ಪ್ರಕ್ಷೇಪಗಳಿವೆ. ದಕ್ಷಿಣ ಮತ್ತು ಪಶ್ಚಿಮದಲ್ಲಿ ನಾಲ್ಕು ಆಸರೆಯ ಗೂಡುಗಳನ್ನು ಮಾಡಲಾಗಿದ್ದು, ಅವು ಬಾಲ್ಕನಿಗೆ ಆಸರೆಯನ್ನು ನೀಡುತ್ತವೆ. ಈ ಆಸರೆಯ ಕಲ್ಲುಗಳು ದಪ್ಪವಾಗಿದ್ದು ಎಲೆಯಂತೆ ಬಾಗಿಕೊಂಡಿವೆ.

೧೮. ಚೌಕಾಕಾರದ ಕಾವಲು ಗೋಪುರ

ಅದೇ ಸ್ಥಳದಲ್ಲಿ ಕಂಡುಬರುವ ೧೪ರ ಆವರಣ ಗೋಡೆಯ ಎತ್ತರದ ಮೂಲೆಯಲ್ಲಿ ಈ ಗೋಪುರವನ್ನು ನಿರ್ಮಿಸಲಾಗಿದೆ. ಉತ್ತರ ಮತ್ತು ಪಶ್ಚಿಮದ ನೋಟ ಇದರಿಂದ ಸಾಧ್ಯವಾಗುತ್ತದೆ. ಈ ಗೋಪುರದ ರಚನೆಯಲ್ಲಿ ಚೌಕಾಕಾರದ ನಿರ್ಮಾಣವಿದ್ದು, ಅದು ಮೆಟ್ಟಿಲುಗಳನ್ನು ಹೊಂದಿದೆ. ಕೆಳಭಾಗದಲ್ಲಿ ದೊಡ್ಡ ಕಿಟಕಿಗಳು ಮತ್ತು ಸಣ್ಣ ತೆರವುಗಳಿವೆ. ಮೇಲಿನ ಭಾಗದಲ್ಲಿ ಚೌಕಾಕಾರದ ಕೋಣೆಯು ಕಮಾನುಗಳನ್ನು ಹೊಂದಿದೆ. ಪ್ರತಿ ಕಮಾನು ಹೊರ ದಿಕ್ಕಿಗೆ (ಹೊರಗಡೆ) ಚಾಚಿಕೊಂಡಿದೆ. ಪ್ರತಿ ಕಮಾನಿನ ಬಾಲ್ಕನಿಗೆ ಎದುರಿನಲ್ಲಿ ಮೂರು ಮತ್ತು ಆಚೆ-ಈಚೆ ಎರಡು ಕಮಾನುಗಳ ತೆರವುಗಳಿವೆ. ಈ ಮಧ್ಯದ ಕೋಣೆಯ ನಾಲ್ಕು ಮೂಲೆಗಳಲ್ಲಿ ಸಣ್ಣ ಕಿಂಡಿಗಳನ್ನು ಬಿಡಲಾಗಿದೆ. ಕಮಾನುಗಳುಳ್ಳ ಕಿಟಕಿಗಳನ್ನು ಹೊರತುಪಡಿಸಿ ಉಳಿದಂತೆ ಚೌಕಕಾರದ ಈ ಗೋಪುರ ಮಾರ್ಗವು ಸಾದಾ ಇದೆ. ಕೆಳಭಾಗದಲ್ಲಿ ಸಣ್ಣ ಪಿರಾಮಿಡ್ ಆಕೃತಿಯ ಗೂಡುಗಳಿವೆ. ಮೇಲಿನ ಕೋಣೆಯಲ್ಲಿರಬಹುದಾದ ಅಷ್ಟಭುಜಾಕೃತಿಯ ಗೂಡು ಸಹ ಕಾಣೆಯಾಗಿದೆ. ಅಂಚಿನಲ್ಲಿ ಇದೆ ತೆರನಾದ ಆದರೆ ವಿಭಿನ್ನ ಗಾತ್ರದ ಅಷ್ಟಭುಜಾಕೃತಿಯ ಗೂಡುಗಳಿವೆ.[೬]

೧೯. ಶಿಥಿಲಗೊಂಡ ಕಾವಲು ಗೋಪುರ

ಅದೇ ಆವರಣದ ಪಕ್ಕಕ್ಕೆ ಗೋಡೆ ಗುಂಟ ಸಾಗಿದಂತೆ ಈಶಾನ್ಯದ ಕೊನೆಗೆ ಈ ಗೋಪುರವನ್ನು ನಿರ್ಮಿಸಲಾಗಿದೆ. ಈ ಗೋಪುರದ ಮೇಲ್ಭಾಗವು ಪೂರ್ತಿಯಾಗಿ ಬಿದ್ದು ಹೋಗಿದ್ದು ಕೆಳಗಿನ ಎರಡು ಅಂತಸ್ತು ಮಾತ್ರ ಉಳಿದುಕೊಂಡಿದೆ.

ನೆಲ ಹಂತದಲ್ಲಿ ನಾಲ್ಕು ವಿಭಾಗಗಳಲ್ಲಿ ಮೂರು ತೆರೆದುಕೊಂಡಿದೆ. ಈಶಾನ್ಯದ ವಿಭಾಗವನ್ನು ಮೆಟ್ಟಿಲುಗಳ ನಿರ್ಮಾಣಕ್ಕೆಂದು ಬಿಡಲಾಗಿದೆ. ಎರಡನೆಯ ಅಂತಸ್ತಿನಲ್ಲಿ ಮೆಟ್ಟಿಲುಗಳು ಕಟ್ಟಡದ ದೊಡ್ಡಭಾಗಕ್ಕೆ ಬಂದಿವೆ. ಅಲ್ಲಿ ಒಂದು ಸಣ್ಣ ತೆರವು ಹಾದಿ ಇದ್ದು, ಅದು ಹಿಂಭಾಗದಲ್ಲಿದೆ. ದಕ್ಷಿಣ ಮತ್ತು ಪಶ್ಚಿಮದಲ್ಲಿ ಎರಡು ವಿಭಾಗಗಳಿವೆ. ಅದೇ ರೀತಿ ಮೇಲಿನ ಅಂತಸ್ತಿನಲ್ಲಿಯೂ ಸಹ ಇದೆ.

ಹೊರಭಾಗ: ಕೆಳಭಾಗದಲ್ಲಿ ದಕ್ಷಿಣ ಮತ್ತು ಪಶ್ಚಿಮದಲ್ಲಿ ಎರಡು ಕಮಾನುಗಳ ಬಾಗಿಲುಗಳಿದ್ದು, ಅವುಗಳು ಚೂಪಾದ ತುದಿಯನ್ನು ಹೊಂದಿವೆ. ಈ ಕಮಾನುಗಳ ಅಂಚುಗಳು ನೇರವಾಗಿ ಆವರಣದ ಗೋಡೆಗೆ ಹೊಂದಿಕೊಂಡಿವೆ. ವೃತ್ತಾಕಾರದ ರಚನೆಯ ಆಸರೆಯ ಕಲ್ಲುಗಳಿದ್ದು ಅವು ಆಯತಾಕಾರದ ತೆರವುಗಳಿಗೆ ಆಸರೆ ನೀಡಿವೆ. ಮೊದಲನೆ ಅಂತಸ್ತಿನ ರಚನೆಯೂ ಸಹ ಕೆಳಭಾಗದಂತೆ ಇದ್ದರೂ ಸಹ ಅಲ್ಲಿ ವಿಭಾಗಗಳನ್ನು ಮುಚ್ಚಲಾಗಿದೆ. ಕಮಾನುಗಳ ಮಧ್ಯದ ಕಂಬಗಳು ಪ್ಲಾಸ್ಟರನ್ನು ಕಳೆದುಕೊಂಡಿವೆ. ಆದರೆ ಮೇಲೆ ಇರುವ ಇಳಿಜಾರಿನ ಛತ್ತು ಪೂರ್ತಿಯಾಗಿ ನಾಶಗೊಂಡಿದೆ.

ಒಳಭಾಗ: ಅಷ್ಟಭುಜಾಕೃತಿಯ ಗುಮ್ಮಟವು ಅಲಂಕೃತ ತಳವನ್ನು ಹೊಂದಿದ್ದು ಅದು ಈಶಾನ್ಯದ ನೆಲಭಾಗದಿಂದಲೇ ಎದ್ದಿದೆ. ಅಲ್ಲಲ್ಲಿ ಸರಳ ಗೂಡುಗಳನ್ನು ನಿರ್ಮಿಸಲಾಗಿದೆ. ಮೆಟ್ಟಿಲುಗಳ ಮೇಲೆ ಕಮಾನಿನಾಕೃತಿಯ ಛತ್ತು ಇದೆ.

೨೦. ಚೌಕಕಾರದ ಕಾವಲು ಗೋಪುರ

ಶಿಥಿಲಗೊಂಡ ಕಾವಲು ಗೋಪುರದ ಗೋಡೆಯ ಉತ್ತರದಲ್ಲಿ ಈ ಗೋಪುರವನ್ನು ನಿರ್ಮಿಸಲಾಗಿದೆ. ಇದರ ಮೂಲಕ ಉತ್ತರ ಮತ್ತು ಪೂರ್ವದ ವೀಕ್ಷಣೆ ಸಾಧ್ಯ. ಉತ್ತರ ಮತ್ತು ಪೂರ್ವದ ಗೋಡೆಗಳು ಸೇರಿಕೊಂಡಿರುವ ಈ ಭಾಗವನ್ನು ಗಮನಿಸಿದಾಗ ಅದು ನಂತರದ ಸೇರ್ಪಡೆ ಎಂಬುದು ತಿಳಿಯುತ್ತದೆ.

ಈ ಗೋಪುರದ ಮಧ್ಯದಲ್ಲಿ ಚೌಕಾಕಾರದ ಇದ್ದು ಅದು ಮೇಲಂತಸ್ತಿನ ಮೆಟ್ಟಿಲುಗಳವರೆಗೆ ಇದೆ. ಕೆಳಭಾಗದಲ್ಲಿ ದೊಡ್ಡ ಕಿಟಕಿಗಳನ್ನು ಹಾಗೂ ಮೇಲ್ಭಾಗದಲ್ಲಿ ಸಣ್ಣ ಕಿಟಕಿಗಳನ್ನು ಇಡಲಾಗಿದೆ. ಮೇಲ್ಭಾಗದಲ್ಲಿ ಚೌಕಾಕಾರದ ಕೋಣೆಯು ಪ್ರತಿ ದಿಕ್ಕಿನ ಮಧ್ಯದಲ್ಲಿ ಬಾಲ್ಕನಿಗಳನ್ನು ಹೊಂದಿದೆ. ಪ್ರತಿ ಬಾಲ್ಕನಿಯಲ್ಲಿ ಮೂರು ಕಮಾನುಗಳುಳ್ಳ ತರುವುಗಳಿವೆ. ಆದರೆ ಪಶ್ಚಿಮ ಮತ್ತು ಪೂರ್ವದ ಬಾಲ್ಕನಿಗಳು ಸರಿಯಾದ ಸ್ಥಿತಿಯಲ್ಲಿ ಉಳಿದಿಲ್ಲ. ನಾಲ್ಕು ಮೂಲೆಗಳಲ್ಲಿ ಎರಡು ಕಮಾನುಗಳನ್ನು ಹಾಗೂ ಗೂಡುಗಳನ್ನು ಬಿಡಲಾಗಿದೆ.

ಹೊರಭಾಗ : ಸಾಪಾದ ತೊಲೆ ಭಾಗವು ಬಾಗಿಲು ಬಳಿ ಮಾತ್ರ ಬಿಟ್ಟುಕೊಂಡಿದೆ(ಅದು ಪಶ್ಚಿಮದಲ್ಲಿ ಮುಖ್ಯ ಬಾಗಿಲನ್ನು ಹೊಂದಿದೆ). ಮೇಲೆ ಹೋದಂತೆ ಕಮಾನುಗಳುಳ್ಳ ಕಿಟಕಿಗಳು ಚೌಕಾಕಾರದ ತೆರವುಗಳಿವೆ. ಮೇಲಿನ ಕೋಣೆಯು ಗೋಡೆಯ ಹೊರಕ್ಕೆ ಚಾಚಿಕೊಂಡಿದೆ. ಉತ್ತರ ಮತ್ತು ದಕ್ಷಿಣದ ಬಾಲ್ಕನಿಗಳು ಸುಸ್ಥಿತಿಯಲ್ಲಿವೆ. ಅವುಗಳು ಕೆಳಗೆ ಆಸರೆಯ ಕಲ್ಲುಗಳನ್ನು ಹೊಂದಿವೆ. ಈ ಆಸರೆಯ ಕಲ್ಲುಗಳಿಗೆ ಹಲವಾರು ಚಿತ್ತಾರಗಳನ್ನು ಮಾಡಲಾಗಿದೆ. ಕಮಾನುಗಳ ತೆರವುಗಳ ಕೆಳಗೂ ಸಹ ಕಲ್ಲಿನ ಆಸರೆಯನ್ನು ನೀಡಲಾಗಿದೆ. ಗೋಪುರಕ್ಕೆ ಇಳಿಜಾರಿನ ಛಾವಣಿಯ ಆಸರೆ ಇದೆ. ಆಸರೆಯ ಎಲ್ಲ ಭಾಗವು ಉಳಿದಿಲ್ಲ. ಅದರ ಮೇಲೆ ಇಟ್ಟಿಗೆಯಲ್ಲಿ ನಿರ್ಮಿಸಿದ ರಚನೆ ಇದೆ.[೬೭]

೨೧. ಶಿಥಿಲಗೊಂಡ ಕಾವಲು ಗೋಪುರ

ಆದೇ ಆವರಣಕ್ಕೆ ಹೊಂದಿಕೊಂಡಂತೆ ಈಶಾನ್ಯದ ಮೂಲೆಯಲ್ಲಿ ಈ ಗೋಪುರ ಇದೆ. ಈ ಕಟ್ಟಡದ ಕೆಳಭಾಗದ ಎರಡು ಅಂತಸ್ತುಗಳು ಮಾತ್ರ ಉಳಿದಿವೆ. ಮೇಲ್ಭಾಗ ಕುಸಿದು ಹೋಗಿದೆ.

ಕೆಳ ಅಂತಸ್ತಿನ ನಾಲ್ಕು ಭಾಗಗಳಲ್ಲಿ ಮೂರು ಭಾಗಗಳು ತೆರೆದಿವೆ. ಈಶಾನ್ಯದ ಮೂಲೆಯಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಮೊದಲನೆಯ ಅಂತಸ್ತಿನಲ್ಲಿ ಮೆಟ್ಟಿಲುಗಳು ಗೋಪುರದ ಮಧ್ಯಭಾಗಕ್ಕೆ ಸರಿದಿದೆ. ಅಲ್ಲಿ ಸಣ್ಣ ಸ್ಥಳವನ್ನು ಕಾವಲುದಾರಿ ಬಳಸಲಾಗಿದೆ. ಎರಡನೆಯ ಅಂತಸ್ತಿನಲ್ಲಿಯೂ ಇದೇ. ಮಾದರಿಯನ್ನು ಅನುಸರಿಸಲಾಗಿದೆ. ಆದರೆ ಅದು ಶಿಥಿಲಗೊಂಡಿದೆ.

ಅಷ್ಟಭುಜಾಕೃತಿಯ ಗುಮ್ಮಟವನ್ನು ಅಲಂಕೃತಗೊಳಿಸಿದ ಬುಡದ ಮೇಲೆ ನಿರ್ಮಿಸಲಾಗಿದೆ. ಗುಮ್ಮಟವು ಈಶಾನ್ಯದ ವಿಭಾಗದ ಮೇಲೆ ಇದೆ. ಉಳಿದ ವಿಭಾಗಗಳ ಮೇಲೆ ಸರಳವಾದ

ಗೂಡುಗಳನ್ನು ನಿರ್ಮಿಸಲಾಗಿದೆ. ಮೆಟ್ಟಿಲುಗಳ ಮೇಲೂ ಸಹ ಕೋನಾಕೃತಿಯ ಕಮಾನುಗಳುಳ್ಳ ಛತ್ತನ್ನು ನಿರ್ಮಿಸಿದೆ. ನೆಲ ಅಂತಸ್ತಿನಲ್ಲಿ ಎರಡು ಬಾಗಿಲುಗಳಿದ್ದು ಅವುಗಳು ಚೂಪಾದ ಕಮಾನುಗಳನ್ನು ಹೊಂದಿವೆ. ಅವು ದಕ್ಷಿಣ ಮತ್ತು ಪಶ್ಚಿಮದಲ್ಲಿದೆ. ಮೂಲೆಯಲ್ಲಿ ಕಮಾನುಗಳು ನೇರವಾಗಿ ಗೋಡೆಯಿಂದ ಕೂಡಿಬಂದು ನಿರ್ಮಿಸಲ್ಪಟ್ಟಿದೆ. ಅಲ್ಲಲ್ಲಿ ಆಸರೆಗಾಗಿ ವೃತ್ತಾಕಾರದ ಛತ್ತಿನ ಮಾದರಿಯನ್ನು ನಿರ್ಮಿಸಲಾಗಿದೆ. ಮೊದಲನೆಯ ಅಂತಸ್ತಿನಲ್ಲಿಯೂ ಚೂಪಾದ ಕಮಾನುಗಳ ಬಾಗಿಲು ಇವೆ. ಆದರೆ ವಿಭಾಗಗಳನ್ನು ಮುಚ್ಚಲಾಗಿದೆ. ಅಲ್ಲಲ್ಲಿ ಇಟ್ಟಿಗೆಯಿಂದ ನಿರ್ಮಿಸಲಾದ ಸ್ತಂಭಗಳಿದ್ದು ಅವುಗಳ ಮೇಲಿನ ಇಟ್ಟಿಗೆಯ ಕೆಲಸದ ಕೆಲವು ಭಾಗಗಳು ಮಾತ್ರ ಉಳಿದುಕೊಂಡಿವೆ. ಮೇಲ್ಭಾಗ ಸಂಪೂರ್ಣವಾಗಿ ಮೂಡಿಬಂದಿವೆ. ಅಲ್ಲಲ್ಲಿ ಆಸರೆಗಾಗಿ ವೃತ್ತಾಕಾರದ ಛತ್ತಿನ ಮಾದರಿಯನ್ನು ನಿರ್ಮಿಸಲಾಗಿದೆ. ಮೊದಲನೆಯ ಅಂತಸ್ತಿನಲ್ಲಿಯೂ ಚೂಪಾದ ಕಮಾನುಗಳ ಬಾಗಿಲು ಇವೆ. ಆದರೆ ವಿಭಾಗಗಳನ್ನು ಮುಚ್ಚಲಾಗಿದೆ. ಅಲ್ಲಲ್ಲಿ ಇಟ್ಟಿಗೆಯಿಂದ ನಿರ್ಮಿಸಲಾದ ಸ್ತಂಭಗಳಿದ್ದು, ಅವುಗಳ ಮೇಲಿನ ಇಟ್ಟಿಗೆಯ ಕೆಲಸದ ಕೆಲವು ಭಾಗಗಳು ಮಾತ್ರ ಉಳಿದುಕೊಂಡಿವೆ. ಮೇಲ್ಭಾಗ ಸಂಪೂರ್ಣವಾಗಿ ಮಾಯವಾಗಿದೆ.[೬೮]

೨೨. ಅಷ್ಟಭುಜಾಕೃತಿಯ ಗೋಪುರ

ಆದೇ ಆವರಣದ ಈಶಾನ್ಯದ ಮೂಲೆಯಲ್ಲಿ ಇದನ್ನು ನಿರ್ಮಿಸಲಾಗಿದೆ. ಇದು ಅರಸರ ಕೇಂದ್ರಸ್ಥಾನವನ್ನು ಪೂರ್ವ ಮತ್ತು ದಕ್ಷಿಣದಿಂದ ವೀಕ್ಷಿಸುವುದಕ್ಕೆ ಸಹಕಾರಿಯಾಗಿದೆ. ಈ ಗೋಪುರ ಆವರಣದ ಗೋಡೆಗಿಂತ ಮೊದಲೇ ನಿರ್ಮಿತವಾದದ್ದು ಎಂಬುದು ನಿಸ್ಸಂದೇಹವಾಗಿ ತಿಳಿಯುತ್ತದೆ.

ನೆಲ ಅಂತಸ್ತಿನಲ್ಲಿ ಈಶಾನ್ಯದಲ್ಲಿ ಈ ಗೋಪುರವನ್ನು ಪ್ರವೇಶಿಸಲು ದ್ವಾರವಿದೆ. ಅಲ್ಲಿ ನಿಜವಾದ(ಮೂಲ) ಅಡಿಪಾಯವು ನಂತರದ ದಿನಗಳಲ್ಲಿ ಮುಚ್ಚಿ ಹೋಗಿದೆ. ಮೊದಲನೆಯ ಮತ್ತು ಎರಡನೆಯ ಹಂತದಲ್ಲಿ ವೃತ್ತಾಕಾರದ ಮೆಟ್ಟಿಲುಗಳಿದ್ದು, ಅವುಗಳ ಸುತ್ತಲೂ ಅಷ್ಟಭುಜಾಕೃತಿಯಲ್ಲಿ ಕಾರಿಡಾರನ್ನು ಬಿಡಲಾಗಿದೆ. ಅವುಗಳಲ್ಲಿ ಪರಸ್ಪರ ಛೇದಿಸುವ ಕಮಾನುಗಳು ಒಟ್ಟು ಎಂಟು ವಿಭಾಗದಲ್ಲಿವೆ. ಪ್ರತಿ ವಿಭಾಗದಲ್ಲಿ ಒಂದು ಸಣ್ಣ ಕಿಟಕಿಯನ್ನು ಬಿಡಲಾಗಿದೆ. ದಕ್ಷಿಣ ಮತ್ತು ಪೂರ್ವದಲ್ಲಿ ಆವರಣ ಗೋಡೆಯಿದ್ದು ಅದು ಗೋಪುರವನ್ನು ಮುಚ್ಚಿದೆ. ಮೂರನೆಯ ಮತ್ತು ಕೊನೆಯ ಅಂತಸ್ತಿನಲ್ಲಿ ಮೆಟ್ಟಿಲುಗಳನ್ನು ನಾಲ್ಕು ಕಂಬಗಳ ಮಧ್ಯೆ ನಿರ್ಮಿಸಲಾಗಿದೆ. ಅದರ ಸುತ್ತಲೂ ಹದಿನಾರು ಎತ್ತರದ ಸ್ಥಳ(ಕಟ್ಟೆ)ಗಳನ್ನು ಮಾಡಲಾಗಿದೆ. ಹೊರಭಾಗದಲ್ಲಿ ಎತ್ತರದ ಕಮಾನುಗಳು ಮತ್ತು ಹೊರ ಚಾಚಲ್ಪಟ್ಟ ಕಿಟಕಿಗಳಿವೆ. ಈ ಸ್ಮಾರಕ ಸಂಪೂರ್ಣವಾಗಿ ಅಷ್ಟಭುಜಾಕೃತಿ ಯಲ್ಲಿದ್ದು, ನೆಲ ಅಂತಸ್ತು ಕಮಾನುವುಳ್ಳ ದ್ವಾರವನ್ನು ಹೊರತುಪಡಿಸಿ ಯಾವುದೇ ಅಲಂಕಾರ ವಿಶೇಷತೆಯನ್ನು ಹೊಂದಿಲ್ಲ. ೫ ಸಾದಾ ಪ್ರಕ್ಷೇಪಗಳು ಮೊದಲನೆಯ ಅಂತಸ್ತಿಗೆ ಪ್ರವೇಶ ನೀಡುತ್ತವೆ. ಮೊದಲನೆಯ ಅಂತಸ್ತಿನ ಗೋಡೆಗಳು ಚೂಪಾಕಾರವಾಗುತ್ತ ಅಲ್ಲಲ್ಲಿ ಸಣ್ಣ ಚೌಕಾಕಾರದ ತೆರವುಗಳನ್ನು ಹೊಂದಿವೆ. ಎರಡನೆಯ ಅಂತಸ್ತಿನಲ್ಲಿ ಕೋನಾಕಾರದ ಕಮಾನುಗಳಿವೆ. ಗೋಡೆಯ

ಮಧ್ಯದಲ್ಲಿಯೂ ಸಹ ಎರಡು ಸಮತಲದಲ್ಲಿರುವ ಕಿಟಕಿಗಳು ಮತ್ತು ಸಣ್ಣ ಬಾಲ್ಕನಿಗಳನ್ನು ನಿರ್ಮಿಸಲಾಗಿದೆ. ಅವುಗಳ ಕೆಳಗೆ ಆಸರೆಗಾಗಿ ಹೊರ ಚಾಚಲ್ಪಟ್ಟ ಗೋಡೆಯನ್ನು ನಿರ್ಮಿಸಲಾಗಿದೆ. ಮೇಲ್ಭಾಗದಲ್ಲಿ ಎಂಟು ಪ್ರತ್ಯೇಕ ಎತ್ತರದ ಗೋಡೆಗಳನ್ನು ನಿರ್ಮಿಸಲಾಗಿದೆ. ಈ ಗೋಪುರದ ಛಾವಣಿಯೂ ಸಹ ಅಷ್ಟಭುಜಾಕೃತಿಯಲ್ಲಿದೆ ಮತ್ತು ಮೂರು ಇಳಿಮುಖದ ಮತ್ತು ಆರೋಹಣ ಹಂತಗಳ ಇಳಿಜಾರಿನ ಛಾವಣಿಯನ್ನು ಹೊಂದಿದೆ. ಗೋಪುರದ ಮೇಲ್ಭಾಗದಲ್ಲಿ ಗೋಲಾಕಾರದ ಆಕೃತಿ ಇದೆ. ಕೋನಾಕಾರದ ಕಮಾನುಗಳುಳ್ಳ ಒಳಭಾಗದಲ್ಲಿ ಕಾಣಬಹುದಾದ ಮೆಟ್ಟಿಲು ಮಾರ್ಗದಲ್ಲಿ ಚೂಪಾದ ಮೇಲ್ಭಾಗದ ಗೂಡುಗಳನ್ನು ಕಾಣಬಹುದು. ಮೆಟ್ಟಿಲು ಮಾರ್ಗದ ಮೇಲಿನ ಗುಮ್ಮಟವು ಯಾವುದೇ ಅಲಂಕಾರವನ್ನು ಹೊಂದಿಲ್ಲ. ಅದರ ಹಿಂದೆ ಮತ್ತೊಂದು ವೃತ್ತಾಕಾರದ ಗುಮ್ಮಟದ ಬುಡ ಇದೆ. ಮೂಲ ಸ್ವರೂಪದ ಪ್ಲಾಸ್ಟರನ್ನು ಕಾಣಬಹುದು.[೬೯]

೨೩. ಚೌಕಾಕಾರದ ಜಲಮಂಟಪ(ಪುಷ್ಕರಣಿ ಅಥವಾ ಕಲ್ಯಾಣಿ)

ಆದೇ ಆವರಣದ ಈಶಾನ್ಯದ ಮೂಲೆಯಲ್ಲಿ ಈ ಮಂಟಪವನ್ನು ನಿರ್ಮಿಸಲಾಗಿದೆ. ಈ ಸ್ಮಾರಕವು ನಾಲ್ಕು ಕಡೆ ನೀರಿನ ಕಾಲುವೆಗಳಿಂದ ಸುತ್ತುವರಿಯಲ್ಪಟ್ಟಿದೆ. ಈಗ ಈಶಾನ್ಯ ಮತ್ತು ದಕ್ಷಿಣದ ದ್ವಾರಗಳಲ್ಲಿ ಈ ಕಾಲುವೆಯನ್ನು ಮುಚ್ಚಲಾಗಿದೆ. ಒಂದು ಕಾಲುವೆಯು ಈ ಜಲ ಮಂಟಪಕ್ಕೆ ನೀರನ್ನು ತಂದು ಕೇಂದ್ರ ಚೌಕಾಕಾರದ ಪ್ರದೇಶದಲ್ಲಿ ತುಂಬಿಸುತ್ತಿತ್ತು. ಕೇಂದ್ರದಲ್ಲಿ ೨೪ ಚೌಕಾಕಾರದ ಗೂಡುಗಳ ವಿಭಾಗಗಳಿವೆ. ಪ್ರತಿ ವಿಭಾಗವು ಪ್ರತ್ಯೇಕವಾದ ಕಂಬಗಳಿಂದ ಬೇರ್ಪಟ್ಟಿದೆ. ಈ ವಿಭಾಗದ ಹೊರ ಗೋಡೆಯಲ್ಲಿ ಸಣ್ಣ ಕಿಟಕಿಗಳನ್ನು ನಿರ್ಮಿಸಲಾಗಿದೆ. ಮೆಟ್ಟಿಲು ಮಾರ್ಗಕ್ಕೆ ದಕ್ಷಿಣ ಗೋಡೆಯಲ್ಲಿ ದ್ವಾರವನ್ನು ಬಿಡಲಾಗಿದೆ. ಮೆಟ್ಟಿಲು ಮಾರ್ಗಕ್ಕೆ ದಕ್ಷಿಣ ಗೋಡೆಯಲ್ಲಿ ದ್ವಾರವನ್ನು ಬಿಡಲಾಗಿದೆ. ಇದರ ಎದುರಿನಲ್ಲಿ ಚೌಕಾಕಾರದ ಛಾವಣಿ ಇಲ್ಲದ ಅಂಗಣ ಇದ್ದು ಅದರಲ್ಲಿ ಎತ್ತರ ಆಸನ ಮಾದರಿಯ ವ್ಯವಸ್ಥೆ ಇದೆ. ಕೊನೆಯ ಎರಡು ವಿಭಾಗಗಳಲ್ಲಿ ಕೇವಲ ಬಾಲ್ಕನಿಗಳಿಗೆ ಆಸರೆ ನೀಡುವ ಕಲ್ಲುಗಳು(ಹೊರಚಾಚಿದ) ಮಾತ್ರ ಉಳಿದಿವೆ. ಹೊರಭಾಗವು ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡಿಲ್ಲ. ಎಲ್ಲವನ್ನು ಪುನರ್ ನಿರ್ಮಿಸಲಾಗಿದೆ. ದಕ್ಷಿಣದಲ್ಲಿ ಅಲಂಕೃತ ದ್ವಾರವನ್ನು ಬಿಡಲಾಗಿದೆ. ಅದರ ಜೊತೆಗೆ ಬಾಲ್ಕನಿಯನ್ನು ಸಹ ನಿರ್ಮಿಸ ಲಾಗಿದೆ. ಮಧ್ಯದಲ್ಲಿ ಆಯತಾಕಾರದ ಮೂರು ಸರಳ ಕಮಾನುಗಳು ಮೂರು ದಿಕ್ಕಿನಲ್ಲಿವೆ. ಪಶ್ಚಿಮದಲ್ಲಿರುವ ಕಮಾನುಗಳನ್ನು ಗಮನಿಸಿದಾಗ ಅಲ್ಲಿಯೂ ಸಹ ಒಂದು ಬಾಲ್ಕನಿ ಇರುವ ಸಾಧ್ಯತೆ ಕಂಡುಬರುತ್ತದೆ. ಜೋಡಿ ಕಲ್ಲುಗಳಲ್ಲಿ ನಿರ್ಮಿಸಿದ ಆಸರೆಯನ್ನು ನೋಡಿದಾಗ ಇಳಿಜಾರಿನ ಛಾವಣಿ ಇರುವುದೂ ಸಹ ಕಂಡುಬರುತ್ತದೆ. ಒಳಭಾಗದ ಕಾರಿಡಾರ್‌ನಲ್ಲಿ ಕಮಾನುಗಳು ನಿಯಮಿತವಾಗಿ ಎರಡು ಸಮತಲಗಳಲ್ಲಿ ನಿರ್ಮಿತಗೊಂಡಿವೆ. ೨೪ ವಿಭಾಗಗಳ ಮೇಲೆ ಬಹು ವಿಧ ಅಲಂಕಾರವಿದ್ದರೂ ಸಹ, ಒಟ್ಟಾರೆಯಾಗಿ ಸಮಮಿತಿಯಲ್ಲಿ ನಿರ್ಮಿಸಲ್ಪಟ್ಟ ಗುಮ್ಮಟಗಳನ್ನು ಕಾಣಬಹುದು. ಮುಖ್ಯವಾಗಿ ಮಧ್ಯದ ವಿಭಾಗದ ಮೇಲೆ ವಿಶೇಷವಾದ ವಿಸ್ತಾರವಾದ ಯೋಜನೆಯಲ್ಲಿ ಅಲಂಕಾರ ಮಾಡಲಾಗಿದೆ.

ಅಷ್ಟಭುಜಾಕೃತಿಯ ಅಥವಾ ವೃತ್ತಾಕಾರದ ಗುಮ್ಮಟಗಳು, ಬುಡಗಳು ಅಥವಾ ಗೂಡುಗಳನ್ನು ನಿರ್ಮಿಸಲಾಗಿದೆ. ಮತ್ತೊಂದು ಪ್ರಮುಖ ಲಕ್ಷಣ ಎಂದರೆ ಮೆಟ್ಟಿಲು ಮಾರ್ಗಕ್ಕೆ ನಿರ್ಮಿಸಲಾದ ಕಮಾನಿನ ದ್ವಾರ ಕಿಟಕಿಗಳು. ಅಲ್ಲಲ್ಲಿ ವಿವಿಧ ಹಂತಗಳ ಸರಣಿ ಗೂಡುಗಳನ್ನು ಸಹ ನಿರ್ಮಿಸಲಾಗಿದೆ.

೨೪. ಅಷ್ಟಭುಜಾಕೃತಿಯ ಜಲ ಕಾರಂಜಿ

ಅದೇ ಆವರಣದ ಆಗ್ನೇಯ ಮೂಲೆಯಲ್ಲಿ ಈ ಸಣ್ಣ ಕಾರಂಜಿಯನ್ನು ನಿರ್ಮಿಸಲಾಗಿದೆ. ಇಟ್ಟಿಗೆ ಮತ್ತು ಗಾರೆಯಲ್ಲಿ ನಿರ್ಮಿಸಲಾದ ದಪ್ಪವಾದ ಮಣ್ಣಿನ ಕೊಳವೆಗಳನ್ನು ಕಾಣಬಹುದಾಗಿದೆ. ಕೇಂದ್ರದ ಅನಿಯಮಿತ ಅಷ್ಟಭುಜಾಕೃತಿಯ ಕೋಣೆಯ ಮೂಲೆಗಳಲ್ಲಿ ದ್ವಾರಗಳನ್ನು ಬಿಡಲಾಗಿದೆ. ಈ ಕೋಣೆಯ ಸುತ್ತಲೂ ಕಾಲುದಾರಿಯನ್ನು ನಿರ್ಮಿಸಿದ್ದಾರೆ. ಎಂಟು ಕಂಬಗಳ ಮಧ್ಯದಲ್ಲಿ ಕಮಾನುಗಳ ದ್ವಾರಗಳಿವೆ.

ಹೊರಭಾಗ : ಗೋಡೆಗಳನ್ನು ಬಹಳಷ್ಟು ಪುನರ್ ನಿರ್ಮಿಸಲಾಗಿದೆ. ಎರಡು ಸಮತಲದಲ್ಲಿ ಕಮಾನುಗಳನ್ನು ನಿರ್ಮಿಸಲಾಗಿದೆ. ಸಣ್ಣ ಕೋನಾಕಾರದ ಇಳಿಜಾರಿನ ಛತ್ತಿಗೆ ಆಸರೆಯಾಗಿ ಅಲ್ಲಲ್ಲಿ ಆಸರೆ ಗೋಡೆಗಳನ್ನು ನಿರ್ಮಿಸಲಾಗಿ, ಅಲ್ಲಿ ಒಂದು ಸಣ್ಣ ಗೋಡೆಯನ್ನು ಸಹ ನಿರ್ಮಿಸಲಾಗಿದೆ. ಗುಮ್ಮಟದ ಮೇಲಿನ ಅಲಂಕಾರದ ಕಿರುಪಟ್ಟಿ ಉಳಿದಿಲ್ಲ.

ಒಳಭಾಗ : ಚೂಪಾದ ಕಮಾನುಗಳ ತೆರವುಗಳನ್ನು ಎರಡು ಸಮತಲದಲ್ಲಿ ನಿರ್ಮಿಸಲಾಗಿದೆ. ಇದು ಸಹ ಕೇಂದ್ರದ ಕೋಣೆಯ ನಾಲ್ಕು ದಿಕ್ಕಿನಲ್ಲಿ ಕಂಡುಬರುತ್ತದೆ. ಮಧ್ಯದ ಸಣ್ಣ ಗೋಡೆಗಳಲ್ಲಿಯೂ ಸಹ ಅದೇ ರೀತಿಯ ಕಮಾನಿನ ಗೂಡುಗಳನ್ನು ನಿರ್ಮಿಸಲಾಗಿದೆ. ಸರಳವಾದ ಚಪ್ಪಟೆಯಾಕಾರದ ಗುಮ್ಮಟಗಳನ್ನು ಅಷ್ಟಭುಜಾಕೃತಿಯ ಗುಮ್ಮಟದ ಬುಡದ ಮೇಲೆ ನಿರ್ಮಿಸಲಾಗಿದೆ. ದಕ್ಷಿಣ ವಿಭಾಗದ ಮೇಲಿನ ಗುಮ್ಮಟದಲ್ಲಿ ಹದಿನಾರು ತ್ರಿವಿಧ ಪಟ್ಟಿಯ ಅಲಂಕಾರ ಉಳಿದುಕೊಂಡಿದೆ.[೭೦]

ಆನೆಗೊಂದಿಯಲ್ಲಿನ ಸ್ಮಾರಕಗಳು

ಆನೆಗೊಂದಿಯಲ್ಲಿ ಇಂಡೋ-ಇಸ್ಲಾಮಿಕ್ ಶೈಲಿಗೆ ಸಂಬಂಧಿಸಿದ ಸ್ಮಾರಕಗಳಿವೆ. ಅವುಗಳೆಂದರೆ ಗಗನಮಹಲ್ ಮತ್ತು ಲಕ್ಷ್ಮಿಮಹಲ್

೧. ಗಗನ ಮಹಲ್

ಇದು ಆಯತಾಕಾರದಲ್ಲಿದೆ. ಮೂರು ಹಂತಗಳನ್ನು ಹೊಂದಿದೆ. ಕೆಳ ಅಂತಸ್ತು ಹೆಚ್ಚು ಕಡಿಮೆ ಪ್ರವೇಶಿಸಲು ಸಾಧ್ಯವಿಲ್ಲ. ಪಶ್ಚಿಮದಲ್ಲಿ ಒಂದು ಕೋಣೆ ಮಾತ್ರ ಇದೆ. ಮುಖ್ಯ ಅಂತಸ್ತು ಪ್ರವೇಶಿಸಲು ಅಷ್ಟಭುಜಾಕೃತಿ ಮೆಟ್ಟಿಲುಗಳ ಮೂಲಕ ಎರಡನೆಯ ಅಂತಸ್ತನ್ನು ಪ್ರವೇಶಿಸಬಹುದು. ಅಲ್ಲಿಂದ ಮುಂದೆ ಪೂರ್ವದಲ್ಲಿ ತೆರೆದ ಅಂಗಳ ಇದೆ. ಅಲ್ಲಿನ ದ್ವಾರವು ಮೂರು ದಕ್ಷಿಣೋತ್ತರ ದಲ್ಲಿರುವ ಕೋಣೆಗಳಿಗೆ ತೆರೆದುಕೊಳ್ಳುತ್ತದೆ. ಮಧ್ಯದ ಕೋಣೆಯು ಆಯತಾಕಾರದಲ್ಲಿದೆ. ಇದು ಅರವೀಡು ವಾಸ್ತುಶೈಲಿಯಾಗಿದೆ.[೭೧]

೨. ಲಕ್ಷ್ಮಿ ಮಹಲ್

ಈ ಮಂಟಪವು ೩-೨ ಭಾಗದಲ್ಲಿದ್ದು ಉತ್ತರ ದಕ್ಷಿಣದಲ್ಲಿದೆ. ಇದು ಕಮಾನುಗಳುಳ್ಳ ಬಾಗಿಲು ಹೊಂದಿದೆ. ಗೋಡೆಗಳಲ್ಲಿ ಸಣ್ಣ ಕಂಬಗಳ ಗುರುತು ಕಂಡುಬರುತ್ತದೆ.

೩. ಕೋಟೆಯ ಮೇಲ್ಭಾಗದ ದ್ವಾರಬಾಗಿಲು

ಕೋಟೆಯ ಎರಡು ಬೃಹತ್ ಗೋಡೆಗಳ ಮಧ್ಯೆ ಈ ದ್ವಾರ ಇದೆ. ಇದರ ಮೂಲಕ ಕೊತ್ತಲದ ಮೇಲ್ಭಾಗಕ್ಕೆ ಹೋಗಬಹುದು. ಮಧ್ಯದಲ್ಲಿ ಗಣೇಶನ ಕೆತ್ತನೆ ಇದೆ. ಗರುಡ ಮತ್ತು ಆದಿಶೇಷನ ಮೀನಿನ ಕೆತ್ತನೆಗಳಿವೆ. ಇಟ್ಟಿಗೆಯಲ್ಲಿ ಅಲಂಕಾರ ಪಟ್ಟಿಯನ್ನು ಪುನರಾವರ್ತನೆ ಗೊಳಿಸಲಾಗಿದೆ. ಕಮಾನಿನಾಕೃತಿಯ ತೆರವುಗಳಿದ್ದು ಅವುಗಳ ಮೇಲೆ ಪಟ್ಟಿಯಲ್ಲಿ ಕಮಲದ ಅಲಂಕಾರ ಮಾಡಲಾಗಿದೆ. ಮೇಲೆ ದೊಡ್ಡ ಅಲಂಕಾರ ಪಟ್ಟಿ ಇದೆ.[೨]

ಕನಕಗಿರಿ ಬಾವಿ

ಕನಕಗಿರಿಯಲ್ಲಿ ಕಂಡುಬರುವ ವೆಂಕಟಪತಿ ಬಾವಿಯು ಆಕರ್ಷವಾದಂತಹ ಶಿಲ್ಪಕಲೆಯ ಸ್ಮಾರಕವಾಗಿದೆ. ಶ್ರೀಕೃಷ್ಣದೇವರಾಯನ ಕಾಲಾವಧಿಯಲ್ಲಿ ಕನಕಗಿರಿಯ ಸ್ಥಳೀಯ ನಾಯಕರು ಇದನ್ನು ನಿರ್ಮಿಸಿದರು. ಇದು ಕನಕಗಿರಿ ನಗರದ ಉತ್ತರಕ್ಕೆ ಎರಡು ಫರ್ಲಾಂಗುಗಳ ದೂರದಲ್ಲಿ ನಿರ್ಮಿತವಾದಂತಹ ಜಲಕ್ರೀಡಾ ಕೇಂದ್ರವಾಗಿದೆ. ಈ ಸ್ನಾನಗೃಹ ನೋಡಿದವರಿಗೆ ಹಂಪಿಯಲ್ಲಿರುವ ಸ್ನಾನಗೃಹ ತೀರ ಸಾಧಾರಣವಾಗಿ ಕಾಣುತ್ತದೆ. ಕೇವಲ ನಯಗೊಳಿಸಿದ ಕಲ್ಲಿನಲ್ಲಿಯೇ ಕಟ್ಟಡ ತಯಾರಾಗಿದೆ. ನಡುವೆ ಇರುವ ಸುಮಾರು ನಲವತ್ತು ಅಡಿ ಚೌಕವಿರುವ ಬಾವಿಯ ಸುತ್ತ ಮಂಟಪಗಳಿವೆ. ಒಂದು ಬದಿಗೆ ಈ ಮಂಟಪ ಎರಡು ಅಂತಸ್ತುಗಳಾಗಿ ಮೇಲಿನ ಅಂತಸ್ತು ಸುಂದರ ಕಮಾನು, ಕಿಟಕಿ, ಬಾಗಿಲು, ಮಾಳಿಗೆಯಲ್ಲಿ ಕಟ್ಟಿದ ಜಟಿಲವಾದಂಥ ರೇಖಾವಿನ್ಯಾಸ ಗಳಿಂದಲೂ, ಗೊಂಬೆಗಳಿಂದಲೂ ಮನೋಹರವಾಗಿದೆ.[೩]

ವಿಜಯನಗರ ಸಾಮ್ರಾಜ್ಯದ ತೆಲುಗು ಪ್ರದೇಶಗಳಲ್ಲಿ ಹಲವು ಮುಸ್ಲಿಂ ಸ್ಮಾರಕಗಳನ್ನು ನಿರ್ಮಿಸಿದರು. ಅವುಗಳಲ್ಲಿ ಪ್ರಮುಖವಾಗಿ ಪೆನುಕೊಂಡ, ವೆಲ್ಲೂರು, ತಿರುಪತಿ, ಕಾಳಹಸ್ತಿ ಪ್ರದೇಶಗಳಲ್ಲಿ ಇಂಡೋ-ಇಸ್ಲಾಮಿಕ್ ಶೈಲಿಗೆ ಸಂಬಂಧಿಸಿದ ಹಲವು ಸ್ಮಾರಕಗಳು ಕಂಡುಬರುತ್ತವೆ. ಕ್ರಿ.ಶ. ೧೫೫೬ರಲ್ಲಿ ಚಿನ್ನಬೊಮ್ಮ ನಾಯಕನು ವೆಲ್ಲೂರಿನಲ್ಲಿ ಕೋಟೆಯನ್ನು ನಿರ್ಮಿಸಿದನು. ವೆಲ್ಲೂರು ಅರವೀಡು ಸಂತತಿಯವರ ಆಳ್ವಿಕೆಯಲ್ಲಿ ವಿಜಯನಗರದ ಎರಡನೆಯ ರಾಜಧಾನಿಯಾಗಿತ್ತು.[೪] ಹಾಗಾಗಿ ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟ ಪ್ರಮುಖ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯ ಸ್ಮಾರಕಗಳ ಮಾಹಿತಿಯನ್ನೂ ಈ ಮುಂದಿನಂತೆ ಚರ್ಚಿಸಲಾಗಿದೆ.

ಪೆನುಕೊಂಡದಲ್ಲಿನ ಸ್ಮಾರಕಗಳು

ದಕ್ಷಿಣ ದಿಕ್ಕಿನ ಕೊನೆಯಲ್ಲಿ ಅರಸರ ಎರಡು ರಚನೆಗಳನ್ನು ಕಾಣಬಹುದು. ಒಂದು ಜೋಡಿ ಮಂದಿರ ರಾಮ ಮತ್ತು ಶಿವನಿಗೆ ಸಂಬಂಧಿಸಿದ್ದಾಗಿದೆ. ಎರಡನೆಯದಾಗಿ ಪಟ್ಟಣದ ವಾಯುವ್ಯಕ್ಕೆ ಕಂಡುಬರುವ ಕಾವಲುಗೋಪುರವಿರುವ ಕೋಟೆಯ ಗೋಡೆಯು ಮುಖ್ಯವಾಗಿ ಕಂಡುಬರುತ್ತದೆ.

೧. ಗಗನ ಮಹಲ್

ಇದೊಂದು ಮುಖ್ಯ ಕಟ್ಟಡಗಳಲ್ಲಿ ಒಂದಾಗಿದೆ. ಇದು ಬಹಳಷ್ಟು ಶಿಥಿಲಗೊಂಡಿದ್ದು ಮೂಲ ಲಕ್ಷಣಕ್ಕೆ ಹೊರತಾಗಿ ಬದಲಾಯಿಸಲಾಗಿದೆ. ಇದು ಒಂದು ಇತ್ತೀಚೆಗೆ ನಿರ್ಮಾಣಗೊಂಡಿದ್ದು ಆವರಣ ಗೋಡೆಯ ಮಧ್ಯ ನಿಂತಿದೆ.

ಈ ಕಟ್ಟಡವು ಎರಡು ಅಂತಸ್ತುಗಳ ಮಂಟಪವನ್ನು ಹೊಂದಿದೆ. ಎರಡೂ ಅಂತಸ್ತುಗಳಲ್ಲಿ ಹಲವಾರು ವಿಭಾಗಗಳಿವೆ. ಈಶಾನ್ಯದ ಮೂಲೆಯಲ್ಲಿ ಮಂಟಪಕ್ಕೆ ಹೊಂದಿಕೊಂಡಂತೆ ಮೆಟ್ಟಿಲುಗಳಿವೆ. ಮತ್ತು ಆಗ್ನೇಯದಲ್ಲಿ ಒಂದೇ ಅಂತಸ್ತಿನ ಸಣ್ಣ ರಚನೆ ಇದೆ. ಕೆಳ ಅಂತಸ್ತಿನ ಮಂಟಪವು ೫-೫ ವಿಭಾಗಗಳನ್ನು ಹೊಂದಿದ್ದು, ಅವು ಬೇರೆ ಬೇರೆ ದಿಕ್ಕಿನಲ್ಲಿವೆ. ದೊಡ್ಡ ವಿಭಾಗಗಳಿಗೆ ಎತ್ತರದ ಗೋಡೆಗಳಿವೆ. ಅವುಗಳು ಪಕ್ಕದ ಗೋಡೆಗೆ ಹೊಂದಿಕೊಂಡಂತೆ ಇವೆ. ಹಿಂಭಾಗದಲ್ಲಿ (ಪಶ್ಚಿಮದ) ಎರಡು ಕಮಾನುಗಳಿದ್ದು ಅವುಗಳನ್ನು ದಪ್ಪನಾದ ಗೋಡೆಗಳಿಂದ ಮುಚ್ಚಲಾಗಿದೆ. ಆದರೆ ಇದು ಪುರಾತನ ಕಾಲದಲ್ಲಿ(ಇತ್ತೀಚೆಗೆ ಅದನ್ನು ಮುಚ್ಚಲಾಗಿದೆ) ಮುಂಭಾಗದಲ್ಲಿ ಮಧ್ಯದ ಮೂರು ಭಾಗಗಳು ತೆರೆದಿದೆ. ಅವುಗಳಿಗೆ ಮತ್ತೆ ಸಣ್ಣ ವಿಭಾಗಗಳಿದ್ದು ಅವು ಬಾಲ್ಕನಿಯನ್ನು ಹೊಂದಿವೆ. ಅದರ ಮೇಲೆ ಬಾಲ್ಕನಿಯಲ್ಲಿ ಕೂಡಲು ವ್ಯವಸ್ಥೆ ಇದೆ. ಮುಂಭಾಗದ ಮೂರು ಮತ್ತು ಪಕ್ಕದ ತೆರವುಗಳನ್ನು ಮುಚ್ಚಲಾಗಿದೆ. ೫-೨ ವಿಭಾಗದ ಕೋಣೆಗೆ ಕೆಳಗಿನಿಂದ ಮೆಟ್ಟಿಲುಗಳಿವೆ. ಈ ಮೇಲಿನ ಬಾಲ್ಕನಿಗಳಲ್ಲಿ ತೆರೆದ ಸ್ಥಳವಿದೆ. ಪಶ್ಚಿಮದ ಭಾಗಗಳಿಂದ ಈ ಮೇಲಿನ ಭಾಗಗಳನ್ನು ಪ್ರತ್ಯೇಕಿಸಲು ಬಾಗಿಲು ಇದೆ. ಹಿಂಭಾಗದ ಮಧ್ಯೆ ಚೌಕಾಕಾರದ ಕೋಣೆಯ ಕಿಟಕಿ ಮತ್ತು ಬಾಗಿಲನ್ನು ಹೊಂದಿದೆ. ಕಿಟಕಿಗಳು ದಕ್ಷಿಣ ಮತ್ತು ಉತ್ತರದಲ್ಲಿವೆ. ಈ ಭಾಗಗಳನ್ನು ಕೇವಲ ಪೂರ್ವದಿಂದ ಮಾತ್ರ ಸೇರಬಹುದು. ಹಿಂಭಾಗದ (ಪಶ್ಚಿಮದ)ಲ್ಲಿಯ ಬಾಗಿಲು ಕೊನೆಯ ವಿಭಾಗದ ತನಕ ಹೋಗುತ್ತದೆ. ಮಧ್ಯದ ವಿಭಾಗದಲ್ಲಿ ಪಶ್ಚಿಮ ಗೋಡೆಗೆ ಹೊಂದಿಕೊಂಡಂತೆ ಅಂತಸ್ತು ಇದೆ. ಆದರೆ ಕೂಡುವ ವ್ಯವಸ್ಥೆ ಇಲ್ಲ. ಇದರ ಉದ್ದ ಹೆಚ್ಚಾಗಿದ್ದು ಅದನ್ನು ಪೂರಕವಾಗಿ ಇನ್ನೊಂದು ವಿಭಾಗವನ್ನು ಮಾಡಲಾಗಿದೆ. ಈ ಮಂಟಪದ ಹೊರಭಾಗದಲ್ಲಿ ಕಂಬಗಳ ಪಾದ ಮತ್ತು ಮೆಟಿಲುಗಳ ಕಲ್ಲುಗಳು ಇವೆ. ಅಲ್ಲೊಂದು ಸ್ಥಳಾಂತರಿಸಿದ ನಂದಿ ಕಿತ್ತು ಹಾಕಲಾದ ಕಂಬ ಇದೆ.

ಎರಡನೆಯ ಅಂತಸ್ತಿನಲ್ಲಿ ೩-೨ ವಿಭಾಗಗಳಿದ್ದು ಅವು ಉತ್ತರ-ದಕ್ಷಿಣದಲ್ಲಿ ಉದ್ದವಾಗಿವೆ .ನಂತರ ಪೂರ್ವದಲ್ಲಿ ಇನ್ನು ಮೂರು ವಿಭಾಗಗಳನ್ನು ಜೋಡಿಸಲಾಗಿದೆ. ಪಶ್ಚಿಮದ ಹಿಂಭಾಗದ ಚೌಕಾಕಾರದ ವಿಭಾಗವು ಸ್ವಲ್ಪ ಎತ್ತರದಲ್ಲಿದೆ. ಉತ್ತರ ಮತ್ತು ದಕ್ಷಿಣದ ಆಯತಾಕಾರದ ವಿಭಾಗಗಳು ದ್ವಾರ ಮತ್ತು ಕಿಟಕಿಗಳನ್ನು ಹೊಂದಿವೆ.

ಎರಡನೆಯ ಅಂತಸ್ತನ್ನು ಸುತ್ತುವರಿದಂತೆ ಸುತ್ತಲಿನ ಒಂದು ಎತ್ತರದ ಗೋಡೆಯನ್ನು ಕಟ್ಟಲಾಗಿದೆ. ಆಗ್ನೇಯದಲ್ಲಿ ಈ ಗೋಡೆಯ ಮೆಟ್ಟಿಲುಗಳನ್ನು ಸಂಧಿಸುತ್ತದೆ. ಅಲ್ಲಿ ಮೆಟ್ಟಿಲುಗಳ

ಗೋಪುರ ಇದೆ. ಇದರ ಕೆಳಗೆ ಒಂದು ಕೋಣೆಯಿದ್ದು ಅದರ ಸುತ್ತಲೂ ಮೆಟ್ಟಿಲು ಮೇಲೆರುತ್ತ ಹೋಗಿವೆ. ದಕ್ಷಿಣದ ದ್ವಾರ ಹೊಂದಿದೆ. ವಿಭಾಗವು ಕಾಲುದಾರಿಯನ್ನು ಹೊಂದಿದ್ದು, ಅದು ಎರಡನೆಯ ಅಂತಸ್ತಿನ ಮಂಟಪವನ್ನು ಸುತ್ತುವರಿದಿದೆ. ಮೆಟ್ಟಿಲು ಗೋಪುರದ ಕೊನೆಗೂ ಒಂದು ಕೋಣೆ ಇದೆ. ಅದು ಗಾತ್ರದಲ್ಲಿ ಸಣ್ಣದಿದೆ. ಈ ಕೋಣೆಗೆ ಗೋಡೆಯಲ್ಲಿ ಕೂಡಿಸಲಾದ ಕಂಬಗಳು ಇದ್ದು ನಾಲ್ಕು ದಿಕ್ಕಿನಲ್ಲಿ ತೆರೆದ ಭಾಗಗಳಿವೆ. ಚೌಕಾಕಾರದ ವಿಭಾಗಕ್ಕೆ ಹೊಂದಿಕೊಂಡಂತೆ ನೈರುತ್ಯದಲ್ಲಿ ಈ ಮಂಟಪಕ್ಕೆ ಒಂಬತ್ತು ವಿಭಾಗಗಳಿವೆ. ಅವುಗಳಲ್ಲಿ ಮಧ್ಯದ್ದು ದೊಡ್ಡದಾಗಿದೆ. ಈ ಕೋಣೆಯ ಕೆಳಗೆ ಹೊಸ (ಈಗಿನ) ಮೆಟ್ಟಿಲುಗಳನ್ನು ಜೋಡಿಸಲಾಗಿದೆ.[೭೫]

ಹೊರಭಾಗ : ಮಂಟಪದ ಮಧ್ಯಭಾಗವು (ಮುಂಭಾಗ) ಪೂರ್ವದಲ್ಲಿ ಮೂರು ಕಮಾನುಗಳುಳ್ಳ ತೆರವುಗಳನ್ನು ಹೊಂದಿದ್ದು, ಅವುಗಳನ್ನು ಆಯತಾಕಾರದ ಸಮತಲಗಳಲ್ಲಿ ಜೋಡಿಸಲಾಗಿದೆ. ಈ ಬಾಲ್ಕನಿಗಳಿಗೆ ಆಸರೆಯನ್ನು ನಾಲ್ಕು ಕಲ್ಲುಗಳಿಂದ ನೀಡಲಾಗಿದೆ. ಈ ತೀರ ಮೇಲ್ಭಾಗದಲ್ಲಿ ಕಮಲದ ದಳಗಳ ಚಿತ್ರಣವಿದೆ. ಕಮಾನಿನ ತೆರವುಗಳು ಸರಳವಾದ ಪಟ್ಟಿಯಿಂದ ಕೂಡಿದ ಚೌಕಟ್ಟನ್ನು ಹೊಂದಿದೆ. ಅದರ ಮೇಲೆ ಕಡಿಮೆ ಎತ್ತರದ ಗೋಡೆಯಿದ್ದು ಅದರ ಮೇಲೆ ಇಳಿಜಾರಿನ ಛತ್ತನ್ನು ಹಾಕಲಾಗಿದ್ದು ಅದಕ್ಕೂ ಪ್ಲಾಸ್ಟರ್ ಮಾಡಲಾಗಿದೆ. ಅದನ್ನು ಒಡೆದು ಅಲ್ಲಿ ಕಮಾನಿನ ಆಕಾರದ ತೆರವನ್ನು ಬಿಡಲಾಗಿದೆ. ಅದರಲ್ಲಿ ಹಿಂದೆ ಇದ್ದ ಅಲಂಕಾರದ ರಚನೆಗಳನ್ನು ಕಾಣಬಹುದು.

ಗೋಡೆಗಳಲ್ಲಿ ಹೊರಚಾಚಿರುವ ಆಸರೆಗಳ ಕಲ್ಲುಗಳನ್ನು ಬಿಡಲಾಗಿದೆ. ಅವುಗಳ ಮೇಲೆ ಕಲ್ಲಿನ ತೊಲೆಯನ್ನು ಹಾಕಲಾಗಿದ್ದು ಅದು ಛತ್ತನ್ನು ಎತ್ತಿಹಿಡಿದಿದೆ. ಈ ಛತ್ತಿನ ಮೇಲೆ ಅಲಂಕಾರ ಪಟ್ಟಿಯನ್ನು ಮಾಡಲಾಗಿದೆ. ಎತ್ತರದ ಗೋಡೆಯಲ್ಲಿ ಕಂಬಗಳ ಮಧ್ಯೆ ಮಂದಿರ ತುದಿಯಂತೆ ಕಮಾನುಗಳ ರಚನೆಯನ್ನು ಮಾಡಲಾಗಿದೆ. ಅದರ ಮೇಲೆ ವೃತ್ತಾಕಾರದ ವಿವಿಧ ಅಲಂಕಾರಗಳನ್ನು ಮಾಡಲಾಗಿದೆ. ಮಧ್ಯಭಾಗದ ಗೋಡೆಯಲ್ಲಿ ಹೊಸದಾಗಿ ಸಿಮೆಂಟ್ ಮಾಡಲಾಗಿದ್ದು, ಅದರಲ್ಲಿ ವ್ಯಕ್ತಿಯೊಬ್ಬನ ಚಿತ್ರವಿದೆ.

ಮೂರು ದಿಕ್ಕಿನಲ್ಲಿರುವ ಹೊರ ಗೋಡೆಗಳು ಸಾದಾ ಇವೆ. ಅದರಲ್ಲಿಯೂ ಕಮಾನಿನ ತೆರವುಗಳನ್ನು ಮಾಡಲಾಗಿದೆ. ಈ ಗೋಡೆಗಳ ಮಧ್ಯೆ ಮೇಲಂತಸ್ತುಗಳನ್ನು ತೆರೆಯಲಾಗಿದ್ದು ಅಲ್ಲಲ್ಲಿ ಅದರ ಕೆಲವು ಲಕ್ಷಣಗಳು ಗೋಚರಿಸುತ್ತವೆ. ಎರಡನೆಯ ಅಂತಸ್ತಿನ ಹೊರಭಾಗವು ಪೂರ್ವದ ಗೋಡೆಯಿಂದ ಸ್ವಲ್ಪಭಾಗ ಮುಚ್ಚಲ್ಪಟ್ಟಿದೆ. ಮೂಲ ಮುಂಭಾಗವು ಮೂರು ವಿಶಾಲ ಕಮಾನು ಹೊಂದಿದೆ. ಅವು ಎರಡು ಸಮತಲದಲ್ಲಿ ನಿರ್ಮಾಣಗೊಂಡಿವೆ. ಕಮಾನುಗಳ ಮಧ್ಯದಲ್ಲಿ ಚೌಕಾಕಾರದ ಕಂಬಗಳು ಕೆಳಗೆ ಅಡಿಗಲ್ಲು ಮತ್ತು ಮೇಲೆ ಆಸರೆ ಕಮಾನುಗಳಿವೆ. ಪಶ್ಚಿಮದ ಹಿಂಭಾಗದಲ್ಲಿ ಒಂದು ಅಷ್ಟಭುಜಾಕೃತಿಯ ಗೋಪುರವನ್ನು ನಿರ್ಮಿಸಲಾಗಿದೆ. ಅದರಲ್ಲಿ ನಾಲ್ಕು ಆರೋಹಣ ಮತ್ತು ಅವರೋಹಣದ ಛತ್ತಿನ(ಭಾವಣಿ) ಕಲ್ಲುಗಳಿವೆ. ಅವುಗಳಲ್ಲಿ ಚಿತ್ರಗಳನ್ನು

ಬಿಡಿಸಲಾಗಿದೆ. ಅದರ ಮೇಲೆ ಬೋರಲು ಹಾಕಿದಂತೆ ಛತ್ತು ಇದೆ. ಅದರ ಆಸರೆ ಕಲ್ಲುಗಳು ಉಳಿದಿಲ್ಲ.

ಮೆಟ್ಟಿಲು ಗೋಪುರದ ಗೋಡೆಯು ಚೂಪಾಗಿರುವಂತೆ ಮತ್ತು ಮೇಲಂತಸ್ತುಗಳನ್ನು ಹೊಂದಿದೆ. ಗೋಡೆಗಳು ನೆಲದಿಂದ ಅಡಿಪಾಯದ ಮೇಲೆ ಕಟ್ಟಲ್ಪಟ್ಟಿವೆ. ಈಗ ಅಡಿಪಾಯದ ಭಾಗಗಳು ಮಣ್ಣಿನಲ್ಲಿ ಹಂಚಿಹೋಗಿವೆ. ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ(ಕೆಳಭಾಗದಲ್ಲಿ) ಆಯತಾಕಾರದ ಚೌಕಟ್ಟಿನಲ್ಲಿ ಕಮಾನಿನ ತೆರವುಗಳಿವೆ. ಮೇಲಿನ ಭಾಗಗಳು ಸಾದಾ ಇವೆ. ಕೆಳಭಾಗ ಮತ್ತು ಮೇಲ್ಭಾಗವನ್ನು ಪ್ರತ್ಯೇಕಿಸುವ ಗೋಡೆ ಇದೆ. ಆದರೆ ಮೇಲಿನ ಭಾಗದ ಕಮಾನುಗಳಲ್ಲಿ ಮತ್ತು ತೆರೆದುಕೊಂಡ ಬಾಲ್ಕನಿಗಳಲ್ಲಿ ಅಲಂಕಾರವಿದೆ. ಈ ಬಾಲ್ಕನಿಗಳ ಕೆಳಗೆ ಆಸರೆ ಕಲ್ಲುಗಳಿವೆ. ಈ ಕಮಾನುಗಳ ಮೇಲೆ ಕೂಡ ಅದೇ ಮಾದರಿಯ ಸಣ್ಣ ತೆರವುಗಳಿವೆ. ಇಟ್ಟಿಗೆ ಮತ್ತು ಪ್ಲಾಸ್ಟರ್ ಪಟ್ಟಿಯಲ್ಲಿ ಗೋಡೆ ಇದೆ. ಆದರೆ ಇದು ಪೂರ್ತಿ ಕಾಣುವುದಿಲ್ಲ. ಅದರಲ್ಲಿ ಎಲೆ ಬಳ್ಳಿಗಳ ಅಲಂಕಾರ ಪಟ್ಟಿಯಿದೆ. ತೀರ ಮೇಲ್ಭಾಗದ ಬಾಲ್ಕನಿಗಳಲ್ಲಿ ಸ್ವಲ್ಪ ಬದಲಾವಣೆ ಮಾಡಲಾಗಿದ್ದು, ಅದರಲ್ಲಿ ಇಟ್ಟಿಗೆಯಲ್ಲಿ ಗೂಡುಗಳನ್ನು ಮಾಡಲಾಗಿದ್ದು ಅವು ಈಗ ಹಾಳಾಗಿವೆ.

ಗೋಡೆಯ ಮೇಲ್ಭಾಗದಲ್ಲಿ ಆಸರೆಗಾಗಿ ಹೊರಚಾಚಿದ ಕಲ್ಲುಗಳಿದ್ದು ಅದರ ಮೇಲೆ ತೊಲೆಯಿದೆ. ಅದಕ್ಕೆ ಅಡ್ಡಲಾಗಿ ಮತ್ತು ಬೋದಿಗೆ ತಂತಿ–ಛಾವಣಿ ಅಡ್ಡ ಜೋಡಿಗಳಿವೆ. ಈ ರಚನೆ ಬಾಲ್ಕನಿಗಿಂತ ಸ್ವಲ್ಪ ಮೇಲೆ ಇದೆ. ನಂತರ ಇಲ್ಲಿ ಗೋಡೆ ಕಟ್ಟಲಾಗಿದೆ. ಅದು ಸಾದಾ ಇದ್ದು ಕೇವಲ ಆಯತಾಕಾರದ ಕಿಂಡಿಗಳನ್ನು ಹೊಂದಿದೆ. ಮೂಲೆಗಳಲ್ಲಿ ವೃತ್ತಾಕಾರದ ಅಲಂಕಾರ ಪಟ್ಟಿಯಿದೆ.

ಅಷ್ಟಭುಜಾಕೃತಿಯ ಗೋಪುರದ ಬಹುತೇಕ ಸುತ್ತಲೂ ಗೋಡೆಯಿಂದ ಮುಚ್ಚಿ ಹೋಗಿದೆ. ಗೋಪುರ ಆರೋಹಣ ರೀತಿಯ ಛತ್ತಿನ ಹಂತಗಳನ್ನು ಹೊಂದಿದೆ. ಅದರ ಮೇಲೆ ಅಲಂಕಾರ ಪಟ್ಟಿಯಲ್ಲಿ ಮಂಟಪದ ಆಗ್ನೇಯದ ಗೋಡೆಗಳ ಕೆಳಭಾಗ ಗೋಚರಿಸುವುದಿಲ್ಲ. ಅಲ್ಲಲ್ಲಿ ಆಸರೆ ಕಲ್ಲುಗಳ ಕುರುಹು ಕಂಡುಬರುತ್ತದೆ. ಮೇಲಿನ ಗೋಡೆಯಲ್ಲಿ ಆಳವಾದ ಪ್ರಾರ್ಥನಾ ಗೂಡುಗಳಿವೆ. ಅವುಗಳ ಮೇಲೆ ಎಲೆ ಬಳ್ಳಿಗಳ ಅಲಂಕಾರದ ಪಟ್ಟಿ ಇದೆ. ದಕ್ಷಿಣದ ಗೋಡೆಯಲ್ಲಿ ಮೂರು ಭಾಗದ ಪ್ರಾರ್ಥನಾ ಗೂಡು ಇದೆ.

೨. ಚೌಕಾಕಾರದ ಮಂಟಪ

ಗಗನ ಮಹಲ್‌ನಿಂದ ಸ್ವಲ್ಪ ದೂರದ ಪೂರ್ವದ ದಿಕ್ಕಿನಲ್ಲಿ ಈ ಮಂಟಪ ಇದೆ. ಗಗನ ಮಹಲನ್ನು ಗಮನಿಸಿದರೆ ಇದು ಉತ್ತಮವಾಗಿ ಸಂರಕ್ಷಿಸಲ್ಪಟ್ಟಿದೆ. ಈ ಚೌಕಾಕಾರದ ಮಂಟಪವು ಒಂದೇ ಗುಮ್ಮಟವನ್ನು ಹೊಂದಿದ ಕೋಣೆಯಿದ್ದು, ಅದು ನಾಲ್ಕು ದಿಕ್ಕಿನಲ್ಲಿ ತೆರೆದುಕೊಂಡಿದೆ. ಪಶ್ಚಿಮದ ತೆರವು ಈಗ ದ್ವಾರ ಬಾಗಿಲಿನಂತೆ ಉಪಯೋಗಿಸಲ್ಪಡುತ್ತಿದೆ. ನಿಜವಾದ ಬಾಗಿಲು ಬಹುಶಃ ದಕ್ಷಿಣಕ್ಕಿರಬಹುದು.

ಮೇಲ್ಮೈ ಲಕ್ಷಣಗಳು : ಹೊರಭಾಗದ ಗೋಡೆಯು ಇನ್ನು ಹಳೆಯ ಗಿಲಾವು ಅಥವಾ ಪ್ಲಾಸ್ಟರನ್ನು ಉಳಿಸಿಕೊಂಡಿದೆ. ಗೋಡೆಗಳು ಯಾವುದೇ ಅಲಂಕಾರವನ್ನು ಹೊಂದಿಲ್ಲ. ಪ್ರತಿ ದಿಕ್ಕಿನ ಗೋಡೆಯ ಮಧ್ಯದಲ್ಲಿ ಆಳವಾಗಿ ಮುಂಚಾಚಿರುವ ಭಾಗಗಳಿವೆ. ಎರಡು ಸಮತಲದಲ್ಲಿರುವ ಕಮಾನಿನ ಬಿಡುವು ಇವೆ. ಈ ಮುಂಚಾಚಿರುವ ಭಾಗಗಳ ಮೇಲೆ ನಾಲ್ಕು ಕಲ್ಲುಗಳ ಆಸರೆ ಇದೆ. ಅವು ಕೆಳಗೆ ಬಾಗಿಕೊಂಡಿವೆ. ಅವುಗಳ ಮೇಲೆ ಸಣ್ಣ ಎತ್ತರದ ಕಲ್ಲುಗಳಿದ್ದು, ಅವುಗಳ ಮೇಲೆ ಆಸರೆ ಕಲ್ಲುಗಳು ಕೆಳಗಿನಂತೆ ಇವೆ. ಮೂಲೆಗಳ ಆಸರೆ ಕಲ್ಲುಗಳ ಜೊತೆಗೆ ಇನ್ನು ಎರಡು ಆಸರೆಗಳು ಇವೆ. ಅವುಗಳ ಮೇಲೆ ಕಲ್ಲಿನ ತೊಲೆಯನ್ನು ಇಡಲಾಗಿದೆ. ಅದು ಅಡ್ಡಲಾಗಿ ಹಾಕಿರುವ ಜಂತಿಗಳನ್ನು ಹಾಕಲಾಗಿದೆ. ಅವುಗಳ ಮೇಲೆ ಇಳಿಜಾರಿನ ಛತ್ತನ್ನು ಹಾಕಲಾಗಿದೆ. ಈ ಛತ್ತನ್ನು ಇದೇ ಕಟ್ಟಡವನ್ನು ಆವರಿಸಿದೆ. ಅದರ ಮೇಲೆ ಉತ್ತರದ ಗೋಡೆ ಇದೆ. ಅದನ್ನು ಇಟ್ಟಿಗೆಯಿಂದ ನಿರ್ಮಾಣ ಮಾಡಲಾಗಿದೆ. ಆದರೆ ಅದು ಪೂರ್ಣ ಉಳಿದಿಲ್ಲ. ಈ ಗೋಡೆಯ ಕೆಳಭಾಗದಲ್ಲಿ ಚೌಕಾಕಾರದ ಮೆಟ್ಟಿಲುಗಳ ರಚನೆ ಇದೆ. ಮೇಲೆ ಸೂಳಿ ಚಿತ್ರಗಳಿವೆ. (ಇವು ಉತ್ತರ ಮತ್ತು ದಕ್ಷಿಣದಲ್ಲಿ ಉತ್ತಮವಾಗಿ ಗೋಚರಿಸುತ್ತವೆ)

ಒಳಭಾಗ : ಒಳಭಾಗದ ಗಿಲಾವ್ (ಪ್ಲಾಸ್ಟರ್) ಗುಮ್ಮಟ ಭಾಗದಲ್ಲಿ ಅಸಾಮಾನ್ಯ ರೀತಿಯಲ್ಲಿ ಉಳಿದುಕೊಂಡಿದೆ. ಎಂಟು ಪರಸ್ಪರ ಛೇದಿಸುವ ಕಮಾನುಗಳಿವೆ. ಕಮಾನುಗಳ ಮಧ್ಯೆ ಕಂಬಗಳಿವೆ. ಮೂಲೆಗಳಲ್ಲಿ ಚಿತ್ರಗಳು, ಎಲೆ, ಬಳ್ಳಿಗಳ ರಚನೆ, ಎತ್ತರದಲ್ಲಿ ಚೌಕಾಕಾರದ ಚಿತ್ರಗಳಿವೆ. ಗುಮ್ಮಟದ ಬುಡಭಾಗದಲ್ಲಿಯೇ ಅನೇಕ ಚಿತ್ರಗಳಿವೆ. ಆಸರೆಗಾಗಿ ಹೊರಚಾಚಿದ ಕಲ್ಲುಗಳ ತುದಿಯಲ್ಲಿ ಸಿಂಹದ ಮುಖದ ಚಿತ್ರ (ಕೆತ್ತನೆ) ಇದೆ.

೩. ಆಯಾತಕಾರದ ಕಾವಲು ಗೋಪುರ

ಇದು ಎತ್ತರದ ಹೆಬ್ಬಂಡೆಯ ಮೇಲೆ ಕೋಟೆಯ ಆವರಣದ ವಾಯುವ್ಯ ದಿಕ್ಕಿನಲ್ಲಿದೆ. ಈ ಕಾವಲು ಗೋಪುರವನ್ನು ಸಮರ್ಪಕವಾಗಿ ಸಂರಕ್ಷಿಸಿಲ್ಲ. ದಕ್ಷಿಣದಲ್ಲಿ ಅದು ಕುಸಿದಿದೆ. ಅದರ ಹೊರಭಾಗದ ಗಿಲಾವನ್ನು (ಪ್ಲಾಸ್ಟರನ್ನು) ಪುನರ್ ಮಾಡಲಾಗಿದೆ.

ಈ ಕಾವಲು ಗೋಪುರದ ಕೇಂದ್ರದಲ್ಲಿ ಸುರಳಿಯಾಕಾರದ ಮೆಟ್ಟಿಲುಗಳು ಮೇಲಿನ ಅಂತಸ್ತಿಗೆ ಕೊಂಡೊಯ್ಯುತ್ತವೆ. ಈ ಗೋಪುರದ ಬಾಗಿಲು ದಕ್ಷಿಣದಲ್ಲಿದೆ. ಈ ಕಾವಲು ಗೋಪುರದ ಸುತ್ತಲೂ ಕಾಲುದಾರಿ ಇದೆ. ಈ ಆವರಣದ ಒಳಗೋಡೆಗಳು ಅರ್ಧ ವೃತ್ತಾಕಾರದ ತೆರವು ಹೊಂದಿವೆ. ಆಯತಾಕಾರದ ಬಾಲ್ಕನಿಗಳು ಮೂರು ಕಮಾನಿನ ತೆರವುಗಳನ್ನು ಹೊಂದಿದೆ. ಎರಡನೆಯ ಅಂತಸ್ತು ಅಷ್ಟಭುಜಾಕೃತಿಯಲ್ಲಿದ್ದು ನಾಲ್ಕು ತೆರವುಗಳನ್ನು ಹೊಂದಿದೆ. ಹೊಸದಾಗಿ ನಿರ್ಮಿಸಿದ ಮೆಟ್ಟಿಲುಗಳು ದಕ್ಷಿಣದಲ್ಲಿವೆ.

ಹೊರಭಾಗ : ಕಂಬಗಳನ್ನು ಮತ್ತು ಅಷ್ಟಭುಜಾಕೃತಿ ಇರುವ ಗೋಡೆಗಳನ್ನು ಹೊರತುಪಡಿಸಿ ಸಾದಾ ರಚನೆ ಕಂಡುಬರುತ್ತದೆ. ಈ ಗೊಡೆಯಲ್ಲಿರುವ ಕಂಬಗಳು, ಅಮೆರಿಕಾ ಎಲೆಯ ಚಿತ್ರಗಳನ್ನು

ಮತ್ತು ಆಸರೆಗಾಗಿ ಹೊರಚಾಚಿರುವ ಕಲ್ಲುಗಳನ್ನು ಹೊಂದಿದೆ. ಕೇಂದ್ರದಲ್ಲಿರುವ ವೃತ್ತಾಕಾರದ ಛತ್ತಿನ ಮೇಲೆ ಗೋಪುರ ನಿಂತಿದೆ. ಅಲ್ಲಲ್ಲಿ ಇಳಿಜಾರಿನ ಛಾವಣಿಯ ಮುಂಭಾಗದಲ್ಲಿ ಅಲಂಕಾರ ಗಳನ್ನು ಮಾಡಲಾಗಿದೆ.

ಒಳಭಾಗ : ಆವರಣ ಕಾಲುದಾರಿ ಮೇಲೆ ಇದೆ. ಇದರಲ್ಲಿ ಗಮನ ಸೆಳೆಯುವ ಅಂಶವೆಂದರೆ ಕಮಾನುಗಳುಳ್ಳ ತೆರವುಗಳು ಹೊರಭಾಗದಲ್ಲಿ ಚಾಚಿಕೊಂಡಿರುವುದು ಹಾಗೂ ಅಲ್ಲಲ್ಲಿ ಮಾಡಲಾದ ಚೌಕಾಕಾರದ ಕಿಂಡಿಗಳು ಕಟ್ಟಿಗೆಯ ಅಸರೆಯನ್ನು ಸೂಚಿಸುತ್ತಿರುವುದು. ಆದರೆ ಈಗ ಅವು ಕಾಣೆಯಾಗಿವೆ.[೬]

ಚಂದ್ರಗಿರಿಯಲ್ಲಿನ ಸ್ಮಾರಕಗಳು

ಚಂದ್ರಗಿರಿ ಪಟ್ಟಣವು ತಮಿಳು ಹಾಗೂ ಆಂಧ್ರದ ಗಡಿಭಾಗದಲ್ಲಿದೆ. ಈ ನಗರದಲ್ಲಿ ವಿಜಯನಗರ ಕಾಲಕ್ಕೆ ಸಂಬಂಧಿಸಿದ ಪ್ರಮುಖ ಎರಡು ಸ್ಮಾರಕಗಳು ಕಂಡುಬರುತ್ತವೆ. ಗುಡ್ಡದ ಬದಿಯಲ್ಲಿರುವ ಉತ್ತರಕ್ಕೆ ಮುಖ ಮಾಡಿರುವ ರಾಜಮಹಲ್ ಮತ್ತು ಅದಕ್ಕೆ ಸ್ವಲ್ಪ ದೂರದಲ್ಲಿರುವ ಈಶಾನ್ಯದಲ್ಲಿರುವ ರಾಣಿ ಮಹಲ್. ಅದು ಪೂರ್ವಕ್ಕೆ ಮುಖ ಮಾಡಿದೆ.

೧. ರಾಜಮಹಲ್

ಇದು ಆಯತಾಕಾರವಾಗಿದ್ದು, ೧೩-೩ ಭಾಗದಲ್ಲಿ ಪೂರ್ವ-ಪಶ್ಚಿಮದ ದಿಕ್ಕಿನಲ್ಲಿವೆ. ಕೆಳ ಅಂತಸ್ತಿನಲ್ಲಿ ೧೩ ವಿಭಾಗಗಳು ಉತ್ತರಕ್ಕೆ ಮುಖ ಮಾಡಿವೆ. ಕೊನೆಯ ಎರಡು (ಇಕ್ಕೆಲಗಳಲ್ಲಿ) ಎರಡು ವಿಭಾಗಗಳು ಎತ್ತರಕ್ಕಿದ್ದು ಮೆಟ್ಟಿಲುಗಳಿವೆ.

ದಕ್ಷಿಣದಲ್ಲಿ (ಹಿಂಭಾಗ) ವಿಶಾಲವಾದ ಕೋಣೆಯಿದ್ದು ಅದರ ದ್ವಾರ ಉತ್ತರದಲ್ಲಿದೆ. ಇಲ್ಲಿ ಮೂರು ದಿಕ್ಕಿನಲ್ಲಿ ಎತ್ತರದ ಜಗುಲಿ ಇದೆ. ಅಲ್ಲಿ ಚೌಕಾಕಾರದ ಸ್ತಂಭಗಳು ಈ ಜಗುಲಿಯ ಮೇಲಿದ್ದು ಅವು ವಿಶಾಲ ಹಜಾರವನ್ನು ಅನೇಕ ಸಣ್ಣ ವಿಭಾಗಗಳಾಗಿ ವಿಂಗಡಿಸುತ್ತವೆ. ದಕ್ಷಿಣದಲ್ಲಿ ಕಿಟಕಿಗಳಿದ್ದು ಅವು ಹೊರಭಾಗಕ್ಕೆ ಚಾಚಿಕೊಂಡಿವೆ. ಈ ಮಧ್ಯದ ಕೋಣೆಯ ಪಾರ್ಶ್ವದಲ್ಲಿ (ಪೂರ್ವ ಪಶ್ಚಿಮದಲ್ಲಿ) ಮೂರು ವಿಭಾಗದ ಕೋಣೆಗಳಿದ್ದು ಉತ್ತರಕ್ಕೆ ದ್ವಾರ ಹೊಂದಿವೆ. ಮಧ್ಯಭಾಗದ ಪೂರ್ವ ಮತ್ತು ಪಶ್ಚಿಮದ ಕೊನೆಯ ಭಾಗದಲ್ಲಿ ಮೆಟ್ಟಿಲುಗಳಿದ್ದು ಅವು ಎರಡನೆಯ ಅಂತಸ್ತಿಗೆ ಸಂಪರ್ಕ ಕಲ್ಪಿಸುತ್ತವೆ. ನೈರುತ್ಯ ಮತ್ತು ಆಗ್ನೇಯದ ವಿಭಾಗಗಳು ಸ್ವಲ್ಪ ಹೊರಗಡೆ ಚಾಚಿಕೊಂಡಿವೆ. ಈ ವಿಧಾನಗಳು ಸಣ್ಣ ಸಣ್ಣ ಕೋಣೆಗಳಾಗಿ ವಿಭಾಗಗೊಂಡಿವೆ.

ಎರಡನೆಯ ಅಂತಸ್ತು ಮೊದಲನೆಯ ಅಂತಸ್ತಿನ ಎಲ್ಲಾ ಲಕ್ಷಣಗಳನ್ನು ಪುನರಾವರ್ತಿಸುತ್ತದೆ. ಇಲ್ಲಿಯೂ ಕೊನೆಯ ವಿಭಾಗಗಳಲ್ಲಿ ಬಾಲ್ಕನಿಯನ್ನು ಬಿಡಲಾಗಿದೆ. ಅದರಂತೆ ಎತ್ತರದ ವಿಭಾಗಗಳಲ್ಲಿಯೂ ಸಹ ಮೇಲಂತಸ್ತುಗಳು ಆಗ್ನೇಯ ಮತ್ತು ನೈರುತ್ಯದ ಕೋಣೆಗಳವರೆಗೆ ಚಾಚಿಕೊಂಡಿದೆ. ಉತ್ತರದ ವಿಭಾಗದ ಮಧ್ಯದಲ್ಲಿ ಮತ್ತೊಂದು ಬಾಲ್ಕನಿಯನ್ನು ನಿರ್ಮಿಸಲಾಗಿದೆ.

ಕಟ್ಟಡದ ದಕ್ಷಿಣದಿಂದ ಒಂದು ಕಾಲುದಾರಿ ಇದೆ. ಅದು ಕೇಂದ್ರದಲ್ಲಿರುವ ಕೋಣೆಯನ್ನು ಮತ್ತು ದಕ್ಷಿಣದ ಇತರೆ ವಿಭಾಗಗಳನ್ನು ಸಂಪರ್ಕಿಸುತ್ತದೆ. ಈ ದಾರಿಯ ಮಧ್ಯದಲ್ಲಿ ಅಷ್ಟಭುಜಾಕೃತಿಯಲ್ಲಿ ಹೊರಚಾಚಿಕೊಂಡ ವಿಭಾಗಗಳಿವೆ. ಕೇಂದ್ರದ ಕೋಣೆಯ ನೆಲಹಾಸು (ಜಸಿರಿ) ಎತ್ತರಕ್ಕಿದ್ದು ದಕ್ಷಿಣ ಪಶ್ಚಿಮದಲ್ಲಿ ದ್ವಾರಗಳಿವೆ. ಪೂರ್ವದಲ್ಲಿ ಇದ್ದ ದ್ವಾರವನ್ನು ಮುಚ್ಚಲಾಗಿದೆ. ಈ ಕೋಣೆಯು ಎತ್ತರದಲ್ಲಿ ಎರಡು ಅಂತಸ್ತಿನಷ್ಟಿದೆ. ಮೂರನೆಯ ಅಂತಸ್ತಿನ (ಕಾರಿಡಾರಿನ) ತನಕ ಇದೆ. ಇಲ್ಲಿನ ಮೂರು ದಿಕ್ಕಿನಲ್ಲಿರುವ ಕಮಾನುಗಳು ಸಣ್ಣ ವಿಭಾಗಗಳಿದ್ದು, ತೆರೆದುಕೊಳ್ಳುತ್ತವೆ. ದಕ್ಷಿಣದಲ್ಲಿ ಮೂರು ಮಧ್ಯಭಾಗದ ವಿಭಾಗಗಳು ಮತ್ತು ಎರಡು ಪಕ್ಕದಲ್ಲಿರುವ ಬಿಡಿಭಾಗಗಳಿದ್ದು, ತೆರೆದುಕೊಳ್ಳುತ್ತವೆ. ದಕ್ಷಿಣದಲ್ಲಿ ಮೂರು ಮಧ್ಯಭಾಗದ ವಿಭಾಗಗಳು ಮತ್ತು ಎರಡು ಪಕ್ಕದಲ್ಲಿರುವ ವಿಭಾಗಗಳು ಪ್ರತ್ಯೇಕವಾಗಿ ಹೊರಚಾಚು ಬಾಲ್ಕನಿಯನ್ನು ಹೊಂದಿವೆ. ನೈರುತ್ಯ ಮತ್ತು ಆಗ್ನೇಯಕ್ಕೆ ಇರುವ ದ್ವಾರಗಳು ಕಾಲುದಾರಿಗೆ ತೆರೆದುಕೊಳ್ಳುತ್ತದೆ. ಮೂರನೆಯ ಅಂತಸ್ತಿನಲ್ಲಿ ಯೋಜನೆಯನ್ನು ಬದಲಾಯಿಸಲಾಗಿದೆ. ಅಲ್ಲಿ ತೆರೆದ ಸ್ಥಳವಿದೆ. ಎರಡು ಉತ್ತರದ ಮೂಲೆಗಳಲ್ಲಿ ಒಂದೇ ಒಂದು ಭಾಗ ಉಳಿದುಕೊಂಡಿದೆ. ಮಧ್ಯದ ಕೋಣೆಯು ಕೇವಲ ಕಾಲುದಾರಿಯನ್ನು ಹೊಂದಿದೆ. ಅಲ್ಲಲ್ಲಿ ಹೊಸ (ಇಂದಿನ) ಕಿಟಕಿಗಳನ್ನು ಸೇರಿಸಲಾಗಿದೆ. ಕಟ್ಟಡದ ದಕ್ಷಿಣದಲ್ಲಿರುವ ಕಾಲುದಾರಿಗೆ ತೆರೆದುಕೊಳ್ಳುತ್ತದೆ. ಮೂರನೆಯ ಅಂತಸ್ತಿನ ಛಾವಣಿ ಬಹುತೇಕ ಖಾಲಿ ಇದ್ದು ಕೇಂದ್ರದ ಕೋಣೆಯ ಮೇಲೆ ಗುಮ್ಮಟವಿದೆ. ಮೂರು ವಿಭಾಗಗಳ ಎರಡು ಸಣ್ಣ ಕೋಣೆಗಳು ಪೂರ್ವ ಮತ್ತು ಪಶ್ಚಿಮಕ್ಕೆ ಇವೆ.

ಒಳಭಾಗ : ಒಳಭಾಗದ ಮೊದಲನೆಯ ಅಂತಸ್ತಿನಲ್ಲಿ ಒಂದೇ ತೆರನಾದ ಚೌಕಾಕಾರದ ಕಂಬಗಳಿದ್ದು ಅವುಗಳ ಮೇಲೆ ಹೊರಚಾಚಿದ ಭಾಗಗಳ ಕಮಾನುಗಳಿವೆ. ಗೋಡೆಗಳು ಮತ್ತು ದ್ವಾರಗಳು ಸಾದಾ ಇವೆ. ಅವು ಕೂಡುವ ಸ್ಥಳದ ಮೇಲಿಂದ ಕಿಟಕಿಗಳು ಎದ್ದಿವೆ. ಅವುಗಳಿಗೆ ಗಿಲಾವ್ ಮಾಡಿದ ಆಸರೆಗಳಿವೆ. ವಿಶಾಲವಾದ ಮಧ್ಯದ ಕೋಣೆಯಲ್ಲಿ ಖಾಲಿ ಆಸರೆಗಳಿವೆ. ಅವುಗಳ ಮೇಲೆ ಶಿಲ್ಪಗಳನ್ನು ಇಟ್ಟಿರಬಹುದೆಂಬ ಗೋಚರವಾಗುತ್ತದೆ. ಕಮಾನುಗಳ ಮಧ್ಯ ಕಂಬಗಳಿವೆ. ಛತ್ತಿನಲ್ಲಿ ಸಾಪಾಟದ ಗುಮ್ಮಟವಿದೆ. ಮಧ್ಯದಲ್ಲಿ ಎರಡು ಲೋಹಗಳ ಕೊಂಡಿಗಳಿವೆ. ಉಳಿದ ವಿಭಾಗಗಳ ಎಲ್ಲಾ ಗುಮ್ಮಟಗಳು ಸಹ ಸಾಪಾಗಿವೆ. ಇಲ್ಲಿ ಮಾತ್ರ ಮೂಲ ಪ್ಲಾಸ್ಟರ್‌ನ ಅಲಂಕಾರ ಉಳಿದಿದೆ. ಛತ್ತಿಗಳು ಸಣ್ಣ ತೊಲೆಗಳಿಗಿಂತ ವಿಭಾಗಗಳಿದ್ದು ಅವುಗಳ ಮೇಲೆ ಕಮಲದ ಚಿತ್ತಾರವಿದೆ. ಪಕ್ಕದ ಬೇರೆ ಬೇರೆ ಅಲಂಕಾರಗಳ ಪಟ್ಟಿ ಇದೆ. ಮೆಟ್ಟಿಲುಗಳ ಛತ್ತಿಗೆ ಎರಡು ಗೂಡುಗಳನ್ನು ಮಾಡಲಾಗಿದೆ.

ಎರಡನೆಯ ಅಂತಸ್ತಿನ ಒಳಭಾಗವು ಕೆಳ ಅಂತಸ್ತನ್ನು ಹೋಲುತ್ತದೆ. ವಿಭಾಗಗೊಂಡ ಕಮಲದ ಚಿತ್ತಾರ, ಎಲೆ, ಬಳ್ಳಿಗಳ ಅಲಂಕಾರವಿಲ್ಲ. ಆದರೆ ಮಧ್ಯದ ಕೋಣೆಯ ಗೋಡೆಗಳ

ರಚನೆಯನ್ನು ಬದಲಾಯಿಸಲಾಗಿದೆ. ಗುಮ್ಮಟವನ್ನು ಹೊಂದಿದ್ದು ಅಷ್ಟಭುಜಾಕೃತಿಯ ಯೋಜನೆಯಲ್ಲಿದೆ. ಮೂರನೆಯ ಅಂತಸ್ತಿನ ಒಳಭಾಗ ಎತ್ತರದಲ್ಲಿ ಕಡಿಮೆ ಇದೆ. ಯಾವುದೇ ಅಲಂಕಾರ ಚಿತ್ತಾರ ಇಲ್ಲದ ಗೋಡೆಗಳಿವೆ. ಗೋಡೆಗಳಲ್ಲಾದ ಕಂಬಗಳು, ಕೆಲವು ಕಡೆ ಕಮಾನುಗಳ ಮಧ್ಯದ ಕಂಬಕ್ಕೆ ಹೊಂದಿಕೊಂಡಿವೆ. ಛತ್ತಿನಲ್ಲಿ ಒಂಭತ್ತು ಭಾಗಗಳ ಚಿತ್ತಾರದ ಕುರುಹು ಇದೆ. ನಾಲ್ಕನೆಯ ಅಂತಸ್ತಿನ ಮಧ್ಯದ ಕೋಣೆಯ ಪ್ರವೇಶದ್ವಾರಕ್ಕೆ ಕಮಾನು ಇದೆ. ಅದೇ ತೆರನಾದ ಕಮಾನು ನಾಲ್ಕು ದಿಕ್ಕಿನಲ್ಲಿದೆ. ಅಷ್ಟಭುಜಾಕೃತಿಯ ಗುಮ್ಮಟದ ಬುಡ ಎರಡು ಹಂತದಲ್ಲಿದ್ದು ಬಹಳಷ್ಟು ಪುನರ್ ನಿರ್ಮಿಸಲಾಗಿದೆ.[೭೭]

೨. ರಾಣಾ ಮಹಲ್

ಎರಡು ಅಂತಸ್ತಿನ ಈ ಕಟ್ಟಡವು ಪೂರ್ವಾಭಿಮುಖವಾಗಿದ್ದು, ಕಲ್ಲಿನ ಅಡಿಪಾಯ ಗೋಡೆಯನ್ನು ಹೊಂದಿದೆ. ಸರಣಿಯಲ್ಲಿರುವ ಮೆಟ್ಟಿಲುಗಳ ಮತ್ತು ನೆಲಹಾಸುಗಳನ್ನು ಗಮನಿಸಿದಾಗ ಒಂದು ಸಂಕೀರ್ಣ ಆವರಣದ ಕಲ್ಪನೆ ಬರುತ್ತದೆ. ಈ ಕಟ್ಟಡವನ್ನು ಬಹಳಷ್ಟು ಪುನರ್ ನಿರ್ಮಿಸಲಾಗಿದ್ದು, ಮುಂಭಾಗದಲ್ಲಿ ಮೂಲ ಅಲಂಕಾರ ಮತ್ತು ಗಿಲಾವು ಉಳಿದುಕೊಂಡಿದೆ.

ಕೆಳ ಅಂತಸ್ತಿನಲ್ಲಿ ಚೌಕಾಕಾರದ ಕೋಣೆ ಇದೆ. ಅದು ಪಶ್ಚಿಮ ಭಾಗದಿಂದ(ಹಿಂಭಾಗ) ಚಾಚಿಕೊಂಡಿದೆ. ಅದು ದಕ್ಷಿಣ ಮತ್ತು ಪೂರ್ವದಲ್ಲಿ ಪ್ರವೇಶ ದ್ವಾರಗಳನ್ನು ನಿರ್ಮಿಸಿದೆ. ಅಲ್ಲಿ ಎತ್ತರವಾದ ಪ್ರದೇಶ ಇದೆ. ಈ ಕೋಣೆಯ ಒಂದು ಅಂಗಣಕ್ಕೆ ಹೊಂದಿಕೊಂಡಿದ್ದು, ಅದು ಕೂಡ ಪೂರ್ವದಲ್ಲಿ ತೆರೆದುಕೊಂಡಿದೆ. ಇದರ ಎರಡು ಬದಿಯಲ್ಲಿ ಮೇಲಿನ ಅಂತಸ್ತಿಗೆ ಹೋಗಲು ಮೆಟ್ಟಿಲುಗಳ ವ್ಯವಸ್ಥೆ ಇದೆ. ಎತ್ತರದ ಮೆಟ್ಟಿಲು ಗೋಪುರಕ್ಕೆ ಎರಡು ಬಾಗಿಲುಗಳಿವೆ. ದಕ್ಷಿಣ ಮತ್ತು ಪೂರ್ವಕ್ಕೆ ದ್ವಾರ ಇರುವಂತೆ ಮೊದಲಿನ ಅಂತಸ್ತಿನ ಸುತ್ತಲೂ ಆವರಣದಲ್ಲಿ ದಾರಿ ಇದೆ.[೭೮]

೮.೪. ಮುಸ್ಲಿಂ ಸ್ಮಾರಕಗಳು

೧. ರಾಜಧಾನಿಯ ಕೇಂದ್ರಸ್ಥಾನದಿಂದ ಉತ್ತರಕ್ಕೆ ಇರುವ ಮಸೀದಿ

ಆಯತಾಕಾರದಲ್ಲಿರುವ ಈ ಕಟ್ಟಡವನ್ನು ಇತ್ತೀಚೆಗೆ ಪುನರ್ ನಿರ್ಮಿಸಲಾಗಿದೆ. ಇದು ಎತ್ತರದ ಸ್ಥಳದಲ್ಲಿ ನಿರ್ಮಾಣಗೊಂಡಿದೆ. ನಾಲ್ಕು ದಿಕ್ಕಿನಲ್ಲಿಯೂ ಗೋಡೆಯನ್ನು ನಿರ್ಮಿಸಲಾಗಿದೆ. ಉತ್ತರಕ್ಕೆ ಮತ್ತು ಪೂರ್ವಕ್ಕೆ ಕಟ್ಟಡಕ್ಕೆ ಹತ್ತಲು ಮೆಟ್ಟಿಲನ್ನು ನಿರ್ಮಿಸಲಾಗಿದೆ. ಮೆಟ್ಟಿಲುಗಳನ್ನು ಕಲ್ಲಿನಿಂದ ನಿರ್ಮಿಸಲಾಗಿದೆ. ಈ ಕಟ್ಟಡದಲ್ಲಿ ಹಲವಾರು ಮಣ್ಣಿನ ಉಂಗುರಾಕಾರವನ್ನು ಹೋಲುವ ರಚನೆ ಕಂಡುಬಂದಿದೆ. ಬಹುಶಃ ನೀರು ಸಂಗ್ರಹಿಸಲು ಬಳಸಿರಬಹುದು.

ಈ ಸ್ಮಾರಕವು ಪೂರ್ವದಲ್ಲಿ ತೆರೆದುಕೊಂಡಿದ್ದು, ಉಳಿದ ಮೂರು ಭಾಗಗಳಲ್ಲಿ ಮುಚ್ಚಲ್ಪಟ್ಟಿದೆ. ಮತ್ತು ೩ ಸಾಲುಗಳಲ್ಲಿ ಕಂಬಗಳನ್ನು ಜೋಡಿಸಲಾಗಿದೆ. ಪ್ರತಿ ಕಂಬವು ಗೋಡೆಗೆ ಇದಿರಾಗಿ ನಿಂತಿದೆ. ಪಶ್ಚಿಮ ಗೋಡೆಯ ಮಧ್ಯಭಾಗದಲ್ಲಿ ಪ್ರಾರ್ಥನಾಗೂಡನ್ನು(ಮಿಹರಬ್ ನಿಚೆ)

ನಿರ್ಮಿಸಲಾಗಿದೆ.[೭೯] ಕಟ್ಟಡವನ್ನು ಸರಳವಾದ ಮೂರು ಸ್ತರದ ಬುನಾದಿಯ ಮೇಲೆ ನಿರ್ಮಿಸಲಾಗಿದೆ. ಪೂರ್ವ ಭಾಗದಲ್ಲಿ ಕಮಾನುಗಳು ತೆರೆದುಕೊಂಡಿದ್ದು ಅವುಗಳ ಮೇಲ್ಛಾವಣಿ(Roof)ಯ ತೊಲೆಗಳಿಗೆ ಆಸರೆ ನೀಡಿವೆ. ಈ ಕಮಾನುಗಳು ಇಳಿಜಾರಿನಲ್ಲಿ ನಿರ್ಮಾಣಗೊಂಡಿವೆ. ಒಂದು ತೊಲೆಯ ಮೇಲೆ ಈ ಕಟ್ಟಡವನ್ನು ನಿರ್ಮಿಸಿದವರ ಹೆಸರು ಮತ್ತು ದಿನಾಂಕವನ್ನು ಬರೆಯಲಾಗಿದೆ.

೨. ರಾಜಧಾನಿಯ ಕೇಂದ್ರದಿಂದ ಉತ್ತರಕ್ಕೆ ಇರುವ ಮಸೀದಿ

ಈ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು ದೊಡ್ಡ ಸ್ಮಶಾನದಿಂದ ಸುತ್ತುವರಿಯಲ್ಪಟ್ಟಿದೆ. ಇಲ್ಲಿ ಹಲವಾರು ಸಮಾಧಿಕಲ್ಲುಗಳು ಮತ್ತು ಒಂದು ಬಾವಿ ಇದೆ.

ಈ ಸ್ಮಾರಕವನ್ನು ಪೂರ್ವದಲ್ಲಿ ಪಶ್ಚಿಮಕ್ಕೆ ಲಂಬವಾಗಿ ನಿರ್ಮಿಸಲಾಗಿದೆ. ಪಶ್ಚಿಮದ ಕೊನೆಯಲ್ಲಿ ಗೂಡನ್ನು ನಿರ್ಮಿಸಲಾಗಿದೆ. ಅದರ ಒಂದು ಭಾಗವನ್ನು ಈಗಲೂ ನೋಡಬಹುದು. ಹಲವಾರು ಕಂಬಗಳನ್ನು ನಿರ್ಮಿಸಲಾಗಿದೆ. ಆದರೆ ಕೆಲವು ಕಂಬಗಳು ಈಗಾಗಲೇ ಬಿದ್ದುಹೋಗಿವೆ. ಈ ರಚನೆಯು ಮಧ್ಯಭಾಗದ ಹಜಾರವನ್ನು ತೋರಿಸುತ್ತದೆ. ಪೂರ್ವಭಾಗವು ಸಾಕಷ್ಟು ವಿಶಾಲವಾಗಿದೆ. ಕಂಬಗಳು ಛಾವಣಿಯ ತೊಲೆಯನ್ನು ಎತ್ತಿಹಿಡಿದಿವೆ. ಪೂರ್ವದ ಮಧ್ಯದಲ್ಲಿ ಅರ್ಧ ಬಿದ್ದು ಹೋಗಿರುವ ಬಾಗಿಲು ಇದೆ. ಹೊರಭಾಗದಲ್ಲಿ ನಾಲ್ಕು ಕಂಬಗಳಿವೆ. ಒಳಗಿನ ಮಧ್ಯಭಾಗದಲ್ಲಿ ಪ್ರಾರ್ಥನೆಯ ಗೂಡನ್ನು ನಿರ್ಮಿಸಲಾಗಿದೆ. ಈ ಗೂಡಿನ ಮೇಲ್ಭಾಗವು ಪಶ್ಚಿಮದಲ್ಲಿ ಬಿದ್ದು ಹೋಗಿದೆ. ಕಂಬಗಳು ಅಷ್ಟಾಕೃತಿಯ ರಚನೆಯನ್ನು ಹೊಂದಿವೆ. ಹಜಾರದೊಳಗಿನ ಕೆಲವು ಕಂಬಗಳು ಮತ್ತು ಕಮಾನುಗಳು ಬಿದ್ದು ಹೋಗಿವೆ.[೮೦]

೩. ರಾಜಧಾನಿಯ ಕೇಂದ್ರದಿಂದ ಉತ್ತರಕ್ಕೆ ಇರುವ ಗುಮ್ಮಟಾಕಾರದ ಸಮಾಧಿ

ಈ ಮೇಲೆ ಹೇಳಿದ ಮಸೀದಿಯ ಪಕ್ಕದಲ್ಲಿಯೇ ಸುಮಾರು ೨೩ ಮೀ. ದೂರದಲ್ಲಿದೆ. ಈ ಸಮಾಧಿಯು ಮಸೀದಿಯ ಎದುರಿನಲ್ಲಿದೆ. ಸಮಮಿತಿಯಲ್ಲಿ ನಿರ್ಮಿಸಲ್ಪಟ್ಟ ಈ ಕಟ್ಟಡವು ಒಂದೇ ಚೌಕಾಕಾರದ ಕೋಣೆಯನ್ನು ಹೊಂದಿದೆ. ಎರಡು ಪಾರ್ಶ್ವದ ಮಧ್ಯಭಾಗದಲ್ಲಿ ಹೊರಗಡೆ ಮತ್ತು ಒಳಗಡೆ ದೊಡ್ಡ ಮತ್ತು ಸಣ್ಣ ಕಮಾನುಗಳನ್ನು ನಿರ್ಮಿಸಲಾಗಿದೆ. ಕೇವಲ ಕಲ್ಲಿನ ಕಟ್ಟಡ ಮಾತ್ರ ಉಳಿದುಕೊಂಡಿದೆ. ಸಿಮೆಂಟಿನ ಎಲ್ಲಾ ಗಿಲಾವು ಬಿದ್ದು ಹೋಗಿದೆ. ಮೂರುಸ್ಥರದ ಬುನಾದಿಯ ಮೇಲೆ ಗೋಡೆಯನ್ನು ನಿರ್ಮಿಸಲಾಗಿದೆ. ಗುಮ್ಮಟದ ಮೇಲ್ಭಾಗವು ಚಪ್ಪಟೆಯಾಗಿದ್ದು, ಕಮಾನಿನ ಕೆಳಭಾಗವು ಸಂಪೂರ್ಣವಾಗಿ ಬಿದ್ದುಹೋಗಿದೆ.[೮೧]

೪. ರಾಜಧಾನಿಯ ಕೇಂದ್ರದಿಂದ ಉತ್ತರಕ್ಕೆ ಇರುವ ಗುಮ್ಮಟಾಕಾರದ ಗೋರಿ

ಇದೊಂದು ಸಣ್ಣ ಸಮಾಧಿಯಾಗಿದ್ದು ಸುತ್ತಲೂ ಸಮಾಧಿ ಕಲ್ಲುಗಳಿವೆ. ಮೂರು ಸ್ಥರದ ಬುನಾದಿಯ ಮೇಲೆ ಗೋಡೆಗಳನ್ನು ನಿರ್ಮಿಸಲಾಗಿದೆ. ಈ ಗೋಡೆಗಳು ಇಂದಿಗೂ ತಮ್ಮ ಮೂಲ ಸ್ವರೂಪವನ್ನು ಉಳಿಸಿಕೊಂಡಿವೆ. ಗೋಡೆಗಳ ಮೇಲೆ ಯಾವುದೇ ಚಿತ್ರವಿಲ್ಲ, ಅಲಂಕಾರಗಳಿಲ್ಲ.

ಇದರ ಬಾಗಿಲನ್ನು ಸಹ ಕಲ್ಲಿನ ಕಂಬಗಳಿಂದ ನಿರ್ಮಿಸಲಾಗಿದೆ. ಅದರ ಎರಡೂ ಬದಿಗಳಲ್ಲಿ ಕಮಾನಿನ ಕಿಟಕಿಗಳನ್ನು ಇಡಲಾಗಿದೆ. ಅಲ್ಲಲ್ಲಿ ಕಮಾನಿನ ಅಂಚಿನಲ್ಲಿ ಸುರಳಿಯಾಕಾರದ ಚಿತ್ರಗಳನ್ನು ಮಾಡಲಾಗಿದೆ. ಛಾವಣಿಯ ಮೇಲೆ ಯಾವುದೇ ಸಂಕೇತವನ್ನು ನಿರ್ಮಿಸಿಲ್ಲ.

ಒಳಭಾಗ : ಒಳಭಾಗದಲ್ಲಿ ಯಾವುದೇ ಸಮಾಧಿ ಕಲ್ಲು ಉಳಿದಿಲ್ಲ. ಮೂರು ದಿಕ್ಕಿನ ಗೋಡೆಗಳಲ್ಲಿ ಕಮಾನುಗಳಲ್ಲಿ ಕಮಾನುಗಳನ್ನು ಮಾಡಲಾಗಿದೆ. ಇನ್ನುಳಿದ ಜ್ಯಾಮಿತಿಯ ರಚನೆಗಳು ಹೊರಭಾಗವನ್ನೇ ಹೋಲುತ್ತವೆ. ಮೇಲ್ಛಾವಣಿಯು ಎರಡು ಹಂತದಲ್ಲಿ ಚೌಕಕಾರದಲ್ಲಿದೆ.[೮೨]

೫. ರಾಜಧಾನಿಯ ಕೇಂದ್ರದಿಂದ ಉತ್ತರಕ್ಕಿರುವ ಚಪ್ಪಟೆ ಮೇಲ್ಛಾವಣಿಯ ಗೋರಿ

ಇದು ಎರಡು ಭಾಗಗಳನ್ನು ಹೊಂದಿದ ಸಣ್ಣ ಕಟ್ಟಡವಾಗಿದೆ. ಈಗ ಬಹುಭಾಗ ಕುಸಿದು ಬಿದ್ದಿದೆ. ಮೂರು ದಿಕ್ಕಿನಲ್ಲಿ ಸ್ವಲ್ಪ ಗೋಡೆ ಮಾತ್ರ ಉಳಿದಿದೆ. ಗೋಡೆಗಳನ್ನು ಕಲ್ಲಿನ ಬುನಾದಿಯ ಮೇಲೆ ಕಟ್ಟಲಾಗಿದೆ. ಹೊರಭಾಗದಲ್ಲಿ ಯಾವುದೇ ಚಿತ್ರಗಳನ್ನು ಮಾಡಿಲ್ಲ. ಆದರೆ ಅಲ್ಲಲ್ಲಿ ಕಮಾನಿನಾಕಾರದ ಗೂಡುಗಳನ್ನು ಮಾಡಲಾಗಿದೆ. ಚಪ್ಪಟೆಯಾಕಾರದ ಮೇಲ್ಛಾವಣಿ ಇದೆ. ಅದನ್ನು ಸಿಮೆಂಟಿನ ಗಾರೆಯಿಂದ ನಿರ್ಮಿಸಲಾಗಿದೆ. ಹೊರಗಡೆ ನಿರುಪಯುಕ್ತ ಕಲ್ಲುಗಳಿಂದ ಕಟ್ಟಿದ ಗೋಡೆಯ ಅವಶೇಷವಿದೆ.[೮೩]

೬. ರಾಜಧಾನಿಯ ಕೇಂದ್ರದಿಂದ ವಾಯವ್ಯಕ್ಕೆ ಇರುವ ಚಪ್ಪಟೆ ಮೇಲ್ಛಾವಣಿಯ ಗೋರಿ

ಇಂದಿಗೂ ಜನರ ಶ್ರದ್ಧಾಕೇಂದ್ರವಾಗಿರುವ, ಬಿಳಿ ಸುಣ್ಣವನ್ನು ಬಳಿದಿರುವ ಇದೊಂದು ಸಣ್ಣ ಕಟ್ಟಡ. ಬಹಳಷ್ಟು ಭಾಗ ಕುಸಿದು ಬಿದ್ದಿದೆ ಹಾಗೂ ಅಪಾಯಕಾರಿಯಾಗಿ ಬಾಗಿದೆ. ಈ ಕಟ್ಟಡ ನಾಲ್ಕು ಕಂಬಗಳ ಒಂದೇ ಕೋಣೆಯನ್ನು ಹೊಂದಿದೆ. ಕಂಬಗಳು ಅಷ್ಟಕೋನಾಕೃತಿಯ ಭಾಗಗಳನ್ನು ಹೊಂದಿವೆ. ಕಂಬಗಳ ಮೇಲ್ಭಾಗದ ತುದಿಗಳು ಛಾವಣಿಯ ಕಲ್ಲಿನ ಹಾಸು ಬಂಡೆಗಳಿಗೆ ಆಸರೆ ನೀಡಿವೆ. ದಕ್ಷಿಣಕ್ಕೆ ಕಚ್ಚಾ ಕಲ್ಲುಗಳಿಂದ ನಿರ್ಮಿಸಲಾಗಿದೆ.[೮೪] ಎತ್ತರದ ಗೋಡೆ ಇದೆ. ಈ ಗೋಡೆಯ ಕೆಲವು ಭಾಗ ಮಾತ್ರ ಪಶ್ಚಿಮದಲ್ಲಿ ಉಳಿದಿದೆ. ಪಶ್ಚಿಮ ಗೋಡೆಯಲ್ಲಿ ಪ್ರಾರ್ಥನೆಯ ಗೂಡನ್ನು ನಿರ್ಮಿಸಲಾಗಿದೆ. ಉತ್ತರದಲ್ಲಿ ಖಾಲಿ ಸ್ಥಳವನ್ನು ಬಿಡಲಾಗಿದೆ. ಮಧ್ಯದ ಕೋಣೆಯಲ್ಲಿ ಒಂದು ಸಮಾಧಿ ಕಲ್ಲು ಇದೆ. ಅದರ ಮೇಲೆ ಅರೇಬಿಯಾ ಭಾಷೆಯಲ್ಲಿ 'ಅಲ್ಲಾ' ಎಂದು ಬರೆಯಲಾಗಿದೆ. ದಕ್ಷಿಣದ ಬಾಗಿಲು ಬಿಳಿ ಮೆಟ್ಟಿಲುಗಳಿವೆ. ಹೊರಭಾಗವನ್ನು ಗುರುತಿಸಲು ಸಾಧ್ಯವಿಲ್ಲ.

೭. ರಾಜಧಾನಿಯ ಕೇಂದ್ರದಿಂದ ವಾಯವ್ಯಕ್ಕೆ ಇರುವ ಚಪ್ಪಟೆ ಛಾವಣಿಯ ಗೋರಿ

ಈ ಭಾಗದಲ್ಲಿ ಅತ್ಯಂತ ಸುರಕ್ಷಿತವಾಗಿ ಉಳಿದ ಗೋರಿ ಎಂದರೆ ಇದೊಂದೆ. ಇದರಲ್ಲಿ ಆಯತಾಕಾರದ ಎರಡು ಕೋಟೆಗಳಿವೆ. ದಕ್ಷಿಣಕ್ಕೆ ಬಾಗಿಲು ಇದೆ.

ಹೊರಭಾಗ : ಈ ಕಟ್ಟಡ ಗೋಡೆಗಳನ್ನು ಎತ್ತರದ ತಳಹದಿ(ಬುನಾದಿ)ಯ ಮೇಲೆ

ನಿರ್ಮಿಸಲಾಗಿದೆ. ಈ ಗೋಡೆಗಳು ತಮ್ಮ ಮೂಲ ಸ್ವರೂಪವನ್ನು ಉಳಿಸಿಕೊಂಡಿವೆ. ಹಳೆಯ ಕಾಲದ ಗಾರೆ ಇನ್ನು ಹಾಗೆ ಇದೆ. ೩ ಮತ್ತು ೨ ಸಾಲಿನಲ್ಲಿ ಕಂಬಗಳನ್ನು ನಿಲ್ಲಿಸಲಾಗಿದೆ. ಅವುಗಳನ್ನು ಕಚ್ಚಾಕಲ್ಲುಗಳಿಂದ ಮಾಡಲಾಗಿದೆ. ಕಟ್ಟಡದ ಉದ್ದಕ್ಕೂ(ಉತ್ತರದಿಂದ ದಕ್ಷಿಣಕ್ಕೆ) ಎರಡು ಕಮಾನಿನ ಗೂಡುಗಳಿವೆ. ಅವುಗಳು ಆಯತಾಕಾರದ ಚೌಕಟ್ಟಿನಲ್ಲಿ ಬಂಧಿತವಾಗಿವೆ. ದಕ್ಷಿಣ ದಿಕ್ಕಿನ ಪಶ್ಚಿಮದಲ್ಲಿ ಬಾಗಿಲನ್ನು ಇಡಲಾಗಿದೆ. ಗೋಡೆಯ ಅಂಚುಗಳು ಪರ್ಯಾಯವಾಗಿ ಬಾಗಿ, ಅಲಂಕಾರವನ್ನು ಹೊಂದಿವೆ. ಮೂಲೆಗಳಲ್ಲಿ ಕಲ್ಲುಗಳನ್ನು ಜೋಡಿಸಲಾಗಿದೆ. ಕಟ್ಟಡದ ಸೂರಿನ ಮೇಲೆ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ. ಈ ಗೋರಿಯು ದೇವಾಲಯದ ಬುನಾದಿಯನ್ನು ಹೋಲುತ್ತದೆ. ಕಮಾನುಗಳು ತೆರೆದುಕೊಂಡಿವೆ. ಗೋಡೆಯ ಕೆಳಭಾಗದಲ್ಲಿ ಕೆಲವು ಚಿತ್ರಗಳಿವೆ, ಸೂರಿನಲ್ಲಿ ಕೆಲವು ಸುರಳಿ ಚಿತ್ರಗಳಿವೆ.[೨೫]

೮. ರಾಜಧಾನಿಯ ಕೇಂದ್ರದಿಂದ ವಾಯವ್ಯಕ್ಕೆ ಇರುವ ಚಪ್ಪಟೆ ಭಾವಣಿಯ ಗೋರಿ.

ಈ ಗೋರಿಯನ್ನು ಕಚ್ಚಾಕಲ್ಲಿನ ಗೋಡೆಗಳು ಸುತ್ತುವರಿದಿವೆ. ೩ ಮತ್ತು ೨ ಸಾಲಿನ ಕಂಬಗಳು, ಮೂರು ಬುನಾದಿಯನ್ನು ಆಧಾರವಾಗಿರಿಸಿಕೊಂಡು ನಿಂತಿವೆ. ಪಶ್ಚಿಮದ ಗೋಡೆಯು ಕಚ್ಚಾ ಗಿಲಾವನ್ನು ಹೊಂದಿದೆ. ಕಮಾನುಗಳ ಮೇಲೆ ಇಟ್ಟಿಗೆಯ ಕಚ್ಚಾ ಕೆಲಸವನ್ನು ಮಾಡಲಾಗಿದೆ. ಉಳಿದ ಭಾಗದ ಗೋಡೆಗಳು ಸ್ವಲ್ಪ ಕುಸಿದಿವೆ. ಕಂಬಗಳು ಬಹುತೇಕ ಅಷ್ಟಾಕೃತಿಯ ಆವರಣಗಳನ್ನು ಹೊಂದಿವೆ. ಕಟ್ಟಡದ ಒಳಗೆ ಮೂರು ಸಮಾಧಿ ಕಲ್ಲುಗಳಿವೆ. ಕಮಲದ ಆಕೃತಿಯ ಕೆಲಸವನ್ನು ಕಾಣಬಹುದು. ಮೂರನೆಯ ಗೋರಿಯು ಚಪ್ಪಟೆಯಾದ ಮೇಲ್ಭಾಗವನ್ನು ಹೊಂದಿದೆ.

೯. ರಾಜಧಾನಿಯ ಕೇಂದ್ರದಿಂದ ವಾಯವ್ಯಕ್ಕೆ ಇರುವ ಚಪ್ಪಟೆ ಭಾವಣಿಯ ಗೋರಿ

ಚೌಕಾಕಾರದ ಈ ಗೋರಿಯ ಹತ್ತಿರ ಒಂದು ದೊಡ್ಡ ಮರ ಬೆಳೆದುಕೊಂಡಿದೆ.

ಹೊರಭಾಗ : ಮೂರು ಸ್ಥಳದ ಬುನಾದಿಯ ಮೇಲೆ ಕಚ್ಚಾಕಲ್ಲುಗಳಿಂದ ನಿರ್ಮಿಸಲಾದ ಗೋಡೆಯ ರಚನೆ ಇದೆ. ಈ ಗೋಡೆಗಳ ಮೇಲಿನ ಮೂಲ ಗಿಲಾವು ಇನ್ನೂ ಹಾಗೆ ಇದೆ. ಕೆಲವು ಅಲಂಕಾರಗಳನ್ನು ಸಹ ನೋಡಬಹುದು. ಗೋಡೆಗಳು ಹೆಚ್ಚು ಕಡಿಮೆ ಸಪಾಟಾಗಿದ್ದು, ದಕ್ಷಿಣದಲ್ಲಿ ಕಮಾನಿನಾಕಾರದ ಖಾಲಿಸ್ಥಳ ಇದೆ. ಪ್ರವೇಶ ದ್ವಾರದಲ್ಲಿ ಎರಡು ಕಲ್ಲುಗಳನ್ನು ಹಾಕಲಾಗಿದೆ. ಬಾಗಿಲಿನ ಎರಡು ಬದಿಗಳಲ್ಲಿ ಕಿಟಕಿಗಳನ್ನು ಇಡಲಾಗಿದೆ. ಇಲ್ಲಿನ ಚಿತ್ತಾರದಲ್ಲಿ ಸುರಳಿ ಕೆಲವು ಮೋಹಕವಾಗಿವೆ. ತೊಲೆಗಳು ಮತ್ತು ಕಂಬಗಳು ಸೂರಿಗೆ ಆಸರೆ ನೀಡಿವೆ. ಭಾವಣಿಯ ಮೇಲೆ ಯಾವುದೇ ಗೋಡೆಯ ಕುರುಹು ಕಂಡುಬರುವುದಿಲ್ಲ.

ಒಳಭಾಗ : ಮೂರು ದಿಕ್ಕಿನಲ್ಲಿ ಕಮಾನಿನ ರಚನೆ ಇದೆ. ಎರಡೂ ಪ್ರಾರ್ಥನಾ ಗೂಡುಗಳನ್ನು ನಿರ್ಮಿಸಲಾಗಿದೆ. ಸಮಾಧಿಯು ಖಾಲಿ ಇದೆ. ಒಳಗಿನ ಜ್ಯಾಮಿತಿಯ ರಚನೆಯೂ ಹೆಚ್ಚು ಕಡಿಮೆ ಹೊರಭಾಗವನ್ನು ಹೋಲುತ್ತವೆ. ಒಳಗಿನ ಭಾವಣಿಯ ಮೇಲ್ಭಾಗವು ಚಪ್ಪಟೆಯಾಗಿ ಚೌಕಕಾರದಲ್ಲಿದೆ.

೧೦. ರಾಜಧಾನಿಯ ಕೇಂದ್ರದಿಂದ ವಾಯವ್ಯಕ್ಕೆ ಇರುವ ಗುಮ್ಮಟ ರಹಿತ ಗೋರಿ

ಮೂರು ಭಾಗಗಳನ್ನು ಹೊಂದಿರುವ ಈ ಸ್ಮಾರಕ ಇನ್ನು ಸಾಕಷ್ಟು ಉತ್ತಮ ಸ್ಥಿತಿಯಲ್ಲಿದೆ. ದಕ್ಷಿಣ ದ್ವಾರದಲ್ಲಿ ಹಲವಾರು ಸಮಾಧಿ ಕಲ್ಲುಗಳನ್ನು ಮೆಟ್ಟಿಲನ್ನಾಗಿಸಲಾಗಿದೆ.

ಮೂರು ಸ್ಥರದ ಬುನಾದಿಯ ಮೇಲೆ ಗೋಡೆಯನ್ನು ನಿರ್ಮಿಸಲಾಗಿದೆ. ೪ ಮತ್ತು ೨ರ ಸಾಲಿನ ಕಂಬಗಳ ಮಧ್ಯ ಕಲ್ಲಿನ ಬಂಡೆಗಳನ್ನು ಹಾಕಲಾಗಿದೆ. ಆಯತಾಕಾರದ ಚೌಕಟ್ಟಿನಲ್ಲಿ ಮೂರು ಕಮಾನುಗಳು ತೆರೆದುಕೊಂಡಿವೆ. ದಕ್ಷಿಣ ದಿಕ್ಕಿನಲ್ಲಿರುವ ಕಮಾನನ್ನು ಬಾಗಿಲನ್ನಾಗಿಸಿದೆ. ಅದರ ಅಕ್ಕಪಕ್ಕದಲ್ಲಿ ಹಲವಾರು ಸಣ್ಣ ಸಣ್ಣ ಗೂಡುಗಳು ನಿರ್ಮಾಣಗೊಂಡಿವೆ. ಪೂರ್ವ ಮತ್ತು ಪಶ್ಚಿಮ ದಿಕ್ಕಿನ ಕಮಾನುಗಳ ಕೆಲವು ಅವಶೇಷಗಳು ಮಾತ್ರ ಉಳಿದುಕೊಂಡಿವೆ. ಗೋಡೆಯ ಮೇಲ್ಭಾಗದಲ್ಲಿ ಅರ್ಧ ವೃತ್ತಾಕಾರದ ರಚನೆಗಳಿವೆ. ಅಲ್ಲಲ್ಲಿ ಸುರಳಿ ಚಿತ್ರಗಳಿವೆ.[೮೬]

೧೧. ರಾಜಧಾನಿಯ ಕೇಂದ್ರದಿಂದ ಆಗ್ನೇಯ ದಿಕ್ಕಿನಲ್ಲಿ ದರ್ಗಾ

ಕಮಲಾಪುರ-ಕಂಪ್ಲಿ ರಸ್ತೆಗೆ ಹೊಂದಿಕೊಂಡಿರುವಂತೆ ಸ್ಮಶಾನದಲ್ಲಿ ಒಂದು ದರ್ಗಾ ಮತ್ತು ಒಂದು ಈದ್ಗಾ ಸ್ಮಾರಕಗಳು ಕಾಣಸಿಗುತ್ತವೆ. ದರ್ಗಾದ ಆವರಣ ಗೋಡೆಗೆ ಹೊಂದಿಕೊಂಡಿರುವ ಭಾಗ ಮೂಲ ಸ್ವರೂಪವನ್ನು ಉಳಿಸಿಕೊಂಡಿವೆ. ಉಳಿದ ಭಾಗವನ್ನು ಮೂಲ ಸ್ವರೂಪದಂತೆ ನವೀಕರಿಸಲಾಗಿದೆ ಮತ್ತು ಕೆಲವನ್ನು ಪುನರ್ ನಿರ್ಮಿಸಲಾಗಿದೆ. ಈ ಸ್ಮಾರಕದ ಪಶ್ಚಿಮದಲ್ಲಿ ಕೋಟೆ ಗೋಡೆ ಇದೆ. ಬಹುಶಃ ಅಲ್ಲೊಂದು ದಾರಿಯೇ ಇರಬಹುದು. ಈಗ ಆ ದಾರಿ ಕಾಣೆಯಾಗಿದೆ(ಮುಚ್ಚಲಾಗಿದೆ) ಈ ಕಟ್ಟಡದಲ್ಲಿ ೮ ಮತ್ತು ೪ ಸಾಲಿನ ಕಂಬಗಳ ಹಜಾರ ಇದೆ. ಇದನ್ನು ಉತ್ತರ ಮತ್ತು ಪೂರ್ವಕ್ಕೆ ಮುಚ್ಚಲಾಗಿದೆ. ಆದ್ದರಿಂದ ದಕ್ಷಿಣ ಭಾಗವನ್ನು ತೆರೆಯಲಾಗಿದೆ. ಕಂಬಗಳ ಕೆಳಗಿನ ಕಲ್ಲುಗಳು ಮತ್ತು ಆವರಣಗಳು ಈಗಲೂ ಕಾಣಸಿಗುತ್ತವೆ. ಮೇಲ್ಚಾವಣಿಯ ತೊಲೆಗಳನ್ನು ಪುನರ್ ಬಳಸಿ, ಪುನರ್ ನಿರ್ಮಿಸಿದಂತೆ ತೋರುತ್ತದೆ. ದಕ್ಷಿಣ ಭಾಗದ ಸುರಳಿಯಾಕಾರದ ಜಾಲಾಕೃತಿಗಳಿವೆ. ಗೋಡೆಯ ಎತ್ತರ ಭಾಗದಲ್ಲಿ ಬಹಳಷ್ಟು ಇಟ್ಟಿಗೆ ಮತ್ತು ಗಾರೆ ಕೆಲಸ ಕಂಡುಬರುತ್ತದೆ. ಪಶ್ಚಿಮದ ಗೋಡೆಯಲ್ಲಿ ಗೂಡನ್ನು ಮಾಡಲಾಗಿದೆ. ಆದರೆ ಕಮಾನುಗಳು ಹಾಗೂ ಅದರ ಮೇಲಿನ ಅಲಂಕಾರಗಳು ಮೂಲ ಸ್ವರೂಪವನ್ನು ಕಳೆದುಕೊಂಡಿವೆ.[೮೭]

೧೨. ಕಡ್ಡಿರಾಮಪುರದ ಗುಮ್ಮಟದ ಗೋರಿ

ಕಡ್ಡಿರಾಮಪುರದ ವಾಯವ್ಯಕ್ಕೆ ಸ್ವಲ್ಪ ಅಂತರದಲ್ಲಿ ಸಣ್ಣ ಗುಮ್ಮಟದ ಗೋರಿ ಕಂಡುಬಂದಿದೆ.

ಚೌಕಾಕಾರದ ಈ ಕಟ್ಟಡದ ದಕ್ಷಿಣ ಮಧ್ಯ ಭಾಗದಲ್ಲಿ ಬಾಗಿಲನ್ನು ತೆರೆಯಲಾಗಿದೆ. ಯಾವುದೇ ಸಮಾಧಿ ಕಲ್ಲು ಕಂಡುಬರುವುದಿಲ್ಲ. ಗೋರಿಯ ಗೂಡುಗಳು ಎರಡು ಭಾಗಗಳಲ್ಲಿ ಒಂದೇ ತೆರನಾಗಿವೆ. ಎರಡು ಆಯತಾಕಾರದ ಕಮಾನುಗಳನ್ನು ತೆರೆಯಲಾಗಿದೆ. ಅದರಲ್ಲಿ ಮತ್ತೊಂದು ಚೌಕಟ್ಟಿನ ಸಣ್ಣ ಕಮಾನನ್ನು ಮಾಡಲಾಗಿದೆ. ದಕ್ಷಿಣದ ಮಧ್ಯದ ತೆರೆದ ಭಾಗ ಬಾಗಿಲಾಗಿದೆ.

ಗೋಡೆಯ ತೀರಾ ಮೇಲ್ಭಾಗದಲ್ಲಿ ಸಣ್ಣ ಸಣ್ಣ ತೆರವುಗಳನ್ನು ಬಿಡಲಾಗಿದೆ. ಮೇಲ್ಛಾವಣಿಯ ಮೇಲೆ ಲಂಬವಾಗಿ ಗುಮ್ಮಟವನ್ನು ನಿರ್ಮಿಸಲಾಗಿದೆ. ಒಳಭಾಗದ ಗೋಡೆಯ ಎರಡು ಬದಿಯ ಮಧ್ಯದಲ್ಲಿ ಕಮಾನುಗಳು ತೆರೆದುಕೊಂಡಿವೆ. ಪ್ರತಿಮೂಲೆಯ ಕೆಳಗೆ ವೃತ್ತಾಕಾರದ ಗುಮ್ಮಟ ಆಕೃತಿಯನ್ನು ಮಾಡಲಾಗಿದೆ. ಹಳೆಯ ಗಾರೆಯ ಕುರುಹುಗಳಿದ್ದರೂ ಅವುಗಳಲ್ಲಿ ಯಾವುದೇ ಅಲಂಕಾರ ಇಲ್ಲ. ಗುಮ್ಮಟದ ಮೇಲಿನ ಕೇಂದ್ರದಲ್ಲಿ ಲೋಹದ ಕೊಂಡಿಯನ್ನು ಇಡಲಾಗಿದೆ. ಅದನ್ನು ಬಹುಶಃ ದೀಪಗಳನ್ನು ನೇತು ಹಾಕಲು ಬಳಸಿದ್ದಿರಬಹುದು.[೮೮]

೧೩. ಕಡ್ಡಿರಾಮಪುರದ ಗುಮ್ಮಟ ರಹಿತ ಗೋರಿ

ಕಡ್ಡಿರಾಮಪುರದಲ್ಲಿ ದೊರೆತ ಎರಡು ಗೋರಿಗಳಲ್ಲಿ ಇದು ದೊಡ್ಡದು. ಈ ಹಿಂದೆ ಹೇಳಿದ ಗೋರಿಯಿಂದ ಸ್ವಲ್ಪ ದೂರದಲ್ಲಿ ನಿರ್ಮಿಸಲ್ಪಟ್ಟಿದೆ. ಇದರ ಗುಮ್ಮಟ ಸಂಪೂರ್ಣವಾಗಿ ಕಾಣೆಯಾಗಿದೆ. ಇದಕ್ಕೆ ಗಾರೆಯ ಗಿಲಾವು ಕೂಡ ಇಲ್ಲ.

ಗೋರಿಯ ನಾಲ್ಕು ದಿಕ್ಕಿನಲ್ಲಿ ಬಾಗಿಲುಗಳನ್ನು ಬಿಡಲಾಗಿದೆ. ಈ ಕಟ್ಟಡವು ಸಮಮಿತಿ ಆಕಾರದಲ್ಲಿದೆ. ಆದರೆ ದಕ್ಷಿಣದಲ್ಲಿ ಮಾತ್ರ ಒಳ ಬರಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಕಟ್ಟಡದ ಒಳಗೆ ಮೂರು ಗೋರಿಗಳಿವೆ. ಹೊರಭಾಗದ ಗೋಡೆಗಳು ಸಾದಾ ಬುನಾದಿಯ ಮೇಲೆ ನಿಂತಿವೆ. ಅವು ಎರಡು ಅಂತಸ್ತು ಹೊಂದಿವೆ. ಕೆಳಭಾಗದ ಗೋಡೆಯಲ್ಲಿ ಮೂರು ಕಮಾನುಗಳಿದ್ದು, ಮಧ್ಯದ ಕಮಾನನ್ನು ಬಾಗಿಲನ್ನಾಗಿಸಲಾಗಿದೆ. ಬಾಗಿಲುಗಳ ಎರಡು ಬದಿಯಲ್ಲಿ ಎತ್ತರದ ಕಟ್ಟೆಯನ್ನು ಮಾಡಲಾಗಿದೆ. ಗೋಡೆಗಳ ಎರಡನೆ ಹಂತವನ್ನು ಮೊದಲನೆ ಹಂತಕ್ಕಿಂತ ಸ್ವಲ್ಪ ಹಿಂದಕ್ಕೆ ಕಟ್ಟಲಾಗಿದೆ. ಅದರಲ್ಲಿ ಆರು ಕಮಾನುಗಳಿವೆ. ಮೇಲ್ಭಾಗದಲ್ಲಿ ಕಚ್ಚಾ ಕಲ್ಲುಗಳು, ಗಾರೆಯನ್ನು ಹಾಕಲಾಗಿದೆ. ಒಳಗೋಡೆಗಳು ಸಹ ಎರಡು ಅಂತಸ್ತಿನಲ್ಲಿ ಭಾಗವಾಗಿವೆ. ಕೆಳಭಾಗದಲ್ಲಿ ಮೂರು ಕಮಾನುಗಳು ತೆರೆದುಕೊಂಡಿವೆ. ಗೂಡುಗಳ ಮೇಲ್ಭಾಗವು ಕೋನಾಕೃತಿಯಲ್ಲಿದೆ. ಮೇಲ್ಭಾಗದ ಮಧ್ಯದಲ್ಲಿ ಮಾತ್ರ ಕಮಾನು ಇದೆ. ಒಳಭಾಗದಲ್ಲಿ ವೃತ್ತಾಕಾರದ ಛಾವಣಿ ಇದೆ. ನೆಲಹಾಸು ಉಳಿದಿಲ್ಲ. ಗೋರಿಗಳ ಪಕ್ಕದಲ್ಲಿ ಅಂಚುಗಳನ್ನು ನಿರ್ಮಿಸಲಾಗಿದೆ. ಅವುಗಳ ಮೇಲ್ಭಾಗ ಚೂಪಾಗಿದೆ. ಈ ಕಟ್ಟಡದ ಪಶ್ಚಿಮಕ್ಕೆ ನಾಲ್ಕು ಕಲ್ಲಿನ ಕಂಬಗಳನ್ನು ಕಚ್ಚಾ ಕಲ್ಲು ಬಳಸಿ ನಿರ್ಮಿಸಿದ್ದಾರೆ. ಬಹುಶಃ ಇದು ಇನ್ನೊಂದು ಗುಮ್ಮಟದ ಗೋರಿ ಇರಬಹುದು.[೮೮]

೧೪. ಕಮಲಾಪುರದ ಪಶ್ಚಿಮಕ್ಕೆ ಇರುವ ಗುಮ್ಮಟದ ಗೋರಿ

ಕಮಲಾಪುರದಿಂದ ಪಶ್ಚಿಮಕ್ಕೆ ಸುಮಾರು ೫ ಕಿ.ಮೀ. ದೂರದಲ್ಲಿರುವ ನಾಗಲಾಪುರ ಎಂಬ ಗ್ರಾಮದಲ್ಲಿ ಈ ಸಣ್ಣ ರಚನೆ(ಸ್ಮಾರಕ) ಕಂಡುಬಂದಿದೆ. ಗುಮ್ಮಟವನ್ನು ಹೊಂದಿ, ನಾಲ್ಕು ದಿಕ್ಕಿನಲ್ಲಿ ತೆರೆದುಕೊಂಡಿರುವ ಏಕೈಕ ಉದಾಹರಣೆ ಇದೊಂದೆ. ಗೋಡೆಗಳು ಸಾಪಾಗಿವೆ. ಮಧ್ಯದಲ್ಲಿ ಕಮಾನುಗಳು ತೆರೆದುಕೊಂಡಿವೆ. ಕಮಾನುಗಳ ಮೇಲ್ಭಾಗವನ್ನು ಕೋನಾಕೃತಿಯಲ್ಲಿ ಚೂಪಾಗಿ

ನಿರ್ಮಿಸಲಾಗಿದೆ. ಇದರ ಇಟ್ಟಿಗೆ ಗಾರೆ ಬಹುತೇಕ ಮುರಿದು ಹೋಗಿವೆ. ಆದರೆ ಸ್ಥರಗಳ ಕೆಳಭಾಗ ಮಾತ್ರ ಸುಸ್ಥಿತಿಯಲ್ಲಿದೆ. ಒಳಭಾಗದ ಕಮಾನುಗಳು ಎರಡು ಅಂಚುಗಳನ್ನು ಹೊಂದಿವೆ. ಅವುಗಳ ಕಟ್ಟಡದ ಮೇಲ್ಛಾವಣಿಗೆ ಆಸರೆ ನೀಡಿವೆ. ಗುಮ್ಮಟದಲ್ಲಿ ಆಯತಾಕಾರದ ತೆರವುಗಳಿವೆ.[೯೦]

೧೫. ಹೊಸಪೇಟೆಯ ಗುಮ್ಮಟದ ಗೋರಿ

ಚೌಕಾಕಾರದ ಕೋಣೆಯ ಮೇಲೆ ಗುಮ್ಮಟವನ್ನು ನಿರ್ಮಿಸಲಾಗಿದೆ. ಈ ಕಟ್ಟಡವು ದಕ್ಷಿಣಕ್ಕೆ ತೆರೆದುಕೊಂಡಿದೆ. ಈ ಕಟ್ಟಡದ ಗೋಡೆಯ ಬಹುತೇಕ ಭಾಗಗಳು ಒಂದೇ ತೆರನಾಗಿವೆ. ಕಮಾನಿನ ರೂಪದಲ್ಲಿ ತೆರೆದುಕೊಂಡ ಸಮತಲದ ಎರಡು ಸಾಲುಗಳನ್ನು ಕಾಣಬಹುದಾಗಿದೆ. ಗೋಡೆಯ ಮೇಲೆ ಅಲ್ಲಲ್ಲಿ ಹೂವಿನಾಕಾರದ ಕೆತ್ತನೆ ಮಾಡಲಾಗಿದೆ.[೯೧] ಗೋಡೆಯ ಮೇಲ್ಭಾಗದಲ್ಲಿ ವೃತ್ತಾಕಾರದ ರಚನೆಗಳನ್ನು ಮಾಡಲಾಗಿದೆ.

ಮೇಲ್ಭಾಗದಲ್ಲಿ ಎತ್ತರದ ಅಷ್ಟಭುಜಾಕೃತಿಯ ಗುಮ್ಮಟ ನಿರ್ಮಿಸಲಾಗಿದೆ. ಅದರ ಮೇಲೆ ಚಿತ್ತಾರಗಳನ್ನು ಮಾಡಲಾಗಿದೆ. ಹೊಸಪೇಟೆಯ ನೆಹರೂ ಕಾಲೋನಿ ಪ್ರದೇಶ ಹಿಂದೆ ತಿರುಮಲದೇವಿ ಪಟ್ಟಣದ ನೆಲೆಯಾಗಿತ್ತು. ಇದರ ನೈರುತ್ಯದಲ್ಲಿರುವ ಎರಡು ಸ್ಮಾರಕಗಳು ಗೋರಿ ಕಟ್ಟಡವನ್ನು ಹೋಲುತ್ತವೆ. ಶೈಲಿಯಲ್ಲಿ ಗುಲ್ಬರ್ಗಾದ ಬಹಮನಿ ವಾಸ್ತುಶಿಲ್ಪದ ಲಕ್ಷಣಗಳನ್ನು ಹೊಂದಿವೆ. ಈ ಎರಡು ಕಟ್ಟಡಗಳ ಮುಂದಿನ ಭಾಗಗಳ ಹಿನ್ಸರಿದ ಕಮಾನುಗಳನ್ನು ಹೊಂದಿವೆ. ಇವುಗಳಲ್ಲಿ ಒಂದು ಗುಮ್ಮಟ ರಹಿತವಾಗಿದ್ದು, ಮತ್ತೊಂದು ಗುಮ್ಮಟ ಹೊಂದಿದೆ. ವಿಜಯನಗರ ಕಾಲಕ್ಕೆ ಇಲ್ಲಿ ಮುಸ್ಲಿಂ ವಸತಿ ನೆಲೆ ಇತ್ತೆಂಬುದು ಸ್ಪಷ್ಟ.

ಹೀಗೆ ವಿಜಯನಗರ ಸಾಮ್ರಾಜ್ಯದಲ್ಲಿ ನಿರ್ಮಾಣಗೊಂಡ ಸ್ಮಾರಕಗಳು ಮುಸ್ಲಿಂ ಸಮುದಾಯಗಳ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ. ಪ್ರಭುತ್ವ ಕೇಂದ್ರಿತ ಸ್ಮಾರಕಗಳು ಬಹಮನಿ, ಆದಿಲ್‌ಶಾಹಿ ರಾಜ್ಯದೊಂದಿಗೆ ಹೊಂದಿದಂತಹ ಸಾಂಸ್ಕೃತಿಕ ಹಾಗೂ ಸೌಹಾರ್ದತೆಯ ಸಂಬಂಧವನ್ನು ಸೂಚಿಸುತ್ತವೆ. ಮುಸ್ಲಿಂ ಸ್ಮಾರಕಗಳು ವಿಜಯನಗರದಲ್ಲಿ ನೆಲೆಸಿದ್ದ ಮುಸ್ಲಿಂ ಸಮುದಾಯಗಳ ಬಗ್ಗೆ ಮಾಹಿತಿ ನೀಡುವುದಷ್ಟೇ ಅಲ್ಲದೆ ಅವರ ಸಂಸ್ಕೃತಿಯನ್ನು ಸಹ ಪ್ರತಿಬಿಂಬಿಸುತ್ತದೆ. ಅರಸರು ಮುಸ್ಲಿಂ ಶೈಲಿಯನನ್ನು ತಮ್ಮ ಕಟ್ಟಡಗಳಲ್ಲಿ ಅಳವಡಿಸಿಕೊಂಡು ವಿಜಯನಗರ ಶೈಲಿಯಾಗಿ ರೂಪಿಸಿದರು. ಇದು ವಿಜಯನಗರದ ಅರಸರು ಹೊಂದಿದಂತಹ ಸೌಹಾರ್ಧತಾ ಧೋರಣೆಯನ್ನು ತಿಳಿಸುತ್ತದೆ. ವಾಸ್ತುಶೈಲಿಗೆ ಯಾವ ಭಾಷೆ ಅಥವಾ ಧರ್ಮವೂ ಅಡ್ಡಿಯಾಗಿಲ್ಲ ಎನ್ನುವ ವಾಸ್ತವಾಂಶ ಇದರಿಂದ ಸ್ಪಷ್ಟವಾಗುತ್ತದೆ.

ಕೊನೆಟಿಪ್ಪಣಿಗಳು

೧. ಷೇಕ್ ಅಲಿ (ಪ್ರ.ಸಂ.) ಶಿವಣ್ಣ ಕೆ.ಎಸ್. (ಸಂ), ಕರ್ನಾಟಕ ಚರಿತ್ರೆ ಸಂ. ೩ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೭. ಪು. ೩೫೮.

೨. ಪ್ರಭಾಕರ ಎಂ.ಎನ್., ದೇವಾಲಯ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೧, ಪು. ೩೪.

೩. ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಭಾಗ-೧ ಪ್ರಸಾರಾಂಗ, ಕವಿವಿ ಹಂಪಿ, ೨೦೧೨, ಪು. ೨೮೪-೨೮೫.

೪. ಸತೀಶ್ ಕೆ., ವಿಜಯನಗರ ಕಾಲದ ಶೈವ ದೇವಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೪, ಪು.೭೧.

೫. ಮೋಹನ್‌ಕೃಷ್ಣ ರೈ ಕೆ., ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೯, ಪು. ೫

೬. ಸೂರ್ಯನಾಥ ಕಾಮತ್, ವಿಜಯನಗರ ಸಾಮ್ರಾಜ್ಯ, ಪ್ರಕಾಶ ಸಾಹಿತ್ಯ ಬೆಂಗಳೂರು, ೧೯೯೧ ಪು.೪೪.

೭. ಸಿಂದಿಗಿ ರಾಜಶೇಖರ, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಶನ್ಸ್, ಧಾರವಾಡ, ೧೯೯೮, ಪು. ೧೬೩.

೮. ಷೇಕ್ ಅಲಿ, ಪೂರ್ವೋಕ್ತ, ಪು. ೩೫೮-೩೫೯

೯. ಅದೇ. ೩೬೦

೧೦. ಅದೇ. ೩೬೧

೧೧. ಪ್ರಭಾಕರ್ ಎಂ.ಎನ್., ಪೂರ್ವೋಕ್ತ, ಪು.೩೩.

೧೨. ಅದೇ, ಪು. ೩೩.

೧೩. ಜೋಸ್ ಪರ್‍ರೈರಾ, ಇಸ್ಲಾಮಿಕ್ ಸೇಕ್ರೆಡ್ ಆರ್ಕಿಟೆಕ್ಚರ್, ಬುಕ್ಸ್ ಎಂಡ್ ಬುಕ್ಸ್, ದೆಹಲಿ, ೧೯೯೪, ಪು. ೧೮

೧೪. ರಾಮಚಂದ್ರಗೌಡ ಹಿ.ಶಿ. (ಪ್ರಸಂ.), ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೯ ಪು. ೧೩೮.

೧೫. ಅದೇ, ಪು. ೧೩೮.

೧೬. ಅದೇ, ಪು. ೧೩೮.

೧೭. ಅದೇ, ಪು. ೧೩೮-೧೩೯.

೧೮. ಮಹಮ್ಮದ್ ಅಬ್ಬಾಸ್ ಶೂಸ್ತ್ರಿ, ಇಸ್ಲಾಂ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ವಿಶ್ವವಿದ್ಯಾಲಯ, ಮೈಸೂರು. ೧೯೭೦, ಪು. ೧೩೭-೧೩೮.

೧೯. ಕನ್ನಡ ವಿಷಯ ವಿಶ್ವಕೋಶ, ಪು. ೧೪೦.

೨೦. ಅಷಿಕ್ ಬಡಿಲಾಲ್ ಶ್ರೀವಾತ್ಸವ್, ಹಿಸ್ಟರಿ ಆಫ್ ಇಂಡಿಯಾ (೧೦೦೦-೧೭೦೭), ಶಿವಲಾಲ್ ಅಗರ್‌ವಾಲ್ ಆ್ಯಂಡ್ ಕಂಪನಿ, ಆಗ್ರಾ, ೧೯೭೪, ಪು. ೨೯೫.

೨೧. ಪರ್ಸಿ ಬ್ರೌನ್, ಇಂಡಿಯನ್ ಆರ್ಕಿಟೆಕ್ಚರ್, ದಿ ಇಸ್ಲಾಮಿಕ್ ಪಿರಿಯೆಡ್, ರೀಡ್ ಬುಕ್ಸ್ ಲಿಮಿಟೆಡ್, ೨೦೧೩. ಪು.೪.

೨೨. ಸೌಂದರ ರಾಜನ್ ಕೆ.ವಿ., ಇಸ್ಲಾಂ ಬಿಲ್ಡ್ಸ್ ಇನ್ ಇಂಡಿಯಾ, ಎ ಗಮ್ ಕಲಾ ಪ್ರಕಾಶನ್, ದೆಹಲಿ, ೧೯೮೩, ಪು. ೦೪-೦೬

೨೩. ಜಿಯಾವುದ್ದೀನ್ ಎ. ದೇಸಾಯಿ, ಇಂಡೋ-ಇಸ್ಲಾಮಿಕ್ ಆರ್ಕಿಟೆಕ್ಚರ್, ಭಾರತ ಸರ್ಕಾರ, ದೆಹಲಿ, ೧೯೮೬, ಪು. ೪-೫.

೨೪. ಆಷಿರ್ ಬಡಿಲಾಲ್, ಶ್ರೀವಾಸ್ತವ, ಪೂರ್ವೋಕ್ತ, ಪು. ೨೯೬.

೨೫. ಜೋಸ್ ಪೆರೈರಾ, ಪೂರ್ವೋಕ್ತ, ಪು. ೧೨೭.

೨೬. ನಾಝಿಯಾ ಖಾಜಿ, ಹಂಪಿ ಪರಿಸರದಲ್ಲಿ ಕಂಡುಬರುವ ವಿಜಯನಗರ ಕಾಲದ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯ ಸ್ಮಾರಕಗಳು, ಅಪ್ರಕಟಿತ ಎಂ.ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೭. ಪು.೩೯.

೨೭. ಅದೇ, ೪೦.

೨೮. ಅದೇ, ೪

೨೯. ಅದೇ, ಪು. ೪೦.

೩೦. ಜಿಯಾವುದ್ದೀನ್ ದೇಸಾಯಿ, ಮಸ್ಜೀದ್ ಆಫ್ ಇಂಡಿಯಾ, ಪಬ್ಲಿಕೇಷನ್ಸ ಡಿವಿಜನ್, ೧೯೭೯, ಪು.೩-೦೫.

೩೧. ಅದೇ, ಪು. ೦೩.

೩೨. ಅದೇ, ಪು. ೩-೦೪.

೩೩. ಸುಂದರ ರಾಜನ್ ಕೆ.ವಿ., ಪೂರ್ವೋಕ್ತ, ಪು. ೫೭-೫೯.

೩೪. ನಾಝಿಯಾ ಖಾಜಿ, ಪೂರ್ವೋಕ್ತ, ಪು. ೩೭-೩೯.

೩೫. ಅದೇ., ಪು. ೩೭-೩೯.

೩೬ ಸಾದಿಕ್ ನಖ್ವಿ, ದಿ ಇರಾನಿಯನ್ ಇನ್ ದೀಸ್ ಕಾಂಟ್ರಿಬ್ಯೂಷನ್ ಟು ದಿ ಕುತುಬ್ ಶಾಂತಿ ಆ್ಯಂಡ್ ಆದಿಲ್‌ಶಾಹಿ ಕಿಂಗ್‌ಡಮ್ಸ್, ಯುನಿವರ್ಸಿಟಿ ಗ್ರಾಂಟ್ಸ್ ಕಮಿಷನ್, ದೆಹಲಿ, ೨೦೦೩, ಪು. ೫೯.

೩೭. ನಿಜಾಮಿ ಕೆ.ಎ. ತಾರಿಕ್-ಪಿ-ಅವಾಲಿಯಾ-ಪಿ-ಚಿಸ್ತಿ, ಐದರ್-ಐ-ಅದಬ್‌ಲಾತ್, ಎಇಎಸ್ ಪಬ್ಲಿಕೇಷನ್ ದೆಹಲಿ, ೧೯೩೦, ಪು.೬೧.

೩೮. ಜಾರ್ಜ್ ಮೈಕೆಲ್, ಎಂಡ್ ಮಾರ್ಕ್ ಜೆಬಿರೋಸ್ಕಿ, ಕೇಂಬ್ರಿಜ್ ಹಿಸ್ಟರಿ ಆಫ್ ಇಂಡಿಯಾ ಸಂ.-೧ ಕೇಂಬ್ರಿಜ್, ಯುನಿವರ್ಸಿಟಿ ಪ್ರೆಸ್, ೧೯೯೯, ಪು. ೮.

೩೯. ಷೇರ್‌ವಾನಿ ಹೆಚ್.ಕೆ., ದಿ ಬಹಮನೀಸ್ ಆಫ್ ದಖ್ಖನ್, ಮನೋಹರಲಾಲ್ ಪಬ್ಲಿಕೇಶನ್ಸ್, ದೆಹಲಿ, ೧೯೮೫ ಪು.೧೮೧-೧೮೨.

೪೦. ಮೆಹದಿ ಅಕ್ಬರೀ, ಸೋಷಿಯೋ-ಎಕಾನಾಮಿಕ್ ಲೈಫ್ ಇನ್ ದಿ ಅಪ್ಪರ್ ದಖ್ಖನ್ ಅಂಡರ್ ದಿ ಬಹಮನೀಸ್(೧೩೪೭-೧೫೨೭) ಅಪ್ರಕಟಿತ ಪಿಎಚ್.ಡಿ.ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೧೧. ಪು.೧೩೭-೧೩೮.

೪೧. ಯಾಜ್ದಾನಿ, ಬೀದರ್: ಇಟ್ಸ್ ಹಿಸ್ಟರಿ ಎಂಡ್ ಮಾನ್ಯುಮೆಂಟ್ಸ್, ಎಂ.ಬಿ. ಪಬ್ಲಿಷರ್ಸ್, ದೆಹಲಿ, ೧೯೯೫, ಪು.೨೧.

೪೨. ಅಳವಂಡಿ ಲಕ್ಷ್ಮಣ, 'ಇತಿಹಾಸಕೋಶ-೨, ಕಾವ್ಯಶ್ರೀ ಪ್ರಕಾಶನ, ಕೊಪ್ಪಳ. ೧೯೧೮, ಪು.೯೦-೯೧.

೪೩. ಜಾರ್ಜ್ ಮಿಶಲ್, ವಿಜಯನಗರ ಕೋರ್ಟಲಿ ಸ್ಟೈಲ್, ಅಮೆರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ದೆಹಲಿ, ೧೯೮೬, ಪು.೪೮.

೪೪. ನಾಝಿಯಾ ಖಾಜಿ, ಪೂರ್ವೋಕ್ತ, ೪೩.

೪೫. ಜಾನ್ ಎಂ. ಫ್ರಿಟ್ಜ್, ಜಾರ್ಜ್ ಮೈಕೆಲ್ ಎಂಡ್ ಎಂ.ಎಸ್. ನಾಗರಾಜರಾವ್, ದಿ ರಾಯಲ್ ಸೆಂಟರ್ ಎಟ್ ವಿಜಯನಗರ ಫ್ರಿಲಿಮಿನರಿ ರಿಪೋರ್ಟ್, ಯುನಿವರ್ಸಿಟಿ ಆಫ್ ಮೆಲ್ಬೋರ್ನ್, ಪಾರ್ಕ್‌ವಿಲ್ಲೆ, ೧೯೮೪, ಪು.೧೨೪.

೪೬. ಜಾರ್ಜ್ ಮಿಶೆಲ್, ಪೂರ್ವೋಕ್ತ, ಪು. ೫೦.

೪೭. ನಾಝಿಯಾ ಖಾಜಿ, ಪೂರ್ವೋಕ್ತ, ಪು. ೪೪.

೪೮. ಜಾರ್ಜ್ ಮಿಶೆಲ್, ಪೂರ್ವೋಕ್ತ, ಪು. ೫೦.

೪೯. ರಾಜಶೇಕರ ಎಸ್., ಕರ್ನಾಟಕ ಆರ್ಕಿಟೆಕ್ಚರ್, ಸುಜಾತ ಪಬ್ಲಿಕೇಷನ್ಸ್, ಧಾರವಾಡ, ೧೯೮೫, ಪು. ೧೦೭.

೫೦. ಮೋನಿಕಾ ಜುನೇಜಾ, ಆರ್ಕಿಟೆಕ್ಚರ್ ಇನ್ ಮೆಡೀವೆಲ್ ಇಂಡಿಯಾ, ಪರ್ಮನೆಂಟ್ ಬ್ಲಾಕ್, ೨೦೧೨, ಪು. ೪೦೩.

೫೧. ಜಾರ್ಜ್ ಮೈಕಲ್, ಪೂರ್ವೋಕ್ತ. ಪು. ೧೨೯.

೫೨. ಮೂರ್ತಿ ಕೆ.ಎಲ್.ಎನ್., ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫. ಪು. ೫೦-೫೧.

೫೩. ಜಾರ್ಜ್ ಮೈಕೆಲ್, ಆರ್ಕಿಟೆಕ್ಚರ್ ಎಂಡ್ ಆರ್ಟ್ ಆಫ್ ಸದರನ್ ಇಂಡಿಯಾ, ಕೇಂಬ್ರಿಜ್ ಯುನಿವರ್ಸಿಟಿ ಪ್ರೆಸ್, ೧೯೯೫, ಪು. ೧೩೦.

೫೪. ಜಾರ್ಜ್ ಮೈಕಲ್, ಪೂರ್ವೋಕ್ತ, ಪು. ೧೨೮-೧೨೯.

೫೫. ನಾಝಿಯಾ ಖಾಜಿ, ಪೂರ್ವೋಕ್ತ, ಪು. ೬೯.

೫೬. ನೊನಿಕಾ ಜುನೇಜಾ, ಪೂರ್ವೋಕ್ತ, ಪು. ೪೦೦-೪೧೦.

೫೭. ಜಾನ್ ಎಂ. ಫ್ರಿಟ್ಜ್, ಜಾರ್ಜ್ ಮೈಕೆಲ್ ಎಂಡ್ ಎಂ.ಎಸ್. ನಾಗರಾಜರಾವ್, ಪೂರ್ವೋಕ್ತ, ಪು. ೧೨೬-೧೨೮.

೫೮. ಮಹದೇವ ಸಿ., ಹೊಸಪೇಟೆ ತಾಲೂಕು ದರ್ಶನ, ಪು. ೧೫೪-೧೫೫.

೫೯. ನಾಝಿಯಾ ಖಾಜಿ, ಪೂರ್ವೋಕ್ತ. ಪು. ೭೧.

೬೦. ಜಾರ್ಜ್ ಮಿಶೆಲ್, ಪೂರ್ವೋಕ್ತ, ಪು. ೭೮-೮೪.

೬೧. ಜಾರ್ಜ್ ಮೈಕೆಲ್, ಪೂರ್ವೋಕ್ತ, ಪು. ೧೨೩-೧೨೪.

೬೨. ಗೋಪಾಲ್ ಆರ್ (ಸಂ), ಕೊಟ್ರೇಶ್ ಎಂ.(ಲೇ), ಹಂಪಿ ಕೋಟೆಯ ಪ್ರವೇಶ ದ್ವಾರಗಳು, ವಿಜಯನಗರ ಅಧ್ಯಯನ ಸಂ.೧೦, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು, ೨೦೦೫, ಪು. ೧೩೮-೧೪೫.

೬೩. ಜಾರ್ಜ್ ಮೈಕಲ್, ಪೂರ್ವೋಕ್ತ, ಪು. ೧೨೩-೧೨೪.

೬೪. ಅದೇ, ಪು. ೧೨೩-೧೨೪.

೬೫. ಜಾನ್ ಎಂ. ಫ್ರಿಟ್ಜ್, ಜಾರ್ಜ್ ಮೈಕೆಲ್ ಎಂಡ್ ಎಂ.ಎಸ್. ನಾಗರಾಜರಾವ್, ಪೂರ್ವೋಕ್ತ, ಪು. ೧೨೬-೧೨೮.

೬೬. ನಾಝೀಯಾ ಖಾಜಿ, ಪೂರ್ವೋಕ್ತ, ಪು. ೫೭–೫೯.

೬೭. ಅದೇ, ಪು ೫೮.

೬೮. ಅದೇ, ಪು. ೫೮–೫೯.

೬೯. ಜಾನ್ ಎಂ. ಫ್ರಿಟ್ಜ್, ಜಾರ್ಜ್ ಮೈಕೆಲ್ ಎಂಡ್ ಎಂ.ಎಸ್. ನಾಗರಾಜರಾವ್, ಪೂರ್ವೋಕ್ತ, ಪು. ೧೪೪–೧೪೬.

೭೦. ಅದೇ, ಪು. ೧೪೨.

೭೧. ಶರಣಬಸಪ್ಪ ಕೋಲ್ಕಾರ, ವಿಜಯನಗರ ಮಾತೃಸ್ಥಾನ ಆನೆಗೊಂದಿ, ಬಸವ ಪ್ರಕಾಶನ, ಗುಲ್ಬರ್ಗಾ, ೨೦೧೩, ಪು. ೬೬.

೭೨. ನಾಝೀಯಾ ಖಾಜಿ, ಪೂರ್ವೋಕ್ತ, ಪು–೮೦.

೭೩. ವಿನೋದಾ ಪಾಟೀಲ್, ಕರ್ನಾಟಕದ ಪ್ರಾಚೀನ ಬಾವಿಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೬, ಪು. ೨೫–೨೭.

೭೪. ಜಾರ್ಜ್ ಮೈಕಲ್, ಪೂರ್ವೋಕ್ತ, ಪು. ೪೨–೪೩.

೭೫. ನಾಜೀಯಾ ಖಾಜಿ, ಪೂರ್ವೋಕ್ತ, ಪು. ೮೯–೯೧.

೭೬. ಫೆಡ್ರಿಕ್ ಡಬ್ಲ್ಯು. ಬನ್ಸ್, ರಾಯಲ್ ಪ್ಯಾಲೇಸಸ್, ರೆಸಿಡೆನ್ಸಸ್ ಎಂಡ್ ಪೆವಿಲಿಯನ್ಸ್ ಆಫ್ ಇಂಡಿಯಾ(೧೩–೧೪ನೇ ಶತಮಾನ), ಡಿ.ಕೆ. ಪ್ರಿಂಟ್‌ವುರ್ಡ್, ೨೦೦೬, ಪು. ೧೩೦–೧೩೫.

೭೭. ಜಾನ್ ಎಂ. ಫ್ರಿಟ್ಜ್, ಜಾರ್ಜ್ ಮೈಕೆಲ್ ಎಂಡ್ ಎಂ.ಎಸ್. ನಾಗರಾಜರಾವ್, ಪೂರ್ವೋಕ್ತ, ಪು. ೧೩೦–೧೩೫.

೭೮. ಜಾರ್ಜ್ ಮೈಕಲ್, ಪೂರ್ವೋಕ್ತ, ಪು. ೭೦.

೭೯. ಅದೇ, ಪು. ೭೧.

೮೦. ಅದೇ, ಪು. ೭೨.

೮೧. ಅದೇ, ಪು. ೭೪.

೮೨. ಅದೇ, ಪು. ೭೪.

೮೩. ಅದೇ, ಪು. ೭೪–೭೫.

೮೪. ನಾಜೀಯಾ ಖಾಜಿ, ಪೂರ್ವೋಕ್ತ, ಪು. ೪೫–೫೦.

೮೫. ಜಾರ್ಜ್ ಮೈಕಲ್, ಪೂರ್ವೋಕ್ತ, ಪು. ೭೪.

೮೬. ಅದೇ, ಪು. ೭೪–೭೫.

೮೭. ಅದೇ, ಪು. ೭೫.

೮೮. ಅದೇ, ಪು. ೭೫.

೮೯. ಅದೇ, ಪು. ೭೫–೭೬.

೯೦. ನಾಜೀಯಾ ಖಾಜಿ, ಪೂರ್ವೋಕ್ತ, ಪು. ೯೦–೯೫.

ಅಧ್ಯಾಯ ಒಂಬತ್ತು

ಸಮಾರೋಪ

ಅಧ್ಯಾಯ ಒಂಬತ್ತು

ಸಮಾರೋಪ

ಚರಿತ್ರೆ ಅಧ್ಯಯನ ಕ್ಷೇತ್ರದಲ್ಲಿ ಇಂದು ಸಾಕಷ್ಟು ಬದಲಾವಣೆಗಳು ಆಗಿವೆ. ಅವುಗಳನ್ನು ಚರಿತ್ರೆಯ ಬದಲಾದ ಅಧ್ಯಯನ ವಿಧಾನ ಹಾಗೂ ಸಿದ್ಧಾಂತಗಳಲ್ಲಿ ಕಾಣಬಹುದಾಗಿದೆ. ಪ್ರಭುತ್ವ ಕೇಂದ್ರಿತ ಚರಿತ್ರೆಯು ಜನಕೇಂದ್ರಿತ ಚರಿತ್ರೆಯಾಗಿ ಬದಲಾವಣೆ ಹೊಂದುತ್ತಿರುವುದಕ್ಕೆ ಕಾರಣಗಳು ಹಲವಾರು. ರಾಜಪ್ರಭುತ್ವ ಹಾಗೂ ವಸಾಹತು ಪ್ರಭುತ್ವಗಳ ಸಂದರ್ಭದ ಚರಿತ್ರೆ ಬರವಣಿಗೆ ಬಹುತೇಕ ಏಕಮುಖವಾಗಿದ್ದರೆ ಪ್ರಜಾಪ್ರಭುತ್ವ ಸಂದರ್ಭದ ಚರಿತ್ರೆ ಬರವಣಿಗೆ ಬಹುತ್ವದ ನೆಲೆಯಲ್ಲಿ ಬಹುರೂಪಿಯಾಗಿ ಕಾಣಿಸಿಕೊಂಡಿತು. ಸಮುದಾಯಗಳ ಚರಿತ್ರೆಯು ಈ ಹಿನ್ನೆಲೆಯಲ್ಲಿಯೇ ಆರಂಭಗೊಂಡಿರುವುದು. ಪ್ರಸ್ತುತ ಮಹಾಪ್ರಬಂಧದ ವಸ್ತುವಿಷಯವಾಗಿರುವ ಮುಸ್ಲಿಂ ಸಮುದಾಯಗಳ ಚರಿತ್ರೆಯೇ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಮತ–ಪಂಥಗಳು, ಜಾತಿ–ವರ್ಗಗಳು ಹಾಗೂ ಸಮುದಾಯಗಳ ಅಧ್ಯಯನಗಳು ಐಡೆಂಟಿಟಿಯ ಹಿನ್ನೆಲೆಯಲ್ಲಿ ಇಂದು ಸ್ವತಂತ್ರ ಅಧ್ಯಯನಗಳಾಗಿ ರೂಪಗೊಂಡು ಚರಿತ್ರೆಯಲ್ಲಿ ತಮ್ಮ ಸ್ಥಾನವನ್ನು ಭದ್ರಗೊಳಿಸಿಕೊಂಡಿವೆ. ಚರಿತ್ರೆಯ ಹಲವಾರು ಅಚಾರಿತ್ರಿಕ ನಿಲುವುಗಳಿಗೆ ಸಮರ್ಥ ಉತ್ತರಗಳನ್ನು ನೀಡಲು ಹಾಗೂ ಚಾರಿತ್ರಿಕ ಘಟನೆಗಳನ್ನು ಪೂರ್ವಗ್ರಹಗಳಿಂದಾಚೆ ನೋಡಲು ಚರಿತ್ರೆಯ ಈ ಬದಲಾದ ಅಧ್ಯಯನ ಕ್ರಮ ಹಾಗೂ ಇತ್ತೀಚಿನ ಹೊಸ ಒಲವುಗಳು ಸಹಕಾರಿಯಾಗಿವೆ.

ಭಾರತದಲ್ಲಿ ಮುಸ್ಲಿಂ ಆಳ್ವಿಕೆ ದೀರ್ಘ ಅವಧಿಯ ಚರಿತ್ರೆಯನ್ನು ಹೊಂದಿದೆ. ಆದರೆ ಚರಿತ್ರೆ ಬರವಣಿಗೆಯಲ್ಲಿ ಮುಸ್ಲಿಂ ಆಳ್ವಿಕೆಯ ಚರಿತ್ರೆ ಕರಾಳಯುಗ, ಅಂಧಕಾರದ ಯುಗ, ಕತ್ತಲೆಯ ಯುಗ, ಕ್ರೌರ್ಯದ ಯುಗ ಮುಂತಾದ ರೀತಿಯಲ್ಲಿ ಮುಸ್ಲಿಮರು ಕೆಟ್ಟವರು ಅಥವಾ ಕ್ರೂರಿಗಳು ಎಂಬುದಾಗಿಯೇ ನಿರೂಪಿತಗೊಂಡಿದೆ. ಇದಕ್ಕೆ ಅಪವಾದವೆನ್ನುವ ರೀತಿಯಲ್ಲಿ ಒಂದಷ್ಟು ಸೆಕ್ಯುಲರ್/ಪ್ರಗತಿಪರ ಬರವಣಿಗೆಗಳಿದ್ದರೂ ಭಾರತದಲ್ಲಿ ಇಂದಿಗೂ ಹಿಂದೂ ಹಾಗೂ ಮುಸ್ಲಿಂ ಎನ್ನುವ ವಿಂಗಡಣೆ ಗಟ್ಟಿಯಾಗಿಯೇ ಉಳಿದುಕೊಂಡು ಬಂದಿದೆ. ಕೋಮು ಸಾಮರಸ್ಯವನ್ನು ಕದಡುವ ಪ್ರಯತ್ನಗಳು ವ್ಯವಸ್ಥಿತವಾಗಿ ನಡೆಯುತ್ತಲೇ ಬಂದಿವೆ. ಸೆಕ್ಯುಲರ್ ಹಾಗೂ ಕಮ್ಯೂನಲ್ ಎನ್ನುವ ಧೋರಣೆಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಕಂಡುಬರಲಾರಂಭಿಸಿವೆ. ಏಕೆಂದರೆ ಇವೆರಡೂ ರಾಜಕೀಯ ಪ್ರೇರಿತವಾಗಿ ಜನತೆಯನ್ನು ಆವರಿಸಲು ಪ್ರಯತ್ನಿಸುತ್ತಿರುತ್ತವೆ.

ಯುರೋಪ್‌ಕೇಂದ್ರಿತ ಚಿಂತನಾಕ್ರಮದ ಚೌಕಟ್ಟಿನೊಳಗೇ ಇವೆರಡೂ ಹೊಸ ಪ್ರಯೋಗಗಳನ್ನು ನಡೆಸಲಾರಂಭಿಸಿವೆ. ಚರಿತ್ರೆಯನ್ನು ಹೊಗಳಿಕೆ ಹಾಗೂ ತೆಗಳಿಕೆಗಷ್ಟೇ ಸೀಮಿತಗೊಳಿಸಿದರೆ ಸಹಜವಾಗಿಯೇ ಚರಿತ್ರೆ ಅಚಾರಿತ್ರಿಕವಾಗಿ ಚಿತ್ರಿಸಲ್ಪಡುತ್ತದೆ. ವಿಜಯನಗರದ ಚರಿತ್ರೆ ಬರವಣಿಗೆಯೇ ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿದ್ದ ವಿವಿಧ ಮತಪಂಥಗಳ ನಡುವಿನ ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. ಮುಖ್ಯವಾಗಿ ಮುಸ್ಲಿಂ ಸಮುದಾಯಗಳು ಇಲ್ಲಿನ ಸ್ಥಳೀಯ ಸಮುದಾಯಗಳೊಂದಿಗೆ ಬೆರೆತು ಆ ಮೂಲಕ ಸ್ಥಳೀಯವಾಗುತ್ತಾ ಹೋದ ಬಗೆಯನ್ನು ದಾಖಲೆಗಳ ಮೂಲಕ ಕಂಡುಕೊಳ್ಳಲಾಗಿದೆ.

ಅರಬ್ಬರು ಮತ್ತು ಪರ್ಶಿಯನ್ನರು ಕ್ರಿ.ಶ. ೪ನೇ ಶತಮಾನದಿಂದ ಹಿಡಿದು ೧೫ನೇ ಶತಮಾನದ ವರೆಗೆ ಜಾಗತಿಕ ಮಟ್ಟದ ಸಮುದ್ರ ವ್ಯಾಪಾರದ ಮೇಲೆ ಹಾಗೂ ಭಾರತದೊಂದಿಗೆ ವ್ಯಾಪಾರದಲ್ಲಿ ಏಕಸ್ವಾಮ್ಯವನ್ನು ತಮ್ಮ ಅಧೀನದಲ್ಲಿ ಹಿಡಿದಿಟ್ಟುಕೊಂಡಿದ್ದರು. ನಂತರದಲ್ಲಿ ಕ್ರಿ.ಶ. ೧೪ನೇ ಶತಮಾನದ ವೇಳೆಗೆ ಟರ್ಕರ ಪತನಾನಂತರ ಯುರೋಪಿಯನ್ನರು ಭಾರತಕ್ಕೆ ಪ್ರವೇಶ ಪಡೆದರು. ಇಲ್ಲಿಂದಾಚೆಗೆ ಅರಬ್ಬರು ಹೊಂದಿದ್ದ ವ್ಯಾಪಾರದ ಏಕಸ್ವಾಮ್ಯತೆಯೂ ಕೈತಪ್ಪಿ ಹೋಗಿದ್ದರಿಂದ ಈ ಪ್ರದೇಶದಲ್ಲಿ ತಮ್ಮ ಪ್ರಾಬಲ್ಯವು ಕಡಿಮೆಯಾಯಿತು. ಮಧ್ಯಕಾಲೀನ ಭಾರತದ ಚರಿತ್ರೆಯಲ್ಲಿ ಈ ಸಮುದಾಯಗಳ ಅಸ್ಮಿತೆ ಹಾಗೂ ಸ್ಥಿತ್ಯಂತರಗಳ ಅಧ್ಯಯನಗಳನ್ನು ಇಲ್ಲಿಂದ ಗುರುತಿಸಬಹುದು. ಕ್ರಿ.ಶ. ೧ನೇ ಶತಮಾನದಿಂದ ಕ್ರಿ.ಶ. ೧೩ನೇ ಶತಮಾನದ ಕಾಲಾವಧಿಯವರೆಗಿನ ಮುಸ್ಲಿಂ ಸಮುದಾಯಗಳ ಚಾರಿತ್ರಿಕತೆಯನ್ನು ಹಾಗೂ ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಪೂರ್ವದಲ್ಲಿ ಮುಸ್ಲಿಂ ಸಮುದಾಯಗಳು ದಕ್ಷಿಣ ಭಾರತದಲ್ಲಿ ಗುರುತಿಸಿಕೊಂಡ ಬಗೆ ಯಾವುದು, ವಿಜಯನಗರ ಪೂರ್ವದಲ್ಲಿ ಮುಸ್ಲಿಂ ಸಮುದಾಯಗಳು ಹೇಗೆ ರಾಜಕೀಯವಾಗಿ, ಆರ್ಥಿಕವಾಗಿ ತಮ್ಮ ಸ್ಥಾನವನ್ನು ಪಡೆದುಕೊಂಡಿದ್ದವು ಎಂಬುವುದನ್ನು ಇಲ್ಲಿ ಗುರುತಿಸಬಹುದು.

ಭಾರತದಲ್ಲಿ ನೆಲೆ ನಿಂತ ಮುಸ್ಲಿಂ ಸಮುದಾಯಗಳ ಚರಿತ್ರೆಯನ್ನು ಎರಡು ಬಗೆಯಾಗಿ ವಿಭಾಗಿಸಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ. ಒಂದು ದಕ್ಷಿಣ ಭಾರತದಲ್ಲಿ ವ್ಯಾಪಾರದ ಹಿನ್ನೆಲೆಯಲ್ಲಿ ಬಂದು ನೆಲೆಸಿದ ಮುಸ್ಲಿಂ ಸಮುದಾಯಗಳು. ಎರಡನೆಯದಾಗಿ ಉತ್ತರ ಭಾರತದಿಂದ ದಕ್ಷಿಣಕ್ಕೆ ಬಂದು ನೆಲೆಸಿದ ಮುಸ್ಲಿಂ ಸಮುದಾಯಗಳು. ಹಾಗೆಯೇ ವಿಜಯನಗರ ಚರಿತ್ರೆ ರಚನೆಯಲ್ಲಿ ಮುಸ್ಲಿಂ ಸಮುದಾಯಗಳನ್ನು ಎರಡು ರೀತಿಯಾಗಿ ಗುರುತಿಸಬಹುದು. ಒಂದು ಪ್ರಭುತ್ವಕೇಂದ್ರಿತದಲ್ಲಿ ರಚನೆಯಾದ ಮುಸ್ಲಿಂ ಸಮುದಾಯಗಳು, ಇನ್ನೊಂದು ವೃತ್ತಿಯಾಧಾರಿತ ಅಥವಾ ಜನಸಾಮಾನ್ಯ ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳು. ಇವು ಅರಬ್ ಮತ್ತು ಪರ್ಶಿಯಾ ಮೂಲಗಳಿಂದ ಬಂದ ಮುಸ್ಲಿಂ ಸಮುದಾಯಗಳಾಗಿದ್ದು ತಮಿಳುನಾಡು, ಕೇರಳ, ಶ್ರೀಲಂಕಾ, ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ವಿಸ್ತರಣೆಗೊಳ್ಳುತ್ತಾ ಬಂದವು. ಸಾಮಾನ್ಯ ವರ್ಗದಲ್ಲಿ ಕಂಡುಬರುವ

ಮುಸ್ಲಿಂ ಸಮುದಾಯಗಳೆಂದರೆ ಬೈದಾರ್ಸ್(ಕಲ್ಲುಕುಟಿಕ), ಮೊಮಿನರು, ಪಿಂಜಾರ, ನದಾಫರು, ದೂದೇಕುಲರು, ಮಾನಯಾರ, ಅತ್ತಾರರು, ಪಟವೇಗಾರರು, ಖಾಜಿ, ಕಲಾಯಿಗಾರರು, ನಲಬಂಧರು, ಭಾದುರುನಜಾರ, ಚಪ್ಪರ್‌ಬಂದ್, ಕಸಬ್ಬರು, ಲಬ್ಬೆಗಳು, ಬಾಗ್ಬಾನರು.

ಈ ಮೇಲಿನ ವಿವರಣೆಯಿಂದ ಸಿಕ್ಕಂತಹ ಕೆಲವು ಆಧಾರಗಳಿಂದ ಮಧ್ಯಯುಗೀನ ಸಂದರ್ಭದಲ್ಲಿನ ಸಮುದಾಯಗಳನ್ನು ಸ್ಥಳೀಯ ಸಮುದಾಯಗಳು ಎಂದು ಗುರುತಿಸಬಹುದಾಗಿದೆ. ಪ್ರಭುತ್ವಕೇಂದ್ರಿತ ಹಿನ್ನೆಲೆಯಲ್ಲಿ ಮೇಲ್ವರ್ಗದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳಾಗಿ ಅಫಕಿಸ್, ದಖ್ಖನಿ, ಅಜಮಿಸ್, ಅರಬ್ಬರು, ಹಬಷಿಯರು, ತುರ್ಕರು, ಅಫಘಾನರು, ಶೇಖರು ಸಯ್ಯದರು, ಪಠಾನರು, ಕಂಡುಬರುವರು. ವಿದ್ವಾಂಸರ ವರ್ಗದಲ್ಲಿ ಕಂಡುಬರುವ ಸಮುದಾಯಗಳೆಂದರೆ, ಪೊನ್ನಾನಿನ ಮುಖ್ಖದಂ, ಬಫಕೀರರು, ಜಫರೀರು ಪ್ರಮುಖವಾಗಿವೆ. ಈ ಸಮುದಾಯಗಳು ಅರಬ್ ಮೂಲದವರಾಗಿ ಕೇರಳದಲ್ಲಿ ಬಂದು ನೆಲೆ ನಿಂತರು.

ಹೀಗೆ ಈ ಮೇಲಿನ ಎಲ್ಲ ಪ್ರಮುಖ ಸಮುದಾಯಗಳು ವಿಜಯನಗರ ಪೂರ್ವದಲ್ಲಿ ಕಂಡುಬಂದಿದ್ದು, ಈ ಸಮುದಾಯಗಳು ವಿಜಯನಗರ ಆಡಳಿತಾವಧಿಯಲ್ಲಿಯೂ ಸಹ ಮುಂದುವರಿದವು. ಮಧ್ಯಕಾಲೀನ ಭಾರತದ ಜನಕೇಂದ್ರಿತ ಚರಿತ್ರೆಯಲ್ಲಿ ಮುಸ್ಲಿಂ ಸಮುದಾಯಗಳು ವಿವಿಧ ಕಾಲಘಟ್ಟಗಳಲ್ಲಿ ವಿಶ್ವದ ವಿವಿಧ ಪ್ರದೇಶಗಳ ಮೂಲಕ ಭಾರತಕ್ಕೆ ಪ್ರವೇಶ ಪಡೆದವು. ಅಂತಹವುಗಳಲ್ಲಿ ಕೆಲವು ಉತ್ತರ ಭಾರತದ ಪ್ರಭುತ್ವಕೇಂದ್ರಿತ ನೆಲೆಗೆ ಬಂದವು. ಹಾಗೆಯೇ ದಕ್ಷಿಣ ಭಾರತಕ್ಕೆ ವ್ಯಾಪಾರದ ಹಿನ್ನೆಲೆಯಿಂದ ಕೆಲವು ಸಮುದಾಯಗಳು ಆಗಮಿಸಿದವು. ಇನ್ನೂ ಕೆಲವು ಧಾರ್ಮಿಕ ನೆಲೆಗಟ್ಟಿನಲ್ಲಿ ಬಂದರೂ ತಮ್ಮದೇ ಆದಂತಹ ವೈಶಿಷ್ಟ್ಯತೆಯನ್ನು ಹೊಂದಿದ್ದವು. ಈ ಅವಧಿಯ ಮುಸ್ಲಿಂ ಸಮುದಾಯಗಳಲ್ಲಿ ಸೂಫಿಗಳು, ಉಲೇಮಗಳು, ವರ್ತಕರು, ಕುಶಲಕರ್ಮಿಗಳು, ಕೃಷಿಕರು ಇನ್ನೂ ವಿವಿಧ ವೃತ್ತಿಯಾಧಾರಿತವಾಗಿ ಅನೇಕರು ಏಳಿಗೆಗೆ ಬಂದರು.

ವಿಜಯನಗರದ ಚರಿತ್ರೆ ಬರವಣಿಗೆಯಲ್ಲಿನ ಹಿಂದೂ-ಮುಸ್ಲಿಂ ನಿರೂಪಣೆಗಳನ್ನು ಎರಡು ಬಗೆಗಳಲ್ಲಿ ಅರ್ಥೈಸಿಕೊಳ್ಳಲು ಪ್ರಯತ್ನಿಸಲಾಗಿದೆ. ಅವುಗಳೆಂದರೆ ವಿಜಯನಗರದ ಅರಸರ ಧೋರಣೆಗಳು ಹಾಗೂ ಅಧ್ಯಯನಕಾರರ ನಿಲುವುಗಳು. ವಿಜಯನಗರದ ಅರಸರ ಧೋರಣೆಗಳು ಅಂದಿನ ಚಾರಿತ್ರಿಕ ಸಂದರ್ಭದ ರಾಜಕೀಯ ವಿದ್ಯಮಾನಗಳಿಗೆ ಅನುಗುಣವಾಗಿ ರೂಪುಗೊಳ್ಳುತ್ತಿದ್ದವು. ವಿಜಯನಗರದ ಅರಸರು ಬಹಮನಿಗಳೊಂದಿಗೆ ಹಾಗೂ ಬಹಮನಿಗಳು ವಿಜಯನಗರದೊಂದಿಗೆ ವಿಜಯನಗರ ಶಾಹಿ ಅರಸುಮನೆತನಗಳೊಂದಿಗೆ ಹಾಗೂ ಶಾಹಿ ಅರಸುಮನೆತನಗಳು ವಿಜಯನಗರ ದೊಂದಿಗೆ ಹೊಂದಿದ್ದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳನ್ನು ಇಲ್ಲಿ ಪ್ರಧಾನವಾಗಿ ಚರ್ಚಿಸಲಾಗಿದೆ. ದಕ್ಷಿಣ ಭಾರತದಲ್ಲಿ ಹೊಸದಾಗಿ ಉದಯಿಸಿದ ಬಹಮನಿ ಹಾಗೂ ವಿಜಯನಗರ ಸಾಮ್ರಾಜ್ಯಗಳು ಹೊಸ ರಾಜಕೀಯ ವಾತಾವರಣವೊಂದನ್ನು ಸೃಷ್ಟಿಸಿ ಸಂಘರ್ಷ, ಹೊಂದಾಣಿಕೆ ಹಾಗೂ ಒಪ್ಪಂದಗಳ ಹೊಸ ಯುಗವನ್ನು ಹುಟ್ಟುಹಾಕಿದವು. ಈ ಅನಿವಾರ್ಯತೆಗಳಿಗೆ

ಅನುಗುಣವಾಗಿ ಅವರ ಆಡಳಿತ ನೀತಿ ರೂಪುಗೊಂಡಿತು. ಅವರ ಆಡಳಿತ ನೀತಿ ಅಂದಿನ ಸಂದರ್ಭದ ಒತ್ತಡಗಳಿಗೆ ಹಾಗೂ ಆರ್ಥಿಕ ಅನಿವಾರ್ಯತೆಗಳಿಗೆ ಉತ್ತರಗಳನ್ನು ಕಂಡುಹಿಡಿಯುವ ರೀತಿಯಲ್ಲಿದ್ದವೆಯೇ ಹೊರತು ಧಾರ್ಮಿಕ ಸಂಘರ್ಷವನ್ನು ಕೇಂದ್ರವಾಗಿಟ್ಟುಕೊಂಡಿರಲಿಲ್ಲ. ವ್ಯಾಪಾರಿಗಳು, ಕುಶಲಕರ್ಮಿಗಳು ಹಾಗೂ ಸೈನಿಕರು ಎರಡೂ ಸಾಮ್ರಾಜ್ಯಗಳ ನಡುವೆ ಉತ್ತಮ ಸಂಬಂಧಗಳನ್ನು ಬೆಸೆದಿದ್ದರು. ಅದೇ ರೀತಿ ದಖ್ಖನಿ ಭಾಷೆ, ಇಂಡೋ-ಇಸ್ಲಾಮಿಕ್ ವಾಸ್ತುಶೈಲಿ, ಸೂಫಿ ಪಂಥ, ದಾಸ ಪರಂಪರೆ ಇವೆಲ್ಲವೂ ಪರಸ್ಪರ ಕೊಡು-ಕೊಳ್ಳುವ ಸಂಬಂಧವನ್ನು ಹೊಂದಿದ್ದವು. ಅರೇಬಿಯನ್-ಪರ್ಶಿಯನ್ ಹಾಗೂ ಯುರೋಪಿಯನ್ ವ್ಯಾಪಾರದ ಪ್ರವೇಶ ಹೊಸಬಗೆಯ ಆರ್ಥಿಕತೆಯ ಹುಟ್ಟಿಗೂ ಕಾರಣವಾಯಿತು. ಈ ಎಲ್ಲ ಬದಲಾವಣೆಗಳ ಮೂಲಕ ಅಂದಿನ ರಾಜಪ್ರಭುತ್ವದ ಆಡಳಿತ ಸ್ವರೂಪವನ್ನು ತೀರ್ಮಾನಿಸ ಬೇಕಾಗುತ್ತದೆ.

ವಿಜಯನಗರದ ಅರಸರು ಎಂದೂ ಕೂಡ ತಾವು ಹಿಂದೂ ಧರ್ಮದ ಉಳಿವಿಗಾಗಿ ಮಾತ್ರ ಹೋರಾಡುವವರು ಎಂಬುದಾಗಲಿ, ದಕ್ಷಿಣ ಭಾರತದ ಸಮಾಜವನ್ನಾಗಲಿ ಅಥವಾ ಸಂಸ್ಕೃತಿಯನ್ನಾಗಲಿ ರಕ್ಷಣೆ ಮಾಡುವವರು ಎನ್ನುವ ನಿಲುವುಗಳನ್ನಾಗಲಿ ಇಟ್ಟುಕೊಂಡು ಸೀಮಿತ ನೆಲೆಯಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಸಾಕ್ಷ್ಯಗಳಿವೆ. ವಿಜಯನಗರದ ಅರಸರು ಈ ಹಿಂದೆ ಆಳ್ವಿಕೆ ನಡೆಸಿದ ಅರಸರ ಆದರ್ಶವನ್ನು ಪಾಲಿಸಿ ಧರ್ಮಕ್ಕನುಸಾರವಾಗಿ ಆಡಳಿತ ನಡೆಸಿ ಆ ಕಾಲದ ಜನರ ಬೆಂಬಲ ಪಡೆದಿದ್ದರು ಎಂಬ ವಿಚಾರವನ್ನು ಅಲ್ಲಗಳೆಯಲಾಗದು. ಇಲ್ಲಿ ಧರ್ಮವೆಂಬ ಪದವನ್ನು ಬಳಸಿದಾಗ ಆಧುನಿಕ ಕಾಲಘಟ್ಟದಲ್ಲಿ ಬಳಕೆಯಾಗುವ ರಿಲೀಜನ್‌ಗೆ ಸಂಬಂಧ ಕಲ್ಪಿಸಲು ಅಸಾಧ್ಯ. ಅವರು ಪಾಲಿಸಿದ್ದು ಆ ಕಾಲದ ರಾಜಧರ್ಮವಾಗಿತ್ತು. ನಾವು ಇವತ್ತು ಸೆಕ್ಯುಲರ್ ಪರಿಕಲ್ಪನೆಯಲ್ಲಿ ಅದನ್ನು ಕಲ್ಪಿಸಿಕೊಳ್ಳಬಹುದು ಅಥವಾ ಧರ್ಮ ಸಹಿಷ್ಣುತೆಯ ಹರಿಕಾರರು ವಿಜಯನಗರದರಸರು ಎಂದೂ ಕೂಡ ಲೇಬಲ್ ಮಾಡಬಹುದು. ವಿಜಯನಗರ ಕಾಲದ ಅರಸರು ತಮ್ಮ ಆಳ್ವಿಕೆಯಲ್ಲಿ ಎಲ್ಲಾ ಧರ್ಮೀಯರನ್ನು ಸಮಾನವಾಗಿ ಕಾಣುತ್ತಿದ್ದರು. ಎಲ್ಲಾ ಧರ್ಮೀಯರು ರಾಜ್ಯದ ಆಳ್ವಿಕೆಯಲ್ಲಿ ಸೇವಕರಾಗಿದ್ದರು. ರಾಜ್ಯದ ಆಳ್ವಿಕೆಯಲ್ಲಿ ಅಥವಾ ಆಡಳಿತದಲ್ಲಿ ಹಿಂದೂ-ಮುಸ್ಲಿಮರು ಉನ್ನತ ಹುದ್ದೆಯನ್ನು ಅಲಂಕರಿಸಿದ್ದರು. ವಿಜಯನಗರದ ಅರಸರಿಗೆ ಒಂದು ಸಮುದಾಯವನ್ನು ಓಲೈಸುವುದಾಗಲಿ, ದೂರವಿಡುವ ಸಣ್ಣತನವಾಗಲಿ ಅವರಿಗೆ ಇರಲಿಲ್ಲ. ಅದು ಆ ನೆಲದ ಗೌರವವನ್ನು ಹಾಗೂ ಸಂಪ್ರದಾಯವನ್ನು ಎತ್ತಿ ಹಿಡಿಯುವ ಧರ್ಮವಾಗಿತ್ತು.

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಸಹಜವಾದ ಪ್ರಕ್ರಿಯೆಯಲ್ಲಿ ನಡೆಯಿತೇ ವಿನಾ ಮುಸ್ಲಿಂ ದಾಳಿಗಳಿಂದ ಹಿಂದೂ ಧರ್ಮವನ್ನು ರಕ್ಷಿಸುವ ಏಕೈಕ ಉದ್ದೇಶದಿಂದ ಆಗಿರಲಿಲ್ಲ. ವಿಜಯನಗರದ ಅರಸರು ಸರ್ವಧರ್ಮ ಸಹಿಷ್ಣುಗಳಾಗಿದ್ದರು. ಇವರು ತಮಿಳು ರಾಜ್ಯವನ್ನಾಗಲಿ, ತೆಲುಗು ರಾಜ್ಯವನ್ನಾಗಲಿ ಭಾಷಿಕ ನೆಲೆಯಲ್ಲಿ ಕಟ್ಟಬೇಕೆಂಬ ಯೋಜನೆಗಳನ್ನು ಹೊಂದಿರಲಿಲ್ಲ. ಅದೇ ರೀತಿ ವಿಜಯನಗರ ಸಾಮ್ರಾಜ್ಯವು ಯಾವುದೋ ಒಂದು ಭಾಷೆಗೆ ಸೀಮಿತವಾದ ಭಾಷಿಕ ಪ್ರಭುತ್ವವೂ

ಅಲ್ಲ. ಕನ್ನಡ ಭಾಷಿಕ ಪ್ರದೇಶ, ತೆಲುಗು ಭಾಷಿಕ ಪ್ರದೇಶ, ತಮಿಳು ಭಾಷಿಕ ಪ್ರದೇಶ ಹಾಗೂ ಮಲಯಾಳಂ ಭಾಷಿಕ ಪ್ರದೇಶಗಳು ವಿಜಯನಗರ ಆಳ್ವಿಕೆಯ ವ್ಯಾಪ್ತಿಯೊಳಗಿದ್ದವು. ದಖ್ಖನಿ ಭಾಷಿಕರೂ ವಿಜಯನಗರ ಸಾಮ್ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದರು.

ಮುಸ್ಲಿಂ ಸಮಾಜವು ವಿಜಯನಗರ ಅವಧಿಯಲ್ಲಿ ತನ್ನದಲ್ಲದ ಸಾಮಾಜಿಕ ವ್ಯವಸ್ಥೆಯೊಳಗೆ ಪ್ರವೇಶವನ್ನು ಪಡೆದುಕೊಂಡು ಸ್ಥಳೀಯವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿರುವುದು ಭಾರತವು ಒಂದು ಬಹುಸಂಸ್ಕೃತಿಯ ನಾಡು ಎನ್ನುವುದನ್ನು ನಮಗೆ ಪದೇಪದೇ ನೆನಪಿಸುತ್ತದೆ. ಮುಸ್ಲಿಂ ಧರ್ಮ, ಭಾಷೆ, ವಾಸ್ತುಶೈಲಿ, ಸಿದ್ಧಾಂತ, ನಂಬಿಕೆ ಹಾಗೂ ಆಚರಣೆಗಳು ವಿಜಯನಗರ ಆಳ್ವಿಕೆಯಲ್ಲಿ ಸ್ಥಳೀಯಗೊಳ್ಳುತ್ತಾ ಕೊಡುಕೊಳ್ಳುವಿಕೆಯ ನೆಲೆಯಲ್ಲಿ ಗಟ್ಟಿಗೊಂಡವು.

ಹೀಗೆ ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯಲ್ಲಿ ಮುಸ್ಲಿಂ ಜನರ ಪಾತ್ರ ಬಹುಮುಖ್ಯವಾದುದಾಗಿದೆ. ಸಮಕಾಲೀನ ಬಹಮನಿ ಸುಲ್ತಾನರ ದಾಳಿಗಳಿಂದ ವಿಜಯನಗರ ಸಾಮ್ರಾಜ್ಯ ನಾಶವಾಯಿತು ಎನ್ನುವ ವಾದಗಳನ್ನು ಮಂಡಿಸುವ ಇತಿಹಾಸಕಾರರು ಇಲ್ಲಿ ವಾಸವಾಗಿದ್ದ ಮುಸ್ಲಿಮರು ವಿಜಯನಗರ ಸಾಮ್ರಾಜ್ಯದ ಬೆಳವಣಿಗೆಯಲ್ಲಿ ಬಹುಮುಖ್ಯವಾದ ಪಾತ್ರ ವಹಿಸಿದ್ದರು ಎಂಬ ಕಡೆಗೆ ಹೊರಳಿ ನೋಡುವುದೇ ಇಲ್ಲ. ಹಾಗಾಗಿ ಸ್ಥಳೀಯ ಚರಿತ್ರೆ, ಜಾನಪದ ಸಾಹಿತ್ಯ, ವಚನಕಾರರ ವಚನಗಳು ಮತ್ತು ಹರಿದಾಸರ ಕೀರ್ತನೆಗಳು ಹಾಗೂ ಕ್ಷೇತ್ರಕಾರ್ಯದ ಸಂಶೋಧನೆಯ ಆಳವಾದ ಅಧ್ಯಯನದಿಂದ ಮುಸ್ಲಿಂ ಸಂಸ್ಕೃತಿಯನ್ನು ಇನ್ನೂ ಅರಿಯಬೇಕಾಗಿದೆ.

ದಕ್ಷಿಣ ಭಾರತದಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳು ಈ ಮೊದಲೇ ವ್ಯಾಪಾರಸ್ಥರಾಗಿ, ಕೃಷಿಕರಾಗಿ, ಉದ್ಯಮಿದಾರರಾಗಿ, ಕುಶಲಕರ್ಮಿಗಳಾಗಿ ಭಾರತದ ವಿವಿಧ ಭಾಗಗಳಲ್ಲಿ ನೆಲೆಸಿದ್ದರು. ಆ ಮೂಲಕ ಭಾರತೀಯ ಸಂಸ್ಕೃತಿಯೊಳಗಡೆ ತಮ್ಮ ಸಂಸ್ಕೃತಿಯನ್ನು ಹುಟ್ಟು ಹಾಕಿದ್ದರು. ಅಷ್ಟೇ ಅಲ್ಲದೆ ಪ್ರಾಚೀನ ಕಾಲದಿಂದ ಮಧ್ಯಯುಗೀನ ಕಾಲದವರೆಗೂ ವಿವಿಧ ಅರಸುಮನೆತನಗಳ ಆಳ್ವಿಕೆಯಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು.

ಹಂಪಿ ಪ್ರದೇಶದಲ್ಲಿ ಪ್ರಭುತ್ವ ಹಿನ್ನೆಲೆಯ ವರ್ಗ, ವ್ಯಾಪಾರಸ್ಥರ ವರ್ಗ, ಕುಶಲಕರ್ಮಿಗಳ ವರ್ಗ, ಧಾರ್ಮಿಕ ವರ್ಗ ಹೀಗೆ ಎಲ್ಲ ವಿವಿಧ ಸಮುದಾಯಗಳು ಕಂಡುಬರುತ್ತವೆ. ಇಲ್ಲಿ ನಿರ್ಮಾಣವಾದಂತಹ ಇಂಡೋ-ಇಸ್ಲಾಮಿಕ್ ಶೈಲಿ, ಮಸೀದಿಗಳು, ವಸತಿನೆಲೆಗಳು, ಸಮಾಧಿ ಕಟ್ಟಡಗಳು, ದರ್ಗಾಗಳು ರಾಜಧಾನಿ ಪ್ರದೇಶದಲ್ಲಿ ಮುಸ್ಲಿಮರ ಇರುವಿಕೆ ಬಗೆಗೆ ಮಾಹಿತಿ ನೀಡುತ್ತವೆ. ಕಡ್ಡಿರಾಂಪುರದಲ್ಲಿ ಇರುವ ಗೋರಿ ಕಟ್ಟಡಗಳು, ಅನಂತಶಯನಗುಡಿಯ ರೈಲ್ವೆ ಹಳಿಗಳ ಸಮೀಪದಲ್ಲಿ ಕಂಡುಬರುವ ಸಮಾಧಿ, ಕಟ್ಟಡಗಳು, ಹಂಪಿ ಪ್ರದೇಶದಲ್ಲಿರುವ ಸಮಾಧಿ, ಮಸೀದಿ ಕಟ್ಟಡಗಳು ವಿಜಯನಗರ ಹಂಪಿ ಪ್ರದೇಶದ ಸುತ್ತಲೂ ಇವರು ಇದ್ದ ಬಗ್ಗೆ ಮಾಹಿತಿ ನೀಡುತ್ತವೆ.

ವಿಜಯನಗರದ ಆಳ್ವಿಕೆಯಲ್ಲಿ ಬಂದರುಪಟ್ಟಣಗಳು ಮುಸ್ಲಿಂ ಸಮುದಾಯಗಳ ಮುಖ್ಯ ವ್ಯಾಪಾರ ಕೇಂದ್ರಗಳಾಗಿ ಗುರುತಿಸಿಕೊಂಡು ನಂತರದಲ್ಲಿ ವಸತಿ ನೆಲೆಗಳಾದವು. ಇವರು ಮೊದಲಿಗೆ ಬಂದರು ಪಟ್ಟಣಗಳಲ್ಲಿ ನೆಲೆ ನಿಂತು, ಅಲ್ಲಿನ ಸ್ಥಳೀಯ ಮಹಿಳೆಯರ ಜೊತೆ ವೈವಾಹಿಕ ಸಂಬಂಧವನ್ನು ಬೆಳೆಸಿಕೊಂಡರು. ಆ ಮೂಲಕ ಸ್ಥಳೀಯ ಮುಸ್ಲಿಂ ಸಮುದಾಯಗಳು ಸಹ ಉದಯಿಸಿದವು. ಈ ಸಮುದಾಯಗಳು ಮುಖ್ಯವಾಗಿ ವ್ಯಾಪಾರವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದವು. ದಕ್ಷಿಣ ಭಾರತದ ಕರಾವಳಿ ತೀರಪ್ರದೇಶಗಳು ಇವರ ವ್ಯಾಪಾರ ಮತ್ತು ವಸತಿಗೆ ಮುಖ್ಯ ಕೇಂದ್ರಗಳಾಗಿದ್ದವು. ದಕ್ಷಿಣ ಭಾರತದ ಪಶ್ಚಿಮ ಮತ್ತು ಪೂರ್ವ ಕರಾವಳಿ ತೀರ ಪ್ರದೇಶಗಳಲ್ಲಿ ಕೇರಳ, ಆಂಧ್ರ, ತಮಿಳು ರಾಜ್ಯಗಳು ಮುಖ್ಯವಾಗಿವೆ. ವಿಜಯನಗರ ಆಳ್ವಿಕೆಯ ಮಲಬಾರ್ ತೀರ ಪ್ರದೇಶವು ವರ್ತಕ ಸಮುದಾಯಗಳ ಮುಖ್ಯ ಕೇಂದ್ರವಾಗಿತ್ತು. ಅರಬ್ ವರ್ತಕರು ಕ್ಯಾಲಿಕಟ್ ಮತ್ತು ಕಣ್ಣಾನೂರು ಪ್ರದೇಶಗಳಲ್ಲಿ ನೆಲೆಸಿದ್ದರು.

ವಿಜಯನಗರ ಆಳ್ವಿಕೆಯ ಬಂದರು ಪಟ್ಟಣಗಳಲ್ಲಿ ಮಲಬಾರ್ ತೀರ ಪ್ರದೇಶವು ಮಧ್ಯಕಾಲೀನ ಸಂದರ್ಭದಲ್ಲಿ ವರ್ತಕ ಸಮುದಾಯಗಳ ಮುಖ್ಯ ಕೇಂದ್ರವಾಗಿತ್ತು. ಅರಬ್ ವರ್ತಕರು ಕ್ಯಾಲಿಕಟ್ ಮತ್ತು ಕಣ್ಣಾನೂರು ಪ್ರದೇಶಗಳಲ್ಲಿ ನೆಲೆಸಿದ್ದರು. ಈ ಪ್ರದೇಶದ ಅರಸರ ಆಶ್ರಯವನ್ನು ಪಡೆದ ಮುಸ್ಲಿಂ ಸಮುದಾಯಗಳು ಮೆಣಸು ಮತ್ತು ಸಾಂಬಾರು ಪದಾರ್ಥಗಳ ರಫ್ತಿನಲ್ಲಿ ಏಕಸ್ವಾಮ್ಯವನ್ನು ಸ್ಥಾಪಿಸಿದ್ದರು. ಅಲ್ಲದೆ ಕ್ಯಾಲಿಕಟ್ ಅರಸರಿಗೆ ವಾಣಿಜ್ಯದಿಂದ ಬರುವಂತಹ ಆದಾಯವು ಮುಸ್ಲಿಂ ವರ್ತಕರ ಮೇಲೆ ಅವಲಂಬಿತವಾಗಿತ್ತು. ಈ ರೀತಿಯಾಗಿ ವ್ಯಾಪಾರದ ಹಿನ್ನೆಲೆಯಲ್ಲಿ ಬಂದು ನೆಲೆಸಿದ ಮುಸ್ಲಿಂ ಸಮುದಾಯಗಳು ಇಸ್ಲಾಂ ಧರ್ಮದ ವಿಸ್ತರಣೆಯಲ್ಲಿಯೂ ಪ್ರಭಾವ ಬೀರಿದ್ದರು. ಇಲ್ಲಿಗೆ ಆಗಮಿಸಿದ ಅನೇಕ ಮುಸ್ಲಿಂ ಮಿಷನರಿಗಳು ಇಸ್ಲಾಂ ಧರ್ಮ ಪ್ರಚಾರ ಮಾಡಿದರು. ಇಲ್ಲಿ ನೆಲೆಗೊಂಡ ಅರಬ್ಬರು ಸ್ಥಳೀಯ ಸಮುದಾಯಗಳೊಂದಿಗೆ ತಮ್ಮ ಸಂಸ್ಕೃತಿಯನ್ನು ಹಂತ ಹಂತವಾಗಿ ಬೆಳವಣಿಗೆ ಮಾಡಿದರು. ಜಾಮೋರಿಯೆನ್ ಅರಸನ ಆಳ್ವಿಕೆಯಲ್ಲಿ ಅರಬ್ಬರು ಕ್ಯಾಲಿಕಟ್ ಬಂದರು ಪ್ರದೇಶದಲ್ಲಿ ಬಂದು ನೆಲೆಸಿರುವುದನ್ನು ಹಲವು ಚಾರಿತ್ರಿಕ ಆಕರಗಳಿಂದ ಗುರುತಿಸಬಹುದು. ಮಲಬಾರ್ ತೀರದ, ಇತರ ಪ್ರದೇಶಗಳಾದ ಬೆಲಿಯಂ, ಪರಪ್ಪನಂಗಡಿ, ಥಾನೂರ್ ಮತ್ತು ಪೊನ್ನಾನಿ ಪ್ರಾಂತ್ಯಗಳಲ್ಲಿ ಮಾಪಿಳ್ಳೆ ಮುಸ್ಲಿಂ ಸಮುದಾಯಗಳು ಹೆಚ್ಚಾಗಿ ಕಂಡುಬರುತ್ತಿದ್ದವು. ಷಮ್‌ಶುಲ್ಲಾ ಖಾದರಿ ಪ್ರಕಾರ, ಈ ಪ್ರದೇಶಕ್ಕೆ ಪೋರ್ಚುಗೀಸ್ ವಾಸ್ಕೋಡಗಾಮನ ಪ್ರವೇಶ ಆಗುವ ಹಂತದಲ್ಲಿ ಮುಸ್ಲಿಂ ಸಮುದಾಯಗಳು ದಕ್ಷಿಣ ಮಲಬಾರಿನಲ್ಲಿ ಕೊಡನ್‌ಗಲೂರ್, ಪಲ್ಲಿಪುರಮ್, ವೈಪ್ಪು, ಎಡವನಕ್ಕಡುಗಳಲ್ಲಿ ಕಂಡುಬರುತ್ತಿದ್ದವು. ಮಧ್ಯೆ ಮಲಬಾರ್ ಪ್ರಾಂತ್ಯಗಳಾದ ಚಲಿಯಂ, ಕೋಜಿಕೋಡ, ಪರಪ್ಪನನ್‌ಗಾಡಿ, ತಿರುರಂಗಾಡಿ, ಥಾನೂರ್, ಪರವನ್ನ, ಪೊನ್ನಾನಿ ಮತ್ತು ವೆಲ್ಲಿಯೆನ್‌ಕೊಡುನಲ್ಲಿ ನೆಲೆಸಿದ್ದರು, ಉತ್ತರ ಮಲಬಾರ್‌ನಲ್ಲಿ ಮಂಗಳೂರು, ಕಾಸರಗೋಡು, ಪಜ್ಞಾಯಂಗಾಡಿ, ನಾದಪುರಂ, ವಲಪಟ್ಟಣಂ, ಕಣ್ಣೂರು, ಧರ್ಮದಂ, ಚೆಮ್ಮಲೊಡು, ತಿರುವಂಕೂಡು,

ಎಡಕಡು, ಕೋಯಿಲಂಡಿ, ತಿಕ್ಕೋಡಿ ಮತ್ತು ಕುನ್ನುಕಾಡು ಪ್ರದೇಶಗಳಲ್ಲಿ ತಮ್ಮ ನೆಲೆಗಳನ್ನು ಸ್ಥಾಪಿಸಿಕೊಂಡಿದ್ದರು.

ಮಧ್ಯಕಾಲೀನ ಪೂರ್ವದಲ್ಲಿಯೇ ದಕ್ಷಿಣ ಭಾರತದಲ್ಲಿ ವರ್ತಕ ಸಂಘಗಳು ಸ್ಥಾಪನೆಯಾಗಿದ್ದವು. ಕ್ರಿ.ಶ. ೯ನೇ ಶತಮಾನದ ತಿರಸಪಳ್ಳಿ ತಾಮ್ರಪಟದಲ್ಲಿ ಉಲ್ಲೇಖಿಸಿರುವಂತೆ ಹಂಜಮಾನ್ ಮತ್ತು ಮನಿಗ್ರಾಮತ್ತರ್ ಅಥವಾ ಮನಿಗ್ರಮತ್ತರ್ ಎನ್ನುವ ಮುಸ್ಲಿಂ ವರ್ತಕ ಸಂಘಗಳಿದ್ದವು. ಈ ವರ್ತಕ ಸಂಘಗಳ ಕಾರ್ಯಚಟುವಟಿಕೆಗಳು ೧೩ನೇ ಶತಮಾನದಲ್ಲಿ ಹೆಚ್ಚು ಕ್ರಿಯಾಶೀಲವಾಗಿದ್ದಿತು. ವಿಶೇಷವಾಗಿ ಮಲಬಾರ್ ಕಡಲತೀರ ಪ್ರಾಂತ್ಯಗಳಲ್ಲಿ ಈ ಸಂಘಗಳು ಮುಖ್ಯವಾದ ಪಾತ್ರವನ್ನು ವಹಿಸಿದ್ದವು. ಈ ವರ್ತಕ ಶ್ರೇಣಿಗಳ ಜೊತೆ ನಾನಾದೇಶಿ, ಅಯ್ಯಾಹೊಳೆ ಐವನೂರು ಎಂಬ ವರ್ತಕ ಶ್ರೇಣಿಗಳು ಸಹ ಕಾರ್ಯಗತಿಯಲ್ಲಿದ್ದವು.

ಕನ್ನಡ ಮತ್ತು ತೆಲುಗು ಶಾಸನಗಳಲ್ಲಿ ಹಂಜಮಾನ್ ಎಂಬ ಉಲ್ಲೇಖಗಳು ಕಂಡುಬಂದರೆ, ತಮಿಳು ಶಾಸನಗಳಲ್ಲಿ 'ಅಂಜುವನ್ನ'(ಅಂಜಮಾನ್) ಎಂಬ ಉಲ್ಲೇಖಗಳಿವೆ. ಈ ವರ್ತಕ ಸಂಘವು ಅರಬ್, ಸಿರಿಯಾನ್ ವರ್ತಕರ ಗುಂಪಾಗಿತ್ತು. ನಂತರದ ಕಾಲಾವಧಿಯಲ್ಲಿ ಅರಬ್ ವರ್ತಕರ ಶ್ರೇಣಿಯಾಯಿತು. ಪೂರ್ವ ಕರಾವಳಿಯ ಕಿಲಕ್ಕರೈ, ನಾಗಪಟ್ಟಣಂ ಮತ್ತು ಕಾಯಲಪಟ್ಟಣಂಗಳಲ್ಲಿ ಹೆಚ್ಚು ಕಂಡುಬರುತ್ತಿತ್ತು. ಈ ಸಂಘದಲ್ಲಿ ಮುಸ್ಲಿಂ ವರ್ತಕ ಸಮುದಾಯಗಳು ಸೇರಿದ್ದವು. ಮುಖ್ಯವಾಗಿ ಇವು ತಮ್ಮ ವ್ಯಾಪಾರ–ವಹಿವಾಟಿನ ಮೇಲೆ ನಿಯಂತ್ರಣವನ್ನು ಹೊಂದಲು ಈ ಸಂಘವನ್ನು ಸ್ಥಾಪನೆ ಮಾಡಿಕೊಂಡಿದ್ದವು ಅರಬ್ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ಹಾಗೂ ರಫ್ತು ಮಾಡಿಕೊಳ್ಳುವ ವಸ್ತುಗಳ ಮೇಲಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದವು. ಮುಖ್ಯವಾಗಿ ಕುದುರೆಗಳನ್ನು ಆಮದು ಮಾಡಿಕೊಂಡು ಸಿಲೋನ್, ವಿಜಯನಗರ, ಬಹಮನಿ ರಾಜ್ಯಗಳಿಗೆ ಸರಬರಾಜು ಮಾಡುತ್ತಿದ್ದರು. ಬದಲಿಗೆ ಇಲ್ಲಿಂದ ಮೆಣಸು, ಸಾಂಬಾರು ಪದಾರ್ಥಗಳನ್ನು ರಫ್ತು ಮಾಡಲಾಗುತ್ತಿತ್ತು.

ಅಂಜುಮಾನ್ ವರ್ತಕ ಸಂಘವನ್ನು ಹಲವು ಚರಿತ್ರೆಕಾರರು ಐದು ಸಮುದಾಯಗಳನ್ನು ಒಳಗೊಂಡ ಕುಶಲಕರ್ಮಿಗಳ ಸಂಘವೆಂದು ವಿವರಿಸಿದ್ದಾರೆ. ಕೇರಳದ ಕೊಡಂಗಲ್ಲೂರಿನ ರಾಜ ಭಾಸ್ಕರ ರವಿವರ್ಮನ ತಾಮ್ರಪಟದಲ್ಲಿ ಉಲ್ಲೇಖಿಸಿರುವಂತೆ, ಯಹೂದಿ ವರ್ತಕ ಮುಖ್ಯಸ್ಥ ಜೋಸೆಫ್ ರಬ್ಬಾನ್ ಎಂಬುವವನಿಗೆ ಅಂಜಮಾನ್ ಎಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟ ಮಾಹಿತಿ ಇದೆ. ಆದರೆ ಇದರ ಕಾಲಾವಧಿ ನಿಖರವಾಗಿ ತಿಳಿದುಬಂದಿಲ್ಲ. ೧೫ನೇ ಶತಮಾನದ ವೇಳೆಗೆ ಯಹೂದಿಗಳ ಒಳಜಗಳದ ಕಾರಣದಿಂದ ತಮಗೆ ಉಂಬಳಿಯಾಗಿ ದೊರೆತ ಅಂಜುಮನ್ ಗ್ರಾಮವು ಕೈಬಿಟ್ಟು ಹೋಯಿತು. ತದನಂತರ ಇವರು ಕೊಚ್ಚಿನ್‌ನಲ್ಲಿ ತಮ್ಮ ನೆಲೆಗಳನ್ನು ಕಟ್ಟಿಕೊಂಡಿದ್ದರು.

ವಿಜಯನಗರ ಕಾಲದಲ್ಲಿ ಕಂಡುಬರುವ ಹಲವಾರು ಮುಸ್ಲಿಂ ಸಮುದಾಯಗಳು ತಾವು ಕೈಗೊಂಡಂತಹ ವೃತ್ತಿಯ ಮೇಲೆ ಗುರುತಿಸಿಕೊಂಡವು. ವಿಜಯನಗರ ಕಾಲಾವಧಿಯಲ್ಲಿ ದಕ್ಷಿಣ

ಭಾರತದ ಕರಾವಳಿ ತೀರ ಪ್ರದೇಶದಲ್ಲಿ ನೆಲೆ ನಿಂತ ಮುಸ್ಲಿಂ ಸಮುದಾಯಗಳು ವರ್ತಕರಾಗಿದ್ದರು. ಅದೇ ರೀತಿಯಾಗಿ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ರಾಜಕೀಯ ಹಿನ್ನೆಲೆಯಲ್ಲಿ ಕಾಣಿಸಿಕೊಂಡ ಮುಸ್ಲಿಂ ಸಮುದಾಯಗಳು ಸಹ ಕಂಡುಬರುತ್ತವೆ. ಅರಬ್ ಮತ್ತು ಪರ್ಶಿಯಾ ಮೂಲದಿಂದ ಭಾರತಕ್ಕೆ ಆಗಮಿಸಿದ ಮುಸ್ಲಿಮರು, ಸ್ಥಳೀಯ ಸಂಸ್ಕೃತಿಯೊಂದಿಗೆ ಬೆರೆತು ಹೊಸ ಹೊಸ ಸಮುದಾಯಗಳ ರೂಪದಲ್ಲಿ ಗುರುತಿಸಿಕೊಂಡರು. ಇವುಗಳಲ್ಲಿ ವ್ಯಾಪಾರದ ಹಿನ್ನೆಲೆಯಲ್ಲಿ ಭಾರತಕ್ಕೆ ಬಂದ ಈ ಸಮುದಾಯಗಳು ವರ್ತಕ ಹಿನ್ನೆಲೆಯಲ್ಲಿಯೇ ಸಮುದಾಯಗಳ ರೂಪದಲ್ಲಿ ಗುರುತಿಸಿ ಕೊಂಡಿದ್ದಾರೆ. ವರ್ತಕ ಸಮುದಾಯಗಳಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳೆಂದರೆ ಮಾಪಿಳ್ಳೆ, ಮರಕ್ಕಲರು, ನವಾಯತರು, ಕೋಯಾ, ತುಳುಕ್ಕರು, ಲಬ್ಬೆಗಳು, ನಾಹರು, ಕೋಯಾಗಳು, ಬ್ಯಾರಿಗಳು ಹಾಗೂ ದಖ್ಖನಿಗಳು. ಇವುಗಳಲ್ಲಿ ಕೆಲವು ಉದ್ದಿಮೆದಾರರಾಗಿ ಹಾಗೂ ಕುಶಲಕರ್ಮಿಗಳಾಗಿ ತಮ್ಮ ವೃತ್ತಿಯನ್ನು ಮಾಡುತ್ತಿದ್ದರು.

ಮರಕ್ಕಲರು ಸಮುದಾಯವು ವರ್ತಕ ಸಮುದಾಯವಾಗಿದ್ದು, ಅರಬ್ ಮೂಲದವರು. ಇವರು ತಮಿಳುನಾಡು, ಕೇರಳ ಮತ್ತು ಶ್ರೀಲಂಕಾ ಪ್ರದೇಶಗಳಲ್ಲಿ ವ್ಯಾಪಾರ ವೃತ್ತಿಯಲ್ಲಿ ತೊಡಗಿದ್ದರು. ಇವರ ಪ್ರಮುಖ ವ್ಯಾಪಾರವೆಂದರೆ ನೈಸರ್ಗಿಕವಾಗಿ ದೊರೆಯುತ್ತಿದ್ದ ಮುತ್ತುಗಳನ್ನು ಶೇಖರಿಸಿ ಮಾರಾಟ ಮಾಡುವುದು. ಕಾಯಲ್ ಬಂದರುಪಟ್ಟಣ ಇವರ ಪ್ರಮುಖ ನೆಲೆಯಾಗಿತ್ತು.

ಮಾಪಿಳ್ಳೆ ಸಮುದಾಯವು ಅರಬ್ ಮೂಲದ ಸ್ಥಳೀಯ ವರ್ತಕ ಸಮುದಾಯವಾಗಿತ್ತು. ಈ ಸಮುದಾಯದವರು ಮಲಬಾರ್, ಕೋರಮಂಡಲ ಹಾಗೂ ಕೇರಳ ಪ್ರದೇಶಗಳಲ್ಲಿ ನೆಲೆಸಿದ್ದರು. ಇಲ್ಲಿನ ಸ್ಥಳೀಯ ಹೆಣ್ಣುಗಳೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದ್ದರು. ಹಾಗಾಗಿ ಅವರ ಪತ್ನಿಯರು ಮೀನುಗಾರಿಕೆ ಉದ್ದಿಮೆಯಲ್ಲಿ ತೊಡಗಿದ್ದರು. ಹಾಗೆಯೇ ಮುಂದುವರಿದು ಮಾಪಿಳ್ಳೆಗಳು ಮಲಬಾರ್ ಪ್ರಾಂತ್ಯದಲ್ಲಿ ಅರಬ್ ಮತ್ತು ಪರ್ಶಿಯಾ ರಾಜ್ಯಗಳಿಂದ ತರಿಸಿಕೊಳ್ಳುತ್ತಿದ್ದ ಕುದುರೆಗಳಿಗೆ ಮಧ್ಯವರ್ತಿ ವ್ಯಾಪಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಮಾಪಿಳ್ಳೆಯ ಉಪಪಂಗಡವಾಗಿ ಕೋಯಾ ಮುಸ್ಲಿಂ ಸಮುದಾಯವು ಕಾಣಿಸಿಕೊಳ್ಳುತ್ತದೆ. ಇವರು ನಾಯರ್ ಸಮುದಾಯದಿಂದ ಮತಾಂತರಗೊಂಡ ಮುಸ್ಲಿಂ ಸಮುದಾಯದವರು. ಹಾಗಾಗಿ ಮೂಲತಃ ಇವರು ಕೃಷಿ ವೃತ್ತಿಯನ್ನು ಮಾಡುತ್ತಿದ್ದರು.

ಸ್ಥಳೀಯ ವರ್ತಕ ಸಮುದಾಯಗಳಲ್ಲಿ ಕಂಡುಬರುವ ಮುಸ್ಲಿಂ ಸಮುದಾಯವೆಂದರೆ ತುಳುಕ್ಕರು. ಇವರು ಕೇರಳದ ಮಧ್ಯೆ ಹಾಗೂ ದಕ್ಷಿಣ ಭಾಗಗಳಲ್ಲಿ ನೆಲೆಸಿದ್ದರು. ಇದು ಮಾಪಿಳ್ಳೆ ಸಮುದಾಯದ ಉಪಪಂಗಡವಾಗಿತ್ತು. 'ಲಬ್ಬೆಗಳು' ಮುಸ್ಲಿಂ ಶ್ರೀಮಂತ ವರ್ತಕ ಸಮುದಾಯವಾಗಿತ್ತು. ಈ ಸಮುದಾಯವು ಅರಬ್ ಮೂಲದ್ದಾಗಿದ್ದು, ಇವರು ಸಿಲೋನ್ ಮತ್ತು ಆಗ್ನೇಯ ಏಷ್ಯಾದ ಜೊತೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದರು. ಇವರು ವ್ಯಾಪಾರಿಗಳು ಹಾಗೂ ಉದ್ದಿಮೆದಾರರಾಗಿಯೂ ಕೆಲಸವನ್ನು ಮಾಡುತ್ತಿದ್ದರು. ಮುಖ್ಯವಾಗಿ ಚರ್ಮ, ತಂಬಾಕು, ಧಾನ್ಯಗಳನ್ನು, ಸಾಂಬಾರು

ಪದಾರ್ಥಗಳನ್ನು ಮಾರುತ್ತಿದ್ದರು. ಕಾಯಲ್ ಪಟ್ಟಣವು ಇವರ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿನ ಸ್ಥಳೀಯ ಅರಸರೊಂದಿಗೆ ಒಪ್ಪಂದವನ್ನು ಸಹ ಮಾಡಿಕೊಳ್ಳುತ್ತಿದ್ದರು. ಕಾಯಲ್‌ಪಟ್ಟಣದಲ್ಲಿ ಮುತ್ತುಗಳ ಶೇಖರಣೆ ಮೇಲೆ ತೆರಿಗೆಯನ್ನು ಹೇರುವ ಒಪ್ಪಿಗೆಯನ್ನು ಸ್ಥಳೀಯ ಅರಸರಿಂದ ಪಡೆದುಕೊಂಡಿದ್ದರು.

ಮಲ್ಲಿಕ್‌ಕಾಫರ್ ದಾಳಿಯ ನಂತರ ದಕ್ಷಿಣ ಭಾರತದಲ್ಲಿ ದಖ್ಖನಿಗಳು ನೆಲೆ ನಿಂತರು. ಇವರು ದಕ್ಷಿಣ ಭಾರತದ ವಿವಿಧ ಭಾಗಗಳಲ್ಲಿ ಚೆದುರಿ ಹೋದರು. ಹಾಗೆಯೇ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿದ್ದರು. ರೇಷ್ಮೆ ಉದ್ಯಮದಲ್ಲಿ, ನೂಲು ತಯಾರಿಕೆ ಹಾಗೂ ಕುದುರೆ ಸಾಗಾಣಿಕೆ ವೃತ್ತಿಯಲ್ಲಿ ಇವರು ಪ್ರಧಾನವಾಗಿ ಗುರುತಿಸಿಕೊಡಿದ್ದರು.

ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರವು ವ್ಯಾಪಾರದ ಚಟುವಟಿಕೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿತ್ತು. ಜಾಗತಿಕವಾಗಿ ಅನೇಕ ರಾಷ್ಟ್ರಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿತ್ತು. ಭಾರತದೊಂದಿಗೆ ವ್ಯಾಪಾರವನ್ನು ನಡೆಸಲು ಆಗಮಿಸಿದ ಅರಬ್ ಮತ್ತು ಪರ್ಶಿಯಾ ಮೂಲದ ವ್ಯಾಪಾರಿಗಳು ಇಲ್ಲಿನ ಬಂದರು ಪಟ್ಟಣಗಳಲ್ಲಿ ಬಂದು ನೆಲೆಸಿ, ಇಲ್ಲಿನ ಸಂಸ್ಕೃತಿಯೊಂದಿಗೆ ಬೆರೆತು ತಮ್ಮದೇ ಆದ ಒಂದು ಹೊಸ ಬಗೆಯ ಆರ್ಥಿಕತೆಯನ್ನು ಇಲ್ಲಿ ಹುಟ್ಟುಹಾಕಿದರು. ಆದರೆ ತದನಂತರ ಬಂದ ಪೋರ್ಚುಗೀಸರಿಂದ ಇವರಿಗೆ ಅಷ್ಟೇ ಪ್ರಮಾಣದ ನಷ್ಟಗಳು ಉಂಟಾದವು. ಹೀಗಿದ್ದಾಗ್ಯೂ ವಿಜಯನಗರದ ಅವಧಿಯಲ್ಲಿ ಮುಸ್ಲಿಂ ಸಮುದಾಯಗಳು ಆರ್ಥಿಕತೆಯಲ್ಲಿ ತಮ್ಮದೇ ಆದ ಸ್ಥಾನಮಾನಗಳನ್ನು ಉಳಿಸಿಕೊಂಡಿದ್ದವು.

ವಿಜಯನಗರ ಆಡಳಿತ ವ್ಯವಸ್ಥೆಯಡಿಯಲ್ಲಿ ಮುಸ್ಲಿಂ ಸಮುದಾಯಗಳ ಪಾತ್ರವನ್ನು ಎರಡು ರೀತಿಯಾಗಿ ಗುರುತಿಸಬಹುದು. ಅವುಗಳೆಂದರೆ ಕೇಂದ್ರದ ರಾಜಪ್ರಭುತ್ವದ ಮಟ್ಟದಲ್ಲಿ ಹಾಗೂ ಸ್ಥಳೀಯ ಅರಸರ ಆಡಳಿತದಲ್ಲಿ ಮುಸ್ಲಿಂ ಸಮುದಾಯಗಳು ಹೇಗೆ ವಿಭಿನ್ನವಾಗಿ ಕಾರ್ಯ ನಿರ್ವಹಿಸಿದವು ಎನ್ನುವುದು. ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಮುಸ್ಲಿಂ ಸಮುದಾಯಗಳು ಆಡಳಿತ, ವ್ಯಾಪಾರಿ, ಸೈನಿಕ ವರ್ಗಗಳಲ್ಲಿ ಕೇಂದ್ರ ಮತ್ತು ಸ್ಥಳೀಯ ಅರಸರ ಆಳ್ವಿಕೆಯಲ್ಲಿ ಕಂಡುಬರುತ್ತಿದ್ದರು. ಇವರಲ್ಲಿ ವಿಜಯನಗರದ ರಾಜಧಾನಿಯಲ್ಲಿ ದಖ್ಖನಿ ಮುಸ್ಲಿಂ ಸಮುದಾಯಗಳು ಪ್ರಭುತ್ವದ ರಾಜ್ಯಾಡಳಿತದಲ್ಲಿ ಅಧಿಕಾರಿಗಳಾಗಿ ತಮ್ಮ ಪಾತ್ರವನ್ನು ನಿರ್ವಹಿಸಿದರು. ಹಾಗೆಯೇ ವ್ಯಾಪಾರಿ ವರ್ಗಗಳು ಕರಾವಳಿ ಭಾಗದ ಆರ್ಥಿಕತೆ ಹಾಗೂ ಆಡಳಿತದಲ್ಲಿ ಸಕ್ರಿಯವಾಗಿ ಕಂಡುಬಂದವು.

ಚರಿತ್ರೆ ರಚನೆಯಲ್ಲಿನ ವಾಸ್ತುಶೈಲಿಯ ವಿಧಾನವನ್ನು ಗುರುತಿಸುವ ಸಂದರ್ಭಗಳಲ್ಲಿ ಸ್ಮಾರಕಗಳು ಬಹುಮುಖ್ಯ ಪಾತ್ರ ವಹಿಸುತ್ತವೆ. ಮಧ್ಯಕಾಲೀನ ಸಂದರ್ಭದಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪದ ರಚನಾ ಶೈಲಿಯಲ್ಲಿ ಆದ ಬದಲಾವಣೆಗಳು ಅಲ್ಲಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬದಲಾವಣೆಗಳನ್ನು ತಂದವು. ಈ ಹಿನ್ನೆಲೆಯಲ್ಲಿ, ವಿಜಯನಗರದಲ್ಲಿ ನಿರ್ಮಿಸಲ್ಪಟ್ಟ ಇಂಡೋ-

ಇಸ್ಲಾಮಿಕ್ ವಾಸ್ತುಶೈಲಿಯ ಅಧ್ಯಯನವನ್ನು ಕೈಗೊಂಡಾಗ ಹಿಂದೂ-ಮುಸ್ಲಿಂ ನಡುವೆ ಇದ್ದಂತಹ ವಾಸ್ತವಿಕ ಸಂಬಂಧವನ್ನು ಗುರುತಿಸಲು ಸಹಾಯಕವಾಗುತ್ತವೆ. ಅದರ ಫಲಿತಗಳು ಸಮಾಜದಲ್ಲಿ ಪ್ರತಿಬಿಂಬಿಸುತ್ತವೆ. ವಿಜಯನಗರ ಚರಿತ್ರೆ ರಚನೆಯಲ್ಲಿ ಇಂಡೋ-ಇಸ್ಲಾಮಿಕ್ ಕಟ್ಟಡಗಳ ಬಗೆಗೆ ಸಾಕಷ್ಟು ಅಧ್ಯಯನಗಳಾಗಿವೆ. ಹಾಗೆಯೇ ವಿಜಯನಗರದಲ್ಲಿ ನಿರ್ಮಾಣಗೊಂಡಿರುವ ಕಟ್ಟಡಗಳ ಶೈಲಿಯ ರಚನೆ, ವಿನ್ಯಾಸ, ತಾಂತ್ರಿಕತೆ ಹಿನ್ನೆಲೆಯಲ್ಲಿ ನಿರ್ಮಿತವಾದ ಸ್ಮಾರಕಗಳ ಅಧ್ಯಯನಗಳು ನಡೆದಿವೆ. ಆದರೆ ವಿಜಯನಗರದಲ್ಲಿನ ಸ್ಮಾರಕಾವಶೇಷಗಳ ಅಧ್ಯಯನದ ಮೂಲಕ ಅಂದಿನ ಸಂದರ್ಭದ ರಾಜಕೀಯ, ಆರ್ಥಿಕ, ಸಾಮಾಜಿಕ ಜನಜೀವನದ ಮೇಲೆ ಆದ ಪ್ರಭಾವವನ್ನು ಗುರುತಿಸುವ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲ. ವಾಸ್ತುಶೈಲಿಯನ್ನು ಪ್ರತ್ಯೇಕವಾಗಿ ಅಧ್ಯಯನ ನಡೆಸಲಾಯಿತೇ ಹೊರತು ಅದನ್ನು ಅಂದಿನ ಜನಜೀವನದ ಜೊತೆಗಿಟ್ಟು ನೋಡುವ ಪ್ರಯತ್ನಗಳು ನಡೆಯಲಿಲ್ಲ.

ಚರಿತ್ರೆ ರಚನಾಶಾಸ್ತ್ರದಲ್ಲಿ ವಸಾಹತುಶಾಹಿಗಳು ಹಿಂದೂ-ಮುಸ್ಲಿಂ ನಡುವಿನ ಸಂಬಂಧಗಳನ್ನು ನಿರೂಪಿಸುವಾಗ ಅನೇಕ ಬಗೆಯ ಪೂರ್ವಗ್ರಹಗಳಿಂದ ಕೂಡಿದ ವಿರೋಧದ ಧೋರಣೆಗಳನ್ನು ತಳೆದಿದ್ದು, ಅವುಗಳಿಗೆ ವಿಜಯನಗರ ಸಂದರ್ಭದಲ್ಲಿ ನಿರ್ಮಾಣಗೊಂಡಿರುವ ಇಂಡೊ-ಇಸ್ಲಾಮಿಕ್ ವಾಸ್ತುಶೈಲಿಯೂ ಬಳಕೆಯಾಯಿತು. ಆದರೆ ನಿಜಾರ್ಥದಲ್ಲಿ ಹೇಳುವುದಾದರೆ ಪ್ರಭುತ್ವದ ಹಾಗೂ ಜನಸಾಮಾನ್ಯರ ಹಿನ್ನೆಲೆಯಲ್ಲಿ ಹಿಂದೂ-ಮುಸ್ಲಿಂ ನಡುವೆ ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಕಂಡುಬರುವ ಸೌಹಾರ್ದಯುತ ಸಂಬಂಧವನ್ನು ಸ್ಮಾರಕಗಳ ಅಧ್ಯಯನಗಳಿಂದ ತಿಳಿದುಕೊಳ್ಳಬಹುದು.

ವಿಜಯನಗರ ಅರಸರು ವಿಜಯನಗರ ವಾಸ್ತುಶೈಲಿಯ ಜೊತೆಗೆ ಇಸ್ಲಾಂ ವಾಸ್ತುಶೈಲಿಯನ್ನು ತಮ್ಮ ರಾಜ್ಯದಲ್ಲಿ ಅಳವಡಿಸಿಕೊಳ್ಳಲು ಮುಂದಾದರು. ಇಲ್ಲಿ ವಿಜಯನಗರ ಅರಸರಿಗೆ ಯಾವುದೋ ಒಂದು ಧರ್ಮವು ಮುಖ್ಯವಾಗಿರಲಿಲ್ಲ. ಎಲ್ಲ ಧರ್ಮದವರಿಗೂ ಪ್ರೋತ್ಸಾಹ ನೀಡಿದ್ದು, ಎಲ್ಲ ಧರ್ಮಗಳ ಸಂಸ್ಕೃತಿಯ ಪೋಷಕರಾಗಿದ್ದರು. ಆ ಕಾರಣಕ್ಕಾಗಿ ಇಲ್ಲಿ ಶೈವ, ವೈಷ್ಣವ, ಜೈನ, ಮುಸ್ಲಿಂ ಧರ್ಮೀಯರ ಸ್ಮಾರಕಗಳು ಕಂಡುಬರುತ್ತವೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಲ್ಲಿ ನಿರ್ಮಿತವಾದ ಕಟ್ಟಡಗಳು ಬಹುಮನಿಯಲ್ಲಿ ಮುಸ್ಲಿಂ ಸುಲ್ತಾನರಿಂದ ಪ್ರಚಲಿತದಲ್ಲಿದ್ದ ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯ ಪ್ರಭಾವಕ್ಕೆ ಒಳಗಾಗಿ ಸಾಂಸ್ಕೃತಿಕವಾಗಿ ಉತ್ತಮ ರಚನೆಗಳಾಗಿ ಹೊರಹೊಮ್ಮಿದವು. ಎನ್ನಬಹುದು. ಏಕೆಂದರೆ ವಿಜಯನಗರದಲ್ಲಿ ಕಂಡುಬರುವ ಇಂಡೊ-ಇಸ್ಲಾಮಿಕ್ ವಾಸ್ತುಶೈಲಿಯ ಕಟ್ಟಡಗಳಲ್ಲಿ ಹಿಂದೂ-ಮುಸ್ಲಿಂ ಶೈಲಿಯ ಮಿಶ್ರಣದ ಸ್ಮಾರಕಗಳು ಇವರ ನಡುವಿನ ಸಾಂಸ್ಕೃತಿಕ ಹಾಗೂ ರಾಜಕೀಯ ಸಂಬಂಧವನ್ನು ಪ್ರತಿಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲಿ ಈ ಎರಡು ರಾಜ್ಯಗಳ ನಡುವೆ ಕೆಲವು ರಾಜಕೀಯವಾದಂತಹ ವೈಷಮ್ಯವಿತ್ತೇ ವಿನಾ ಧಾರ್ಮಿಕ ವೈಷಮ್ಯತೆ ಇರಲಿಲ್ಲ ಎಂದು ಹೇಳಬಹುದಾಗಿದೆ.

ಇಂಡೋ-ಇಸ್ಲಾಮಿಕ್ ಶೈಲಿಯು ವಿಜಯನಗರದಲ್ಲಿ ವಿಸ್ತರಿಸುತ್ತಾ ಹೋದಂತೆ ಅದು ಸ್ಥಳೀಯ ಶೈಲಿಯಾಗಿ ರೂಪುಗೊಂಡಿತು. ಇಸ್ಲಾಂ ಶೈಲಿಯ ವಿನ್ಯಾಸ, ಆಕಾರ, ತಾಂತ್ರಿಕತೆಯನ್ನು ಕಟ್ಟಡಗಳಲ್ಲಿ ಅಳವಡಿಸಿಕೊಳ್ಳುವ ಹೊಸ ವಿಧಾನ ಆರಂಭಗೊಂಡಿತು. ವಿಜಯನಗರದಲ್ಲಿ ನಿರ್ಮಿಸಲ್ಪಟ್ಟ ಶೈಲಿಗಳಲ್ಲಿ ಕೆಲವು ಸಮಾನಾಂತರದ ಕಟ್ಟಡಗಳು ಕಂಡುಬರುತ್ತವೆ. ಉದಾಹರಣೆಗೆ ಕಡ್ಡಿರಾಂಪುರದಲ್ಲಿ ಕಂಡುಬರುವ ಸಮಾದಿ ಗೋರಿ ಕಟ್ಟಡ. ಈ ಕಟ್ಟಡ ಕಮಾನಿನ ಆಕಾರದ ವಿನ್ಯಾಸವನ್ನು ಹೊಂದಿದ್ದು, ಗುಮ್ಮಟರಹಿತ ಸ್ಮಾರಕ ಕಂಡುಬರುತ್ತದೆ. ಈ ಕಟ್ಟಡದ ಕೆಲವು ಲಕ್ಷಣಗಳನ್ನು ಹೋಲುವ ಗೋರಿ ಕಟ್ಟಡವು ಬೀದರ್‌ನಲ್ಲಿ ಕಂಡುಬರುತ್ತದೆ. ಅದು ಕ್ರಿ.ಶ. ೧೪೬೦ರಲ್ಲಿ ಬೀದರ್‌ನಲ್ಲಿ ನಿರ್ಮಾಣಗೊಂಡ ಸುಲ್ತಾನ ಅಹಮ್ಮದ್ ಷಾ ಬಹಮನಿ ಕಟ್ಟಡ. ಈ ಗೋರಿ ಕಟ್ಟಡದಲ್ಲಿ ಕಂಡುಬರುವ ಕಮಾನಿನ ಆಕಾರ ಹಾಗೂ ವಿನ್ಯಾಸದಲ್ಲಿ ಸಮಾನ ಲಕ್ಷಣಗಳನ್ನು ಗುರುತಿಸಬಹುದು.

ಇಂಡೋ-ಇಸ್ಲಾಮಿಕ್ ಕಟ್ಟಡಗಳ ನಿರ್ಮಾಪಕರು ಮೂಲತಃ ಪರ್ಶಿಯಾದ ಶಿಲ್ಪಿಗಳು. ಬಹಮನಿ ಸುಲ್ತಾನರು ತಮ್ಮ ಸ್ಮಾರಕ ನಿರ್ಮಾಣಕ್ಕೆ ಪರ್ಶಿಯಾದ ಕುಶಲಕರ್ಮಿಗಳನ್ನು ರಾಜ್ಯದಲ್ಲಿ ನೇಮಿಸಿಕೊಂಡಿದ್ದರು. ಉದಾಹರಣೆಗೆ ೧೪ನೇ ಶತಮಾನದಲ್ಲಿ(೧೩೬೭) ನಿರ್ಮಿತ ಗುಲ್ಬರ್ಗ ಕೋಟೆಯ ಜಾಮಿ ಮಸೀದಿಯನ್ನು ಪರ್ಶಿಯಾದ ಶಿಲ್ಪಿ ರಫಿ ಎಂಬಾತನು ನಿರ್ಮಿಸಿದ್ದನು ಎಂಬ ಉಲ್ಲೇಖ ಕಂಡುಬರುತ್ತದೆ. ವಿಜಯನಗರ ಸಾಮ್ರಾಜ್ಯದಲ್ಲಿ ಮುಸ್ಲಿಂ ಕುಶಲಕರ್ಮಿಗಳ ಉಲ್ಲೇಖಗಳು ಕಂಡುಬರುವುದಿಲ್ಲ. ಹಾಗಾಗಿ ಈ ಉಲ್ಲೇಖದ ಆಧಾರದ ಮೇಲೆ ವಿಜಯನಗರದಲ್ಲಿ ಪರ್ಶಿಯಾದ ಕುಶಲಕರ್ಮಿ ಸಮುದಾಯ ವಾಸವಾಗಿತ್ತೆಂದು ಊಹಿಸಬಹುದು. ಹಾಗೆಯೇ ವಿಜಯನಗರ ರಾಜ್ಯದಲ್ಲಿ ಸೈನಿಕವರ್ಗ, ಅಧಿಕಾರಿವರ್ಗ ಹಾಗೂ ಕುಶಲಕರ್ಮಿಗಳಲ್ಲಿ ಮುಸ್ಲಿಂ ವರ್ಗವಿತ್ತೆಂದು ಹೇಳಬಹುದು. ಇದಕ್ಕೆ ಸಂಬಂಧಿಸಿದಂತೆ ಸಮಗ್ರವಾಗಿ ಅಲ್ಲದಿದ್ದರೂ ಬಿಡಿಬಿಡಿಯಾದ ಸಾಕ್ಷ್ಯಗಳು ಸಿಗುತ್ತವೆ.

ಇಂಡೋ-ಇಸ್ಲಾಮಿಕ್ ಸ್ಮಾರಕ ನಿರ್ಮಾಣದಲ್ಲಿ ಪರ್ಶಿಯಾದ ವಾಸ್ತುಶಿಲ್ಪವನ್ನು ಇಲ್ಲಿನ ಸ್ಥಳೀಯ ವಾಸ್ತುಶಿಲ್ಪಿಗಳು ಅಳವಡಿಸಿಕೊಂಡರು. ಹಿಂದೂ ಮತ್ತು ಮುಸ್ಲಿಂ ವಾಸ್ತುಶೈಲಿಯ ಸಂಮಿಶ್ರಣವು ಸ್ಥಳಿಯ ಶೈಲಿಯಾಗಿ ಹೊಂದಿದ ಕೆಲವು ಸ್ಮಾರಕಗಳು ಹಂಪಿಯಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಅಹಮ್ಮದ್ ಖಾನ್ ಕಟ್ಟಿಸಿದ ಮಸೀದಿ ಕಟ್ಟಡ. ಈ ಕಟ್ಟಡ ಕಂಬಗಳು ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿವೆ. ಮಸೀದಿಯ ಮಧ್ಯದಲ್ಲಿ ಮಿಹಾರ್ ವಾಸ್ತುಶೈಲಿಯು ಇದೆ. ಈ ಸ್ಮಾರಕ ಕಟ್ಟಡದಿಂದ ಎರಡು ಅಂಶಗಳನ್ನು ಗುರುತಿಸಬಹುದು. ಒಂದು ಪರ್ಶಿಯಾದ ವಾಸ್ತುಶಿಲ್ಪಿಗಳು ವಿಜಯನಗರ ಸ್ಮಾರಕ ನಿರ್ಮಾಣದಲ್ಲಿ ತೊಡಗಿದ್ದರು ಹಾಗೂ ಈ ಶಿಲ್ಪಿಗಳು ಸ್ಥಳಿಯ ಕುಶಲಕರ್ಮಿ ಶಿಲ್ಪಿಗಳ ಮೇಲೆ ಪ್ರಭಾವ ಬೀರಿದ್ದರು. ಇದರಿಂದ ವಿಜಯನಗರ ಸ್ಮಾರಕ ನಿರ್ಮಾಣದಲ್ಲಿ ಸ್ಥಳೀಯತೆಯು ಬೆಳೆದುಕೊಂಡಿತು.

ವಿಜಯನಗರ ಸಾಮ್ರಾಜ್ಯವು ನಾಲ್ಕು ವಂಶಗಳ ಮೂಲಕ ದೀರ್ಘ ಆಳ್ವಿಕೆಯನ್ನು ಕಂಡಿದ್ದು, ಚರಿತ್ರೆ ರಚನೆಯಲ್ಲಿ ಮತಪಂಥಗಳ ಹಿನ್ನೆಲೆಯಲ್ಲಿಯೇ ಹೆಚ್ಚು ಚರ್ಚಿತವಾಯಿತು. ಈ ಸಾಮ್ರಾಜ್ಯವು ತನ್ನ ಉಳಿವಿಗಾಗಿ ಅನೇಕ ಧರ್ಮಗಳಿಗೆ ಆಶ್ರಯ ತಾಣವೂ ಆಯಿತು. ಅವುಗಳಲ್ಲಿ ಮುಸ್ಲಿಂ ಧರ್ಮವೂ ಒಂದು. ಇಲ್ಲಿ ಧರ್ಮಗಳು ಪ್ರಭುತ್ವಗಳ ಅಗತ್ಯತೆಗಾಗಿ ಹಲವು ಬಾರಿ ಭಿನ್ನ ರೀತಿಯಾಗಿ ಬಳಕೆ ಯಾಗಿದ್ದರೂ ಅಂತಿಮವಾಗಿ ಜನಸಾಮಾನ್ಯರನ್ನು ತಲುಪುವ ವೇಳೆಗೆ ಅವು ತಮ್ಮ ಬಿಗಿ ಹಿಡಿತವನ್ನು ಕಳೆದುಕೊಂಡು ಸಾಂಸ್ಕೃತಿಕವಾಗಿ ಹೊಂದಾಣಿಕೆಯ ಜೀವನವನ್ನು ನಡೆಸುವ ಹಂತವನ್ನು ತಲುಪಿದ್ದವು ಎನ್ನಬಹುದು.

ಅಧ್ಯಯನದ ಫಲಿತಗಳು

೧. ವಿಜಯನಗರದ ಚರಿತ್ರೆ ಬರವಣಿಗೆಯು ಹಿಂದೂ–ಮುಸ್ಲಿಂ ನಿರೂಪಣೆಗಳ ಸುತ್ತ ಕೇಂದ್ರೀಕೃತ ವಾಗಿರುವುದರ ಹಿನ್ನೆಲೆಯನ್ನು ಹಾಗೂ ಅದರ ಹಿಂದಿರುವ ಪೂರ್ವಗ್ರಹಿತ ಧೋರಣೆಗಳನ್ನು ಹಾಗೂ ಅಜೆಂಡಾಗಳನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೨. ವಿಜಯನಗರ ಚರಿತ್ರೆಯ ಧಾರ್ಮಿಕ ವಿಶ್ಲೇಷಣೆ ಹಾಗೂ ಅದು ಕಮ್ಯೂನಲ್ ಸ್ವರೂಪವನ್ನು ಪಡೆದುಕೊಂಡಿರುವುದು ಚಾರಿತ್ರಿಕ ಸತ್ಯಗಳನ್ನು ಮರೆಮಾಚುವ ಹಾಗೂ ತಿರುಚುವ ಕಾರ್ಯಕ್ಕೆ ನೇರ ಬಳಕೆಯಾಯಿತು. ಈ ಅಂಶವನ್ನು ಸೂಕ್ಷ್ಮವಾಗಿ ಗಮನಿಸಲಾಗಿದೆ.

೩. ವಿಜಯನಗರದ ಅರಸರು ನಿಜವಾಗಲೂ ಮುಸ್ಲಿಂ ವಿರೋಧಿಗಳಾಗಿದ್ದರೇ? ಅಥವಾ ವಿಜಯನಗರದ ಚರಿತ್ರೆ ರಚನೆಯಲ್ಲಿ ಅವರನ್ನು ಆ ರೀತಿ ಬಿಂಬಿಸಲಾಗಿದೆಯೇ? ಎನ್ನುವ ಮಹತ್ವದ ಪ್ರಶ್ನೆಗಳಿಗೆ ಮಹಾಪ್ರಬಂಧದಲ್ಲಿ ಉತ್ತರಗಳನ್ನು ಕಂಡುಕೊಳ್ಳಲಾಗಿದೆ. ಚರಿತ್ರೆಯಲ್ಲಿ ವಿಜಯನಗರ ಹಾಗೂ ಚರಿತ್ರೆ ರಚನೆಯಲ್ಲಿ ವಿಜಯನಗರ ಎನ್ನುವ ಅಧ್ಯಯನ ವಿಧಾನದ ಮೂಲಕ ವಿಜಯನಗರದ ಅರಸರ ಧೋರಣೆಗಳನ್ನು ಹಾಗೂ ವಿಜಯನಗರದ ಕುರಿತು ಅಧ್ಯಯನ ನಡೆಸಿದ ಅಧ್ಯಯಕಾರರ ಧೋರಣೆಗಳನ್ನು ಅರ್ಥೈಸಿಕೊಳ್ಳಲಾಗಿದೆ.

೪. ವಿಜಯನಗರ ಆಳ್ವಿಕೆಯಲ್ಲಿ ಕಂಡುಬರುವ ಮುಸ್ಲಿಂ ಸಮುದಾಯಗಳ ಚಾರಿತ್ರಿಕ ಹಿನ್ನೆಲೆಯನ್ನು ಮಹಾಪ್ರಬಂಧದಲ್ಲಿ ಗುರುತಿಸಲಾಗಿದೆ. ಅರೇಬಿಯಾ ಹಾಗೂ ಪರ್ಶಿಯಾದಿಂದ ಆಗಮಿಸಿದ ವಿವಿಧ ಸಮುದಾಯಗಳು ಉತ್ತರ ಭಾರತದಲ್ಲಿ ಹಾಗೂ ದಕ್ಷಿಣ ಭಾರತದಲ್ಲಿ ತಮ್ಮ ವಸತಿ ಹಾಗೂ ವ್ಯಾಪಾರಿ ನೆಲೆಗಳನ್ನು ಕಂಡುಕೊಂಡಿರುವ ಅಂಶವನ್ನು ಸಂಬಂಧಿಸಿದ ದಾಖಲೆಗಳ ಮೂಲಕ ಕಂಡುಕೊಳ್ಳಲಾಗಿದೆ.

೫. ಮಧ್ಯಕಾಲೀನ ಸಂದರ್ಭದಲ್ಲಿ ದಕ್ಷಿಣ ಭಾರತದಲ್ಲಿ ಸ್ಥಳೀಯವಾಗಿ ಕಾಣಿಸಿಕೊಂಡ ಮುಸ್ಲಿಂ ಸಮುದಾಯಗಳ ಸಾಮಾಜಿಕ ರಚನೆಯನ್ನು ಹಾಗೂ ಒಳರಚನೆಯನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.

೬. ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ದಕ್ಷಿಣ ಭಾರತದಾದ್ಯಂತ ನೆಲೆಸಿದ್ದ ವಿವಿಧ ಮುಸ್ಲಿಂ ಸಮುದಾಯಗಳ ಬಹುಮುಖಿ ಚಟುವಟಿಕೆಗಳನ್ನು ಹಾಗೂ ಅವು ಸ್ಥಳೀಯ ಸಂಸ್ಕೃತಿಯೊಂದಿಗೆ ಇಟ್ಟುಕೊಂಡಿದ್ದ ಕೊಡು–ಕೊಳ್ಳುವಿಕೆಯ ಸಂಬಂಧವನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.

೭. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿದ್ದ ತೆಲುಗು, ತಮಿಳು. ಮಲಯಾಳಂ ಹಾಗೂ ಕನ್ನಡ ಭಾಷಿಕ ಪ್ರದೇಶಗಳಲ್ಲಿದ್ದ ಪ್ರಮುಖ ಮುಸ್ಲಿಂ ನೆಲೆಗಳು, ಮುಸ್ಲಿಂ ಸಮುದಾಯಗಳು ಹಾಗೂ ಮುಸ್ಲಿಂ ವರ್ತಕ ಸಂಘಗಳನ್ನು ಗುರುತಿಸಿ ಮಹಾಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ. ಅದೇ ರೀತಿ ಬಹಮನಿ ಹಾಗೂ ಶಾಹಿ ಸುಲ್ತಾನರ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶಗಳಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಮುಸ್ಲಿಂ ವರ್ತಕರ ಕುರಿತಾಗಿಯೂ ಚರ್ಚಿಸಲಾಗಿದೆ.

೮. ಮುಸ್ಲಿಂ ಸಮುದಾಯಗಳು ಸ್ಥಳೀಯವಾಗುತ್ತಾ ಹೋದ ಹಾಗೆ ತಮ್ಮ ವೃತ್ತಿ ಹಾಗೂ ಸಾಮಾಜಿಕ ಜೀವನದಲ್ಲಿ ಮಾಡಿಕೊಂಡ ಮಾರ್ಪಾಡುಗಳು ಹಾಗೂ ಅದರ ಮೂಲಕ ಹುಟ್ಟು ಹಾಕಿದ ಸಂಮಿಶ್ರ ಸಂಸ್ಕೃತಿಯ ವಿವಿಧ ನೆಲೆಗಳನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೯. ಮುಸ್ಲಿಂ ಸಂಸ್ಕೃತಿಯೊಂದಿಗೆ ದಕ್ಷಿಣ ಭಾರತಕ್ಕೆ ಪ್ರವೇಶಿಸಿದ ಹೊಸ ಸಿದ್ಧಾಂತ, ಭಾಷೆ, ವಾಸ್ತುಶೈಲಿ ಹಾಗೂ ಆಚರಣೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಮಹಾಪ್ರಬಂಧದಲ್ಲಿ ಚರ್ಚಿಸಿ ಅದರ ಮಹತ್ವ ಹಾಗೂ ಪ್ರಭಾವವನ್ನು ಕಂಡುಕೊಳ್ಳಲಾಗಿದೆ.

೧೦. ಸೂಫಿ ಸಿದ್ಧಾಂತವು ದಕ್ಷಿಣ ಭಾರತದಾದ್ಯಂತ ಪ್ರಚಾರವಾಗುತ್ತಿದ್ದಂತೆ ಅದಕ್ಕೆ ಸಿಕ್ಕಿದ ರಾಜಾಶ್ರಯ ಹಾಗೂ ಜನಬೆಂಬಲವನ್ನು ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದ್ದು, ಸೂಫಿ ಚಿಂತನೆಯ ಪ್ರಭಾವವನ್ನು ಗುರುತಿಸಲಾಗಿದೆ.

೧೧. ವಿಜಯನಗರ ಆಳ್ವಿಕೆಯಲ್ಲಿ ಮನೆ ಮಾಡಿದ್ದ ಧಾರ್ಮಿಕ ಸಾಮರಸ್ಯವನ್ನು ಮುಸ್ಲಿಂ ಪ್ರಜೆಗಳಿಗೆ ನೀಡಿದ್ದ ಅಧಿಕಾರ ಹಾಗೂ ಸವಲತ್ತುಗಳ ಮೂಲಕ ಕಂಡುಕೊಳ್ಳಲಾಗಿದೆ. ಮುಸ್ಲಿಂ ಪ್ರಜೆಗಳು ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ವ್ಯಾಪಾರಿಗಳಾಗಿ, ಅಧಿಕಾರಿಗಳಾಗಿ ಹಾಗೂ ಸೈನಿಕರಾಗಿ ಗುರುತಿಸಿಕೊಂಡಿದ್ದರು. ಅದೇ ರೀತಿ ತಮ್ಮ ನಂಬಿಕೆ ಹಾಗೂ ಆಚರಣೆಗಳಿಗೆ ಸಂಬಂಧಪಟ್ಟಂತೆ ಮುಕ್ತವಾದ ಸ್ವಾತಂತ್ರ್ಯವನ್ನು ಹೊಂದಿದ್ದರು.

೧೨. ಜಾಗತಿಕ ಮಟ್ಟದಲ್ಲಿ ಪ್ರಧಾನ ವರ್ತಕರಾಗಿ ಗುರುತಿಸಿಕೊಂಡಿದ್ದ ಅರೇಬಿಯನ್ನರು ಹಾಗೂ ಪರ್ಶಿಯನ್ನರು ಭಾರತಕ್ಕೆ, ಅದರಲ್ಲೂ ದಕ್ಷಿಣ ಭಾರತಕ್ಕೆ, ಪ್ರವೇಶಿಸಿದ ಬಳಿಕ ಸ್ಥಳೀಯ ಕೃಷಿವ್ಯವಸ್ಥೆ ಹಾಗೂ ನಗರವ್ಯವಸ್ಥೆಗಳಲ್ಲಾದ ಬದಲಾವಣೆಗಳು ಹಾಗೂ ಹೊಸ ಪ್ರಯೋಗಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ.

೧೩. ವಿಜಯನಗರದ ಆಳ್ವಿಕೆಗೆ ಒಳಪಟ್ಟಿದ್ದ ಪಶ್ಚಿಮ ಹಾಗೂ ಪೂರ್ವ ಕರಾವಳಿ ಪ್ರದೇಶಗಳ ಆರ್ಥಿಕತೆಯಲ್ಲಿ ಮುಸ್ಲಿಂ ಸಮುದಾಯಗಳು ವಹಿಸಿದ ಪ್ರಧಾನ ಪಾತ್ರದ ಕುರಿತು

ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ. ಒಂದು ಹಂತದಲ್ಲಿ ವ್ಯಾಪಾರದ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸಿಕೊಂಡಿದ್ದ ಮುಸ್ಲಿಂ ಸಮುದಾಯಗಳು ನಿರ್ಣಾಯಕವೆಂಬಂತೆ ಗುರುತಿಸಿಕೊಂಡಿದ್ದವು. ಕರಾವಳಿ ತೀರದಲ್ಲಿ ಮುಸ್ಲಿಂ ಸಂಸ್ಕೃತಿಯ ಈ ಪ್ರಭಾವವನ್ನು ಇಂದಿಗೂ ಕಾಣಬಹುದಾಗಿದೆ.

೧೪. ಪೋರ್ಚುಗೀಸರ ಆಗಮನದ ಬಳಿಕ ದಕ್ಷಿಣ ಭಾರತದಲ್ಲಿ ಮುಸ್ಲಿಂ ವ್ಯಾಪಾರಕ್ಕಾದ ಹಿನ್ನಡೆಯನ್ನು ಹಾಗೂ ಅದರಿಂದಾಗಿ ಹಲವಾರು ಮುಸ್ಲಿಂ ಸಮುದಾಯಗಳು ತಮ್ಮ ವೃತ್ತಿಯನ್ನು ಬದಲಾಯಿಸಿಕೊಂಡು ಸ್ಥಳೀಯ ವೃತ್ತಿಗಳಲ್ಲಿ ತೊಡಗಿಸಿಕೊಳ್ಳುವ ಅನಿವಾರ್ಯತೆಗೆ ಒಳಗಾಗಿದ್ದನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೧೫. ಪೋರ್ಚುಗೀಸ್ ವ್ಯಾಪಾರದ ಏರುಮುಖ ಹಾಗೂ ಮುಸ್ಲಿಂ ವ್ಯಾಪಾರದ ಇಳಿಮುಖ ವಿಜಯನಗರ ಸಾಮ್ರಾಜ್ಯದ ರಾಜಕಾರಣ ಹಾಗೂ ಆರ್ಥಿಕತೆಯ ಮೇಲೆ ಬೀರಿದ ಪರಿಣಾಮಗಳನ್ನು ಮಹಾಪ್ರಬಂಧದಲ್ಲಿ ಕಂಡುಕೊಳ್ಳಲಾಗಿದೆ.

೧೬. ವಿಜಯನಗರದ ಆಳ್ವಿಕೆಯ ಮೇಲಾದ ಮುಸ್ಲಿಂ ಪ್ರಭಾವವನ್ನು ವಾಸ್ತುಶೈಲಿಯ ಮೂಲಕ ಗುರುತಿಸಲು ಪ್ರಯತ್ನಿಸಲಾಗಿದೆ. ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ಹೆಚ್ಚು ಪ್ರಚಾರವನ್ನು ಪಡೆದುಕೊಂಡಿದ್ದ ಹಾಗೂ ಆಕರ್ಷಣೀಯವಾದ ವಾಸ್ತುಶೈಲಿಯೆಂದರೆ ಇಂಡೋ–ಇಸ್ಲಾಮಿಕ್ ವಾಸ್ತುಶೈಲಿ. ಈ ವಾಸ್ತುಶೈಲಿಯ ಉಗಮ, ಬೆಳವಣಿಗೆ ಹಾಗೂ ವಿಜಯನಗರದ ಆಳ್ವಿಕೆಯಲ್ಲಿ ಅದು ಪಡೆದುಕೊಂಡಿದ್ದ ರಾಜಮನ್ನಣೆ ಹಾಗೂ ಪ್ರೋತ್ಸಾಹವನ್ನು ಕಂಡುಕೊಳ್ಳಲಾಗಿದೆ. ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯಲ್ಲಿ ವಿಜಯನಗರ ಸಾಮ್ರಾಜ್ಯದಾದ್ಯಂತ ನಿರ್ಮಾಣ ಗೊಂಡ ಸ್ಮಾರಕಗಳನ್ನು ಇಲ್ಲಿ ಅಧ್ಯಯನಿಸಲಾಗಿದ್ದು, ಅದರ ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಅದೇ ರೀತಿ ಈ ಶೈಲಿಯು ಸ್ಥಳೀಯ ವಾಸ್ತುಶೈಲಿಗಳೊಂದಿಗೆ ಬೆರೆತು ನಿರ್ಮಾಣಗೊಂಡ ಹೊಸ ಸಂಮಿಶ್ರ ವಾಸ್ತುಶೈಲಿಯನ್ನು ಸ್ಮಾರಕಗಳ ಮೂಲಕ ಗುರುತಿಸ ಲಾಗಿದೆ. ಮುಸ್ಲಿಂ ಕುಶಲಕರ್ಮಿಗಳ ನೈಪುಣ್ಯತೆಯನ್ನು ಹಾಗೂ ಸೂಕ್ಷ್ಮತೆಯನ್ನು ಮಹಾಪ್ರಬಂಧ ದಲ್ಲಿ ಕಂಡುಕೊಳ್ಳಲಾಗಿದೆ.

೧೭. ವಿಜಯನಗರ ಸಾಮ್ರಾಜ್ಯವು ಮತೀಯ ಸಾಮ್ರಾಜ್ಯವಾಗಿರಲಿಲ್ಲ. ಆ ಸಾಮ್ರಾಜ್ಯದೊಂದಿಗೆ ನಾನಾ ಜಾತಿ ಹಾಗೂ ಧರ್ಮದ ಸಮುದಾಯಗಳು ಬದುಕು ನಡೆಸುತ್ತಿದ್ದವು ಹಾಗೂ ರಾಜ್ಯವ್ಯವಸ್ಥೆ ರೂಪುಗೊಳ್ಳುವುದಕ್ಕೂ ನೆರವಾಗುತ್ತಿದ್ದವು ಎನ್ನುವ ಅಂಶವನ್ನು ಪ್ರಸ್ತುತ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೮. ವಿಜಯನಗರದ ಆಳ್ವಿಕೆಯ ಸಂದರ್ಭದಲ್ಲಿ ಉತ್ತರ ಭಾರತದಲ್ಲಿ ದೆಹಲಿ ಸುಲ್ತಾನರು ಹಾಗೂ ಮೊಗಲರು, ಮಧ್ಯ ಭಾರತದಲ್ಲಿ ಬಹಮನಿಗಳು ಹಾಗೂ ಶಾಹಿ ರಾಜಮನೆತನಗಳು ಆಳ್ವಿಕೆ ನಡೆಸುತ್ತಿದ್ದುದ್ದರಿಂದಾಗಿ ಸಹಜವಾಗಿಯೇ ಮುಸ್ಲಿಂ ರಾಜ್ಯಾಡಳಿತ ವ್ಯವಸ್ಥೆ, ಮುಸ್ಲಿಂ

ಭಾಷೆ, ಮುಸ್ಲಿಂ ಸಿದ್ಧಾಂತ ಹಾಗೂ ಮುಸ್ಲಿಂ ವಾಸ್ತುಶೈಲಿ ಹೆಚ್ಚಿನ ಪ್ರಚಾರವನ್ನು ಪಡೆದು ಕೊಂಡಿತ್ತು. ಮುಸ್ಲಿಂ ಸಂಸ್ಕೃತಿಯ ಈ ಎಲ್ಲ ಅಂಶಗಳು ವಿಜಯನಗರದ ಮೇಲೆ ದಟ್ಟವಾದ ಪ್ರಭಾವವನ್ನು ಬೀರಿದವು. ಈ ಪ್ರಭಾವವನ್ನು ವಿಜಯನಗರದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಬದುಕಿನ ಮೂಲಕ ಗುರುತಿಸಲಾಗಿದೆ. ಹಿಂದೂ-ಮುಸ್ಲಿಂ ಸಂಬಂಧಗಳನ್ನು ಕೇವಲ ಯುದ್ಧ ಮತ್ತು ಒಪ್ಪಂದಗಳಿಗಷ್ಟೇ ಸೀಮಿತಗೊಳಿಸದೆ ಅದರಾಚೆಗಿನ ಸಾಮಾಜಿಕ ಹಾಗೂ ಆರ್ಥಿಕ ಸಂಬಂಧಗಳ ಮೂಲಕ ಮಹಾಪ್ರಬಂಧದಲ್ಲಿ ನೋಡಲಾಗಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ನಕ್ಷೆಗಳು

೩. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

ಪ್ರಕಟಿತ ಗ್ರಂಥಗಳು

ಅಪರ್ಣ ಕೂ.ಸ., ಸಂಗಮರ ಕಾಲದ ದೇವಾಲಯಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೮.

ಕುಲಕರ್ಣಿ ಎಲ್.ಆರ್., ಬಹಮನಿ ರಾಜ್ಯ, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೭೨.

ಕೃಷ್ಣಕೊಲ್ಹಾರ ಕುಲಕರ್ಣಿ(ಅನು), ಮಹಮ್ಮದ್ ಇಬ್ರಾಹಿಮ ಜುಬೇರಿ(ಮೂಲ)., ಬುಸಾತಿನೆ ಸಲಾತೀನೆ, ಬಿಜಾಪುರ ಆದಿಲ್‌ಶಾಹಿಗಳ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಕೃಷ್ಣರಾವ್ ಎಂ.ವಿ., ಕೇಶವಭಟ್ಟ.ಎಂ., ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು, ೧೯೭೦.

ಕೊಟ್ರಯ್ಯ ಸಿ.ಟಿ.ಎಂ., ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಕೊಟ್ರೇಶ್ ಎಂ., ಬಳ್ಳಾರಿ ಜಿಲ್ಲೆಯ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ಕೋಡದ ಎಸ್.ಬಿ., ವಿಜಯನಗರ ಸಾಮ್ರಾಜ್ಯ ಹಾಗೂ ಹಿಂದೂ ಮುಸ್ಲಿಂ ಬಾಂಧವ್ಯ, ಎಸ್.ಬಿ.ಕೋಡದ ಪ್ರಕಾಶಕರು, ಧಾರವಾಡ, ೧೯೬೬.

ಕೋಡದ ಎಸ್.ಬಿ., ವಿಜಯನಗರದ ಉಚ್ಛ್ರಾಯ ಕಾಲ(೧೫೪೨–೬೪), ಪ್ರಭಾ ಪಬ್ಲಿಷರ್ಸ್, ಧಾರವಾಡ, ೧೯೬೬.

ಕೋಡದ ಎಸ್.ಬಿ., ತಾಳಿಕೋಟೆ ಯುದ್ಧ, ಪ್ರಭಾ ಪಬ್ಲಿಷರ್ಸ್, ಧಾರವಾಡ, ೧೯೯೯.

ಗೋವಿಂದರಾಜು ಸಿ.ಆರ್., ಕನ್ನಡಮ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫.

ಗೋವಿಂದ ರಾಜು ಸಿ.ಆರ್., ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೦೬.

ಗೋವಿಂದರಾಜು ಸಿ.ಆರ್.(ಸಂ)., ಚಾರಿತ್ರಿಕ ಕರ್ನಾಟಕ, ಗ್ರಂಥಾಲಯ ಸಮಿತಿ, ಪ್ರಧಾನ ಮಂಡಲ, ಬೆಂಗಳೂರು, ೨೦೧೧.

ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯.

ಚೆನ್ನಸ್ವಾಮಿ ಸೋಸಲೆ ಎನ್., ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೪.

ಚೆನ್ನಸ್ವಾಮಿ ಸೋಸಲೆ ಎನ್., ಕರ್ನಾಟಕ ರಾಜಕೀಯ ಚರಿತ್ರೆ ಮತ್ತು ಸಾಹಿತ್ಯ, ಸಿವಿಜಿ ಪಬ್ಲಿಕೇಶನ್ಸ್, ಬೆಂಗಳೂರು, ೨೦೧೧.

ಚೆನ್ನಸ್ವಾಮಿ ಸೋಸಲೆ ಎನ್., ನಾಲ್ವಡಿ ಕೃಷ್ಣನ ಮೈಸೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಚೆನ್ನಸ್ವಾಮಿ ಸೋಸಲೆ ಎನ್., ಭಾರತಿಯ ಸಮಾಜ ಮತ್ತು ದಲಿತರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಚಲುವರಾಜು, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಜೋತ್ಸ್ನಾ ಕಾಮತ್, ಕರುನಾಡ ಜನಜೀವನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ೨೦೦೮.

ದೀಕ್ಷಿತ್ ಜಿ.ಎಸ್. ಮತ್ತು ಇತರರು., ಶ್ರೀಕೃಷ್ಣದೇವರಾಯ ಜೀವನ ಸಾಧನೆಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ನಿರ್ದೇಶನಾಲಯ, ಮೈಸೂರು, ೧೯೯೭.

ದೇಸಾಯಿ ಪಿ.ಬಿ. ೨೦೦೮, (ದ್ವಿತೀಯ ಆವೃತ್ತಿ) ವಿಜಯನಗರ ಸಾಮ್ರಾಜ್ಯ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ.

ದೇಸಾಯಿ ಪಿ.ಬಿ., ವಿಜಯನಗರ ಸಾಮ್ರಾಜ್ಯ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ೨೦೦೮.

ನರಸಿಂಹಮೂರ್ತಿ ಎ.ವಿ., ವಿಜಯನಗರ ನಾಣ್ಯ ಸಂಪತ್ತು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೬.

ನಾಗಣ್ಣ ಸಿ.(ಅನು), ಎಸ್.ಚಂದ್ರಶೇಖರ್(ಮೂಲ), ದಕ್ಷಿಣ ಭಾರತ–ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ನಾಗರಾಜು ಎಚ್.ಎಂ., ವಿಜಯನಗರದ ಇಮ್ಮಡಿದೇವರಾಯ, ಸಂವಹನ ಪ್ರಕಾಶನ, ಮೈಸೂರು, ೧೯೯೯.

ಪರಮಶಿವಮೂರ್ತಿ ಡಿ.ವಿ.(ಸಂ.), ಪ್ರೌಢದೇವರಾಯನ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಪರಮಶಿವಮೂರ್ತಿ ಡಿ.ವಿ.(ಸಂ.), ಕೃಷ್ಣದೇವರಾಯನ ಶಾಸನಗಳು, ಸಂ.–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಪರಮೇಶ್ವರಪ್ಪ ಟಿ.(ಸಂ.), ಹಂಪಿ ಪರಂಪರೆ, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ೧೯೯೬.

ಪುರುಷೋತ್ತಮ ಬಿಳಿಮಲೆ ಮತ್ತು ಚಲುವರಾಜು, ಹಂಪಿ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬.

ಪ್ರಭಾಕರ್ ಎಂ.ಎನ್., ದೇವಾಲಯ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ಬಾರ್ಕೂರು ಉದಯ, ವಾಸ್ತವದ ಒಡಕುಗಳು ಇತಿಹಾಸದ ತೊಡಕುಗಳು, ಚಿಂತನ ಪ್ರಕಾಶ, ಬೆಂಗಳೂರು, ೨೦೧೨.

ಬಾಲಸುಬ್ರಹ್ಮಣ್ಯ(ಅನು)., ಸೂರ್ಯನಾರಾಯಣ ರಾವ್.ಬಿ.(ಮೂಲ)., ಮರೆಯಲಾಗದ ಮಹಾಸಾಮ್ರಾಜ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಮಂಜುನಾಥ ಬೇವಿನಕಟ್ಟಿ(ಸಂ.), ವಿಜಯನಗರ ಸಾಂಸ್ಕೃತಿಕ ಆಯಾಮಗಳು, ಶ್ರೀ ವಿದ್ಯಾ ವಿಜಯನಗರ ಹಂಪಿ ಹೆರಿಟೇಜ್ ಟ್ರಸ್ಟ್, ಆನೆಗೊಂದಿ, ೧೯೯೭.

ಮಲ್ಲಾಪುರ ಬಿ.ವಿ., ಪ್ರೌಢದೇವರಾಯ ವಿಜಯಕಲ್ಯಾಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಮುರಿಗೆಪ್ಪ ಎ.(ಪ್ರ.ಸಂ.), ಪರಮಶಿವಮೂರ್ತಿ ಡಿ.ವಿ.(ಸಂ.), ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಮಹದೇವ ಸಿ., ವಿಜಯನಗರದ ಗಾರೆಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಮಹದೇವ ಸಿ., ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ, ೨೦೦೦.

ಮಹದೇವ ಸಿ., ಕುಮ್ಮಟದುರ್ಗದ ಅರಸರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೨೦೦೯.

ಮಹದೇವ ಸಿ. ಮತ್ತು ಚಿನ್ನಸ್ವಾಮಿ ಸೋಸಲೆ ಎನ್., ಹಂಪಿ ಅಂದು–ಇಂದು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಹದೇವ ಸಿ., ಸುಬ್ಬಣ್ಣ ರೈ, ಮಾಧವ ಪೆರಾಜೆ, ಹೊಸಪೇಟೆ ತಾಲ್ಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಮೊಗಳ್ಳಿ ಗಣೇಶ್, ಹಂಪಿ ಜೀವಜಾಲ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಮೋಹನ್‌ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಮೋಹನ್‌ಕೃಷ್ಣ ರೈ ಕೆ., ವಸಾಹತುಪೂರ್ವ ಕರ್ನಾಟಕದ ನಗರ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬.

ಮೋಹನ್‌ಕೃಷ್ಣ ರೈ ಕೆ., ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಬಳ್ಳಾರಿ, ೨೦೦೯.

ಮೋಹನ್‌ಕೃಷ್ಣ ರೈ ಕೆ., ವಸಾಹತುಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಮೋಹನ್‌ಕೃಷ್ಣ ರೈ ಕೆ., ಕೆನರಾ ವಿಭಜನೆ ಹತ್ತಿಯ ರಾಷ್ಟ್ರೀಯ ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಮೋಹನ್‌ಕೃಷ್ಣ ರೈ ಕೆ., ತುಳುನಾಡು ಕನ್ನಡ ನುಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಮೋಹನ್‌ಕೃಷ್ಣ ರೈ ಕೆ., ಯುದ್ಧ ಮತ್ತು ಒಪ್ಪಂದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೭.

ಲಲಿತಾಂಬ ಎನ್.ಆರ್., ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಸಂಚಲನ, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಪುರ, ಬೆಂಗಳೂರು, ೨೦೧೧.

ರಮೇಶ ನಾಯಕ (ಸಂ.), ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ರಾಘವೇಂದ್ರರಾವ್ ವಿ., ವಿಜಯನಗರ, ಎಚ್.ವೆಂಕಟರಾಮಯ್ಯ ಅಂಡ್ ಸನ್ಸ್, ಮೈಸೂರು, ೧೯೪೯.

ರಾಜಶೇಖರ ಎಸ್.ಎಸ್., ವಿಜಯನಗರ ಕಾಲದ ಘಟನಾವಳಿ ಸೂದೆ, ಸುಜಾತ ಪಬ್ಲಿಕೇಶನ್ಸ್, ಧಾರವಾಢ, ೧೯೭೫.

ರಾಮಯ್ಯಂಗಾರ್ ಹೆಚ್.ಜಿ., ಮುಸಲ್ಮಾನರ ಆಳ್ವಿಕೆಯಲ್ಲಿ ಭಾರತ, ಹೆಚ್.ಜಿ. ರಾಮಯ್ಯಂಗಾರ್ ಪ್ರಕಾಶನ, ಬೆಂಗಳೂರು, ೧೯೯೬.

ರೋಮಿಲಾ ಥಾಫರ್ ಮತ್ತು ಇತರರು, ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೮.

ವಸುಂಧರಾ ಫಿಲಿಯೋಜಾ(ತೃತೀಯ ಆವೃತ್ತಿ), ಅಳಿದುಳಿದ ಹಂಪೆ, ಸ್ಥಾನಿಕಂ ಪ್ರಕಾಶನ, ಮೈಸೂರು, ೨೦೧೧.

ವಾಸುದೇವ ಬಡಿಗೇರ, ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ, ಭಾಗ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ವಾಸುದೇವ ಬಡಿಗೇರ, ವಿರೂಪಾಕ್ಷಿ ಪೂಜಾರಹಳ್ಳಿ, ಕೃಷ್ಣದೇವರಾಯ ಆಯ್ದ ಲೇಖನ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೮,

ವಾಸುದೇವನ್ ಸಿ.ಎಸ್., ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ವಿಜಯ್ ಪೂಣಚ್ಚ ತಂಬಂಡ, ಕೊಡಗು ವಿವರಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ೨೦೦೭.

ವಿರೂಪಾಕ್ಷಿ ಪೂಜಾರಹಳ್ಳಿ, ವಿಜಯನಗರ ಕಾಲದ ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ವಿರೂಪಾಕ್ಷಿ ಪೂಜಾರಹಳ್ಳಿ, ಕೃಷ್ಣದೇವರಾಯನ ತೀರ್ಥಯಾತ್ರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೫.

ವಿರೂಪಾಕ್ಷಿ ಪೂಜಾರಹಳ್ಳಿ, ಕರ್ನಾಟಕದಲ್ಲಿ ತಳವಾರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ವಿರೂಪಾಕ್ಷಿ ಪೂಜಾರಹಳ್ಳಿ, ಹೊಸಾಹತುಕಾಲಿನ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

ವಿವೇಕ ರೈ. ಬಿ.ಎ., ಪ್ರವಾಸಿ ಕಂಡ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಶರಣಬಸಪ್ಪ ಕೊಲ್ಕಾರ, ವಿಜಯನಗರ ಪರಿಸರ(ಸಂಶೋಧನಾ ಲೇಖನಗಳು), ಕಿಕ್ಕೇರಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೧೨.

ಶಿವಣ್ಣ ಎಸ್.(ಸಂ.), ಕರ್ನಾಟಕ ಚರಿತ್ರೆ ಸಂ. ೩. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಶಿವಪ್ರಸಾದ್ ಟಿ.ಆರ್., ಶ್ರೀಕೃಷ್ಣದೇವರಾಯ, ಚಿಂತನ ಗಂಗಾ ಪ್ರಕಾಶನ, ದಾವಣಗೆರೆ, ೨೦೦೯.

ಶ್ರೀಕಂಠಯ್ಯ.ಕೆ., ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ(ಸಾಮಾಜಿಕ, ಆರ್ಥಿಕ, ರಾಜಕೀಯ), ಗೀತಾ ಬುಕ್‌ಹೌಸ್, ಮೈಸೂರು, ೧೯೮೩.

ಸದಾನಂದ ಕನವಳ್ಳಿ(ಅನು), ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ರಾಬರ್ಟ್ ಸಿವೆಲ್(ಮೂಲ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಸರಸ್ವತೀದೇವಿ ಎಸ್.ಭಗವತಿ, ಹಂಪೆಯ ಶಾಸನಗಳು: ಒಂದು ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ. ೨೦೦೮.

ಸೀತಾರಾಮಯ್ಯ ಎಂ.ವಿ.(ಸಂ.) ಶ್ರೀಕೃಷ್ಣದೇವರಾಯ ದಿನಚರಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೩.

ಸುಚೇತಾ ನವರತ್ನ(ಅನು), ರಾಜನಾಥ ಡಿಂಡಿಮ ವಿರಚಿತ ಅಚ್ಯುತರಾಯಾಭ್ಯುದಯಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಸೂರ್ಯನಾಥ ಕಾಮತ್, ವಿಜಯನಗರ ಸಾಮ್ರಾಜ್ಯ ಅರ್ಚನಾ ಪ್ರಕಾಶನ, ಬೆಂಗಳೂರು, ೧೯೭೩.

ಹಿರೇಮಠ ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬.

ಸತೀಶ ಕೆ., ವಿಜಯನಗರ ಕಾಲದ ಶೈವ ದೇವಾಲಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೦೪.

ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ್ ಎಸ್.ವೈ., ಮಾಡಲಗೇರಿ ಕೊಟ್ರೇಶ್, ಕರ್ನಾಟಕ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಸೋಮಶೇಖರ್ ಎಸ್.ವೈ., ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಸಂಚಿಕೆ ಪ್ರಕಾಶನ, ಚಿತ್ರದುರ್ಗ, ೨೦೦೯.

ಸೋಮಶೇಖರ್ ಎಸ್.ವೈ., ಹಂಪೆಯ ಬಜಾರುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಹೆಬ್ಬಾಲೆ ಕೆ, ನಾಗೇಶ್, ಹಂಪಿ ಸಂಸ್ಕೃತಿ ಮತ್ತು ಮುಕ್ತ ಪರಿಸರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨.

ಸಂಪುಟಗಳು

ಇತಿಹಾಸ ದರ್ಶನ ಸಂಪುಟ ೧-೨೮ ಸಂಪುಟಗಳು ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

ಕರ್ನಾಟಕ ಪರಂಪರೆ ಸಂಪುಟ ೧ ಮತ್ತು ೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.

ನರಸಿಂಹಮೂರ್ತಿ ಎ.ವಿ.(ಪ್ರಸಂ.), ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟಗಳು ೧-೨೫, ಭಾರತೀಯ ವಿದ್ಯಾಭವನ, ಬೆಂಗಳೂರು.

ನಾಗೇಗೌಡ ಎಚ್.ಎಲ್.(ಸಂ.), ಪ್ರವಾಸಿ ಕಂಡ ಇಂಡಿಯಾ ಸಂಪುಟ ೧-೮ ಸಂಪುಟಗಳು ಐಬಿಎಚ್ ಪ್ರಕಾಶನ, ಬೆಂಗಳೂರು.

ವಿಜಯ್ ಪೂಣಚ್ಚ ತಂಬಂಡ(ಪ್ರ.ಸಂ.), ಚರಿತ್ರೆ ಸಂಪುಟಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೨೦೧೦,

ಷೇಕ್ ಅಲಿ.ಬಿ.(ಪ್ರ.ಸಂ.), ಕರ್ನಾಟಕ ಚರಿತ್ರೆ ಸಂಪುಟ, ೧ರಿಂದ ೭ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭.

ಕೃಷ್ಣ ಕೊಲ್ಹಾರಕುಲಕರ್ಣಿ, ಆದಿಲಶಾಹಿ ಸಾಹಿತ್ಯ ಸಂಪುಟ ೧ರಿಂದ ೧೮, ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಯಪುರ, ೨೦೧೭.

ಲೇಖನಗಳು

ಅಬ್ದುಲ್ ಮನ್ನಾನ್ ಬಿ., ವಿಜಯನಗರ ಪಟ್ಟಣದಲ್ಲಿ ಮುಸ್ಲಿಂ ಧರ್ಮ, ವಿಜಯನಗರ ಅಧ್ಯಯನ ಸಂ.೯, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೪.

ಅಶ್ವಿನಿ ಚ.ಕುಲಕರ್ಣಿ, ಅಶೋಕ್ ಕೆ.ಕಂದಗಲ್ಲು, ಆದಿಲ್‌ಶಾಹಿ ಕಾಲದಲ್ಲಿಯ ಸಾಹಿತ್ಯದ ಪ್ರಚಲಿತ ಭಾಷೆಗಳು, ಇತಿಹಾಸ ದರ್ಶನ ಸಂ. ೧೯, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಎಜಾಸುದ್ದೀನ್ ಫೈರೋಜ್, ಕರ್ನಾಟಕದಲ್ಲಿ ಇಸ್ಲಾಂ, ಅವಲೋಕನ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೫.

ಕಾಂಬಳೆ ಎಂ.ಟಿ., ಪರ್ಶಿಯಾದ ಪ್ರವಾಸಿ ಅಬ್ದುಲ್ ರಜಾಕ್ ಕಂಡ ವಿಜಯನಗರ, ವಿಜಯನಗರ ಅಧ್ಯಯನ ಸಂಪುಟ ೭, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,

ಮೈಸೂರು, ೨೦೦೩.

ಕೆಳದಿ ಗುಂಡಾಜೋಯಿಸ್, ವಿಜಯನಗರ ಹಾಗೂ ಪೋರ್ಚುಗೀಸರು, ವಿಜಯನಗರ ಅಧ್ಯಯನ ಸಂ.೩, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೮.

ಗುರುಮೂರ್ತಿ ಪೆಂಡಕೂರು, ವಿಜಯನಗರ ಕೃಷ್ಣದೇವರಾಯನ ಕಾಲದಲ್ಲಿ ಕ್ರೈಸ್ತ ಮಿಷನರಿಗಳು. ಇತಿಹಾಸ ದರ್ಶನ ಸಂ. ೧೯, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

ಗೋವಿಂದರಾಜು ಸಿ.ಆರ್., ಚರಿತ್ರೆ ಹಾಗೂ ಪ್ರವಾಸಿ ಕಥನ, ಚರಿತ್ರೆ ಅಧ್ಯಯನ, ಸಂ.೬, ಸಂಚಿಕೆ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೧೬.

ಜಗದೀಶ್‌ಶೆಟ್ಟಿ ಬಿ., ತುಳು ಕರ್ನಾಟಕ ಮತ್ತು ಘಟ್ಟದ ಮೇಲಿನ ಪ್ರದೇಶಗಳ ನಡುವಿನ ವ್ಯಾಪಾರ ಚಟುವಟಿಕೆಗಳು, ಇತಿಹಾಸ ದರ್ಶನ ಸಂ. ೧೯, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

ಜೈನುಲ್ಲಾ ಬಳ್ಳಾರಿ, ವಿಜಯನಗರದ ಕುಸ್ತಿಯ ಬಗ್ಗೆ ಎರಡು ಶಾಸನಗಳು, ವಿಜಯನಗರ ಅಧ್ಯಯನ ಸಂ. ೧೧, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೬.

ಬಾಗಾಯತ ವಿ.ಎಮ್., ಆದಿಲ್‌ಶಾಹಿ ಅರಸರ ಕಾಲದ ಆರೋಗ್ಯ ವ್ಯವಸ್ಥೆ, ಇತಿಹಾಸ ದರ್ಶನ ಸಂ.೧೯, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

ಭಟ್ಟ ಬಿ.ಎಸ್., ಕರ್ನಾಟಕದ ಕರಕುಶಲ ಕಲೆಗಳು, ಅವಲೋಕನ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೫.

ಮಂಜುನಾಥಯ್ಯ ಟಿ.ಎಂ., ವಿಜಯನಗರ ಪಟ್ಟಣದಲ್ಲಿಯ ಆನೆಯ ಸಾಲೆ, ವಿಜಯನಗರ ಅಧ್ಯಯನ ಸಂ.೫, ಪ್ರಾಚ್ಯವಸ್ತು ಹಾಗೂ ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೯.

ಮುಜಾಫರ್ ಅಸ್ಸಾದಿ, ಮಾಯಾವತಿ ಮತ್ತು ಮುಸ್ಲಿಂ ಜಾತಿಗಳ ಪ್ರತಿರೋಧ, ಪ್ರಜಾವಾಣಿ, ಏಪ್ರಿಲ್ ೧೩, ೨೦೧೭.

ರಂಗಸ್ವಾಮಯ್ಯ ಜಿ.ಆರ್.(ಲೇ), ಎಚ್ಚೆಸ್ಕೆ (ಸಂ), ಮುಸ್ಲಿಂ ವಾಸ್ತುಶಿಲ್ಪ, ಅವಲೋಕನ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೫.

ವಸಂತ ಮಾಧವ ಕೆ.ಜಿ., ಪಶ್ಚಿಮ ಕರಾವಳಿ ಮಾಲ್ಡೀವ್ ದ್ವೀಪ: ಕರಾವಳಿ ಕರ್ನಾಟಕ ಸಂಪರ್ಕ ಒಂದು ವಿಶ್ಲೇಷಣೆ, ಇತಿಹಾಸ ದರ್ಶನ ಸಂ.-೧೭, ಕರ್ನಾಟಕ ಇತಿಹಾಸ ಅಕಾಡಮಿ, ಬೆಂಗಳೂರು.

ವಸಂತ ಮಾಧವ ಕೆ.ಜಿ., ಕರಾವಳಿ ಕರ್ನಾಟಕದ ನೌಕಾ ಯುದ್ಧಗಳ ಸಮೀಕ್ಷೆ-೧೭೨೦, ಇತಿಹಾಸ ದರ್ಶನ ಸಂ. ೧೯, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ವಸಂತ ಮಾಧವ ಕೆ.ಜಿ., ಕರಾವಳಿ ಕರ್ನಾಟಕದ ಜಾನಪದ-ಇತಿಹಾಸ ಒಂದು ವಿಶ್ಲೇಷಣೆ, ಇತಿಹಾಸ ದರ್ಶನ ಸಂ. ೨೦, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ವಸಂತ ಮಾಧವ ಕೆ.ಜಿ., ವಿಜಯನಗರ ಕಾಲದ ಇತಿಹಾಸ, ಅವಲೋಕನ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೫.

ವಿರೂಪಾಕ್ಷಿ ಪೂಜಾರಹಳ್ಳಿ, ಕಮಲಾಪುರದ ದಾದಾಪೀರ್ ಛತ್ರ, ಸಾಪ್ತಾಹಿಕ ಪ್ರಭ, ೨-೩-೧೯೯೭.

ಶ್ರೀನಿವಾಸ ಪಾಡಿಗಾರ, ವಿಜಯನಗರ ವಾಸ್ತು-ಕೆಲವು ವಿಚಾರಗಳು, ವಿಜಯನಗರ ಅಧ್ಯಯನ ಸಂ.೮, ೨೦೦೩.

ಎಂ.ಫಿಲ್ ಮತ್ತು ಪಿಎಚ್.ಡಿ ಪ್ರಬಂಧಗಳು

ಅಮರೇಶ. ಎನ್., ಹೈದರಾಬಾದ್ ಕರ್ನಾಟಕ ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೮.

ಅಯ್ಯಾಳಿ ಎರಿಸ್ವಾಮಿ, ಹಂಪಿ ಪ್ರದೇಶದಲ್ಲಿ ಐತಿಹ್ಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಜ್ಞಾನಪ್ರಕಾಶ್ ಬಿ.ಕೆ, ಪ್ರಾಚೀನ ಕರ್ನಾಟಕದಲ್ಲಿ ವ್ಯಾಪಾರ ಮತ್ತು ವಾಣಿಜ್ಯ(ಹೊಯ್ಸಳ ಕಾಲದವರೆಗೆ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೦೫.

ದುರುಗಪ್ಪ ಎಂ.ಕೆ. ವಿಜಯನಗರೋತ್ತರ ಕಾಲೀನ ಬೇಡ ಜನಾಂಗದಲ್ಲಾದ ಸ್ಥಿತ್ಯಂತರಗಳು: ಚಾರಿತ್ರಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩.

ದೇವರಾಜ ಓ., ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮.

ಪ್ರಭಾಕರ ರಾವ್ ಕೆ., ಮಧ್ಯಕಾಲೀನ ಕರ್ನಾಟಕದಲ್ಲಿ ಯುದ್ಧಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, ಶಿವಮೊಗ್ಗ ೨೦೦೬.

ಪ್ರಕಾಶ್ ಗವಿಸಿದ್ದಪ್ಪ ಬಳ್ಳಾರಿ, ಕುದುರಿ ಮೋತಿ ಮೊಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ದಾದಾಪೀರ್.ಬಿ.ಸಿ., ಕರ್ನಾಟಕದ ಪಿಂಜಾರರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

ನಾಗರಾಜಪ್ಪ ಎಸ್., ಹಂಪಿ ಪರಿಸರದ ಲೌಕಿಕ ಶಿಲ್ಪಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬.

ನಾಝೀಯಾ ಖಾಜಿ, ಹಂಪಿ ಪರಿಸರದಲ್ಲಿ ಕಂಡುಬರುವ ವಿಜಯನಗರದ ಕಾಲದ ಇಂಡೋ–ಇಸ್ಲಾಮಿಕ್ ವಾಸ್ತುಶೈಲಿಯ ಸ್ಮಾರಕಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಮಹೇಶ್ ಜಿ., ವಿಜಯನಗರದ ಕಾಲದ ವೃತ್ತಿ ಆಧಾರಿತ ಜಾತಿಗಳು–ಒಂದು ಅಧ್ಯಯನ(ಕ್ರಿ.ಶ. ೧೩೩೬–೧೫೬೫), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೩.

ಮಲ್ಲಿಕಾರ್ಜುನಯ್ಯ., ಹೊಸಪೇಟೆ ತಾಲೂಕಿನ ಗರಡಿ ಸಂಪ್ರದಾಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಮಲ್ಲಿಕಾರ್ಜುನಗೌಡ ಎಂ., ಕರ್ನಾಟಕ ಆಂಧ್ರದ ಗಡಿಭಾಗದಲ್ಲಿ ಹಿಂದೂ–ಮುಸ್ಲಿಂ ಸಾಂಸ್ಕೃತಿಕ ಬಾಂಧವ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಮುಸ್ತಕ್ ಅಹ್ಮದ್, 'ಮಹಮ್ಮದ್ ಆದಿಲ್ ಶಾಹ–ಜೀವನ ಮತ್ತು ಸಾಧನೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩.

ಮಂಜಣ್ಣ ಪಿ.ಬಿ., ವಿಜಯನಗರ ಕಾಲದ ಕ್ರೀಡೆ ಮತ್ತು ವಿನೋದಾವಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೬.

ಮಹೇಶ್ ಎಸ್., ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

ಭೀಮರತ್ನ, ಕನ್ನಡ ಶಾಸನಗಳಲ್ಲಿ ಸೆಟ್ಟಿಕುಲ(ವಿಜಯನಗರ ಶಾಸನಗಳನ್ನು ಅನುಲಕ್ಷಿಸಿ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೩.

ವಜೀಭಾಷ ಭಾಗಾಯತ ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ: ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಸೋಮಶೇಖರ ಎಸ್.ವೈ., ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧನೀತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಸೋಮಶೇಖರ, ಸಿದ್ದಿಯರ ಸಾಮಾಜಿಕ ಸ್ಥಿತ್ಯಂತರಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦.

ಷರೀಫಾ.ಕೆ., ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಮುಸ್ಲಿಂ ಮಹಿಳಾ ಸಂವೇದನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕವಿರತ್ನ ಬಾಬುರಾವ್, ಬಹಮನಿ ಕಾಳಗಗಳು, ಕ.ರಾ.ನಿ. ಸ್ನಾತಕೋತ್ತರ ಕೇಂದ್ರ, ಬೀದರ, ೨೦೦೯,

ಇಂಗ್ಲಿಶ್ ಗ್ರಂಥಗಳು

Primary Sources

Persian

Abdur Razzaq, Matla-Us Sadain, Shafi M (ed), Lahore, 1941.

Barani, Ziauddin, Taridh-I-Firuz Shashi, Edited by Saiyid Ahamad Khan, Calcutta, 1862.

Beg, Asad, Wikaya-Yi Asad Beg, Translation by Chapman in Volume 6 of H.M. Elliot and J.Dowson (ed), The History of India as told by its Own Historians, 8 Volumes, Allahabad, 1964.

Fazlullah, Rashidduddin, Maktubat-I-Rashidi, Edited by M.Shafi, Lahore, 1948.

Ferishta, Muhammad Qasim Hindu Shah, Gulshan-I-Ibrahimi also titled Taridh-I-Ferishta, 2 Volumes, Nawal Kishore, Lucknow, 1864.

Ibrahim Adil Shah II Sultan, Kitab-I- Nauras, Edited by Nazir Ahmad, Lucknow, 1955.

Isami, Futuh-Us Salatin, edited by Syed Usha, Madras, 1948.

Khusrau, Amir, Khazain-Ul Futuh, Edited by Wahid Mirza, Calcutta, 1953.

Zubairi, Muhammad Ibrahim, Basatin-Us Salatin, Hyderabad, 1892.

Chronicles and Travellers Accounts

Abbdur Razzak, Major, India in the Fifteenth Century.

Barbosa, The book of Duarte Barbosa, 2 Volums, Traslated by Longsworth Dames, London, 1918.

Barradas, The Story of Barradas, Translated by Robert Sewell, A Forgotten Empire, Revised, Delhi, 1970.

Caesar Fredirick, Samual Purchas, His Pilgrims, Vol-X, Glasglow, 1905.

Conti, Nicolo Dei, Major, India in the Fifteenth Century.

Firishtah, History of the Rise Of The Mohammad an Power in India till the year

1612, Translated by John Briggs, 4 Vol.

Ibn Batuta, The Rehla of Ibn Batuta, Translated by Mehdi Hussain, Baroda, 1953.

Morco polo, The book of Sir Marco Polo, Sir Henry Yule(ed), Vol-I and Vol-II, Revised, Amester dam, 1975.

Major R.H(ed), India in the Fifteenth Century, London, Hakluyt Society, 1857.

Qalqashandi, Shihabuddin(1418), Subhul Asha, An Arabic Account of India in the 14th Century, Translated by Otto Spice(ed), Aligargh, 1971.

Archaeological Reports

Nagaraja Rao M.S, George Michell, Patil C.S, John M.Fritz, Carla M.S., Sing., M., Vijayanagar Progess of Research, 1979-83, Directorate of Archaeology & Museums Mysore, 1983.

Nagaraja Rao, M.S., Vijayanagara Progress of Research 1983-84, Directorate of Archaeology & Museums, Mysore, 1985.

Devaraj D.V., Channabasappa S. Patil (Ed.), Vijayanagara Progress of Research 1984-87, Directorate of Archaeology & Museums, Mysore, 1991.

Devaraj D.V. Channabasappa S.Patil (Ed), Vijayanagara Progress of Research 1987-88, Directorate of Archaeology & Museums, Mysore, 1991

Devaraj D.V. Channabasappa S.Patil (Ed.), Vijayanagara Progress of Research 1988-91 Directorate of Archaeology & Museums, Mysore, 1996.

John M.Fritz, George Michell, Nagaraj Rao M.S. with a Preface by Burton Stein, the Royal centre at Vijayanagara Preliminary Report, Dept of Architecture & Building, University of Melbourne, 1984.

Epigraphical Reports

Chhabra. B.C.D., Annual Reports on Indian Epigraphy 1945-52, Director General Archaeological Survey of India New Delhi, 1986

Gai G.S. (Ed) Archaeological Survey of India Annual Report on Indian Epigraphy for 1967-68, The Director Archaeological Survey of India, New Delhi, 1979.

Gai G.S. (Ed) Archaeological Survey of Indian Annual report on Indian Epigraphy

for 1969-70, The Director Archaeological Survey of India, New Delhi, 1979.

Gai G.S. Ramesh, K.V. (Ed) Annual Person on Indian Epigraphy for 1972-73,

The Director General Archaeological Survey of India, New Delhi, 1988.

Gai G.S (Ed) Ramesh K.V., Annual Report on Indian Epigraphy for 1973-74, Director General Archaeological Survery of India, New Delhi, 1986.

G.S. Gai (Ed) Ramesh) K.V., Archeological Survey of India Annual Report on Indian Epigraphy for 1974-75, Director General Archaeological Survey of India, New Delhi,1990.

Krishnan R.G. (Ed) Ramesh K.V., Annual Reporters on Indian Epigraphy for 1977-78, Director General Archaeological, New Delhi,

Ramesh K.V., Annual Report on Indian Epigraphy, Director General Archaeological Survey of India, New Delhi. 1987.

Ramesh K.V, Annual Reports on Indian Epigraphy (1906-1910), Director General Archaeological Survey of India, New Delhi, 1986.

Ramesh K.V., Annual Report on Indian Epigraphy (1911-14), Director General Archaeological Survey of India, New Delhi, 1986.

Ramesh, K.V., Annual Report on Indian Epigraphy (1915-17), Director General Archaeological Surveyor of India, New Delhi, 1986.

Ramesh K.V., Annual Report on Indian Epigraphy (1918-21), Director General Archaeological Survey of India, New Delhi, 1986.

Ramesh K.V., Annual Report on Indian Epigraphy (1922-25) (South Indian Epigraphy Ending year 1923), Director General Archaeological Survey of India, New Delhi, 1986.

Ramesh K.V. (Ed)., Annual Report on Indian Epigraphy for 1983-84, The Director General Archaeological Survey of India, New Delhi, 1991

Sircar D.C. (Ed), Annual Report on Indian Epigraphy for 1953-54, Director General Archaeological Survey of India New Delhi, 1986.

Srinivasan P.R. (Ed)., Ramesh K.V., Annual Report on Indian Epigraphy for 1975-

76, Director General Archaeological Survey of India, New Delhi, 1986.

Vijayanagara Inscriptions (ICHR)

Shrinivas Ritti, B.R. Gopal (Ed.)., Inscriptions of The Vijayanagara Rulers' Vol-I, Post-I, Indian Council of Historical Research, New Delhi, 2004.

Shrinivas Ritti, B.R., Gopal (Ed)., Inscriptions of The Vijayanagara Rules, Vol-I, Part-II ICHR, New Delhi 2004.

Shrinivas Ritti. B.R. Gopal (Ed.)., Inscriptions of The Vijayanagara Rulers Vol-I, Part-3, ICHR New Delhi, 2004.

Shrinivas Ritti. B.R. Gopal (Ed.)., Inscriptions of The Vijayanagara Rulers Vol-I, Part-4, ICHR New Delhi, 2004.

Shrinivas Ritti. B.R. Gopal (Ed.)., Inscriptions of The Vijayanagara Rulers Vol-I, Part-5, ICHR New Delhi, 2004.

Inscriptions of Karnataka

Channabasappa S.Patil, Vinoda C.Patil (Ed.) Inscriptions of Vijayanagara (Hampi) Inscriptions of Karnataka Vol-I, Vijayanagara Research Centre Series No. 8, Directorate of Archaeology and Museums Mysore, 1995.

Channabasappa S.Patil, Vinoda C.Patil (Ed.), Inscriptions of Bellary District. Inscriptions of Karnataka Vol-II, Directorate of Archaeology and Museums Mysore, 1997.

Channabasappa S.Patil, Vinoda C.Patil (Ed.) Inscriptions of Karnataka Vol-IV Inscriptions of Raichur District, Directorate of Archaeology and Museums Mysore, 1998.

Inscriptions of Andhra Pradesh

Parabrahma Sastry P.V. (Ed) N. Rameson (G.Ed.)., Inscriptinos of Andra Pradesh Karim Nagar District the Govt of Andhra Pradesh Hyderabad, 1974.

Venkataramanayya, N Ramesa. N., (G.Ed.)., Inscriptions of Andhra Pradesh Warangal District The Govt of Andhra Pradesh, Hyderabad, 1974.

Epigraphia Carnatica (EC)

Seshadri, M., E.C. Vol-VII & VIII, Supplementary Inscriptions in The Shimoga District, Joint Director, and Govt Text Book Press, Mysore, 1970.

B.Lewis Rice, E.C. Vol-IX, Inscriptions in The Bangalore District, Mysore Govt Central Press 1905.

Narasimhachar, R., Epigraphia Carnatica Vol. XIII (part II) General India, Directorate of Archaeology & Museums, Govt of Karnataka, Mysore. 1987.

Nilakanta Sastri, K.A., Epigraphia Carnatica Vol XVI Supplementary Inscriptions in The Tumkur District The Senior Asst, Director Govt Branch Press, 1955.

Seshadri M., Epigraphia Carnatica Vol XVII Supplementary Inscriptions in The Kolar District, The Superintendent Govt Text Book Press, 1965.

South Indian Inscriptions

E Hultzch, Bahadur V.Venkayya , Krishna Sastri H., South Indian Inscriptions Vol-II, Part-I & II, Navrang Publications New Delhi, 1983.

Subrahmanya Aiyer K.V. (Ed)., South-Indian Inscriptions (texts) Vol-VI, Director Mysore 1986.

D.C.Sircar (G.ed) P.B.Desai (Ed) G.S.Gai (Issued) South-Indian Inscriptions Vol XV Govt. Press, Madras, (Bombay-Karnataka Inscriptions), 1964.

Ramesh K.V., South-Indian Inscriptions Vol-XVI (Telugu inscriptions of The Vijayanagar dynasty) Director General Archaeological Survey of India, New Delhi, 1988.

Ramesh K.V., South-Indian Inscriptions Vol-XIX (Inscriptions of Parakeseriv Arman) Director General Archaeological Survey of India, New Delhi, 1988.

Subrahmanya Aiyer K.V., (Ed) South-Indian Inscriptions Vol-VII (Miscellaneous Inscriptions from The Tamil, Malayalam, Telugu and Kannada Contries) Directororate of Mysore, 1986.

Rao Bahadur H.Krishna Sastri (Ed)., South Indian Inscriptions Vol V (Miscellaneous Inscriptions from The Tamil, Malayalam, Telugu and Kannada Contries) The

Superintendent Govt. Madras, 1925.

Rao Bahaddur C.R Krishnamacharlu (G.Ed)., Panchamukhi R.S. Lakshminarayana Rao. N Narasimhaswami H.K., South-Indian Inscriptions Vol XI, Director Mysore, 1986.

Sircar D.C. (G.Ed.),. South Indian Inscriptions Vol XX, Bombay Karnataka Inscriptions, Director General Archaeological Survey, New Delhi, 1988.

Vasudevan C.S. (Ed.)., Kannada inscriptions of Andhra Pradesh, Prasaranga, Kannada University, Hampi, 1999.

Gazetteer

James M.Campbell (Ed.)., Kanara Gazetteer of The Bombay Presidency Vol XV Part I) Karnataka Gazetteer, 2003.

John Sturrock, Harold A stuort (Ed), South Canara Vol-I & Vol II Govt of Karnataka, Bangalore, 2003.

John Kelsell, W.Francis, Bellary District Gazetteer, Govt of Karnataka, Bangalore 2004.

B.Lewis Rice, Mysore Gazetteer Vol-I, Mysore in General, Asian Educational Services, New Delhi, 2001.

B.Lewis Rice, Mysore Gazetteer Vol-II, Asian Eduatoinal Services, New Delhi, 2001.

Suryanath U. Kamath (Ed)., Karnataka State Gazetteer Part-I, Govt of Karnataka, 1982.

Suryanath U. Kamath (Ed)., Karnataka State Gazetteer Part-II, Govt of Karnataka, 1983.

Secondary Source

Alila Verghese, Hampi, Monumental Legacy, Oxford University Press, 2001.

Anna.L. Dallapiccola, The Great Platform at Vijayanagara, Manohar Publishers and Distributors, New Delhi, 2010.

Appadorai A., Economic Conditions in South India, Madras, 1936.

Dikshit G.s. Early Vijayanagara Studies in its History and Culture, BMS Memorial Foundation Bangalore, 1958.

Burton Stein, The New Cambridge History of India, Vijayanagara, Cambridge University Press, 1994.

Burton Stein, Essays on South India, Munshiram Manoharlal Publishers Pvt Ltd, New Delhi, 1997.

Burton Stein, Peasant State and Society in Medieval South India Delhi, Oxford University Press, New York 1994.

Denis L. Cottineall Dekloguen. An Historical Sketch of Goa, Asian Educational Services, New Delhi, 1988.

Dikshit G.S., Local Self-Government in Medieval karnataka, Karnataka University, Dharwar, 1964.

Diwakar R.R. 'Karnataka Darshana', R.S.Hukkerikar Bombay, 1995.

Ellliot H.M. and Dowson J., History of India (2nd Edn), Calcutta, 1956.

Eribble J.d.E. (Ed), M.Pendlebury (Completed) 'History of The Deccnan' Vol-One Mittal Publications, New Delhi, 1990.

Gangisetty Lashminarayana (G.Ed.) D.Ananda Naidu, Gopalakrishna (Ed.) Dravidian University Kuppam, 2006.

George M.Moraes, Mangalore a Historical Sketch, Asian Educational Services, New Delhi 1991.

Gopal B.R., The Rashrakutas of Malkhed: Studies in Their History and Culture, Geeta Book House, Mysore, 1994.

Hourani G.F., Arab Seafaring in The Indian Ocean in Ancient and Early Medieval Times, Princeton N.J., 1951

Jyotsna K.Kamat, Social Life in Medieval Karnataka, A Bhairav Publications, New Delhi, 1980.

Konduri Sarujini Devi, Religion in Vijayanagara Empire Sterling Publications Pvt ltd, 1990.

Krishnaswami S. Aiyangar, South India and her Muhammadan Invaders, Asian Educational Services, New Delhi, 1991.

Lock esquire W.W. Dakhan History Musalman & Marath, 1300-1818, Part-I, II Asian Educational Services, New Delhi, 1989.

Longhurst A.H. Hampi Ruins Described and Illustrated, Asian Educational Services, New Delhi, 1998.

Major Mukud N.Joshi, Dakshin Digvijaya, Nirmala Khare, Pune, 2007.

Mahalingam .T.V., Administration and Social Life Under Vijayanagar Part II Social life, University of Madras, 1975.

Madhao P. Patil, Court Life Under The Vijayanagara Rulers, BR Publishing Corporation, 1999.

Mugali R.S., The Heritage of Karnataka (In Relation to India), Geeta Book House, Mysore, 1990.

Nagaraj .H.M., Devaraya II and His Times (History of Vijayanagara), Prasaranga University of Mysore, 1991.

Paes & Nuniz, The Vijayanagar Empire, Chronicles of Paes & Nuniz, Asian Educational Services, New Delhi, 1991.

Ramasharma M.H., The History of The Vijayanagar Empire, Bombay Popular Prakashan, 1980.

Rajashekhara. S., The Map Approach to Vijayanagara History, Sujata Publications, Dharwad, 1955.

Ramamurthy J.R. The Vijayanagara Heritage, Srividya Vijayanagara Hampi Heritage Trust, Anegondi, Hospet, 1996-97.

Rajasekhara.S. Masterpieces of Vijayanagara Art, DB Taraporevala Sons & Co. Pvt ltd. 1983.

Ramesh KV., History of South Kanara from The Earliest Times to The Fall of Vijayanagar, Karnataka University Research, Publications Series, 1970.

Ramesh.K.V., Tivari S.P., Sharma.M.J. (Ed.) Indian History and Epigraphy (Dr.G.S.

Gai Felicitation Volume), Agam Kala Prakashan, Delhi, 1990.

Richard M.Editon, A Social History of The Deccan, Cambridge University Press, 2005.

Syed Sulaiman Naqvi., Arab Navigation, Islamic Culture XV, 1941.

Saraswathi Nanaiah N., Position of Women During Vijayanagar Period, Southern Printers, 1992.

Settar.s., Hampi A Medieval Metropolis, Kalayatra, Bangalore, 2008.

Vasundhara Fillioza, Vijayanagar, National Book Trust, India, 1977.

Sirkantha Sastri, Sources of Karnataka History Vol-I, University of Mysore, 1940.

Vasantha K.G. Madhava, Western Karnataka Its Agrarian Relations (A.D. 1500-1800) Navrang, New Delhi, 1991.

Venkatachala Sastry T.V, Bibliography of Karnataka Studies II, Prasaranga University of Mysore, 1998.

Venkata Ramanayya. N. Vijayanagara Origin of the City and the Empire, Asian Educational Services, New Delhi, 1990.

Venkata Ratnam A.V., Local government in the Vijayanagara Empire, Prasaranga University of Mysore, 1972.

Vijaya Poonacha Thambanda (Ed), Journal of Karnataka Studies, Vol-5-2, Kannada University, Hampi, 2012.

Articles

Anjaiah,G., The Role of Srikrishnadeva Raya's Generals in His Military Conquests and Administrations, Procedings of The South Indian History Congress, Thirty Second Annual Session, 2012.

Antony Raj.R, Import Trade in Horse in South India, Procedings of The South Indian History Congress, Twenty Fifth Annual Session, 2005.

Cheramanathan P., Advent of Islam in Kayalpatnam, Proceedings of The South Indian History Congress, Thirty First Annual Session, 2011.

Dhinakaran, The Merchant Community in Pandyanadu in the 13th Century A.D.,

Proceedings of The South Indian History Congress, First Annual Conference, 1980.

Dkalyani, R. Hemalatha, Sir Robert Sewell's carreer and Writings, Proceeding of The South Indian History Congress, Thirty Second Annule Session, 2012.

Greeshmalatha, Horse Trade of Malabarand Kutirachettis of Kulamuukku(11th - 14th AD), Procedings of The South Indian History Congress, Thirty Second Annual Session, 2012.

Hamza Thodengal, Mappila Literature: Locating Community and National Identity Formation in Colonial Malabar, Procedings of The South Indian History Congress, Thirty Second Annual Session, 2012.

Ibrahim Kunju A.P., Medieval Kerala Society, Procedings of The South Indian History Congress, Frist Annual Conference, 1980.

Jancy Rani.G, Coromandel Coast During Sixteenth and Seventeeth Centuries, Procedings of the south Indians Congress, Thirty Second Annule Session, 2012.

Jaseena.C, Mappila Educational Tradition in Malabar, Proceedings of The South Indian History Congress, Thirty Second Annual Session, 2012.

Jigar Mohamaaed, Hiralal Gupta Endowment Lecture Ibn-batuta on of the culture of South India : An Arab Perception, Proceedings of the South Indian History Congress, Thirty Second Annule Session, 2012.

Joseph T.J., Vijayanagara Reiligion- An Example of Religious tolerance, Proceedings of The South Indian History Congress, Thirty First Annual Session, 2011.

Jothibasu and R.Sheela, Status of King Krishnadevaraya, Proceedings of The South Indian History Congress, Thirty First Annual Session, 2011.

Justin Samaraj.N, Political Rivalry Between British and Seataramaraju the Zamindar of Vijayanagara, Proceedings of The South Indian History Congress, Twenty Fifth Annual Session, 2005.

Kanakarathram.N, Economic Conditions in Kadappa Region During The Vijayanagara Period, Procedings of The South Indian History Congress, Thirty Second Annual Session, 2012.

Kotraiah, C.T.M., Vijayanagar Paintings at The Virupaksha Temple, Hampi, Vol-49(4), Quarterly Journal of Mythic Society, 1959.

Khalid Ponmula Thod, Indian and Asian Merchants in Malabar during Sixteenth Century, Procedings of the South Indian History Congress, Thirty Second Annual Session, 2012.

Kulashenkara. S. Role of Merchant Guides in Tamilnadu, Proceedings of the South Indian History Congress, Twenty Sixth Annual Session, 2006.

Madhav. N., Vijayanagara Epigraphs Discovered During Recent Decades, Vol-75 (4), Quarterly Journal of Mythic Society, 1984.

Mahananda.T.A, Advent of The Portugues and Its Effects on the Mappiilas of Malabar, Procedings of The South Indian History Congress, Thirty Second Annual Session, 2012.

Manimala.R, Weavers and Textile Industries in Medieval Tamilnadu (9th -14thA.D), Proceedings of The South Indian History Congress, Twenty Third Annual Conference, 2003.

Mayankatty O.P., Sufim: Some Landmarks in the Stream of Medieval History, Proceedings of The South Indian History Congress, Twenty Third Annual Conference, 2003.

Mayan Kutty O.P., Avabi Malayalam and The Mappila Culture : A Reappraisal, Proceedings of The South Indian History Congress, Thirty First Annual Session, 2011.

Mubara Pasha P.M, the Economic of Indigenous Market in the Sea Trade in the Medieval Kerala, Proceedings of The South Indian History Congress, Thirty Second Annual Session, 2012.

Nagarathnam N, Keladiyav's Trade Relations With Portuguesa, Proceedings of The South Indian History Congress, Thirty Second Annual Session, 2012.

Narasingaraja Maidu. B, Sectional Presidents Address- Historiography and Maritime History: Two books, Proceedings of The South Indian History Congress, Twenty

Third Annual Conference, 2003.

Rajayyan. K, An Analytical Study, Proceedings of The South Indian History Congress, Twenty Third Annual Conference, 2003.

Raman K.V., Merchant Guilds in the Pandyn Country, Proceedings of the South Indian History Congress, First Annual Conference, 1980.

Rakesh B.C., Kannada Historiography of Vijayanagara-part -1, Proceedings of The South Indian History Congress, Thirty First Annual Session, 2011.

Sabnam Sultana, Impact of Islam on Orissa Society in Medieval Times: A Study, Proceedings of The South Indian History Congress, Thirty Second Annual Session, 2012.

Sreedhar.E, Hyronymic Place-name Suffixes in Andhra Under the Rayas of Vijayanafgara, Thirty Second Annual Session, 2012.

Suryanath U. Kamath, Vijayanagara History and Krishnadevaraya, Vol-96(4), Quarterly Journal of Mythic Society, 1959.

Suryanath U.Kamath, Vijayanagara His Role in Founding Vijayanagar Empire, Vol-99(1), Quarterly Journal of Mythic Society, 2008.

Subramanian.A. Vijayanagar coins in Madras Government Museum-a Reappraisal Vol-73(3-4), Quarterly Journal of Mythic Society, 1982.

Varalashmi.R, Material Culture in Medieval Andhra, Proceedings of the South Indians Congress, Twenty Fifth Annual Session, 2005.

Vasantha Madhava K G, Karnataka and Kerala contact and Adjustment 1336-1606, Proceedings of The South Indian History Congress, First Annual Conference, 1980.

Ph.D. Thesis

Bhairapurad Anand B, Rayala Seemeya Vijayanagar Devalayagala Vastu Mattu Moorti Shilpigalu Ondu Adyayana, Karnataka University, dharwad, 2007.

Biradar.B., Urbanisation in Ancient Karnataka from Early Times to A.D. 1336, Karnataka University, Dharwad, 2001.

Chandrashekhara S.H.M., Vijayanagara Urbanity, Karnataka University, Dharwad, 2002.

Das Swapna Rani, The Role of Women during Mughal Rule: 1526-1707, Karnataka University, Dharwad, 2007.

Devalagi Sangan Gouda, Vijayapurada Ondaneya Al : Adil Shahana Jivan Mattu Sadane Karnataka University, Dharwad, 2001.

Dixit G.S., Local Self Government in Medieval Karnataka, Karnataka University, Dharwad, 1961.

Fatima Maryam, Relations of the Sufis with the Rulers of Deccan (14-17 Century), Aligarh Muslim University, Aligarh, 2012.

Hanumantha Rao B.S.L., Religion in Andra, Karnataka University, Dharwad, 1970.

Kamat Jyotsna, Studies in social life in Karnataka, Karnataka University, Dharwad, 1972.

Kanade S.V., Role of Press in Indian Nationalist Movement in Karnataka 1556-1947, Karnataka University, Dharwad,2005.

Kulkarni Ananda J., Talikote Guddha Ondu Adhyayana, Karnataka University Dharwad, 2002.

Kivudanavar Jagadeesh, Festival in Vijayanagar Empire, Karnataka University, Dharwad, 2000.

Oberaik., Social Conditions in North India on the eve of The Muslim Invasion (700 to 1200 A.D.), Karnataka University, Dharwad, 1977.

Peer Mohamed M., History of Muslim Settlements and their Culture in Madras City, Madurai Kamaraj University, Madurai, 2007.

Raja Mohmad J., Maritime Activities Economic and Social Customs of the Muslims of Coramandal Coast 1750-1900, Pondicherry University, Pondicherry, 1997.

Sathyanathan R.S., Achyutha Raya, Karnataka University, Dharwad, 1978.

Shivaiah Bhargavi., Krishnadevaraya, Karnataka University, Dharwad, 1972.

Sriramamurthy., Studies in the History of the Telugu County During The Vijayanagara

Period 15 36-1550 A.D., Karnataka University, Dharwad, 1973.

Tanumalayan V., History of the Zamorins in Calicut (1500-1800), A Politico-Cultural Study, Sundaralal University, Tirunelveli, 2007.

Venkata Ratnam A.V., Local Government in the Vijayanagar Empire, Karnataka University, Dharwad, 1970.

Venkateshwar Rao T., Local Bodies in Pre-Vijayanagar Andra, Karnataka University, Dharwad, 1975.

Vettickal G.K., Development of South Indian Historiography, Karnataka University, Dharwad, 1982.

Vasanthamadhava K.G., Political History of Kanara, Karnataka University, Dharwad, 1976.

Ganapatigouda S. Minor Dynastic of Uttar Kannada Region, Karnataka University, Dharwad, 1993.

Hebsurve.M., Religious Conditions During the Hoysala period, Karnataka University, Dharwad, 1982.

Hiremath V.R., Religious Conditions During the Period of Chalukyas of Kalyana, Karnataka University, Dharwad, 1990.

Jayasheela Stephen, Pre-Industrial Coromandel: A Study of Polity, Economy and Society (A.D 1500-1600), Pondicherry University, Pondicherry, 1992

Jayanthi .V.G., Hampi A cultural Study, Karnataka University, Dharwad, 1993.

Manjeshwar Surendra, Studies in the Military History of Karnataka from The Earliest Times to the 14th century, Karnataka University, Dharwad, 1990.

Masthan N. Shaik, Arab Contacts With South India: A Socio-Economic Study from the Earliest Times to the coming of the Portuguese, Bangalore University, 1996.

Mehadi Akbari M.A., Socio Economic Life in The Upper Deccan Under The Bahamains (1347-1527), Ph.D Thesis, University of Mysore. 2011.

Munshi Salabuddin, Muslim monuments of Gulbarga: A Cultural Study, Karnataka University, Dharwad, 1997.

Nagaraju.S. Study of Rock-Cut Architecture of Konkan and Western Deccan Vol I & II, Karnataka University, Dharwad, 1971.

Nanjundappa K.S., Industries and Commerce in Karnataka During the Vijayanagara Period (1336-1565), Ph.D Thesis, University of Mysore, 1982.

Pathan.Z.M., Some Feudatory Family's Minor Dynasties of Medieval Karnataka Study, Karnataka University, Dharwad, 1983.

Potdar V.D., Public Finance in Early and Medieval Deccan, A Study of the System of Economy from 6th to 13th Century A.D., Karnataka University, Dharwad, 1994.

Sadiq Naqvi, the Iranian Afaquies Contribution to The Adil Shahi kingdoms, PhD Thesis, Osmania University, Hydrabad, 2003.

Seyyed Lalal Rajai, The Relation Between Safavids Dynasty and Qhutbshahi Sultanate (1501-1687), PhD Thesis, University oF Mysore, 2011.

Shaheena Banu, Sufism in Karnataka-A Socio-Religious and Cultural Study: A Historical Analysis, Bangalore University, Hampi, 2006.

Syed Azam, Muslim Society in Medieval Karnataka, Ph.D Thesis, University of Mysore, 1986.

Journals

Andhra Pradesh History Congress Proceedings

Hyderabad Archaeological Series

Indian Antiquary

Indian Economic and Social History Review

Indian Historical Quarterly

Journal of Indian History

Journal of the Andhra Historical Research Society

Journal of Bombay Branch of the Royal Asiatic Society

Journal of Indian History

Journal of Oriental Research Institute

Journal of Karnataka Studies

Journal of Karnataka University (Social Sciences)

Proceedings of Indian History Congress

Proceedings of South Indian History Congress

Proceedings of Karnataka History Congress

Quarterly Journal of Mythic Society

Maps & Photographs

John M-fritz and George Michell (Ed), Clare Armi (Photograph) New Light on Hampi, Recent Research at Vijayanagara, Marg publications, 2001.

George Michell, Vijayanagara Architectural Inventory of the Urban Core Vol-1 Text, Maps, Line Drawings, Directorate of Archaeology & Museums, Mysore, 1990.


George Michell, Vijayanagara Architectural Inventory of the Urban Core vol-2; Photographs, Directorate of Archaeology and Museums, Mysore, 1990.

George Michell, Phillip.B. Wagoner, Vijayanagara Inventory of Sacred Centre vol-3, Plates, American Institute of Indian Studies, New Delhi, 2001.

Noshir Gobhai (Photographs) John M. Fritz & George Michel, Hampi A Story in Stone Eminence, Designs Pvt Ltd, Mumbai, 2009.

ನಕ್ಷೆಗಳು

ವಿಜಯನಗರ ಕಾಲದ ಪ್ರಮುಖ ಪಟ್ಟಣಗಳು



ಕೃಪೆ: ಕರ್ನಾಟಕ ಪರಂಪರೆ ಸಂ.೨

ಒಂದನೇ ದೇವರಾಯನ ಆಳ್ವಿಕೆಯ ವಿಜಯನಗರ



ಕೃಪೆ: ಕರ್ನಾಟಕ ಪರಂಪರೆ ಸಂ.೨

ಎರಡನೇ ದೇವರಾಯನ ಆಳ್ವಿಕೆಯ ವಿಜಯನಗರ



ಕೃಪೆ: ಕರ್ನಾಟಕ ಪರಂಪರೆ ಸಂ.೨

ಸಾಳುವ ನರಸಿಂಹನ ಆಳ್ವಿಕೆಯಲ್ಲಿ ವಿಜಯನಗರ



ಕೃಪೆ: ಕರ್ನಾಟಕ ಪರಂಪರೆ ಸಂ.೨

ಕೃಷ್ಣದೇವರಾಯನ ಕಾಲದ ವಿಜಯನಗರ



ಕೃಪೆ: ಕರ್ನಾಟಕ ಪರಂಪರೆ ಸಂ.೨

ಅಚ್ಯುತರಾಯನ ಕಾಲದ ವಿಜಯನಗರ



ಕೃಪೆ: ಕರ್ನಾಟಕ ಪರಂಪರೆ ಸಂ.೨

ಸದಾಶಿವರಾಮರಾಯ ಹಾಗೂ ದಖ್ಖನಿನ ಸುಲ್ತಾನರು



ಕೃಪೆ: ಕರ್ನಾಟಕ ಪರಂಪರೆ ಸಂ.೨



ವಿಜಯನಗರ ಕಾಲದ ಪ್ರಮುಖ ಬಂದರು ಪಟ್ಟಣಗಳು



ಕೃಪೆ: ಗೂಗಲ್ ಮ್ಯಾಪ್ಸ್

ಮಲಬಾರ ಪ್ರಾಂತ್ಯದಲ್ಲಿ ಮುಸ್ಲಿಂ ವಸತಿ ನೆಲೆಗಳು



ಕೃಪೆ: ಗೂಗಲ್ ಮ್ಯಾಪ್ಸ್




ವಿಜಯನಗರ ಸಾಮ್ರಾಜ್ಯ




ಕೃಪೆ: ಕರ್ನಾಟಕ ಪರಂಪರೆ ಸಂ.೨

ತಮಿಳು ಪ್ರಾಂತ್ಯದಲ್ಲಿ ಮುಸ್ಲಿಂ ಸಮುದಾಯಗಳ ವಸತಿನೆಲೆಗಳು



ಕೃಪೆ: ಗೂಗಲ್ ಮ್ಯಾಪ್ಸ್

ಚಂದ್ರಗಿರಿ ಕೋಟೆಯ
ಇಂಡೋ-ಇಸ್ಲಾಮಿಕ್ ಸ್ಮಾರಕಗಳ ನಕ್ಷೆ



ಕೃಪೆ: ಜಾರ್ಜ್‌ಮಿಶೆಲ್ ವಿಜಯನಗರ ಕೋಟ್ಲಸ್ಟೈಲ್


ಪೆನುಕೊಂಡದಲ್ಲಿ ಇಂಡೋ-ಇಸ್ಲಾಮಿಕ್ ಸ್ಮಾರಕಗಳು ಹಾಗೂ ಮುಸ್ಲಿಂ ಸಮುದಾಯಗಳ ವಸತಿ ನೆಲೆ



ಕೃಪೆ: ಜಾರ್ಜ್‌ಮಿಶೆಲ್ ವಿಜಯನಗರ ಕೋಟ್ಲಸ್ಟೈಲ್




ಮುಸ್ಲಿಂ ವರ್ತಕರ ವ್ಯಾಪಾರ ಮಾರ್ಗಗಳು



ಕೃಪೆ: ಗೂಗಲ್ ಮ್ಯಾಪ್ಸ್



ವಿಜಯನಗರ ಅರಮನೆ ಪ್ರದೇಶದ ಸ್ಮಾರಕಗಳು




ಕೃಪೆ: ಜಾರ್ಜ್‌ಮಿಶೆಲ್ ವಿಜಯನಗರ ಕೋಟ್ಲಸ್ಟೈಲ್

ವಿಜಯನಗರ ಸಾಮ್ರಾಜ್ಯ ಆಂಧ್ರ ಪ್ರಾಂತ್ಯದಲ್ಲಿ ಮುಸ್ಲಿಂ ನೆಲೆಗಳು



ಕೃಪೆ: ಗೂಗಲ್ ಮ್ಯಾಪ್ಸ್

ಬಹುಮನಿ ಸಾಮ್ರಾಜ್ಯ



ಕೃಪೆ: ಕರ್ನಾಟಕ ಪರಂಪರೆ ಸಂ.೨

ವಿಜಯನಗರ ಹಾಗೂ ಶಾಹಿ ರಾಜ್ಯಗಳು
(ಕ್ರಿಪೂ. ೧೫೬೫)




ಕೃಪೆ: ಕರ್ನಾಟಕ ಪರಂಪರೆ ಸಂ.೨

ಛಾಯಾಚಿತ್ರಗಳು

ಹಂಪಿ ಪರಿಸರದಲ್ಲಿನ ಅರೇಬಿಯನ್ ಮತ್ತು ಪರ್ಶಿಯನ್ ವರ್ತಕರ ಶಿಲ್ಪಗಳು







ಹಂಪಿ ಪರಿಸರದಲ್ಲಿನ ಅರೇಬಿಯನ್ ಮತ್ತು ಪರ್ಶಿಯನ್ ವರ್ತಕರ ಶಿಲ್ಪಗಳು







ಹಂಪಿ ಪರಿಸರದಲ್ಲಿನ ಅರೇಬಿಯನ್ ಮತ್ತು ಪರ್ಶಿಯನ್ ವರ್ತಕರ ಶಿಲ್ಪಗಳು










ಶೃಂಗಾರದ ಹೆಬ್ಬಾಗಿಲಿನ ಬಳಿ ಇರುವ ನಶಿಸಿದ
ಮುಸ್ಲಿಂ ಕಾವಲುಗಾರನ ಶಿಲ್ಪ



ವಿಜಯ ವಿಠ್ಠಲ ದೇವಾಲಯದಲ್ಲಿರುವ
ಮುಸ್ಲಿಂ ಸೈನಿಕನ ಶಿಲ್ಪ



ಮಹಾನವಮಿದಿಬ್ಬದಲ್ಲಿ ಕಂಡುಬರುವ ಮುಸ್ಲಿಂ ಸೈನಿಕನ ಶಿಲ್ಪ




ಮಹಾನವಮಿದಿಬ್ಬದಲ್ಲಿ ವಿದೇಶಿ ವರ್ತಕನ ಶಿಲ್ಪ



ಅಹಮದ್ ಖಾನ್ ಕಟ್ಟಿಸಿದ ಮಸೀದಿ



ತಳವಾರಘಟ್ಟದ ರಸ್ತೆ ಬದಿಯಲ್ಲಿರುವ ಮಸೀದಿ



ಈದ್ಗಾ ಮೈದಾನ ಕಮಲಾಪುರ



ತಳವಾರ ಘಟ್ಟ ರಸ್ತೆಯಲ್ಲಿ ಕಂಡುಬರುವ ದೂದವಲಿ ದರ್ಗಾ




ಸೀತಾರಾಂ ತಾಂಡದಲ್ಲಿ ಕಂಡುಬರುವ ಮುಸ್ತಫಾ ಬಾವಿ



ತಳವಾರ ಘಟ್ಟ ರಸ್ತೆಯಲ್ಲಿ ಕಂಡುಬರುವ ದೂದವಲಿ ದರ್ಗಾ ಬಳಿಯ ಬಾವಿ

ಮುಸ್ಲಿಂ ಸಮುದಾಯಗಳ ವಿವಿಧ ಶೈಲಿಯ ಮಜಾರ್‌ಗಳು(ಸಮಾಧಿ)















ಮುಸ್ಲಿಂ ಸಮುದಾಯಗಳ ವಿವಿಧ ಶೈಲಿಯ ಮಜಾರ್ (ಸಮಾದಿ)


ಅರೇಬಿಕ್ ಭಾಷೆಯಲ್ಲಿ ಕೆತ್ತಲಾಗಿರುವ ಸಮಾಧಿ


ಮುಸ್ಲಿಂ ಮಹಿಳೆಯ ಸಮಾಧಿ



ಹಂಪಿ ಪರಿಸರದ ಮುಸ್ಲಿಂ ನೆಲೆಯಲ್ಲಿ ಕಂಡುಬರುವ ಸಮಾಧಿಗಳು



ಕಡ್ಡಿರಾಂಪುರದಲ್ಲಿ ಕಂಡುಬರುವ ಮುಸ್ಲಿಂ ಗೋರಿಯಬಳಿ ಸಂಶೋಧಕರು



ಕಡ್ಡಿರಾಂಪುರದಲ್ಲಿ ಕಂಡುಬರುವ ಮುಸ್ಲಿಂ ಮಹಿಳಾ ಗೋರಿಗಳು

ಮೌಲ್ಯವಂತ ಪರ್ವತದ ಪಕ್ಕದಲ್ಲಿನ ಮುಸ್ಲಿಂ ಗೋರಿ



ಹಂಪಿ ಪರಿಸರದಲ್ಲಿ ಅವಸಾನದ ಅಂಚಿನಲ್ಲಿರುವ ಮುಸ್ಲಿಂ ಸ್ಮಾರಕಗಳು







ಹಂಪಿ ಪರಿಸರದಲ್ಲಿನ ಇಂಡೋ ಇಸ್ಲಾಮಿಕ್ ಶೈಲಿಯ ಸ್ಮಾರಕ



ಇಂಡೋ ಇಸ್ಲಾಮಿಕ್ ಶೈಲಿಯ ಸ್ಮಾರಕ ಮಲಪನಗುಡಿ ಗ್ರಾಮ




ಇಂಡೋ ಇಸ್ಲಾಮಿಕ್ ಶೈಲಿಯ ರಾಣಿ ಸ್ನಾನ ಗೃಹ ಹಂಪಿ



ಡಣಾನಾಯಕನ ಕಾವಲು ಮನೆ



ಕಮಲ್ ಮಹಲ್ ಹಂಪಿ



ಆನೆಲಾಯ

ಹಂಪಿಯ ಅರಮನೆ ಪ್ರಾಂಗಣದಲ್ಲಿರುವ ಮುಸ್ಲಿಂ ಸ್ಮಾರಕಗಳು







ಇಂಡೋ- ಇಸ್ಲಾಂ ಶೈಲಿಯ ಸ್ಮಾರಕ

ಆಂಧ್ರ ಪ್ರದೇಶದ ವಿಜಯನಗರ ಕಾಲಾವಧಿಯಲ್ಲಿನ ಸ್ಮಾರಕಗಳು



ಗಗನ ಮಹಲ್ ಆನೆಗೊಂದಿ (ಕನ್ನಡ ಪ್ರದೇಶ)



ರಾಜಮಹಲ್ ಚಂದ್ರಗಿರಿ ೧೩೬೭



ಪೆನುಗೊಂಡ ಕೋಟೆ



ಹಜರತ್ ಸೈದಿನಾ ಬಾಬ ಫಕುರುದ್ದೀನ್ ದರ್ಗಾ ಪೆನುಕೊಂಡ



ಕ್ರಿಶ. ೬೨೯ರಲ್ಲಿ ನಿರ್ಮಾಣಗೊಂಡಿರುವ ಚೇರುಮನ್ ಮಸೀದಿ, ಕೇರಳ



ಕೊಡಂಗಲ್ಲೂರುನಲ್ಲಿರುವ ಚೇರುಮನ್ ಜುಮ್ಮ ಮಸೀದಿ





ಉತ್ತರ ಕೇರಳದಲ್ಲಿ ಕಂಡುಬರುವ ವಿಜಯನಗರ ಕಾಲದ ಮಸೀದಿಗಳು



ಕ್ರಿ.ಶ. ೧೩ನೇ ಶತಮಾನದ ಮುಚಂಡಿಪಲ್ಲಿ ಮಸೀದಿ, ಕಲ್ಲಿಕೋಟೆ




ಖಿಜರ್ ಜುಮ್ಮಾ ಮಸೀದಿ ಕಾಸರಗೋಡು



ಕಿಲಕ್ಕರೈ ಮಸೀದಿ, ತಮಿಳುನಾಡು



ವೆಲ್ಲೂರು ಕೋಟೆ



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಚರಿತ್ರೆ ವಿಭಾಗ